ಮಹಿಳಾ ದೌರ್ಜನ್ಯಗಳು: ಲಿಂಗ ಸಂಬಂಧಿ ಅಧ್ಯಯನ

(ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಮಹಾ ಪ್ರಬಂಧ

ಸಂಶೋಧಕರು
ಲೋಕೇಶ್.ಎಸ್.ಎನ್.
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಮಾರ್ಗದರ್ಶಕರು
ಡಾ. ಶಿವಾನಂದ ಎಸ್ ವಿರಕ್ತಮಠ
ಸಹ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬

೨೦೧೫

ಮಹಿಳಾ ದೌರ್ಜನ್ಯಗಳು: ಲಿಂಗ ಸಂಬಂಧಿ ಅಧ್ಯಯನ

(ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಮಹಾ ಪ್ರಬಂಧ

ಸಂಶೋಧಕರು
ಲೋಕೇಶ್.ಎಸ್.ಎನ್.
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಮಾರ್ಗದರ್ಶಕರು
ಡಾ. ಶಿವಾನಂದ ಎಸ್ ವಿರಕ್ತಮಠ
ಸಹ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
ವಿದ್ಯಾರಣ್ಯ ೫೮೩ ೨೭೬

೨೦೧೫

<u>ಸಂಶೋಧಕರ ದೃಢೀಕರಣ ಪತ್ರ</u>

"ಮಹಿಳಾ ದೌರ್ಜನ್ಯಗಳು: ಲಿಂಗ ಸಂಬಂಧಿ ಅಧ್ಯಯನ" (ಬೆಂಗಳೂರು ನಗರದ ಪೋಲೀಸ್ ದಾಖಲೆಯನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಡಾ. ಶಿವಾನಂದ ಎಸ್ ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 29/1/2015

Lokesh S.N

ಲೋಕೇಶ್.ಎಸ್.ಎನ್

ಸಂಶೋಧಕರು

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಲೋಕೇಶ್ ಎಸ್. ಎನ್. ಅವರು "ಮಹಿಳಾ ದೌರ್ಜನ್ಯಗಳು: ಲಿಂಗ ಸಂಬಂಧಿ ಅಧ್ಯಯನ"(ಬೆಂಗಳೂರು ನಗರದ **ಪೋಲೀಸ್** ದಾಖಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 29/1/2015

ಡಾ.ಶಿವಾನಂದ ಎಸ್ ವಿರಕ್ತಮಠ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹಿಳಾ ದೌರ್ಜನ್ಯಗಳು: ಲಿಂಗ ಸಂಬಂಧಿ ಅಧ್ಯಯನ

(ಬೆಂಗಳೂರು ನಗರದ ಪೋಲಿಸ್ ದಾಖಲೆಗಳನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮಹತ್ವ ಹಾಗೂ ವೈಧಾನಿಕತೆ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶಗಳು

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ಮಹತ್ವ

೧.೫ ಅಧ್ಯಯನದ ವೈಧಾನಿಕತೆ ಮತ್ತು ಅದರ ಅನ್ವಯಿಕ ವಿಶ್ಲೇಷಣೆ

೧.೫.೦. ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಅಧ್ಯಯನ

೧.೫.೧. ಲೈಂಗಿಕತಾವಾದಿಯಲ್ಲದ ಸಂಶೋಧನೆ

೧.೫.೨. ವೈಯಕ್ತಿಕವೂ, ಸಾರ್ವತ್ರಿಕವೂ

೧.೫.೩. ಮಾದರಿ ಆಯ್ಕೆ

೧.೫.೪. ಕ್ಷೇತ್ರಕಾರ್ಯ ಕೇಂದ್ರಿತ ವರದಿ

೧.೫.೫. ಕ್ಷೇತ್ರಕಾರ್ಯದ ಉದ್ಧೇಶ ಮತ್ತು ಸ್ವರೂಪ

೧.೫.೫.೦. ಸಂದರ್ಶನ

೧.೫.೫.೧. ಪ್ರಶ್ನಾವಳಿ

೧.೫.೫.೨. ನೇರ ಸಂದರ್ಶನ

೧.೫.೫.೩. ಪ್ರಕರಣ ಅಧ್ಯಯನ

೧.೫.೬. ಕ್ಷೇತ್ರಕಾರ್ಯದ ವಿಶ್ಲೇಷಣೆ.

ಅಧ್ಯಾಯ-೧

೧.೧. ಪ್ರಸ್ತಾವನೆ

ಮಾನವ ಜನಾಂಗವನ್ನು ಸ್ತ್ರೀಯರು ಮತ್ತು ಪುರುಷರು ಎಂದು ವರ್ಗೀಕರಿಸುವುದು ಪ್ರಕೃತಿ ಸಹಜವಾದ ವಿಷಯವಾಗಿದೆ. ಈ ಒಂದು ಕಾರಣಕ್ಕಾಗಿ ಅವುಗಳ ನಡುವೆ ಬಹಳಷ್ಟು ವ್ಯತ್ಯಾಸಗಳು ಮತ್ತು ತಾರತಮ್ಯಗಳು ಏರ್ಪಟ್ಟಿರುವುದು ವಿಪರ್ಯಾಸಗಳಲ್ಲಿ ಒಂದು. ಅವರುಗಳ ಆಸೆ-ಆಕಾಂಕ್ಷೆಗಳು, ಧ್ಯೇಯೋದ್ದೇಶಗಳು, ವೇಶ-ಭೂಷಣಗಳು, ಕೆಲಸದ ಹೊಣೆಗಾರಿಕೆಗಳು ಹಾಗೂ ಅಂತಸ್ತು-ಪಾತ್ರಗಳೇ ಬೇರೆ-ಬೇರೆಯಾಗಿರುತ್ತವೆ. ಸ್ತ್ರೀ ಪುರುಷರು ಎಲ್ಲಾ ದೃಷ್ಟಿಯಿಂದಲೂ ಸರಿಸಮಾನವಾಗಿದ್ದ ನಿದರ್ಶನಗಳೇ ಇತಿಹಾಸದಲ್ಲಿ ಕಂಡುಬಂದಂತಿಲ್ಲ.

ಭಾರತದ ಸಾಂಸ್ಕೃತಿಕ ಪರಂಪರೆಯುದ್ದಕ್ಕೂ ಕಂಡು ಬಂದ ಸ್ತ್ರೀತ್ವ ಹಾಗೂ ಮಾತೃತ್ವದ ಬಗೆಗಿನ ಶ್ರದ್ಧೆ ಹಾಗೂ ಗೌರವ ಮತ್ತು ಸ್ತ್ರೀಯರ ಬಗೆಗಿನ ಪ್ರೀತಿ-ಪ್ರೇಮಗಳು ಅಷ್ಟಾಗಿ ಕೊಡದೇ ಇದ್ದರೂ ಸ್ತ್ರೀಯರ ಸ್ಥಾನಮಾನಗಳು ಮಾತ್ರ ವೇದೋತ್ತರ ಕಾಲದಲ್ಲಿ ನಿರಂತರವಾಗಿ ಅವನತಿಯತ್ತ ಸಾಗುತ್ತಲೇ ಹೋದುದು ಬಹಳ ಆಶ್ಚರ್ಯವೆನಿಸುತ್ತದೆ. ಈ ಬಗ್ಗೆ **ಆಲ್ಟೇಕರ್** "ಹೆತ್ತವರ ಮಮತೆಯಲ್ಲಿ ಬೆಳದಿದ್ದರೂ ಗಂಡಂದಿರಿಂದ ಪ್ರೀತಿಸಲ್ಪಟ್ಟರೂ ಮತ್ತು ಮಕ್ಕಳಿಂದ ಗೌರವಿಸಲ್ಪಟ್ಟರೂ ಕ್ರಿ.ಪೂ ೨೦ ರಿಂದ ಕ್ರಿ.ಶ ೧೮೦೦ ರ ವರೆಗೆ ಸುಮಾರು ೨೦೦೦ ವರ್ಷಗಳ ಕಾಲ ಭಾರತೀಯ ಸ್ತ್ರೀಯರ ಸ್ಥಾನಮಾನ ನಿರಂತರವಾಗಿ ಅವನತಿಗೊಳ್ಳುತ್ತಾ ಹೋಯಿತು" ಎಂಬುದಾಗಿ ವಿವರಿಸಿದ್ದಾರೆ.

ಆಧುನಿಕ ಕಾಲದವರೆಗೂ ಸ್ತ್ರೀಯರ ಸ್ಥಾನಮಾನಗಳು ಕುಗ್ಗುತ್ತಾ ಹೋಗುವಂತಾಗಲು ಮಹಿಳಾ ಬರಹಗಾರ್ತಿ **ಡಾ. ಮೀರಾದೇಸಾಯಿ** ರವರು ನೀಡುವ ಕಾರಣಗಳು ಹೀಗಿವೆ "ಪಿತೃಪ್ರಧಾನ ವ್ಯವಸ್ಥೆ, ಅವಿಭಕ್ತಕುಟುಂಬ, ಬಹುಪತ್ನಿತ್ವದ ಆಚರಣಾಪದ್ಧತಿ, ಆಸ್ತಿಯ ರಚನೆ, ಎಳೆಯ ವಯಸ್ಸಿನಲ್ಲಿಯೇ ವಿವಾಹ ಮಾಡುವ ರೂಢಿ, ವಿಧವೆಯರ ಆತ್ಮಬಲಿದಾನ ಅಥವಾ ಶಾಶ್ವತ ವೈಧವ್ಯ, ದಯನೀಯ ಸ್ಥಿತಿ-ಇವೆಲ್ಲವೂ ಸ್ತ್ರೀಯರ ಮುಕ್ತ ಬೆಳವಣಿಗೆಯನ್ನು ಕುಂಠಿತಗೊಳಿಸಲು ಕಾರಣವಾದವು ಎನ್ನುತ್ತಾರೆ." ಪುರುಷರಿಗೆ ಸರಿಸಮಾನವಾಗಿ ಬಾಳಬೇಕೆಂಬ ರೂಢಿ ಹೊಂದಿದ್ದ ಸ್ತ್ರೀಯರು ಎಲ್ಲಾ ಕಾಲದಲ್ಲಿಯೂ ಇದ್ದಿರಬಹುದಾದರೂ ಅದನ್ನು ಕೈಗೊಳ್ಳುವುದು ಅವರಿಗೆ ಸುಲಭ ಸಾಧ್ಯವಾಗಿರಲಿಲ್ಲ.

ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಒಂದು ದೀರ್ಘವಾದ ಇತಿಹಾಸವಿದೆ. ವೇದಗಳ ಕಾಲದಲ್ಲಿ ಬಿಟ್ಟರೆ ಆ ನಂತರದ ಕಾಲಘಟ್ಟದಿಂದ ಸ್ತ್ರೀಯರ ಬಾಲ್ಯವಿವಾಹ, ಸತಿಸಹಗಮನ ಪದ್ಧತಿ, ಬಹುಪತಿತ್ವ, ದೇವದಾಸಿಪದ್ಧತಿ, ವರದಕ್ಷಿಣೆ ಕಿರುಕುಳದಂತಹ ಕೌಟುಂಬಿಕ ದೌರ್ಜನ್ಯಗಳಿಗೆ ಬಲಿಯಾಗುತ್ತಿದ್ದಾಳೆ. ಇಂತಹ ಮಹಿಳಾ ವಿರೋಧಿ ಅಪರಾಧಗಳು ಪ್ರಾಚೀನ ಕಾಲದಿಂದಲೂ ಆಯಾ ಸಮಾಜದ ಬದಲಾದ ಆಯಾಮಗಳಿಗೆ ತಕ್ಕಂತೆ ಅವತರದೇ ಆದ ಹೊಸ ರೂಪಗಳನ್ನು ಪಡೆದು ಪ್ರಸ್ತುತ ಸಮಾಜದಲ್ಲೂ ಸಹ ಮುಂದುವರೆಯುತ್ತಿವೆ.

ಜಗತ್ತಿನ ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳ ಹಿನ್ನೆಲೆಯಲ್ಲಿ ನೋಡಿದರೆ ಭಾರತದ ಸ್ತ್ರೀಯರು ಅತಿ ಹೆಚ್ಚಿನ ಕಾನೂನು ಹಾಗೂ ರಾಜಕೀಯ ಹಕ್ಕುಗಳ ಬಗ್ಗೆ ಗ್ರಾಮೀಣ ಪ್ರದೇಶದ ಬಹುಸಂಖ್ಯಾತ ಸ್ತ್ರೀಯರಿಗೆ ಅವರ ಅನಕ್ಷರತೆಯಿಂದಾಗಿ ಇನ್ನೂ ಪೂರ್ಣ ಜಾಗೃತಿ ಉಂಟಾಗಿಲ್ಲವೆಂಬುದನ್ನು ಈ ಬಗ್ಗೆ ನಡೆಸಿರುವ ಸಮೀಕ್ಷೆಗಳು ಸ್ಪಷ್ಟಪಡಿಸುತ್ತವೆ. **ಪ್ರೊ. ರಾಂ ಅಹುಜಾ** ರವರು ಇತ್ತೀಚೆಗೆ ರಾಜಸ್ಥಾನದ ೮ ಗ್ರಾಮಗಳ ೧೮ ರಿಂದ ೫೦ ವರ್ಷದವರೆಗಿನ ೭೫೩ ಸ್ತ್ರೀಯರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ತಿಳಿದು ಬರುವ ಮುಖ್ಯಾಂಶಗಳು ಈ ಮುಂದಿನಂತಿವೆ. ರಾಜಸ್ಥಾನದ ಶೇಕಡಾ ೭೫ ರಷ್ಟು ಮಂದಿಗೆ ತಮ್ಮ ಹಕ್ಕುಗಳ ಬಗ್ಗೆ ಇಂದಿಗೂ ಜಾಗೃತಿ ಮೂಡಿಲ್ಲ. ಭಾರತದ ಪರಂಪರೆಯಂತೆ ಸ್ತ್ರೀಯರನ್ನು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಅಥವಾ ಕುಟುಂಬದ ಒಬ್ಬ ಸದಸ್ಯೆಯನ್ನಾಗಿ ಮಾತ್ರ ಗುರುತಿಸಿಕೊಳ್ಳುವಿಕೆಗೆ ಆಕೆಯೂ ಮಾನಸಿಕವಾಗಿ ಸಿದ್ದವಿಲ್ಲವೆಂಬ ಅಂಶಗಳನ್ನು ವ್ಯಕ್ತಪಡಿಸುತ್ತಾರೆ.

ಸ್ವಂತ ದುಡಿದು ಸಂಪಾದನೆ ಮಾಡುವ ಸ್ತ್ರೀಯರು ಕೂಡ ದುಡಿದು ಹಣವನ್ನು ಖರ್ಚು ಮಾಡುವ ಪೂರ್ಣ ಸ್ವಾತಂತ್ರ್ಯ ಹೊಂದಿದವರಲ್ಲ, ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ತಮ್ಮ ಪುರುಷರಿಗೆ ಬಿಟ್ಟುಕೊಟ್ಟಿರುವ ಅವರ ಸಾಂಪ್ರದಾಯಿಕ ಮೌಲ್ಯಗಳ ಹಿಡಿತದಿಂದ ಹೆಚ್ಚು ಮುಕ್ತರಾದವರಲ್ಲ. ಶೇಕಡ ೯೦ಕ್ಕೂ ಅಧಿಕ ಮಂದಿ ಮಹಿಳಾ ದುಡಿಮೆಗಾರರು ಆಧುನಿಕ ವ್ಯವಸ್ಥೆಯ "ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವುದರಿಂದ ಅವರ ಶೋಷಣೆ ಮುಂದುವರೆದಿದ್ದು, ಕಾನೂನಿನ ರಕ್ಷಣೆ ಪಡೆಯುವುದು ಅವರಿಗೆ ಕನಸಿನ ಮಾತಾಗಿದೆ." ಹೆಣ್ಣು ಶಿಶುವಿನ ಜನನಕ್ಕೆ ಕುಟುಂಬದಲ್ಲಿ ಇಂದಿಗೂ ವಿಶೇಷವಾದ ಸ್ವಾಗತವೆಂಬುದಿಲ್ಲದೇ ಇರುವುದರಿಂದ ಹೆಣ್ಣು ಶಿಶುಗಳ ಭ್ರೂಣಹತ್ಯೆಯು ಕಾನೂನಿನ ಕಣ್ಣು ತಪ್ಪಿಸಿ ಇಂದಿಗೂ ಅವ್ಯಾಹತವಾಗಿ ನಡೆಯುತ್ತಿದೆ. ಅಂತೆಯೇ ಜನಸಂಖ್ಯೆಯಲ್ಲಿ ಸ್ತ್ರೀಯರ ಪಾತ್ರದ ಬಗೆಗಿನ ರೂಢಿ-ಪದ್ದತಿಗಳು ಹಾಗೂ ದೃಷ್ಟಿಕೋನ ಇಂದಿಗೂ ಬಹಳಷ್ಟು ಸಾಂಪ್ರದಾಯಿಕವಾಗಿ ಉಳಿದಿವೆ. ಆದ್ದರಿಂದ ಹೊಸ ಕಾನೂನುಬದ್ಧ ಹಕ್ಕುಗಳು ಹಾಗೂ ಶಾಸನಗಳ ಮೂಲಕ ಸ್ತ್ರೀಯರಿಗೆ ರಿಯಾಯಿತಿಗಳನ್ನು ನೀಡುತ್ತಾ ಹೋದರೂ ಅವುಗಳ ಸದುಪಯೋಗವಾಗಲಾರದು. ಜನಸಾಮಾನ್ಯರ ಮನೋಭೂಮಿಕೆಯಲ್ಲಿ ಸಾಮಾಜಿಕ ದೃಷ್ಟಿಯಲ್ಲಿ ಅವರು ಅನುಸರಿಸುತ್ತಾ ಬಂದಿರುವ ಸಾಮಾಜಿಕ ಪದ್ಧತಿಗಳಲ್ಲಿ ಮೂಲಭೂತ ಬದಲಾವಣೆಯಾಗಿದೆ. ಸ್ತ್ರೀಯರ ಅಂತಸ್ತಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ನಿರೀಕ್ಷಿಸಲಾಗುವುದು.

ಸ್ತ್ರೀಯರಿಗೆ ತಮ್ಮದೇ ಆದ ಸ್ವಾತಂತ್ರ ವ್ಯಕ್ತಿತ್ವವೊಂದಿದೆ ಎಂಬ ವಿಚಾರವನ್ನೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಿರಸ್ಕರಿಸಲಾಗುತ್ತದೆ. ವಿವಾಹದ ನಂತರ ಸ್ತ್ರೀ ತನ್ನ ತನವನ್ನೇ ಕಳೆದುಕೊಂಡು ತನ್ನ ಗಂಡನ ಹೆಸರನ್ನೂ ತನ್ನ ಕುಟುಂಬದ ನಾಮಾಂಕಿತವನ್ನು ಪಡೆಯುತ್ತಾಳೆ. ಆಕೆಯ ಮಕ್ಕಳು ತಮ್ಮ ತಂದೆಯ ವಂಶದಿಂದಲೇ ಗುರುತಿಸಲ್ಪಟ್ಟಿರುತ್ತಾರೆ. ಭಾರತದಲ್ಲಿ ಶೇಕಡ ೮೦ ಕ್ಕಿಂತಲೂ ಹೆಚ್ಚು ಕುಟುಂಬದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯೇ ಜಾರಿಯಲ್ಲಿರುವುದರಿಂದ ಭಾರತದ ಬಹುತೇಕ ಸ್ತ್ರೀಯರು ಈ ವ್ಯವಸ್ಥೆಯ

ಕೈಗೊಂಬೆಗಳಾಗಿದ್ದಾರೆ. ಇದರಿಂದ ಭಾರತದ ಅನೇಕ ಹೆಣ್ಣುಮಕ್ಕಳ ಬದುಕು ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಯೆಂಬ ವಿಷವರ್ತುಲದಲ್ಲಿ ಸಿಲುಕಿ ಹಾಕಿಕೊಂಡು ಹೊರಬರಲು ಹೆಣಗುತ್ತಿದ್ದಾಳೆ.

ಇಂದು ಒಟ್ಟು ಜನಸಂಖ್ಯೆಯ ಸುಮಾರು ಅರ್ಧ ಭಾಗದಲ್ಲಿರುವ ಮಹಿಳೆಯರಲ್ಲಿರುವ ಕೆಲವು ಮಹಿಳೆಯಲ್ಲಾದರೂ ತಮ್ಮ ಹಕ್ಕು ಸ್ವಾತಂತ್ರ್ಯಗಳ ಬಗ್ಗೆ ಜಾಗೃತಿ ಮೂಡುತ್ತಿದ್ದು, ಇವರು ಸಾಂಪ್ರದಾಯಿಕ ಸಂಕೋಲೆಗಳಿಂದ ಹೊರ ಬಂದು ಶಿಕ್ಷಿತರಾಗಿ ಪುರುಷರಿಗೆ ಸರಿ ಸಮಾನವಾಗಿ ಎಲ್ಲಾ ರಂಗಗಳಲ್ಲೂ ಉತ್ತಮ ಸಾಧನೆ ಗೈಯುತ್ತಿರುವ ಈ ಹೊಸ್ತಿಲಲ್ಲಿ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಸಂವಿಧಾನ ಕಾಯ್ದೆ, ಕಾನೂನು, ಪೋಲೀಸ್ ಮುಂತಾದವುಗಳ ಮೂಲಕ ಇವರಿಗೆ ರಕ್ಷಣೆ ಒದಗಿಸುತ್ತಿದ್ದರೂ, ಕೆಲವೊಂದು ವೇಳೆ ಹೆತ್ತ ತಂದೆ ತಾಯಿಗಳಿಂದ ಮತ್ತು ಸಮೀಪದ ಬಂಧುಗಳಿಂದಲೇ ಅವರ ರಕ್ಷಣೆಯನ್ನು ಖಾತರಿಪಡಿಸಿಕೊಳ್ಳಲಾಗುತ್ತಿಲ್ಲ. ದಿನೇ ದಿನೇ ಹೆಚ್ಚುತ್ತಿರುವ ಮಹಿಳೆಯರ ದೌರ್ಜನ್ಯದ ಅಪರಾಧಗಳ ಅಂಕಿ ಅಂಶಗಳು ಭಯಪಡಿಸುವಂತಿವೆ. ಇನ್ನೂ ಜೀವಂತವಾಗಿರುವ ಪುರುಷಪ್ರಧಾನ ಮೌಲ್ಯಗಳು, ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳು, ಅನಕ್ಷರತೆ, ಬಡತನ, ಹಣ ಮತ್ತು ಆಸ್ತಿಯ ಮೇಲಿನ ಅತಿಯಾದ ವ್ಯಾಮೋಹ, ಕಟ್ಟುನಿಟ್ಟಾದ ಕಾನೂನು ಕ್ರಮಗಳ ಕೊರತೆ ಮುಂತಾದವುಗಳು ಮಹಿಳೆಯರ ಮೇಲಿನ ಅಪರಾಧಗಳ ಹೆಚ್ಚಳಕ್ಕೆ ಕಾರಣಗಳಾಗಿವೆ.

೧೯೭೫ ನೇ ವರ್ಷವನ್ನು ಅಂತರಾಷ್ಟ್ರೀಯ ಮಹಿಳಾ ವರ್ಷವೆಂದು ವಿಶ್ವಸಂಸ್ಥೆ ಘೋಷಿಸಿದ ಮೇಲೆ ಮಹಿಳೆಯರಲ್ಲಿ ಜಾಗೃತಿ ಉಂಟಾಯಿತೆನ್ನಬಹುದು. ಇದರಿಂದಾಗಿ ಮಹಿಳೆಯರೇ ಒಟ್ಟಾಗಿ ಕೆಲವೊಂದು ಸ್ವಾಯತ್ತ ಸಂಘಟನೆಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ಮಹಿಳೆಯರ ವಿರುದ್ದದ ಹೋರಾಟವನ್ನು ಆರಂಭಿಸಿದರು. ತತ್ಪರಿಣಾಮವಾಗಿ ಮಹಿಳೆಯರ ವಿರುದ್ದ ಅಪರಾಧಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಒಳಪಡುವಂತಾಯಿತು. ಮಹಿಳೆಯರ ರಕ್ಷಣೆಗಾಗಿ ಕೆಲವೊಂದು ಆಯೋಗಗಳನ್ನು ನೇಮಿಸಲಾಯಿತು. ಕಾಯ್ದೆಕಾನೂನುಗಳು ತಿದ್ದುಪಡಿಗೊಂಡು ಹೊಸ ರೂಪ ಪಡೆದವು. ಹೀಗೆ ಇವೆಲ್ಲವೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರವೂ ಕೂಡ ಕಾರಣವಾಗಿತ್ತು. ಇಷ್ಟಾದರೂ ಮಹಿಳೆಯರ ವಿರುದ್ದದ ಅಪರಾಧಗಳು ಏರುತ್ತಲೇ ಹೊರಟಿವೆ ಅದೆಷ್ಟೋ ಅಪರಾಧಗಳು ವರದಿಗೊಳ್ಳುವುದೇ ಇಲ್ಲ, ಅದಕ್ಕೆ ಕಾರಣಗಳು ಹಲವು ಇರಬಹುದು. ಮೊದಲೇ ಹೆಣ್ಣೆಂದರೆ ತಾತ್ಸಾರ, ಅಲ್ಲದೇ ಪುರುಷನಿಗಿರದ ಕಳಂಕಿತ ನಿಷ್ಟೆ ನಿಯಮಗಳು ಮಹಿಳೆಯರಿಗೆ ಮಾತ್ರವೇ ಅಂಟಿಕೊಂಡಿವೆ. ಹೀಗಾಗಿ ಅತ್ಯಾಚಾರ, ಹಿಂಸೆ, ಕಿರುಕುಳದಂತ ಅಪರಾಧಗಳು ಬೆಳಕಿಗೆ ಬರುವುದೇ ಇಲ್ಲ. ಕಣ್ಣು ತಪ್ಪಿ ಬಂದಂತೆ ಅಲ್ಲೊಂದು ಇಲ್ಲೊಂದು ಪ್ರಕರಣಗಳು ಮಾತ್ರವೇ ವರದಿಗೊಳ್ಳುತ್ತಿರುವುದು ಲಿಂಗ ತಾರತಮ್ಯ ಮತ್ತು ಪುರುಷ ಪ್ರಾಧಾನ ಮೌಲ್ಯಗಳ ಕಠಿಣತೆ ಎಷ್ಟಿದೆ ಎಂದು ವ್ಯಕ್ತವಾಗುತ್ತದೆ.

ದೌರ್ಜನ್ಯ ಎಂದರೆ

ವ್ಯಕ್ತಿಯೋರ್ವನನ್ನು ಅಥವಾ ಸಮೂಹವೊಂದನ್ನು ಇಲ್ಲವೇ ಸಮಾಜವೊಂದನ್ನು ದೈಹಿಕವಾಗಿ ಇಲ್ಲವೇ ಮಾನಸಿಕವಾಗಿ ಒಂದಲ್ಲ ಒಂದು ಬಗೆಯ ಗಂಭೀರ ತೊಂದರೆಗೆ ಒಳಡಿಸುವುದನ್ನು ದೌರ್ಜನ್ಯ ಅಥವಾ 'ಹಿಂಸಾಚಾರ' ಎಂದೆನ್ನಬಹುದು. ಹಿಂಸೆಯು ಹೀಗೆ ಇರುತ್ತದೆ ಎಂದು ಹೇಳಲು ಸಾದ್ಯವಿಲ್ಲ. ಅದು ವಿವಿಧ ರೂಪಗಳಿಂದ ಕೂಡಿರುತ್ತದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು, ಕೊಲೆ, ಸುಲಿಗೆ, ದರೋಡೆ, ಬೆದರಿಕೆ, ಬಲತ್ಕಾರ, ದೌರ್ಜನ್ಯ, ಹೊಡೆಯುವುದು, ಬಡಿಯುವುದು, ಅಪಹರಣ ಮಾಡುವುದು, ಆರ್ಥಿಕವಾಗಿ ಹಾಗೂ ಲೈಂಗಿಕವಾಗಿ ಶೋಷಣೆ ಮಾಡುವುದು, ಒತ್ತಾಯ ಪೂರ್ವಕವಾಗಿ ಮತಾಂತರ ಮಾಡುವುದು, ಬೆದರಿಸಿ ದುಡ್ಡುಕೀಳುವುದು, ಇಲ್ಲವೇ ಬೆದರಿಕೆ ಹುಟ್ಟಿಸಿ ದುಷ್ಟಾಕಾರ್ಯಗಳಿಗೆ ಕೈ ಹಾಕುವಂತೆ ಪ್ರಚೋದನೆ ನೀಡುವುದು, ಆಸೆ ಆಮಿಷ ತೋರಿಸಿ ವಂಚನೆ ಮಾಡುವುದು, ಭರವಸೆ ಹುಟ್ಟಿಸಿ ದ್ರೋಹ ಮಾಡುವುದು, ಸುಳ್ಳು ಸುದ್ದಿ ಹುಟ್ಟಿಸಿ ಕೋಮುಗಲಭೆಗಳಿಗೆ ಅಥವಾ ಜನಾಂಗೀಯದೊಂದಿಗೆ ಪ್ರಚೋದನೆ ನೀಡುವುದು, ಜನರನ್ನು ಜೀವಂತವಾಗಿ ದಹನ ಮಾಡುವುದು. ಆಸ್ತಿ ಪಾಸ್ತಿಗಳನ್ನು ಹಾಳುಗೆಡುವುದು ಅಥವಾ ಅದಕ್ಕೆ ಬೆಂಕಿ ಇಡುವುದು. ಅವಮಾನವಾಗುವಂತೆ, ಅಪಖ್ಯಾತಿ ಬರುವಂತೆ, ವ್ಯಕ್ತಿತ್ವದ ಸಾಮಾಜಿಕ ದೃಷ್ಟಿಗೆ ದಕ್ಕೆಯಾಗುವಂತೆ ಮಾಡಿ ಇನ್ನೊಬ್ಬರ ಮಾನಸಿಕ ಶಾಂತಿಯನ್ನು ಹಾಳುಗೆಡುವುದು. ಆತ್ಮಹತ್ಯೆಯ ಪ್ರಕರಣಗಳು, ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಬಹುದು, ಬಂಡಾಯ ಹೂಡುವುದು, ಗಲಬೆ-ದೊಂಬಿಗಳನ್ನು ಹುಟ್ಟುಹಾಕುವುದು, ಭಯೋತ್ಪಾದನೆ ಮಾಡುವುದು, ಅಲ್ಪಸಂಖ್ಯಾತರಲ್ಲಿ ಅಸುರಕ್ಷಿತತೆಯ ಭಾವನೆಗಳನ್ನು ಹುಟ್ಟುಹಾಕಿ ಸಾಮಾಜಿಕ ಸಾಮರಸ್ಯವನ್ನು ಹಾಳುಗೆಡಿಸುವುದು, ಎಲ್ಲಕ್ಕಿಂತ ಮಿಗಿಲಾಗಿ ಅತ್ಯಧಿಕ ಸಂಖ್ಯೆಯ ಜನರ ಸಾವಿಗೆ ಹಾಗೂ ದುಃಖ-ದುಮ್ಮಾನಗಳಿಗೆ ಮತ್ತು ತಾರತಮ್ಯಗಳಿಗೆ ಕಾರಣವಾಗುವ ಯುದ್ಧಗಳನ್ನು ತಂದೊಡ್ಡುವುದು.

ಆಧುನಿಕ ಭಾರತದಲ್ಲಿ ಮಹಿಳೆಯರ ಹಿಂದಿನ ಸಮಸ್ಯೆಗಳು ಕಣ್ಮರೆಯಾಗಿ ಹೊಸ ಹೊಸ ಸಮಸ್ಯೆಗಳು ಕಂಡುಬರುತ್ತಿವೆ. ಶಿಕ್ಷಣ, ವೈಜ್ಞಾನಿಕ ನೋಟ, ರಾಜಕೀಯ ಆಂದೋಲನಗಳು, ಸಾಮಾಜಿಕ ಆಂದೋಲನಗಳು, ಕೈಗಾರಿಕೀಕರಣ, ನಗರೀಕರಣ, ಪಾಶ್ಚಾತ್ತೀಕರಣ ಹಾಗೂ ಆಧುನಿಕ ಬೆಳವಣಿಗೆ ಯಿಂದಾಗಿ ಸ್ತ್ರೀ ಸಂಬಂಧಿತ ಸಮಸ್ಯೆಗಳಾದ ಸತಿಪದ್ಧತಿ, ಬಾಲ್ಯವಿವಾಹ, ವಿಧವಾ ಪುನರ್‌ವಿವಾಹ ನಿಷೇಧ, ದೇವದಾಸಿ ಪದ್ಧತಿ, ಮುಂತಾದ ಸಮಸ್ಯೆಗಳು ಬಹುತೇಕವಾಗಿ ಮಾಯವಾದಂತಿವೆ. ಸಮಸ್ಯೆ ರಹಿತ ಸಮಾಜ ಅಸಾಧ್ಯ, ಸಮಸ್ಯೆಯ ಸ್ವರೂಪ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತದೆ.

ಸ್ವಾತಂತ್ರ್ಯಾನಂತರ ಸ್ತ್ರೀಯರ ಸ್ಥಾನಮಾನ ಸುಧಾರಣೆಗೊಳ್ಳುತ್ತವೆ, ಅಂದ ಮಾತ್ರಕ್ಕೆ ಸಮಸ್ಯೆಗಳಿಂದ ಮುಕ್ತವಾಗಿದ್ದಾರೆ ಅಂತ ಹೇಳುವಂತಿಲ್ಲ. ಒಂದು ಸಮಸ್ಯೆ ಪರಿಹಾರವಾದರೆ ಅದರ ಬೆನ್ನಲ್ಲೇ ಇನ್ನೊಂದು ಸಮಸ್ಯೆ ಹುಟ್ಟಿರುತ್ತದೆ. ಇಂದಿನ ಬದಲಾದ ಪರಿಸ್ಥಿತಿಯ ಸನ್ನಿವೇಶದಲ್ಲಿ ಭಾರತೀಯ ಸ್ತ್ರೀ ಹೊಸ ಸಮಸ್ಯೆಗಳನ್ನು

ಎದುರಿಸಬೇಕಾಗಿ ಬಂದಿದೆ. ಆಧುನಿಕ ಯುಗದಲ್ಲಿನ ಮಹಿಳಾ ದೌರ್ಜನ್ಯಗಳ ಸ್ವರೂಪಗಳು ಕ್ರೂರ ದೌರ್ಜನ್ಯ, ಹಿಂಸೆ, ಕಿರುಕುಳ, ಶೋಷಣೆ, ಅನ್ಯಾಯ, ವರದಕ್ಷಿಣೆ, ಅಪಹರಣ ಹಾಗೂ ಅತ್ಯಾಚಾರಗಳು ಆಕ್ರಮಣ ಸ್ವಭಾವದ ಬಿಂಬಿತವಾದವುಗಳಾಗಿವೆ. ಆ ಎಲ್ಲಾ ಅಂಶಗಳು ವಿಶ್ವದಾದ್ಯಂತ ಒಂದಲ್ಲಾ ಒಂದು ರೂಪದಲ್ಲಿ ಕಂಡುಬರುವುದನ್ನು ಅವಲೋಕಿಸಬಹುದು. ಲಿಂಗತಾರತಮ್ಯ ಮತ್ತು ಪುರುಷ ಪ್ರಧಾನತೆಯ ನಿಲುವಿನಿಂದಾಗಿ ಸ್ತ್ರೀಯರ ವಿರುದ್ಧ ದೌರ್ಜನ್ಯ ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಣಮಿಸಿದೆ. ಸಮಾಜದಲ್ಲಿ ಸಾಕ್ಷರತೆ, ಶಿಕ್ಷಣ, ವೈಜ್ಞಾನಿಕ ನೋಟ, ನಾಗರೀಕತೆಯ ಬೆಳವಣಿಗೆ, ಕಟ್ಟಳೆಗಳ ಬಗ್ಗೆ ಮಾಹಿತಿ ಮತ್ತು ಕಾನೂನಿನ ಹರಿವು ಇತ್ಯಾದಿಗಳು ಇದ್ಯಾಗ್ಯೂ ಮಹಿಳೆಯರ ವಿರುದ್ಧ ದೌರ್ಜನ್ಯ, ಹಿಂಸಾಚಾರ ಹಾಗೂ ಅಪರಾಧಗಳು ಇಲ್ಲದಿಲ್ಲ. ಆಗಾಗ ದುರ್ಘಟನೆಗಳು ಘಟಿಸುತ್ತಲೇ ಇರುವುದನ್ನು ನಾವು ಪ್ರತಿನಿತ್ಯ ಕಾಣಬಹುದಾಗಿದೆ.

ಮಹಿಳಾ ದೌರ್ಜನ್ಯವು ಯಾವುದೇ ಒಂದು, ವಲಯ, ವರ್ಗ, ಜಾತಿ, ಪ್ರದೇಶಗಳಿಗೆ ಸೀಮಿತವಾಗಿರದೆ, ಮಹಿಳೆಯು ಎಲ್ಲಿ ಇರುತ್ತಾಳೋ ಅಲ್ಲಿ ದೌರ್ಜನ್ಯ ಇರುತ್ತದೆ ಎಂದು ತಿಳಿಯಬಹುದಾಗಿದೆ. ಮಹಿಳಾ ದೌರ್ಜನ್ಯವು ಪ್ರಮುಖವಾಗಿ ಯಾವುದೇ ಪ್ರದೇಶ ಹಾಗೂ ಯಾವುದೇ ಜಾತಿ ವರ್ಗಗಳಲ್ಲಿ ಸಂಭವಿಸಿದಾದರೂ ಸಹ ಅದು ಎರಡು ವಲಯಗಳಲ್ಲಿ ಕಂಡು ಬರುತ್ತದೆ. ಕೌಟುಂಬಿಕವಲಯ ಹಾಗೂ ಸಾರ್ವಜನಿಕವಲಯದಲ್ಲಿ ಅಸಂಘಟಿತ ಮತ್ತು ಸಂಘಟಿತವಲಯಗಳು ಕಂಡುಬರುತ್ತವೆ.

ಕೌಟುಂಬಿಕ ದೌರ್ಜನ್ಯವು ಕುಟುಂಬ ವ್ಯವಸ್ಥೆಯ ಒಳಗೆ ಮಹಿಳೆಯರ ಮೇಲಿನ ನಡೆಯುವ ಕೌಟುಂಬಿಕ ಹಿಂಸೆ ಎನಿಸಿಕೊಳ್ಳುತ್ತದೆ. ಕುಟುಂಬವು ಹೆಣ್ಣು ಮಕ್ಕಳಿಗೆ ರಕ್ಷಣೆ, ನೆಮ್ಮದಿ ಮತ್ತು ಭದ್ರತೆಯನ್ನು ನೀಡುತ್ತದೆ ಎನ್ನುವುದು ಸಾಮಾನ್ಯವಾಗಿ ನಮ್ಮೆಲ್ಲರಿಗೂ ಇರುವ ನಂಬಿಕೆಯಾಗಿದೆ. ವಾಸ್ತವವಾಗಿ ಮಹಿಳೆಯರ ಮೇಲೆ ಅತಿ ಹೆಚ್ಚಿನ ದೌರ್ಜನ್ಯಗಳು ನಡೆಯುವುದು ಈ ಕುಂಟುಂಬದ ಒಳಗೆ ಎಂಬುದು ದುರಂತವಾಗಿದೆ. ನಾಲ್ಕು ಗೋಡೆಗಳ ನಡುವೆ ನಡೆಯುವ ದೌರ್ಜನ್ಯ, ಹಿಂಸೆಗಳು, ಮನೆಯ ಮರ್ಯಾದೆಯ ಹೆಸರಿನಲ್ಲಿ ಹೊರ ಜಗತ್ತಿಗೆ ಪ್ರಕಟವಾಗುವುದಿಲ್ಲ. ಕೌಟುಂಬಿಕ ದೌರ್ಜನ್ಯಗಳು ಯಾವುದೇ ಒಂದು ದೇಶಕ್ಕೆ ಸೀಮಿತವಾದವುಗಳಲ್ಲ. ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಸಹ ಕಂಡುಬರುತ್ತದೆ. ಯಾವುದೇ ರೀತಿಯ ದೈಹಿಕ, ಲೈಂಗಿಕ, ಮತ್ತು ಸಾಮಾಜಿಕ ಕಿರುಕುಳವನ್ನು ಹಿಂಸೆ ಎಂದು ಪರಿಗಣಿಸಿ ಹಲವು ಮಹಿಳಾ ಸಂಘಟನೆಗಳು ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕಾಯ್ದೆಯನ್ನು ತರಬೇಕೆಂದು ಹೋರಾಟ ನಡೆಸಿವೆ. ಇದರ ಪರಿಣಾಮವಾಗಿ ಇಂದು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯು ಅಕ್ಟೋಬರ್ ೨೦೦೬ ರಿಂದ ಜಾರಿಗೆ ಬಂದಿದೆ. ಮತ್ತೊಂದು ಮಹಿಳಾ ದೌರ್ಜನ್ಯವಲಯವಾಗಿ ಸಾರ್ವಜನಿಕವಲಯ, ಕುಟುಂಬದ ಹೊರಗಡೆ ನಡೆಯುವ ಸಾರ್ವಜನಿಕ ಪ್ರದೇಶಗಳಲ್ಲಿನ ದೌರ್ಜನ್ಯವನ್ನು ಸಾರ್ವಜನಿಕ ದೌರ್ಜನ್ಯವೆನ್ನಬಹುದು. ಇದರಲ್ಲಿ ಸಂಘಟಿತ ಮತ್ತು ಅಸಂಘಟಿತವಲಯಗಳಿದ್ದು, ಸಂಘಟಿತ ವಲಯಗಳಲ್ಲಿ ವಿದ್ಯಾವಂತರು, ಸರ್ಕಾರಿ ಹುದ್ದೆಗಳು, ಸಂಘ, ಯೂನಿಯನ್ ಇತ್ಯಾದಿ ಎಲ್ಲಾ ಕಾನೂನಿನ ಅರಿವಿದ್ದರೂ ಸಹ ಅಸಂಘಟಿತವಲಯದಷ್ಟೇ ದೌರ್ಜನ್ಯಗಳು

ನಡೆಯುತ್ತಿರುವುದನ್ನು ನಾವು ಗಮನಿಸಬಹುದು. ಇತ್ತೀಚೆಗೆ ಸರ್ಕಾರವು ದುಡಿಯುವ ಸ್ಥಳದಲ್ಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ ೨೦೧೦ ರಲ್ಲಿ ಜಾರಿಗೆ ತಂದಿದೆ.

ಇಂದು ನಾವು ವಿಜ್ಞಾನದ ಕೇತ್ರಗಳಾದ IT, BT, ET,FT ಗಳಂತಹ ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಮುಂದುವರೆಯುತ್ತಿದ್ದು, ಇದರಲ್ಲಿ ಮಹಿಳೆಯರ ಪಾಲು ಚಿರಸ್ಮರಣೆಯ. ಇಂದಿನ ಬೆಂಗಳೂರಿನ ಕಾಲ್ ಸೆಂಟರ್, NGO, ಇತರೇ ದೊಡ್ಡ ದೊಡ್ಡ ಸರ್ಕಾರಿ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಮತ್ತು ಅಸಂಘಟಿತವಲಯಗಳಲ್ಲಿ ದುಡಿಯುತ್ತಿರುವ ಮನೆಗೆಲಸಗಾರರು, ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ ಮಹಿಳೆಯರು ಒಟ್ಟಿನಲ್ಲಿ ಸಂಘ ಅಥವಾ ಯೂನಿಯನ್‌ಗಳು ಹಾಗೂ ಯಾವುದೇ ಸರ್ಕಾರದ ಕಾನೂನಿನ ನಿಯಮಗಳಿಲ್ಲದೆ ದುಡಿಯುತ್ತಿರುವ ಮಹಿಳೆಯರು ಎಲ್ಲರೂ ಸಹ ಮೇಲೆ ತಿಳಿಸಿದಂತೆ ಕೌಟುಂಬಿಕ ಹಾಗೂ ಸಾರ್ವಜನಿಕ ವಲಯಗಳಲ್ಲಿನ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ನಾವು ನೋಡಬಹುದಾಗಿದೆ. ಇಂದು ಅಪರಾಧಗಳು ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲೇ ಅಧಿಕವಾಗಿರುವುದನ್ನು ನಾವು ದೃಶ್ಯ ಮಾಧ್ಯಮ, ವಿವಿಧ ವರದಿಗಳು, ಕ್ರೈಂ ರೆಕಾರ್ಡ್ ಬ್ಯೂರೋ, ಪೋಲೀಸ್ ವರದಿಗಳಿಂದ ತಿಳಿಯಬಹುದಾಗಿದೆ. ಬೆಂಗಳೂರಿನಂತಹ ಮಹಾನಗರದಲ್ಲಿ ಕಾನೂನು ಸುವ್ಯವಸ್ಥೆಗೆ ತೀವ್ರವಾದ ಸವಾಲನ್ನು ಎಸೆಯುತ್ತಿವೆ. ರಾಷ್ಟ್ರೀಯ ಅಪರಾಧ ಬ್ಯೂರೋ ೨೦೦೫ ರಲ್ಲಿ ಬೆಂಗಳೂರು ಅಪರಾಧಗಳಲ್ಲಿ ಇಂದು ದೆಹಲಿ ಮತ್ತು ಮುಂಬೈ ನಗರಗಳನ್ನು ಹಿಂದಿಟ್ಟು ಅತ್ಯಧಿಕ ಅಪರಾಧಗಳ ತಾಣವೆಂದು ಗುರ್ತಿಸಿಕೊಂಡಿದೆ. ಆ ವರದಿಯ ಪ್ರಕಾರ ಅದು ಭಾರತದಲ್ಲಿ ೫ ನೇ ಸ್ಥಾನದಲ್ಲಿ ನಿಂತಿದ್ದು, ಒಟ್ಟಾರೆ ಅಪರಾಧಗಳು ೯.೨% ರಷ್ಟು ಅಪರಾಧಗಳು ಈ ನಗರದಲ್ಲಿ ಕಂಡು ಬಂದಿದ್ದು ಆದರೆ ಇಂದು ಬೆಂಗಳೂರಿನಲ್ಲಿ ೨೩.೧೪% ರಷ್ಟು ಅಪರಾಧಗಳು ಕಂಡು ಬರುತ್ತಿದ್ದು, ಹೆಚ್ಚು ಅಪರಾಧಗಳು ಕಂಡುಬರುವಂತಹ ನಗರವಾಗಿದೆ. ಬೆಂಗಳೂರು ನಗರಗಳಲ್ಲಿ ನಡೆಯುವ ಅಪರಾಧಗಳು ಅದರಲ್ಲೂ ಮಹಿಳಾ ವಿರುದ್ಧದ ಅಪರಾಧಗಳು ಅವು ಕೌಟುಂಬಿಕ ಅಥವಾ ಸಾರ್ವಜನಿಕ ವಲಯದಲ್ಲಿ ಎರಡು ಕಡೆ ಯಥೇಚ್ಚವಾಗಿ ನಡೆಯುತ್ತಿರು ವುದನ್ನು ನಾವು ದಿನ ನಿತ್ಯ ಪತ್ರಿಕಾ ಮಾಧ್ಯಮಗಳಿಂದ ಹಾಗೂ ವರದಿಗಳಿಂದ ತಿಳಿಯಬಹುದಾಗಿದೆ.

ಆದರೂ ಮಹಿಳೆಯರು ಪುರುಷರಂತೆ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಇತರೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷರಂತೆ ಸಮಾನವಾಗಿ ದುಡಿದು ತಮ್ಮ ಜೀವನವನ್ನು ತಾವೇ ನೆಡೆಸಿಕೊಳ್ಳುವಂತೆ ಸ್ವಾಭಿಮಾನಿಗಳಾಗಿ ಬದುಕುತ್ತಿರುವ ಇಂತಹ ಸಮಯದಲ್ಲಿಯೂ ಸಹ ಮಹಿಳೆಯರನ್ನು ಅನೇಕ ಸಮಸ್ಯೆಗಳು ಕಾಡುತ್ತಿರುವುದು ನಾವು ಗಮನಿಸಬಹುದಾಗಿದೆ. ಮಹಿಳೆಯರು ಸ್ವತಂತ್ರ ಪೂರ್ವದಲ್ಲಿದ್ದ ಸಮಸ್ಯೆಗಳನ್ನು ಸಾಮಾಜಿಕ ಸುಧಾರಕರು ಹಾಗೂ ಬ್ರಿಟೀಷರ ಸಹಾಯದಿಂದ ನೂರಾರು ವರ್ಷಗಳ ಹೋರಾಟದ ಫಲವಾಗಿ ಅವು ಕಣ್ಮರೆಯಾದವು, ಆದರೆ ಇತ್ತೀಚಿನ ಆಧುನಿಕ ಯುಗದಲ್ಲಿ ಆ ದೌರ್ಜನ್ಯಗಳು ಬೇರೆ ಬೇರೆ ಸ್ವರೂಪವನ್ನು ಪಡೆದಿವೆ. ಮಹಿಳಾ ವಿರುದ್ದ ದೌರ್ಜನ್ಯಗಳು ಇಂದು ತಮ್ಮ ಸ್ವರೂಪವನ್ನು ಬದಲಾಯಿಸುತ್ತಾ ತೀವ್ರ

ಸ್ವರೂಪಗಳಲ್ಲಿ ನಡೆಯುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಉದಾ. ಅತ್ಯಾಚಾರ, ವರದಕ್ಷಿಣೆ ಕಿರುಕುಳ, ದುಡಿಯುತ್ತಿರುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ, ಸ್ತ್ರೀ ಮತ್ತು ಹೆಣ್ಣು ಮಕ್ಕಳ ಅಪಹರಣ, ಆ್ಯಸಿಡ್ ಪ್ರಕರಣಗಳು, ಇನ್ನೂ ಮುಂತಾದ ಪ್ರಕರಣಗಳು ನಡೆಯುತ್ತಿವೆ. ಈ ದೌರ್ಜನ್ಯವನ್ನು ಕೆಲವು ಸಮಾಜಶಾಸ್ತ್ರಜ್ಞರು ಇವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿದ್ದಾರೆ. ಕೌಟುಂಬಿಕ ದೌರ್ಜನ್ಯ, ಹಾಗೂ ಸಾರ್ವಜನಿಕ ವಲಯದಲ್ಲಿನ ದೌರ್ಜನ್ಯ ಎಂದು ಗುರುತಿಸಿದ್ದಾರೆ. ಒಟ್ಟಾರೆಯಾಗಿ ಮಹಿಳೆಯು ಇಂದು ಎರಡು ವಲಯಗಳ ದೌರ್ಜನ್ಯಗಳಿಗೆ ತುತ್ತಾಗುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಈ ದೌರ್ಜನ್ಯಗಳು ಅದರಲ್ಲೂ ನಗರ ಪ್ರದೇಶಗಳಲ್ಲಿ ಅಂದರೆ ಬೆಂಗಳೂರಿನಂತಹ ಪ್ರತಿಷ್ಠಿತ ಮಹಾನಗರಗಳಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವುದನ್ನು ನಾವು ದಿನನಿತ್ಯ ಮಾಧ್ಯಮಗಳಲ್ಲಿ ನೋಡಬಹುದಾಗಿದೆ. ಇಂತಹ ಆಧುನಿಕ ಯುಗದಲ್ಲಿ ಮಹಿಳಾ ಜಾಗೃತಿಗಳು, ಸಂವಿಧಾನ ಹಕ್ಕುಗಳು, ಸಂವಿಧಾನ ಬದ್ದ ಕಾಯ್ದೆ ಕಾನೂನುಗಳು, ಇದ್ದರೂ ಸಹ ದೌರ್ಜನ್ಯಗಳು ದಿನಂಪ್ರತಿ ತಮ್ಮ ಸ್ವರೂಪವನ್ನು ಬದಲಾಯಿಸುತ್ತಾ ನಡೆಯುವುದರಿಂದ ಈ ದೌರ್ಜನ್ಯಗಳು ಏಕೆ ನಗರ ಪ್ರದೇಶಗಳಲ್ಲಿಯೇ ಹೆಚ್ಚು ನಡೆಯುತ್ತವೆ ಎಂಬುದನ್ನು ಅಭ್ಯಸಿಸುವುದು ಇಂದು ಅವಶ್ಯಕವಾದ ವಿಷಯವಾಗಿದೆ. ಈ ಒಟ್ಟು ಅಧ್ಯಯನದಲ್ಲಿ ದೌರ್ಜನ್ಯಗಳ ಸ್ವರೂಪ ಮತ್ತು ಇವುಗಳ ತೀವ್ರತೆಯನ್ನು ಗುರುತಿಸುವುದಲ್ಲದೆ ಅವುಗಳನ್ನು ನಿಭಾಯಿಸುವ ತಂತ್ರಗಾರಿಕೆ ಕಾನೂನುಗಳ ಮೂಲಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಾಗುತ್ತದೆ. ಈ ಬಗೆಯಲ್ಲಿ ರೂಪಿಸಿಕೊಳ್ಳಲಾದ ವಿಷಯದ ಅಧ್ಯಯನಕ್ಕೆ ಕೆಲವು ಪ್ರಮುಖ ಉದ್ದೇಶಗಳಿವೆ.

೧.೨ ಅಧ್ಯಯನದ ಉದ್ದೇಶಗಳು

ಆಧುನಿಕ ಸಮಾಜದಲ್ಲಿ ಮಹಿಳಾ ದೌರ್ಜನ್ಯಗಳು ತಮ್ಮ ಸ್ವರೂಪವನ್ನು ಬದಲಾಯಿಸಿಕೊಂಡು ತೀವ್ರ ಸ್ವರೂಪವನ್ನು ಪಡೆಯುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. ಮಹಿಳೆಯರ ಪರ ಎಷ್ಟೇ ಕಾನೂನುಗಳು ಕಾಯ್ದೆಗಳು ಜಾರಿಯಾದರೂ ಸಹ, ಅವು ದಿನದಿಂದ ದಿನಕ್ಕೆ ಹೆಚ್ಚುತ್ತಲಿವೆ. ಬೆಂಗಳೂರು ನಗರದಂತಹ ಮಹಾನಗರದಲ್ಲಿ ಮಹಿಳಾ ದೌರ್ಜನ್ಯಗಳ ಅಂಕಿ-ಅಂಶಗಳಿಗೆ ಸಿಗದಂತೆ ನಡೆಯುತ್ತಿರುವುದನ್ನು ನಾವು ಮಾಧ್ಯಮಗಳ ಮೂಲಕ ಹಾಗೂ ವರದಿಗಳ ಆಧಾರದ ಮೇಲೆ ತಿಳಿದುಕೊಳ್ಳಬಹುದಾಗಿದೆ. ಪ್ರಸ್ತುತ ಅಧ್ಯಯನವು ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ನಡೆಸುವ ಅಧ್ಯಯನವಾಗಿದೆ. ಇನ್ನೂ ಪ್ರಕಟವಾಗದೇ ಇರುವ ಅದೆಷ್ಟೋ ಪ್ರಕರಣಗಳು ಯಾವ ಸಮಾಜದ ಕಣ್ಣಿಗೂ ಕಾಣಿಸುವುದಿಲ್ಲ. ಹೀಗೆ ಪ್ರಕಟಗೊಂಡ ಪ್ರಕರಣಗಳ ಆಧಾರದ ಮೇಲೆ ಅಧ್ಯನವು ಸಾಗಿದ್ದು ಹಾಗೂ ಈ ಹಿನ್ನೆಲೆಯಲ್ಲಿ ಈವರೆಗೂ ನಡೆದ ಕೆಲವು ಅಧ್ಯಯನಗಳು, ಸಂಶೋಧನಾ ಬರಹಗಳು, ಪತ್ರಿಕಾ ಲೇಖನಗಳನ್ನು ಸಮೀಕ್ಷೆ ಮಾಡುವುದರ ಮೂಲಕ ಅಧ್ಯಯನ ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿದೆ. ಈ ಅಧ್ಯಯನವು

ಮಹಿಳಾ ದೌರ್ಜನ್ಯ ಲಿಂಗ ಸಂಬಂಧಿ ಅಧ್ಯಯನ (ಬೆಂಗಳೂರು ನಗರದಲ್ಲಿ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ವನ್ನು ಒಳಗೊಂಡಿದ್ದು ಈ ಅಧ್ಯಯನದ ಪ್ರಸ್ತುತ ಉದ್ದೇಶಗಳೆಂದರೆ.

I . **ಮಾಹಿತಿ ಸಂಗ್ರಹಣೆಯ ಇಂದಿನ ಉದ್ದೇಶಗಳು ಈಗಿವೆ.**

೧. ೨೦೦೫–೨೦೧೧ ವರೆಗಿನ ಬೆಂಗಳೂರು ನಗರದ ಪೋಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮಹಿಳಾ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡುವುದು.

೨. ಮಹಿಳಾ ದೌರ್ಜನ್ಯಗಳಿಗೆ ಒಳಗಾಗಿರುವ ಕೆಲವು ಮಹಿಳೆಯರನ್ನು ಭೇಟಿ ಮಾಡಿ ದೀರ್ಘ ಚರ್ಚೆ ನೆಡೆಸಿ ಅವರಿಂದ ಪೂರ್ಣ ಪ್ರಮಾಣದ ಮಾಹಿತಿಯನ್ನು ಪಡೆದುಕೊಳ್ಳುವುದು.

೩. ಮಹಿಳಾ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಕೆಲವೊಂದು ಬಾರಿ ಠಾಣಾ ಬರಹಗಾರರನ್ನು ಭೇಟಿ ಮಾಡಿ ಪ್ರಕರಣಗಳ ಸತ್ಯಾ ಸತ್ಯತೆಯನ್ನು ತಿಳಿದುಕೊಳ್ಳುವುದು ಹಾಗೂ ನೆರೆಹೊರೆಯವರಿಂದ, ಸಂಬಂಧಿಕರಿಂದ ಮಾಹಿತಿ ಪಡೆಯುವುದು.

೪. ಮಹಿಳಾ ದೌರ್ಜನ್ಯ ಪ್ರಕರಣಗಳ ದಾಖಲಾತಿಗಳನ್ನು ವಿವಿಧ ಸ್ವರೂಪದ ಪ್ರಕರಣಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಪ್ರತಿ ಪ್ರಕರಣವನ್ನು ಅಧ್ಯಯನ ಮಾಡಿ, ಪ್ರಕರಣದ ತೀವ್ರತೆಯನ್ನು ತಿಳಿದುಕೊಳ್ಳುವುದು. ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ತನಿಖೆಯಾಗಿ ಆರೋಪಿಗಳು ಖುಲಾಸೆಯಾಗಿದ್ದಾರೆ, ಹಾಗೂ ಎಷ್ಟು ಪ್ರಮಾಣದ ಆರೋಪಿಗಳು ಶಿಕ್ಷೆಗೊಳಗಾಗಿದ್ದಾರೆ. ಹಾಗೂ ಎಷ್ಟು ಪ್ರಕರಣಗಳು ತನಿಖಾ ಹಂತದಲ್ಲಿವೆ ಎಂದು ತಿಳಿಯುವುದಾಗಿದೆ.

II. **ಪೋಲೀಸ್ ಠಾಣೆಯ ವಾಸ್ತವ ವ್ಯವಸ್ಥೆಯನ್ನು ತಿಳಿಯುವ ಉದ್ಧೇಶಗಳು ಈಗಿವೆ.**

೧. ದೌರ್ಜನ್ಯಕ್ಕೆ ಒಳಗಾದ ಎಲ್ಲಾ ಮಹಿಳೆಯರೂ ಠಾಣೆಯಲ್ಲಿ ದೂರನ್ನು ದಾಖಲಿಸುತ್ತಾರೆಯೇ? ದಾಖಲು ಮಾಡಿಕೊಳ್ಳುವಂತಹ ವಾತಾವರಣ ಠಾಣೆಗಳಲ್ಲಿ ಇದೆಯೇ? ದಾಖಲಾದರೂ ಸಹ ಯಾವ ಪ್ರಮಾಣದಲ್ಲಿ ತನಿಖೆಯಾಗುತ್ತವೆ ಹಾಗೂ ಪೋಲೀಸ್ ಠಾಣೆಯ ಬಗ್ಗೆ ಮಹಿಳೆಯರಿಗೆ ಇರುವ ಅಭಿಪ್ರಾಯವನ್ನು ತಿಳಿದುಕೊಳ್ಳುವುದಾಗಿದೆ.

III. **ಕಾನೂನಿನ ವ್ಯವಸ್ಥೆಯಲ್ಲಿರುವ ತೊಡಕುಗಳನ್ನು ಅರಿಯುವ ಉದ್ಧೇಶಗಳು ಈಗಿವೆ.**

೧. ಮಹಿಳೆಯರು ದೌರ್ಜನ್ಯಕ್ಕೆ ಒಳಗಾದ ಸಮಯದಲ್ಲಿ ಮಹಿಳೆಯರಿಗೆ ಸರ್ಕಾರದ ಕಾನೂನುಗಳು ಹಾಗೂ ಪರಿಹಾರಗಳ ಬಗ್ಗೆ ತಿಳುವಳಿಕೆ ಇದಯೇ? ಎಂದು ತಿಳಿದುಕೊಳ್ಳುವುದು ಹಾಗೂ ಕಾನೂನುಗಳು ಇದ್ದರೂ ಸಹ ದೌರ್ಜನ್ಯಗಳಿಗೆ ಒಳಗಾದ ಸಮಯದಲ್ಲಿ ಅಂತಹ ಮಹಿಳೆಯ ಪರವಾಗಿ ಕಾನೂನು ನಿಲ್ಲುತ್ತವೆಯೇ? ಅಥವಾ ಕಾನೂನುಗಳು ಅಧಿಕಾರವುಳ್ಳ ಮೇಲ್ಜಾತಿಯ ಶ್ರೀಮಂತರ ಪಾಲುಗುತ್ತವೋ, ಎಂದು ಕೂಲಂಕುಷವಾಗಿ ಅಭ್ಯಸಿಸುವುದಾಗಿದೆ.

IV. **ತೌಲನಿಕ ಚರ್ಚೆಯ ಉದ್ಧೇಶ ಈಗಿದೆ.**

೧. ಕರ್ನಾಟಕದ ರಾಜ್ಯದಲ್ಲಿನ ಮಹಿಳಾ ದೌರ್ಜನ್ಯ ಪ್ರಕರಣಗಳಿಗೂ ಮತ್ತು ಬೆಂಗಳೂರು ನಗರದ ಪೊಲೀಸ್ ದಾಖಲೆಗಳಿಗೂ ತೌಲನಿಕ ವಿಶ್ಲೇಷಣೆ ಮಾಡುವುದು.

೧.೩ ಅಧ್ಯಯನದ ವ್ಯಾಪ್ತಿ

ಆಧುನಿಕ ಸಮಾಜದಲ್ಲಿ ಮಹಿಳೆ ಅಭಿವೃದ್ಧಿ ಹೊಂದಿ ಸ್ವಾಭಿಮಾನಿಯಾಗಿ ಅಂದರೆ ತಂದೆ–ತಾಯಿ, ಸಹೋದರ, ಗಂಡ–ಮಕ್ಕಳ ಇತರೇ ಯಾವುದೇ ಪುರುಷರ ಮೇಲೆ ಅವಲಂಭಿತವಾಗದೇ ತಾನೇ ಸ್ವತಃ ಸ್ವತಂತ್ರಳಾಗಿ ಸಾರ್ವಜನಿಕ ವಲಯದಲ್ಲಿ ದುಡಿದು ಬದುಕುವಂತಹ ಸ್ಥಿತಿಯನ್ನು ನಿರ್ಮಿಸಿಕೊಂಡಿದ್ದಾಳೆ. ಮಹಿಳೆಯು ಎಷ್ಟೇ ವಿದ್ಯಾವಂತೆ ಹಾಗೂ ಉದ್ಯೋಗಶೀಲತೆಯನ್ನು ಹೊಂದಿದ್ದರೂ ಸಹ ಇಂದಿನ ಪುರುಷರ ಮಾನಸಿಕ ಸ್ಥಿತಿಗಳು ಬದಲಾಗಿಲ್ಲ, ಕಾರಣ ಹೆಣ್ಣು ದೈಕಹಿಕವಾಗಿ ದುರ್ಬಲಳು, ಅಬಲೆ, ಪುರುಷರ ಆಶ್ರಯವಿಲ್ಲದೇ ಬದುಕಲು ಸಾಧ್ಯವಿಲ್ಲವೆಂಬ ಕಲ್ಪನೆಗಳು ಇಂದಿಗೂ ಸಹ ಮುಂದುವರೆದಿವೆ. ಮಹಿಳೆಯರು ಇಂದು ಶಿಕ್ಷಿತರಾಗಿ ಉದ್ಯೋಗಸ್ಥರಾಗಿದ್ದರೂ ಸಹ ಪುರುಷರಿಂದ ಕೌಟುಂಬಿಕ ಹಾಗೂ ಸಾರ್ವಜನಿಕ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ನಾವು ಕಾಣಬಹುದಾಗಿದೆ. ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಅಭಿವೃದ್ಧಿ ಯೋಜನೆಗಳು ಮತ್ತು ಅವರ ವಿರುದ್ಧದ ಅಪರಾಧಗಳ ದೌರ್ಜನ್ಯ ತಡೆ ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದಿದೆ. ಕೌಟುಂಬಿಕ ವಲಯದ ದೌರ್ಜನ್ಯ ತಡೆ ಕಾಯ್ದೆಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ೨೦೦೬ ರಲ್ಲಿ ಜಾರಿಗೆ ತಂದಿದೆ, ಇನ್ನೂ ಸಾರ್ವಜನಿಕ ವಲಯದಲ್ಲಿನ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ ಕೆಲಸದ ಸ್ಥಳಗಳಲ್ಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ೨೦೧೦ ರಲ್ಲಿ ಜಾರಿಗೆ ತಂದಿದೆ. ಇಂತಹ ಕಠಿಣ ಸ್ವರೂಪದ ಕಾನೂನುಗಳು ಜಾರಿಯಲ್ಲಿದ್ದರೂ ಸಹ ಬೆಂಗಳೂರು ನಗರದಂತಹ ನಗರದಲ್ಲಿ ಮಹಿಳಾ ದೌರ್ಜನ್ಯಗಳು ಹೆಗ್ಗಿಲ್ಲದೆ ನಡೆಯುತ್ತಿರುವುದನ್ನು ನಾವು ನೋಡಬಹುದಾಗಿದೆ. ಬೆಂಗಳೂರಿನ ಠಾಣೆಯಲ್ಲಿ ದಾಖಲಾದ ಮಹಿಳಾ ಪ್ರಕರಣಗಳು ಕೌಟುಂಬಿಕ ದೌರ್ಜನ್ಯ ಹಾಗೂ ಸಾರ್ವಜನಿಕ ದೌರ್ಜನ್ಯಗಳ ಒಟ್ಟು ಎಲ್ಲಾ ತರದ ಪ್ರಕರಣಗಳನ್ನು ಅಭ್ಯಸಿಸಿದೆ. ಬೆಂಗಳೂರು ನಗರದ ವಿವಿಧ ವಲಯಗಳ ಠಾಣೆಗಳಲ್ಲಿನ ಪ್ರಕರಣಗಳನ್ನು ಆಯ್ದುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಮಹಿಳಾ ದೌರ್ಜನ್ಯ ಲಿಂಗ ಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ಮತ್ತು ಮಹಿಳಾ ದೌರ್ಜನ್ಯಗಳ ಕುರಿತ ತಾತ್ವಿಕ ಚರ್ಚೆ ಇವುಗಳಿಗೆ ಪೂರ್ವಕವಾಗಿ ಅಧ್ಯಯನದ ಪ್ರಮುಖ ಕುರುಹು ದೌರ್ಜನ್ಯದ ದಾಖಲಾತಿಗಳು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ಹಾಗೂ ಠಾಣೆಯ ಬರಹಗಾರರಿಂದ ಹೆಚ್ಚಿನ ಮಾಹಿತಿಯನ್ನು ಪಡೆದು ವಿವರವಾದ ಸಮೀಕ್ಷೆಗೊಳಪಡಿಸಿ ಅಧ್ಯಯನ ಮಾಡುವ ಪ್ರಯತ್ನವಾಗಿದೆ.

೧.೪. ಅಧ್ಯಯನದ ಮಹತ್ವ

ಇಂದು ಮಹಿಳೆಯರು ಸಮಾಜದಲ್ಲಿ ಎರಡನೇ ವರ್ಗದ ವ್ಯಕ್ತಿಗಳಾಗಿ ಕಂಡುಬರುತ್ತಿದ್ದಾರೆ, ದಿನೇ ದಿನೇ ಅವರ ಮೇಲೆ ಮಾನಸಿಕ ಹಾಗೂ ದೈಹಿಕ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಮಗು ಭ್ರೂಣದಲ್ಲಿರುವಾಗಲೇ ಹೆಣ್ಣು ಎಂದು ತಿಳಿದ ತಕ್ಷಣ ಗರ್ಭಪಾತ ಮಾಡಿಸುವ ಈ ಆಧುನಿಕ ಯುಗದಲ್ಲಿ ಹುಡುಗಿಯರ ಹಾಗೂ ವಿವಾಹಿತ ಸ್ತ್ರೀಯರ ಸ್ಥಿತಿ ಗಂಭೀರವಾಗಿರುತ್ತದೆ. ಇಂದು ಸರ್ಕಾರ ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ಅಪರಾಧಗಳನ್ನು ತಡೆಯಲು ಅನೇಕ ಮಹಿಳಾ ಪರ ಕಾಯ್ದೆಗಳಾದಂತಹ ವರದಕ್ಷಿಣಾ ನಿಷೇಧ ಕಾಯ್ದೆ, ಲೈಂಗಿಕ ಕಿರುಕುಳ ಕಾಯ್ದೆ, ಅನೈತಿಕ ಸಂಬಂಧ ಕಾಯ್ದೆ, ಮಾನಸಿಕ ಮತ್ತು ಶಾರೀರಿಕ ಕಿರುಕುಳ ನಿಷೇಧ ಕಾಯ್ದೆ, ಅಪಹರಣ, ಕೊಲೆ, ಅತ್ಯಾಚಾರಗಳಂತಹ ಅಮಾನವೀಯ ಕೃತ್ಯಗಳ ವಿರುದ್ಧ ಕಾನೂನು ನಿಷೇಧ ಕಾಯ್ದೆಗಳನ್ನು ಜಾರಿಗೆ ತಂದರೂ ಸಹ ಮಹಿಳೆಯರ ಮೇಲಿನ ದೌರ್ಜನ್ಯವು ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಕಾಣಬಹುದಾಗಿದೆ.

ಇಂದು ನಾವು ವಿಜ್ಞಾನ ಕ್ಷೇತ್ರಗಳಂತಹ ಐ.ಟಿ–ಬಿ.ಟಿ, ಎನ್.ಟಿ–ಎಫ್.ಟಿ. ಗಳಂತಹ ತಂತ್ರಜ್ಞಾನದ ಕ್ಷೇತ್ರದಲ್ಲಿ ಮುಂದುವರೆಯುತ್ತಿದ್ದು, ಇದರಲ್ಲಿ ಮಹಿಳೆಯರ ಪಾಲು ಸಹ ಚಿರಸ್ಮರಣೀಯ. ಇಂದಿನ ಬೆಂಗಳೂರಿನ ಕಾಲ್‌ಸೆಂಟರ್, ಎನ್.ಜಿ.ಓ, ಇತರ ದೊಡ್ಡ ದೊಡ್ಡ ಸರ್ಕಾರಿ ಹಾಗೂ ಖಾಸಗೀ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಮಹಿಳೆಯರು ದೌರ್ಜನ್ಯ, ಕಿರುಕುಳ, ಮಾನಸಿಕ ಹಿಂಸೆಗಳಿಗೆ ಒಳಗಾಗುತ್ತಿದ್ದಾಳೆ. ಬೆಂಗಳೂರು ಇಂದು ಪ್ರಪಂಚದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದ್ದು ಸಿಲಿಕಾನ್ ವ್ಯಾಲಿಯೆಂದೇ ಪ್ರಸಿದ್ಧಿಯಾಗಿದೆ. ಆದರೂ ಸಹ ಬೆಂಗಳೂರು ದಿನೇ ದಿನೆ ಬೆಳೆಯುತ್ತಿದ್ದಂತೆಯೇ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿರುವುದು ಕಂಡು ಬರುತ್ತಿದೆ. ಮಹಿಳೆ ಎಂದಾಕ್ಷಣ ದೌರ್ಜನ್ಯ ಅಪರಾಧ ಎಂಬ ಮಾತು ಹುಟ್ಟಿನಿಂದ ಹಿಡಿದು ಸಾಯುವ ತನಕವೂ ಆಕೆಯ ನೆರಳಿನಂತೆ ಹಿಂಬಾಲಿಸುತ್ತದೆ. ಇದಕ್ಕೆ ಕಾರಣ ಸಮಾಜದಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಅಸಮಾನತೆಯಾಗಿದ್ದು ಮಹಿಳೆಯು ಸಮಾಜದಲ್ಲಿ ಪುರುಷರ ಪರಾಧೀನಳಾಗಿರುವುದು ಹಾಗೂ ಪುರುಷರ ನಿಯಂತ್ರಣವೇ ಇದಕ್ಕೆ ಕಾರಣವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ನಗರೀಕರಣ ಎನ್ನುವುದು ಅನೇಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ತನ್ನೊಳಗೆ ಬಚ್ಚಿಟ್ಟುಕೊಂಡಿದೆ. ಈ ಸಮಸ್ಯೆಗಳು ಬೆಂಗಳೂರಿನಂತಹ ಮಹಾನಗರದಲ್ಲಿ ಕಾನೂನು ಸುವ್ಯವಸ್ಥೆಗೆ ತೀವ್ರವಾದ ಸವಾಲನ್ನು ಎಸೆಯುತ್ತವೆ. ರಾಷ್ಟ್ರೀಯ ಅಪರಾಧ ಬ್ಯೂರೋ ೨೦೦೫ ರಲ್ಲಿ ಭಾರತದ ನಗರಗಳಲ್ಲಿ ಘಟಿಸುತ್ತಿರುವ ಅಪರಾಧಗಳ ಅಂಕಿಅಂಶಗಳನ್ನು ಬಿಡುಗಡೆಗೊಳಿಸಿದಾಗ ಬೆಂಗಳೂರು ಅಪರಾಧಗಳಲ್ಲಿ ದೆಹಲಿ ಮತ್ತು ಮುಂಬೈ ನಗರಗಳನ್ನು ಹಿಂದಿಟ್ಟು ಅತ್ಯಧಿಕ ಅಪರಾಧಗಳ ತಾಣವೆಂದು ಗುರ್ತಿಸಿದೆ. ಈ ವರದಿಯ ಪ್ರಕಾರ ಅದು ಭಾರತದಲ್ಲಿ ೨೦೦೪ ರಲ್ಲಿ ದೆಹಲಿ ನಗರವು ಅಪರಾಧಗಳಿಗೆ ಇಂದು ಬೆಂಗಳೂರಿನಲ್ಲಿ ಶೇಕಡ ೨೩.೧೪ ರಷ್ಟು ಅಪರಾಧಗಳು ಕಂಡುಬರುತ್ತಿದ್ದು, ಹೆಚ್ಚು ಅಪರಾಧಗಳು

ಕಂಡುಬರುವ ನಗರವಾಗಿರುವುದರಿಂದ ಅದರಲ್ಲೂ ಮಹಿಳಾ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿರುವುದರಿಂದ ಬೆಂಗಳೂರು ನಗರದ ಮಹಿಳೆಯರ ಮೇಲಿನ ದೌರ್ಜನ್ಯ ಸ್ಥಿತಿ ಮತ್ತು ಸ್ವರೂಪಗಳ ಬಗ್ಗೆ ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

೧.೫ ಅಧ್ಯಯನದ ವೈಧಾನಿಕತೆ ಮತ್ತು ಅದರ ಆನ್ವಯಿಕ ವಿಶ್ಲೇಷಣೆ

ಮಹಿಳಾ ಅಧ್ಯಯನ ಪ್ರಮುಖ ಹಾಗೂ ವಿಭಿನ್ನ ಶೈಲಿಯ ಸಂಶೋಧನಾ ವಿಧಾನವಾಗಿರುವ ಸ್ತ್ರೀವಾದಿ ಸಂಶೋಧನಾ ವಿಧಾನಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಏಕೆಂದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪ್ರಧಾನತೆಯೆಂಬುದು ಏಕ ಕಾಲಕ್ಕೆ ರಚನೆಯಾಗಿದ್ದು ಪ್ರಜ್ಞಾಪೂರ್ವಕವಾಗಿ ಸಂರಚಿಸಲಾಗಿದೆ. ಇದು ನಿರಂತರವಾಗಿ ಅಸಮಾನತೆ, ತಾರತಮ್ಯವನ್ನು ಮುಂದು ವರಿಸಿಕೊಂಡು ಸಾಗುತ್ತಿದೆ. ಶತ-ಶತಮಾನಗಳಿಂದ ವಿವಿಧ ಸ್ವರೂಪಗಳಲ್ಲಿ ಕೆಳ ಹಂತಕ್ಕೆ ತಳ್ಳಲಾದ ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡು ಯಾವುದೇ ಜ್ಞಾನವಲಯಗಳು ಚಿಂತನೆಗೆ ತೊಡಗಿಲ್ಲ. ಬಹುತೇಕ ಎಲ್ಲಾ ಸಂಶೋಧನೆಗಳು ಸಹಿತ ಸಾಂಪ್ರದಾಯಿಕ ಸಂಶೋಧನಾ ವಿಧಾನಗಳಿಂದ ಪ್ರಭಾವಿತವಾಗಿವೆ. ಮಹಿಳೆಯರ ವಾಸ್ತವ ಪರಿಸ್ಥಿತಿಯನ್ನು ಅರಿಯಲು ಮತ್ತು ಜೀವನ ಕ್ರಮವನ್ನು ತಿಳಿಯಲು ಹಾಗೂ ಇತ್ಯಾತ್ಮಕವಾಗಿ ಬದಲಾವಣೆ ಮಾಡಲು ಈ ಕೆಳಗಿನ ವಿಧಾನಗಳು ಅತ್ಯವಶ್ಯಕವಾಗುತ್ತವೆ.

೧.೫.೦ ವಸ್ತುನಿಷ್ಟ ಮತ್ತು ವ್ಯಕ್ತಿನಿಷ್ಟ ಅಧ್ಯಯನ

ಸ್ತ್ರೀವಾದಿ ಸಂಶೋಧನೆಯಲ್ಲಿ ವಸ್ತುನಿಷ್ಟ ಮತ್ತು ವ್ಯಕ್ತಿನಿಷ್ಟ ಎರಡು ವಿಧಾನಗಳನ್ನು ಬಳಸಲಾಗುತ್ತದೆ. ಆದರೆ ಸ್ತ್ರೀವಾದಿ ಸಂಶೋಧನೆಯಲ್ಲಿ ವ್ಯಕ್ತಿನಿಷ್ಟ ಅಧ್ಯಯನವು ಮಹತ್ವದ ಪಾತ್ರ ವಹಿಸಿರುತ್ತದೆ. ವಸ್ತುನಿಷ್ಟ ಅಧ್ಯಯನವು ವಸ್ತುನಿಷ್ಟ ಮಾಹಿತಿಗಳನ್ನು ಒದಗಿಸುತ್ತದೆ. ಅತ್ಯಾಚಾರ ಪ್ರಕರಣಗಳ ದಾಖಲೆಗಳು, ಅಂಕಿಅಂಶಗಳು, ಆಸೀಡ್ ದಾಳಿಯ ದಾಖಲೆಗಳು ಅಂದರೆ ಭೌತಿಕ ವಿವರಗಳನ್ನು ಒದಗಿಸುತ್ತದೆ. ಆದರೆ ಕೇವಲ ದಾಖಲೆಗಳಿಂದ ಮಾತ್ರ ಮಹಿಳಾ ವಿಷಯವನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ. ಇದರಲ್ಲಿ ಮಹಿಳೆಯ ವೈಯಕ್ತಿಕ ಅನಿಸಿಕೆ, ಭಾವನೆಗೆ ಬೆಲೆ ಕೊಡಬೇಕಾಗುತ್ತದೆ. ಆದ್ದರಿಂದ ಇಲ್ಲಿ ವ್ಯಕ್ತಿನಿಷ್ಟ ಅಧ್ಯಯನವು ಮುಖ್ಯವಾಗಿರುತ್ತದೆ.

ತೀರಾ ವೈಯಕ್ತಿಕ ಸಮಾಜದಲ್ಲಿ ಗೌಪತ್ಯೆಯನ್ನು ಕಾಪಾಡಿಕೊಳ್ಳಬೇಕೆಂದು ಹೇರಿರುವ ಹಲವು ವಿಷಯ ವಿವರಗಳು, ಸಾಮೂಹಿಕ ವಾತಾವರಣದಲ್ಲಿರುವ ಅನಾನುಕೂಲಗಳಿಂದ ಹೆಚ್ಚು ಮುಸುಕಿನಲ್ಲಿ ಉಳಿದುಕೊಳ್ಳುವುದರಿಂದ ಖಚಿತವಾದ ಉತ್ತರಗಳು ದೊರೆಯುವುದಿಲ್ಲ. ಯಾರಿಗೆ ಭವಿಷ್ಯದ ಬಗ್ಗೆ ಆತಂಕ, ಭಯ, ಗೊಂದಲಗಳು ಇರುವುದಿಲ್ಲವೋ ಅವರು ಮಾತ್ರ ಎಂಥಹುದೇ ಸಂಗತಿಯನ್ನು ಸ್ಪಷ್ಟವಾಗಿ ಹೊರಹಾಕಲು ಸಾಧ್ಯ. ಈ ನಿಟ್ಟಿನಲ್ಲಿ ಮಹಿಳಾ ಬದುಕಿನಲ್ಲಿ ನಿರಂತರವಾಗಿ ಅಭದ್ರತೆ ಆರಕ್ಷತೆಯ ಸಂಗತಿಗಳೇ

ಹೆಚ್ಚಾಗಿರುವುದರಿಂದ ಸಮಸ್ಯೆಯ ನೈಜಸ್ವರೂಪವನ್ನು ಮರೆಮಾಚಲಾಗುತ್ತದೆ. ಆ ಕಾರಣವಾಗಿ ಸ್ತ್ರೀವಾದಿ ಸಂಶೋಧನೆಯು ವೈಯಕ್ತಿಕ ವಿವರಗಳನ್ನು ಆಧಾರಿಸಿ ವ್ಯಕ್ತಿನಿಷ್ಠ ವಿಧಾನದಿಂದ ಒಟ್ಟು ಸಮುದಾಯಕ್ಕೆ ಅನ್ವಯಿಸುವ ಸಾಮಾಜಿಕ ಸಮಸ್ಯೆಯನ್ನು ಅರ್ಥೈಸಿಕೊಳ್ಳುವ ಧ್ಯೇಯವನ್ನು ಹೊಂದಿದೆ. ಆದರೆ ವಸ್ತುನಿಷ್ಠ ವಿಧಾನವನ್ನು ಸಂಪೂರ್ಣವಾಗಿ ನಿರಾಕರಿಸದೇ, ಅಂಕಿ–ಅಂಶಗಳ ದಾಖಲಾತಿ ಸಂದರ್ಭಗಳು ಇತ್ಯಾದಿಗಳಲ್ಲಿ ಬಳಸಲಾಗುತ್ತದೆ. ಆದರೆ ವ್ಯಕ್ತಿನಿಷ್ಠ ಅಧ್ಯಯನದಲ್ಲಿ ಒಬ್ಬ ಮಹಿಳೆಯು ಸ್ವತಃ ಅನುಭವಿಸಿದ ಹಿಂಸೆ, ದೌರ್ಜನ್ಯ ಹಾಗೂ ಅದರ ತೀವ್ರತೆಯನ್ನು ಅರಿತುಕೊಂಡು ಅದನ್ನು ಮಹಿಳಾ ಸಮಸ್ಯೆಯನ್ನಾಗಿ ಪರಿಗಣಿಸುವುದರ ಮೂಲಕ ನಾವು ವ್ಯಕ್ತಿನಿಷ್ಠಕ್ಕೆ ಹೆಚ್ಚು ಮಹತ್ವವನ್ನು ನೀಡುತ್ತೇವೆ. ಹಾಗಾಗಿ ಪ್ರಮುಖವಾಗಿ ವ್ಯಕ್ತಿನಿಷ್ಠತೆಯನ್ನು ಈ ಅಧ್ಯಯನವು ಆಧರಿಸಿದೆ.

೧.೫.೧ ಲೈಂಗಿಕತಾವಾದಿಯಲ್ಲದ ಸಂಶೋಧನೆ

ಸಾಂಪ್ರದಾಯಿಕ ಸಂಶೋಧನೆಗಳೆಲ್ಲವೂ "ಲೈಂಗಿಕತಾವಾದಿ"ಯಲ್ಲದ ಸಂಶೋಧನೆಗಳೆಂದು ಹೇಳಲಾಯಿತಾದರೂ ವಾಸ್ತವದಲ್ಲಿ ಇವುಗಳು ಕಟ್ಟು ಪ್ರಧಾನಲಿಂಗಿಯ ಪರವಾದ ಸಂಶೋಧನೆಗಳೇ ಆಗಿವೆ. ಸಾಂಪ್ರದಾಯಿಕ ಸಂಶೋಧನಾ ವಿಧಾನಗಳು ಸ್ತ್ರೀವಾದಿ ಸಂಶೋಧನೆಗಳಿಗೆ ಅಳವಡಿಸಿಕೊಂಡಾಗ ಅಪೇಕ್ಷಿತ ಫಲಿತಗಳನ್ನು ಪಡೆಯುವಲ್ಲಿ ವಿಫಲವಾಗುವುದರಿಂದ ಈ ತಾತ್ವಿಕ ತಳಹದಿಯನ್ನು ಅನುಸರಿಸಿ ರೂಪಿತವಾಗುವ ಕಾನೂನುಗಳು ಸಹ ಮಹಿಳಾ ಬದುಕನ್ನು ಸುಸಂಗತಗೊಳಿಸುವಲ್ಲಿ ಸಫಲವಾಗುವುದಿಲ್ಲ. ಈ ನಿಟ್ಟಿನಲ್ಲಿ ಸ್ತ್ರೀವಾದಿಗಳು ಸಾಕಷ್ಟು ಬಗೆಯ ಅಧ್ಯಯನಗಳನ್ನು ನಡೆಸಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಚೌಕಟ್ಟೊಂದನ್ನು ರೂಪಿಸಿ ಸ್ತ್ರೀ ಕೇಂದ್ರಿತ ಚಿಂತನೆಗಳು ಯಶಸ್ವಿಯಾಗುವಲ್ಲಿ ಸಹಕಾರಿಯಾಗಿದ್ದಾರೆ. ಹಾಗಾಗಿ ಈ ವೈಧಾನಿತಕೆಯಲ್ಲಿ ಸೂಚಿಸಿರುವ ಲಿಂಗ ಸೂಕ್ಷ್ಮತೆ ಲೈಂಗಿಕ ದ್ವಿಭಾವ, ಲಿಂಗ ಪಾತ್ರಗಳ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯತೆಯೂ ಪ್ರಸ್ತುತ ಅಧ್ಯಯನಕ್ಕಿದೆ.

ಪ್ರಸುತ್ತ ಸಂಶೋಧನೆಯುದ್ದಕ್ಕೂ ಮಹಿಳಾಪರ ಚಿಂತನೆಗಳನ್ನು ನಡೆಸಿದರೂ ಅಂತಿಮವಾಗಿ ಇದು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ. ಸಾಧಾರಣವಾಗಿ ಈ ವಿಧಾನವು ಕೇವಲ ಸ್ತ್ರೀವಾದಿ ಅಧ್ಯಯನಗಳಿಗೆ ಮಾತ್ರವಲ್ಲ, ಯಾವುದೇ ಅಧ್ಯಯನಗಳು ಈ ನಿಲವುನ್ನು ತಳೆದಾಗ ಮಾತ್ರ ನೈಜವಾದ ವಸ್ತುನಿಷ್ಠ ಅಧ್ಯಯನಗಳು ನಡೆಸಲು ಸಾಧ್ಯವಾಗುತ್ತದೆ.

ಸಮಸ್ತ ಮಹಿಳಾ ಸಮುದಾಯವು ಭಿನ್ನವಾದ ಜಾತಿ, ವರ್ಗ, ವರ್ಣ, ಜನಾಂಗಗಳಲ್ಲಿ ಸಮ್ಮಿಲಿತವಾದ್ದರಿಂದ, ಆಯಾ ವರ್ಗಗಳ ಒತ್ತಡಗಳಿಗೆ ಅನುಗುಣವಾಗಿ ಮಹಿಳಾ ಅನುಭವವು ಭಿನ್ನವಾಗಿರುವುದನ್ನು ಗುರುತಿಸಲು ಸ್ತ್ರೀವಾದಿ ಸಂಶೋಧನಾ ವಿಧಾನಗಳು ಹೆಚ್ಚು ಸಹಕಾರಿಯಾಗಿವೆ. ಪ್ರಸ್ತುತ ಸಂಶೋಧನೆಯಲ್ಲಿ ಪ್ರಜ್ಞಾಪೂರ್ವಕ ವ್ಯಕ್ತಿನಿಷ್ಠತೆ ಮತ್ತು ವೈಜ್ಞಾನಿಕ ವಸ್ತುನಿಷ್ಠತೆಯನ್ನು

ಅಳವಡಿಸಿಕೊಳ್ಳಲಾಗುತ್ತಿದೆ. ಸಾಂಪ್ರದಾಯಿಕ ಚಿಂತನೆಗಳಿಂದ ಮುಂದೆ ಹೋಗಿ ವ್ಯಾಖ್ಯಾನಗಳ ಅಂಕಿ–ಅಂಶಗಳ ಜೊತೆ–ಜೊತೆಗೆ ಮಹಿಳಾ ಸಮುದಾಯದ ಅನುಭವಗಳನ್ನು ಸಂಗ್ರಹಿಸಿ ವಿಶ್ಲೇಷಿಸಿಕೊಳ್ಳಲಾಗುತ್ತದೆ. ಈವರೆಗೂ ಪ್ರಧಾನಧಾರೆಯ ಚಿಂತನೆಗಳಲ್ಲಿ ಮರೆಮಾಚಲಾದ ಮಹಿಳಾ ಮನೋವೃತ್ತಿಯನ್ನು ವರ್ತನೆಗಳನ್ನು ತಳಹದಿಯಾಗಿಸಿಕೊಂಡು ಈ ಅಧ್ಯಯನದ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲಾಗುತ್ತದೆ.

೧.೫.೨. ವೈಯಕ್ತಿಕವೂ, ಸಾರ್ವತ್ರಿಕವೂ

ವೈಯಕ್ತಿಕತೆಯೇ ನಮ್ಮ ರಾಜಕಾರಣ ಎಂಬ ಮೂಲ ಧ್ಯೇಯವನ್ನು ಹೊಂದಿರುವ ಸ್ತ್ರೀವಾದಿಗಳು, ವ್ಯಕ್ತಿಗತ ರಾಜಕಾರಣ ಧೋರಣೆಯನ್ನು ಆಧರಿಸಿ ಅಲ್ಲಿ ಮಹಿಳಾ ಸಮುದಾಯದ ಭಾಗವಾಗಿ ಈ ಚಿಂತನೆ ಬೆಳೆಸಲಾಗುತ್ತಿದ್ದಯೇ ವಿನಃ ವ್ಯಕ್ತಿಗತ ಬದುಕಿನ ವಿವರಗಳನ್ನು, ಖಾಸಗಿ ತನವನ್ನು ಬಯಲಿಗೆಳೆಯುವ ಉದ್ದೇಶವಲ್ಲ. ಆದರೆ ಪುರುಷ ರಾಜಕಾರಣದ ಪ್ರತಿಯಾಗಿ ಮಹಿಳಾ ರಾಜಕಾರಣವನ್ನು ನಿಲ್ಲಿಸುವ ಅನಿವಾರ್ಯತೆಯನ್ನು ಸ್ಪಷ್ಟಪಡಿಸಲಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಬದುಕಿನ ನಿರ್ವಹಣೆಗೆ ಪ್ರತಿಯೊಬ್ಬ ಸದಸ್ಯರು ಕೂಡಾ ಕೆಲವು ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಪಾತ್ರಗಳ ಹಂಚಿಕೆಯಲ್ಲಿಯೂ ಸಹ ಲಿಂಗ ರಾಜಕಾರಣವು ಕಾಣಿಸಿಕೊಳ್ಳುತ್ತದೆ. ಮಹಿಳೆಗೆ ಹಂಚಲಾದ ಪಾತ್ರಗಳು ಸೇವಾವಲಯವನ್ನು ಮಾತ್ರ ಆಧರಿಸಿವೆ. ಮಹಿಳೆಯ ಅಧೀನ ಸ್ಥಿತಿ ಸ್ಥಾಪನೆ ಮತ್ತು ಅದರ ಮುಂದುವರಿಕೆಗೆ ಲಿಂಗಪಾತ್ರಗಳ ಹಂಚಿಕೆ ಅತಿ ಉಪಯುಕ್ತವಾದ ಅಸ್ತ್ರವಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬಳಸಲಾಗುತ್ತದೆ. ಮಹಿಳೆಯ ವಿರುದ್ಧ ನಡೆಯುವ ಹಿಂಸೆ ಮತ್ತು ದೌರ್ಜನ್ಯದ ಸಮಸ್ಯೆಯಲ್ಲಿ ಲಿಂಗ ಪಾತ್ರಗಳ ಪ್ರಭಾವವು ಯಾವ ನೆಲೆಯಲ್ಲಿದೆ ಎಂಬುದನ್ನು ಗ್ರಹಿಸಲು ಈ ವಿಧಾನವನ್ನು ಬಳಸಲಾಗುತ್ತಿದೆ. ಪ್ರಕರಣಗಳನ್ನು ಅಧ್ಯಯನ ಮಾಡುವಲ್ಲಿ ಯಜಮಾನಿಕೆ ನೆಲೆಯಲ್ಲಿರುವ ಲಿಂಗ ಪಾತ್ರಗಳು, ಅಧೀನ ನೆಲೆಯ ಲಿಂಗ ಪಾತ್ರಗಳ ಮೇಲೆ ಬೀರುವ ಪರಿಣಾಮವನ್ನು ಚರ್ಚಿಸಲು ಸಹಕಾರಿಯಾಗಿದೆ. ವೈಯಕ್ತಿಕತೆಯೇ ನಮ್ಮ ರಾಜಕಾರಣವೆಂಬ ವಿಧಾನವನ್ನು ಬಳಸುವಾಗ ಈ ಲಿಂಗ ಪಾತ್ರಗಳನ್ನು ಪರಿವರ್ತಿಸಿ ನೋಡಿದಾಗ ಸಮಾಜದಲ್ಲಿ ದೌರ್ಜನ್ಯಕ್ಕೊಳಗಾದ ಮಹಿಳೆಯರು ಪುರುಷನ ಅಧೀನ ನೆಲೆಯಲ್ಲಿ ಇರಿಸುವಿಕೆಯು ಅನಾವರಣಗೊಳ್ಳುತ್ತದೆ.

೧.೫.೩. ಮಾದರಿ ಆಯ್ಕೆ

ಸ್ತ್ರೀವಾದಿ ಸಂಶೋಧನೆಯಲ್ಲಿ ಮಾದರಿ ವಿಧಾನವು ಪ್ರಮುಖವಾಗಿದೆ. ಅತಿ ದೊಡ್ಡ ವಸ್ತುವಿನ ಸಣ್ಣ ಪ್ರತಿರೂಪವೇ ಮಾದರಿ ವಿಧಾನವಾಗಿದೆ. ಈ ಪ್ರಸ್ತುತ ಅಧ್ಯಯನಕ್ಕಾಗಿ ಮಾಹಿತಿ ಸಂಗ್ರಹಿಸಲು ಲಭ್ಯವಿರುವ ಸಮಯ ಮತ್ತು ಸಂಪನ್ಮೂಲಗಳನ್ನು ಸೂಕ್ತವಾಗಿ ಬಳಸುವ ದೃಷ್ಟಿಯಿಂದ ಮತ್ತು ಕ್ಷೇತ್ರಾಧ್ಯಯನಕ್ಕೆ ಅವಧಿ ಮುಂತಾದ ಅಂಶಗಳನ್ನು, ಗಮನದಲ್ಲಿಟ್ಟುಕೊಂಡು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ

ಬೆಂಗಳೂರು ನಗರದ ಪೋಲೀಸ್ ಠಾಣೆಗಳಲ್ಲಿನ ೨೦೦೫ ರಿಂದ ೨೦೧೧ ರವರೆಗಿನ ದಾಖಲಾದ ಪ್ರಕರಣಗಳ ದಾಖಲೆಗಳನ್ನು, ಕೆಲವು ಪೋಲೀಸ್ ಠಾಣೆಗಳ ಪ್ರಮುಖ ಪ್ರಕರಣಗಳ ದಾಖಲೆಗಳನ್ನು ಸಂಗ್ರಹಿಸಿ ಅಧ್ಯಯನದ ನಂತರ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಜಾತಿ, ವಯಸ್ಸು, ಶಿಕ್ಷಣ, ಉದ್ಯೋಗಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿದ್ದೇನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಠಾಣಾ ಬರಹಗಾರರಿಂದ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ.

೧.೫.೪ ಕ್ಷೇತ್ರಕಾರ್ಯ ಕೇಂದ್ರಿತ ವರದಿ

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಕ್ಷೇತ್ರಕಾರ್ಯವು ಬಹು ಪ್ರಮುಖವಾದಂತಹ ಅಂಶವಾಗಿದೆ. ಸಾಧಾರಣವಾಗಿ ಅಕರಗಳು ಅಥವಾ ಮೂಲ ಸಾಮಾಗ್ರಿಗಳು ಇರುವಲ್ಲಿಗೆ ಹೋಗಿ ಮಾಹಿತಿ ಸಂಗ್ರಹಿಸುವುದಕ್ಕೆ ಕ್ಷೇತ್ರಕಾರ್ಯವೆಂದು ಕರೆಯುತ್ತಾರೆ. ಸಂಶೋಧಕರು ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ವಿಷಯದಲ್ಲಿ ಖಚಿತತೆ ಮತ್ತು ತರ್ಕಬದ್ಧವಾದ ಆಧಾರಗಳನ್ನು ಒದಗಿಸಬಹುದಾಗಿದೆ.ಈ ಬಗೆಯ ಮಾಹಿತಿಯನ್ನು ಪ್ರಾಥಮಿಕ ಮೂಲ ಮತ್ತು ಮಾಧ್ಯಮಿಕ ಮೂಲದಿಂದ ಸಂಗ್ರಹಿಸಬಹುದಾಗಿದೆ. ಪ್ರಾಥಮಿಕ ಮೂಲದ ಮಾಹಿತಿ ಎಂದರೆ ಸಂಶೋಧನೆಗೆ ಆಯ್ದುಕೊಂಡಿರುವ ವಿಷಯಕ್ಕೆ ಅನುಗುಣವಾಗಿ ಕ್ಷೇತ್ರಕಾರ್ಯವನ್ನು ರೂಪಿಸಿಕೊಳ್ಳ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ದೌರ್ಜನ್ಯಗಳು ಲಿಂಗ ಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ಕುರಿತ ಗ್ರಹಿಕೆಯ ಕ್ಷೇತ್ರ ಕಾರ್ಯದ ಅಗತ್ಯತೆಯ ವಿಭಾಗವನ್ನು ರೂಪಿಸಿಕೊಳ್ಳಲಾಗಿದೆ. ಈ ಅಧ್ಯಯನವನ್ನು ಇಷ್ಟೇ ಅಲ್ಲದೆ ಪ್ರತಿವಾದಿಗಳ ನೇರ ಸಂದರ್ಶನದ ಮೂಲಕವೂ ಕೂಡ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಕಲೆಹಾಕಲಾಗಿದೆ.

ಪ್ರತಿಯೊಂದು ಸಂಶೋಧನೆಯು ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ಸಾಂಪ್ರದಾಯಿಕ ಸಂಶೋಧನಾ ಚೌಕಟ್ಟಿನಲ್ಲಿರುವ ಗುರಿ, ಉದ್ದೇಶಗಳಿಗಿಂತ ಸ್ತ್ರೀವಾದಿ ಸಂಶೋಧನೆಯ ಗುರಿ ಮತ್ತು ಉದ್ದೇಶಗಳು ಭಿನ್ನವಾಗಿರುವುದೇ ಪ್ರಮುಖವಾದ ಕಾರಣವಾಗಿದೆ. ಆದ್ದರಿಂದ ಇಲ್ಲಿನ ಕ್ಷೇತ್ರಕಾರ್ಯದ ಸ್ವರೂಪವು ಭಿನ್ನವಾಗಿದೆ. ಮಹಿಳಾ ಬದುಕನ್ನು ಕೇಂದ್ರವಾಗಿರಿಸಿಕೊಂಡು ಹೊರಟ ಚಿಂತನೆಗಳಿಗೆ ಸಾಂಪ್ರದಾಯಿಕ ವಿಧಾನಗಳಲ್ಲಿ ಸ್ವಲ್ಪ ಪ್ರಮಾಣದ ಮಾರ್ಪಾಡುಗಳು ಅಗತ್ಯವಾಗಿವೆ. ಆದ್ದರಿಂದ ಒಟ್ಟು ಕಾರ್ಯಕ್ಷೇತ್ರದ ಸ್ವರೂಪವನ್ನು ಇಲ್ಲಿ ದಾಖಲಿಸುವ ಅಗತ್ಯತೆ ಇದೆ.

೧.೫.೫ ಕ್ಷೇತ್ರಕಾರ್ಯದ ಉದ್ದೇಶ ಮತ್ತು ಸ್ವರೂಪ

ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ಚಿಂತನೆಯನ್ನು ಆಧರಿಸಿದ ಒಟ್ಟು ಚರಿತ್ರೆಯೊಳಗಡೆ ಈ ಜ್ಞಾನ ಸಂಪಾದನೆ ಎನ್ನುವುದು ಇನ್ನೊಬ್ಬರನ್ನು ಆಳುವ ಅಸ್ತ್ರವಾಗಿದೆ. ಹಾಗೆಯೇ ಇನ್ನೊಬ್ಬರಿಗೆ ತಲುಪದಿರುವ ಹಾಗೆ ಮಾಡುವುದಕ್ಕಾಗಿ ಇದು ಎಲ್ಲರಿಗೂ ತಲುಪುವುದು ಸಾಧ್ಯವೆಂಬ ಸಂಗತಿಯೊಂದನ್ನು ಮರೆಮಾಚಿಸಲಾಗಿದೆ. ಅಂತಹ ಜ್ಞಾನವಲಯಗಳಿಗೆ ಕೆಲವು ಸಮುದಾಯಗಳಿಗೆ ಪ್ರವೇಶವಿಲ್ಲ. ಬಹುಬಗೆಯ ಕಾರಣಗಳಿಂದ ಈ ಜ್ಞಾನದ ಬಾಗಿಲಾಚೆಗೆ ನಿಲ್ಲುವಂತಹ ಸಮುದಾಯವೆಂದು ಕೆಲವು ಸಮುದಾಯಗಳಿಗೆ ನಿರ್ಬಂಧಿಸಲಾಗಿದೆ. ಈ ಬಗೆಯ ನಿರ್ಬಂಧ ಪ್ರವೇಶ ನಿಷೇಧ ವಲಯಗಳಲ್ಲಿ ಮಹಿಳಾ ಸಮುದಾಯದ ಪ್ರವೇಶವನ್ನು ನಿರ್ಬಂಧಿಸುವ, ನಿಯಂತ್ರಿಸುವಲ್ಲಿ ಸಾಮಾಜಿಕ ವಲಯವು ಒಂದಾಗಿದೆ ಎಂಬುದಕ್ಕೆ ಹಲವು ಬಗೆಯ ಕಾರಣಗಳನ್ನು ಅಧ್ಯಯನದ ಪ್ರಾರಂಭದಿಂದ ಇಲ್ಲಿವರೆಗೂ ಚರ್ಚಿಸಲಾಗಿದೆ. ಇಂತಹ ಸಮುದಾಯದ ಸಮಸ್ಯೆಯನ್ನು ಆಧರಿಸಿ ಅಧ್ಯಯನವನ್ನು ಕೈಗೊಂಡಾಗ ಅಲ್ಲಿನ ಸಮಸ್ಯೆಗಳು ಅನುಭವ ಲೋಕಕ್ಕೆ ಬರುತ್ತವೆಯಾದರೂ, ಅವುಗಳು ವಸ್ತುಲೋಕದ ಸಮಸ್ಯೆಯಂತೆ ಕಾಣಿಸುವುದಿಲ್ಲ. ಬಾಹ್ಯ ಇಂದ್ರಿಯಗಳಿಗೆ ಈ ಸಮಸ್ಯೆಯನ್ನು ಅನುಭವಿಸುವಂತೆ ಮಾಡುವುದು ಅಸಾಧ್ಯವಾದುದು. ಹಾಗಾದರೆ ಈ ಬಗೆಯ ಅನುಭವಲೋಕಕ್ಕೆ ಬರುವ ಸಂಗತಿಯು ನಿಜವಾ? ಸುಳ್ಳಾ? ಎಂಬುದಕ್ಕೆ ಈ ಸಮಸ್ಯೆಯು ಒಟ್ಟು ಸಮುದಾಯದ ಸಮಸ್ಯೆ ಎಂಬುದಕ್ಕೆ ಸಮೀಕ್ಷಾ ಮಾದರಿಯನ್ನು ಅನುಸರಿಸಿದಾಗ ಇದರಲ್ಲಿನ ವಿವರಗಳಲ್ಲಿನ ವ್ಯತ್ಯಾಸವನ್ನು ಗ್ರಹಿಸುವ ಮೂಲಕ, ಇದು ಒಟ್ಟು ಸಮುದಾಯದ ಬಹು ಮುಖ್ಯವಾದ ಸಮಸ್ಯೆಯಾಗಿದ್ದು ಎಲ್ಲಾರಿಗೂ ಸಮಾನವಾಗಿರುತ್ತದೆ. ಇದರ ವ್ಯಾಪ್ತಿ ಮತ್ತು ಆಳವನ್ನು ಗ್ರಹಿಸಬೇಕಾದರೆ ಸೈದ್ಧಾಂತಕ ಚರ್ಚೆಯನ್ನಾಧರಿಸಿದ ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದು ಅವಶ್ಯಕವಾದುದು. ಮಹಿಳಾ ದೌರ್ಜನ್ಯಗಳು ಲಿಂಗಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೋಲಿಸ್ ದಾಖಲೆಗಳನ್ನು ಅನುಲಕ್ಷಿಸಿ) ಇದು ಒಟ್ಟು ಮಹಿಳಾ ಸಮುದಾಯದ ಸಮಸ್ಯೆಯಾಗಿದ್ದು ಹಲವು ವಿವರಗಳಲ್ಲಿ ಇದು ಭಿನ್ನವಾಗಿದೆ ಎಂಬುದಕ್ಕೆ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ. ದೌರ್ಜನ್ಯಗಳು ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿದ್ದರೂ ಸಹ ಎಷ್ಟು ಪ್ರಮಾಣದ ಮಹಿಳೆಯರು ತಮ್ಮ ದೌರ್ಜನ್ಯದ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದಾಖಲಾದ ದೂರುಗಳಲ್ಲಿ ಯಾವ ಪ್ರಮಾಣದಲ್ಲಿ ನ್ಯಾಯ ಸಿಗುತ್ತದೆ. ದೂರು ದಾಖಲಿಸಿಕೊಳ್ಳುವ ಅಧಿಕಾರಿಗಳ ಮನೋಸ್ಥಿತಿಯು ಮಹಿಳೆಯರ ಬಗ್ಗೆ ಹೊಂದಿರುವ ಅಭಿಪ್ರಾಯವನ್ನು ತಿಳಿಯುವ ಉದ್ದೇಶವಾಗಿದೆ. ಪ್ರಕರಣಗಳಲ್ಲಿ ಎಷ್ಟು ಪ್ರಮಾಣದಲ್ಲಿ ಶಿಕ್ಷೆಯಾಗಿದೆ ಎಂಬುದನ್ನು ತಿಳಿಯುವ ಉದ್ದೇಶವಾಗಿದೆ. ಸ್ತ್ರೀವಾದಿ ಸಂಶೋಧನೆಗಳು ಕೈಗೆತ್ತಿಕೊಳ್ಳಬೇಕಾದ ಸಮಸ್ಯೆಗಳು ವರ್ತಮಾನದ ಮತ್ತು ಭವಿಷ್ಯದ ಮಹಿಳಾ ಬದುಕಿನ ಸುಸಂಗತತೆಯನ್ನು ಕೇಂದ್ರಿಕರಿಸಿಕೊಂಡಿದೆ. ಅದರಲ್ಲೂ ದೌರ್ಜನ್ಯ, ಹಿಂಸೆಯಂತಹ ಜ್ವಲಂತ ಸಮಸ್ಯೆಯನ್ನು ಆಧರಿಸಿ ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಸಮುದಾಯದೊಂದಿಗೆ ಬೆರೆತು ಸಮಸ್ಯೆಗಳ

ಹಲವು ಆಯಾಮಗಳನ್ನು ಕಂಡುಕೊಳ್ಳುವುದು ಅಗತ್ಯವಾದ್ದರಿಂದ ಕ್ರಿಯಾತ್ಮಕ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಈವರೆಗಿನ ಸಾಂಪ್ರದಾಯಿಕ ಚಿಂತನೆಗಳೆಲ್ಲವು ಲಿಂಗ ನಿರಪೇಕ್ಷವೆಂದು ಹೇಳಿವೆಯಾದರೂ ಸಹ ಇವುಗಳು ಲಿಂಗ ಪಕ್ಷಪಾತ ನಿಲುವನ್ನೆ ಆಧರಿಸಿವೆ. ಆದರೆ ಸಾಂಪ್ರದಾಯಿಕ ವಿಧಾನಗಳು ಒಂದು ಪಕ್ಷದ ಪರವಾಗಿ ಆಲೋಚಿಸುವ ಈ ಬಗೆಯ ಕ್ರಮವನ್ನು ನಿರಾಕರಿಸುತ್ತವೆ. ಆದರೆ ಅಧೀನ ನೆಲೆಯ ಸಮುದಾಯದ ಸಮಸ್ಯೆಯನ್ನು ಸಂಶೋಧನೆಗೆ ಒಳಪಡಿಸಿದಾಗ, ಅಲ್ಲಿನ ಬಿಡುಗಡೆಯ ಅಗತ್ಯಕ್ಕಾಗಿ ಒಂದು ಪಕ್ಷದ ಪರವಾಗಿ ನಿಲ್ಲುವುದು ಸೂಕ್ತವೆಂಬುದಕ್ಕೆ ಶಿಪಾರಸ್ಸು ಮಾದರಿಯನ್ನು ಪ್ರಕರಣಗಳ ವಿಶ್ಲೇಷಣೆಗಳ ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಯಾವುದೇ ಚಿಂತನೆಯ ವರ್ತಮಾನದ ಅಗತ್ಯತೆ ಇರುವುದು ಸುಸಂಗತವಾದ ಭೂತ ಮತ್ತು ಭವಿಷ್ಯದ ಅರಿವಿಗಾಗಿ, ಆ ಕಾರಣಕ್ಕಾಗಿ ಕ್ಷೇತ್ರಕಾರ್ಯವನ್ನು ಕೈಗೊಳ್ಳುವ ಪೂರ್ವಭಾವಿಯಾಗಿ, ಪ್ರಸಕ್ತ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೂ ನಡೆದಿರುವ ಕ್ಷೇತ್ರಕಾರ್ಯಗಳಾಗಲೀ, ಪೂರಕ ಅಂಶಗಳಾಗಲೀ ಪರಿಶೀಲಸುವ ಮೂಲಕ ಅಲ್ಲಿನ ಅನುಕೂಲ ಮತ್ತು ಅನಾನುಕೂಲಗಳಿಂದ ಆಗಿರುವ ಫಲಿತಗಳನ್ನು ಆಧರಿಸಿ ಚಾರಿತ್ರಿಕ ಮೌಲ್ಯಮಾಪನದಿಂದಾಗಿ ಮುಂದಿನ ಮಾರ್ಗಗಳಲ್ಲಾಗಬೇಕಾದ ಬದಲಾವಣೆಗಳನ್ನು, ಕೈಗೊಳ್ಳಬೇಕಾದ ಕ್ರಮಗಳನ್ನು ರೂಪಿಸಿಕೊಳ್ಳುವ ಜರೂರಿದೆ. ಬಹುತೇಕ ಮಹಿಳಾ ವಿಷಯಗಳು, ಸಮಸ್ಯೆಗಳ ನೈಜ ಫಲಿತ (ಸೂಕ್ತ ಫಲಿತ) ವನ್ನು ಪಡೆಯುವಲ್ಲಿ ವಿಫಲವಾಗಿರುವುದಕ್ಕೆ ಸೂಕ್ತ ಬಗೆಯ ಚಾರಿತ್ರಿಕ ಮೌಲ್ಯಮಾಪನ ಕೈಗೊಳ್ಳದಿರುವುದೇ ಆಗಿದೆ. ಉದಾಹರಣೆ ಮಹಿಳೆಯರ ವಿರುದ್ಧ ನಡೆಯುವ ಹಿಂಸೆ, ದೌರ್ಜನ್ಯದ ಭಾಗವಾದ ವರದಕ್ಷಿಣೆ ಕುರಿತು ಚಿಂತನೆ, ಚರ್ಚೆ, ಕಾಯ್ದೆ, ಕಾನೂನುಗಳು ಜಾರಿಯಾಗುತ್ತಿರುವುದು ದಶಕಗಳಿಂದಲೂ ಕಾಣಿಸುತ್ತಿವೆಯಾದರೂ, ವಾಸ್ತವದ ಸಂಗತಿಗೆ ಬಂದಾಗ ಈ ಸಮಸ್ಯೆಯ ಕರಾಳ ಮುಖಗಳು ಎಲ್ಲೆಡೆಯು ಕಾಣಿಸಿಕೊಳ್ಳುತ್ತಿರುವುದೇ ಕಾರಣ. ಅದರ ಮಾರ್ಗಗಳನ್ನು ಶೋಧಿಸಲಾಗುತ್ತಿದೆಯೇ ಹೊರತು ಅದರ ಮೂಲ ಕಾರಣದತ್ತ ಗಮನಹರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಪ್ರಕರಣಗಳ ಅಧ್ಯಯನ, ಸಂದರ್ಶನ, ಪ್ರಶ್ನಾವಳಿ ಇತ್ಯಾದಿಗಳ ಚಾರಿತ್ರಿಕ ಮೌಲ್ಯಮಾಪನವು ಅಗತ್ಯವಾಗಿ ಕೈಗೊಳ್ಳುವ ಮೂಲಕ ಮುಂದಿನ ಕ್ಷೇತ್ರಕಾರ್ಯದ ಮಾರ್ಗಗಳಲ್ಲಿ ಬದಲಾವಣೆ ಯಾಗಬಹುದು. ಈಗಾಗಲೇ ಜಾರಿಯಾಗಿರುವ ಕಾನೂನುಗಳು ಬೆಳೆದುಬಂದ ಚಿಂತನೆಗಳನ್ನು, ವಿಮರ್ಶಿಸುವ, ವಿಶ್ಲೇಷಣೆಗೆ ಒಳಪಡಿಸುವುದು ಒಂದು ಬಗೆಯಾದರೆ, ಆ ಚಿಂತನೆಯನ್ನಾಧರಿಸಿದ ನೇರವಾಗಿ ಹಿಂಸೆ ಮತ್ತು ದೌರ್ಜನ್ಯಗಳಿಗೆ ಒಳಗಾದ ಮಹಿಳೆಯರನ್ನು ಸಂದರ್ಶಿಸುವ ಮೂಲಕ ಪ್ರಕರಣಗಳನ್ನು ಅಧ್ಯಯನ ಮಾಡಿ ವಿಶ್ಲೇಷಣೆಗೆ ಒಳಪಡಿಸುವುದೊಂದು ಇನ್ನೊಂದು ಬಗೆ. ಪ್ರಸ್ತುತ ಸಂಶೋಧನೆಯಲ್ಲಿ ಈ ಎರಡು ಬಗೆಗಳನ್ನು ಅನುಸರಿಸಲಾಗುತ್ತಿದ್ದು ಪ್ರಕರಣ ಅಧ್ಯಯನವನ್ನು ವಿಶೇಷವಾಗಿ ಆಯ್ದುಕೊಳ್ಳಲಾಗಿದೆ.

ಸಂಶೋಧನಾ ವಿಷಯಕ್ಕೆ ಅನುಗುಣವಾಗಿ ಪ್ರಾತಿನಿಧಿಕವಾಗಿ ವಿವಿಧ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಇಲ್ಲಿನ ಸಂದರ್ಶನದ ನಂತರ ಹೆಚ್ಚಿನ ಮಾಹಿತಿಗಾಗಿ ಠಾಣೆಯ ಬರಹಗಾರರಿಂದ ವಿಷಯವನ್ನು ಖಚಿತ ಪಡಿಸಿಕೊಳ್ಳಲಾಗಿದೆ. ಈ ಬಗೆಯ ಕ್ಷೇತ್ರಕಾರ್ಯಕ್ಕೆ ತೊಡಗುವ ಪೂರ್ವಬಾವಿಯಾಗಿ ಸಮಾಜ ವ್ಯವಸ್ಥೆಯ ಸೂಚಿತಗಳಾದ ಜಾತಿ, ವಯಸ್ಸು, ವಿದ್ಯಾರ್ಹತೆಗಳನ್ನಾಧರಿಸಿ ಎಂಟು ಬಗೆಯ ಗುಂಪುಗಳಾನ್ನಾಗಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ರೀತಿಯ ಪ್ರಕರಣ ಅಧ್ಯಯನಗಳಲ್ಲಿ ಸಂದರ್ಶನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಸಾಂಪ್ರದಾಯಿಕ ಸಂಶೋಧನಾ ವಿಧಾನದಲ್ಲಿ ಈ ವಿಧಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಸ್ತ್ರೀವಾದಿ ಸಂಶೋಧನಾ ವಿಧಾನದಲ್ಲಿ ಇದನ್ನು ಕೆಲವು ವ್ಯತ್ಯಾಸಗಳೊಂದಿಗೆ ಬಳಸಲಾಗುತ್ತಿದೆ.

೧.೫.೫.೦ ಸಂದರ್ಶನ

ಮಹಿಳಾ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆ ಮಾಡಬೇಕದರೆ ನಾವು ಪ್ರಮುಖವಾಗಿ ಹಿಂಸೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ನಾವು ಸಂದರ್ಶನ ಮಾಡುವುದು ಬಹಳ ಪ್ರಮುಖವಾದ ಕೆಲಸವಾಗಿರುತ್ತದೆ. ಸಂದರ್ಶನವೆಂದರೆ ಮೇಲ್ನೋಟಕ್ಕೆ ಕಾಣಿಸುವುದಕ್ಕಿಂತ ಭಿನ್ನವಾಗಿ, ಆಳವಾಗಿ ಒಳಗೆ ಅಡಕವಾಗಿರುವ ಸಂಗತಿಗಳನ್ನು ಕುರಿತು ಮಾಹಿತಿ, ಅರಿವನ್ನು ಪಡೆಯುವುದು ಎಂದರ್ಥ. ಆದರೆ ಹಲವು ಬಗೆಯ ಸಂಶೋಧನೆಗೆ ಸಂಬಂಧಿಸಿದಂತೆ ಸಿದ್ಧ ರೂಪದ ಮಾಹಿತಿಗಳು ಸಾಕಷ್ಟು ಲಭ್ಯವಾಗುತ್ತವೆ. ಈ ಮಾಹಿತಿಗಳನ್ನು ಆಧರಿಸಿ ವ್ಯಕ್ತಿ ಮತ್ತು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ನೇರ ಸಂದರ್ಶನಕ್ಕೆ ತೊಡಗುವುದು ಬಹು ಮುಖ್ಯವಾದುದು. ಆದರೆ ಈ ಆಯ್ಕೆ ಸಂದರ್ಶನಕ್ಕೆ ಹೊರಡುವ ಮೊದಲು ಕೆಲವು ಪೂರ್ವ ಸಿದ್ಧತೆಗಳು ಅತ್ಯಗತ್ಯ. ನಮಗೆ ಅಗತ್ಯವಾದ ಮಾಹಿತಿಯನ್ನು ಪಡೆಯಲು ಈ ತಯಾರಿ ಬೇಕಾಗುತ್ತದೆ. ಬೆಂಗಳೂರು ನಗರದ ಪೋಲೀಸ್ ಠಾಣೆಗೆ ಭೇಟಿ ನೀಡಿ ದಾಖಲೆಗಳನ್ನು ಸಂಗ್ರಹಿಸಿದ ನಂತರ ಪ್ರಕರಣ ಅಧ್ಯಯನಕ್ಕಾಗಿ ಇವುಗಳನ್ನು ಗ್ರಹಿಸಲು ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಸಂದರ್ಶನ ಮಾಡಲಾಗಿದೆ.

ಇಂತಹ ಸಂದರ್ಭಗಳಲ್ಲಿ ಕೆಲವು ಪ್ರಕರಣಗಳನ್ನು ಅಧ್ಯಯನ ಮಾಡಲು ನೇರವಾಗಿ ಸಂದರ್ಶನಕ್ಕೆ ತೊಡಗುವುದು ವಿಷಯದ ಚಿತತೆಗೆ ಹೆಚ್ಚು ಸೂಕ್ತ. ನೇರ ಸಂದರ್ಶನದಲ್ಲಿ ಎಲ್ಲಾ ಮಾಹಿತಿ ಲಭ್ಯವಾಗುತ್ತದೆ ಎಂಬುದಕ್ಕಿಂತ ಸ್ತ್ರೀವಾದಿ ಸಂಶೋಧಕರು ಅವರ ಮಾತಿನ ಮೌನ, ಹಾವ–ಭಾವ, ತೊದಲುವಿಕೆ, ಮರೆಮಾಚುವಿಕೆಗಳನ್ನು ಅವಲೋಕಿಸುವ ಮೂಲಕ ಗ್ರಹಿಸಬೇಕಾದ ಸಂದರ್ಭಗಳೆ ಇಂಥ ಕ್ರಮವು ಸಂಶೋಧನಾ ಸಮಸ್ಯೆಯ ಸ್ವರೂಪವನ್ನು ಹೆಚ್ಚು ಖಚಿತವಾಗಿ ಗ್ರಹಿಸಲು ಹೆಚ್ಚು ಸಹಾಯಕವಾಗುತ್ತದೆ. ಕೇವಲ ದೌರ್ಜನ್ಯಕ್ಕೊಳಗಾದ ಮಹಿಳೆಯು ಹೇಳಿದ ಮಾತೇ ಅಂತಿಮ ಸತ್ಯವೆಂದು ತಿಳಿಯದೆ ಹೆಚ್ಚಿನ ಮಾಹಿತಿಗಾಗಿ ನೆರೆ–ಹೊರೆಯವರನ್ನು ಹಾಗೂ ಠಾಣೆಯ ಬರಹಗಾರರಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ

ಸಮುದಾಯದ ಸಂದರ್ಶಿಸಿದ ವಿವರಣೆಯನ್ನು ಕ್ಷೇತ್ರಕಾರ್ಯದ ಸ್ವರೂಪದ ನಂತರದಲ್ಲಿ ವಿವರಿಸಲಾಗುತ್ತದೆ. ಈ ಸಂದರ್ಶನವನ್ನು ಸಾಂಪ್ರದಾಯಿಕ ಸಂಶೋಧನಾ ವಿಧಾನದಲ್ಲಿಯೂ ಮಾಡಲಾಗುತ್ತದೆ. ಆದರೆ ಸ್ತ್ರೀವಾದಿ ಸಂಶೋಧನೆಯಲ್ಲಿ ಸಂದರ್ಶನಕ್ಕೆ ತೊಡಗುವುದಕ್ಕೆ ಸಿದ್ಧ ಮಾದರಿಯನ್ನೊಂದು ರೂಪಿಸಿಕೊಂಡು ಸಾಗುವ ಸಂಗತಿಯಲ್ಲ. ಉದಾಹರಣೆಗೆ ಕೆಲವು ಪ್ರಶ್ನೆಗಳನ್ನು ರೂಪಿಸಿಕೊಂಡು ಅದಕ್ಕೆ ಉತ್ತರವನ್ನು ಗುರುತು ಹಾಕಿಕೊಳ್ಳುವುದರ ಮೂಲಕ ಸಂದರ್ಶನ ಮುಗಿಯುತ್ತದೆ. ವಸ್ತುಲೋಕಕ್ಕೆ ಸಂಬಂಧಿಸಿದ ಸಂಶೋಧನೆಗೆ ಇದು ಸರಿ. ಆದರೆ ಸಮುದಾಯ ಅಧ್ಯಯನಗಳಲ್ಲಿ ಮಹಿಳಾ ಅಧ್ಯಯನದಲ್ಲಿ ಈ ಬಗೆಯ ಕ್ರಮದಿಂದ ಮಹಿಳಾ ಬದುಕಿನ ಸಮಸ್ಯೆಗಳನ್ನು ಗ್ರಹಿಸುವುದು ಕೂಡ ಅಸಾಧ್ಯವಾದುದು. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ಗ್ರಹಿಸಲು ಸಂದರ್ಶನದ ಕೆಲವು ವಿಧಾನಗಳನ್ನು ಬಳಸಲಾಗುತ್ತದೆ.

೧. ಪ್ರಶ್ನಾವಳಿ

೨. ನೇರ ಸಂಬಂಧ

೩. ಪ್ರಕರಣ ಅಧ್ಯಯನ ಇವನ್ನು ಸಾಂಪ್ರದಾಯಿಕ ಚಿಂತನೆಗಳು ಸಹ ಬೆಳಸುತ್ತವೆ. ಸ್ತ್ರೀವಾದಿ ಅಧ್ಯಯನಗಳಲ್ಲಿ ಇದರ ಭಿನ್ನತೆಯನ್ನು ಪ್ರಸ್ತಾಪಿಸುತ್ತಲೇ ಪ್ರಸ್ತುತ ಅಧ್ಯಯನದಲ್ಲಿ ಇದನ್ನು ಬಳಸಿಕೊಂಡು ಅಪೇಕ್ಷಿತ ಮಾಹಿತಿಯನ್ನು ಪಡೆಯಲು ಸಾಧ್ಯವಾಗಿರುವುದನ್ನು ಇಲ್ಲಿ ವಿವರಿಸಲಾಗುತ್ತದೆ.

೧.೫.೫.೧ ಪ್ರಶ್ನಾವಳಿ

ಮಹಿಳಾ ಸಂಶೋಧನೆಯಲ್ಲಿ ಸಂದರ್ಶನವನ್ನು ಕೈಗೊಳ್ಳುವಾಗ ನಾವು ರಚಿತ ಮತ್ತು ಅರಚಿತ ಪ್ರಶ್ನಾವಳಿಯ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಆದರೆ ಇದರಲ್ಲಿ ಅರಚಿತ ಪ್ರಶ್ನಾವಳಿಯ ಪಾತ್ರ ಮಹತ್ವದ್ದಾಗಿರುತ್ತದೆ. ರಚಿತ ಪ್ರಶ್ನಾವಳಿಯ ಪಾತ್ರ ಬಹಳ ಕಡಿಮೆ ಇರುತ್ತದೆ.

ರಚಿತ ಪ್ರಶ್ನಾವಳಿಯ ಮಿತಿ: ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯಲು ಕೆಲವು ಪ್ರಶ್ನೆಗಳನ್ನು ರೂಪಿಸಿಕೊಳ್ಳುವ ಮೂಲಕ ಸಂದರ್ಶನವನ್ನು ಕೈಗೊಳ್ಳಲಾಯಿತು. ರಚಿತ ಪ್ರಶ್ನಾವಳಿಯನ್ನು ಸಾಮಾನ್ಯವಾದ ಮಾಹಿತಿಯನ್ನು ಪಡೆಯಲು ಬಳಸಲಾಗುತ್ತದೆ. ಉದಾ: ಹೆಸರು, ವಯಸ್ಸು, ಜಾತಿ, ವಿವಾಹಿತರಾ? ಮಕ್ಕಳೆಷ್ಟು? ಇತ್ಯಾದಿ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಇದನ್ನು ನೇರ ಸಂದರ್ಶನದ ಮೂಲಕವೂ, ಅಂಚೆ, ದೂರವಾಣಿಗಳ ಮೂಲಕವೂ ಮಾಹಿತಿಯನ್ನು ಸಂಗ್ರಹಿಸಬಹುದು. ಹಾಗೂ ಈ ಪ್ರಶ್ನೆಗಳನ್ನು ಯಾರೆ ಕೇಳಿದರೂ ಉತ್ತರ ಒಂದೇ ಇರುತ್ತದೆ. ಭಾವನೆಗಳಿಗೆ, ಚಿಂತನೆಗಳಿಗೆ ಸಂಬಂಧಪಡದ, ವ್ಯವಹಾರಿಕ, ಭೌತಿಕ, ವಸ್ತುಲೋಕದ ಸಂಗತಿಗಳಿಗೆ ರಚಿತ ಪ್ರಶ್ನಾವಳಿ ಸಾಕು. ಹಾಗೂ ಯಾವುದೇ ಸಮಸ್ಯೆಗಳನ್ನು ಲೋಕಕ್ಕೆ ಪ್ರವೇಶಿಸಲು ಇರಬೇಕಾದ ಸ್ಥೂಲ ಪರಿಚಯಕ್ಕೆ ಇದು ಅಗತ್ಯವಾಗಿದೆ. ಇಲ್ಲಿ

ಯಾವುದೇ ಗೊಂದಲಗಳಿಲ್ಲದೆ ಪೂರ್ವಭಾವಿಯಾಗಿ ಪ್ರಶ್ನೆಗಳನ್ನು ರಚಿಸಿಕೊಳ್ಳುವುದರಿಂದಲೆ ಇದನ್ನು ರಚಿತ ಪ್ರಶ್ನಾವಳಿ ಎನ್ನಲಾಗುತ್ತದೆ. ಆದರೆ ಸ್ತ್ರೀ ಕೇಂದ್ರಿತ ಸಮಸ್ಯೆಯನ್ನು ಆಯ್ದುಕೊಂಡು ಈ ಸಂಶೋಧನೆಗೆ ಇಂತಿಷ್ಟೇ ಮಾಹಿತಿಯಿಂದ ಸಂಶೋಧನಾ ಕಾರ್ಯವು ಪೂರ್ತಿಯಾಗುವುದಿಲ್ಲ.

ಅರಚಿತ ಪ್ರಶ್ನಾವಳಿಯ ಮಹತ್ವ: ಯಾರಿಗೆ ಭವಿಷ್ಯದ ಬಗೆಗೆ ಗೊಂದಲಗಳಿಲ್ಲವೊ, ಭಯ, ಆತಂಕ, ತಲ್ಲಣಗಳಿಲ್ಲವೋ, ಮುಂದೇನು ಎಂಬ ಯೋಚನೆಗಳಿಲ್ಲವೋ ಅಂತವರು ಮಾತ್ರ ಖಚಿತ ಪ್ರಶ್ನೆಗೆ ಖಚಿತವಾದ ಉತ್ತರಗಳನ್ನು ಕೊಡಬಲ್ಲರು. ಸಮಾಜ ವ್ಯವಸ್ಥೆಯಲ್ಲಿ ಮಹಿಳಾ ಬದುಕು ತನ್ನ ದೈನಿಕಗಳಿಂದ ಮೊದಲುಗೊಂಡು, ಪ್ರಧಾನಧಾರೆಯ ನಿದರ್ಶನದಂತೆ ಸಾಗಬೇಕಾದಂತಹ ಸಂದರ್ಭದಲ್ಲಿ ಅವಳ ಬದುಕಿನ ಮೇಲಾಗುತ್ತಿರುವ ಅಕ್ರಮಗಳನ್ನು ಅವಳು ಹಂಚಿಕೊಳ್ಳುವು ದರಿಂದಾಗಿ, ಅರಚಿತ ಪ್ರಶ್ನಾವಳಿಯೆಂದ ಮಾತ್ರಕ್ಕೆ ಪೂರ್ವ ಸಿದ್ಧತಗೆಯಿಲ್ಲ ಎಂದರ್ಥವಲ್ಲ. ಅಲ್ಲಿಯೂ ಸಹ ಅವುಗಳನ್ನು ಅನುಭವಿಸದೆ ವಿಧಿಯಿಲ್ಲ ಎಂಬ ಸನ್ನಿವೇಶಗಳಿರುವುದರಿಂದ ರಚಿತ ಪ್ರಶ್ನಾವಳಿಯಷ್ಟೆ ಆಧರಿಸಿ ಪಡೆದ ಮಾಹಿತಿ ಸಾಕಾಗುವುದಿಲ್ಲ.

ಮಹಿಳಾ ಬದುಕು ಸಾಮಾಜಿಕವಾಗಿ ಅಭದ್ರವಾಗಿರುವಂತಹ, ಅರಕ್ಷತೆಯಿಂದ ಕೂಡಿರುವಂತಹ, ಆತ್ಮವಿಶ್ವಾಸಕ್ಕೆ ಎಡೆಮಾಡಿ ಕೊಡದಿರುವಂತಹ, ಭೂತ–ಭವಿಷತ್‌ಗಳ ಬಗೆಗೆ ಒಂದು ನಿಶ್ಚಿತ ನಿಲುವನ್ನು ತಾಳದೆ ಇರುವಂತಹ ಸಾಮಾಜಿಕ ಬದುಕು ಮಹಿಳೆಗೆ ಕಟ್ಟಲ್ಪಟ್ಟಿದೆಯಾದ್ದರಿಂದ, ಹಲವು ಬಗೆಯ ಮಾತುಕತೆಯಲ್ಲಿ ಸ್ತ್ರೀ ಸಮುದಾಯ ನೇರವಾಗಿ ಮಾತನಾಡದಿರುವ ಸ್ಪಷ್ಟವಾಗಿ ಹೇಳದಿರುವ ಖಚಿತವಾಗಿಲ್ಲದಿರುವ ಸಂಗತಿಗಳೆ ಹೆಚ್ಚು. ಆದರೆ ಸ್ತ್ರೀವಾದಿ ಸಂಶೋಧನೆಯು ಈ ಪ್ರಶ್ನೆಗಳ ಉತ್ತರವನ್ನೇ ಹೆಚ್ಚು ಅವಲಂಬಿಸಿದೆಯಾದ್ದರಿಂದ ದೌರ್ಜನ್ಯ ಹಿಂಸೆಯನ್ನಾಧರಿಸಿದ ಹೊರಟ ಈ ಸಂಶೋಧನೆಯು ಇದಕ್ಕೆ ಹೊರತಲ್ಲ. ಆದ್ದರಿಂದ ಸಂದರ್ಶನದಲ್ಲಿ ಭಾಗವಹಿಸಿದಾಗ ನೇರವಾದ ಪ್ರಶ್ನೆಗಳಿಗಿಂತ, ಅವರಿಗೆ ಪ್ರಶ್ನೆಗಳು ಎನಿಸುವ ಬದಲು ಒಂದು ಆಪ್ತ ಸಮಾಲೋಚನೆ ಎಂಬಂತೆ ಮಾತುಕತೆಯಲ್ಲಿ ಅರಚಿತ ಪ್ರಶ್ನಾವಳಿಯ ಪಾಲು ಹೆಚ್ಚಿನದಾದ್ದರಿಂದ ಅದನ್ನು ಬಳಸಿಕೊಳ್ಳಲಾಗಿದೆ. ಈ ಸಮಸ್ಯೆಯ ನಿವಾರಣೆಯಾಗುವ ಬದಲು, ಅಕ್ರಮಣದ ಪ್ರಮಾಣ ಇನ್ನಷ್ಟು ಭೀಕರತೆಗೆ ಇಳಿಯುವ ಸಂದರ್ಭವೆ ಹೆಚ್ಚು. ಆದ್ದರಿಂದ ಅದನ್ನು ಹಂಚಿಕೊಳ್ಳುವುದಕ್ಕಿಂತ ಮೌನವಾಗಿ ಪೂರ್ವಭಾವಿಯಾಗಿ ಆಲೋಚಿಸಿ, ಅಪೇಕ್ಷಿತ ಮಾಹಿತಿಗಳನ್ನು ಪಡೆಯುವ ಅಗತ್ಯತೆಯನ್ನು ಮಾಡಿಕೊಳ್ಳಲಾಗಿದ್ದು, ಆತ್ಮೀಯತೆಯನ್ನು ಸಾಧಿಸುವ ಮೂಲಕ ಭಾವನ ಲೋಕಕ್ಕೆ ದಕ್ಕೆ ಬರದಂತೆ ಸೂಕ್ಷ್ಮವಾಗಿ ಮಾಹಿತಿಯನ್ನು ಪಡೆಯಲಾಗಿದೆ.

೧.೫.೫.೨. ನೇರ ಸಂದರ್ಶನ

ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ ಸಂದರ್ಶನವನ್ನು ಯಾರು ಬೇಕಾದರೂ, ಯಾವಗಲಾದರೂ ದೂರವಾಣಿ, ಅಂಚೆಯ ಮೂಲಕ, ವಿಡಿಯೋ ಕಾನ್ಫೆರನ್ಸ್ ಮೂಲಕ ಮಾಡಬಹುದು. ಆದರೆ ಪ್ರಕರಣದ

ತೀವ್ರತೆಯನ್ನು ಅರಿಯಲು ನಾವು ನೊಂದ ಮಹಿಳೆಯರನ್ನು ನೇರ ಸಂದರ್ಶನದ ಮೂಲಕ ಎಷ್ಟೋ ಮಾರೆಮಾಚುವಂತಹ ಆಂತರಿಕ ವಿಚಾರಗಳನ್ನು ನಾವು ಅವರ ವಿಶ್ವಾಸಗಳಿಸಿ ಪ್ರಶ್ನೆಗಳನ್ನು ಪ್ರಶ್ನೆಗಳಾನ್ನಾಗಿಸದೆ ಆಪ್ತತೆಯನ್ನು ಸಾಧಿಸಿ ಅರಚಿತ ಪ್ರಶ್ನಾವಳಿಯ ಮೂಲಕ ವಿಚಾರಗಳನ್ನು ಕಲೆಹಾಕಬಹುದು. ಆದ್ದರಿಂದ ಸಂದರ್ಶನದಲ್ಲಿ ನೇರ ಸಂದರ್ಶನವೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರನ್ನು ನೇರವಾಗಿ ಸಂದರ್ಶಿಸಲಾಯಿತು. ಮೊದಲ ಭೇಟಿಗಳಲ್ಲಿ ತೀರಾ ಸೀಮಿತವಾದ, ಅಸ್ಪಷ್ಟ ಗೊಂದಲಗಳನ್ನು ಸೃಷ್ಟಿಸುವಂತ ಉತ್ತರಗಳೇ ದೊರೆತವು. ದೌರ್ಜನ್ಯ ಹಿಂಸೆಯ ಸ್ಥೂಲ ನೆಲೆಗಳು ಇಲ್ಲವೇನೋ ಎಂಬಂತೆ ಮಾಹಿತಿಗಳು ಲಭ್ಯವಾದವು. ಆದರೆ ಮಹಿಳಾ ಬದುಕಿನ ಸೂಕ್ಷ್ಮ ಸಂಗತಿಗಳನ್ನು ಅಧ್ಯಯನಕ್ಕೊಳಪಡಿಸಿದ್ದಾಗ ಈ ಪ್ರಕ್ರಿಯೆಗೆ ನಿಗದಿತ ನಿಯಮವೆನ್ನುವುದು ಇರುವುದಿಲ್ಲ. ಒಮ್ಮೆ ಸಂಗ್ರಹಿಸಿದ ಮಾಹಿತಿ ಮುಂದಿನ ಕೆಲವು ದಿನಗಳಲ್ಲಿ ಭಿನ್ನವಾಗಿ ನಿಲ್ಲುವ ಸಾಧ್ಯತೆ ಹೆಚ್ಚು. ಹಾಗಾಗಿ ಒಂದೇ ಭೇಟಿಯಲ್ಲಿ ಸಂದರ್ಶನ ಮುಗಿದ ಮೇಲೆ ಅಷ್ಟೇ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಫಲಿತವೂ ಸಹ ಅಸ್ಪಷ್ಟವಾಗಿಯೇ ಉಳಿದು ಸಮಸ್ಯೆಯ ನಿಭಾಯಿಸುವಿಕೆಯು ಸಹ ಸಾಧ್ಯವಾಗುವುದಿಲ್ಲ. ಆದ್ದರಿಂದ ಸುತ್ತಲಿನ ಕ್ಷೇತ್ರ, ಸಂದರ್ಭಗಳನ್ನಾಧರಿಸಿ ಪರ್ಯಾಯ ಬಗೆಗಳಲ್ಲಿ ಮಾತಿಗಿಳಿಯುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಈ ಬಗೆಯ ವಿಷಯಗಳಲ್ಲಿ ಸಂದರ್ಶನಕ್ಕೆ ತೊಡಗಿದಾಗ ಮೊದಲ ಹಂತದಲ್ಲಿ ಮಾಹಿತಿಗಳನ್ನು ಪಡೆಯುವಾಗ ಸಮಸ್ಯೆಗಳೇ ಇಲ್ಲದ ಉತ್ತರಗಳು ಸಾಕಷ್ಟು ಗೊಂದಲವನ್ನುಂಟುಮಾಡಿದವು. ಆಗ ಆ ವ್ಯಕ್ತಿಗಳ ಆಪ್ತಲೋಕದಲ್ಲಿ ಇರುವವರೊಂದಿಗೆ ಸಂದರ್ಶನಕ್ಕೆ ಹೋದರೂ ಮೊದಮೊದಲು ಮೂಕ ಪ್ರೇಕ್ಷಕರಂತಿದ್ದು ನಿಧಾನವಾಗಿ ಮಾತಿನ ಮಧ್ಯದಲ್ಲಿ ಒಂದೊಂದೆ ಪ್ರಶ್ನೆಗಳನ್ನು ಪ್ರಶ್ನೆಗಳೆನಿಸಿದ ಹಾಗೆ ಮಾತನಾಡುವ ಮೂಲಕ ಆ ವಲಯದಲ್ಲಾಗುವ ದೌರ್ಜನ್ಯ ಮತ್ತು ಹಿಂಸೆಯ ಸ್ವರೂಪವನ್ನು ಸೂಕ್ಷ್ಮವಾಗಿ ಗ್ರಹಿಸಲಾಯಿತು. ಜೊತೆಗೆ ಸ್ವಸಮಸ್ಯೆಯಾಗಿ ಸ್ವೀಕರಿಸುವ ಮೂಲಕ ವ್ಯಕ್ತಿಗಳಿಗೆ ಆಪ್ತವಾಗುವುದರೊಂದಿಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಪಡೆಯಲು ಸಹಾಯಕವಾಗಿದೆ. ನೇರ ಸಂದರ್ಶನದಲ್ಲಿ ಸುತ್ತಲ ಪರಿಸರದ ಅವಲೋಕನದಿಂದ ಸಮಸ್ಯೆಯ ಎಳೆಯನ್ನು ಅನುಕೂಲವಾದ್ದರಿಂದ ಈ ವಿಧಾನ ಉಪಯುಕ್ತವಾಗಿದೆ.

೧.೫.೫.೩ ಪ್ರಕರಣ ಅಧ್ಯಯನ

ಮಹಿಳಾ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಿಸಲು ಪ್ರಕರಣ ಅಧ್ಯಯನವು ಪ್ರಮುಖವಾಗಿರುತ್ತದೆ. ನಾವು ಒಂದು ಪ್ರಕರಣವನ್ನು ಅಧ್ಯಯನ ಮಾಡಿ ಸಮಸ್ಯೆಯ ಮೂಲವನ್ನು ಹುಡುಕಲು ಸಾಧ್ಯವಿಲ್ಲ. ಸಂಶೋಧನೆಯ ವಿಷಯನುಸಾರವಾಗಿ ದೌರ್ಜನ್ಯ-ಹಿಂಸೆಯ ಸ್ವರೂಪ, ಅಲ್ಲಿ ಪ್ರತಿಬಿಂಬವಾಗುವ ಅಧೀನ ಪ್ರಧಾನ ನೆಲೆಗಳನ್ನು ಅರಿಯಲು ಯಾವುದೇ ಒಬ್ಬ ವ್ಯಕ್ತಿಯ ಸಂದರ್ಶನದಿಂದ ಸಾಧ್ಯವಿಲ್ಲ. ಹೀಗೆ ಒಂದೇ ಸಮಸ್ಯೆಯ ವಿವಿಧ ಸ್ವರೂಪಗಳನ್ನು ಅರಿಯಲು, ವಿವಿಧ ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸುವ ಮೂಲಕ ಅವುಗಳನ್ನು

ಒಂದೊಂದು ಗುಂಪುಗಳಲ್ಲಿ ದಾಖಲಿಸುವ ಮೂಲಕ ಒಂದೇ ಸಾಮ್ಯತೆಯನ್ನು ಹೋಲುವ ವಿವರಗಳ ಹತ್ತು ಪ್ರಕರಣಗಳನ್ನು ಅಧ್ಯಯನ ಮಾಡಿದರೂ ಅದನ್ನು ಒಂದೇ ಒಂದು ಪ್ರಕರಣವೆಂದು ಪರಿಗಣಿಸಲಾಗುತ್ತದೆ. ದೌರ್ಜನ್ಯ ಮತ್ತು ಹಿಂಸೆಯ ಮೂಲ ಉದ್ದೇಶ ಅಧೀನ ನೆಲೆಯ ಸಮುದಾಯವು ಅದೇ ನೆಲೆಯಲ್ಲಿಯೇ ಮುಂದುವರಿಯುವುದಾಗಿದೆ. ಈ ಸಂಗತಿಯು ಮಹಿಳಾ ದೌರ್ಜನ್ಯದ ಅನೇಕ ಪ್ರಕರಣಗಳನ್ನು ಕೌಟುಂಬಿಕ ಹಾಗೂ ಸಾರ್ವಜನಿಕ ವಲಯದ ದೌರ್ಜನ್ಯ ಅಧ್ಯಯನ ಮಾಡುವಲ್ಲಿ ಪ್ರತಿಬಿಂಬವಾಗುವ ಯಜಮಾನ ಅಧೀನ ನೆಲೆಯ ಅಂಶಗಳನ್ನು ಪ್ರತಿಯೊಂದು ಪ್ರಕರಣಗಳಲ್ಲಿಯೂ ಮಹಿಳೆಯರ ಮೇಲಾಗುವ ದೌರ್ಜನ್ಯ ಮತ್ತು ಹಿಂಸೆಯನ್ನು ಪ್ರತಿನಿಧಿಸುವ ಸಮಸ್ಯೆಯ ಸ್ವರೂಪವನ್ನು ಕಾಣಬಹುದಾಗಿದೆ. ವ್ಯಕ್ತಿಯ ವಿವರಗಳನ್ನು ಆಳವಾಗಿ ಗ್ರಹಿಸುವ ಮೂಲಕ ಮಾಹಿತಿಯನ್ನು ಪಡೆಯುವಾಗಲೂ ಅಲ್ಲಿನ ಮಹಿಳೆಯರ ವೈಯುಕ್ತಿಕ ಬದುಕನ್ನು ಅತಿಕ್ರಮಿಸದಂತಹ ಸಂಗತಿಯ ಕುರಿತು ಸಾಕಷ್ಟು ಜಾಗ್ರತೆಯನ್ನು ವಹಿಸಿ ಪ್ರಕರಣಗಳನ್ನು ಸಂಗ್ರಹಿಸಿದೆ. ಸಾಂಪ್ರದಾಯಿಕ ಸಂಶೋಧನಾ ವಿಧಿವಿಧಾನಗಳು ಸಂಶೋಧಕರು ಮತ್ತು ಸಂದರ್ಶಿನಿಯ ಮಧ್ಯೆ ಒಂದು ಅಂತರವಿರಬೇಕು. ಭಾವನಾತ್ಮಕ ನಂಟಿರುವುದು, ಆಪ್ತತೆಯನ್ನು ಸಾಧಿಸುವುದನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ. ಆದರೆ ಸ್ತ್ರೀವಾದಿ ಸಂಶೋಧನೆಯಲ್ಲಿ ನೈಜ ಸ್ಥಿತಿಯನ್ನು ಗ್ರಹಿಸಲು ಅಥವಾ ಸಾಮೀಪ್ಯವನ್ನು ಸಾಧಿಸಲು ಈ ವಿಧಾನವನ್ನು ವಿಶೇಷವಾಗಿ ಬಳಸಬೇಕು. ಸಾಂಪ್ರದಾಯಿಕ ಸಂಶೋಧನೆಗಳು ಭಾವನಾತ್ಮಕ ಅಗತ್ಯತೆಗಳನ್ನು ನಿರಾಕರಿಸುವುದರಿಂದ ಮಹಿಳೆಯ ವೈಯಕ್ತಿಕ ಬದುಕನ್ನು ಅತಿಕ್ರಮಿಸುವಂತಹ ಸಂಗತಿಗಳು ಈ ವಿಧಾನದಿಂದ ಅನುಸರಿಸಿದ ಸಂಗತಿಯಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ. ಉದಾ: ಅತ್ಯಾಚಾರದಂತ ಪ್ರಕರಣಗಳನ್ನು ಸಂದರ್ಶಿಸುವಾಗ ನ್ಯಾಯಲಯಗಳಲ್ಲಿ ವಿಚಾರಿಸುವಾಗ ವಕೀಲರು ಕೇಳುವ ಪ್ರಶ್ನೆಗಳು ಅತ್ಯಾಚಾರ ಹೇಗೆ? ಯಾವ ಸಮಯದಲ್ಲಿ? ಎಷ್ಟು ಜನರಿಂದ? ದೇಹದ ಮೇಲಿನ ಬಟ್ಟೆಗಳು ಹರಿದಿದ್ದವಾ? ಎಂಬಂತಹ ಪ್ರಶ್ನೆಗಳು ಅತ್ಯಾಚಾರವಾದುದಕ್ಕಿಂತ ಹೆಚ್ಚು ಕ್ರೂರವಾಗಿರುತ್ತವೆ. ವೈಯಕ್ತಿಕ ಜೀವನದ ಬಹುಮುಖ್ಯ ಸಂಗತಿಗಳನ್ನು ತೀರಾ ಹೇಳದಂತ ಸಂಗತಿಗಳನ್ನು ಹೇಳಿದಾಗ ಅವರ ಬದುಕನ್ನು ಗೌರವಿಸುವುದು ಬಹುಮುಖ್ಯ ಅಂಶವಾಗಿರುತ್ತದೆ. ದೌರ್ಜನ್ಯದ ಈ ಪ್ರಕರಣಗಳ ಮೂಲಕ ಸಮುದಾಯದ ಪ್ರಶ್ನೆಯೊಂದನ್ನು ಮಹಿಳಾ ಬದುಕಿನ ಸಮಸ್ಯೆಯೊದನ್ನು ಪ್ರತಿನಿಧಿಸುವಲ್ಲಿ ಬಳಸಲಾಗಿದೆ. ಈ ಬಗೆಯ ಪ್ರಕರಣ ಅಧ್ಯಯನವು ಸಂದರ್ಶನವನ್ನು ಕೈಗೊಂಡಾಗ ಮುಖ್ಯವಾಗಿ ಅನುಸರಿಸಿದ್ದು ವ್ಯಕ್ತಿನಿಷ್ಟ ಸಂಶೋಧನಾ ವಿಧಾನ ಆಯಾಮಗಳನ್ನು ಕ್ಷೇತ್ರಕಾರ್ಯದ ಮಾಹಿತಿ ಸಂಗ್ರಹಣೆಯಲ್ಲಿ ಬಳಸಲಾಗಿದೆ.

೧.೫.೬ ಕ್ಷೇತ್ರಕಾರ್ಯ ವಿಶ್ಲೇಷಣೆ

ಸ್ತ್ರೀವಾದಿ ಚಿಂತನೆಯ ಮೂಲ ಕೇವಲ ಭೌತಿಕ ಕ್ರಿಯೆ ಮತ್ತು ಚಟುವಟಿಕೆಯಷ್ಟೇ ಅಲ್ಲ. ಬದಲಾಗಿ ಇದು ಕ್ರಿಯಾಶೀಲವಾಗಲೇಬೇಕಾದಂತಹ ಮಾರ್ಗವನ್ನು ಶೋಧಿಸುವ ಅಗತ್ಯವಿದೆ. ಕೇವಲ ಭೌತಿಕ ನೆಲೆಯ

ಚಿಂತನೆಗಳನ್ನು ರೂಪಿಸುವುದರಿಂದ ಯಾವುದೇ ಪ್ರಯೋಜನವಾಗದು. ರೂಪಿತವಾದ ಚಿಂತನೆಗಳಿಂದ ಜನ್ಮತಳೆಯುವ ಜ್ಞಾನವು ಕ್ರಿಯಾತ್ಮಕವಾಗಿ ತೊಡಗಿಕೊಂಡು ಅದನ್ನು ಮಹಿಳಾ ಬದುಕಿನಲ್ಲಿ ಸಕಾರಾತ್ಮಕವಾದ ಪರಿಣಾಮವನ್ನು ಪಡೆಯುವಲ್ಲಿ ಸಫಲವಾಗುವ ಅಗತ್ಯತೆಯಿದೆ. ಪ್ರಸ್ತುತ ಅಧ್ಯಯನವು ಮಹಿಳಾ ದೌರ್ಜನ್ಯಗಳು ಲಿಂಗ ಸಂಬಂಧಿ ಅಧ್ಯಯನ ಇಲ್ಲಿ ದೌರ್ಜನ್ಯಗಳನ್ನು ನಿವಾರಿಸುವಲ್ಲಿ, ನಿಭಾಯಿಸುವಲ್ಲಿ ಸಹಾಯವಾಗಬೇಕೆಂಬ ಉದ್ಧೇಶದ ಹಿನ್ನಲೆಯಲ್ಲಿಯೇ ರೂಪಿತವಾದುದಾಗಿದೆ. ಆದ್ದರಿಂದ ದೌರ್ಜನ್ಯಕ್ಕೊಳಾಗುತ್ತಿರುವ ಮಹಿಳಾ ಸಮುದಾಯವನ್ನು ಸಂದರ್ಶನಕ್ಕೆ ಒಳಪಡಿಸುವ ಮೂಲಕ ವಾಸ್ತವಿಕತೆಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ವಿಸ್ತೃತವಾದ ಮಹಿಳಾ ದೌರ್ಜನ್ಯಗಳು ಲಿಂಗಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೊಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ನಗರದ ಎಲ್ಲಾ ಠಾಣೆಗಳಲ್ಲಿಯೂ ಸಹ ಮಾಹಿತಿಯನ್ನು ಸಂಗ್ರಹಿಸುವುದು ಕಷ್ಟಕರ ಹಾಗೂ ಅಧ್ಯಯನದ ಕಾಲಮಿತಿಯಲ್ಲಿ ಸಮರ್ಪಕವಲ್ಲವೆಂಬ ಹಿನ್ನಲೆಯಲ್ಲಿ ಕೆಲವು ಪ್ರಮುಖ ಠಾಣೆಗಳಲ್ಲಿನ ಮಹಿಳಾ ಪ್ರಕರಣಗಳನ್ನು ಮತ್ತು ಅದರಲ್ಲಿ ವಿಶೇಷವಾಗಿರುವ ಪ್ರಕರಣಗಳನ್ನು ಮಹಿಳೆಯರ ಹತ್ತಿರ ಹೋಗಿ ಸಂದರ್ಶನ ಮಾಡಲಾಗಿದೆ. ಸುಮಾರು ಪ್ರಕರಣಗಳನ್ನು ಅಧ್ಯಯನ ಮಾಡಲಾಗಿದೆ. ಕಾರಣ ದೌರ್ಜನ್ಯ, ಹಿಂಸೆಯ ಸ್ವರೂಪವನ್ನು ವಾಸ್ತವಕ್ಕೆ ಮುಖಾಮುಖಿಯನ್ನಾಗಿ ಚರ್ಚೆಗೊಳಪಡಿಸುವ ಉದ್ಧೇಶದಿಂದ ಮಾಡಲಾಗಿದೆ. ಪ್ರಕರಣಗಳಲ್ಲಿ ಬಹುತೇಖವಾಗಿ ಜಾತಿ, ವಯಸ್ಸು, ಶಿಕ್ಷಣ, ಉದ್ಯೋಗದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾರ್ವಜನಿಕ ವಲಯ ಹಾಗೂ ಕೌಟುಂಬಿಕ ವಲಯದಲ್ಲಿನ ದೌರ್ಜನ್ಯಕ್ಕೊಳಗಾದ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸೆಯ ಸ್ವರೂಪವನ್ನು ಪರಶೀಲಿಸಲು ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಸಂದರ್ಶನಕ್ಕೊಳಪಡಿಸುವ ಮೂಲಕ ವಿವಿಧ ಸ್ವರೂಪಗಳ ದೌರ್ಜನ್ಯ ಪ್ರಕರಣಗಳನ್ನು ಎಲ್ಲಾ ಠಾಣೆಗಳಲ್ಲಿ ಸಂಗ್ರಹಿಸುವುದು ಕಷ್ಟಕರ ಹಾಗೂ ಅಧ್ಯಯನದ ಕಾಲಮಿತಿಯಲ್ಲಿ ಸಮರ್ಪಕವಲ್ಲವೆಂಬುದರ ಹಿನ್ನಲೆಯಲ್ಲಿ, ಕೆಲವು ಪ್ರಮುಖ ಠಾಣೆಗಳಲ್ಲಿನ ಪ್ರಕರಣಗಳನ್ನು ಅದರಲ್ಲಿ ಬರುವ ಅತಿ ವಿಶೇಷ ಪ್ರಕರಣಗಳನ್ನು ಕೈಗೆತ್ತಿಕೊಂಡು ಸಂದರ್ಶಿಸಲಾಗಿದೆ. ಒಟ್ಟು ೨೩ ಪ್ರಕರಣಗಳನ್ನು ದಾಖಲಿಸಲಾಗಿದೆ. ಪ್ರಕರಣದಲ್ಲಿ ಬಹುತೇಕವಾಗಿ ಜಾತಿ, ವಯಸ್ಸು, ಶಿಕ್ಷಣ, ಉದ್ಯೋಗದ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ. ಸಾರ್ವಜನಿಕ ವಲಯ ಹಾಗೂ ಕೌಟುಂಬಿಕ ವಲಯದಲ್ಲಿನ ದೌರ್ಜನ್ಯಕ್ಕೊಳಗಾದ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸೆಯ ಸ್ವರೂಪವನ್ನು ಪರಿಶೀಲಿಸಲು ದಾಖಲಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ.

-----******-----

ಅಧ್ಯಾಯ ೨

ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಸಮೀಕ್ಷೆ

ಅಧ್ಯಾಯ ೨

ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯ ಸಮೀಕ್ಷೆ

ಸಂಶೋಧನಾ ವಿಷಯಕ್ಕೆ ಅಥವಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದಿರುವಂತಹ ಅಧ್ಯಯನಗಳು, ಸಂಶೋಧನೆಗಳು ಹಾಗೂ ಸಂಬಂಧಿತ ಪುಸ್ತಕಗಳನ್ನು ಪರಾಮರ್ಶಿಸಿ ಸಂಶೋಧನೆಗೆ ಸಂಬಂಧಿಸಿದಂತೆ ಅವುಗಳನ್ನು ಅಧ್ಯಯನ ದೃಷ್ಟಿಕೋನದಿಂದ ವಿಶ್ಲೇಷಿಸುವುದಾಗಿದೆ. ಆಯ್ಕೆಯ ವಿಷಯದ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಳಕು ಚೆಲ್ಲುವಂತಹ ಗ್ರಂಥಗಳು, ದಾಖಲೆಗಳು, ದಾಸ್ತಾವೇಜುಗಳು, ಕಡತಗಳು, ವಿಶ್ವಕೋಶಗಳು, ನಿಯತಕಾಲಿಕೆಗಳು ಸಂಶೋಧನಾ ಪ್ರಬಂಧಗಳು ಮತ್ತು ದಿನಪತ್ರಿಕೆಗಳು ಹಾಗೂ ಇತರೆ ಸಂಬಂಧಪಟ್ಟ ಆಕಾರಗಳಿಂದ ಸಾಹಿತ್ಯದ ಪೂರ್ಣ ಅರಿವನ್ನು ಪಡೆಯಲು ಸಂಶೋಧಕರು ಆಸಕ್ತಿಯಿಂದ ಅಧ್ಯಯನ ಮಾಡುವುದಾಗಿದೆ.

ದೌರ್ಜನ್ಯಗಳ ಕುರಿತು ಪುಸ್ತಕಗಳ ಸಮೀಕ್ಷೆ

ಡಾ. ಎಸ್ ಇಂದಿರಾ ಅವರು (೨೦೧೦) **'ಮಹಿಳೆ ಮತ್ತು ಸವಾಲುಗಳೂ'** ಎಂಬ ಗ್ರಂಥದಲ್ಲಿ ಅಸಂಘಟಿತ ವಲಯಗಳಲ್ಲಿ ಮಹಿಳೆಯರು ಯಾವ ಯಾವ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ, ಅವರು ಅನುಭವಿಸುವ ತೊಂದರೆಗಳು, ಮಹಿಳೆ ಮತ್ತು ಉದ್ಯೋಗ, ಮಹಿಳಾ ಸಬಲೀಕರಣದ ಬಗ್ಗೆ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೇಗೆ ನಡೆಯುತ್ತವೆ ಉದಾ: ಹೆಣ್ಣು ಭ್ರೂಣಹತ್ಯೆ, ವರದಕ್ಷಿಣೆ ಸಮಸ್ಯೆ, ಲೈಂಗಿಕ ಕಿರುಕುಳ, ಹೆಣ್ಣು ಶಿಶುಹತ್ಯೆ ಮುಂತಾದ ದೌರ್ಜನ್ಯಗಳನ್ನು ಹಾಗೂ ಮಹಿಳಾ ವಿರುದ್ಧದ ದೌರ್ಜನ್ಯವನ್ನು ಹೋಗಲಾಡಿಸಲು ಮಹಿಳಾ ಕಾಯ್ದೆಗಳು ಹಾಗೂ ಇತರೆ ಯೋಜನೆಗಳ ಬಗ್ಗೆ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಬಿ. ಸಮತಾ ದೇಶಮಾನೆ ಅವರು (೨೦೦೪) **'ಸಮಾಜಶಾಸ್ತ್ರ ಮತ್ತು ಮಹಿಳೆ'** ಎಂಬ ಪುಸ್ತಕದಲ್ಲಿ ಮಹಿಳೆ ಸಮಾಜದಲ್ಲಿ ಸ್ವಾತಂತ್ರ್ಯ ನಂತರ ಮತ್ತು ಸ್ವಾತಂತ್ರ ಪೂರ್ವದಲ್ಲಿ ಮಹಿಳೆಯರು ಹೇಗೆ ಜೀವಿಸುತ್ತಿದ್ದರು, ಇವರ ಅಭಿವೃದ್ಧಿ ಹಾಗೂ ದೌರ್ಜನ್ಯದ ಬಗ್ಗೆ ಕಾನೂನುಗಳು ಯಾವರೀತಿ ಕಾರ್ಯ ನಿರ್ವಹಿಸುತ್ತಿದ್ದವು ಹಾಗೂ ಮಹಿಳೆಯರ ವಿಶೇಷ ಸಮಸ್ಯೆಗಳಾವುವು, ದಲಿತ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಸಮಾಜದಲ್ಲಿ ಎಂತಹ ಸ್ಥಾನ-ಮಾನ ಪಡೆದಿದ್ದರು ಇವರ ವಿರುದ್ಧ ನಡೆಯುತ್ತಿದ್ದ ದೌರ್ಜನ್ಯದ ಬಗ್ಗೆ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ನೀಲಮ್ಮ ಕತ್ನಳ್ಳಿ ರವರ (೧೯೯೭) **'ಮಹಿಳೆಯ ಹಲವು ಮುಖಗಳು'** ಎಂಬ ಪುಸ್ತಕದಲ್ಲಿ ಮಹಿಳೆಯು ಮೂಢನಂಬಿಕೆಯ ಸುಳಿಯಲ್ಲಿ ಸಿಲುಕಿ ಹೇಗೆ ತನ್ನ ಜೀವನವನ್ನು ಕಷ್ಟದಲ್ಲಿ ಕಳೆಯುತ್ತಿದ್ದಾಳೆಂದು

ತಿಳಿಸಿದ್ದಾರೆ. ಸಮಾಜದ ಅನಿಷ್ಟ ಸಾಜಿಕ ಪಿಡುಗುಗಳಿಂದ ಮಹಿಳೆ ಹೇಗೆಲ್ಲಾ ದೌರ್ಜನ್ಯವನ್ನು ಅನುಭವಿಸುತ್ತಿದ್ದಾಳೆ ಹಾಗೂ ೨೧ನೇ ಶತಮಾನದ ಮಹಿಳೆಯರ ಹಲವಾರು ಸಮಸ್ಯೆಗಳನ್ನು ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಆರ್ ಇಂದಿರಾ ರವರ (೨೦೦೦) **'ಮಹಿಳೆ ಮತ್ತು ಕೌಟುಂಬಿಕ ಹಿಂಸೆ'** ಎಂಬ ಪುಸ್ತಕದಲ್ಲಿ ಹೆಣ್ಣು ಮಗು ಕುಟುಂದಲ್ಲಿ ಹುಟ್ಟುವ ಮೊದಲೇ ಹೇಗೆ ಶೋಷಣೆಯನ್ನು ಅನುಭವಿಸುತ್ತಾಳೆ ಹಾಗೂ ಹುಟ್ಟಿದ ನಂತರದ ಶೋಷಣೆ, ತಾನೂ ಹುಟ್ಟಿದ ಮನೆಯಲ್ಲಿನ ಶೋಷಣೆ ಮತ್ತು ಗಂಡನ ಮನೆಯಲ್ಲಿನ ಶೋಷಣೆಯ ಬಗ್ಗೆ ಒಟ್ಟಾರೆಯಾಗಿ ಕೌಟುಂಬಿಕ ವಲಯದಲ್ಲಿನ ಮಹಿಳಾ ದೌರ್ಜನ್ಯವನ್ನು ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ವಿಜಯ ಕುಮಾರಿ ಎಸ್ ಕರಿಕಲ್ ರವರ (೨೦೦೭) **'ಮಹಿಳೆ ಮತ್ತು ಸಮಾಜ'** ಎಂಬ ಪುಸ್ತಕದಲ್ಲಿ ಮಹಿಳೆಯು ಯಾವ-ಯಾವ ಸ್ವರೂಪಗಳಲ್ಲಿ ದೌರ್ಜನ್ಯಗಳನ್ನು ಎದುರಿಸುತ್ತಿದ್ದಾಳೆಂದು ತಿಳಿಸಿದ್ದಾರೆ. ವಿವಿಧ ಶೋಷಣೆಯ ಬಗ್ಗೆ ಹೆಣ್ಣು ಭ್ರೂಣಹತ್ಯೆ, ಕೋಮು ಗಲಭೆ ಮತ್ತು ಮಹಿಳೆ, ಲಿಂಗತಾರತಮ್ಯ, ಅಸಂಘಟಿತ ವಲಯದ ದುಡಿಮೆಗಾರರ ಸಮಸ್ಯೆಗಳ ಬಗ್ಗೆ ತಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಶಾಲಿನಿ ರಜನೀಶ್ ರವರ (೨೦೦೮) **'ನಡೆಮುಂದೆ'** ಎಂಬ ಪುಸ್ತಕದಲ್ಲಿ ಕೌಟುಂಬಿಕ ದೌರ್ಜನ್ಯವನ್ನು ತಡೆಗಟ್ಟುವ ಕಾಯ್ದೆಗಳ ಬಗ್ಗೆ ಯಾವ ಯಾವ ಕ್ರಮಗಳನ್ನು ಅನುಸರಿಸಬೇಕು ಎಂದು ತಿಳಿಸಿದ್ದಾರೆ. ಲಿಂಗತಾರತಮ್ಯ, ಮಹಿಳೆಯರ ಹಕ್ಕಗಳು, ಲೈಂಗಿಕ ಕಿರುಕುಳ, ಆಸ್ತಿಯ ಹಕ್ಕು, ಅನೈತಿಕ ಮಹಿಳಾ ಸಾಗಾಣಿಕೆ, ಮಹಿಳೆಯರಿಗಿರುವ ಕಾನೂನು ಮತ್ತು ಸೌಲಭ್ಯಗಳನ್ನು ದೌರ್ಜನ್ಯದ ವಿರುದ್ಧ ಹೋರಾಡಲು ಕಾನೂನುಗಳ ಸಲಹೆಗಳನ್ನು ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಇಂದಿರಾ ಆರ್ (೨೦೦೨) **'ಮಹಿಳೆ ಸಮಾಜ ಮತ್ತು ಸಂಸ್ಕೃತಿ'** ಎಂಬ ಪುಸ್ತಕದಲ್ಲಿ ಸಾಮಾಜಿಕ ಸಂಸ್ಥೆಗಳು, ವಿವಾಹ ಮತ್ತು ಲಿಂಗ ವ್ಯವಸ್ಥೆ, ಭಾರತದ ಕೆಲವು ಮಹಿಳಾ ಪ್ರಧಾನ ಮಹಿಳಾ ಸಮಸ್ಯೆಗಳು ಉದಾ: ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆ, ಅತ್ಯಾಚಾರ ಮುಂತಾದ ಸಮಸ್ಯೆಗಳ ಬಗ್ಗೆ ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಬೆ. ಕಾ ಮೂರ್ತಿಶ್ವರಯ್ಯ(೨೦೦೦) **'ಮಹಿಳೆ ಸಮಾಜ ಮತ್ತು ಕಾನೂನು'** ಎಂಬ ಪುಸ್ತಕದಲ್ಲಿ ಸಂವಿಧಾನ ರಕ್ಷಣೆ ಮತ್ತು ಮಹಿಳೆ, ಮಹಿಳಾ ಕಾರ್ಮಿಕರ ಕಾನೂನಗಳು, ಹಿಂದೂ ವಿವಾಹ, ವಿವಾಹ ವಿಚ್ಛೇದನ, ಜೀವನಾಂಶ, ವ್ಯಭಿಚಾರ, ಮಕ್ಕಳ ಮೇಲಿನ ವಿವಾದ ಹಾಗೂ ವಿವಾಹಕ್ಕೆ ಸಂಬಂಧಿಸಿದ ಅಪರಾಧ ಇದರ ಬಗ್ಗೆ ತಿಳಿಸಿದ್ದಾರೆ. ವರದಕ್ಷಿಣೆಯ ಕಾನೂನು ಪರಿಚಯ, ಅನೈತಿಕ ವ್ಯವಹಾರಗಳ ಕಾನೂನು, ಮಹಿಳಾ ನೌಕರರ ಲೈಂಗಿಕ ಕಿರುಕುಳ ಅಪರಾಧಗಳ ಕಾನೂನು ಮತ್ತು ಅವರ ಹಕ್ಕುಗಳ ಬಗ್ಗೆ ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಗೀತಾ ಕೃಷ್ಣಮೂರ್ತಿರವರು (೨೦೦೭) **'ಮಹಿಳೆ ಸಮಾಜ ಮತ್ತು ಕಾನೂನು'** ಎಂಬ ಪುಸ್ತಕದಲ್ಲಿ **ಮಾನಸಿಕ ಹಿಂಸೆ ಹೆಣ್ಣುಮಕ್ಕಳಿಗೆ ಆಸ್ತಿಯ ಹಕ್ಕು, ಅತ್ಯಾಚಾರದ ಸಾಮಾಜಿಕ ಪಿಡುಗು, ಕೌಟುಂಬಿಕ ಕ್ರೌರ್ಯ,** ಭ್ರೂಣ ಪರೀಕ್ಷೆ, ಬಾಲ್ಯವಿವಾಹ, ಲೈಂಗಿಕ ಕಿರುಕುಳ, ತೇಜೋವಧೆ, ವರದಕ್ಷಿಣೆ, ಕಾನೂನು ಮತ್ತು ನ್ಯಾಯ, ಅತ್ಯಾಚಾರ ಮತ್ತು ಗಲ್ಲು ಶಿಕ್ಷೆಯ ಬಗ್ಗೆ ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ವಿಜಯಶ್ರೀ ಸಬರದಾರವರ (೨೦೦೫) **'ಮಹಿಳೆ ಶೋಷಣೆ ಸವಾಲುಗಳು'** ಎಂಬ ಪುಸ್ತಕದಲ್ಲಿ ಮಹಿಳಾ ಹತ್ಯಾ, ಪುರುಷ–ಶಾಹಿ ಮೌಲ್ಯಗಳು, ಹೆಣ್ಣು ಭ್ರೂಣಹತ್ಯೆ, ಸ್ತ್ರೀ ಭ್ರೂಣಹತ್ಯೆ ಮತ್ತು ತಂತ್ರಜ್ಞಾನ, ಮಹಿಳೆ ಮತ್ತು ರಾಜಕೀಯ ಸವಾಲುಗಳು, ಸ್ತ್ರೀ ಭ್ರೂಣಹತ್ಯಾ ವಿರೋಧಿ ಆಂದೋಲನದ ಆಶಯ ಮತ್ತು ಸ್ವರೂಪಗಳ ಬಗ್ಗೆ ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಡಾ. ಹಾಲತಿ ಸೋಮಶೇಖರ್ ರವರ (೨೦೦೮) **'ಸ್ತ್ರೀ ಪರ ಕಾನೂನಗಳು'** ಎಂಬ ಪುಸ್ತಕದಲ್ಲಿ ಮಹಿಳಾ ದೌರ್ಜನ್ಯದ ವಿರುದ್ಧ ಹೋರಾಡಲು ಕಾನೂನು ಸಲಹೆಗಳನ್ನು ನೀಡಿದ್ದಾರೆ. ಉದಾ: ವರದಕ್ಷಿಣೆಯ ವಿರುದ್ಧದ ಕಾನೂನು, ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ ವಿರುದ್ಧ ಕಾಯ್ದೆ, ಹೆಣ್ಣು ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆ, ಅತ್ಯಾಚಾರ ಮುಂತಾದ ಸಮಸ್ಯೆಗಳ ಬಗ್ಗೆ ಹಾಗೂ ಕಾನೂನುಗಳ ಸಲಹೆಗಳನ್ನು ಈ ಪುಸ್ತಕದಲ್ಲಿ ತಿಳಿಸಿದ್ದಾರೆ.

ಸಂಶೋಧನಾ ಅಧ್ಯಯನಗಳ ಸಮೀಕ್ಷೆ

೧. ಶ್ರೀದೇವಿ ವಿ ಆಲೂರು ರವರು (೨೦೦೯) ಬರೆದಿರುವ **'ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ'** ಎಂಬ ಮಹಾಪ್ರಬಂಧದಲ್ಲಿ ಸಾರ್ವಜನಿಕ ವಲಯದಲ್ಲಿ ನಡೆಯುವ ದೌರ್ಜನ್ಯದ ಬಗ್ಗೆ ಧಾರ್ಮಿಕ ವಲಯ, ಆರೋಗ್ಯವಲಯ, ಶೈಕ್ಷಣಿಕ ವಲಯ, ಆರ್ಥಿಕವಲಯ, ಉದ್ಯೋಗವಲಯ, ರಾಜಕೀಯವಲಯದಲ್ಲಿ ಮಹಿಳೆಯರ ವಿರುದ್ಧ ದೌರ್ಜನ್ಯವು ಹೇಗೆ ನಡೆಯುತ್ತದೆಂದು ಇದರಲ್ಲಿ ತಿಳಿಸಿದ್ದಾರೆ. ಕೌಟುಂಬಿಕ ಹಿಂಸೆ ತಡೆ ಕಾಯ್ದೆ, ಸ್ತ್ರೀವಾದಿ ವಿಶ್ಲೇಷಣೆ ಹಾಗೂ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ ಎರಡು ಕಾಯ್ದೆಗಳ ಮುಖಾಮುಖಿಯನ್ನಾಗಿಸಿದೆ. ಇಲ್ಲಿ ಮಹಿಳಾ ಪೋಲಿಸ್ ಪೇದೆ ಹಾಗೂ ಮಹಿಳಾ ಗ್ರಾಮ ಪಂಚಾಯ್ತಿ ಅಧ್ಯಕ್ಷರುಗಳನ್ನು ಕುರಿತು ಇವರುಗಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಈ ಮಹಾ ಪ್ರಬಂಧದಲ್ಲಿ ತಿಳಿಸಿದ್ದಾರೆ.

೨. ಸುಮಲತ ಅಕಳವಾಡಿ ರವರು (೨೦೦೯) ಬರೆದಿರುವ **'ಮಹಿಳೆಯ ಮೇಲಿನ ದೌರ್ಜನ್ಯ ಹಿನ್ನೆಲೆಯಲ್ಲಿ ಮಹಿಳಾ ಅಪರಾಧಗಳ ವ್ಯಾಖ್ಯೆ ಮತ್ತು ಶಿಕ್ಷೆ'** ಎಂಬ ಮಹಾಪ್ರಬಂಧದಲ್ಲಿ ಅಪರಾಧ ಮತ್ತು ಶಾಸ್ತ್ರೀಯ ಚಿಂತನೆಗಳು, ಮಹಿಳೆ ಮತ್ತು ಅಪರಾಧ ಸಿದ್ಧಾಂತಗಳು, ಮಹಿಳಾ ಲೈಂಗಿಕತೆ ಅಪರಾಧ ಮತ್ತು ಸಾಮಾಜಿಕ

ಸಂದರ್ಭ ಮಹಿಳಾ ಸ್ಥಾನಮಾನದ ಸ್ಥಿತ್ಯಂತರ, ಮಹಿಳಾ ಲೈಂಗಿಕತೆ ಪುರುಷಾಧೀನಗೊಂಡ ಬಗ್ಗೆ ಸಾಮಾಜಿಕ ಮೌಲ್ಯ ಮತ್ತು ಮಹಿಳೆ ಬಗ್ಗೆ ತಿಳಿಸಿದ್ದಾರೆ. ಕೇಂದ್ರ ಕಾರಗೃಹ ಖೈದಿಗಳ ಪ್ರಕರಣ ಅಧ್ಯಯನ, ಸಾಮಾಜಿಕ ಅಪರಾಧಗಳ ಪ್ರಕರಣ, ಪ್ರಕಟಿತ ಪ್ರಸಾರಿತ ಪ್ರಕರಣಗಳ ಅಧ್ಯಯನವನ್ನು ಈ ಮಹಾ ಪ್ರಬಂಧದಲ್ಲಿ ತಿಳಿಸಿದ್ದಾರೆ.

೩. ಟಿ ಅಕ್ಕಮ್ಮ ರವರು (೨೦೧೦) ಬರೆದಿರುವ '**ಅಸಂಘಟಿತ ವಲಯುದಲ್ಲಿನ ಮಹಿಳಾ ಕೆಲಸಗಾರರು: ಒಂದು ಸ್ತ್ರೀವಾದಿ ಅಧ್ಯಯನ**' ಎಂಬ ಮಹಾಪ್ರಬಂಧದಲ್ಲಿ ಅಸಂಘಟಿತವಲಯದ ಸ್ವರೂಪ, ಅಸಂಘಟಿತ ವಲಯದ ಮಹಿಳೆ ಮತ್ತು ದುಡಿಮೆ, ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರ ಬಗ್ಗೆ ತಿಳಿಸಿದ್ದಾರೆ. ಗಾರ್ಮೆಂಟ್ಸ್ ಕಾರ್ಮಿಕರ ಸ್ಥಿತಿಗತಿಗಳು ಹಾಗೂ ಸಮಸ್ಯೆಗಳು, ಸಾಮಾಜಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಪೌಷ್ಟಿಕ ಆಹಾರ ಹಾಗೂ ಸಂತೋಷತೃಪ್ತಿ ಸಮಸ್ಯೆ, ಆರ್ಥಿಕ ಸ್ಥಿತಿಗತಿ, ಒಟ್ಟಾರೆ ಗಾರ್ಮೆಂಟ್ಸ್ ಮಹಿಳೆಯರ ಸಮಸ್ಯೆಗಳ ಸಂಪೂರ್ಣ ಚಿತ್ರವನ್ನು ಈ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ.

೪. ಕಲಾವತಿ ರವರು (೨೦೦೭) ಬರೆದಿರುವ '**ಜಾಹಿರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ**' ಎಂಬ ಮಹಾ ಪ್ರಬಂಧದಲ್ಲಿ ಜಾಹಿರಾತುಗಳ ಸ್ವರೂಪ, ವಿಶ್ಲೇಷಣೆ, ಜಾಹಿರಾತುಗಳಲ್ಲಿ ಲಿಂಗಾಧಾರಿತ ಪಾತ್ರಗಳ ಬಗ್ಗೆ ಹಾಗೂ ಪ್ರತಿನಿಧೀಕರಣಗೊಂಡಿರುವ ಕುಟುಂಬ ಜಾಹಿರಾತುಗಳ ಬಗ್ಗೆ ತಿಳಿಸಿದ್ದಾರೆ. ಪ್ರತಿನಿಧೀಕರಣ ಗೊಂಡಿರುವ ಕುಟುಂಬಗಳ ಪಾತ್ರಗಳು, ಹೆಂಡತಿಯ ಪ್ರತಿನಿಧೀಕರಣ, ತಾಯಿಯ ಪ್ರತಿನಿಧೀಕರಣ, ಗೃಹಿಣಿಯ ಪ್ರತಿನಿಧೀಕರಣ. ಜಾಹಿರಾತುಗಳ ಪ್ರತಿನಿಧೀಕರಣಗೊಂಡಿರುವ ಕೌಟುಂಬಿಕೇತರ ಪಾತ್ರಗಳ ಬಗ್ಗೆ ಸೌಂದರ್ಯ ಪ್ರತಿನಿಧೀಕರಣ, ಯುವತಿಯ ಪ್ರತಿನಿಧೀಕರಣ, ಉದ್ಯೋಗಸ್ಥೆ ಪ್ರತಿನಿಧೀಕರಣ, ಈಗೆಯೇ ಮಹಿಳೆಯ ಮೇಲೆ ಒತ್ತಡ ಹಾಕಿ ಹೀಗೆಯೇ ತಾವು ಬದುಕಬೇಕು ಹಾಗೂ ಪ್ರತಿನಿಧೀಸ ಬೇಕೆಂದು ವ್ಯವಸ್ಥೆಯು ಅವಳ ಮೇಲೆ ಒತ್ತಾಯಪೂರ್ವಕವಾಗಿ ಪ್ರತಿನಿಧೀಸುತ್ತಿರುವ ದೌರ್ಜನ್ಯವನ್ನು ಈ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ.

೫. ಕೆ ಎಸ್ ಗೀತಾ ರವರು (೨೦೦೩) ಬರೆದಿರುವ '**ಮಹಿಳೆ, ಕಾನೂನು ಮತ್ತು ನ್ಯಾಯ**' ಎಂಬ ಮಹಾ ಪ್ರಬಂಧದಲ್ಲಿ ಸಂವಿಧಾನ ಸಮಾನತೆ ಮತ್ತು ತಾರತಮ್ಯ, ವಿವಾಹ ಸಂಬಂಧ ಮತ್ತು ಕ್ರಿಮಿನಲ್ ಕಾನೂನುಗಳು (ವಿವಾಹ ವಿಚ್ಛೇದನ, ಪರಿತ್ಯಾಗ, ಜೀವನಾಂಶ, ದತ್ತಕ ಮತ್ತು ಪೋಷಕತ್ವ) ಕ್ರಿಮಿನಲ್ ಕಾನೂನುಗಳು, ವರದಕ್ಷಿಣೆ, ಕೌಟುಂಬಿಕ ಕಿರುಕುಳ, ಅತ್ಯಾಚಾರ ಇತರೆ ದೌರ್ಜನ್ಯದ ವಿರುದ್ಧದ ಕಾನೂನುಗಳು ಹಾಗೂ ಮಹಿಳೆಯರ ಆಸ್ತಿಯ ಹಕ್ಕು ಮತ್ತು ಲಿಂಗ ತಾರತಮ್ಯ, ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿ, ವಾರಸುದಾರಿಕೆ ಹಾಗೂ ಮಹಿಳಾ ಪರ ಕಾನೂನುಗಳನ್ನು ಮಹಿಳೆಯರು ಹೇಗೆ ಬಳಸಿಕೊಳ್ಳಬೇಕೆಂದು ಈ ಮಹಾಪ್ರಬಂಧದಲ್ಲಿ ತಿಳಿಸಿದ್ದಾರೆ.

೬. ಉಮೇಶ ಬಸಪ್ಪ ಕಾತರಕಿ ರವರು (೨೦೦೭) ಬರೆದಿರುವ '**ಬಿಸರಹಳ್ಳಿಯ ದೇವದಾಸಿ ಪದ್ಧತಿ**' ಎಂಬ ಕಿರುಪ್ರಬಂಧದಲ್ಲಿ ದೇವದಾಸಿ ಪದ್ಧತಿಯ ಸ್ತ್ರೀವಾದಿ ನಿರ್ವಚನ, ಪಾತರದವರು, ದೇವದಾಸಿಯರು,

ಜೋಗತಿಯರು, ವೇಶ್ಯೆಯರ ಬಗ್ಗೆ ವಿವರಣೆ ಹಾಗೂ ದೇವದಾಸಿ ಪದ್ದತಿಗೂ ಪಿತೃ ಪ್ರಧಾನ ವ್ಯವಸ್ಥೆಗೂ ಇರುವ ಸಂಬಂಧ ಹಾಗೂ ದೇವದಾಸಿ ಪದ್ಧತಿಗೆ ಇಳಿಸದವರು ಯಾರು? ಅವರ ಬದುಕಿನ ಬಗ್ಗೆ ವಿವರಿಸಿದ್ದಾರೆ. ದೇವದಾಸಿಯರ ಬದುಕು ಹೇಗಿದೆ ಹಾಗೂ ಅವರ ಪುನರ್ವಸತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಮತ್ತು ಈ ಪದ್ಧತಿಯು ಬದಲಾದ ಸಮಯದಲ್ಲಿ ಸ್ಥಿತಿ ಹೇಗಿದೆ ಎಂದು ಈ ಪ್ರಬಂಧದಲ್ಲಿ ತಿಳಿಸಿದ್ದಾರೆ.

೭. ಶಿವನಂದಚಾರ್ ಬಡಿಗೇರ್ ರವರು (೨೦೦೭) ಬರೆದಿರುವ **'ಕೌಟುಂಬಿಕ ಹಿಂಸೆ ಮತ್ತು ಮಹಿಳೆ'** ಎಂಬ ಕಿರುಪ್ರಬಂಧದಲ್ಲಿ ಕೌಟುಂಬಿಕ ಹಿಂಸೆ ಎಂದರೇನು? ಅದರ ಸ್ವರೂಪ ಹೇಗಿದೆ? ದೈಹಿಕ ಹಿಂಸೆ, ಮಾನಸಿಕ ಹಿಂಸೆ, ಲೈಂಗಿಕ ಹಿಂಸೆ, ಆರ್ಥಿಕ ಹಿಂಸೆ, ಕೌಟುಂಬಿಕ ಹಿಂಸೆಗೆ ಕಾರಣಗಳು ಹಾಗೂ ಕೌಟುಂಬಿಕ ಹಿಂಸೆ ಇದರ ಪರಿಣಾಮಗಳನ್ನು ಈ ಪ್ರಬಂಧದಲ್ಲಿ ವಿವರಿಸಲಾಗಿದೆ.

೮. ಸುರೇಶ್‌ಗೌಡ ಎಚ್ ರವರು (೨೦೦೭) ಬರೆದಿರುವ **'ವರದಕ್ಷಿಣೆ ಒಂದು ಸ್ತ್ರೀವಾದಿ ಅಧ್ಯಯನ'** ಎಂಬ ಕಿರುಪ್ರಬಂಧಥಲ್ಲಿ ವರದಕ್ಷಿಣೆ ಹೇಗೆ ಚಾರಿತ್ರಿಕವಾಗಿ ಬೆಳೆದು ಬಂದಿದೆ, ವರದಕ್ಷಿಣೆಯ ನಿಷೇಧ ಕಾಯ್ದೆಯ ಬಗ್ಗೆ ಹಾಗೂ ಪ್ರಕರಣಗಳ ಪರಿಶೀಲನೆ, ವರದಕ್ಷಿಣೆಯ ಪರಿಣಾಮಗಳನ್ನು ಸ್ತ್ರೀವಾದಿ ಚಿಂತನೆಯಲ್ಲಿ ವರದಕ್ಷಿಣೆಯ ಬಗ್ಗೆ ಈ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

೯. ಬಾಣಗಾರ ಗೌರಮ್ಮನವರು (೨೦೦೭) ಬರೆದಿರುವ **'ಮಹಿಳಾ ಕಂಡಕ್ಟರ್‌ಗಳ ಸ್ಥಿತಿಗತಿ ಹಾಗೂ ಸಮಸ್ಯೆಗಳು'** ಎಂಬ ಕಿರು ಪ್ರಬಂಧದಲ್ಲಿ ಸಾರಿಗೆ ಸಂಸ್ಥೆಯಲ್ಲಿ ಲಿಂಗಾಧಾರಿತ ಕಾರ್ಯ ಸ್ವರೂಪ, ನಿರ್ವಾಹಕಿಯರ ಬಗ್ಗೆ ಸಾಮಾಜಿಕ ದೃಷ್ಟಿಕೋನ, ಮಹಿಳಾ ಕಂಡಕ್ಟರ್‌ಗಳು ಎದುರಿಸುತ್ತಿರುವ ಸಮಸ್ಯೆಗಳು, ಪ್ರಯಾಣಿಕರಿಂದ ಲೈಂಗಿಕ ಸಮಸ್ಯೆ, ಮಾನಸಿಕ ಕಿರುಕುಳ, ಸಹಕಾರದ ಕೊರತೆ ಹಾಗೂ ವಿವಾಹಿತ ನಿರ್ವಾಹಕಿಯರ ಸಮಸ್ಯೆಗಳು ಉದಾಹರಣೆಗೆ ಆರೋಗ್ಯ ಸಮಸ್ಯೆ, ಬಿಡುವಿನ ಸಮಸ್ಯೆ, ಮೂಲಭೂತ ಸೌಲಭ್ಯದ ಸಮಸ್ಯೆ ಹಾಗೂ ಪುರುಷ ಚಾಲಕರ ಹಾಗೂ ಟ್ರಾಫಿಕ್ ಇನ್‌ಸ್ಪೆಕ್ಟರ್ ಇವರುಗಳಿಂದ ಆಗುವ ದೌರ್ಜನ್ಯದ ಜೊತೆಗೆ ವೈವಾಹಿಕ ಸಮಸ್ಯೆ, ಆರೋಗ್ಯ ಸಮಸ್ಯೆಗಳ ಬಗ್ಗೆ ವಿವರವಾಗಿ ಈ ಪ್ರಬಂಧದಲ್ಲಿ ತಿಳಿಸಿದ್ದಾರೆ.

೧೦. ಪಂಪಾಪತಿ ಎನ್ ಎಲ್(೨೦೧೦) ರವರು ಬರೆದಿರುವ **'ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ: ೨೦೦೫ ಕಾರ್ಯಗತಗೊಳಿಸುವಲ್ಲಿ ಮಹಿಳೆಯರ ಅರಿವಿನ ಪಾತ್ರ'** ಎಂಬ ಕಿರುಪ್ರಬಂಧದಲ್ಲಿ ಕೌಟುಂಬಿಕ ಹಿಂಸೆ ಮತ್ತು ಮಹಿಳೆ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ ಹಿನ್ನಲೆ ಮತ್ತು ವಿವರಗಳನ್ನು ತಿಳಿಸಿದ್ದಾರೆ. ಕೌಟುಂಬಿಕ ಹಿಂಸೆಗೆ ಸಂಬಂಧಿಸಿದ ಪ್ರಕರಣಗಳು ಹಾಗೂ ಕಾಯ್ದೆಯ ಅರಿವಿನ ಅಗತ್ಯತೆಯನ್ನು ಫಲಾನುಭವಿಗಳನ್ನು ಅನುಲಕ್ಷಿಸಿ ಹಾಗೂ ಮಸೂದೆಯನ್ನು ಕಾರ್ಯಗತಗೊಳಿ ಸುವವರನ್ನು

ಅನುಲಕ್ಷಿಸಿ ಕಾಯ್ದೆಯ ಅನುಷ್ಠಾನದಲ್ಲಿನ ಸಮಸ್ಯೆಗಳು ಹಾಗೂ ಸಾಧ್ಯತೆಗಳ ಬಗ್ಗೆ ಈ ಪ್ರಬಂಧದಲ್ಲಿ ವಿವರಿಸಿದ್ದಾರೆ.

ದಿನಪತ್ರಿಕೆಗಳಲ್ಲಿನ ಸಾಹಿತ್ಯ ಸಮೀಕ್ಷೆ

ಮಹಿಳೆಯರ ವಿರುದ್ಧದ ಅಪರಾಧಗಳು ದಿನೇ ದಿನೇ ಅಧಿಕಗೊಳ್ಳುತ್ತಿವೆ. ಅನೇಕ ಕಾಯ್ದೆ ಕಾನೂನುಗಳು ಇದ್ದರೂ ಅವುಗಳನ್ನು ತಡೆಯುವಲ್ಲಿ ವಿಫಲವಾಗಿವೆಂಬುದನ್ನು ಅಪರಾಧ ಪ್ರಕರಣಗಳು ಸಾಬೀತು ಪಡಿಸುತ್ತವೆ. ಮಹಿಳೆಯರ ಮೇಲಿನ ಅಪರಾಧಗಳಲ್ಲಿ ಗಂಡ ಮತ್ತು ಹತ್ತಿರದ ಸಂಬಂಧಿಕರು ಮುಖ್ಯ ಅಪರಾಧಿಗಳು ಎಂಬುದು ಸಾಬೀತಾಗಿದೆ. ೧೯೯೦ರ ದಶಕದಲ್ಲಿ ಗಂಡ ಮತ್ತು ಹತ್ತಿರದ ಸಂಬಂಧಿಗಳಿಂದ ಮಹಿಳೆಯರ ಮೇಲಾಗುವ ಅಪರಾಧಗಳು ಹೆಚ್ಚಿದೆ ಎಂದು ಅಧ್ಯಯನದ ವರದಿಯೊಂದು ಹೇಳಿದೆ.

೧೯೯೬ ರ ದಶಕದಲ್ಲಿ ಗಂಡ ಮತ್ತು ಸಂಬಂಧಿಗಳಿಂದ ಮಹಿಳೆಯರು ಅನುಭವಿಸಿದ ಕಿರುಕುಳದ ಘಟನೆ ಶೇಕಡ ೨೮.೬ರಷ್ಟು ಎಂದು ದಾಖಲಾಗಿದೆ. ಯೋಜನಾ ಆಯೋಗದ ಶ್ರೀ ರಾಜಕುಮಾರ್ ನಡೆಸಿದ ಅಧ್ಯಯನದ ಪ್ರಕಾರ ಮಹಿಳೆಯರ ಮೇಲಿನ ಹಿಂಸೆಯೂ ವರ್ಷಕ್ಕೆ ಶೇಕಡ ೧೪.೦೬ ಹೆಚ್ಚುತ್ತಿದೆ. ಗಂಡ ಮತ್ತು ಸಂಬಂಧಿಕರು ನಡೆಸುವ ಅಪರಾಧಗಳಲ್ಲೊಂದಾದ ಲೈಂಗಿಕ ಕಿರುಕುಳವು ೧೯೯೬ ರಲ್ಲಿ ಶೇಕಡ ೨೪.೦೯ ರಷ್ಟು ದಾಖಲಾಗಿದೆ. ಅಪಹರಣದಂತಹ ಪ್ರಕರಣಗಳು ವರ್ಷಕ್ಕೆ ಶೇಕಡ ೧.೨ ಹೆಚ್ಚಾಗುತ್ತಿದೆ. ಅತ್ಯಾಚಾರದ ಸಂಖ್ಯೆ ಶೀಘ್ರವಾಗಿ ಹೆಚ್ಚುತ್ತಿದೆ. ೧೯೯೦-೯೬ ರ ಅವಧಿಯಲ್ಲಿ ಅತ್ಯಾಚಾರದ ಪ್ರಕರಣಗಳು ೯೫೧೮ ರಿಂದ ೧೨೬೬೧ ಕ್ಕೆ ಏರಿದ್ದು ಶೇಕಡ ೩೩ ರಷ್ಟು ಹೆಚ್ಚಾಗಿದೆ. ವರ್ಷಕ್ಕೆ ಶೇಕಡ ೪.೮ ರಂತೆ ಅತ್ಯಾಚಾರದ ಪ್ರಕರಣಗಳು ಹೆಚ್ಚುತ್ತಿವೆ.

ಲೈಂಗಿಕ ಕಿರುಕುಳ ವರ್ಷಕ್ಕೆ ಶೇಕಡ ೫.೯ ರಷ್ಟು ಹೆಚ್ಚಾಗುತ್ತಿವೆ. ವರದಕ್ಷಿಣೆ ಸಾವಿನ ಸಂಖ್ಯೆ, ೧೯೯೧ ರಲ್ಲಿ ೪,೮೬೩ ಇದ್ದದು ೧೯೯೩ ರಲ್ಲಿ ೫೮೧೭ ಕ್ಕೆ ಏರಿದೆ. ಅಪರಾಧಗಳು ಉತ್ತರಪ್ರದೇಶದಲ್ಲಿ ಶೇಕಡ ೧೪.೭ ರಷ್ಟು, ರಾಜಸ್ಥಾನದಲ್ಲಿ ಶೇಕಡ ೧೪.೧ ರಷ್ಟು, ಮಧ್ಯಪ್ರದೇಶದಲ್ಲಿ ಶೇಕಡ ೧೪.೮ ರಷ್ಟು ಮಹಾರಾಷ್ಟ್ರದಲ್ಲಿ ಶೇಕಡ ೮ ರಷ್ಟು ಸಂಭವಿಸಿವೆ ಎಂದು ವರದಿಗಳು ದಾಖಲಾಗಿವೆ.

ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುವ ಮಾರ್ಚ್ ತಿಂಗಳೊಂದರಲ್ಲಿ ಸ್ಥಳೀಯವಾಗಿ ಮಹಿಳೆಯರ ವಿರುದ್ಧದ ಅಪರಾಧಗಳನ್ನು ಕುರಿತು ಸೂಕ್ಷ್ಮ ಮಟ್ಟದ ಅಧ್ಯಯನ ಮಾಡಲು ಸ್ಥಳಿಯ ದಿನಪತ್ರಿಕೆಯಾದ ಪ್ರಜಾವಾಣಿಯಲ್ಲಿ ಅಧ್ಯಯನ ಮಾಡಿದಾಗ ಅವುಗಳಲ್ಲಿ ಅನೇಕ ಬಗೆಯ ಅಪರಾಧಗಳು ವರದಿಯಾಗಿರುವುದು ಕಂಡು ಬಂದಿದೆ.

ವರದಕ್ಷಿಣೆ

ಸಮಕಾಲೀನ ಭಾರತೀಯ ಸಮಾಜದ ಬರ್ಬರ ಕೃತ್ಯಗಳಲ್ಲಿ ವರದಕ್ಷಿಣೆ ಒಂದಾಗಿದೆ. ವಿವಾಹದ ಸಮಯದಲ್ಲಿ ಮಗಳ ಸ್ವಂತ ಉಪಯೋಗಕ್ಕಾಗಿ ಆಕೆಯ ತಂದೆ-ತಾಯಿಗಳು ನೀಡುತ್ತಿದ್ದ 'ಸ್ತ್ರೀಧನ' ಅಥವಾ ವರನ ಕುಟುಂಬದವರು ವಧುವಿನ ಕುಟುಂಬದವರಿಗೆ ಪರಿಹಾರ ರೂಪವಾಗಿ ನೀಡುತ್ತಿದ್ದ ವಧುದಕ್ಷಿಣೆ ಈ

ಎರಡು ಪದ್ಧತಿಗಳು ಕ್ರಮೇಣ ಮಾಯವಾಗಿ ಇಂದು ವರದಕ್ಷಿಣೆ ಎಂಬ ದುಷ್ಟ ಪದ್ಧತಿ ಹೆಡೆಯೆತ್ತಿ ನಿಂತಿದೆ. ಆ ಮದುವೆಯನ್ನು ಮಾರುಕಟ್ಟೆಯನ್ನಾಗಿ ಪರಿವರ್ತಿಸಿದ ವರದಕ್ಷಿಣೆ ವಿವಾಹ ಪೂರ್ವದಲ್ಲಿ, ವಿವಾಹ ಸಮಯದಲ್ಲಿ ಮತ್ತು ವಿವಾಹವಾದ ನಂತರವೂ ವಧುವಿನ ಕುಟುಂಬದವರು ವರನಿಗೆ ನೀಡುವ ನಗದು ಅಥವಾ ವಸ್ತು ರೂಪದ ಕಾಣಿಕೆ. ತನ್ನ ಮಗಳನ್ನು ಮದುವೆಯಾದರೆ ಸಾಕು ಎನ್ನುವ ಪೋಷಕರು ವರನ ಕುಟುಂಬದವರ ಸಮಸ್ತ ಬೇಡಿಕೆಗಳನ್ನು ಈಡೇರಿಸಲು ಸಿದ್ಧರಿರುತ್ತಾರೆ. ಆತ್ಮಾಭಿಮಾನವಿಲ್ಲದೆ ಮದುವೆಯೆಂಬ ವ್ಯಾಪಾರದಲ್ಲಿ ತನ್ನತನವನ್ನು ಕಳೆದುಕೊಂಡಿರುವ ಈ ಪುರುಷನನ್ನು ಸಮಾಜವು ಧಿಕ್ಕರಿಸುವ ಬದಲು ಗೌರವಿಸುತ್ತದೆ. ವರದಕ್ಷಿಣೆ ವಿವಾಹ ಸಮಯದಲ್ಲಿ ಮಾತ್ರ ಬೇಡುವ ಅಥವಾ ಕೊಡುವ ಕಾಣಿಕೆಯಲ್ಲಿ ವಿವಾಹದ ನಂತರವೂ ವರದಕ್ಷಿಣೆಯ ಬೇಡಿಕೆಗಳು ಮುಂದುವರಿಯುತ್ತವೆ. ಸಮಕಾಲೀನ ಸಮಾಜದಲ್ಲಿ ಶರವೇಗದಲ್ಲಿ ವ್ಯಾಪಾರೀಕೃತ ಸಂಸ್ಕೃತಿಯಲ್ಲಿ ವರದಕ್ಷಿಣೆಯ ರೂಪದಲ್ಲಿ ನಗದು ಹಣ, ಚಿನ್ನದ ಒಡವೆಯ ಹಣ, ವಾಹನ, ನಿವೇಶನ ಅಥವಾ ಮನೆ, ವಿದೇಶಿ ಪ್ರಯಾಣ ಅಥವಾ ಗೃಹಲಂಕಾರ ಸಾಧನಗಳು ಹೀಗೆ ಏನನ್ನು ಬೇಕಾದರೂ ಅಳಿಯನಾದವನು ಅಥವಾ ಆಗುವವನು ಕೇಳಬಹುದಾಗಿದೆ.

ತಾವು ಬೇಡಿದ ಹಣ ಅಥವಾ ವಸ್ತುಗಳನ್ನು ತರಬೇಕೆಂಬ ಒತ್ತಾಯದ ಜೊತೆ ಜೊತೆಗೆ ಒರ್ವ ಸ್ತ್ರೀಯನ್ನು ದೈಹಿಕ ಹಾಗೂ ಮಾನಸಿಕ ಒಂದೆಡೆ ವರದಕ್ಷಿಣೆ ಸಾವೊಂದು ಸಂಭವಿಸುತ್ತದೆ. ಇಂದಿರಾ ಆರ್ ೨೨೦೨:೩೩ ಎಂಬ ಮಾಹಿತಿ ವರದಕ್ಷಿಣೆ ಸಂಬಂಧಿ ಕ್ರೌರ್ಯ ಯಾವ ಯಾವ ಪ್ರಮಾಣವನ್ನು ತಲುಪಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ವರದಕ್ಷಿಣೆಗಾಗಿ ಹೆಣ್ಣನ್ನು ಹೊಡೆಯುವುದು, ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುವುದು, ಆಕೆಯ ದೇಹ ಮತ್ತು ಮನಸ್ಸುಗಳನ್ನು ಘಾಸಿಗೊಳಿಸುವುದು, ಇದೆಲ್ಲ ವರದಕ್ಷಿಣೆ ಸಂಬಂಧಿ ಸಾವಿನ ಪ್ರಕರಣಗಳಾದರೂ ವೃತ್ತಪತ್ರಿಕೆಗಳಲ್ಲಿ ವರದಿಯಾಗಿರುವುದನ್ನ ನೋಡುವುದಾದರೆ ಕಾನೂನುಪಾಲನಾ ವ್ಯವಸ್ಥೆಯ ಪರಿಣಾಮ ತತ್ವವನ್ನು ಕುರಿತಂತೆ ತೀವ್ರಸ್ವರೂಪದ ಅನುಮಾನಗಳು ವ್ಯಕ್ತವಾಗುತ್ತವೆ. ವರದಕ್ಷಿಣೆಯ ಕಾರಣದಿಂದಾಗಿ ಅನೇಕ ಮಹಿಳೆಯರ ಜೀವನ ಕೊಲೆ ಮತ್ತು ಆತ್ಮಹತ್ಯೆಗಳಂತಹ ಅಸಹಜ ಅಮಾನವೀಯ ಅಂತ್ಯದಲ್ಲಿ ಪರ್ಯಾವಸನಗೊಳ್ಳುತ್ತಿವೆ. ಆದರೆ, ಇವುಗಳ ಬಹುಪಾಲು ಪ್ರಕರಣಗಳು ಬೆಳಕಿಗೆ ಬರುವ ಮುನ್ನ ಅಥವಾ ಬಂದ ತಾರುಣ್ಯದಲ್ಲಿ ಮುಚ್ಚಿಹೋಗುತ್ತವೆ.

ಮಾನವೀಯ ಮೌಲ್ಯಗಳನ್ನು ಮರೆತು ತಮ್ಮ ಮನೆಗೆ ಸೊಸೆಯಗಿ ಬಂದ ಹೆಣ್ಣುಮಗಳ ಮೇಲೆ ಅಮಾನುಷವಾಗಿ ಹಲ್ಲೆಯನ್ನು ನಡೆಸಿ ಅವಳ ಸಾವಿಗೆ ಕಾರಣವಾಗುತ್ತಿರುವ ಗಂಡು ಮಕ್ಕಳ ತಂದೆ–ತಾಯಂದಿರ ಸಂಖ್ಯೆ ದಿನೆ ದಿನೇ ವೃದ್ಧಿಸುತ್ತಿರುವುದು ಮಾನವೀಯತೆಯ ಕೊರತೆಗೆ ಸಾಕ್ಷಿಯಾಗಿದೆ. ಕರ್ನಾಟಕ ರಾಜ್ಯವೊಂದರಲ್ಲೆ ೧೯೮೨ ರಿಂದ ೧೯೮೪ ರ ಎರಡು ವರ್ಷಗಳ ಅವಧಿಯಲ್ಲಿ ಈ ವರದಕ್ಷಿಣೆಯ ಸಾವು ಶೇಕಡ ೩೦ ರಷ್ಟು ಹೆಚ್ಚಾಗಿದೆ ಎಂದು ತಿಳಿದುಬಂದಿದೆ. ಕೇಂದ್ರ ಗೃಹಖಾತೆಯ ವರದಿಯ ಪ್ರಕಾರ ದೇಶಾದ್ಯಂತ ೧೦೨ ನಿಮಿಷಕ್ಕೊಂದು ವರದಕ್ಷಿಣೆ ಸಾವು ಸಂಭವಿಸುತ್ತದೆಂದು ತಿಳಿಸುತ್ತಿದೆ. ಹಾಗೆಯೇ ೨೦೧೧ ರ

ಜನವರಿಯಿಂದ ಏಪ್ರಿಲ್ ತಿಂಗಳ ಅವಧಿಯಲ್ಲಿ ಸ್ಥಳಿಯ ಪತ್ರಿಕೆಯಲ್ಲಿ ವರದಕ್ಷಿಣೆ ಕಿರುಕುಳದಿಂದ ಸಂಭವಿಸಿರುವ ಸಾವುಗಳು ೧೬ ಪ್ರಕರಣಗಳು ವರದಿಯಾಗಿದ್ದು ಗಂಡ ಹಾಗೂ ಆತನ ಸಂಬಂಧಿಕರು ಈ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ಇವರುಗಳ ಕಿರುಕುಳವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ.

ದಿನ ಪತ್ರಿಕೆಯಲ್ಲಿನ ವರದಕ್ಷಿಣೆ ಪ್ರಕರಣಗಳು

- ದಿನಾಂಕ ೧೬.೦೧.೨೦೧೧ ರಂದು ರೂಪಶ್ರೀ (೨೫) ಅವರ ಪತಿ ಕಿರಣ್ ಹಣ ತರುವಂತೆ ಕಿರುಕುಳ ನೀಡುತ್ತಿದ್ದ. ವರದಕ್ಷಿಣೆ ಕಿರುಕುಳದಿಂದ ಮನನೊಂದು ಮನೆಯಲ್ಲೆ ಆತ್ಮಹತ್ಯೆ ಮಾಡಿಕೊಂಡ ಘಟನೆ ಬಸವೇಶ್ವರನಗರದಿಂದ ವರದಿಯಾಗಿದೆ.
- ದಿನಾಂಕ ೧೮.೦೧.೨೦೧೧ ರಂದು ಮಂಜುಳಾ (೨೧) ಅವರ ಪತಿ ರಮೇಶ್ ತವರು ಮನೆಯಿಂದ ಹಣ ತರುವಂತೆ ಹೆಂಡತಿಗೆ ಪೀಡಿಸುತ್ತಿದ್ದ. ಇದರಿಂದ ಮನನೊಂದ ಮಂಜುಳಾ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.
- ದಿನಾಂಕ: ೨೧.೦೧.೨೦೧೧ ರಂದು ಅಶೋಕ್‌ಕುಮಾರ್‌ವರು ಅವರ ಹೆಂಡತಿಗೆ ಕಿರುಕುಳ ನೀಡುತ್ತಿದ್ದ. ಸುನೀತ (೨೨) ವರದಕ್ಷಿಣೆ ಕಿರುಕುಳ ತಾಳಲಾರದೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಧಾರುಣ ಘಟನೆ ಗಂಗಮ್ಮನ ಗುಡಿ ಸಮೀಪದ ಕಮ್ಮಗೊಂಡನಹಳ್ಳಿಯಿಂದ ವರದಿಯಾಗಿದೆ.
- ದಿನಾಂಕ: ೨೮.೦೧.೨೦೧೧ ರಂದು ನಂದೀಶ್ ಎಂಬುವವರ ಪತ್ನಿ ಸವಿತಾ (೨೬) ವರದಕ್ಷಿಣೆ ಕಿರುಕುಳದಿಂದ ಮನನೊಂದ್ನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಚಂದ್ರಾಲೇಔಟ್ ನಿಂದ ವರದಿಯಾಗಿದೆ.
- ದಿನಾಂಕ: ೩೧.೦೧.೨೦೧೧ ರಂದು ಹೆಗ್ಗನಹಳ್ಳಿಯ ಶಿವಾನಂದ ನಗರದಿಂದ ವರದಿಯಾಗಿದೆ. ಗೌರಮ್ಮ (೨೫) ಅವರ ಪತಿ ಶಿವಕುಮಾರ್ ವರದಕ್ಷಿಣೆ ಹಣ ತರಲು ನಿರಾಕರಿಸಿದ ಪತ್ನಿಗೆ ಬೆಂಕಿ ಹಚ್ಚಿ ಕೊಲೆ ಮಾಡಿದ್ದಾರೆಂದು ವರದಿಯಾಗಿದೆ.
- ದಿನಾಂಕ: ೦೫.೦೨.೨೦೧೧ ರಂದು ಸೋಮಶೆಟ್ಟಿಹಳ್ಳಿಯಿಂದ ವರದಿಯಾಗಿದೆ. ಶಿವಶಂಕರ್ ಜೊತೆ ೫ ವರ್ಷದ ಹಿಂದೆ ಮಮತ ಅವರ ವಿವಾಹವಾಗಿತ್ತು. ವರದಕ್ಷಿಣೆ ತರುವಂತೆ ಆತನ ಪತ್ನಿಗೆ ಪೀಡಿಸುತ್ತಿದ್ದ, ಇದರಿಂದ ಮನನೊಂದು ಅವಳು ಮನೆಯಲ್ಲಿ ನೇಣು ಹಾಕಿಕೊಂಡಿದ್ದಾಳೆ.
- ದಿನಾಂಕ: ೦೮.೦೨.೨೦೧೧ ರಂದು ಪತಿ ಉಮಾಶಂಕರ್ ಅವರ ಪತ್ನಿ ಶ್ವೇತಾರವರಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದು, ಇದರಿಂದ ಶ್ವೇತಾ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಯಶವಂತಪುರದಿಂದ ವರದಿಯಾಗಿದೆ.

- ದಿನಾಂಕ: ೨೫.೦೨.೨೦೧೧ ರಂದು ಕೆ.ಆರ್.ಪುರದ ಶಕ್ತಿನಗರದಿಂದ ವರದಿಯಾಗಿದೆ. ರಾಮಕೃಷ್ಣ ಎಂಬುವರು ಅನುಷಾ (೨೫) ರವರನ್ನು ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದರು. ಅನುಷಾಗೆ ಮಾನಸಿಕ ಕಿರುಕುಳ ನೀಡುತ್ತಿದ್ದನು ಅಲ್ಲದೆ ತವರು ಮನೆಯಿಂದ ಹಣ ತರುವಂತೆ ಒತ್ತಾಯಿಸುತ್ತಿದ್ದನು. ಇದರಿಂದ ಬೇಸರಗೊಂಡ ಅನುಷಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

- ದಿನಾಂಕ: ೧೦.೦೩.೨೦೧೧ ರಂದು ಸಾವಿತ್ರಮ್ಮ (೨೪) ಎಂಬುವರು ಅವಳ ಗಂಡನಾದ ಮಂಜುನಾಥರವರ ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಮಹದೇವಪುರದಿಂದ ವರದಿಯಾಗಿದೆ.

- ಮಹಿಳಾ ದೌರ್ಜನ್ಯ: ದಿನಾಂಕ, ೨೪.೦೩.೨೦೧೧ ರಂದು ಯಲಹಂಕದಿಂದ ವರದಿಯಾಗಿದೆ. ಸುರೇಶ್ ಪತ್ನಿಗೆ ವರದಕ್ಷಿಣೆ ತರುವಂತೆ ಸದಾ ಹಿಂಸೆ ನೀಡುತ್ತಿದ್ದ. ಇದರಿಂದ ಭವಾನಿ (೨೩) ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

- ದಿನಾಂಕ: ೨೭.೦೩.೨೦೧೧ ರಂದು ಹೀನಾ (೨೦) ಅವರ ಪತಿ ನೀಡುತ್ತಿದ್ದ ವರದಕ್ಷಿಣೆ ಕಿರುಕುಳ ತಾಳಲಾರದೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ, ದೇವರಜೀವನಹಳ್ಳಿಯಿಂದ ವರದಿಯಾಗಿದೆ.

- ದಿನಾಂಕ: ೨೨.೦೪.೨೦೧೧ ರಂದು ತಾವರೆಕೆರೆ ಠಾಣೆಯಿಂದ ವರದಿಯಾಗಿದೆ. ಪುಷ್ಪಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಯಣ್ಣ ಅವರಿಗೆ ೨ ವರ್ಷ ಶಿಕ್ಷೆ ಹಾಗೂ ರೂ: ೧೨೦೦೦ ದಂಡ ವಿಧಿಸಿದ್ದಾರೆ. (ಕನ್ನಡ ಪ್ರಭ ದಿನಪತ್ರಿಕೆ).

- ದಿನಾಂಕ: ೦೪.೦೪.೨೦೧೧ ರಂದು ಕೌಸಲ್ಯ ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕಾಗಿ ಅವರ ಪತಿ ಹತ್ಯೆ ಮಾಡಿದರು. ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ ರೂ: ೩೦೦೦ ದಂಡ ವಿಧಿಸಿ ೧೫ ನೇ ಕೌಟುಂಬಿಕ ನ್ಯಾಯಲಯ ಎಫ್.ಟಿ.ಸಿ, ನ್ಯಾಯಧೀಶರು ಆದೇಶಿಸಿದ್ದಾರೆ ಎಂದು ಜೆ.ಪಿ.ನಗರ ಪೋಲೀಸ್ ಠಾಣೆಯಿಂದ ವರದಿಯಾಗಿದೆ. (ಕನ್ನಡ ಪ್ರಭ).

- ದಿನಾಂಕ: ೧೦.೦೪.೨೦೧೧ ರಂದು ಗುರಪ್ಪನಪಾಳ್ಯದಿಂದ ವರದಿಯಾಗಿದೆ. ಸಲ್ಮಾತಾಜ್ ಪತಿಯಿಂದ ಹಲ್ಲೆಗೋಳಾಗಿರುವ ಮಹಿಳೆ, ವರದಕ್ಷಿಣೆಗಾಗಿ ಪೀಡಿಸಿ ಪತ್ನಿಗೆ ಗರ್ಭಪಾತ ಮಾಡಿಸಿದ ಭೂಪ ಶೇಕ್ ಸಾಧಿಕ್ ಪತ್ನಿಯ ಹತ್ಯೆಗೂ ಯತ್ನಿಸಿದ್ದನು ಎಂದು (ಕನ್ನಡ ಪ್ರಭ) ದಿನ ಪತ್ರಿಕೆಯಲ್ಲಿ ವರದಿಯಾಗಿದೆ.

- ದಿನಾಂಕ: ೨೯.೦೪.೨೦೧೧ ರಂದು ಬಯಪ್ಪನಹಳ್ಳಿ ರೈಲು ನಿಲ್ದಾಣ ಪೋಲೀಸ್ ಠಾಣೆಯಿಂದ ವರದಿಯಾಗಿದೆ. ಸುಮಿತ್ರಾ (೧೯) ಅವಳ ಪತಿ ಜಗದೀಶ್ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು. ಅದರಿಂದ ಸುಮಿತ್ರಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

- ದಿನಾಂಕ: ೦೬.೦೫.೨೦೧೧ ರಂದು ಬಸವೇಶ್ವರನಗರದಿಂದ ವರದಿಯಾಗಿದೆ. ದಿವಾಕರ್‌ರವರು ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ಕಾರಣ ಪ್ರತಿಮಾ ಯಾದವ್(೨೮) ಆತ್ಮಹತ್ಯೆ ಮಾಡಿಕೊಂಡ ಘಟನೆ ವರದಿಯಾಗಿದೆ.
- ದಿನಾಂಕ: ೧೩.೦೫.೨೦೧೧ ರಂದು ಜಗದೀಶ್ ಎಂಬುವರ ಪತ್ನಿ ಆಶಾಸಿಂಗ್ (೨೧) ವರದಕ್ಷಿಣೆ ಕಿರುಕುಳ ತಾಳಲಾಗದೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ, ರಾಜಾಜಿನಗರದಿಂದ ವರದಿಯಾಗಿದೆ.
- ದಿನಾಂಕ: ೧೭.೦೫.೨೦೧೧ ರಂದು ಪುಷ್ಪಾ (೨೬) ಕೊಳ್ಳೇಗಾಲದ ಬಾಲಾಜಿ ಎಂಬಾತನ ಜೊತೆ ಒಂದೂವರೆ ತಿಂಗಳ ಹಿಂದೆ ಅವರ ವಿವಾಹವಾಗಿತ್ತು. ಪತಿ ಹಾಗೂ ಆತನ ಪೋಷಕರು ನೀಡುತ್ತಿದ್ದ ವರದಕ್ಷಿಣೆ ಕಿರುಕುಳ ತಾಳಲಾರದೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಬನಶಂಕರಿಯಿಂದ ವರದಿಯಾಗಿದೆ.

ವರದಕ್ಷಿಣೆ ಕಿರುಕುಳದಿಂದ ಸಂಭವಿಸಿದ ಸಾವಿನ ಪ್ರಕರಣಗಳ ಕೋಷ್ಟಕ

ಕ್ರ.ಸಂ	ಪ್ರಜಾವಾಣಿ ದಿನಪತ್ರಿಕೆ	ದಿನಾಂಕ	ಪ್ರಕರಣಗಳ ಸಂಖ್ಯೆ	ಸಾವಿನ ಸಂಖ್ಯೆ	ಬದುಕಿದವರ ಸಂಖ್ಯೆ
೧	ಪ್ರಜಾವಾಣಿ ದಿನಪತ್ರಿಕೆ	೧೬.೦೧.೨೦೧೧	೧	೧	–
೨	ಪ್ರಜಾವಾಣಿ ದಿನಪತ್ರಿಕೆ	೧೮.೦೧.೨೦೧೧	೧	೧	–
೩	ಪ್ರಜಾವಾಣಿ ದಿನಪತ್ರಿಕೆ	೨೧.೦೧.೨೦೧೧	೧	೧	–
೪	ಪ್ರಜಾವಾಣಿ ದಿನಪತ್ರಿಕೆ	೨೪.೦೧.೨೦೧೧	೧	೧	–
೫	ಪ್ರಜಾವಾಣಿ ದಿನಪತ್ರಿಕೆ	೩೧.೦೧.೨೦೧೧	೧	೧	–
೬	ಪ್ರಜಾವಾಣಿ ದಿನಪತ್ರಿಕೆ	೦೫.೦೨.೨೦೧೧	೧	೧	–
೭	ಪ್ರಜಾವಾಣಿ ದಿನಪತ್ರಿಕೆ	೦೮.೦೨.೨೦೧೧	೧	೧	–
೮	ಪ್ರಜಾವಾಣಿ ದಿನಪತ್ರಿಕೆ	೨೫.೦೨.೨೦೧೧	೧	೧	–
೯	ಪ್ರಜಾವಾಣಿ ದಿನಪತ್ರಿಕೆ	೧೦.೦೩.೨೦೧೧	೨	೨	–
೧೦	ಪ್ರಜಾವಾಣಿ ದಿನಪತ್ರಿಕೆ	೨೪.೦೩.೨೦೧೧	೧	೧	–
೧೧	ಪ್ರಜಾವಾಣಿ ದಿನಪತ್ರಿಕೆ	೨೭.೦೩.೨೦೧೧	೧	೧	–
೧೨	ಪ್ರಜಾವಾಣಿ ದಿನಪತ್ರಿಕೆ	೦೪.೦೪.೨೦೧೧	೧	೧	–
೧೩	ಪ್ರಜಾವಾಣಿ ದಿನಪತ್ರಿಕೆ	೧೦.೦೪.೨೦೧೧	೨	೧	೧
೧೪	ಪ್ರಜಾವಾಣಿ ದಿನಪತ್ರಿಕೆ	೨೨.೦೪.೨೦೧೧	೧	೧	–
೧೫	ಪ್ರಜಾವಾಣಿ ದಿನಪತ್ರಿಕೆ	೨೯.೦೪.೨೦೧೧	೧	೧	–
೧೬	ಪ್ರಜಾವಾಣಿ ದಿನಪತ್ರಿಕೆ	೦೬.೦೫.೨೦೧೧	೧	೧	–
೬೭	ಪ್ರಜಾವಾಣಿ ದಿನಪತ್ರಿಕೆ	೧೩.೦೫.೨೦೧೧	೧	೧	–
೭೮	ಪ್ರಜಾವಾಣಿ ದಿನಪತ್ರಿಕೆ	೧೭.೦೫.೨೦೧೧	೧	೧	–

ಅತ್ಯಾಚಾರ

ಅತ್ಯಾಚಾರವೆಂಬುದು ಇಂದಿನ ಸಮಾಜದ ಪಿಡುಗುಗಳಲ್ಲಿ ಅತ್ಯಂತ ಅಮಾನವೀಯವಾದ ಕೃತ್ಯವಾಗಿದೆ. ವ್ಯಕ್ತಿಯೊಬ್ಬನು ಮಹಿಳೆಯ ಮೇಲೆ ನಡೆಸಬಹುದಾದ ಹೇಯ ಕೃತ್ಯಗಳಲ್ಲಿ ಕೊಲೆ, ಮಾನಭಂಗದ ನಂತರದ ಕೃತ್ಯವೆಂದರೆ "ಅತ್ಯಾಚಾರವೇ" ಆಗಿರುತ್ತದೆ ಎನ್ನಬಹುದು. ಇಂಗ್ಲೀಷಿನ (ರೇಪ್) ಎಂಬ ಪದಕ್ಕೆ

ಸಂವಾದಿಯಾಗಿ ಹಠ ಸಂಭೋಗ ಅಥವಾ ಬಲಾತ್ಕಾರ ಸಂಭೋಗ ಎಂಬ ಪದ ಪ್ರಯೋಗವನ್ನು ಬಳಸಲಾಗುತ್ತದೆ. RAPE ಎಂಬ ಇಂಗ್ಲೀಷ್ ಪದಕ್ಕೆ ಕನ್ನಡದಲ್ಲಿ ಅತ್ಯಾಚಾರ, ಮಾನಭಂಗ, ಹಠ ಸಂಭೋಗ, ಬಲಾತ್ಕಾರ ಸಂಭೋಗ, ಎಂಬ ಪದಗಳು ಬಳಕೆಯಾಗುತ್ತಿದೆ,. ಆದರೆ ಇವುಗಳಲ್ಲಿ "ಅತ್ಯಾಚಾರ" ಎಂಬ ಪದ ಹೆಚ್ಚು ಬಳಕೆಯಲ್ಲಿದೆ". ಈ ಪದವನ್ನೇ ದಿನಪತ್ರಿಕೆಗಳು ಹೆಚ್ಚಾಗಿ ಬಳಸುತ್ತಿರುವುದರಿಂದ ಈ ಪದವು ಹೆಚ್ಚು ಪ್ರಚಲಿತದಲ್ಲಿದೆ. ಮಹಿಳೆಯ ಮೇಲೆ ನಡೆಯಬಹುದಾದ ಅತ್ಯಂತ ಹೀನ ಕೃತ್ಯಗಳಲ್ಲಿ ಒಂದಾದ "ಅತ್ಯಾಚಾರ"ವನ್ನು ಭಾರತ ದಂಡ ಸಂಹಿತೆಯನ್ನು ೩೭೬ನೇ ಪ್ರಕರಣದಲ್ಲಿ ವಿವರಿಸುತ್ತದೆ.

ಭಾರತ ದಂಡ ಸಂಹಿತೆಯಲ್ಲಿ ಅತ್ಯಾಚಾರಕ್ಕೆ ಜೀವಾವಧಿ ಶಿಕ್ಷೆಯನ್ನು ನೀಡಲು ಅವಕಾಶವಿರುತ್ತದೆ. ಆದರೆ ಇಂತಹ ಹೀನ ಕೃತ್ಯವನ್ನು ಕತ್ತಲೆ ಕೋಣೆಗಳಲ್ಲಿ ಅಥವಾ ಯಾರೂ ಇಲ್ಲದಂತಹ ಸ್ಥಳಗಳಲ್ಲಿ ನಡೆಸುವುದರಿಂದ, ಆರೋಪಿಯನ್ನು ಪತ್ತೆ ಹಚ್ಚಿ ಅವನ ವಿರುದ್ಧ ಸಾಕ್ಷ್ಯಾಧಾರಗಳನ್ನು ಒದಗಿಸಿ ನ್ಯಾಯಾಲಯದಿಂದ ಶಿಕ್ಷೆದೊರೆಯುವಂತೆ ನೋಡಿಕೊಳ್ಳುವುದು ಬಹಳ ಕಷ್ಟವೇ ಸರಿ. ಉದಾಹರಣೆಗೆ ದೆಹಲಿಯಲ್ಲಿ ೧೯೮೨ರಲ್ಲಿ ಅತ್ಯಾಚಾರದ ಆರೋಪಕ್ಕಾಗಿ ೨೦೨ ಪ್ರಕರಣಗಳನ್ನು ದಾಖಲಿಸಲಾಯಿತು. ಆದರೆ ಅವುಗಳ ಪೈಕಿ ೨೭ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ವಿಧಿಸಲು ಸಾಧ್ಯವಾಯಿತು. ಪಶ್ಚಿಮ ಬಂಗಾಳದಲ್ಲಿ ೧೫೧೫ ಮೊಕದ್ದಮೆಗಳ ಪೈಕಿ ೧೨೪ ಜನರಿಗೆ ಮಾತ್ರ ಶಿಕ್ಷೆ ವಿಧಿಸಲಾಯಿತು.

ಕುಟುಂಬದ ಒಳಗೆ ಹೆಣ್ಣುಮಕ್ಕಳ ಮೇಲೆ ಅವರ ಸಮೀಪದ ಪುರುಷ ಬಂಧಗಳಿಂದಲೇ ನಡೆಯುತ್ತಿರುವ ಅತ್ಯಾಚಾರದ ಪ್ರಕರಣಗಳು ಕಾಮುಕ ಪುರುಷನು ಯಾವ ಹೆಣ್ಣು ಮಗಳನ್ನಾಗಲೀ ತಮ್ಮ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳಲು ಬಳಸಲು ಹಿಂಜರಿಯುವುದಿಲ್ಲ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

ಪತ್ರಿಕೆಯಲ್ಲಿ ವರದಿಯಾಗಿರುವ ಅತ್ಯಾಚಾರ ಪ್ರಕರಣಗಳು

- ದಿನಾಂಕ: ೧೫.೦೧.೨೦೧೧ ರಂದು ಲತಾ ಎಂಬುವವರನ್ನು ಆನಂದ್ ಎಂಬಾತ ಡ್ರಾಪ್ ನೀಡುವುದಾಗಿ ಹೇಳಿ ಅವರನ್ನು ವಾಹನದಲ್ಲಿ ಹತ್ತಿಸಿಕೊಂಡು ಆತ ಅವರನ್ನು ನಿರ್ಜನ ಪ್ರದೇಶಕ್ಕೆ ಕರೆದೋಯ್ದು ಅತ್ಯಾಚಾರ ಎಸಗಿ ಪರಾರಿಯಾಗಿದ್ದಾನೆ. ಈ ಘಟನೆ ಯಲಹಂಕ ಪೊಲೀಸ್ ಠಾಣೆಯಿಂದ ವರದಿಯಾಗಿದೆ.
- ದಿನಾಂಕ: ೨೦.೦೧.೨೦೧೧ ರಂದು ಧನಪಾಲ್‌ಸಿಂಗ್ (೫೦) ಎಂಬುವರು ೬ ವರ್ಷದ ಬಾಲಕಿಗೆ ಬಿಸ್ಕೆಟ್ ನೀಡುವುದಾಗಿ ಹೇಳಿ ಮನೆಯೊಳಗೆ ಕರೆದೊಯ್ದು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ. ಈ ಘಟನೆ ಜಾಲಹಳ್ಳಿಯಿಂದ ವರದಿಯಾಗಿದೆ.
- ದಿನಾಂಕ: ೧೧.೦೨.೨೦೧೧ ರಂದು ಬೆಂಗಳೂರು ಬನ್ನೇರುಘಟ್ಟದಿಂದ ವರದಿಯಾಗಿದೆ. ಮಲತಂದೆ ಆರ್ಮುಗಂ (೩೭) ಎಂಬಾತ ಮಗಳು ಸುಕನ್ಯಾ (೧೪) ಎಂಬುವಳ ಮೇಲೆ ಅತ್ಯಾಚಾರ ಎಸಗಿದ್ದಾನೆ.

* ದಿನಾಂಕ: ೨೬.೦೨.೨೦೧೧ ರಂದು ಬೆಂಗಳೂರು ನಗರದ ಆನೇಕಲ್ ಜ್ಞಾನಜ್ಯೋತಿ ಸಂಸ್ಥೆಗೆ ಬಂದಿದ್ದ ಇಬ್ಬರು ವಿದೇಶಿ ವಿದ್ಯಾರ್ಥಿನಿಯರನ್ನು ದುಷ್ಕರ್ಮಿಗಳು ಅಪಹರಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆಂದು ಪೋಲಿಸರು ತಿಳಿಸಿದ್ದಾರೆ.

* ದಿನಾಂಕ: ೧೪.೦೩.೨೦೧೧ ರಂದು ನವದೆಹಲಿಯಿಂದ ವರದಿಯಾಗಿದೆ. ೭೭ ವರ್ಷದ ವೃದ್ಧೆಯೊಬ್ಬಳ ಮೇಲೆ ಅನಾಮದೇಯ ಸೈಕಲ್ ರಿಕ್ಷಾ ಚಾಲಕನೊಬ್ಬ ಅತ್ಯಾಚಾರ ಎಸಗಿದ್ದಾನೆ.

ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು.

ಕ್ರ.ಸಂ	ಪ್ರಜಾವಾಣಿ ದಿನಪತ್ರಿಕೆ	ದಿನಾಂಕ	ಪ್ರಕರಣಗಳ ಸಂಖ್ಯೆ	ಸಾವಿನ ಸಂಖ್ಯೆ	ಬದುಕಿದವರ ಸಂಖ್ಯೆ
೧	ಪ್ರಜಾವಾಣಿ ದಿನಪತ್ರಿಕೆ	೧೫.೦೧.೨೦೧೧	೧	–	೧
೨	ಪ್ರಜಾವಾಣಿ ದಿನಪತ್ರಿಕೆ	೧೫.೦೧.೨೦೧೧	೧	–	೧
೩	ಪ್ರಜಾವಾಣಿ ದಿನಪತ್ರಿಕೆ	೧೫.೦೧.೨೦೧೧	೧	–	೧
೪	ಪ್ರಜಾವಾಣಿ ದಿನಪತ್ರಿಕೆ	೧೫.೦೧.೨೦೧೧	೧	–	೧
೫	ಪ್ರಜಾವಾಣಿ ದಿನಪತ್ರಿಕೆ	೧೫.೦೧.೨೦೧೧	೨	–	೨
	ಒಟ್ಟು		೬		೬

ಕೊಲೆ

ಕೊಲೆ ಎಂಬುದು ಸಮಾಜದಲ್ಲಿ ಘೋರವಾದಅಮಾನುಷ ಕೃತ್ಯವಾಗಿದೆ. ಅಂದರೆ ಪ್ರಸ್ತುತವಾದ ಸಾಮಾಜಿಕ ಪರಿಸರದಲ್ಲಿ ಕರಾಳವಾದ ಈ ಕೃತ್ಯವು ಕುಟುಂಬದಿಂದಿಡಿದು ಸಮುದಾಯ, ಪ್ರಾಂತ್ಯ, ರಾಜ್ಯ, ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸವಾಲಾಗಿರುವ ಈ ಭಯೋತ್ಪಾದಕ ಕೃತ್ಯವನ್ನು ತಡೆಯುವುದೇ ಒಂದು ದೊಡ್ಡ ಸವಾಲಾಗಿದೆ. ಅಂದರೆ ಚಿಕ್ಕ–ಚಿಕ್ಕ ಕ್ಷುಲ್ಲಕ ಕಾರಣಗಳಿಗೆಲ್ಲ ಇಂದು ವ್ಯಕ್ತಿ–ವ್ಯಕ್ತಿಗಳು ಮನುಷ್ಯತ್ವವನ್ನೆ ಮರೆತು ಕ್ರೂರ ಮೃಗಗಳಿಗಿಂತಲೂ ಕೆಟ್ಟದಾಗಿ ವರ್ತಿಸುತ್ತಿದ್ದಾರೆ. ಅದರಲ್ಲೂ ಮಹಿಳೆಯರು ಈ ಕೃತ್ಯಕ್ಕೆ ಬಲಿಪಶುಗಳಾಗುತ್ತಿದ್ದಾರೆ. ಇಂದಿನ ದಿನಗಳಲ್ಲಿ ಕುಟುಂಬಗಳಲ್ಲಿ ಪರಸ್ಪರ ಸಣ್ಣ–ಸಣ್ಣ ಮನಸ್ತಾಪಗಳಿಗೆಲ್ಲ ಶೋಷಿತರಾದ ಮಹಿಳೆಯರು. ಅದರಲ್ಲೂ ನಗರ ಜೀವನದಲ್ಲಿನ ಆಧುನಿಕ ಯುಗದ ಬರ್ಬರ ಕೃತ್ಯಗಳಾದ ವರದಕ್ಷಿಣೆ, ಹಣದ ದುರಾಸೆಗಾಗಿ, ಹೆಂಡತಿಯರ ಶೀಲವನ್ನು ಶಂಕಿಸಿ ಇತರೆ ಕಾರಣಗಳಿಂದ ಮಹಿಳೆಯರು ಪುರುಷನ ಕ್ರೂರದೃಷ್ಟಿಗೆ ಬಲಿಯಾಗುತ್ತಿದ್ದಾರೆ. ಅದರಲ್ಲಿ ಕೊಲೆಘಾತುಕ ಚಟುವಟಿಕೆಗಳು ಬೆಂಗಳೂರಿನಂತ ಮಹಾನಗರದಲ್ಲಿ ಪ್ರತಿದಿನ ದಿನಪತ್ರಿಕೆಗಳಲ್ಲಿ ವರದಿಯಾಗುವುದನ್ನು ನಾವು ಕಾಣಬಹುದಾಗಿದೆ. ಇಂದಿನ ದೃಶ್ಯ

ಮಾಧ್ಯಮಗಳಲಂತೂ ನಾವು ಈ ಕೃತ್ಯಗಳನ್ನು ನೋಡುತ್ತಿದ್ದರೆ ಅಸಹ್ಯಕರವಾಗುವಂತ ವಾತಾವರಣ ಬೆಂಗಳೂರಿನಂತ ಮಹಾನಗರಗಳಲ್ಲಿ ಸೃಷ್ಟಿಯಾಗುತ್ತಿರುವುದನ್ನು ಕಂಡು ಮಹಿಳೆಯರಿಗೆ ಭಯದ ವಾತಾವರಣದಲ್ಲಿ ಬದುಕುವಂತಾಗಿದೆ.

ಪತ್ರಿಕೆಯಲ್ಲಿ ವರದಿಯಾಗಿರುವ ಕೊಲೆ ಪ್ರಕರಣಗಳು

- ದಿನಾಂಕ: ೦೮.೦೩.೨೦೧೧ ರಂದು ಬೆಂಗಳೂರಿನ ಬನಶಂಕರಿಯಿಂದ ವರದಿಯಾಗಿದೆ. ವಿಶಾಲಕ್ಷಮ್ಮ (೭೬) ಎಂಬುವರನ್ನು ದುಷ್ಕರ್ಮಿಗಳು ಕತ್ತು ಬಿಗಿದು ಕೊಲೆ ಮಾಡಿ ಚಿನ್ನಾಭರಣ ದೋಚಿಕೊಂಡು ಹೋಗಿದ್ದಾರೆ.
- ದಿನಾಂಕ: ೦೯.೦೩.೨೦೧೧ ರಂದು ತಲಘಟ್ಟಪುರ ಸಮೀಪದ ಕೋಣಸಂದ್ರದಿಂದ ವರದಿಯಾಗಿದೆ. ಸರಾಹತ್ (೩೨) ಎಂಬುವರನ್ನು ದುಷ್ಕರ್ಮಿಗಳು ಕತ್ತು ಸೀಳಿ ಕೊಲೆ ಮಾಡಿದ್ದಾರೆ. ಕಾರಣ ಗೊತ್ತಾಗಿಲ್ಲ.
- ದಿನಾಂಕ: ೧೨.೦೨.೨೦೧೧ ರಂದು ಮೀನಾಕ್ಷಮ್ಮ (೭೦) ಎಂಬುವರನ್ನು ಮಗನೇ ಮದ್ಯಸೇವನೆಗೆ ಹಣ ನಿರಾಕರಿಸಿದ್ದಕ್ಕೆ ಕಬ್ಬಿಣದ ಸಲಾಖೆಯಿಂದ ತಿವಿದು ಕೊಲೆ ಮಾಡಿದ್ದಾನೆ. ಕುಮಾರಸ್ವಾಮಿ ಲೇ ಔಟ್ ಪೋಲಿಸ್ ಠಾಣೆಯಿಂದ ವರದಿಯಾಗಿದೆ.
- ದಿನಾಂಕ: ೦೭.೦೩.೨೦೧೧ ರಂದು ಚೌಡೇಶ್ವರಿನಗರದಿಂದ ವರದಿಯಾಗಿದೆ. ಮಂಜುಳಾ (೪೦) ಎಂಬುವರನ್ನು ಸೀರೆಯಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾರೆ. ಕಾರಣ ತಿಳಿದಿಲ್ಲ.
- ದಿನಾಂಕ: ೨೮.೦೪.೨೦೧೧ ರಂದು ಚಿಕ್ಕಪೇಟೆಯಿಂದ ವರದಿಯಾಗಿದೆ. ಲಕ್ಷ್ಮಿ (೩೦) ಅವಳ ಗಂಡ ನರಸಿಂಹಮೂರ್ತಿ ರಾತ್ರಿ ಕುಡಿದು ಬಂದು ಪತ್ನಿ ಜೊತೆಗೆ ಜಗಳ ಮಾಡಿದ್ದಾನೆ. ಇದು ವಿಕೋಪಕ್ಕೆ ಹೋದಾಗ ಕತ್ತು ಹಿಸುಕಿ ಕೊಲೆ ಮಾಢಿದ್ದಾನೆ.

ಮಹಿಳೆಯರ ಮೇಲಿನ ಕೊಲೆ ಪ್ರಕರಣಗಳ ಕೋಷ್ಟಕ.

ಕ್ರ.ಸಂ	ಪ್ರಜಾವಾಣಿ ದಿನಪತ್ರಿಕೆ	ದಿನಾಂಕ	ಪ್ರಕರಣಗಳ ಸಂಖ್ಯೆ	ಸಾವಿನ ಸಂಖ್ಯೆ	ಬದುಕಿದವರ ಸಂಖ್ಯೆ
೧	ಪ್ರಜಾವಾಣಿ ದಿನಪತ್ರಿಕೆ	೦೮.೦೩.೨೦೧೧	೧	೧	-
೨	ಪ್ರಜಾವಾಣಿ ದಿನಪತ್ರಿಕೆ	೦೯.೦೩.೨೦೧೧	೧	೧	-
೩	ಪ್ರಜಾವಾಣಿ ದಿನಪತ್ರಿಕೆ	೧೨.೦೨.೨೦೧೧	೧	೧	-
೪	ಪ್ರಜಾವಾಣಿ ದಿನಪತ್ರಿಕೆ	೦೭.೦೩.೨೦೧೧	೧	೧	-
೫	ಪ್ರಜಾವಾಣಿ ದಿನಪತ್ರಿಕೆ	೨೮.೦೪.೨೦೧೧	೧	೧	-
	ಒಟ್ಟು		೫	೫	೦

ಈ ಮೇಲಿನ ಎಲ್ಲಾ ಅಂಶಗಳು ನನ್ನ ಸಂಶೋಧನಾ ಮಹಾಪ್ರಬಂಧದ (ಮಹಿಳಾ ದೌರ್ಜನ್ಯ, ಲಿಂಗ ಸಂಬಂಧಿ ಅಧ್ಯಯನ) ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ, ಎಂಬ ಅಧ್ಯಯನಕ್ಕೆ ಪೂರಕವಾಗಿರುವುದರಿಂದ ಈ ಎಲ್ಲಾ ಪುಸ್ತಕಗಳನ್ನು, ಸಂಶೋಧನಾ ಬರಹಗಳನ್ನು ಮತ್ತು ಪತ್ರಿಕಾ ವರದಿಗಳ ಸಾಹಿತ್ಯ ಅಧ್ಯಯನವನ್ನು ಮಾಡಿರುತ್ತೇನೆ.

------******------

ಅಧ್ಯಾಯ ೩

ಮಹಿಳಾ ದೌರ್ಜನ್ಯ : ಲಿಂಗ ಸಂಬಂಧಿ ಅಧ್ಯಯನದ ಚಿಂತನೆಗಳ ಸಮೀಕ್ಷೆ, ಸ್ವರೂಪ ಮತ್ತು ವ್ಯಾಖ್ಯಾನ

೩.೧ ಪಿತೃ ಪ್ರಧಾನ ವ್ಯವಸ್ಥೆಗೂ ಹಾಗೂ ಮಹಿಳಾ ದೌರ್ಜನ್ಯಕ್ಕೂ ಇರುವ ಸಂಬಂಧ

೩.೨ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಮಹಿಳಾ ದೌರ್ಜನ್ಯ

೩.೩ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಮಹಿಳಾ ದೌರ್ಜನ್ಯದ ವಿಶ್ಲೇಷಣೆ.

ಅಧ್ಯಾಯ – ೩

ಮಹಿಳಾ ದೌರ್ಜನ್ಯ ಲಿಂಗ ಸಂಬಂಧಿ ಅಧ್ಯಯನದ ಚಿಂತನೆಗಳ ಸಮೀಕ್ಷೆ, ಸ್ವರೂಪ ಮತ್ತು ವ್ಯಾಖ್ಯಾನ

ಸಾಂಪ್ರದಾಯಿಕ ಸಾಮಾಜಿಕ ಸಂರಚನೆಯಲ್ಲಿ ಮಹಿಳಾ ಬದುಕು ಪುರುಷರೂಪಿ ಕಟ್ಟುಪಾಡಿನಲ್ಲೇ ಸಾಗುತ್ತದೆ. ಅವಳ ನಡೆ–ನುಡಿ ಸ್ವಭಾವ ಇತ್ಯಾದಿಯೆಲ್ಲವೂ ಸಾಮಾಜಿಕತೆಯ ಹಿನ್ನೆಲೆಯನ್ನು ಆದರಿಸಿಯೇ ಇವೆ. ಹೀಗೆ ಸಮಾಜ ಮತ್ತು ಮಹಿಳಾ ಬದುಕು ಒಂದನ್ನೊಂದು ತೊಡಕು ಹಾಕಿಕೊಂಡಿವೆ. ಈ ಬಗೆಯ ಸಾಮಾಜಿಕ ವ್ಯವಸ್ಥೆಯಲ್ಲಿ ನಿರಂತರವಾಗಿ ಪುರುಷ ಬದುಕಿನ ಸುತ್ತ ಗಿರಕಿ ಹೊಡೆಯುತ್ತಿರುವ ಮಹಿಳೆ ಬದುಕು ಸುಸಂಗತವಾಗಿಲ್ಲವೆಂಬುದನ್ನು ಸಾಕಷ್ಟು ಅಧ್ಯಯನಗಳು ಖಚಿತ ಪಡಿಸಿವೆ. ಪ್ರಸ್ತುತ ಸಂಶೋಧನೆಯು ಮಹಿಳಾ ಬದುಕನ್ನು ಕೇಂದ್ರೀಕರಿಸಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ಗ್ರಹಿಸುವ ಸಾಮಾಜಿಕ ಸಂದರ್ಭದಲ್ಲಿ ಅವು ಪಡೆಯುವ ರೂಪಗಳನ್ನು ಸ್ತ್ರೀವಾದಿ ನೆಲೆಯಲ್ಲಿ ಚರ್ಚಿಸುವ ಯತ್ನವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಅಧ್ಯಾಯದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ಚಿಂತನೆಗಳ ಸಮೀಕ್ಷೆ, ಸ್ವರೂಪ ಮತ್ತು ಹಿಂಸೆಯ ವ್ಯಾಖ್ಯಾನಗಳನ್ನು ಕುರಿತು ಮತ್ತು ಹಿಂಸೆಯ ಕುರಿತು ಚಿಂತನೆಗಳ ಸಮೀಕ್ಷೆಯನ್ನು ಚರ್ಚೆಗೆತ್ತಿಕೊಳ್ಳಲಾಗುತ್ತಿದೆ.

ದೌರ್ಜನ್ಯ ಕುರಿತು ಚಿಂತನೆಗಳ ಸಮೀಕ್ಷೆ

ಸಂಶೋಧನಾಶಾಸ್ತ್ರದಲ್ಲಾಗಲೀ, ಪುರಾತತ್ವಗಳಲ್ಲಾಗಲೀ ಕ್ರಿ.ಪೂ ೩೦,೦೦೦ ಕ್ಕಿಂತ ಮೊದಲು ಲಿಂಗತಾರತಮ್ಯದ ಸುಳುಹುಗಳು ಕಾಣಿಸುವುದಿಲ್ಲ. ಅಲ್ಲಿ ಸ್ತ್ರೀ–ಪುರುಷರ ಬದುಕು ಭಿನ್ನವಾದ ಅಸ್ತಿತ್ವದಲ್ಲಿ ನೆಲೆಗೊಂಡಿದೆಯಾದರೂ ಸಂಘಗಳಾಗಲೀ, ದಬ್ಬಾಳಿಕೆಗಳ ಕುರಿತಾಗಲೀ, ದಾಖಲೆಗಳಿಲ್ಲ, ಕ್ರಿ.ಪೂ ೩೫,೦೦೦ ಅಲ್ಲಿ ಲಿಂಗತ್ವದ ಪರಿಕಲ್ಪನೆ ಕುರಿತು ಆಧಾರಗಳು ಲಭ್ಯವಿವೆ."[೧] ಪ್ರಾನ್ಸ್‌ನ ಕೆಲವು ಚಿತ್ರಗಳಲ್ಲಿ ಗರ್ಭಿಣಿ ಮಹಿಳೆ, ಫಲವಂತಿಕೆಗಳು, ಮಾತೃದೇವತೆಗಳ ಚಿತ್ರಗಳು ಕಾಣಿಸಿಕೊಳ್ಳುತ್ತವೆ, ಆದರೆ ಇಲ್ಲಿ ಯಾವುದೇ ಲಿಂಗತ್ವ ಭಿನ್ನತೆಯ ಆಧಾರಗಳಿಲ್ಲ. ಭಿನ್ನತೆಯಿರುವುದು ಸ್ತ್ರೀ–ಪುರುಷರ ಪರಿಕಲ್ಪನೆಯಲ್ಲಿ, ಹಾಗೂ ಕ್ರಿ.ಪೂ. ೧೦,೦೦೦–೮.೦೦೦ ದ ಕುರಿತು ಸ್ಥಾಪಿತ ಕೃಷಿಕ ಸಮಾಜದಲ್ಲಿ ದೌರ್ಜನ್ಯವನ್ನು ನಿಯಂತ್ರಿಸಲು 'ಉತ್ಪಾದನೆ' ಎಂಬುದಕ್ಕೆ ಆಧಾರಗಳಿಲ್ಲ."[೨] ವರ್ಗ ಶೋಷಣೆ ಅಥವಾ ಪ್ರಧಾನತೆಯಾಗಲಿ, ಸುದೀರ್ಘ ಅವಧಿಯವರೆಗೂ ಪ್ರಸ್ತಾಪವಿಲ್ಲ. ಕುಟುಂಬ ಸಂಬಂಧಗಳಲ್ಲಿನ ಆರ್ಥಿಕ ಭಿನ್ನತೆಯೊಂದಿಗೆ ಮಹಿಳೆಯರು ತಮ್ಮ ಇಚ್ಛೆಗನುಗುಣವಾಗಿ ಪೌರೋಹಿತ್ಯ ನಡೆಸುವುದಾಗಲಿ, ಇತ್ಯಾದಿಯಾಗಲಿ ಯಾವುದೇ ಭಿನ್ನತೆಯಿರಲಿಲ್ಲ. ಹಾಗೂ ಮಾತೃ ಪ್ರಧಾನತೆಯ ಕುರುಹುಗಳಾಗಲಿ, ದಬ್ಬಾಳಿಕೆಗಳಾಗಲಿ ಕಾಣಿಸಿಕೊಂಡಿಲ್ಲ. ಖಾಸಗಿ ಉದ್ದೇಶಕ್ಕಾಗಿ ಉತ್ಪಾದನೆ ಅಥವಾ ಉಳಿತಾಯಗಳು ಮೀಸಲಿಡುತ್ತಿದ್ದರೂ ಸಹ ಶೋಷಣೆ, ದಬ್ಬಾಳಿಕೆ, ಪುರುಷ ಪ್ರಧಾನತೆ ಇತ್ಯಾದಿಗಳ

ಅಗತ್ಯತೆಯು ಇರುವುದು ಗಮನಾರ್ಹ. ಕೃಷಿಕ ಸಮಾಜ ಆರಂಭಿಕ ಸಾವಿರಾರು ವರ್ಷಗಳಲ್ಲಿ ನೆಮ್ಮದಿಯಿಂದ ಕೂಡಿತ್ತು. ಮೆಸಪಟೋಮಿಯ ಪ್ರಭುತ್ವವು ಜನ್ಮತಳೆದ ನಂತರದಲ್ಲಿ ಮಹಿಳೆಯರ ಮೇಲೆ ಪುರುಷ ಪ್ರಧಾನತೆಯನ್ನು ಕಾಣಬಹುದಾಗಿದೆ.

ಕುಟುಂಬದ ಮುಖ್ಯಸ್ಥನಾಗಿ ಪುರುಷನ ನಿಯಂತ್ರಣವು ಆರಂಭವಾಯಿತು. ವಿಶೇಷವಾಗಿ ಮಹಿಳೆಯರು ಗುಲಾಮಗಿರಿಯನ್ನು ಅನುಭವಿಸುವಂತಾಗಿರುವುದು ಈ ಅವಧಿಯಲ್ಲಿಯೇ, ಪಿತೃಸ್ಥಾನೀಯತೆ, ಪಿತೃವಂಶೀಯುತೆಗಳಲ್ಲಿ ಹೆಂಡತಿ–ಮಕ್ಕಳ ಮೇಲೆ ನಿಯಂತ್ರಣವು ಸ್ಥಾಪಿತವಾಯಿತು. ಹೆಂಡತಿ, ಯಜಮಾನಿ, ವೇಶ್ಯೆಯರ ಮಧ್ಯದ ನಿರ್ಧಾರಾತ್ಮಕ ಭಿನ್ನತೆಯಾಯಿತು. ಹೀಗೆ ಕುಟುಂಬ ಮತ್ತು ಸಾರ್ವಜನಿಕ ವಲಯಗಳಲ್ಲಿ ಹಂತ ಹಂತವಾಗಿ ಹಿಂಸೆ–ದೌರ್ಜನ್ಯಗಳು ಅಸ್ತಿತ್ವಕ್ಕೆ ಬಂದವು. ಇವುಗಳಿಗೆ ಪೂರಕವಾಗಿ ಧರ್ಮ, ಸಾಂಪ್ರದಾಯಗಳಲ್ಲಿ ಪುರುಷ ಪ್ರಧಾನತೆಯು ನೆಲೆಯೂರಿತು. ಖಾಸಗಿ ಆಸ್ತಿ, ಭೂ ಒಡೆತನ ಅಥವಾ ಇತರೆ ಉತ್ಪಾದನೆಯ ಅರ್ಥ, ಈ ರಾಜ್ಯಗಳಲ್ಲಿ ಮಹತ್ವವಾಗಿ ರೂಪು ತಳೆದವು. ಇಲ್ಲಿ ಭೂಮಿಯನ್ನು ಹೊಂದಿರುವವರು ಅಥವಾ ದಕ್ಷತೆಯನ್ನು ಹೊಂದಿರುವವರು ಎಂಬ ಪ್ರತ್ಯೇಕ ಆಧಾರಗಳಿಲ್ಲ. ಯಾವ ವರ್ಗ ಅಧಿಕಾರವನ್ನು ಆಧರಿಸುತ್ತದೆಯೇ ಆಸ್ತಿಯ ಮೇಲಿನ ಸ್ವಾಧೀನವು ಅವರದೇ ಆಗಿರುತ್ತದೆ. ಇದು ಸಹ ಒತ್ತಡಗಳಿಂದಾಗಿದೆಯೆಂಬುದಕ್ಕ ಆಧಾರಗಳಿಲ್ಲ. ಏಂಗೆಲ್ಸ್ ಮಾದರಿಗೆ ಪ್ರತಿಯಾಗಿ ಗುಲಾಮಗಿರಿ, ಊಳಿಗಮಾನ್ಯಶಾಹಿ, ಬಂಡವಾಳಶಾಹಿ, ಸಮಾಜವಾದಿ ವಿಭಾಗಗಳು ಇತಿಹಾಸದ ಘಟಕಗಳಾಗಿದ್ದವು. 'ಉತ್ಪಾದನೆಯ ತಿರುವು' ಉದ್ದೇಶಿಸಲ್ಪಟ್ಟ ಮಾದರಿಗಳಿಗೆ ಪ್ರತಿಯಾಗಿ ಮೊದಲ ಬಗೆಯ ಶೋಷಣಾತ್ಮಕ ಸಮಾಜಕ್ಕೆ ಗಟ್ಟಿ ಸಾಕ್ಷಿಗಳಾಗಿ ಕಾಣಲ್ಪಡುತ್ತವೆ. ಮುಂದುವರೆದಂತೆಲ್ಲ ರಾಜ್ಯಗಳು, ಪ್ರಭುತ್ವಗಳು 'ವರ್ಗಪ್ರಭುತ್ವ'ದಿಂದ ಆಳ್ವಿಕೆಗೊಳಪಟ್ಟವು. ನಗರಗಳು–ರಾಜ್ಯಗಳು, ಪೂಜಾರಿಗಳು, ರಾಜರುಗಳಿಂದ ಆಳಲ್ಪಟ್ಟವು, ಹೀಗೆ ಸೃಷ್ಟಿಸಲ್ಪಟ್ಟ ಹಿಂಸೆ–ದೌರ್ಜನ್ಯಗಳು ಪುರುಷ ಪ್ರಧಾನತೆಯಿಂದ ಹೆಚ್ಚು ಗಟ್ಟಿಯಾಗತೊಡಗಿದವು. ಕುಟುಂಬ, ಪ್ರಭುತ್ವಗಳಲ್ಲಿ ಕಾಣಿಸಿಕೊಂಡ ದೌರ್ಜನ್ಯವು ಶಾಸನಾಧಿಕಾರದ ಕೇಂದ್ರವಾಗಿ ಮಾರ್ಪಟ್ಟಿತ್ತು. ಇದು ಎಲ್ಲಾ ಬಗೆಯ ದಬ್ಬಾಳಿಕೆಗಳಲ್ಲೂ ದೃಗೋಚರವಾಗಿದೆ. ಆರ್ಥಿಕ ಶೋಷಣೆ ಮತ್ತು ಪುರುಷ ಪ್ರಧಾನತೆಯು ಆರಂಭವಾಗಿದ್ದುದು ಸ್ವಯಂಚಾಲಿತವಾಗಲಿ, ತಕ್ಷಣಕ್ಕಾದ್ದಾಗಲಿ ಅಲ್ಲವೆಂಬುದು ಉತ್ಪಾದನ ಒತ್ತಡ ಗಳೊಂಧಿಗೆ ಮತ್ತು ಇತಿಹಾಸದ ಅಭಿವೃದ್ಧಿಯುದ್ದಕ್ಕೂ ಸಾಪೇಕ್ಷವಾಗಿದೆ.

ಐತಿಹಾಸಿಕ ಕಾಲಘಟ್ಟಗಳಲ್ಲಿ ಹಂತ–ಹಂತವಾಗಿ ಬೆಳೆದು ಬಂದ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯದ ಮೂಲವು ಪುರುಷ ಪ್ರಧಾನತೆಯೇ ಆಗಿದೆ. ಈ ಸಂಗತಿಗಳಾಧಾರದ ಹಿನ್ನೆಲೆಯಲ್ಲಿ ಪ್ರಸಕ್ತ ವಿಷಯವು ೭೦ರ ದಶಕದ ಕೊನೆಯಿಂದ ಹೆಚ್ಚು ಗಂಭೀರ ಚರ್ಚೆಗೊಳಪಟ್ಟಿತು. ಸ್ತ್ರೀವಾದಿ ಚಿಂತನಾ ಕ್ರಮದಿಂದ ರೂಪಿತವಾದ ಬಹು ಬಗೆಯ ಸಿದ್ದಾಂತಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ಸೂಕ್ಷ್ಮ ಪ್ರಸ್ತಾಪಗಳು ಕಾಣಬಹುದು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಸಮುದಾಯವು ಪುರುಷ ಸಮುದಾಯದ ಆಸ್ತಿಯಾಗಿದೆ. ಹಾಗಾಗಿ ಈ ಅಧ್ಯಯನವು ಮಹಿಳಾ ದೌರ್ಜನ್ಯಗಳು ಎಂದಾಗ ಪ್ರಾಥಮಿಕವಾಗಿ ಕೌಟುಂಬಿಕ ವಲಯವನ್ನು ಪ್ರಸ್ತಾಪಿಸಲು ಕಾರಣ ಕುಟುಂಬದಲ್ಲಿ ಕಾಣಿಸಿಕೊಳ್ಳುವ ಯಜಮಾನ ಅಧೀನ ನೆಲೆಯ ಸ್ವರೂಪ ಸಾರ್ವಜನಿಕ ವಲಯದಲ್ಲೂ ಮುಂದುವರೆದಿದೆ. ಯಜಮಾನ್ಯತೆಯ ನಿರಂತರ ಮುಂದುವರಿಕೆಗಾಗಿ ಮೊದಲ ಹಂತದಲ್ಲಿಯೇ ಇಲ್ಲಿನ ಮಹಿಳಾ ಪ್ರವೇಶವನ್ನು ನಿರಾಕರಿಸುತ್ತದೆ. ಈ ನಿರಾಕರಣೆಯೇ ಮೊದಲಹಂತದ ದೌರ್ಜನ್ಯ, ಹೀಗಿರುವಾಗಲೂ ಮಹಿಳೆ ಈ ಪ್ರವೇಶವನ್ನು ಪಡೆದಾಗ ಅಲ್ಲಿ ಅವಳ ಭದ್ರತೆ ಮತ್ತು ರಕ್ಷಣೆಗಳ ಕಾರಣಗಳಿಂದಾಗಿ ದೌರ್ಜನ್ಯಕ್ಕೊಳಗಾಗುತ್ತಿದ್ದರು. ಇಂತಹ ಭಯ ಆತಂಕಗಳಲ್ಲಿ ಮಹಿಳೆ ತನ್ನ ಮೇಲೆ ಆಗುತ್ತಿರುವ ಅಕ್ರಮಣಗಳನ್ನು ಅನಾವರಣಗೊಳಿಸಲಾಗದಂತಹ ಸ್ಥಿತಿಯಲ್ಲಿದ್ದಾಳೆ. ಈ ಎರಡೂ ವಲಯಗಳಲ್ಲೂ ಕಾಣಿಸಿಕೊಳ್ಳುವ ರಹಸ್ಯ ಲೋಕದ ಸಂಗತಿಗಳು ಪ್ರಕಟವಾಗದಿರಲು ಸಂಪ್ರದಾಯ, ಆಚರಣೆ, ಸಂಸ್ಕೃತಿ, ನಡೆನುಡಿ ಇತ್ಯಾದಿ ಕಾರಣಗಳಾಗಿವೆ. ಇಂಥದ್ದೊಂದು ಸಾಂಸ್ಕೃತಿಕ ಚಿಂತನೆಯು ಬಲವಾಗಿ ಬೇರೂರಿರುವುದರಿಂದ ಸ್ವತಃ ತಂದೆಯೇ ತನ್ನ ಮಗಳ ಮೇಲೆ ಅತ್ಯಾಚಾರ ಮಾಡಿದರೇ, ಗಂಡ–ಹೆಂಡತಿ ಮೇಲೆ ಬಲತ್ಕಾರ ಮಾಡಿದರೆ ಬಹುತೇಕ ಅದು ಪ್ರಕಟವಾಗುವುದಿಲ್ಲ. ಪ್ರಕಟವಾದರೂ ಅದಕ್ಕೆ ಶಿಕ್ಷೆಗಳಾಗಲೀ, ಕಾನೂನಿನ ಕ್ರಮಗಳಾಗಳಾಗಲೀ ಇಲ್ಲದಂತಾಗಿವೆ. ಈವರೆಗೆ ಮಹಿಳೆಯ ಸುರಕ್ಷಿತ ತಾಣ ಕೌಟುಂಬಿಕವಲಯವೆಂದು ಹೇಳಲಾಗುತ್ತಿದೆಯೋ ಆ ಸ್ಥಳವು ಸಾಕಷ್ಟು ಭಯಾನಕ, ಅಪಾಯಕಾರಿ ಮತ್ತು ಅಭದ್ರತೆಯ ಬಿಡಾಗಿದೆ ಎಂಬುದಕ್ಕೆ ಸಾಕಷ್ಟು ಚಿಂತನೆಗಳು ಸಾಕ್ಷಿಯಾಗಿವೆ.

ಹಿಂಸೆ ಎನ್ನುವ ಪದವನ್ನು ನಾವು ಸಾಮಾನ್ಯವಾಗಿ ದೈಹಿಕ ದೌರ್ಜನ್ಯ ಅಥವಾ ವ್ಯಕ್ತಿಯ ದೇಹದ ಮೇಲೆ ನಡೆಯುವ ಆಕ್ರಮಣ, ವಿಶೇಷಾರ್ಥದಲ್ಲಿ ಮನುಷ್ಯನ ಮನಸ್ಸನ್ನು ಘಾಸಿಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ. ಒಬ್ಬ ವ್ಯಕ್ತಿಯನ್ನು ಆತನಿಗೆ ದೊರೆಯುವ ಸೌಲಭ್ಯ ಮತ್ತು ನ್ಯಾಯಬದ್ಧವಾಗಿ ಎಲ್ಲಾ ಮೂಲಭೂತ ಅವಕಾಶಗಳನ್ನೂ ನಿರಾಕರಿಸುವುದೇ ಹಿಂಸೆ ಎನ್ನಬಹುದು.

ಹಿಂಸೆಯು ಇಬ್ಬರು ವ್ಯಕ್ತಿಗಳ ನಡುವೆ ಏರ್ಪಟ್ಟು ಅಥವಾ ಹಲವಾರು ವ್ಯಕ್ತಿಗಳು ಸಹ ಹಿಂಸೆಯಲ್ಲಿ ಒಳಪಡಬಹುದು. ಹಿಂಸೆಯು ನಾನಾ ವಲಯಗಳಲ್ಲಿ ಆರಂಭವಾಗುತ್ತದೆ. ಉದಾ: ಕುಟುಂಬ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ಇಡೀ ಒಂದು ಸಮುದಾಯವೇ ದುರ್ಬಲರ ಮೇಲೆ ಒಳಗಾಗಬಹುದು. ಹಿಂಸೆಯು ಸಮಾಜದಲ್ಲಿ ದುರ್ಬಲರ ಮೇಲೆ ಪ್ರತಿಭಟಿಸಲು ಆಗದವರ ಮೇಲೆ ನಿರಂತರವಾಗಿ ನಡೆಯುತ್ತಿರುತ್ತದೆ. ಹಿಂಸೆಯು ನಮ್ಮ ಮತ್ತು ಸಮಾಜದ ಕಣ್ಣಿಗೆ ಗೋಚರಿಸದಂತೆ ಕಂಡುಬರುವ ರೀತಿಯಲ್ಲಿ ಅಂದರೆ ಗೋಚರಿಸುವ ಮತ್ತು ಗೋಚರಿಸದಂತೆ ಎರಡು ಪ್ರಕಾರಗಳ ಹಿಂಸೆಯನ್ನು ನಾವು ಕಾಣಬಹುದು. ಕುಟುಂಬದೊಳಗೆ ನಡೆಯುವ ದೌರ್ಜನ್ಯ ಮತ್ತು ಹಿಂಸೆಗೆ ಮಹಿಳೆಯರು ಒಳಗಾಗುತ್ತಾರೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ ಮತ್ತು ಹಿಂಸೆಯ ವಿರುದ್ಧ ಹೋರಾಡಲು ಯಾವ ಸಮಾಜದ ಜನರು

ಕುಟುಂಬದ ಸದಸ್ಯರು ಕೂಡ ಮುಂದೆ ಬರುವುದಿಲ್ಲ. ಮಹಿಳೆಯ ಕೌಟುಂಬಿಕ ದೌರ್ಜನ್ಯಗಳನ್ನು ಯಾಂತ್ರಿಕ ಕ್ರಿಯೆ. ಪ್ರಕೃತಿಯ ನಿಯಮ ಎಂದು ಪರಿಗಣಿಸುತ್ತಾರೆ."[೩] ೧೯೯೩ ರಲ್ಲಿ ವಿಶ್ವಸಂಸ್ಥೆಯ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ತಂದರು. ಕುಟುಂಬದ ಒಳಗೆ ನಡೆಯುವ ದೌರ್ಜನ್ಯಗಳು ಮಹಿಳಾ ಸಮಾನತೆಗೆ ಹೋರಾಡುವ ಹೋರಾಟಕ್ಕೆ ಬೃಹತ್ ಸವಾಲನ್ನು ಎಸೆಯುವ ರೀತಿಯಲ್ಲಿ ಹೆಚ್ಚಾಗ ತೊಡಗಿದವು. ಕೌಟುಂಬಿಕ ಹಿಂಸೆಯು ವಿವಿಧ ಪ್ರಕಾರಗಳಲ್ಲಿ ನಡೆಯುತ್ತಿವೆ. ಹೊಡೆಯುವುದು, ಸುಡುವುದು, ಗೃಹಬಂಧನ ಹಲವು ರೀತಿಯಲ್ಲಿ ನಡೆಯುತ್ತಿವೆ, ಆದರೆ ಹೆಣ್ಣಿಗೆ ಕೌಟುಂಬಿಕ ದೌರ್ಜನ್ಯವು ಹೆಣ್ಣು ಹುಟ್ಟುವ ಮೊದಲೇ ನಡೆಯುತ್ತಿರುತ್ತದೆ. ಇತರೆ ಸಂಘ ಸಂಸ್ಥೆಗಳು ನೀಡುವ ಹಿಂಸೆ ಅಥವಾ ದೌರ್ಜನ್ಯವನ್ನು ಮಹಿಳೆಯು ಯಾವ ಹಂತದಲ್ಲಿ ಬೇಕಾದರೂ ತಪ್ಪಿಸಿಕೊಳ್ಳಬಹುದು. ಆದರೇ ಕುಟುಂಬದ ಒಳಗೆ ನಡೆಯುವ ದೌರ್ಜನ್ಯದ ವಿರುದ್ಧ ತಪ್ಪಿಸಿಕೊಳ್ಳುವ ಮಹಿಳೆಯರ ಪಾಲು ಸುಮಾರು ಕಡಿಮೆ ಭಾಗ ಇದೆ.

ಈ ಬಗೆಯ ಚಿಂತನೆ ಚಳುವಳಿಗಳ ಫಲಿತವಾಗಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಯಾಗಿದೆ. ಅದರ ಸಾಫಲ್ಯ-ವೈಫಲ್ಯಗಳ ಪ್ರಶ್ನೆಗಿಂತಲೂ ಇಂತಹ ವಲಯದಲ್ಲಿ ನಡೆಯುವ ದೌರ್ಜನ್ಯ, ಹಿಂಸೆ, ಅಕ್ರಮಣ, ಇತ್ಯಾದಿಗಳನ್ನು ತಡೆಯಲು ಈ ಕಾನೂನು ಒಂದು ಅಸ್ತ್ರವಾಗಿ ಈ ವಲಯದಲ್ಲಿ ಸೂಚಿಸಬಹುದು. ಕೊನೇ ಪಕ್ಷ ಇದನ್ನು ಉಪಯೋಗಿಸುವ ಪ್ರಯತ್ನವಾದರೂ ಸಾರ್ವಜನಿಕ ವಲಯದಲ್ಲೂ ಸಹ ಇಂತಹ ಪ್ರಕಟಿತ-ಅಪ್ರಕಟಿತ ಸಂದರ್ಭಗಳಿವೆ. ಇದಕ್ಕೆ ಕಾರಣಗಳಾಗಿ ಕುಟುಂಬದೊಳಗಿರುವ ಸಂಗತಿಗಳೇ ಕಾಣಿಸಿಕೊಳ್ಳುತ್ತವೆ. ಸಾರ್ವಜನಿಕ ವಲಯದಲ್ಲಿ ಮಹಿಳೆ ಕುಟುಂಬಕ್ಕಿಂತ ಹೆಚ್ಚಿನ ಪ್ರಮಾಣದ ಅಭದ್ರತೆಯನ್ನು, ಭಯ, ಆತಂಕಗಳನ್ನು ಎದುರಿಸಬೇಕಾಗುತ್ತದೆ. ಇಲ್ಲಿ ನಡೆಯುವ ಹಲವು ಬಗೆಯ ಅಕ್ರಮಣಗಳಿಗೆ ಮಹಿಳೆ ನಿರಂತರವಾಗಿ ಬಲಿಯಾಗುತ್ತಿದ್ದಾಳೆ. ಆದರೆ ಸಾರ್ವಜನಿಕ ವಲಯದಲ್ಲಿನ ಈ ಬಗೆಯ ಅಕ್ರಮಣಗಳನ್ನು ಎದುರಿಸಲು ಸೂಕ್ತವಾದ ಕಾನೂನುಗಳು ಜಾರಿಗೊಂಡಿಲ್ಲವಾದರೂ ಸ್ತ್ರೀವಾದಿಗಳ ಸುದೀರ್ಘ ಪ್ರಯತ್ನದಿಂದ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಕಾಯ್ದೆ ಜಾರಿಯಾಗಿದೆ.

ಮಹಿಳಾ ದೌರ್ಜನ್ಯದ ವಿವಿಧ ಪ್ರಕಾರಗಳು

ಮಹಿಳೆಯರ ಮೇಲಿನ ಅಪರಾಧ ಅಥವಾ ದೌರ್ಜನ್ಯಗಳನ್ನು **ಪ್ರೋ.ರಾಂ.ಅಹುಜಾ** ರವರು ತಮ್ಮ ಸೋಷಿಯಲ್ ಪ್ರಾಬ್ಲಮ್ಸ್ ಇನ್ ಇಂಡಿಯಾ ಕೃತಿಯಲ್ಲಿ ಈ ಕೆಳಕಂಡ ಮೂರು ಗುಂಪುಗಳಾಗಿ ವಿಂಗಡಿಸುತ್ತಾರೆ.

೧.ಅಪರಾಧಿ ಸ್ವರೂಪ ಹಿಂಸೆ

ಅ. ಸ್ತ್ರೀಯರ ಮೇಲಿನ ಅತ್ಯಾಚಾರ

ಆ. ಅಪಹರಣ

ಇ. ಕೊಲೆ

೨.ಕೌಟುಂಬಿಕ ಹಿಂಸೆ

ಅ. ವರದಕ್ಷಿಣೆ ಸಾವು

ಆ. ಹೆಂಡತಿಗೆ ಹೊಡೆಯುವುದು

ಇ. ವಿಧವೆಯರ ಶೋಷಣೆ

ಈ. ಹೆಣ್ಣು ಮಕ್ಕಳನ್ನು ದುರ್ವ್ಯವಹಾರಗಳಿಗೆ ಪ್ರೇರೇಪಿಸುವುದು

ಉ. ಮನೆಗೆಲಸದ ಹೆಣ್ಣು ಮಕ್ಕಳ ದೈಹಿಕ ಮತ್ತು ಲೈಂಗಿಕ ಪೀಡನೆ ಇತ್ಯಾದಿ.

೩. ಸಾಮಾಜಿಕ ಹಿಂಸೆ

ಅ. ಭ್ರೂಣ ಹತ್ಯೆಗೆ ಪ್ರೇರೆಪಿಸುವುದು.

ಆ. ಹೆಚ್ಚು ವರದಕ್ಷಿಣೆ ತರುವಂತೆ ವಿವಾಹಿತ ಸ್ತ್ರೀಯರನ್ನು ಹಿಂಸಿಸುವುದು ಇತ್ಯಾದಿ.

ಇ. ಹೆಣ್ಣು ಮಕ್ಕಳಿಗೆ ಕೀಟಲೆ ಕೊಡುವುದು.

ಈ. ಅಪ್ರಾಪ್ತ ವಯಸ್ಸಿನ ಕನ್ಯೆಯನ್ನು ಅಪಹರಿಸಿ ವಿವಾಹವಾಗಲು ಒತ್ತಾಯಿಸುವುದು.

ಉ. ಆ್ಯಸಿಡ್ ಎರಚುವುದು.

ಊ. ಸತಿ ಪದ್ಧತಿ.

ಋ. ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗಳಿಗೆ ಮಾರುವುದು

ಎ. ಹೆಣ್ಣು ಮಕ್ಕಳ ಮೈ ಮುಟ್ಟುವುದು

ಏ. ಉದ್ಯೋಗಸ್ಥ ಮಹಿಳೆಯರನ್ನು ಲೈಂಗಿಕ ಪೀಡನೆಗೆ ಗುರಿಪಡಿಸುವುದು

ಐ. ಹಾವ-ಭಾವಗಳ ಮೂಲಕ ಸ್ತ್ರೀಯರ ಘನತೆಗೆ ಅಪಚಾರ ವೆಸಗುವುದು" ಈ ರೀತಿಯಲ್ಲಿ ದೌರ್ಜನ್ಯವನ್ನು ವರ್ಗೀಕರಿಸಿದ್ದಾರೆ.[೪]

ಭಾರತ ಸಂವಿಧಾನವು ಸರ್ವ ಸಮಾನತೆಯನ್ನೆತ್ತಿದೆ. ಸ್ತ್ರೀ ಎಂಬ ಕಾರಣಕ್ಕಾಗಿ ಯಾವುದೇ ಬಗೆಯ ತಾರತಮ್ಯ ಇಲ್ಲವೆಂದು ಘೋಷಿಸಿರುವ ಈ ದೇಶದಲ್ಲಿ ಸಾವಿರಾರು ಹೆಣ್ಣು ಮಕ್ಕಳಿಗೆ ಜನ್ಮ ತಳೆಯುವ ಸ್ವಾತಂತ್ರ್ಯವೂ ಇಲ್ಲವೆಂದರೆ ಸ್ತ್ರೀ ವಿರೋಧಿ ಪ್ರವೃತ್ತಿಗಳು ಎಷ್ಟು ಆಳವಾಗಿ ಬೇರೂರಿವೆ ಎಂಬುದರ ಅರಿವು ಉಂಟಾಗುತ್ತದೆ. ಇಂದು ಮಹಿಳೆಯರು ಕುಟುಂಬದ ಒಳಗೆ ಹೊರಗೆ ವಿವಿಧ ಬಗೆಯ ದೌರ್ಜನ್ಯ ಹಿಂಸೆ ಮತ್ತು ಸಮಸ್ಯೆಗಳಿಗೆ ಒಳಗಾಗಿ ಪರಿತಪಿಸುವಂತಾಗಿದೆ.

ಪ್ರಾಥಮಿಕ ರಕ್ಷಣೆಯನ್ನು ಒದಗಿಸಬೇಕಾದ ಕುಟುಂಬವೇ ಅನೇಕ ಸಮಸ್ಯೆಗಳಿಗೆ ಮೂಲವಾಗಿದ್ದರೆ ಇನ್ನೂ ಸಮಾಜ ಹಾಗೂ ಸಾರ್ವಜನಿಕ ಜೀವನದಲ್ಲಂತು ಬೇರೆ ಬೇರೆ ಮುಖಗಳಲ್ಲಿ ಮಹಿಳೆಯರ ಶೋಷಣೆ ಅವ್ಯಹತವಾಗಿ ನಡೆಯುತ್ತದೆ. ಇತ್ತೀಚಿನ ಕೇಂದ್ರ ಗೃಹಖಾತೆಯ ವರದಿಯೊಂದರ ಪ್ರಕಾರ ಅಂಕಿ–ಅಂಶಗಳು ಈ ಕೆಳಗಿನಂತಿವೆ

- ಪ್ರತಿ ೨೫ ನಿಮಿಷಕ್ಕೆ ೧ ಹಿಂಸೆ ಪ್ರಕರಣ
- ಪ್ರತಿ ೪೩ ನಿಮಿಷಕ್ಕೆ ೧ ಅಪಹರಣ, ಬಲಾತ್ಕಾರ
- ಪ್ರತಿ ೫೧ ನಿಮಿಷಕ್ಕೆ ೧ ಕಿರುಕುಳ ಪ್ರಕರಣ
- ಪ್ರತಿ ೬೦ ನಿಮಿಷಕ್ಕೆ ೧ ವರದಕ್ಷಿಣೆ ಸಾವು
- ಪ್ರತಿ ೩೩ ನಿಮಿಷಕ್ಕೆ ೧ ಕ್ರೌರ್ಯದ ಕೃತ್ಯ

ಒಟ್ಟಾರೆ ಪ್ರತಿ ೭ ನಿಮಿಷಕ್ಕೊಮ್ಮೆ ಮಹಿಳೆಯರ ವಿರುದ್ಧದ ಯಾವುದಾದರೊಂದು ಅಪರಾಧ ದಾಖಲಾಗುತ್ತಲೇ ಇರುತ್ತವೆ. ಕಾಯ್ದೆ ಕಾನೂನುಗಳಿಂದ ತುಂಬಿರುವ ಈ ಸಮಾಜದಲ್ಲಿ ಮಹಿಳೆಯರು ಎಷ್ಟರಮಟ್ಟಿಗೆ ಸುರಕ್ಷಿತರಾಗಿದ್ದಾರೆಂಬುದಕ್ಕೆ ಈ ಅಂಕಿ ಸಂಖ್ಯೆಯೂ ಸಾಕ್ಷಿ ನೀಡುತ್ತವೆ. ನಮ್ಮ ದೇಶದಲ್ಲಿ ಜನ ಸಂಖ್ಯಾ ಸ್ಫೋಟ ಕಾರಣವಾಗಿ ಆರ್ಥಿಕ ಅಭಿವೃದ್ದಿ ಕುಂಟಿತವಾಗುತ್ತಿದೆ ಎಂದು ಜನ ಸಂಖ್ಯಾ ನಿಯಂತ್ರಣಾ ಕಾಯ್ದೆಯನ್ನು ಜಾರಿ ಮಾಡಲಾಯಿತು. ಪ್ರತಿ ಕುಟುಂಬಕ್ಕೂ ೨ ಮಕ್ಕಳು ಸಾಕು ಎಂದು ಸರ್ಕಾರ ಘೋಷಿಸಿತು ಅಲ್ಲದೇ ಕೇರಳಾ ಸರ್ಕಾರ ೧ ಹೆಜ್ಜೆ ಮುಂದೆ ಹೋಗಿ ೨ ಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದರೆ ಸರ್ಕಾರಿ ನೌಕರಿ ನೀಡುವುದಿಲ್ಲ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಕೊಡುವುದಿಲ್ಲವೆಂದು ಬೆದರಿಕೆ ಹಾಕಿತು. ಇದೊಂದು ರೀತಿಯಲ್ಲಿ ಬಹಿಷ್ಕಾರ ಹಾಕಿದಂತೆಯೇ ಸರಿ ಇನ್ನೂ ಕೆಲವು ರಾಜ್ಯ ಸರ್ಕಾರಗಳು ಕುಟುಂಬದಲ್ಲಿ ಮಕ್ಕಳ ಸಂಖ್ಯೆಯನ್ನು ೨ ನ್ನು ದಾಟಿದರೆ ವೇತನ ಬಡ್ತಿ ಕೊಡುವುದನ್ನು ನಿಲ್ಲಿಸಲಾಗುವುದೆಂದು ಬೆದರಿಕೆ ಹಾಕಿದವು. ಈ ಕಾರಣವಾಗಿ ಜನರು ಜನಸಂಖ್ಯಾ ನಿಯಂತ್ರಣಕ್ಕೆ ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಯಿತು. ಇಂತಹ ಸಂದರ್ಭದಲ್ಲಿ ಕುಟುಂದಲ್ಲಿ ಮಗು ಯಾವುದಿರಬೇಕೆಂಬ ಆಯ್ಕೆಯ ಪ್ರಶ್ನೆ ಎದುರಾಯಿತು. ಮೊದಲ ಮಗು ಹೆಣ್ಣಾದರೆ ಎರಡನೇ ಮಗು ಕಡ್ಡಾಯವಾಗಿ ಗಂಡಾಗಲೇ ಬೇಕೆಂಬ ಬಯಕೆ ಹೆತ್ತವರದಾಗಿತ್ತು.

ಸಮಾಜದಲ್ಲಿ ಮಹಿಳಾ ದೌರ್ಜನ್ಯ

ಯಾಜಮಾನ್ಯ ಮತ್ತು ಅಧೀನ ನೆಲೆಯನ್ನು ಪ್ರತಿಷ್ಟಾಪಿಸುವ ಕೌಟುಂಬಿಕ ವಲಯ ಸಮಾಜದ ಪ್ರಮುಖವಾದ ಭಾಗ. ಮಹಿಳೆಯ ಬದುಕಿನ ರಕ್ಷಣಾ ಕೇಂದ್ರವೆಂದು ಭ್ರಮೆಯನ್ನು ಸೃಷ್ಟಿಸಲಾದ ಕೌಟುಂಬಿಕ ವಲಯ, ವ್ಯಕ್ತಿಯ ವ್ಯಕ್ತಿತ್ವ ರೂಪಿಕೆಯ ತಳಹದಿ. ಮಹಿಳೆಯ ಲೈಂಗಿಕತೆಯನ್ನು ಅಧೀನಗೊಳಿಸಲೆಂದೇ

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ರೂಪಿತಗೊಂಡ ಈ ಸಂಸ್ಥೆಯು "ಲಿಂಗ ತಾರತಮ್ಯ" ವನ್ನು ಹುಟ್ಟು ಹಾಕುವುದರೊಂದಿಗೆ ಅದನ್ನು ಸ್ವೀಕರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಲೆಮಾರಿ ಸಮುದಾಯಗಳಲ್ಲಿ ವಾಸಿಸುತ್ತಿರುವ ಸ್ತ್ರಿ ಪುರುಷರು ಕಾಲಾನಂತರದಲ್ಲಿ ಕುಟುಂಬ ವ್ಯವಸ್ಥೆಗೆ ಸೀಮಿತಗೊಂಡರು. ನಾಗರಿಕತೆಯು ಬೆಳೆದಂತೆಲ್ಲಾ ಸಾಮಾಜಿಕ ವ್ಯವಸ್ಥೆಯು ಸಂಪೂರ್ಣವಾಗಿ ಪುರುಷನ ಕಪಿಮುಷ್ಟಿಯಲ್ಲಿ ಸೇರಿ ಮಹಿಳೆಗೆ ಹಕ್ಕುಗಳನ್ನು ನಿರಾಕರಿಸಿ, ಬಾದ್ಯತೆಗಳನ್ನು ಮಾತ್ರ ಒದಗಿಸಲಾಯಿತು. ೬೦ರ ದಶಕದಿಂದೀಚೆಗೆ ಬೆಳೆದು ಬಂದ ಸ್ತ್ರೀವಾದಿ, ಚಿಂತನಾಕ್ರಮವು ಮಹಿಳಾ ಬದುಕನ್ನು ಕೇಂದ್ರಿಕರಿಸಿಕೊಂಡು ಸಮಾಜ ವ್ಯವಸ್ಥೆಗೆ ಮುಖಾ ಮುಖಿಯಾಗಲಾರಂಭಿಸಿದಳು. ಸಮಾಜದ ಬಹುಪಾಲು ಸಂಗತಿಗಳಲ್ಲಿ ಅದೃಶ್ಯಗೊಳಿಸಲಾದ ಮಹಿಳೆಯ ಅಸ್ಥಿತ್ವದ ಶೋಧನೆಯು ಪ್ರಾರಂಭವಾದಾಗಲೇ, ಕುಟುಂಬವು ರಕ್ಷಣೆಯನ್ನೊದಗಿಸುವ ಮತ್ತು ಮಹಿಳೆಯದೇ ವಲಯವೆಂದು ಶತಮಾನಗಳ ಕಾಲಭ್ರಮೆಯನ್ನು ಸೃಷ್ಟಿಸಲಾಗಿದೆಯೆಂಬ ಸತ್ಯವನ್ನು ತೀವ್ರವಾದಿ ಸ್ತ್ರೀವಾದಿಗಳು ಅನಾವರಣಗೊಳಿಸಿದರು.

ಕಾಲಕ್ರಮೇಣ ಹಲವಾರು ಚಿಂತನೆಗಳು ಬೆಳೆದು ಬಂದರೂ ಕೌಟುಂಬಿಕ ದೌರ್ಜನ್ಯವನ್ನು ಗಂಭೀರವಾದ ಸಮಸ್ಯೆಯನ್ನಾಗಿ ಪರಿಗಣಿಸದಿರುವುದು ತೀರಾ ಇತ್ತೀಚಿನ ಸಂದರ್ಭಗಳಲ್ಲಿ "ಕುಟುಂಬ" ವೆನ್ನುವುದು ತೀರಾ ಖಾಸಗಿಯಾದ ವಲಯ, ಇಲ್ಲಿನ ಸಂಗತಿಗಳು ಹೊರಗೆಡವುದೇ ಅಪರಾಧ, ಅದರಲ್ಲೂ ಸಂಸ್ಕೃತಿ, ಮರ್ಯಾದೆ ಕಾಪಾಡುವ ನೆಪದಲ್ಲಿ ವಿಶೇಷವಾಗಿ ಮಹಿಳೆಯ ಮೇಲೆ ಈ ಹೊಣೆಯನ್ನು ಹೊರಿಸಲಾಗಿದೆ. ಹಾಗಾಗಿ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆ ನಿರಂತರವಾಗಿ ದಮನವನ್ನು ಅನುಭವಿಸುತ್ತಿದ್ದರೂ ಅದನ್ನು ಹೊರ ಹಾಕುವಂತಹ ಸಾಹಸಕ್ಕೆ ಮುಖ ಮಾಡುವುದಿಲ್ಲ. ಪ್ರಾಚೀನ ಸಮಾಜ ವ್ಯವಸ್ಥೆಯಲ್ಲಿನ ಮಹಿಳಾ ಬದುಕಿಗೆ ಹೋಲಿಸಿದರೆ ಇವತ್ತಿನ ಮಹಿಳೆಯ ಬದುಕು ಬಹುಪಾಲು ಉತ್ತಮವೆನ್ನುವುದು ಸಂಶಯಾಸ್ಪದ ಸಂಗತಿಯೇ ಆಗಿದೆ. ಶತಮಾನಗಳಿಂದಲೂ ಆಳವಾಗಿ ಬೇರು ಬಿಟ್ಟಿರುವ ಪುರುಷ ಪ್ರಧಾನ ಸಂಸ್ಕೃತಿಯು ಕಾಲ ಕಳೆದಂತೆ ತನ್ನ ಸ್ವರೂಪವನ್ನು ಬದಲಿಸುತ್ತಿದೆಯೇ ವಿನಃ ನಶಿಸಿ ಹೋಗುತ್ತಿಲ್ಲ. ಹಾಗಾಗಿ ಆಧುನಿಕ ಸಮಾಜದ ವ್ಯವಸ್ಥೆಯಲ್ಲಿ ರೂಪು ತಳೆಯುತ್ತಿರುವ ಕುಟುಂಬಗಳಲ್ಲಿಯೂ ಸಹ ಗಣನೀಯವಾದ ಬದಲಾವಣೆಗಳೇನು ಕಂಡು ಬರುವುದಿಲ್ಲ.

ಆಧುನಿಕ ಮಹಿಳೆಯ ಪರಿಕಲ್ಪನೆಯೇ ಪಿತೃ ಸಂಸ್ಕೃತಿ ರೂಪಿಸಿದ ಹೊಸ ಮಾದರಿಯ ಸಂಕೋಲೆಯಾಗಿದೆ. ಸಮಾಜ ವ್ಯವಸ್ಥೆಯಲ್ಲಿನ ಹಲವು ಬಗೆಯ ದೌರ್ಜನ್ಯಗಳಲ್ಲಿ ಕೌಟುಂಬಿಕ ಹಿಂಸೆಯು ಅತ್ಯಂತ ಸಂಕೀರ್ಣವಾದದ್ದು. ಅಧಿಕಾರ ಮತ್ತು ಅಧಿಕಾರ ಹೀನತೆಯ ಮಧ್ಯೆ ಬಹು ಮುಖ್ಯವಾಗಿ ಕಾಣುವ ಹಿಂಸೆ–ದೌರ್ಜನ್ಯಗಳು ಕೌಟುಂಬಿಕ ಸಂಬಂಧಗಳಲ್ಲಿ ಅಧಿಕಾರ ಸಂರಚನೆಯಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬ ವ್ಯವಸ್ಥೆಯು ವಿಭಕ್ತ–ಅವಿಭಕ್ತ ಕುಟುಂಬಗಳ ಮಾದರಿಯಲ್ಲಿಯಲ್ಲಿದೆ. ನಗರೀಕರಣ, ಜಾಗತೀಕರಣ, ಖಾಸಗೀಕರಣಗಳ ಪ್ರಭಾವದಿಂದ ವಿಭಕ್ತ ಕುಟುಂಬಗಳ

ಸಂಖ್ಯೆಯು ಏರುತ್ತಲೇ ಇವೆ. ಆದರೆ ಸ್ತ್ರೀ ಕೇಂದ್ರಿತವಾದ ಕುಟುಂಬಗಳನ್ನು ಪರಿಶೀಲಿಸುವುದಾದರೆ ಯಾವುದೇ ಬಗೆಯ ಕುಟುಂಬ ವ್ಯವಸ್ತೆಯು ಮಹಿಳೆಯ "ಅಸ್ಥಿತ್ವ" ರೂಪಿಕೆಗೆ ಸಹಕಾರಿಯಾಗಿಲ್ಲ. ಪ್ರಧಾನ ಲಿಂಗೀಯ ಚಿಂತನೆಗಳು. ಸಮಾಜವ್ಯವಸ್ಥೆಯಲ್ಲಿರುವುದರಿಂದ, ಅಧೀನ ಲಿಂಗೀಯವಾಗಿಸಿರುವ ಮಹಿಳೆ ನಿರಂತರವಾಗಿ ಅದೇ ಸ್ಥಾನದಲ್ಲಿ ಮುಂದುವರೆಯುವಂತೆ ರೂಪಿಸಿರುವ ವ್ಯವಸ್ಥೆಯು ಕುಟುಂಬದಲ್ಲಿದೆ. ಮಹಿಳೆಯು ಕೇವಲ ದೇಹ ಮತ್ತು ಅದರಿಂದೊದಗುವ ಸೇವೆಯನ್ನಾಧರಿಸಿಯೇ, ನಿರ್ವಚನಗೊಳ್ಳುವುದರಿಂದ, ಸಮಾಜ ವ್ಯವಸ್ಥೆಯಲ್ಲಿನ ಅವಿಧೇಯತೆಯನ್ನು ಅವಳು ಸಹಿಸುವುದಿಲ್ಲ. ಆದರೆ ಈ ಅವಿಧೇಯತೆಯನ್ನು ಅನುಸರಿಸಿ, ಎಲ್ಲಾ ಬಗೆಯ ನಿರ್ಬಂಧಗಳನ್ನು ಒಪ್ಪಿ ನಡೆಯುತ್ತಿರುವಾಗಲು ಅವಳ ಬದುಕು ನಿರಾಳತೆಯಿಂದ ಕೂಡಿಲ್ಲ. ಇತರರ ಬದುಕಿಗೆ ಪೂರಕವಾಗಿ, ಅವರು ಸೂಚಿಸಿದಂತೆ ಬದುಕುವುದು ಸಹ ದೌರ್ಜನ್ಯದ ವ್ಯಾಖ್ಯಾನವನ್ನು ಪ್ರವೇಶಿಸುವುದರಿಂದ, ಮಹಿಳೆಯ ಬದುಕಿನ ಯಾವುದೇ ಅಂಶವು ಸಹ ಅವಳ ಇಚ್ಚೆಯನ್ನು ಆಧರಿಸಿದ್ದಲ್ಲ. ಅವಳ ಇಚ್ಚೆಯನ್ನು ಅರಿಯುವ ಪ್ರಶ್ನೆಯೂ ಸಹ ಪರಿಗಣನೆಗೆ ಬರುವುದಿಲ್ಲ. ಹೀಗಾಗಿ ಕೌಟುಂಬಿಕ, ಸಾರ್ವಜನಿಕ ಅಥವಾ ಒಟ್ಟು ಸಮಾಜ ವ್ಯವಸ್ಥೆಯಲ್ಲಿ ಅವಳ ಅಸ್ಥಿತ್ವವು ದಮನವಾಗಿದೆ. ಪ್ರಪಂಚದಲ್ಲಿನ ಯಾವುದೇ ಮಹಿಳೆಯು ಸಹ ಕೌಟುಂಬಿಕ ಹಿಂಸೆಯ ಅನುಭವದಾಚೆಗೆ ಉಳಿದಿಲ್ಲವೆಂಬುದು ಸ್ಪಷ್ಟ."[೫]

ಸಾಮಾನ್ಯವಾಗಿ ಕುಟುಂಬ ಚೌಕಟ್ಟಿನೊಳಗೆ ಲಿಂಗದ ಕಾರಣಕ್ಕಾಗಿಯೇ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ಕೌಟುಂಬಿಕ ಹಿಂಸೆಯೆಂದು ಕರೆಯಬಹುದು. ಸಮಾಜ ವ್ಯವಸ್ಥೆಯಲ್ಲಿನ ಜಾತಿ, ವರ್ಗ, ವರ್ಣ ಎಲ್ಲಾ ಬಗೆಯ ಸೂಚಿತಗಳಲ್ಲಿಯೂ ಕಾಣಿಸಿಕೊಳ್ಳುವ ಮಹಿಳೆಯು ಕುಟುಂಬದಲ್ಲಿ ಅನುಭವಿಸುತ್ತಿರುವ ಹಿಂಸೆ– ದೌರ್ಜನ್ಯ ಸಂದರ್ಭಗಳಲ್ಲಿಯೂ ಸಾಕಷ್ಟು ಕ್ರೂರವಾಗಿವೆ. ಮೊಟ್ಟ ಮೊದಲಿಗೆ ಕೌಟುಂಬಿಕ ಹಿಂಸೆ ವ್ಯಾಖ್ಯಾನವು ಯುನೈಟೆಡ್ / ನ್ಯಾಷನಲ್ ರಚಿಸಿರುವ ಕೌಟುಂಬಿಕ ಹಿಂಸೆಯು ಮಾದರಿ ಶಾಸನ CEADW ದ ವ್ಯಾಖ್ಯಾನವನ್ನು ಆಧರಿಸಿದೆ. ೧೯೮೯ ರ ವರದಿ ಪ್ರಕಾರ ಕೌಟುಂಬಿಕ ಹಿಂಸೆ ಎಂದರೆ ಕೌಟುಂಬಿಕ ದೌರ್ಜನ್ಯದಲ್ಲಿ ಲಿಂಗತ್ವದ ಆಧಾರದ ಮೇಲೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ಕುಟುಂಬದ ಮಹಿಳೆಯ ಮೇಲೆ ಮನೆಯ ಸದಸ್ಯರೇ ನಡೆಸುವ ಹಿಂಸೆ, ಇದು ಸಣ್ಣ ಬಡಿತದಿಂದ ಹಿಡಿದು ಕ್ರೂರವಾದ ದೈಹಿಕ ಹೊಡೆತ, ಅಪಹರಣ, ಬೆದರಿಕೆಯೊಡ್ಡುವುದು, ಬೈಗುಳ, ಆಸ್ತಿನಾಶ, ಲೈಂಗಿಕ ಕಿರುಕುಳ, ಬಲಾತ್ಕಾರದ ವರದಕ್ಷಿಣೆ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಹಿಂಸೆ, ಮನೆಯ ಕೆಲಸಗಾರರ ಮೇಲಿನ ಆಕ್ರಮಣಗಳನ್ನೂ ಕೂಡ "ಕೌಟುಂಬಿಕ ದೌರ್ಜನ್ಯ" ಎಂದು ಅರ್ಥೈಸಲಾಗಿದೆ."[೬] ಈ ವ್ಯಾಖ್ಯಾನವು ದೈಹಿಕ, ಮಾನಸಿಕ ಹಿಂಸೆಯನ್ನು ಮಾತ್ರ ಒಳಗೊಂಡಿದ್ದರೂ ಸಹಿತ ದೈಹಿಕ ಹಿಂಸೆಯತ್ತ ಹೆಚ್ಚಿನ ಗಮನವನ್ನು ಹರಿಸಿದೆಯೆಂಬುದು ಸ್ಪಷ್ಟವಾಗುತ್ತದೆ. ಮನೆಯ ಕೆಲಸಗಾರರ ಮೇಲೆ ನಡೆಯುವ ದೌರ್ಜನ್ಯವೂ ಸಾರ್ವಜನಿಕ ವಲಯದ ವ್ಯಾಪ್ತಿಯಲ್ಲಿ ಬರುತ್ತದೆ ಆದ್ದರಿಂದ ಕೌಟುಂಬಿಕ ಹಿಂಸೆಯಲ್ಲಿ ಸೇರಿಸುವುದು ಅಸಮರ್ಪಕವಾಗಿದೆ.

ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ರಿಸರ್ಚ್ ವುಮೆನ್ (ICRW ೨೦೦೦) ಕೌಟುಂಬಿಕ ದೌರ್ಜನ್ಯವೆಂದರೆ, “ಮಹಿಳೆಯ ವಿರುದ್ದವಾಗಿ ಮೌಖಿಕ, ದೈಹಿಕ ಮತ್ತು ಮಾನಸಿಕ ಆಕ್ರಮಣಗಳನ್ನು ಒಳಗೊಂಡಿದ”. ವಿಶೇಷವಾಗಿ ಇಲ್ಲಿ ಕಂಡುಬರುವ ವೃದ್ದ ಮಹಿಳೆಯರನ್ನು ಸಹ ಈ ವ್ಯಾಖ್ಯಾನದಲ್ಲಿ ಸೇರಿಸಲಾಗಿದೆ. **ದೇವ್ ಮತ್ತು ಸೋಲಂಕಿ** ಎನ್ನುವವರು ಇದನ್ನು “ವೈವಾಹಿಕ ಸಂಬಂಧಗಳಿಂದ ಅಥವಾ ಗಂಡನಿಂದಾಗಿ ಮಹಿಳೆಯ ವಿರುದ್ದ ನಡೆಯುವ ಯಾವುದೇ ಕೃತ್ಯವು ಸಹ ಕೌಟುಂಬಿಕ ಹಿಂಸೆಯೇ ಆಗಿದೆ” ಎಂದು ಅಭಿಪ್ರಾಯ ಪಟ್ಟಿದ್ದಾರೆ. ವೈವಾಹಿಕ ಸಂಬಂಧಗಳು ಮತ್ತು ಗಂಡನನ್ನು ಮಾತ್ರ ಕೌಟುಂಬಿಕ ವ್ಯಾಪ್ತಿಯಲ್ಲಿರುವುದನ್ನು ಪರಿಗಣಿಸಿ ವ್ಯಾಖ್ಯಾನಿಸಲಾಗಿದೆ. ಕೌಟುಂಬಿಕ ಹಿಂಸೆಯಲ್ಲಿ ಕುಟುಂಬವೆಂದರೆ ಹುಟ್ಟಿದ ಮನೆ ಮತ್ತು ಗಂಡನ ಮನೆಯೆರಡನ್ನೂ ಸಹ ಪರಿಗಣನೆಗೆ ತೆಗೆದು ಕೊಳ್ಳುವುದಿಲ್ಲ. ಗಂಡನ ಮನೆಯನ್ನು ಮಾತ್ರ ಕುಟುಂಬವೆಂದು, ಅಲ್ಲಿ ಮಾತ್ರ ಮಹಿಳೆಯ ಹಿಂಸೆಗೊಳಗಾಗುತ್ತಾಳೆಂಬ ಸೀಮಿತತೆಯನ್ನು ಸಾಕಷ್ಟು ಚಿಂತನೆಗಳು ಕಲ್ಪಿಸಿವೆ. ಪಿತೃ ಚಿಂತನೆಗಳ ಪ್ರಭಾವದಿಂದಾಗಿ ಹುಟ್ಟಿದ ಮನೆಗಳಲ್ಲಿ ತಂದೆಯಿಂದಲೇ ಆಗುವ ಅತ್ಯಾಚಾರಗಳು ಅಥವಾ ಇತರರಿಂದ ಇತರೇ ಬಗೆಯಲ್ಲಾಗುವ ಹಿಂಸೆಗಳು ಆಧಾರವಿದ್ದರೂ ಮುಚ್ಚಿ ಹೋಗುತ್ತಿವೆ. ಅಲ್ಲದೆ ಈ ವ್ಯಾಖ್ಯಾನವು ದೈಹಿಕ ಹಿಂಸೆ ಮತ್ತು ಮಾನಸಿಕ ಹಿಂಸೆಯನ್ನು ಮಾತ್ರ ಕೌಟುಂಬಿಕ ಹಿಂಸೆ ಎಂದು ಪರಿಗಣಿಸಿದೆ. ಹಾಗಾಗಿ ಇದು ಸಂಪೂರ್ಣ ಬಗೆಯ ಕೌಟುಂಬಿಕ ಹಿಂಸೆಯನ್ನು ವ್ಯಾಖ್ಯಾನಿಸುವಲ್ಲಿ ಅಸ್ಪಷ್ಟವಾಗಿದೆ.

ಮಾಳವಿಕ ಕಾರ್ಲೇಕರ್ ರವರು ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಶೋಷಣಾತ್ಮಕ ಲಿಂಗ ಸಂಬಂಧಗಳನ್ನು ಆಧರಿಸುವುದರೊಂದಿಗೆ, ಪುರುಷ ಪ್ರಧಾನತೆ ಮತ್ತು ನಿಯಂತ್ರಣದ ಒಟ್ಟು ದೃಷ್ಟಿಕೋನದ, ಲಕ್ಷಣಗಳು, ಚರ್ಚೆಗಳು ಕುಟುಂಬದ ಸದಸ್ಯರಿಗನುಗುಣವಾಗಿ ಸಾಮಾಜೀಕೃತ ವ್ಯವಸ್ಥೆಯಲ್ಲಿ ದೌರ್ಜನ್ಯವನ್ನು ಒಂದು ಆಯುಧವೆಂದು ಹೇಳುತ್ತಾರೆ. ಕೌಟುಂಬಿಕ ಹಿಂಸೆಯನ್ನು ವ್ಯಾಖ್ಯಾನಿಸುವಾಗ ಹುಟ್ಟಿದ ಮನೆ–ಗಂಡನ ಮನೆಯಲ್ಲಿನ ಮಹಿಳೆಯ ಮೇಲೆ ಅವಳ ಸಂಬಂಧಿಕರು ಎಸಗುವ ದೌರ್ಜನ್ಯವನ್ನು ಕೌಟುಂಬಿಕ ಹಿಂಸೆಯಡಿಯಲ್ಲಿ ಹೇಳುತ್ತಾರೆ. ಆದರೆ ಇವರು ಕುಟುಂಬದಲ್ಲಿಬಹು ಪ್ರಮಾಣದಲ್ಲಿ ನಡೆಯುವುದು ಮಾನಸಿಕ ಹಿಂಸೆ ಮಾತ್ರ ಉದಾ: ಸ್ಕಿಜೋಫ್ರಿನಿಯಾ, ಹಿಸ್ಟಿರಿಯಾ, ಖಿನ್ನತೆ ಮೊದಲಾದಂತಹ ಕಾಯಿಲೆಗಳು ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು ಮಾನಸಿಕ ಅನಾರೋಗ್ಯದಿಂದಲೇ ಎನ್ನುತ್ತಾರೆ. **ದಾವರ್** ರವರು ಸಹ ಮಹಿಳೆಯರ ಬದುಕಿನ ಸಂದರ್ಭಗಳನ್ನು ಅವರು ಮಾನಸಿಕ ಅನಾರೋಗ್ಯದಿಂದ, ದೈಹಿಕ ಅನಾರೋಗ್ಯಕ್ಕೂ ಸಂಬಂಧವನ್ನು ಕಲ್ಪಿಸುತ್ತಾರೆ. ಇವೆರಡರ ಮಧ್ಯದ ಅವಿನಾಭಾವವಾದ ನಂಟಿದೆಯೆಂಬ ನಿಲುವನ್ನು ತಳೆದಿದ್ದಾರೆ.

ಕೌಟುಂಬಿಕ ದೌರ್ಜನ್ಯವು ಪುರುಷ ಸಂಸ್ಕೃತಿಯಲ್ಲಿ ಹಲವು ಕಾರಣಗಳಿಂದ ರೂಪ ತಳೆಯುತ್ತಿದೆ. ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯಕ್ಕೆ ಸಮಾಜ ವ್ಯವಸ್ಥೆಯಲ್ಲಿನ ಸ್ತ್ರೀ–ಪುರುಷರ ಮಧ್ಯದ ಅಸಮಾನ ಅಧಿಕಾರ ಹಂಚಿಕೆಯ ಮೂಲ ತಳಹದಿಯಾಗಿದೆ. ಕೌಟುಂಬಿಕ ದೌರ್ಜನ್ಯ ಇದಕ್ಕೆ ಹೊರತಾಗಿಲ್ಲ.

ಸಾಂಪ್ರದಾಯಿಕ ಚಿಂತನೆಗಳಲ್ಲಿ ಮಹಿಳೆಯನ್ನು ಸಹಜೀವಿಯಾಗಿ ಪರಿಗಣಿಸಿದೆ. ಇರುವುದೊಂದಿಗೆ ಅವಳನ್ನು ನಿರಂತರವಾಗಿ ೨ನೇ ದರ್ಜೆಯ ಪ್ರಜೆಯಾಗಿಯೇ ನೋಡಲಾಗಿದೆ. ಜೈವಿಕ ಭಿನ್ನತೆಯನ್ನು ಸಾಮಾಜಿಕತೆಯಲ್ಲಿ ಲಿಂಗ ಅಸಮಾನತೆಗೆ ತಿರುಚಲ್ಪಟ್ಟಿದೆ. ಈ ಕಾರಣವಾಗಿ ಪುರುಷರೂಪಿ ಸಮಾಜ ವ್ಯವಸ್ಥೆಯಲ್ಲಿ ಅಧೀನಲಿಂಗಿಯಾಗಿ ಮಹಿಳೆಯನ್ನು ಪರಿಗಣಿಸಿದ್ದೇ ಅವಳ ಆರ್ಥಿಕ ಅವಲಂಬನೆ, ಪುರುಷ ಕೀಳರಿಮೆ, ಸಾಮಾಜೀಕರಣ ಸ್ಥಿರ ಮಾದರಿ ಪಾತ್ರಗಳು ಸ್ಥಿರೀಕರಣ, ಲೈಂಗಿಕತೆ ಮತ್ತು ಚಲನಶೀಲತೆಯ ಮೇಲಿನ ನಿರ್ಬಂಧ, ಕೌಟುಂಬಿಕ ಮೌಲ್ಯಗಳು ಮತ್ತು ಸಂಸ್ಕೃತಿಯ ಹೊಣೆ ಇತ್ಯಾದಿ ಹಲವಾರು ಕಾರಣಗಳನ್ನು ಪಟ್ಟಿ ಮಾಡಬಹುದಾದರೂ ಇವೆಲ್ಲವುಗಳ ಉದ್ದೇಶ ಒಂದೇ ಅಸಮಾನ ಅಧಿಕಾರ ಹಂಚಿಕೆಯಿಂದ, ಸಾಮಾಜಿಕವಾಗಿ ದತ್ತವಾಗಿರುವ ಅಧಿಕಾರವನ್ನು ಭಧ್ರವಾಗಿರಿಸಿಕೊಳ್ಳುವಿಕೆಯೇ ಆಗಿದೆ.

ಮೇಲ್ನೆಲೆಯಲ್ಲಿ ಭಿನ್ನವಾಗಿ ಕಾಣುವ ಕೌಟುಂಬಿಕ ವಲಯ ಮತ್ತು ಸಾರ್ವಜನಿಕ ವಲಯಗಳ ಪರಸ್ಪರ ಪೂರಕವಾಗಿವೆ. ಎರಡು ವಲಯಗಳಲ್ಲಿಯೂ ಸಹ ಮಹಿಳೆಯ ಅಭದ್ರತೆ ಮತ್ತು ರಕ್ಷಣೆಯ ಪ್ರಶ್ನೆಯೇ ಪ್ರಮುಖವಾದುದಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಗಿರುವ ಆಯ್ಕೆಗಳು ಬೆಂಕಿ ಅಥವಾ ಬಾಣಲೆಗೆಂತಾಗಿದೆ. ಹಾಗಾಗಿ ಎರಡು ವಲಯಗಳಲ್ಲಿನ ದೌರ್ಜನ್ಯದ ಸ್ವರೂಪವು ಭಯಾನಕವಾದ್ದರಿಂದ, ಇರುವುದರಲ್ಲಿಯೇ ಉತ್ತಮವೆಂದು ಕೌಟುಂಬಿಕ ವಲಯವನ್ನು ಆರಿಸಿಕೊಳ್ಳುವಂತಾಗಿದೆ. ಕುಟುಂಬವಲಯದಲ್ಲಿ ಕೇವಲ ಕೆಲವು ಪುರುಷರ ಅಧೀನಕ್ಕೆ, ಆಕ್ರಮಣಕ್ಕೆ ಒಳಗಾಗುವ ಹೆಣ್ಣು, ಸಾರ್ವಜನಿಕ ವಲಯದಲ್ಲಿ ಸಮಸ್ತ ಪುರುಷ ಸಮುದಾಯದ ಆಕ್ರಮಣಕ್ಕೆ ಒಳಗಾಗುವ ಸಂದರ್ಭಗಳಿರುತ್ತವೆಯಾದ್ದರಿಂದ, ಕೌಟುಂಬಿಕ ವಲಯವು ಇರುವುದರಲ್ಲಿಯೇ ಸ್ವಲ್ಪ ಸುರಕ್ಷಿತವೆಂದು ಹೇಳಬಹುದು.

ಈ ಪ್ರಮಾಣದಲ್ಲಿನ ಸಂದಿಗ್ಧತೆಯನ್ನು ಹೊಂದಿರುವ ಕೌಟುಂಬಿಕ ದೌರ್ಜನ್ಯದ ಪರಿಹಾರಗಳನ್ನು, ಸುಧಾರಣೆಗಳನ್ನು ಮಹಿಳಾ ಸಮುದಾಯ ನಿರಂತರವಾಗಿ ಶೋಧಿಸಬೇಕಾಗಿದೆ. ಇಲ್ಲಿನ ಮಹಿಳೆಯು ಮಾರಾಣಾಂತಿಕ ಸಂಗತಿಗಳನ್ನು ಅನುಭವಿಸಿದರೂ ಅದನ್ನು ಅವಳು ಹೊರ ಹಾಕುವಂತಿಲ್ಲ, ಹೊರಹಾಕಿಲೆತ್ನಿಸುವುದಾದರೂ, ಅವಳಿಗೆ ಅದರ ಪರಿಣಾಮಗಳಿಂದ ಬೇರೆಡೆ ನೆಲೆ ನಿಲ್ಲಲು ಕನಿಷ್ಟ ಪ್ರಮಾಣದ ಆಶ್ರಯವು ಅವಳಿಗಿಲ್ಲವಾದ್ದರಿಂದ ಇರುವ ಪ್ರಮಾಣದಲ್ಲಿ ಕೌಟುಂಬಿಕ ವಲಯ ಉತ್ತಮವೆನ್ನಬಹುದು. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಒಟ್ಟು ಸಮುದಾಯದ ಆಸ್ತಿಯಾಗಿ ಪರಿಗಣಿತವಾಗುವ ಮಹಿಳೆಯು ತನ್ನದಲ್ಲವೆಂದು ಹೇಳಲಾಗುವ ಸಾರ್ವಜನಿಕ ವಲಯದಲ್ಲಿ ಅವಳ ಪ್ರವೇಶ ಪ್ರಕ್ರಿಯೆಯಿಂದ ಮೊದಲುಗೊಂಡು, ನಿರಂತರವಾದ ಪ್ರಕ್ರಿಯೆಯಲ್ಲಿ ವಿಭಿನ್ನ ಬಗೆಯ ದೌರ್ಜನ್ಯಗಳಿಗೀಡಾಗಬೇಕಾಗುತ್ತದೆ.

ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ

ಭಾರತೀಯ ಮಹಿಳಾ ಚಳುವಳಿಯು ಏಕಗತಿಯಿಂದ ಕೂಡಿರದ ಒಂದು ಇತಿಹಾಸವನ್ನು ಹೊಂದಿದೆ ಎನ್ನಬಹುದು. ಅದು ವಿಷಯಾಧಾರಿತವಾದ ಒಂದು ಚಳುವಳಿಯಾಗಿದ್ದು, ಅದರ ಬೇರುಗಳನ್ನು ರಾಜಾರಾಂ

ಮೋಹನ್‌ರಾಯರ ನಾಯಕತ್ವದಡಿಯಲ್ಲಿ, ೧೯ನೇ ಶತಮಾನದಲ್ಲಿ ಬಂಗಾಳದಲ್ಲಿ ನಡೆದ ಸತಿಪದ್ಧತಿ ವಿರೋಧಿ ಚಳುವಳಿಯಲ್ಲಿ ಗುರುತಿಸಬಹುದಾಗಿದೆ. ವಿಧವಾ ಪುನರ್ವಿವಾಹ, ಬಾಲ್ಯ ವಿವಾಹದ ನಿಷೇಧ ಮತ್ತು ಹೆಣ್ಣು ಮಗುವಿಗೆ ಶಿಕ್ಷಣ ನೀಡುವಿಕೆಯಂತಹ ಇತರ ವಿಷಯಗಳು ಕೂಡ ಆಗಿನ ಕಾರ್ಯಸೂಚಿಯಲ್ಲಿದ್ದವು. ೨೦ನೇ ಶತಮಾನದ ಮಹಿಳಾ ಚಳುವಳಿಗಳು ಮಹಿಳೆಯರಿಗೆ ಆಸ್ತಿಹಕ್ಕುಗಳ ನೀಡಿಕೆ ಉದ್ಯೋಗ ಮತ್ತು ಅಸಾಂಪ್ರದಾಯಿಕ ವಲಯಗಳಿಗೆ ಮಹಿಳೆಯರ ಪ್ರವೇಶ ಇತ್ಯಾದಿಗಳ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣದ ಕಡೆಗೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸಿವೆ. ಅದೇ ಹೊತ್ತಿನಲ್ಲಿ, ಬಹಳ ಹಿಂದಿನಿಂದ ಚಾಲ್ತಿಯಲ್ಲಿರುವ ಕೌಟುಂಬಿಕ ದೌರ್ಜನ್ಯ, ಲೈಂಗಿಕ ಅತ್ಯಾಚಾರ, ವರದಕ್ಷಿಣೆ ಮತ್ತು ಮದ್ಯವ್ಯಸನದಂತಹ ಸಮಸ್ಯೆಗಳ ವಿರುದ್ಧ ಕೂಡ ಭಾರತೀಯ ಮಹಿಳಾ ಚಳುವಳಿಗಳು ಹೋರಾಡಿವೆ. ಈ ಎಲ್ಲಾ ವಿಷಯಗಳ ವಿಭಿನ್ನ ಆಯಾಮಗಳ ಬಗ್ಗೆ ಪುರುಷರು ಮತ್ತು ಮಹಿಳೆಯರಲ್ಲಿ ಅರಿವು ಮೂಡಿಸುವ ಆಶಯದೊಂದಿಗೆ ಪ್ರಸ್ತುತ ಅಧ್ಯಾಯವು ಹೆಣ್ಣು ಮಗು ಮತ್ತು ವಯಸ್ಕ ಮಹಿಳೆಯರಿಗೆ ಸಂಬಂಧಿಸಿದ ಮಹತ್ವದ ಸಮಕಾಲೀನ ವಿಷಯವನ್ನು ಎತ್ತಿಕೊಳ್ಳುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ವಲಯದಷ್ಟೆ ಪ್ರಮುಖವಾಗಿ ಕಾಣಿಸಿಕೊಳ್ಳುವುದೇ ಸಾರ್ವಜನಿಕವಲಯ. ಈ ವಲಯವನ್ನು ವ್ಯಾಖ್ಯಾನಿಸುವಾಗ ಬಹುತೇಕ ಚಿಂತಕರು ಆರ್ಥಿಕ ವ್ಯವಹಾರಗಳನ್ನು ಮಾತ್ರ ಪರಿಗಣಿಸಿರುವುದು ಕಂಡು ಬರುತ್ತದೆ. ಮಹಿಳೆಯ ಪ್ರವೇಶವನ್ನು ನಿರಾಕರಿಸಿದ ಈ ವಲಯವು ಪುರುಷರ ವ್ಯವಸ್ಥೆಯಲ್ಲಿ, ಪುರುಷ ವಲಯವೆಂದೇ ಸಮಾಜವ್ಯವಸ್ಥೆಯಲ್ಲಿ ಬಿಂಬಿತವಾಗಿದೆ. ಆದರೆ ಇತ್ತೀಚೆಗಷ್ಟೆ ಮಹಿಳೆಯರು ಪುರುಷ ಸಂಸ್ಕೃತಿಯ ಕೆಲವು ಹುನ್ನಾರಗಳಿಂದಾಗಿ ಸಾರ್ವಜನಿಕ ವಲಯದ ಪ್ರವೇಶ ಪಡೆದರು.

ಮಹಿಳೆಯ ವಲಯವೆಂದೇ ಹೇಳಲಾದ ಕೌಟುಂಬಿಕ ವಲಯವು ಮೇಲ್ನೋಟಕ್ಕೆ ಅವಳ ರಕ್ಷಣೆಯನ್ನು, ಒಡೆತನವನ್ನು ಪೋಷಿಸುತ್ತಿದೆ. ಅವಳಿಗೆ ಗೌರವ ತರುವಂತಹ ಒಂದೇ ಒಂದು ವಲಯ ಅದು ಕೌಟುಂಬಿಕ ವಲಯವೆಂಬುದು ಅಸತ್ಯದ ಸಂಗತಿಯಾಗಿದೆ. ಇನ್ನೂ ಗೌರವ, ರಕ್ಷಣೆ, ಭದ್ರತೆ, ಇವುಗಳಿಗೆ ಅವಕಾಶವೇ ಇಲ್ಲವೆಂದು ಪ್ರಚಲಿತವಾಗಿರುವ ವಲಯದಲ್ಲಿ ಅದರ ಸ್ವರೂಪ ಇನ್ನಷ್ಟು ಭೀಕರವಾಗಿದೆ. ಮೇಲ್ನೋಟಕ್ಕೆ ಇದನ್ನು ಸಮಾಜ ವ್ಯವಸ್ಥೆಯು ಒಪ್ಪಿಕೊಳ್ಳುತ್ತದೆ. ಇನ್ನಷ್ಟು ಭೀಕರ ಎಂದು ವ್ಯಾಖ್ಯಾನಿಸುವಲ್ಲಿಯೇ ಸಾರ್ವಜನಿಕ ವಲಯದಲ್ಲಿ ಅವಳ ಮೇಲಾಗುವ ದೌರ್ಜನ್ಯಗಳು ಗೋಚರಿಸುತ್ತವೆ ಎನ್ನುವ ತರ್ಕವಿದೆ. ಆದರೆ ವಾಸ್ತವಸಂಗತಿಯಲ್ಲಿ ಈ ತರ್ಕವು ಅಸಮಂಜಸವಾಗಿದೆ. ಪುರುಷಪರವಾದಂತಹ ರೂಢಿಗಳಿರುವ ಸಮಾಜವ್ಯವಸ್ಥೆಯಲ್ಲಿ ಎಲ್ಲಾ ಪುರುಷರಿಗೂ, ಎಲ್ಲಾ ಹೆಂಗಸರ ಮೇಲೆ ಅಧಿಕಾರವಿದ್ದು, ಯಾರ ಮೇಲೆಯೂ ಸಹ ಅವರು ಆಕ್ರಮಣವನ್ನು ಮಾಡಬಹುದು ಎಂಬ ಅಲಿಖಿತ ಕಾನೂನಿದೆ. ಕೌಟುಂಬಿಕ ವಲಯವನ್ನು ಸುರಕ್ಷಿತ ಜಾಗವೆಂದು ಹೇಳುವ ಹಾಗೆ ಸಾರ್ವಜನಿಕ ವಲಯದಲ್ಲಿನ ಕೆಲವು ಸ್ಥಳಗಳನ್ನು ಸುರಕ್ಷಿತವೆಂದು

ಹೇಳಲಾಗುತ್ತಿದೆ. ಉದಾ ದೇವಸ್ಥಾನ, ಸರ್ಕಾರಿ ಕಛೇರಿಗಳು, ಸಂಸ್ಥೆಗಳು, ಗುಂಪುಗಳಲ್ಲಿ ಕೆಲಸ ಮಾಡುವ ಸ್ಥಳಗಳು ಕಾರ್ಖಾನೆಗಳು, ಇತ್ಯಾದಿ. ಆದರೆ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ನೋಡಿದಾಗ ಈ ಸ್ಥಳಗಳು, ವಲಯಗಳು ಸಹಿತ ರಕ್ಷಣೆಯ ತಾಣಗಳಾಗಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ.

ಸಂಘ–ಸಂಸ್ಥೆಗಳಲ್ಲಿ ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ನೌಕರ ಸಂಘಗಳೆಂದೂ, ಯೂನಿಯನ್‌ಗಳೆಂದೂ, ಅಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ರೂಪಿಸಿಕೊಳ್ಳಲಾಗಿರುತ್ತದೆ. ಆದರೆ ಇಲ್ಲೆಲ್ಲಿಯೂ ಸಹ ಮಹಿಳೆಯ ಸಮಸ್ಯೆಗಳು, ಸಮಸ್ಯೆಗಳಾಗಿ ಪರಿಗಣಿಸುವ ಗೋಜಿಗೆ ಹೋಗುವುದಿಲ್ಲ, ಸಾಮಾನ್ಯ ಸಂಗತಿಗಳಿಗೂ, ಸೌಕರ್ಯಗಳಿಗೂ ಹೋರಾಡಲೆಂದು ರಚಿಸಿಕೊಂಡಿರುವ ಇವುಗಳಲ್ಲಿ, ಮಹಿಳಾ ಬದುಕಿನ ಆಲೋಚನೆಗಳು ಒಳಗೊಂಡಿರುವುದಿಲ್ಲ. ಹಾಗಾಗಿ ಅಲ್ಲಿನ ಮಹಿಳೆಯರ ಪರಿಸ್ಥಿತಿಗಳಿಗೆ ವಿಶೇಷ ಗಮನಹರಿಸಬೇಕಾ ದುದರತ್ತ ಯಾರೂ ಸಹ ಕಾಳಜಿಯನ್ನು ವಹಿಸುವುದಿಲ್ಲ. ಆದ್ದರಿಂದ ಕುಟುಂಬಗಳಲ್ಲಿ ನಡೆಯುವಂತೆಯೇ ಸಾರ್ವಜನಿಕ ವಲಯಗಳಲ್ಲಿಯೂ ಪ್ರಕಟಗೊಳ್ಳದಿರುವಂತಹ ಸಂಗತಿಗಳಾಗಿವೆ. ಅದೇ ರೀತಿಯಾಗಿ ಪ್ರಕಟಗೊಳ್ಳುವ ಭಾಗಗಳೆಂದರೆ ಮಾರ್ಕೆಟ್, ಪ್ರಯಾಣದ ಸಂದರ್ಭ ಇತ್ಯಾದಿ. ಈ ಬಗೆಯ ಸಾರ್ವಜನಿಕ ಸ್ಥಳಕ್ಕೆ ಪ್ರವೇಶಿಸಿದ ಮಹಿಳೆಯರು ಕೆಲಸದ ಕಾರಣಕ್ಕಾಗಿಯೇ ಕೆಲವು ವಲಯಗಳಿಗೆ ನಿಗದಿತಗೊಳ್ಳುತ್ತಾರೆ. ಉದಾಹರಣೆಗೆ ಕಛೇರಿಗಳು, ರಾಜಕೀಯ ಪಕ್ಷಗಳು, ಇತ್ಯಾದಿ. ಈ ಸಾರ್ವಜನಿಕ ವಲಯಗಳಲ್ಲಿನ ಮಹಿಳೆಯರ ವಿರುದ್ಧ ನಡೆಯುವ ಹಿಂಸೆ–ದೌರ್ಜನ್ಯಗಳು ಬಹುತೇಕವಾಗಿ ಪ್ರಕಟಗೊಳ್ಳುವುದಿಲ್ಲ. ಹೀಗೆ ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಕುರಿತು ಚರ್ಚಿಸುತ್ತಾ ಹೋದಾಗ ಸಾರ್ವಜನಿಕ ವಲಯದಲ್ಲಿ, ಸಾಮಾನ್ಯ ಸ್ಥಳ ಮತ್ತು ಕೆಲಸದ ಸ್ಥಳಗಳೆಂದು ಎರಡು ವಿಭಾಗಗಳಾಗುತ್ತವೆ. ಕೆಲಸದ ಸ್ಥಳಗಳಲ್ಲಿನ ಉಪವಲಯಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯಗಳು ಕಾಣಿಸಿಕೊಳ್ಳುತ್ತವೆ. ಈ ಉಪವಲಯಗಳ ಈ ವರೆಗೂ ಕುರಿತು ಸಾಕಷ್ಟು ಚರ್ಚೆಗಳು, ಚಿಂತನೆಗಳು ನಡೆಯುತ್ತಲೇ ಇವೆ.

ಸಂವಿಧಾನ ಮತ್ತು ಸರ್ಕಾರದ ಕಾಯ್ದೆಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವ, ಉದ್ಯೋಗ ಭದ್ರತೆ ನೀಡುವ ಸಂಘಟನೆಗೊಂಡ ಕಾರ್ಮಿಕರಿರುವ ಮತ್ತು ಉತ್ಪಾದನೆಯಲ್ಲಿ ಅನೇಕ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತ ವಲಯ. ಇದಕ್ಕೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ವಲಯವೇ ಅಸಂಘಟಿತ ವಲಯವೆಂದು ಹೇಳಲಾಗುತ್ತದೆ. ಸಮಾನತೆಯಡಿಗಿನ ವರದಿಯ ಉದ್ಯೋಗ ಭದ್ರತೆಯನ್ನು ಒದಗಿಸುವ, ಸೇವಾ ನಿಯಮಗಳನ್ನು ಪಾಲಿಸುವ ಸಲುವಾಗಿ ಸರ್ಕಾರವು ರೂಪಿಸಿರುವ ಶಾಸನಗಳು ಮತ್ತು ಕಾನೂನುಗಳ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ–ಸಂಘಟನೆಗಳು ಇಲ್ಲದ ಉತ್ಪಾದನಾ ವಲಯವನ್ನು ಅಸಂಘಟಿತ ವಲಯವೆಂದು ಕರೆಯಲಾಗುತ್ತದೆ.

ಕೆಲಸದ ಸ್ಥಳಗಳಲ್ಲಿ ಪ್ರಮುಖವಾಗಿ ಗುರುತಿಸಲಾದ ಸಂಘಟಿತ ಮತ್ತು ಅಸಂಘಟಿತ ವಲಯಗಳು ಸಾರ್ವಜನಿಕ ವಲಯದ ಭಾಗವಾಗಿಯೇ ಇರುವುದಾದರೂ ಇಲ್ಲಿ ಕಂಡು ಬರುವ ಮಹಿಳೆಯರ ಮೇಲಿನ

ಆಕ್ರಮಣದ ।ಸ್ವರೂಪಗಳು ಭಿನ್ನವಾಗಿವೆ. ಸಾಮಾನ್ಯವಾಗಿ ಅಸಂಘಟಿತ ವಲಯದಲ್ಲಿನ ದೌರ್ಜನ್ಯಗಳು ಭೀಕರವೆನಿಸುತ್ತಿವೆ ಹಾಗೂ ಸಂಘಟಿತ ವಲಯದಲ್ಲಿನ ದೌರ್ಜನ್ಯಗಳು ನಡೆಯುವುದೇ ಇಲ್ಲವೆಂಬ ಧೋರಣೆಗಳು ಇವೆ. ಸಾಧಾರಣವಾಗಿ ಮಹಿಳೆಯೂ ಸಮೂಹಗಳಿಗಿಂತಲೂ, ಒಂಟಿಯಾದಂತಹ ಸನ್ನಿವೇಶಗಳಲ್ಲಿ ಹೆಚ್ಚು ಹಿಂಸೆ ದೌರ್ಜನ್ಯಕ್ಕೊಳಗಾಗುತ್ತಾಳೆ. ಸಾಮಾನ್ಯವಾಗಿ ಕೌಟುಂಬಿಕ ವಲಯದ ಅಧಿಕಾರ ಹಂಚಿಕೆಗಳು, ಸಾರ್ವಜನಿಕ ವಲಯದಲ್ಲಿಯೂ ವಿಸ್ತರಿಸುತ್ತವೆ. ಆದರೆ ಕೌಟುಂಬಿಕ ವಲಯದಲ್ಲಿನ ಪರಿಚಯದಂತೆಯೇ ಸಂಘಟಿತ ವಲಯದಲ್ಲಿನ ರಹಸ್ಯ ಲೋಕವು ಅನಾವರಣಗೊಳ್ಳದಂತಹ ಅಂಶಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಮಾಣಗಳಲ್ಲಿನ ಭಿನ್ನತೆಯಿರಬಹುದಾದರೂ ಒಟ್ಟು ಸಾಮಾಜಿ ವ್ಯವಸ್ಥೆಯಲ್ಲಿ ಮಹಿಳೆಯ ರಕ್ಷಣೆ ಮತ್ತು ಭದ್ರತೆಯ ಪ್ರಶ್ನೆ ಇದೆ. ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯ ವಿಧಾನದಲ್ಲಿ ಮಹಿಳಾ ಬದುಕು ಎದುರಿಸುತ್ತಿರುವ ಪ್ರಮುಖವಾದ ಸಂಗತಿ ಇದು. ಈ ಬಗೆಯ ದೌರ್ಜನ್ಯಗಳು ಮಹಿಳೆಯ ಮೇಲೆ ಆಗಬಾರದೆಂಬ ಆಶಯದಿಂದಲೇ ಮಹಿಳಾಪರ ಚಿಂತನೆಗಳು, ಚಳುವಳಿಗಳು ಪ್ರಸ್ತುತವಾಗಿಯೂ ಕೆಲಸ ಮಾಡುತ್ತಿವೆ. ಕಾನೂನುಗಳು ಎಲ್ಲರಿಗೂ ಒಂದೇ ಎಂದು ಹೇಳುವಲ್ಲಿ ಅರ್ಥವಿಲ್ಲ. ಸರ್ವರಿಗೂ ಸಮಾನವೆಂಬ ಚಿಂತನೆಗಳಲ್ಲಿ ಮಹಿಳೆಯರನ್ನು ಅಂಚಿಗೆ ಸರಿಸಲಾಗಿದೆ ಎಂಬ ಅಂಶವು ಸ್ಪಷ್ಟವಾದ ಹಿನ್ನೆಲೆಯಲ್ಲಿ, ಮಹಿಳೆಯರಿಗೆ ಪ್ರತ್ಯೇಕವಾದ ಕಾನೂನುಗಳ ಅವಶ್ಯಕತೆಯನ್ನು ವ್ಯಕ್ತಪಡಿಸಲಾಯಿತು. ಆದ್ದರಿಂದ ಈಗಾಗಲೇ ಆಗಿರುವ ಪ್ರಯತ್ನಗಳಲ್ಲಿ ಮಹಿಳಾ ಕಾನೂನುಗಳು ಜಾರಿಗೆ ಬಂದಿವೆ. ಹೀಗೆ ಮಹಿಳೆಯರಿಗೆ ವಿಶೇಷ ಕಾನೂನು ಒದಗಿಸಿಕೊಡುವಲ್ಲಿ ಹಲವು ಬಗೆ ಯಶಸ್ಸನ್ನು ಸ್ತ್ರೀವಾದಿ ಚಿಂತನೆಗಳು, ಹೋರಾಟಗಳು ಗಳಿಸಿಕೊಳ್ಳುತ್ತಾ ಬಂದಿವೆ. ಬೇರೆ ಬೇರೆ ದೇಶಗಳಲ್ಲಿ ಭಿನ್ನ ಬಗೆಯ ಯಶಸ್ಸನ್ನು ಪಡೆದುಕೊಂಡಿವೆ. ಮತದಾನದ ಹಕ್ಕಿಗಾಗಿನ ಹೋರಾಟದ ಕಾಲದಿಂದಲೂ ಹಿಡಿದು, ಹೆಂಗಸಿನ ಪ್ರತಿಯೊಂದು ಸಂಗತಿಗಾಗಿಯೂ ವಿಶೇಷವಾದ ಹೋರಾಟವನ್ನು ಮಾಡಿಯೇ ಹಕ್ಕನ್ನು ಪಡೆಯಬೇಕಾಗಿರುವುದು ಅನಿವಾರ್ಯವಾಗಿದೆ. ಇಂಥ ಕಾನೂನುಗಳಲ್ಲಿ ಸುದೀರ್ಘವಾಗಿ ಚರ್ಚೆಯಾದ ಕೌಟುಂಬಿಕ ಹಿಂಸೆ ತಡೆ ಕಾಯ್ದೆ ೨೦೦೬, ಕೌಟುಂಬಿಕ ವಲಯದ್ದಾದರೆ, ಸಾರ್ವಜನಿಕ ವಲಯಕ್ಕಾಗಿ ಜಾರಿಗೊಳಿಸಲಾಗುತ್ತಿರುವ ಕೆಲಸದ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆಯನ್ನು ೨೦೧೦ ರಲ್ಲಿ ಜಾರಿಗೆ ತಂದರೂ ಸಹ ಸಾರ್ವಜನಿಕ ವಲಯದಲ್ಲಿ ಮಹಿಳಾ ದೌರ್ಜನ್ಯಗಳು ನಡೆಯುತ್ತಿರುವುದನ್ನು ಕಾಣಬಹುದಾಗಿದೆ.

ಮಹಿಳಾ ದೌರ್ಜನ್ಯದ ಬಗೆಗಿನ ವ್ಯಾಖ್ಯಾನಗಳು

ಮಹಿಳೆಯರ ವಿರುದ್ದದ ದೌರ್ಜನ್ಯ ಅಥವಾ ಹಿಂಸೆಯ ಬಗ್ಗೆ ಅನೇಕ ಸುಧಾರಣಾವಾದಿಗಳು, ಸಮಾಜಶಾಸ್ತ್ರಜ್ಞರು ಅವರವರ ಅನುಭವಕ್ಕೆ ಬಂದಂತೆ ಅವರದೇ ಆದ ರೀತಿಯಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಿದ್ದಾರೆ

'ಮಾಳವೀ ಕಾರ್ಲೇಕರ್' ರವರ ದೃಷ್ಟಿಯಲ್ಲಿ ಹಿಂಸೆ ಎಂದರೆ "ವ್ಯಕ್ತಿಗಳ ಮಧ್ಯದಲ್ಲಿ ನಡೆಯುವ ಹಂತ ಕ್ರಿಯೆಯಲ್ಲಿ ನಡೆಯುವ ಅಕ್ರಮಣಕಾರಿ ಉಗ್ರಕಾರಿ ಅಘಾತಕಾರಿಯಾದ ಕ್ರಾಂತಿಯಾಗಿದೆ".

ರಾಂ ಅಹೂಜಾ ರವರ ಮಹಿಳೆಯರ ವಿರುದ್ಧ ಹಿಂಸೆಯನ್ನು "ಅಧಿಕಾರಶಕ್ತಿಯ" ಹಿನ್ನೆಲೆಯಲ್ಲಿ ಈ ರೀತಿ ವ್ಯಾಖ್ಯಾನಿಸಿರುತ್ತಾರೆ. "ಮಹಿಳೆಯ ಹಿಂಸೆ ಇದೊಂದು ವರ್ತನೆ ಅಧಿಕಾರಶಾಹಿಯಾದ ವ್ಯಕ್ತಿ ಅಧಿಕಾರವನ್ನು ಬಳಸಿ ಅಧಿಕಾರ ರಹಿತವಾದಂತಹ ಕಡಿಮೆ ಶಕ್ತಿಯನ್ನು ಹೊಂದಿರುವ ವ್ಯಕ್ತಿಯನ್ನು ದುರುಪಯೋಗ ಪಡಿಸುವುದು, ನಿಂದಿಸುವುದು".

ಗೆಲ್ಲಿಸ್ ರವರು "ನಿಜವಾಗಿಯೂ ಅಲ್ಲದೇ ಹೋದರೂ ವ್ಯಕ್ತಿಗೂ ತೊಂದರೆ ಅಥವಾ ಕೆಡಕು ಮಾಡುವ ಉದ್ದೇಶದಿಂದ ಆತನನ್ನು ಘಾಸಿಗೊಳಿಸಿರುವ ಕ್ರಿಯೆಗೆ ಹಿಂಸೆ" ಎನ್ನಲಾಗುತ್ತದೆ ಎಂದಿದ್ದಾರೆ.

ಲ್ಯಾಂಡೀಸ್ ಮತ್ತು ಲ್ಯಾಂಡೀಸ್ "ರಾಜ್ಯವು ಸಾಮೂಹಿಕ ಕಲ್ಯಾಣಗಳಿಗೆ ಹಾನಿಕಾರಕವೆಂದು ಘೋಷಿಸಿದ ಕೃತ್ಯಗಳಾಗಿದ್ದು ಅವುಗಳಿಗೆ ಸರಿಯಾದ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನು ರಾಜ್ಯವು ಹೊಂದಿದ್ದರೆ ಅಂತಹ ಕೃತ್ಯಗಳು ದೌರ್ಜನ್ಯ ಅಥವಾ ಅಪರಾಧವೆನಿಸಿಕೊಳ್ಳುತ್ತವೆ" ಎಂದಿದ್ದಾರೆ.

ಸೇಥನ್ "ರಾಜ್ಯವು ಕೃತ್ಯವು ಅಥವಾ ಲೋಪವಿದೆ ಪಾತಕ ಕೃತ್ಯವು ಆ ಕಾಲದ ರಾಜ್ಯದ ಕಾನೂನಿನ ಪ್ರಕಾರ ಶಿಕ್ಷಿಸಲು ಅರ್ಹವಾಗಿದ್ದರೆ ಆ ಕೃತ್ಯವು ಅಪರಾಧವೆನಿಸುತ್ತದ[೩].

ಸ್ಟ್ರಾಪ್ ರವರ ಪ್ರಕಾರ "ಕೆಡಕು ಅಥವಾ ಹಾನಿ ಉಂಟು ಮಾಡಬೇಕೆನ್ನುವ ತೀವ್ರ ಕ್ರಿಯೆಗೆ ಹಿಂಸೆ" ಎನ್ನುತ್ತೇವೆ. "ಇನ್ನೊಬ್ಬರ ಸ್ವತಂತ್ರವನ್ನು ಕಬಳಿಸುವ ಕ್ರಿಯೆಗೆ ಹಿಂಸೆ" ಎಂದು ಹೆಸರು.

"ವ್ಯಕ್ತಿಗೆ ಅಥವಾ ವ್ಯಕ್ತಿಯ ಖ್ಯಾತಿಗೆ ಹಾನಿವುಂಟು ಮಾಡುವಂತಹ ಬಹಿರಂಗವಾಗಿ ಎದುರಿಸುವ ಬಲದ ಅಥವಾ ಶಕ್ತಿಯ ಬಳಕೆಯ ಹಿಂಸೆ" ಎಂಬುದಾಗಿ **ಮೆಗರ್ಜಿ** ಹೇಳಿದ್ದಾರೆ."[೪]

ಸಾಮಾನ್ಯವಾಗಿ ಲಿಂಗಾಧಾರಿತ ನೆಲೆಯಲ್ಲಿ ಬೆಳೆದುಬಂದ ಚಿಂತನೆಗಳು ಯಾವುದೇ ವ್ಯಕ್ತಿಯಿಂದ ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಒತ್ತಾಯಪೂರ್ವಕವಾಗಿ ನಡೆಯುವ ಭೌತಿಕ, ಮಾನಸಿಕ ಮತ್ತು ಲೈಂಗಿಕ ಕಿರುಕುಳದ ಹಿಂಸೆಯನ್ನು ಮಹಿಳಾ ದೌರ್ಜನ್ಯವೆಂದು ಗ್ರಹಿಸಲಾಗಿದೆ.

ಮೈತ್ರೇಯಿ ಕೃಷ್ಣರಾಜ್‌ರವರು ಅಧೀನ ಪ್ರಧಾನತೆಯ ಏಣಿ–ಶ್ರೇಣಿಕರಣವನ್ನು ಹೊಂದಿರುವ ಪುರುಷ ಪ್ರಧಾನ ವ್ಯವಸ್ಥೆಯೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಆಧಾರವೆಂದು ಸೂಚಿಸುತ್ತಾರೆ.

೩.೧ ಪಿತೃ ಪ್ರಧಾನ ವ್ಯವಸ್ಥೆಗೂ ಹಾಗೂ ಮಹಿಳಾ ದೌರ್ಜನ್ಯಕ್ಕೂ ಇರುವ ಸಂಬಂಧ

ಕುಟುಂಬ ಎಂಬ ಪದವು ಆಂಗ್ಲಭಾಷೆಯ 'ಫ್ಯಾಮಿಲಿ' ಎಂಬ ಶಬ್ದದ ಅನುವಾದವಾಗಿದೆ. ಫ್ಯಾಮಿಲಿ ಎಂಬ ಆಂಗ್ಲ ಪದವು ಲ್ಯಾಟಿನ್ ಭಾಷೆಯ 'ಫಾಮುಲಾಸ್' ಎಂಬ ಪದದಿಂದ ಉತ್ಪತ್ತಿಯಾಗಿದೆ. 'ಫ್ಯಾಮುಲಾಸ್' ಎಂದರೆ 'ಸೇವಕ' ಅಥವಾ 'ಗುಲಾಮ' 'ಆಳು' ಎಂದರ್ಥವಾಗುತ್ತದೆ. ಅಂದರೆ ಒಂದೇ ವಶಕ್ಕೆ ಸೇರಿದ ವಿವಾಹದಿಂದ ಬಂಧಿತರಾದ ಸೇವಕರು ಗುಲಾಮರು ಎಂದರ್ಥ. ಮನೆಯ ಆಳುಗಳನ್ನು ಅಥವಾ ಗುಲಾಮರನ್ನು ಕುಟುಂಬದ ಸದಸ್ಯರೆಂದು ಭಾವಿಸುವುದರಿಂದ ಈ ಪದವು ಬಳಸಲ್ಪಟ್ಟಿದೆ ಎಂದು ಅಭಿಪ್ರಾಯ ಪಡೆಯಬಹುದು. ಆದರೆ ಸಮಾಜಶಾಸ್ತ್ರೀಯ ಅರ್ಥದಲ್ಲಿ ಕೆಲಸದ ಆಳುಗಳನ್ನು ಕುಟುಂಬದ ಸದಸ್ಯರೆಂದು ಪರಿಗಣಿಸುವುದಿಲ್ಲ."[೮]

ಸಮಕಾಲೀನ ಪುರುಷ ಪ್ರಧಾನ ವ್ಯವಸ್ಥೆಯನ್ನು ಮೊದಲು ಪಿತೃಪ್ರಧಾನತೆ ಎಂದು ಕರೆಯಲಾಗುತ್ತಿತ್ತು. ಪಿತೃಪ್ರಧಾನತೆ ತಂದೆಯ ಯಜಮಾನಿಕೆ ಎಂಬ ಅರ್ಥವನ್ನು ಕೊಡುತ್ತದೆ. ಹೆಂಗಸರು ಕಿರಿಯ ಗಂಡಸರು ಮಕ್ಕಳು ಮತ್ತು ಮನೆಗೆಲಸದವರು ಒಳಗೊಂಡಂತೆ ಪುರುಷನೊಬ್ಬನ ಅಧೀನದಲ್ಲಿರುವ ಕುಟುಂಬವನ್ನು ವಿಶ್ಲೇಷಿಸಲು ಪಿತೃಪ್ರಧಾನತೆ ಎಂಬ ಪದವನ್ನು ಬಳಸಲಾಗುತ್ತದೆ. ಆದರೆ ಇದು ಕುಟುಂಬಕ್ಕೆ ಮಾತ್ರ ಸೀಮಿತವಾಗಿರದೇ ಇಡೀ ಸಮಾಜದಲ್ಲಿ ವಿವಿಧ ಸ್ತರ ಹಾಗೂ ಆಯಾಮಗಳಲ್ಲಿ ಹರಡಿಕೊಂಡು ವಿಶಾಲಾರ್ಥವನ್ನು ಹೊಂದಿರುವುದರಿಂದ ಪುರುಷ ಪ್ರಧಾನ ಎಂಬ ಪದದ ಬಳಕೆ ಪ್ರಾರಂಭವಾಯಿತು. ಹೀಗೆ ಇದನ್ನು ಪುರುಷ ಪ್ರಾಬಲ್ಯ ಪುರುಷನು ಮಹಿಳೆಯ ಮೇಲೆ ತನ್ನ ಹಿಡಿತ ಸಾಧಿಸುವ ಸಲುವಾಗಿ ಇರುವ ಅಧಿಕಾರ ಸಂಬಂಧಗಳು ಮತ್ತು ಮಹಿಳೆಯನ್ನು ಬಹು ಬಗೆಯಲ್ಲಿ ದಬ್ಬಾಳಿಕೆಗೊಳಪಡಿಸುವ ವ್ಯವಸ್ಥೆಯನ್ನು ವಿವರಿಸಲು ಬಳಸಲಾಗುತ್ತದೆ, ಪ್ರದೇಶ, ಧರ್ಮ, ಜಾತಿ, ಜನಾಂಗಾತೀತವಾಗಿ ಹುಟ್ಟಿರುವ ಈ ಪುರುಷ ಪ್ರಧಾನತೆ ಮಹಿಳೆಯರ ಪ್ರಧಾನತೆಗೆ ಕಾರಣವಾಗಿದೆ. ದಿನನಿತ್ಯದ ಬದುಕಿನಲ್ಲಿ ಕುಟುಂಬ ಮತ್ತು ಕುಟುಂಬದ ಹೊರೆಗೆ ಮಹಿಳೆಯರು ಅನುಭವಿಸುವ ಈ ಪರಾಧೀನತೆ ಬಹುಮುಖಿಯಾಗಿದೆ. ಮಹಿಳೆಯರ ಮೇಲಿನ ತಾರತಮ್ಯ, ನಿರ್ಲಕ್ಷ್ಯ, ಅಪಮಾನ, ನಿಯಂತ್ರಣ, ದಮನ, ಮತ್ತು ಹಿಂಸೆಗಳೆಲ್ಲವೂ ಪುರುಷ ಪ್ರಧಾನತೆಯನ್ನು ಬಿಂಬಿಸುತ್ತವೆ. ಪಿತೃಪ್ರಧಾನತೆಯ ಸ್ವರೂಪ ಎಲ್ಲಾ ಕಡೆ ಒಂದೇಯಾಗಿರುವುದಿಲ್ಲ. ಆದರೂ ಕುಟುಂಬ ಧರ್ಮ ಹಾಗೂ ಕಾನೂನುಗಳು ಇಡೀ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಆಧಾರ ಸ್ಥಂಬಗಳಂತಿವೆ. ಇಂತಹ ವ್ಯವಸ್ಥೆಯನ್ನು ತೊಡೆದು ಹಾಕಿ ಸಮಾನತೆಯ ಸಮಾಜವನ್ನು ಕಟ್ಟುವುದು ಸ್ತ್ರೀವಾದದ ಗುರಿಯಾಗಿದೆ.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ತಂದೆಗೆ ಕುಟುಂಬದ ಇತರ ಸದಸ್ಯರ ಮೇಲೆ ಸಂಪೂರ್ಣ ಅಧಿಕಾರವಿರುತ್ತದೆ. ಇದಕ್ಕೆ ಪ್ರತಿಯಾಗಿ ಅವನು ಸದಸ್ಯರಿಗೆ ಆರ್ಥಿಕ ಬೆಂಬಲ ಮತ್ತು ರಕ್ಷಣೆಯನ್ನು ನೀಡಬೇಕಾಗುತ್ತದೆ. ಆದರೆ ಅವನ ಅಧಿಕಾರ ಮತ್ತು ಜವಾಬ್ದಾರಿಗಳು ಕುಟುಂಬದ ಬೇರೆ ಬೇರೆ ಸದಸ್ಯರೊಂದಿಗೆ ಭಿನ್ನವಾಗಿರುತ್ತದೆ. ಉದಾಃ ಗಂಡು ಮಗನ ಮೇಲಿನ ತಂದೆಯ ಜವಾಬ್ದಾರಿ

ತಾತ್ಕಾಲಿಕವಾಗಿರುತ್ತದೆ. ಮಗನು ಮನೆಯ ಯಜಮಾನನಾಗುವ ತನಕ ತಂದೆಯ ನಿಯಂತ್ರಣದಲ್ಲಿ ಇರುತ್ತಾನೆ. ಆದರೆ ಹೆಣ್ಣು ಮಕ್ಕಳ ಜೀವನ ಪೂರ್ತಿ ಪುರುಷನ ಅಧೀನದಲ್ಲೆ ಇರಬೇಕು, ಹೆಣ್ಣು ಮದುವೆಗೆ ಮುಂಚೆ ತಂದೆ ನಂತರ ಗಂಡನ ಆಳ್ವಿಕೆಗೊಳಪಡುತ್ತಾಳೆ. ಪಿತೃ ಪ್ರಧಾನ ವ್ಯವಸ್ಥೆಯಿಂದಾಗಿ ಹೆಣ್ಣು ತಂದೆ ತಾಯಿಯ ಮನೆ ಹಾಗೂ ಗಂಡನ ಮನೆ ಎರಡರಲ್ಲೂ ಹೊರಗಿನವಳಾಗಿ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಜಿವನ ಪೂರ್ತಿ ಹೋರಾಡುವಂತೆ ಮಾಡುತ್ತದೆ. ಅಲ್ಲದೇ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಉತ್ತರಾಧಿಕಾರತ್ವವು ತಂದೆಯಿಂದ ಮಗನಿಗೆ ಬರುತ್ತದೆ. ಅಂದರೆ ಕುಟುಂಬದ ಅಧಿಕಾರ ಹಕ್ಕುಗಳು ಚರಾಸ್ತಿಗಳೆಲ್ಲವೂ ಒಬ್ಬ ಪುರುಷನಿಂದ ಮತ್ತೊಬ್ಬ ಪುರುಷನಿಗೆ ಹೋಗುತ್ತವೆ. ಇದು ಪುರುಷರಿಗೆ ಕುಟುಂಬದ ಎಲ್ಲಾ ಸದಸ್ಯರ ಮೇಲೂ ನಿಯಂತ್ರಣ ಹೊಂದುವಂತೆ ಅಧಿಕಾರ ನೀಡುತ್ತದೆ. ಇಂತಹ ವ್ಯವಸ್ಥೆಯಲ್ಲಿ ಮನೆ, ಭೂಮಿ,ಹಾಗೂ ಮಹಿಳೆಯರು ಪುರುಷನ ಆಸ್ತಿಯೆಂದು ಪರಿಗಣಿಸಲ್ಪಡುತ್ತವೆ.

ಫೆಡ್ರಿಕ್ಎಂಗಲ್ಸ್ (೧೮೮೪)ತನ್ನ (Origion of family private proparty and status) ಎಂಬ ಪುಸ್ತಕದಲ್ಲಿ ಆಧುನಿಕ ಸಮಾಜದ ಪೂರ್ವದಲ್ಲಿ ಮತ್ತು ಖಾಸಗಿ ಆಸ್ತಿಯ ಪರಿಕಲ್ಪನೆ ಹುಟ್ಟುವ ಮೊದಲು ಮಾತೃ ಪ್ರಧಾನ ವ್ಯವಸ್ಥೆ ಇತ್ತು ಎಂದು ಹೇಳುತ್ತದೆ. ಆದರೆ ಇಂದಿನ ಸಮಾಜದ ಎಲ್ಲೆಡೆ ಪಿತೃ ಪ್ರಧಾನ ಸಮಾಜವ್ಯವಸ್ಥೆಯನ್ನು ನಾವು ಗಮನಿಸಬಹುದು. ಮಾತೃ ಪ್ರಧಾನತೆ ಇದ್ದರೂ ಅದು ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗಿರುತ್ತದೆ, ಸಮಾಜದ ಇತರ ಸ್ತರಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಅಸ್ತಿತ್ವ ಹೊಂದಿಲ್ಲ. ಅಲ್ಲದೇ ಕುಟುಂಬದಲ್ಲೂ ಹೆಣ್ಣಿನ ಹೆಸರಿನ ಮೇಲೆ ಆಕೆಯ ಮಗನಾಗಲೀ ಅಣ್ಣನಾಗಲೀ ಅಧಿಕಾರ ಚಲಾಯಿಸುತ್ತಾರೆ. ಆದ್ದರಿಂದ ಅದನ್ನು ಮಾತೃ ಪ್ರಧಾನ ಎನ್ನುವಂತಿಲ್ಲ. ಕೇವಲ ಮಾತೃವಂಶಿಯ ಮತ್ತು ಮಾತೃಸ್ಥಾನೀಯ ಕುಟುಂಬ ಎಂದು ಕರೆಯಬಹುದು. ಒಟ್ಟಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಅಂತಿಮವಲ್ಲ. ಅದಕ್ಕೊಂದು ಪರ್ಯಾಯ ಇತ್ತು ಎಂಬುದನ್ನು ಇದು ಸೂಚಿಸುತ್ತದೆ.

ಕುಟುಂಬದ ಪ್ರಕಾರಗಳು

ಕುಟುಂಬವು ಸಾರ್ವತ್ರಿಕವಾಗಿ ಕಂಡು ಬರುವ ಸಂಸ್ಥೆಯಾದರೂ ಅದು ಜಗತ್ತಿನ ಎಲ್ಲಾ ಕಡೆಗಳಲ್ಲಿ ಒಂದು ತೆರೆನಾಗಿಲ್ಲ ಅಧಿಕಾರವಾಸಸ್ಥಾನ ಪೂರ್ವಜರು, ವಂಶಾವಳಿ ಹಾಗೂ ವಿವಾಹ ಪದ್ಧತಿ ಮುಂತಾದ ಅಂಶಗಳ ಆಧಾರದ ಮೇಲೆ ಅನೇಕ ಸಮಾಜ ಶಾಸ್ತ್ರಜ್ಞರು ವಿವಿಧ ಪ್ರಕಾರದ ಕುಟುಂಬಗಳನ್ನು ವರ್ಗೀಕರಿಸುವುದಕ್ಕೆ ಪ್ರಯತ್ನಿಸಿರುವರು ಕುಟುಂಬದ ಸದಸ್ಯರ ಆಧಾರದ ಮೇಲೆ ೨ ಪ್ರಕಾರಗಳಾಗಿ ವರ್ಗೀಕರಿಸಿದ್ದಾರೆ.

೧.ಪಿತೃ ಪ್ರಧಾನ ಕುಟುಂಬ

೨.ಮಾತೃ ಪ್ರಧಾನ ಕುಟುಂಬ

೧ **ಪಿತೃ ಪ್ರಧಾನ ಕುಟುಂಬ** ಪಿತೃ ಪ್ರಧಾನ ಕುಟುಂಬ ಪ್ರಪಂಚದಲ್ಲಿ ಹೆಚ್ಚು ವ್ಯಾಪಕವಾದ ಪದ್ಧತಿಯಾಗಿದೆ. ಇದು ಶಾಸ್ತ್ರ–ಪುರಾಣಗಳಲ್ಲಿಯೂ ಕ್ರಿಶ್ಚಿಯನ್ನರ ಹಳೆಯ ಒಡಂಬಡಿಕೆಯಲ್ಲಿಯೂ ಖುರಾನಿನಲ್ಲಿಯೂ ಪ್ರಾಚೀನ

ನಾಗರೀಕತೆಗಳಲ್ಲಿ ಮತ್ತು ಉಳಿಗಮಾನ್ಯ ಸಮಾಜಗಳಲ್ಲಿ ಹೆಚ್ಚಿನ ಮಾನ್ಯತೆ ಪಡೆದುಕೊಂಡಿತು. ಭಾರತದ ಆರ್ಯರು, ಹಿಬ್ರುಗಳು, ಗ್ರೀಕರು, ರೋಮನ್ನರು ಹಾಗೂ ಮಧ್ಯಯುಗದ ಸಮಾಜಗಳಲ್ಲಿ ಈ ತರಹದ ಕುಟುಂಬ ಜಾರಿಯಲ್ಲಿತ್ತು.

ಪಿತೃ ಎಂದರೆ ತಂದೆ ಯಾವ ಕುಟುಂದಲ್ಲಿ ಹಿರಿಯ ಪುರುಷ ಕುಟುಂಬ ನಿರ್ವಹಣೆಯ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾನೋ? ಅಂತಹ ಕುಟುಂಬವನ್ನು ಪಿತೃಪ್ರಧಾನ ಕುಟುಂಬ ಎನ್ನುವರು. ತಂದೆಯೇ ಕುಟುಂಬದ ಯಜಮಾನ ಅವನದೇ ನಿರಂಕುಶ ಆಡಳಿತ ಆಸ್ತಿ ಪಾಸ್ತಿಗಳ ವ್ಯವಹಾರ ಅವನ ಹೆಸರಿನಲ್ಲೇ ನಡೆಯುವುದು. ವಂಶಾವಳಿಯನ್ನು ಅವನ ಮೂಲಕ ಗುತಿಸುವ ಕುಟುಂಬವು ಪಿತೃ ಪ್ರಧಾನ ಕುಟುಂಬವಾಗಿದೆ. ಪಿತೃ ಪ್ರಧಾನ ಕುಟುಂಬಗಳು ಜಗತ್ತಿನ ಹೆಚ್ಚಿನ ರಾಷ್ಟ್ರಗಳಲ್ಲಿ ಆಚರಣೆಯಲ್ಲಿವೆ ಉದಾಃ ಪ್ರಾಚೀನಭಾರತ, ಗ್ರೀಸ್, ರೋಮ್, ಈಜಿಪ್ಟ್, ಮುಂತಾದ ದೇಶಗಳಲ್ಲಿ ಕಂಡುಬರುತ್ತಿದೆ. ಶಿಕ್ಷಣ, ವಲಸೇ, ನಗರೀಕರಣ, ಔದ್ಯೋಗೀಕರಣ, ಮುಂತಾವುಗಳು ಪ್ರಭಾವದಿಂದ ಇಂದಿನ ಆಧುನಿಕ ಸಂಕೀರ್ಣ ಸಮಾಜದಲ್ಲಿ ಇವುಗಳ ಪ್ರಭಾವ ಕ್ಷೀಣಿಸುತ್ತಾ ಸಾಗಿದೆಯೆಂದು ಹೇಳಬಹುದು."[೯]

ಪಿತೃ ಪ್ರಧಾನ ಕುಟುಂಬ ಗುಣಲಕ್ಷಣಗಳು

೧. **ಪಿತೃ ವಂಶಾವಳಿ ಹಾಗೂ ಆಸ್ತಿಯ ಉತ್ತರಾಧಿಕಾರ** ಪಿತೃ ಪ್ರಧಾನ ಕುಟುಂಬದಲ್ಲಿ ವಂಶಾವಳಿಯನ್ನು ತಂದೆಯ ಮೂಲಕ ಗುರುತಿಸಲಾಗುತ್ತಿದೆ. ಮಕ್ಕಳನ್ನು ಪಿತೃ ವಂಶವೆಂದು ಕರೆಯುವರು. ಕುಟುಂಬದ ಅಧಿಕಾರ ಆಸ್ತಿ ಮತ್ತು ಉತ್ತರದಾಯಿತ್ವ ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ಸಾಗಿಬರುವುದು. ಇಲ್ಲಿ ಸದಸ್ಯರುಗಳ ಸ್ಥಾನ ಮತ್ತು ಹೆಸರು ಪಿತೃವಿನ ಕಡೆಯಿಂದಲೇ ನಿರ್ಧಾರವಾಗುತ್ತದೆ.

೨. **ಪಿತೃ ಸ್ಥಾನೀಯ ನಿವಾಸ** ಪಿತೃ ಪ್ರಧಾನ ಕುಟುಂಬದಲ್ಲಿ ವಿವಾಹದ ನಂತರ ಸ್ತ್ರೀಯು ತನ್ನ ಪತಿಯ ಮನೆಯಲ್ಲಿ ವಾಸಮಾಡುವುದು ಖಡ್ಡಾಯವಾಗಿದೆ. ಇದು ಪಿತೃ ಗೃಹ ಪದ್ದತಿಗೆ ಒಳಪಟ್ಟಿದೆ. ಗಂಡು ಮಕ್ಕಳು ವಿವಾಹದ ನಂತರ ತಮ್ಮ ಮನೆಯಲ್ಲಿ ವಾಸಮಾಡಿದರೆ ಹೆಣ್ಣುಮಕ್ಕಳು ಮದುವೆಯಾಗಿ ಪತಿಯ ಮನೆಗೆ ಹೋಗಬೇಕಾಗುತ್ತದೆ. ಇಲ್ಲಿ ಸ್ತ್ರೀಯು ಪಿತೃ ಗೃಹಕ್ಕೆ ಬಂದುಹೋಗುವ ವಾಡಿಕೆಗೆ ಸೇರಿರುತ್ತಾಳೆ.

೩. **ಅಧಿಕಾರದ ಚಲಾವಣೆ** ಪಿತೃಪ್ರಧಾನ ಕುಟುಂಬದಲ್ಲಿ ಸಂಪೂರ್ಣ ಅಧಿಕಾರ ತಂದೆಯ ಕೈಯಲ್ಲಿರುತ್ತದೆ. ಆತನೇ ಕುಟುಂಬದ ಯಜಮಾನನಾಗಿರುತ್ತಾನೆ . ಇನ್ನಿತರ ಸದಸ್ಯರುಗಳು ಹಿರಿಯ ಪುರುಷನ ಆಜ್ಞಾನವರ್ತಿಗಳಾಗಿರುತ್ತಾರೆ. ಕುಟುಂಬದ ಆರ್ಥಿಕ ಸಾಮಾಜಿಕ ವ್ಯವಹಾರಗಳ ಸಂಪೂರ್ಣ ನಿರ್ಣಯ ಆತನ ಕೈಯಲ್ಲಿರುತ್ತದೆ. ಎಲ್ಲ ವಿಷಯಗಳಲ್ಲಿ ಅಂತಿಮ ತೀರ್ಮಾನವೇ ಆತನದ್ದಾಗಿರುತ್ತದೆ. ಕುಟುಂಬದ ಆಗು–ಹೋಗುಗಳ ಉಸ್ತುವಾರಿ, ಆಸ್ತಿಯ ನಿರ್ವಹಣೆ ಸದಸ್ಯರ ವರ್ತನೆ ನಿಯಂತ್ರಣ ಇತ್ಯಾದಿಗಳನ್ನು ನಿಭಾಯಿಸುವ ನಿರ್ದೇಶಿಸುವ ಸುಧಾರಿಸುವ ಅಂತಿಮ ಅಧಿಕಾರ ಗಂಡು ಸಂತತಿಯಲ್ಲಿ ತಂದೆಯ ನಂತರ ಮಗನಿಗೆ ಹೀಗೆಯೇ ವರ್ಗಾಯಿಸಲ್ಪಡುತ್ತದೆ.

೪. **ಕುಟುಂಬದ ರಚನೆ** ಪಿತೃಸ್ಥಾನಿಯ ಕುಟುಂಬವು ರಕ್ತ ಸಂಬಂಧಿಗಳನ್ನು ಆತನ ಪತ್ನಿ ತಾಯಿ ಮಕ್ಕಳು ಹಾಗೂ ಸಹೋದರರಿಂದ ಒಟ್ಟುಗೂಡಿದ ಜನರ ಸಮೂಹ ವಾಗಿದೆ. ಇದು ದೈವ ನಿರ್ಮಿತವಾದದ್ದು, ಪವಿತ್ರವಾದದ್ದು ಕುಟುಂಬದ ಮುಖ್ಯಸ್ಥನಿಗೆ ಶ್ರೇಷ್ಠ ಸಂಕೇತ ಎಂಬ ಭಾವನೆ ಮನದಟ್ಟಾಗಿದೆ. ಇಲ್ಲಿ ಯಜಮಾನನು ಸದಸ್ಯರ ಮೇಲೆ ಕಟ್ಟು ನಿಟ್ಟಾದ ನಿಯಮಾವಳಿಗಳನ್ನು ವಿಧಿಸುವುದರ ಮೂಲಕ ನಿಯಂತ್ರಣವನ್ನು ಹೇರಿರುತ್ತಾನೆ.

೫. **ಸಾರ್ವತ್ರಿಕ ಸ್ವರೂಪದ್ದಾಗಿದೆ** ಪಿತೃಪ್ರಧಾನ ಕುಟುಂಬವು ಸಮಾಜದಲ್ಲಿ ಸಾರ್ವತ್ರಿಕವಾಗಿದೆ, ಇದು ಪ್ರಪಂಚದ ಎಲ್ಲಾ ಸಮಾಜಗಳಲ್ಲಿ ಆಚರಣೆಯಲ್ಲಿರುತ್ತದೆ. ಪ್ರಾಚೀನ ಸಮಾಜದಲ್ಲಿ ಇತ್ತು ಮತ್ತು ಈಗಲೂ ಅಸ್ತಿತ್ವದಲ್ಲಿದೆ. ಹಾಗೂ ಮುಂದೆಯೂ ಇರುವ ಸೂಚನೆಗಳು ಕಂಡುಬರುತ್ತದೆ. ಇದು ಸರ್ವ ವ್ಯಾಪಕವಾದ ಪದ್ದತಿಯಾಗಿದೆ. ಅತಿ ಹೆಚ್ಚಿನ ದೇಶಗಳಲ್ಲಿ ಅತಿ ಹೆಚ್ಚಿನ ಜನರು ಮಾನ್ಯತೆ ಮಾಡಿರುವುದರಿಂದ ಇದು ಸಾರ್ವತ್ರಿಕವಾಗಬಲ್ಲ ಪದ್ದತಿಯಾಗಿದೆ.

೬. **ಸ್ತ್ರೀಯ ಕೀಳು ಸ್ಥಾನಮಾನ** ಪಿತೃ ಪ್ರಧಾನಕುಟುಂಬದಲ್ಲಿ ಸ್ತ್ರೀಗೆ ಆಸ್ತಿ ಅಧಿಕಾರ ಅಂತಸ್ತು ಉತ್ತರಾಧಿಕಾರಿ ಯಾವುವೂ ಇರಲಿಲ್ಲವಾದ್ದರಿಂದ ಸ್ತ್ರೀಯ ಸ್ಥಾನ ಮಾನ ಕೀಳುಮಟ್ಟದ್ದಾಗಿತ್ತು. ಎಲ್ಲದಕ್ಕೂ ಪುರುಷರ ಮೇಲೆ ಅವಲಂಬಿತವಾಗುವ ಅನಿವಾರ್ಯತೆ ಇತ್ತು."[೧೦]

ಏಂಗೆಲ್ಸ್ ಸ್ತ್ರೀ ಪುರುಷರು ಅಸಮಾನತೆಯನ್ನು ಕುರಿತು ಚರ್ಚಿಸುತ್ತಾ ಮಹಿಳೆ ಉತ್ಪಾದನೆ ಹಾಗೂ ಆರ್ಥಿಕ ಕ್ಷೇತ್ರದಿಂದ ದೂರವುಳಿದದ್ದೇ ಅವಳ ಸಾಮಾಜಿಕ ಆಧಃ ಪತನದ ಕಾರಣ ಎಂದು ಹೇಳಿ ಆತ ಹೆಣ್ಣಿನ ಬದುಕಿನಲ್ಲಿ ಕುಟುಂಬ, ಉದ್ಯೋಗ, ವಿವಾಹಗಳು ಎಂತಹ ಮುಖ್ಯವಾದ ಪಾತ್ರವಹಿಸುತ್ತವೆ ಎಂಬುದನ್ನು ಅತ್ಯಂತ ಗಂಭೀರವಾಗಿ ಚರ್ಚಿಸುತ್ತಾನೆ. ವಿವಾಹಕ್ಕೂ ಹೆಣ್ಣಿನ ಶೋಷಣೆಗೂ ಒಂದು ನಿಕಟವಾದ ಸಂಬಂಧವನ್ನು ಏಂಗೆಲ್ಸ್ ಗುರ್ತಿಸುವುದು ಅಷ್ಟೇ ಅಲ್ಲದೆ ಏಕಪತ್ನಿತ್ವ ಪದ್ಧತಿ ಹೆಣ್ಣು ಪುರುಷನ ಖಾಸಗೀ ಸ್ವತ್ತು ಆಸ್ತಿಯಾಗುವಂತಾಗಿ ಆಕೆಯ ಶೋಷಣೆಯ ಪ್ರಮುಖ ಸಾಧನವಾಯಿತು ಎನ್ನುತ್ತಾರೆ. ಈ ಸಂದರ್ಭದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಪಿತೃ ಪ್ರಧಾನಕೌಟುಂಬಿಕ ಸ್ವರೂಪ ಪಡೆಯಿತು ಇಲ್ಲಿಂದ ಹೆಣ್ಣಿನ ಅಧಃಪತನ ಪ್ರಾರಂಭವಾಯಿತು. ಆಕೆ ತನ್ನ ಹಕ್ಕುಗಳನ್ನು ಕಳೆದುಕೊಂಡಿದ್ದೇ ಅಲ್ಲದೆ ಉತ್ಪಾದನೆಯಿಂದ ದೂರವಿರಿಸಲ್ಪಟ್ಟಳು. ಗೃಹಿಣಿಯಾಗಿ ಮನೆಯೊಳಗೆ ಅವಳು ಮಾಡುವ ಎಲ್ಲಾ ಜವಾಬ್ದಾರಿಯುತ ಕಾರ್ಯಗಳು ಕೂಡ ಆರ್ಥಿಕ ಉತ್ಪಾದನೆಯನ್ನುಂಟು ಮಾಡಿಲಿಲ್ಲವಾದ್ದರಿಂದ ಅವಳ ದುಡಿಮೆ ನಗಣ್ಯವಾಯಿತು. ಅವಳು ಇವನ ಗೃಹ ಬಂಧನಕ್ಕೆ ಒಳಪಟ್ಟಳು. ಏಕಪತ್ನಿತ್ವ ಅವಳ ಮೇಲೆ ಅವನು ತನ್ನ ಹಕ್ಕು ಅಧಿಕಾರಗಳನ್ನು ಚಲಾಯಿಸುವ ಸಾಧನವಾಯಿತು. ಅವಳು ಇವನ ಯಜಮಾನತ್ವದಲ್ಲಿ ಹೆಚ್ಚು ಹೆಚ್ಚು ಪರಾಧೀನೆಯಾದಳು. ತಾನು ಮನೆಯ ಯಜಮಾನನಾದುದರಿಂದ ಲೈಂಗಿಕತೆಯು ಒಳಗೊಂಡಂತೆ ಹೆಣ್ಣಿನ ಮೇಲೆ ಎಲ್ಲಾ ರೀತಿಯ ಅಧಿಕಾರವನ್ನು ಸ್ಥಾಪಿಸಿದನು. ಅವಳ ಮನೆಯೊಳಗೆ ಕುಬ್ಜಳಾದಳು. ಏಂಗೇಲ್ಸ್ ಹೆಣ್ಣು ತನ್ನ ಮೇಲೆ ನಡೆಯುವ

ಅಧಿಕಾರ ದಬ್ಬಾಳಿಕೆಯಿಂದ ಹೊರ ಬರಬೇಕಾದರೆ ಕುಟುಂಬದಾಚೆ ಬಂದು ದುಡಿಯಬೇಕು ಎಂದು ಕರೆಕೊಟ್ಟನು."[೧೧]

ಏಂಗೆಲ್ಸ್ ಬಂಡವಾಳಶಾಹಿಯನ್ನು ಪುರುಷನಿಗೆ ಹೋಲಿಸುತ್ತಾನೆ. ಬಂಡವಾಳಶಾಹಿ ವ್ಯವಸ್ಥೆ ಬಡ ಅಸಹಾಯಕರನ್ನು ಹೇಗೆ ಶೋಷಿಸುತ್ತದೆಯೋ ಹಾಗೇ ಪಿತೃ ಪ್ರಧಾನ ವ್ಯವಸ್ಥೆ ಬಡ ಹಾಗೂ ದುರ್ಬಲರಾದ ಹೆಣ್ಣು ಮಕ್ಕಳನ್ನು ಶೋಷಿಸಲು ಮುಂದಾಗುತ್ತದೆ. ಮಾತೃ ಪ್ರಧಾನವಾಗಿದ್ದ ಸಾಮಾಜಿಕ ವ್ಯವಸ್ಥೆ ಪಿತೃ ಪ್ರಧಾನತೆಯನ್ನು ಪಡೆದುಕೊಂಡಾಗಲೇ ಮಹಿಳೆ ಹೆಚ್ಚು ಹೆಚ್ಚು ಪರಾವಲಂಬಿಯಾದಳು. ಉತ್ಪಾದನಾ ವ್ಯವಸ್ಥೆಗೆ ಅವನೇ ವಾರಸುದಾರನಾಗಿ ಅವಳನ್ನು ಅದರಾಚೆ ಇರಿಸಿದ ತನ್ನ ವಲಯದೊಳಗಿರದ ಉತ್ಪಾದನ ವ್ಯವಸ್ಥೆಯೇ ಅವಳ ದುಡಿಮೆಯನ್ನು ಶೋಷಿಸುವ ಮೂಲವಾಯಿತು. ಹೆಣ್ಣಿನ ಮೂಲಗಳಿಂದ ಗುರ್ತಿಸುವ ಸಂಬಂಧಗಳು ಪಿತೃ ಮೂಲದಿಂದ ಪಿತೃತ್ವದಿಂದ ಸ್ಥಾಪನೆಗೊಳ್ಳಲಾರಂಭಿಸಿತು. ಇಂತಹ ಸಂದರ್ಭದಲ್ಲಿ ಹೆಣ್ಣಿನ ಮೂಲ ಮಾತೃ ವಂಶಿಯತೆಗಳು ಹಿಂದೆ ಸರಿಯಲ್ಪಟ್ಟವು, ಇಂತಹ ಮಾತೃವಂಶಿಯತೆಗೆ ಹೆಣ್ಣಿಗೆ ಹೆಚ್ಚಿನ ಪ್ರಧಾನ್ಯತೆ ದೊರೆಯಬೇಕಾದರೆ ಅವಳು ಉತ್ಪಾದನೆ ವ್ಯವಸ್ಥೆಯ ಒಂದು ಭಾಗವಾಗಬೇಕು, ಅವಳು ಅದರಲ್ಲಿ ಪಾಲುದಾರಳಾಗಬೇಕು ಎಂಬುದು ಏಂಗೆಲ್ಸ್ ಸಿದ್ಧಾಂತ ಇಂತಹ ಭಾಗವಹಿಸುವಿಕೆ ಆರ್ಥಿಕ ಚಟುವಟಿಕೆಗಳ ಪಾಲುದಾರಿಕೆಗಳು ಅವಳ ವಿಮೋಚನೆಯ ಮಾರ್ಗಗಳು ಎಂಬುದು ಇವನ ತಿಳುವಳಿಕೆ. ಏಂಗೆಲ್ಸ್‌ನ ವ್ಯಾಪಕವಾದ ಚಿಂತನೆ ಮಹಿಳೆಯು ಆರ್ಥಿಕ ಚಟುವಟಿಕೆಗಳಲ್ಲಿ ಪ್ರಧಾನ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಅವಳ ವಿಮೋಚನೆ ಸಾಧ್ಯ ಎಂದು ಹೇಳಿದ್ದನ್ನು ಮಾರ್ಕ್ಸ್ ಸ್ತ್ರೀವಾದಿಗಳು ಒಪ್ಪಿಕೊಂಡರು ಅವನ ಚಿಂತನೆಯಲ್ಲಿರಬಹುದಾದ ಅನೇಕ ಮಿತಿಗಳನ್ನು ಗುರ್ತಿಸುತ್ತಾರೆ. ಬಹಳ ಮುಖ್ಯವಾಗಿ ಅವರ ಪ್ರಶ್ನಿಸುವ ವಿಚಾರವೆಂದರೆ ಸ್ತ್ರೀ ಪುರುಷರ ಶ್ರಮ ವಿಭಜನೆ ಈ ಶ್ರಮ ವಿಭಜನೆಯಲ್ಲಿರುವ ತಾರತಮ್ಯಗಳೇ ಪಿತೃಪ್ರಧಾನ ವ್ಯವಸ್ಥೆಗೆ ದಾರಿ ಮಾಡಿ ಕೊಟ್ಟಿದೆ ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಸ್ಪಷ್ಟವಾಗಿ ಗುರ್ತಿಸುತ್ತಾ, ಈ ನೆಲೆಯಿಂದ ಏಂಗಲ್ಸ್ ನ ವಿಚಾರಧಾರೆಗಿಂತ ಭಿನ್ನರಾಗುತ್ತಾರೆ. ಹೊರಗೆ ದುಡಿದು ಹಣ ಸಂಪಾದಿಸುವ ಪುರುಷನ ಕಾರ್ಯ ಚಟುವಟಿಕೆಯನ್ನು ಮಾತ್ರ ದುಡಿಮೆ ಎಂದು ಪರಿಗಣಿಸಿ ಮನೆಯೊಳಗೆ ಮೂಗಿಗೆ ರವಡೆ ಕಟ್ಟಿಕೊಂಡು ಬೆಳಗಿನಿಂದ ರಾತ್ರಿಯವರೆಗೆ ಮನೆಗೆಲಸಗಳು ಮಕ್ಕಳ ಲಾಲನೆ, ಪಾಲನೆ, ಪೋಷಣೆ, ಅಥಿತಿ ಅಭ್ಯಾಗತರ ಉಪಚಾರ ಹಬ್ಬ ಹರಿದಿನಗಳನ್ನು ಆಚರಿಸಿ ಸಾಂಸ್ಕೃತಿಕ ವಾತಾವರಣವನ್ನು ಕಾಪಾಡುತ್ತಾ ಇಡೀ ತನ್ನ ಬದುಕನ್ನು ಹಗಳಿರುಳೆನ್ನದೇ ಮೀಸಲಾಗಿಟ್ಟು ಗೃಹಿಣಿಯ ಶ್ರಮ ಆರ್ಥಿಕವಾಗಿ ಲಾಭತ್ತರುತ್ತಿರಲಿಲ್ಲವಾಗಿ ದುಡಿಮೆ ಎಂದು ಭಾವಿಸಲಾಗಲಿಲ್ಲ. ಇತ್ತೀಚಿನ ಸಂದರ್ಭದಲ್ಲಿ ಆಧುನಿಕ ಸ್ತ್ರೀವಾದಿಗಳು 'ಹೌಸ್‌ವೈಫ್', ಎಂಬ ಪರಿಕಲ್ಪನೆಯನ್ನು ವಿರೋಧಿಸುತ್ತಾ ಗೃಹಿಣಿಯನ್ನು 'ಹೌಸ್ ಮೇಕರ್' ಎಂದು ಕರೆಯುವುದು ಗಮನೀಯ.

ಉತ್ಪಾದನೆ ಸಂತಾನೋತ್ಪತ್ತಿ ಸಾಮಾಜೀಕರಣ ಹಾಗೂ ಲೈಂಗಿಕತೆಗಳು ಒಂದಕ್ಕೊಂದು ಪೂರಕವಾಗಿದ್ದು ಕಾಲದಿಂದ ಕಾಲಕ್ಕೆ ಸಮಯ ಸಂದರ್ಭನುಸಾರ ಬದಲಾವಣೆಗಳಿಗೊಳಗಾಗುತ್ತಿರುತ್ತದೆ. ಮಾತೃಪ್ರಧಾನ ಮೌಲ್ಯ ವ್ಯವಸ್ಥೆ ಪಿತೃಪ್ರಧಾನ ಮೌಲ್ಯ ವ್ಯವಸ್ಥೆಗೆ ಪರಿವರ್ತಿತವಾದುದೇ ಆಗಲಿ ಬಂಡವಾಳಶಾಹಿಯ ಏಕಪತ್ನಿತ್ವ ಕುಟುಂಬ ಪದ್ಧತಿ ಸಾಮಾಜಿಕವಾಗಿ ಅವಳ ಅನುತ್ಪಾದಕತ್ವ ಇತ್ಯಾದಿಗಳನ್ನು **ಮಿಷೆಲ್** ಹೇಳುತ್ತಾಳೆ. ಸಂತಾನೋತ್ಪತ್ತಿಯ ಕಾರಣದಿಂದಲೇ ಹೊರಗೆ ಉತ್ಪಾದಿಸಲಾರದೇ ಅನುತ್ಪಾದಕಳಾಗಿ ಗರ್ಭನಿರೋಧಕಗಳು ಕುಟುಂಬ ಯೋಜನೆಗಳ ಮೂಲಕ ಔದ್ಯೋಗಿಕ ರಂಗದಲ್ಲಿ ಅವಳ ಉತ್ಪಾದಕತೆಯ ಹೆಚ್ಚಾದುದನ್ನು ಮಿಷೆಲ್ ವಿಸ್ತಾರವಾಗಿ ಚರ್ಚಿಸಿದ್ದಾಳೆ. ಆದರೆ ಮಾರ್ಕ್ಸ್‌ವಾದಿ ಚಿಂತಕರು ಗರ್ಭನಿರೋಧಕಗಳು ಗರ್ಭ ನಿಯಂತ್ರಣ ಮಾಡಿದಾಗ ಆಗುವ ಪರಿಣಾಮಗಳನ್ನು ನಿರ್ಲಕ್ಷ್ಯ ಮಾಡುತ್ತಾರೆ. ಇಂತಹ ದಿವ್ಯ ಮೌನ ನಿರ್ಲಕ್ಷ್ಯಗಳೂ ಕೂಡ ಪುರಷ ಹಿತಾಸಕ್ತಿ ಲೈಂಗಿಕ ರಾಜಕಣರಣಕ್ಕೆ ನೇರವಾಗಿ ಸಂಬಂಧಪಟ್ಟುದುದೇ ಆಗಿದೆ ಎಂದು ಸಮಾಜವಾದಿ ಸ್ತ್ರೀವಾದಿಗಳು ವಿವರಿಸುತ್ತಾರೆ. ಎಲ್ಲಾ ಸಮಾಜಗಳು ಪುರುಷ ಪ್ರಧಾನ ಸಮಾಜಗಳೇ ಆಗಿರುವುದರಿಂದ ಹೆಣ್ಣು ಪ್ರಪಂಚದ ಯಾವುದೇ ಮೂಲೆಯಲ್ಲಿ ಯಾವುದೇ ಜಾತಿ, ಜನಾಂಗ, ವರ್ಗ, ವರ್ಣಗಳಿಗೆ ಸೇರಿದ್ದರೂ ಅವಳ ಸ್ಥಿತಿ ಒಂದೇ ಆಗಿರುತ್ತದೆ. ಅವಳು ಕರಿಯಳಾಗಲಿ, ಬಿಳಿಯಲಾಗಲಿ, ಬಡವಿಯಾಗಲಿ, ಶ್ರೀಮಂತೆಯಾಗಲಿ, ವಿದ್ಯಾವಂತೆಯಾಗಲಿ, ಅವಿದ್ಯಾವಂತೆಯಾಗಲಿ, ಉದ್ಯೋಗಸ್ಥೆ, ನಿರುದ್ಯೋಗಸ್ಥೆಯಾಗಲಿ, ನಗರ–ಹಳ್ಳಿಗಳಾಗಲಿ ಅವಳು ಪಿತೃ ಪ್ರಧಾನ ಮೌಲ್ಯ ವ್ಯವಸ್ಥೆಯಲ್ಲಿ ಜೀವಿಸುವವರೆಗೂ ಅವಳ ಸಮಸ್ಯೆಗಳು ಒಬ್ಬಳಿಂದ ಒಬ್ಬಳಿಗೆ ಭಿನ್ನವಾಗುವುದಿಲ್ಲ. ಮೇಲ್ನೋಟಕ್ಕೆ ಕೆಲವರು ವಿಮೋಚನೆಗೊಂಡಂತೆ ಕಾಣುತ್ತರಾದರೂ ಆಳದಲ್ಲಿ ಅವರೆಲ್ಲರ ಶೋಷಣೆಯ ಸ್ವರೂಪ ಒಂದೇ ಮಟ್ಟದ್ದಾಗಿ ಎಲ್ಲಾ ಹೆಣ್ಣುಗಳು ಒಂದೇ ದೋಣಿಯಲ್ಲಿ ತೇಲುವ ಸಮಾನ ಹೃದಯಿಗಳಾಗಿದ್ದಾರೆ. ಶೋಷಣೆಯ ಬೇರುಗಳು ಅವಳ ಮನಸ್ಸಿನಾಳದಲ್ಲಿ ಅಡಗಿರುವುದರಿಂದ ಸಾಮಾಜಿಕ ಸುಧಾರಣೆಗಳು ಸಮಗ್ರ ಬದಲಾವಣೆಗಳೂ ಕೂಡ ಅವಳ ಸ್ಥಾನಮಾನಗಳಲ್ಲಿ ಯಾವುದೇ ವಿಶೇಷವಾದ ಪರಿವರ್ತನೆಗಳನ್ನುಂಟುಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಬಹುದಾಗಿದೆ. ಹೆಣ್ಣಿನ ಮೂಲಭೂತ ಮಾನಸಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳದ ಹೊರತು ಯಾವುದೇ ರೀತಿಯ ಬದಲಾವಣೆಗಳನ್ನು ಕಾಣಲು ಸಾದ್ಯವಿಲ್ಲ. ಬಂಡವಾಳಶಾಹಿಯ ನಿರ್ಮೂಲನೆಯೊಂದಿಗೆ ಪುರುಷ ಪ್ರಧಾನ ಮೌಲ್ಯವ್ಯವಸ್ಥೆಯ ನಿರ್ಮೂಲನೆ ಯಾದಾಗ ಮಾತ್ರ ಸಮಾನತೆಯನ್ನು ತನ್ನ ಚಿಂತನೆಯ ಅಡಿಪಾಯವಾಗಿಸಿಕೊಂಡು ಸಮಾಜ ವ್ಯವಸ್ಥೆ ರೂಪಗೊಳ್ಳಲು ಸಾಧ್ಯ ಎನ್ನುತ್ತಾಳೆ. ಸಮಕಾಲೀನ ಪುರುಷ ಪ್ರಧಾನ ವ್ಯವಸ್ಥೆಯನ್ನು ಮೊದಲು ಪಿತೃ ಪ್ರಧಾನ ಎಂದು ಕರೆಯಲಾಗುತ್ತಿತ್ತು.

ಮಹಿಳಾ ಜೀವನದ ಹಿನ್ನೆಲೆಯಲ್ಲಿ ಪಿತೃ ಪ್ರಧಾನತೆಯ ಕೆಲವು ಅಂಶಗಳು ಈ ಕೆಳಗಿನಂತಿವೆ

೧. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯು ಸಾಮಾಜಿಕವಾಗಿ, ಆರ್ಥಿಕವಾಗಿ, ಪರಾವಲಂಬಿಯಾಗಿರುತ್ತಾಳೆ

೨.ಗಂಡು ಮಗುವಿನಿಂದ ಉತ್ತರಾಧಿಕಾರ ಹಾಗೂ ಸಂತತಿ ಬೆಳವಣಿಗೆಯನ್ನು ಗುರುತಿಸುವುದರಿಂದ ಮಹಿಳೆ ಗಂಡು ಮಗುವನ್ನು ಹೇರುವ ಸಾಮರ್ಥ್ಯದ ಮೇಲೆ ಅವಳ ಸ್ಥಾನ ನಿರ್ಧಾರವಾಗುತ್ತದೆ.

೩.ಮಹಿಳೆಗೆ ಕುಟುಂಬದ ಆಸ್ತಿಯಲ್ಲಿ ಪಾಲುದೊರಕುವುದಿಲ್ಲ. ಕಾನೂನಿನಲ್ಲಿದ್ದರೂ ಸಾಂಸ್ಕೃತಿಕ ಸಾಮಾಜಿಕ ರಚನೆಗಳು ಇದಕ್ಕೆ ಅಡ್ಡಿಯಾಗಿವೆ.

೪.ಮಹಿಳೆ ವಿವಾಹಕ್ಕೆ ಮೊದಲು ತಂದೆ ಮನೆಗೆ ಸೇರಿದವಳಾಗಿರುವುದಿಲ್ಲ. ವಿವಾಹದ ನಂತರ ಪತಿಯ ಮನೆಯಲ್ಲಿ ಸಂಪೂರ್ಣ ಸದಸ್ಯತ್ವ ದೊರಕುವುದಿಲ್ಲ. ಅದು ಅವಳ ನಡವಳಿಕೆ ಗಂಡನ ಮನೆಯವರ ನಂಬಿಕೆ ವಿಶ್ವಾಸವನ್ನು ಗಳಿಸುವುದನ್ನು ಅವಲಂಭಿಸಿರುತ್ತದೆ.

೫.ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳಲ್ಲಿ ನೇರವಾಗಿ ಭಾಗವಹಿಸುವಂತಿಲ್ಲ. ಪತಿ ಮತ್ತು ಗಂಡು ಮಕ್ಕಳ ಕಲ್ಯಾಣಕ್ಕಾಗಿ ಕೆಲವು ಧಾರ್ಮಿಕ ವಿಧಿಗಳನ್ನು ಆಚರಿಸುತ್ತಾಳೆ. ಅವಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳಿರುತ್ತವೆ. ಪುರುಷನಿಗೆ ಅಧಿಕಾರ ಹಕ್ಕುಗಳಿರುತ್ತವೆ.

೬. ಮಹಿಳೆಯ ಜೀವನವನ್ನು ಕುಟುಂಬವು ನಿಯಂತ್ರಿಸುತ್ತದೆ. ಮಕ್ಕಳ ಮೇಲೆ ಅಧಿಕಾರವಿರುವುದಿಲ್ಲ.

- **ಪಿತೃ ಪ್ರಧಾನತೆಯಲ್ಲಿ ಪಿತೃವಂಶಿಯ ಮತ್ತು ಪಿತೃ ಸ್ಥಾನಿಯ ಎಂಬ ಎರಡು ವ್ಯವಸ್ಥೆಗಳಿವೆ**

ಪಿತೃಪ್ರಧಾನತೆ ಕುಟುಂಬ ಕರ್ತೃ ತಂದೆ ಕುಟುಂಬದ ನಿಯಂತ್ರಣ ಆತನದ್ದಾಗಿರುತ್ತದೆ. ಕುಟುಂಬದ ಎಲ್ಲಾ ಕಾರ್ಯಗಳಲ್ಲಿ ಮತ್ತು ಎಲ್ಲಾ ಹಂತಗಳಲ್ಲಿ ನಿರ್ಧಾರ ತಂದೆಯದಾಗಿರುತ್ತದೆ. ಸದಸ್ಯರ ನಡವಳಿ ಆತನ ಸೂಚನೆಯ ಮೇಲೆ ಇರುತ್ತದೆ. ಆಸ್ತಿ ಹಂಚಿಕೆಯನ್ನು ಆತನೇ ನಿರ್ಧರಿಸುತ್ತಾನೆ. ಶ್ರಮ ವಿಭಜನೆಯನ್ನು ಕರ್ತೃ ಮಾಡುತ್ತಾನೆ.

ಪಿತೃ ವಂಶಿಯ ಇಲ್ಲಿ ತಂದೆಯ ಮೂಲಕ ವಂಶವನ್ನು ಗುರ್ತಿಸಲಾಗುತ್ತದೆ. ಆತನ ನಂತರ ಹಿರಿಯ ಮಗ ಕುಟುಂಬದ ಯಜಮಾನಿಕೆ ವಹಿಸುವನುಆತನ ತಮ್ಮಂದಿರು ಸ್ವತಂತ್ರ ರಾಗಿರುತ್ತಾರೆ. ಆದರೆ ಆ ಕುಟುಂಬದ ಅಕ್ಕ ತಂಗಿಯರು ಮಾತ್ರ ಆತನ ಮೂಲಕ ಗುರ್ತಿಸಲ್ಪಡುತ್ತಾರೆ. ಗಂಡು ಮಗುವಿನ ಜನನಕ್ಕೆ ಪ್ರಧಾನತೆ ಇರುತ್ತದೆ. ಗಂಡಿಗೆ ಹೆಚ್ಚಿನ ಹಕ್ಕುಗಳಿರುತ್ತವೆ. ಒಡೆತನ ಆಸ್ತಿಗಳು ಗಂಡು ಮಗುವಿನ ಮೂಲಕ ಹಂಚಲಾಗುತ್ತದೆ.

ಪಿತೃ ಸ್ಥಾನಿಯ ಪಿತೃ ಪ್ರಧಾನ ವ್ಯಸ್ಥೆಯಲ್ಲಿ ಗಂಡಿನ ಸ್ಥಾನಮಾನಗಳನ್ನು ವಿಶ್ಲೇಶಿಸಲಾಗುತ್ತದೆ. ಗಂಡಿಗೆ ಶ್ರೇಷ್ಟ ಸ್ಥಾನವನ್ನು ಹೆಣ್ಣಿಗೆ ಕನಿಷ್ಟ ಸ್ಥಾನವನ್ನು ಹೇಳಲಾಗಿರುತ್ತದೆ. ಹೆಣ್ಣಿನ ಸ್ಥಾನವನ್ನು ನಿರಾಕರಿಸಲಾಗಿರುತ್ತದೆ. ಆಕೆಗೆ ನಿರ್ದಿಷ್ಟ ಸ್ಥಾನವಿಲ್ಲ. ಮದುವೆಯ ವರೆಗೂ ಪಿತೃ ಸೂಚಿತ ಸಾಮಾಜೀಕರಣ ಮತ್ತು ಸಂಸ್ಕೃತೀಕರಣ ಇದ್ದರೇ ಮದುವೆಯ ನಂತರ ಗಂಡನನ್ನು ಅನುಸರಿಸಬೇಕು ಆದರೆ ಪುರುಷನಿಗೆ ಶಾಶ್ವತ ಹಕ್ಕುಗಳಿರುತ್ತವೆ. ಒಡೆತನ ಅಧಿಕಾರ ಸಂರಚನೆಗಳು ಗಂಡಿನ ಸ್ಥಾನದಿಂದ ಹಂಚಿಕೆಯಾಗುವುವು. ಹೀಗಿದ್ದಾಗ ಮಹಿಳೆಯ ಅಧೀನತೆ ಇದ್ದೇ ಇರುತ್ತದೆ. ಕುಟುಂಬ ಹಾಗೂ ಖಾಸಗೀ ಆಸ್ತಿಯ ಪರಿಕಲ್ಪನೆಯ ನಂತರ ಪಿತೃ

ಪ್ರಧಾನತೆಯೆಂಬ ಲಿಂಗ ಅಸಮಾನ ವ್ಯವಸ್ಥೆ ರೂಢಿಗೆ ಬಂದಿತು. ಇಂದಿನ ಆಧುನಿಕೋತ್ತರ ಚಿಂತನೆಗಳು ಚಾಲ್ತಿಯಲ್ಲಿರುವಾಗಲೂ ಕುಟುಂಬ, ಕೃಷಿ, ಕಾರ್ಖಾನೆ, ಆರೋಗ್ಯ, ಶಿಕ್ಷಣ, ಮುಂತಾದವುಗಳು ಅನೇಕ ಕ್ಷೇತ್ರಗಳಲ್ಲಿ ಲಿಂಗ ಅಂತರಗಳಿದ್ದು ಇಲ್ಲೂ ಸಹ ಪುರುಷನಿಷ್ಟ ವ್ಯವಸ್ಥೆ ಜಾರಿಯಲ್ಲಿದೆ. ಈ ಸಮಸ್ಯೆಗಳು ಕಾಲಚಕ್ರದಲ್ಲಿ ತೀವ್ರಗೊಂಡಿವೆಯೇ ಹೊರತು ಕಡಿಮೆಯೇನೂ ಆಗಿಲ್ಲ. ಎಂದಿನಂತೆ ಮಹಿಳೆ ಶೋಷಣೆ ಮತ್ತು ದಮನವು ಮುಂದುವರೆದಿದೆ. ಒಟ್ಟಾರೆ ತಂದೆಯೇ ಮನೆಯ ಒಡೆಯನಾಗಿರುವ ಹಾಗೂ ತಂದೆಯ ಹೆಸರಿನಲ್ಲಿಯೇ ಆಸ್ತಿ ಪಾಸ್ತಿಗಳ ವಹಿವಾಟು ನಡೆಯುವ ಕುಟುಂಬ ವ್ಯವಸ್ಥೆಯನ್ನು ಪಿತೃ ಪ್ರಧಾನ ಕುಟುಂಬ ಎನ್ನುತ್ತಾರೆ. ಸಮಾಜಶಾಸ್ತ್ರಜ್ಞ **ಸಿಡ್ಜ್‌ವಿಕ್** ಪಿತೃಪ್ರಧಾನತೆ ಕುರಿತು "ಈ ಪಿತೃಪ್ರಧಾನ ಕುಟುಂಬದಲ್ಲಿ ತಂದೆಗೆ ತನ್ನ ಪತ್ನಿ ಮತ್ತು ಮಕ್ಕಳ ಮೇಲೆ ಅವರಿಗೆ ಪ್ರತ್ಯೇಕ ಅಸ್ತಿತ್ವವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ನಿರಂಕುಶ ಪ್ರಭುತ್ವವಿರುತ್ತದೆ" ಎಂಬುದಾಗಿ ಹೇಳಿದ್ದಾರೆ.

ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಮೊದಲು ಅಸ್ಥಿತ್ವಕ್ಕೆ ಬಂದಿತ್ತೋ? ಅಥವಾ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಅಸ್ಥಿತ್ವ ಮೊದಲೊ? ಎಂಬ ಚರ್ಚೆಗೆ ಬದಲಾಗಿ ಅವುಗಳ ಪಾತ್ರ ನಿರ್ವಹಣೆ ಮತ್ತು ಇಂದು ಅವುಗಳ ಸ್ವರೂಪ ಯಾವ ಬಗೆಯದಾಗಿದೆ ಎಂಬುದು ಮುಖ್ಯ. ಸಮಾನತೆ ಎಂದು ಮಾತನಾಡುವ ಇಂದು ಈ ಪಿತೃ ಪ್ರಧಾನತೆ ಉಳಿದುಕೊಂಡು ಬಂದಿದೆ. ಕಾರಣ ಆದಿಯಿಂದಲೂ ಪುರುಷರಿಗೆ ಸ್ತ್ರೀಯರಿಗಿಂತ ಸರ್ವವಿಧದಲ್ಲಿಯೂ ಶ್ರೇಷ್ಟರೂ ಬಲಿಷ್ಟರೂ ಮತ್ತು ಸಮರ್ಥರೂ ಎಂಬ ಭಾವನೆ ರೂಢಿಯಾಗಿದೆ. ಆದ್ದರಿಂದ ಕುಟುಂಬದ ಪ್ರಧಾನಿಕೆಯ ಪ್ರಶ್ನೆ ಬಂದಾಗ ಸಹಜವಾಗಿಯೇ ಪುರುಷ ಉನ್ನತ ಸ್ಥಾನಗಳಿಸಿ ತನ್ನ ಮೇಲ್ಮೆಯನ್ನು ಮೆರೆಯುತ್ತಿದ್ದಾನೆ.

ಪಿತೃ ಪ್ರಧಾನ ವ್ಯವಸ್ಥೆಯ ಕೆಲವು ನೇತ್ಯಾತ್ಮಕ ಅಂಶಗಳು ಈ ಕೆಳಗಿನಂತಿವೆ

೧. ಇದು ಲಿಂಗ ಅಸಮಾನತೆಗೆ ಕಾರಣವಾಗಿದೆ.

೨. ಹೆಣ್ಣನ್ನು ಕೇವಲ ಉಪಯೋಗ ಮತ್ತು ಮನೆಗೆಲಸಕ್ಕೆ ಸೀಮಿತವಾಗಿಸುತ್ತದೆ.

೩. ಹೆಣ್ಣಿನ ಸ್ವಾತಂತ್ರ್ಯ ಚಲನ ಶೀಲತೆಗಳನ್ನು ಕಡಿದುಹಾಕುತ್ತದೆ.

೪. ಹೆಣ್ಣನ್ನು ಪುರುಷನ ದಾಸ್ಯಳನ್ನಾಗಿ ಮುಂದುವರೆಯುವಂತೆ ಮಾಡುತ್ತದೆ.

೫. ಈ ವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಹೆಣ್ಣಿನ ಬಗೆಗಿನ ಕೀಳಿರಿಮೆ ಮುಂದುವರೆಯುತ್ತದೆ.

೬. ಪಿತೃಪ್ರಧಾನತೆಯು ಪುರುಷನ ದರ್ಪದ ಆಳ್ವಿಕೆಗೆ ಮತ್ತು ನಿಯಂತ್ರಣವನ್ನು ಸಾರ್ವತ್ರಿಕಗೊಳಿಸುತ್ತದೆ.

೭. ಹೆಣ್ಣನ್ನು ಖಾಸಗೀ ಆಸ್ತಿಯೆಂದು ಪರಿಗಣಿಸುತ್ತದೆ.

ಹೀಗೆ ಸಾಂಪ್ರದಾಯಿಕವಾಗಿ ಮುಂದುವರೆದುಕೊಂಡು ಬಂದಿರುವ ಪಿತೃಪ್ರಧಾನತೆ ಇಂದು ಹಲವು ಆಯಾಮಗಳಲ್ಲಿ ಉಳಿದುಕೊಂಡು ಬಂದಿದೆ. ಸಮಾಜದ ಎಲ್ಲಾ ವರ್ಗ ಜಾತಿ ಜನಾಂಗಗಳಲ್ಲಿ

ಹಂಚಿಹೋಗಿರುವ ಈ ಪದ್ದತಿ ನಿರ್ಮೂಲನೆಗಾಗಿ ಸಹಭಾಗಿತ್ವದ ಸಮಾನತೆಯ ಸಮಾಜದ ನಿರ್ಮಾಣವಾಗಬೇಕು. ಆಗ ಮಾತ್ರ ಯಾವುದೇ ಅಭಿವೃದಿ ಸಾಧ್ಯ ಮತ್ತು ಅಭಿವೃದ್ಧಿಯ ಎಲ್ಲಾ ಹಂತಗಳನ್ನು ನಾವು ಆಗ ಮಾತ್ರ ತಲುಪಬಹದು. ಇಂದು ಮಹಿಳೆಯ ಉನ್ನತ ಶಿಕ್ಷಣ ಉನ್ನತ ಉದ್ಯೋಗ ಪಡೆದರೂ ಸಹ ಈ ವ್ಯವಸ್ಥೆಯನ್ನು ಮೀರಿ ನಿಲ್ಲಲಿಲ್ಲ. ಸಮಾಜ ಆಕೆಗೆ ಅವಕಾಶ ಕಲ್ಪಿಸಿಲ್ಲ. ಇದು ಭಾರತೀಯ ಸಮಾಜಪಾತ್ರವಲ್ಲ. ಸಾಮುದಾಯಕವಾಗಿ ಸಮಾಜದಲ್ಲಿ ಜಾರಿಯಲ್ಲಿದೆ. ಹೀಗೆ ಮೇಲಿನ ವಿವರಣೆಯಂತೆ ಪಿತೃ ಪ್ರಧಾನತೆಯಲ್ಲಿ ಮಹಿಳಾ ದೌರ್ಜನ್ಯವು ಹೇಗೆ ಅವ್ಯಹತವಾಗಿ ನಡೆಯುತ್ತಿದೆ ಎಂದು ತಿಳಿಸಲಾಗಿದೆ.

೩.೨ ಸಾರ್ವಜನಿಕ ಮತ್ತು ಖಾಸಗಿವಲಯಗಳಲ್ಲಿ ಮಹಿಳಾ ದೌರ್ಜನ್ಯ

ಭಾರತೀಯ ಮಹಿಳಾ ಚಳುವಳಿಯು ಏಕಗತಿಯಿಂದ ಕೂಡಿರದ ಒಂದು ಇತಿಹಾಸವನ್ನು ಹೊಂದಿದೆ ಎನ್ನಬಹುದು. ಅದು ವಿಷಯಾಧಾರಿತವಾದ ಒಂದು ಚಳುವಳಿಯಾಗಿದ್ದು, ಅದರ ಬೇರುಗಳನ್ನು **ರಾಜಾರಾಂ ಮೋಹನ್‌ರಾಯ್** ರವರ ನಾಯಕತ್ವದ ಅಡಿಯಲ್ಲಿ, ೧೯ನೇ ಶತಮಾನದ ಬಂಗಾಳದಲ್ಲಿ ನಡೆದ ಸತಿಪದ್ದತಿ ವಿರೋಧಿ ಚಳುವಳಿಯಲ್ಲಿ ಗುರುತಿಸಬಹದಾಗಿದೆ. ವಿಧವಾ ಪುನರ್ವಿವಾಹ, ಬಾಲ್ಯ ವಿವಾಹದ ನಿಷೇಧ ಮತ್ತು ಹೆಣ್ಣು ಮಗುವಿಗೆ ಶಿಕ್ಷಣ ನೀಡುವಿಕೆಯಂತಹ ಇತರ ವಿಷಯಗಳು ಕೂಡ ಆಗಿನ ಕಾರ್ಯಸೂಚಿಯಲ್ಲಿದ್ದವು. ೨೦ನೇ ಶತಮಾನದ ಮಹಿಳಾ ಚಳುವಳಿಗಳು ಮಹಿಳೆಯರಿಗೆ ಆಸ್ತಿಹಕ್ಕುಗಳ ನೀಡಿಕೆ ಉದ್ಯೋಗ ಮತ್ತು ಅಸಾಂಪ್ರದಾಯಿಕ ವಲಯಗಳಿಗೆ ಮಹಿಳೆಯರ ಪ್ರವೇಶ ಇತ್ಯಾದಿಗಳ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣದ ಕಡೆಗೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸಿವೆ. ಅದೇ ಹೊತ್ತಿನಲ್ಲಿ, ಬಹಳ ಹಿಂದಿನಿಂದ ಚಾಲ್ತಿಯಲ್ಲಿರುವ ಕೌಟುಂಬಿಕ ದೌರ್ಜನ್ಯ, ಲೈಂಗಿಕ ಅತ್ಯಾಚಾರ, ವರದಕ್ಷಿಣೆ ಮತ್ತು ಮದ್ಯವ್ಯಸನದಂತಹ ಸಮಸ್ಯೆಗಳ ವಿರುದ್ದ ಕೂಡ ಭಾರತೀಯ ಮಹಿಳಾ ಚಳುವಳಿಗಳು ಹೋರಾಡಿವೆ. ಈ ಎಲ್ಲಾ ವಿಷಯಗಳ ವಿಭಿನ್ನ ಆಯಾಮಗಳ ಬಗ್ಗೆ ಪುರುಷರು ಮತ್ತು ಮಹಿಳೆಯರಲ್ಲಿ ಅರಿವು ಮೂಡಿಸುವ ಆಶಯದೊಂದಿಗೆ ಪ್ರಸ್ತುತ ಅಧ್ಯಾಯವು ಹೆಣ್ಣು ಮಗು ಮತ್ತು ವಯಸ್ಕ ಮಹಿಳೆಯರಿಗೆ ಸಂಬಂಧಿಸಿದ ಮಹತ್ವದ ಸಮಕಾಲೀನ ವಿಷಯವನ್ನು ಎತ್ತಿಕೊಳ್ಳುತ್ತದೆ."[೧೨]

ಸಾಮಾಜಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ವಲಯದಷ್ಟೆ ಪ್ರಮುಖವಾಗಿ ಕಾಣಿಸಿಕೊಳ್ಳುವುದೇ ಸಾರ್ವಜನಿಕವಲಯ. ಈ ವಲಯವನ್ನು ವ್ಯಾಖ್ಯಾನಿಸುವಾಗ ಬಹುತೇಕ ಚಿಂತಕರು ಆರ್ಥಿಕ ವ್ಯವಹಾರಗಳನ್ನು ಮಾತ್ರ ಪರಿಗಣಿಸಿರುವುದು ಕಂಡು ಬರುತ್ತದೆ. ಮಹಿಳೆಯ ಪ್ರವೇಶವನ್ನು ನಿರಾಕರಿಸಿದ ಈ ವಲಯವು ಪುರುಷ ವಲಯವೆಂದೇ ಸಮಾಜವ್ಯವಸ್ಥೆಯಲ್ಲಿ ಬಿಂಬಿತವಾಗಿದೆ. ಆದರೆ ಇತ್ತೀಚೆಗಷ್ಟೇ ಮಹಿಳೆಯರು ಪುರುಷ ಸಂಸ್ಕೃತಿಯ ಕೆಲವು ಹುನ್ನಾರಗಳಿಂದಾಗಿ ಸಾರ್ವಜನಿಕ ವಲಯದ ಪ್ರವೇಶ ಪಡೆದರು.

ಮಹಿಳೆಯ ವಲಯವೆಂದೇ ಹೇಳಲಾದ ಕೌಟುಂಬಿಕ ವಲಯವು ಮೇಲ್ನೋಟಕ್ಕೆ ಅವಳ ರಕ್ಷಣೆಯನ್ನು, ಒಡೆತನವನ್ನು ಪೋಷಿಸುತ್ತಿದೆ. ಅವಳಿಗೆ ಗೌರವ ತರುವಂತಹ ಒಂದೇ ಒಂದು ವಲಯ ಅದು ಕೌಟುಂಬಿಕ ವಲಯವೆಂಬುದು ಅಸತ್ಯದ ಸಂಗತಿಯಾಗಿದೆ. ಇನ್ನೂ ಗೌರವ, ರಕ್ಷಣೆ,ಭದ್ರತೆ, ಇವುಗಳಿಗೆ ಅವಕಾಶವೇ ಇಲ್ಲವೆಂದು ಪ್ರಚಲಿತವಾಗಿರುವ ವಲಯದಲ್ಲಿ ಅದರ ಸ್ವರೂಪ ಇನ್ನಷ್ಟು ಭೀಕರವಾಗಿದೆ. ಮೇಲ್ನೋಟಕ್ಕೆ ಇದನ್ನು ಸಮಾಜ ವ್ಯವಸ್ಥೆಯು ಒಪ್ಪಿಕೊಳ್ಳುತ್ತದೆ. ಇನ್ನಷ್ಟು ಭೀಕರ ಎಂದು ವ್ಯಾಖ್ಯಾನಿಸುವಲ್ಲಿಯೇ ಸಾರ್ವಜನಿಕ ವಲಯದಲ್ಲಿ ಅವಳ ಮೇಲಾಗುವ ದೌರ್ಜನ್ಯಗಳು ಗೋಚರಿಸುತ್ತವೆ ಎನ್ನುವ ತರ್ಕವಿದೆ. ಆದರೆ ವಾಸ್ತವ ಸಂಗತಿಯಲ್ಲಿ ಈ ತರ್ಕವು ಅಸಮಂಜಸವಾಗಿದೆ. ಪುರುಷಪರ ವಾದಂತಹ ರೂಢಿಗಳಿರುವ ಸಮಾಜವ್ಯವಸ್ಥೆಯಲ್ಲಿ ಎಲ್ಲಾ ಪುರುಷರಿಗೂ, ಎಲ್ಲಾ ಹೆಂಗಸರ ಮೇಲೆ ಅಧಿಕಾರವಿದ್ದು, ಯಾರ ಮೇಲೆಯೂ ಸಹ ಅವರು ಆಕ್ರಮಣವನ್ನು ಮಾಡಬಹುದು ಎಂಬ ಅಲಿಖಿತ ಕಾನೂನಿದೆ. ಕೌಟುಂಬಿಕ ವಲಯವನ್ನು ಸುರಕ್ಷಿತ ಜಾಗವೆಂದು ಹೇಳುವ ಹಾಗೆ ಸಾರ್ವಜನಿಕ ವಲಯದಲ್ಲಿನ ಕೆಲವು ಸ್ಥಳಗಳನ್ನು ಸುರಕ್ಷಿತವೆಂದು ಹೇಳಲಾಗುತ್ತಿದೆ. ಉದಾ: ದೇವಸ್ಥಾನ, ಸರ್ಕಾರಿ ಕಛೇರಿಗಳು, ಸಂಸ್ಥೆಗಳು, ಗುಂಪುಗಳಲ್ಲಿ ಕೆಲಸ ಮಾಡುವ ಸ್ಥಳಗಳು ಕಾರ್ಖಾನೆಗಳು,, ಇತ್ಯಾದಿ. ಆದರೆ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ನೋಡಿದಾಗ ಈ ಸ್ಥಳಗಳು, ವಲಯಗಳು ಸಹಿತ ರಕ್ಷಣೆಯ ತಾಣಗಳಾಗಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಸಂಘ-ಸಂಸ್ಥೆಗಳಲ್ಲಿ ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ನೌಕರ ಸಂಘಗಳೆಂದೂ, ಯುನಿಯನ್‌ಗಳೆಂದೂ, ಅಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ರೂಪಿಸಿಕೊಳ್ಳಲಾಗಿರುತ್ತದೆ. ಆದರೆ ಇಲ್ಲೆಲ್ಲಿಯೂ ಸಹ ಮಹಿಳೆಯ ಸಮಸ್ಯೆಗಳನ್ನು, ಸಮಸ್ಯೆಗಳಾಗಿ ಪರಿಗಣಿಸುವ ಗೋಜಿಗೆ ಹೋಗುವುದಿಲ್ಲ, ಸಾಮಾನ್ಯ ಸಂಗತಿಗಳಿಗೂ, ಸೌಕರ್ಯಗಳಿಗೂ ಹೋರಾಡಲೆಂದು ರಚಿಸಿಕೊಂಡಿರುವ ಇವುಗಳಲ್ಲಿ, ಮಹಿಳಾ ಬದುಕಿನ ಆಲೋಚನೆಗಳು ಒಳಗೊಂಡಿರುವುದಿಲ್ಲ. ಹಾಗಾಗಿ ಅಲ್ಲಿನ ಮಹಿಳೆಯರ ಪರಿಸ್ಥಿತಿಗಳಿಗೆ ವಿಶೇಷ ಗಮನಹರಿಸಬೇಕಾದುದರತ್ತ ಯಾರೂ ಸಹ ಕಾಳಜಿಯನ್ನು ವಹಿಸುವುದಿಲ್ಲ. ಆದ್ದರಿಂದ ಕುಟುಂಬಗಳಲ್ಲಿ ನಡೆಯುವಂತೆಯೇ ಸಾರ್ವಜನಿಕ ವಲಯಗಳಲ್ಲಿಯೂ ಪ್ರಕಟಗೊಳ್ಳದಿರುವಂತಹ ಸಂಗತಿಗಳಾಗಿವೆ. ಅದೇ ರೀತಿಯಾಗಿ ಪ್ರಕಟಗೊಳ್ಳುವ ಭಾಗಗಳೆಂದರೆ ಮಾರ್ಕೆಟ್, ಪ್ರಯಾಣದ ಸಂದರ್ಭ ಇತ್ಯಾದಿ. ಈ ಬಗೆಯ ಸಾರ್ವಜನಿಕ ಸ್ಥಳಕ್ಕೆ ಪ್ರವೇಶಿಸಿದ ಮಹಿಳೆಯರು ಕೆಲಸದ ಕಾರಣಕ್ಕಾಗಿಯೇ ಕೆಲವು ವಲಯಗಳಿಗೆ ನಿಗದಿತಗೊಳ್ಳುತ್ತಾರೆ. ಉದಾಹರಣೆಗೆ ಕಛೇರಿಗಳು, ರಾಜಕೀಯ ಪಕ್ಷಗಳು, ಇತ್ಯಾದಿ. ಈ ಸಾರ್ವಜನಿಕ ವಲಯಗಳಲ್ಲಿನ ಮಹಿಳೆಯರ ವಿರುದ್ಧ ನಡೆಯುವ ಹಿಂಸೆ-ದೌರ್ಜನ್ಯಗಳು ಬಹುತೇಕವಾಗಿ ಪ್ರಕಟಗೊಳ್ಳುವುದಿಲ್ಲ. ಹೀಗೆ ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಕುರಿತು ಚರ್ಚಿಸುತ್ತಾ ಹೋದಾಗ ಸಾರ್ವಜನಿಕ ವಲಯದಲ್ಲಿ, ಸಾಮಾನ್ಯ ಸ್ಥಳ ಮತ್ತು ಕೆಲಸದ ಸ್ಥಳಗಳೆಂದು ಎರಡು ವಿಭಾಗಗಳಾಗುತ್ತವೆ. ಕೆಲಸದ

ಸ್ಥಳಗಳಲ್ಲಿನ ಉಪವಲಯ್ಯಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯಗಳು ಕಾಣಿಸಿಕೊಳ್ಳುತ್ತವೆ. ಈ ಉಪವಲಯಗಳ ಈ ವರೆಗೂ ಕುರಿತು ಸಾಕಷ್ಟು ಚರ್ಚೆಗಳು, ಚಿಂತನೆಗಳು ನಡೆಯುತ್ತಲೇ ಇವೆ.

ಸಂವಿಧಾನ ಮತ್ತು ಸರ್ಕಾರದ ಕಾಯ್ದೆಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುವ, ಉದ್ಯೋಗ ಭದ್ರತೆ ನೀಡುವ ಸಂಘಟನೆಗೊಂಡ ಕಾರ್ಮಿಕರಿರುವ ಮತ್ತು ಉತ್ಪಾದನೆಯಲ್ಲಿ ಅನೇಕ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತ ವಲಯ. ಇದಕ್ಕೆ ವಿರುದ್ದವಾದ ಲಕ್ಷಣಗಳನ್ನು ಹೊಂದಿರುವ ವಲಯವೇ ಅಸಂಘಟಿತ ವಲಯವೆಂದು ಹೇಳಲಾಗುತ್ತದೆ. ಸಮಾನತೆಯಡಿಗಿನ ವರದಿಯ ಉದ್ಯೋಗ ಭದ್ರತೆಯನ್ನು ಒದಗಿಸುವ, ಸೇವಾ ನಿಯಮಗಳನ್ನು ಪಾಲಿಸುವ ಸಲುವಾಗಿ ಸರ್ಕಾರವು ರೂಪಿಸಿರುವ ಶಾಸನಗಳು ಮತ್ತು ಕಾನೂನುಗಳ ಚೌಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ–ಸಂಘಟನೆಗಳು ಇಲ್ಲದ ಉತ್ಪಾದನಾ ವಲಯವನ್ನು ಅಸಂಘಟಿತ ವಲಯವೆಂದು ಕರೆಯಲಾಗುತ್ತದೆ.

ಕೆಲಸದ ಸ್ಥಳಗಳಲ್ಲಿ ಪ್ರಮುಖವಾಗಿ ಗುರುತಿಸಲಾದ ಸಂಘಟಿತ ಮತ್ತು ಅಸಂಘಟಿತ ವಲಯಗಳು ಸಾರ್ವಜನಿಕ ವಲಯದ ಭಾಗವಾಗಿಯೇ ಇರುವುದಾದರೂ ಇಲ್ಲಿ ಕಂಡು ಬರುವ ಮಹಿಳೆಯರ ಮೇಲಿನ ಆಕ್ರಮಣದ ಸ್ವರೂಪಗಳು ಭಿನ್ನವಾಗಿವೆ. ಸಾಮಾನ್ಯವಾಗಿ ಅಸಂಘಟಿತ ವಲಯದಲ್ಲಿನ ದೌರ್ಜನ್ಯಗಳು ಭೀಕರವೆನಿಸುತ್ತಿವೆ, ಹಾಗೂ ಸಂಘಟಿತ ವಲಯದಲ್ಲಿನ ದೌರ್ಜನ್ಯಗಳು ನಡೆಯುವುದೇ ಇಲ್ಲವೆಂಬ ಧೋರಣೆಗಳು ಇವೆ. ಸಾಧಾರಣವಾಗಿ ಮಹಿಳೆಯು ಸಮೂಹಗಳಿಗಿಂತಲೂ, ಒಂಟಿಯಾದಂತಹ ಸನ್ನಿವೇಶಗಳಲ್ಲಿ ಹೆಚ್ಚು ಹಿಂಸೆ ದೌರ್ಜನ್ಯಕ್ಕೊಳಗಾಗುತ್ತಾಳೆ. ಸಾಮಾನ್ಯವಾಗಿ ಕೌಟುಂಬಿಕ ವಲಯದ ಅಧಿಕಾರ ಹಂಚಿಕೆಗಳು, ಸಾರ್ವಜನಿಕ ವಲಯದಲ್ಲಿಯೂ ವಿಸ್ತರಿಸುತ್ತವೆ. ಆದರೆ ಕೌಟುಂಬಿಕ ವಲಯದಲ್ಲಿನ ಪರಿಚಯದಂತೆಯೇ ಸಂಘಟಿತ ವಲಯದಲ್ಲಿನ ರಹಸ್ಯ ಲೋಕವು ಅನಾವರಣಗೊಳ್ಳದಂತಹ ಅಂಶಗಳು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಮಾಣಗಳಲ್ಲಿನ ಭಿನ್ನತೆಯಿರಬಹುದಾದರೂ ಒಟ್ಟು ಸಾಮಾಜಿ ವ್ಯವಸ್ಥೆಯಲ್ಲಿ ಮಹಿಳೆಯ ರಕ್ಷಣೆ ಮತ್ತು ಭದ್ರತೆಯ ಪ್ರಶ್ನೆ ಇದೆ. ಸಾಂಪ್ರದಾಯಿಕ ಸಮಾಜಿಕ ವ್ಯವಸ್ಥೆಯ ವಿಧಾನದಲ್ಲಿ ಮಹಿಳಾ ಬದುಕು ಎದುರಿಸುತ್ತಿರುವ ಪ್ರಮುಖವಾದ ಸಂಗತಿ ಇದು."[೧೩]

ಈ ಬಗೆಯ ದೌರ್ಜನ್ಯಗಳು ಮಹಿಳೆಯ ಮೇಲೆ ಆಗಬಾರದೆಂಬ ಆಶಯದಿಂದಲೇ ಮಹಿಳಾಪರ ಚಿಂತನೆಗಳು, ಚಳುವಳಿಗಳು ಪ್ರಸ್ತುತವಾಗಿಯೂ ಕೆಲಸ ಮಾಡುತ್ತಿವೆ. ಕಾನೂನುಗಳು ಎಲ್ಲರಿಗೂ ಒಂದೇ ಎಂದು ಹೇಳುವಲ್ಲಿ ಅರ್ಥವಿಲ್ಲ. ಸರ್ವರಿಗೂ ಸಮಾನವೆಂಬ ಚಿಂತನೆಗಳಲ್ಲಿ ಮಹಿಳೆಯರನ್ನು ಅಂಚಿಗೆ ಸರಿಸಲಾಗಿದೆ ಎಂಬ ಅಂಶವು ಸ್ಪಷ್ಟವಾದ ಹಿನ್ನೆಲೆಯಲ್ಲಿ, ಮಹಿಳೆಯರಿಗೆ ಪ್ರತ್ಯೇಕವಾದ ಕಾನೂನುಗಳು ಅವಶ್ಯಕತೆಯನ್ನು ವ್ಯಕ್ತಪಡಿಸಲಾಯಿತು. ಆದ್ದರಿಂದ ಈಗಾಗಲೆ ಆಗಿರುವ ಪ್ರಯತ್ನಗಳಲ್ಲಿ ಮಹಿಳಾ ಕಾನೂನುಗಳು ಜಾರಿಗೆ ಬಂದಿವೆ. ಹೀಗೆ ಮಹಿಳೆಯರಿಗೆ ವಿಶೇಷ ಕಾನೂನು ಒದಗಿಸಿಕೊಡುವಲ್ಲಿ ಹಲವು ಬಗೆ ಯಶಸ್ಸನ್ನು ಸ್ತ್ರೀವಾದಿ ಚಿಂತನೆಗಳು, ಹೋರಾಟಗಳು ಗಳಿಸಿಕೊಳ್ಳುತ್ತಾ ಬಂದಿವೆ. ಬೇರೆ ಬೇರೆ ದೇಶಗಳಲ್ಲಿ ಭಿನ್ನ

ಬಗೆಯ ಯಶಸ್ಸನ್ನು ಪಡೆದುಕೊಂಡಿವೆ. ಮತದಾನದ ಹಕ್ಕಿಗಾಗಿನ ಹೋರಾಟದ ಕಾಲದಿಂದಲೂ ಹಿಡಿದು, ಹೆಂಗಸಿನ ಪ್ರತಿಯೊಂದು ಸಂಗತಿಗಾಗಿಯೂ ವಿಶೇಷವಾದ ಹೋರಾಟವನ್ನು ಮಾಡಿಯೇ ಹಕ್ಕನ್ನು ಪಡೆಯಬೇಕಾಗಿರುವುದು ಅನಿವಾರ್ಯವಾಗಿದೆ. ಇಂಥ ಕಾನೂನುಗಳಲ್ಲಿ ಸುದೀರ್ಘವಾಗಿ ಚರ್ಚೆಯಾದ ಕೌಟುಂಬಿಕ ಹಿಂಸೆ ತಡೆ ಕಾಯ್ದೆ ೨೦೦೬, ಕೌಟುಂಬಿಕ ವಲಯದ್ದಾದರೆ, ಸಾರ್ವಜನಿಕ ವಲಯಕ್ಕಾಗಿ ಜಾರಿಗೊಳಿಸಲಾಗುತ್ತಿರುವ ಕೆಲಸದ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆಯನ್ನು ೨೦೧೦ ರಲ್ಲಿ ಜಾರಿಗೆ ತಂದರೂ ಸಹ ಸಾರ್ವಜನಿಕ ವಲಯದಲ್ಲಿ ಮಹಿಳಾ ದೌರ್ಜನ್ಯಗಳು ನಡೆಯುತ್ತಿರುವುದು ಗಮನಿಸಬಹುದಾಗಿದೆ.

ಸಾರ್ವಜನಿಕ ವಲಯದಲ್ಲಿನ ಹಿಂಸೆಯ ಸ್ವರೂಪಗಳು

ಅತ್ಯಾಚಾರ ವ್ಯಕ್ತಿಯೊಬ್ಬನು ಮಹಿಳೆಯ ಮೇಲೆ ನಡೆಸಬಹುದಾದ ಹೇಯ ಕೃತ್ಯಗಳಲ್ಲಿ ಕೊಲೆ, ಮಾನಭಂಗದ ನಂತರದ ಕೃತ್ಯವೆಂದರೆ "ಅತ್ಯಾಚಾರವೇ" ಆಗಿರುತ್ತದೆ ಎನ್ನಬಹುದು. ಇಂಗ್ಲೀಷಿನ (ರೇಪ್) ಎಂಬಪದಕ್ಕೆ ಸಂವಾದಿಯಾಗಿ ಹಠ ಸಂಭೋಗ ಅಥವಾ ಬಲಾತ್ಕಾರ ಸಂಭೋಗ ಎಂಬ ಪದಪ್ರಯೋಗವನ್ನು ಬಳಸಲಾಗುತ್ತದೆ. RAPE ಎಂಬ ಇಂಗ್ಲೀಷ್ ಪದಕ್ಕೆ ಕನ್ನಡದಲ್ಲಿ ಅತ್ಯಾಚಾರ, ಮಾನಭಂಗ, ಹಠ ಸಂಭೋಗ, ಬಲಾತ್ಕಾರ ಸಂಭೋಗ, ಎಂಬ ಪದಗಳು ಬಳಕೆಯಾಗುತ್ತಿದೆ,. ಆದರೆ ಇವುಗಳಲ್ಲಿ "ಅತ್ಯಾಚಾರ" ಎಂಬ ಪದ ಹೆಚ್ಚು ಬಳಕೆಯಲ್ಲಿದೆ"[೧೬]. ಈ ಪದವನ್ನೇ ದಿನಪತ್ರಿಕೆಗಳು ಹೆಚ್ಚಾಗಿ ಬಳಸುತ್ತಿರುವುದರಿಂದ ಈ ಪದವು ಹೆಚ್ಚು ಪ್ರಚಲಿತದಲ್ಲಿದೆ. ಮಹಿಳೆಯ ಮೇಲೆ ನಡೆಯಬಹುದಾದ ಅತ್ಯಂತ ಹೀನ ಕೃತ್ಯಗಳಲ್ಲಿ ಒಂದಾದ "ಅತ್ಯಾಚಾರ"ವನ್ನು ಭಾರತ ದಂಡ ಸಂಹಿತೆಯನ್ನು ೩೭೬ನೇ ಪ್ರಕರಣದಲ್ಲಿ ವಿವರಿಸುತ್ತದೆ.

ಭಾರತ ದಂಡ ಸಂಹಿತೆಯಲ್ಲಿ ಅತ್ಯಾಚಾರಕ್ಕೆ ಜೀವಾವಧಿ ಶಿಕ್ಷೆಯನ್ನು ನೀಡಲು ಅವಕಾಶವಿರುತ್ತದೆ. ಆದರೆ ಇಂತಹ ಹೀನ ಕೃತ್ಯವನ್ನು ಕತ್ತಲೆಕೋಣೆಗಳಲ್ಲಿ ಅಥವಾ ಯಾರೂ ಇಲ್ಲದಂತಹ ಸ್ಥಳಗಳಲ್ಲಿ ನಡೆಸುವುದರಿಂದ, ಆರೋಪಿಯನ್ನು ಪತ್ತೆ ಹಚ್ಚಿ ಅವನ ವಿರುದ್ದ ಸಾಕ್ಷ್ಯಾಧಾರಗಳನ್ನು ಒದಗಿಸಿ ನ್ಯಾಯಾಲಯದಿಂದ ಶಿಕ್ಷೆದೊರೆಯುವಂತೆ ನೊಡಿಕೊಳ್ಳುವುದು ಬಹಳ ಕಷ್ಟವೇ ಸರಿ. ಉದಾಹರಣೆಗೆ ದೆಹಲಿಯಲ್ಲಿ ೧೯೮೨ರಲ್ಲಿ ಅತ್ಯಾಚಾರದ ಆರೋಪಕ್ಕಾಗಿ ೨೦೨ ಪ್ರಕರಣಗಳನ್ನು ದಾಖಲಿಸಲಾಯಿತು. ಆದರೆ ಅವುಗಳ ಪೈಕಿ ೨೬ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆ ವಿಧಿಸಲು ಸಾಧ್ಯವಾಯಿತು. ಪಶ್ಚಿಮ ಬಂಗಾಳದಲ್ಲಿ ೧೫೧೫ ಮೊಕದ್ದಮೆಗಳ ಪೈಕಿ ೧೨೪ ಜನರಿಗೆ ಮಾತ್ರ ಶಿಕ್ಷೆ ವಿಧಿಸಲಾಯಿತು.

ಅತ್ಯಾಚಾರವನ್ನು ಕುರಿತು ವಿವರಿಸುವ ಭಾರತ ದಂಡ ಸಂಹಿತೆಯ ೩೭೫ನೇ ಪ್ರಕರಣ ಈ ರೀತಿ ಇದೆ

೩೭೫. ಬಲಾತ್ ಸಂಭೋಗ (RAPE) ಮುಂದೆ ಹೇಳಲಾಗುತ್ತಿರುವ ಸಂದರ್ಭಗಳನ್ನು ಹೊರತುಪಡಿಸಿ, ಯಾವನೇ ಪುರುಷನು ಕೆಳಗೆ ವರ್ಣಿಸಲಾಗಿರುವ ಆರು ಸಂದರ್ಭಗಳಲ್ಲಿ ಸ್ತ್ರೀಯ ಜೊತೆಗೆ ಲೈಂಗಿಕ ಸಂಭೋಗ ನಡೆಸಿದರೆ ಅವನು ಬಲಾತ್ ಸಂಭೋಗ ಮಾಡಿದ್ದಾನೆಂದು ಹೇಳಲಾಗುತ್ತದೆ.

೧. ಮೊದಲನೇಯದು ಅವಳಿಚ್ಚೆಯ(WILL) ವಿರುದ್ದವಾಗಿ

೨. ಎರಡನೇಯದು ಅವಳ ಸಮ್ಮತಿ(Consent) ಇಲ್ಲದೆಯೇ

೩. ಮೂರನೆಯದು ಆಕೆಗೆ ಅಥವಾ ಆಕೆಯಲ್ಲಿ ಹಿತಾಸಕ್ತಿಯಳ್ಳ ಯಾವನೇ ವ್ಯಕ್ತಿಗೆ ಮರಣದ ಅಥವಾ ಗಾಯದ ಭಯವನ್ನುಂಟುಮಾಡಿ ಸಮ್ಮತಿಯನ್ನು ಪಡೆದಿರುವಾಗ, ಆಕೆಯ ಸಮ್ಮತಿಯಿಂದ.

೪. ನಾಲ್ಕನೇಯದು ಪುರುಷನು ಆಕೆಯ ತನ್ನ ಪತ್ನಿ ಅಲ್ಲ ಎಂಬುದು ತಿಳಿದಿರುವಾಗ ಮತ್ತು ಆ ಸ್ತ್ರೀಯು ತಾನು ಆತನನ್ನು ಕಾನೂನು ಸಮ್ಮತವಾಗಿ ವಿವಾಹವಾಗಿರುವೆನೆಂದು ತಿಳಿದಿರುವಾಗ ಅಥವಾ ಹಾಗೆ ಆಕೆ ನಂಬಿರುವಾಗ, ಆಕೆಯ ಸಮ್ಮತಿಯಿಂದ

೫. ಐದನೇಯದು ಸ್ತ್ರೀಯು ತನ್ನ ಸಮ್ಮತಿಯನ್ನು ಕೊಡುವ ಸಮಯದಲ್ಲಿ ಆಕೆಯ ಮನೋವಿಕಲತೆಯ ಅಥವಾ ಅಮಲೇರಿದ ಅಥವಾ ಬೇರೆಯವರ ಮೂಲಕ ಹುಚ್ಚು ಹಿಡಿಸುವ ಅಥವಾ ಅನಾರೋಗ್ಯಕರ ವಸ್ತುವನ್ನು ಆಕೆಗೆ ಕೊಡುವುದರ ಕಾರಣದಿಂದಾಗಿ, ಆಕೆ ತಾನು ಕೊಡುತ್ತಿರುವ ಸಮ್ಮತಿಯ ಸ್ವರೂಪವನ್ನು ಮತ್ತು ಪರಿಣಾಮಗಳನ್ನು ತಿಳಿದಿಕೊಳ್ಳಲು ಅಸಮರ್ಥಳಿರುವಾಗ ಆಕೆಯ ಸಮ್ಮತಿಯಿಂದ

೬. ಆರನೇಯದು ಮಹಿಳೆಯು ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಿರುವಾಗ ಆಕೆಯ ಸಮ್ಮತಿ ಪಡೆದು ಅಥವಾ ಆಕೆಯ ಸ್ವಮ್ಮತಿ ಪಡೆಯದೆಯೇ

ಈ ಮೇಲ್ಕಂಡ ಪ್ರಕರಣದನ್ವಯ ಯಾವುದೇ ವ್ಯಕ್ತಿಯೊಬ್ಬನು ಕೆಳಗೆ ವಿವರಿಸಲಾದ ಆರು ಸಂದರ್ಭಗಳಲ್ಲಿ ಒಬ್ಬ ಮಹಿಳೆಯೊಂದಿಗೆ "ಲೈಂಗಿಕ ಸಂಭೋಗ ನಡೆಸಿದರೆ ಅಂದರೆ ಅವಳ ಇಚ್ಚೆಗೆ ವಿರುದ್ದವಾಗಿ ನಡೆಸಿದರೆ, ಅವಳ ಸಮ್ಮತಿ ಇಲ್ಲದೆ ನಡೆಸಿರೆ, ಅವಳಿಗೆ ಅಥವಾ ಆಕೆಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗೆ ಮರಣದ ಅಥವಾ ಗಾಯದ ಭಯವನ್ನು ಉಂಟು ಮಾಡಿ ಅವಳಿಂದ ಒಪ್ಪಿಗೆಯನ್ನು ಪಡೆದಿದ್ದಾರೆ. ಅವಳು ತನ್ನ ಪತ್ನಿ ಅಲ್ಲವೆಂದು ತಿಳಿದು, ತಾನು ಅವಳ ಗಂಡನೆಂದು ನಂಬಿಕೆ ಹುಟ್ಟಿಸಿದರೆ, ತನಗೆ ಒಪ್ಪಿಗೆಯನ್ನು ನೀಡುತ್ತಾಳೆಂದು ತಿಳಿದು, ಮೋಸದಿಂದ ನಂಬಿಸಿ ಒಪ್ಪಿಗೆಯನ್ನು ಪಡೆದು ಲೈಂಗಿಕ ಸಂಭೋಗ ಮಾಡಿದ್ದಾರೆ. ಮಹಿಳೆಯೊಬ್ಬಳು ತನ್ನ ಸಮ್ಮತಿಯನ್ನು ಕೊಡುವ ಸಮಯದಲ್ಲಿ ಮನೋವಿಕಲತೆಯಿಂದ ಅಥವಾ ಆಮಲಿನಲ್ಲಿರುವ ಕಾರಣದಿಂದ ಅಥವಾ ಬೇರೆಯವರ ಮೂಲಕ ಆಕೆಗೆ ಅನಾರೋಗ್ಯಕರ ವಸ್ತುವನ್ನು ಕೊಡುವುದರ ಕಾರಣದಿಂದಾಗಿ ತಾನು ನೀಡುತ್ತಿರುವ ಸಮ್ಮತಿಯ ಸ್ವರೂಪ ಪರಿಣಾಮ ತಿಳಿಯದಿರುವಾಗ ನೀಡಿದ ಸಮ್ಮತಿಯಿಂದ ಮಹಿಳೆಯು ೧೬ ವರ್ಷ ವಯಸ್ಸಿಗಿಂತ ಕಡಿಮೆ ಇರುವಾಗ ಅವಳ ಸಮ್ಮತಿ ಪಡೆದು ಅಥವಾ ಸಮ್ಮತಿ ಪಡೆಯದೆಯೇ

ಅವಳೊಂದಿಗೆ ಲೈಂಗಿಕ ಸಂಭೋಗ ನಡೆಸಿದರೆ ಆಗ ಅಂತಹ ಲೈಂಗಿಕ ಸಂಭೋಗವನ್ನು "ಬಲಾತ್ಕಾರ" ಸಂಭೋಗವೆಂದು ಅಥವಾ ಸಾಮಾನ್ಯವಾದ ಪ್ರಕರಣ ಭಾಷಣೆಯಲ್ಲಿ ಹೇಳುವುದಾದರೆ "ಅತ್ಯಾಚಾರ"ದ ಪ್ರಕರಣವೆಂದು ಕರೆಯಲಾಗುವುದು.

ರಾಜ್ಯದಲ್ಲಿ ಅತ್ಯಾಚಾರಿಗಳಿಗಿಲ್ಲ 'ಭಯ' ರಾಜ್ಯದಲ್ಲಿ ದಿನೇ ದಿನೇ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವುದು ಹಾಗೂ ಅತ್ಯಾಚಾರ ಆರೋಪಿಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ದೆಹಲಿಯ ಅತ್ಯಾಚಾರ ಪ್ರಕರಣ ಬಹಿರಂಗವಾಗಿ ದೇಶದಾದ್ಯಂತ ಸುದ್ದಿಯಾದ ನಂತರ ಪ್ರತಿ ದಿನ ಪತ್ರಿಕೆಗಳಲ್ಲಿ ಅತ್ಯಾಚಾರದ ವರದಿಗಳು ಬರುತ್ತಲೇ ಇವೆ. ದೇಶದ ಎಲ್ಲೆಡೆ ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಮಹಿಳಾ ದೌರ್ಜನ್ಯ ತಡೆ ಮಸೂದೆಯನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದೆ. ಈ ಮಸೂದೆಯು ಹಲವಾರು ಅಂಶಗಳ ಬಗ್ಗೆ ಇನ್ನೂ ಒಮ್ಮತಾಭಿಪ್ರಾಯ ಮೂಡಿಲ್ಲವಾದರೂ ಕೇಂದ್ರ ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿರುವುದು ಗೋಚರವಾಗಿರುತ್ತದೆ. ಅದೇ ರೀತಿ ಎಲ್ಲಾ ರಾಜ್ಯಗಳಲ್ಲಿಯೂ ಈ ಬಗ್ಗೆ ಒಂದಿಷ್ಟು ಅರಿವು ಮೂಡುತ್ತದೆ. ಆದರೂ ಅತ್ಯಚಾರ ಪ್ರಕರಣಗಳು ಮಾತ್ರ ನಿಲ್ಲುವ ಸೂಚನೆಗಳಿಲ್ಲ.

ಕರ್ನಾಟಕದಲ್ಲಿ ೨೦೦೮-೨೦೧೨ ರವರೆಗೆ ನಡೆದ ಅತ್ಯಾಚಾರ ಪ್ರಕರಣಗಳನ್ನು ಪರಿಶೀಲಿಸಿದರೆ ಇಲ್ಲಿ ಯಾವುದೇ ಕಡಿವಾಣ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ೨೭೯೮ ಅತ್ಯಾಚಾರ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಲ್ಲಿ ವರದಿಯಾಗಿದೆ. ಈ ಪ್ರಕರಣಗಳು ಪೋಲೀಸ್ ಠಾಣೆ ಮೆಟ್ಟಿಲನ್ನು ಏರಿ ಎಫ್.ಐ.ಆರ್ ಕೂಡ ದಾಖಲಾಗಿದೆ. ಆದರೆ ಅದರಲ್ಲಿ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಮಾತ್ರ ಕೇವಲ೦೨೩ ಅಂಧರೆ ೨೬೭೫ ಮಂದಿ ಆರೋಪಿಗಳು ಯಾವುದೇ ಶಿಕ್ಷೆ ಇಲ್ಲದೆ ಸಮಾಜದಲ್ಲಿ ಸುಖವಾಗಿದ್ದಾರೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಮಾತ್ರ ಜೀವಮಾನವಿಡೀ ಕೊರಗುವಂತಾಗಿದೆ.

ಈ ಎಲ್ಲಾ ಪ್ರಕರಣಗಳು ಪೋಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳು. ದಾಖಲಾಗದೇ ಇರುವ ಪ್ರಕರಣಗಳು ಇನ್ನೆಷ್ಟು ಇವೆಯೋ ಗೊತ್ತಿಲ್ಲ. ಇನ್ನೂ ಮುಖ್ಯವಾದ ವಿಚಾರವೇನಂದರೆ ರಾಜ್ಯದಲ್ಲಿ ಈವರೆಗೆ ಅತ್ಯಾಚಾರ ಪ್ರಕರಣಗಳು ನಡೆದಿವೆ. ಅವುಗಳ ವಿಚಾರಣೆಯಾವ ಹಂತದಲ್ಲಿವೆ ಮತ್ತು ಎಷ್ಟು ಮಂದಿಗೆ ಶಿಕ್ಷೆಯಾಗಿದೆ ಎನ್ನುವ ನಿಖರ ಮಾಹಿತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಅಥವಾ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯಲ್ಲಿ ಲಭ್ಯವಿಲ್ಲ. ಪೋಲೀಸ್ ಇಲಾಖೆಯಲ್ಲಿಯೂ ಸೂಕ್ತ ಮಾಹಿತಿ ಲಭ್ಯವಾಗುತ್ತಿಲ್ಲ. ಅಪ್ರಾಪ್ತ ಬಾಲಕೀಯರ ಮೇಲೆ ನಡೆದ ಅತ್ಯಾಚಾರ ಪ್ರಕರಣಗಳು ಎಷ್ಟು ಎನ್ನುವ ಬಗ್ಗೆ ಕೂಡ ನಿಖರವಾದ ಮಾಹಿತಿ ಲಭ್ಯವಿಲ್ಲ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮತ್ತು ಮಕ್ಕಳ ಪರವಾಗಿ ಕಳೆದ ೨೫ ವರ್ಷಗಳಿಂದ ಕೆಲಸ ಮಾಡಿತ್ತಿರುವ ಮೈಸೂರಿನ ಒಡನಾಡಿ ಸಂಸ್ಥೆ ರಾಜ್ಯದಲ್ಲಿ ನಡೆದ ಅತ್ಯಾಚಾರ ಪ್ರಕರಣಗಳ ಮಾಹಿತಿ ಕಲೆ ಹಾಕಲು ಯತ್ನಿಸಿ ಆಗ ಸೂಕ್ತ ಮಾಹಿತಿಯೇ ಇಲ್ಲದಿರುವುದು ವ್ಯಕ್ತವಾಗಿದೆ.

ಅಸಹಾಯಕಗೊಂಡಿರುವ ಮನಸ್ಸು ಹೃದಯಗಳಿಗೆ ಸಾಂತ್ವಾನ ಹೇಳಿ, ಆರ್ಥಿಕ ಸ್ವಾವಲಂಬನೆ, ಕಾನೂನಿನ ನೆರವು ನೀಡಬೇಕಾದ ಸರ್ಕಾರ ದುರ್ಬಲ ರಕ್ಷಣೆ ವಿಷಯದಲ್ಲಿ ಅಸಹಾಯಕವಾಗಿ ನಿಂತಿರುವುದು ಶೋಷನೀಯ ಎಂದು ಒಡನಾಡಿಯ **ಸ್ಟ್ಯಾನ್ಲಿ–ಪರಶು** ಹೇಳುತ್ತಾರೆ."[೧೫]

ಒಂದೆಡೆ ಅತ್ಯಾಚಾರ ಮಾಡಿದ ಆರೋಪಿಗಳು ಯಾವುದೇ ಶಿಕ್ಷೆ ಇಲ್ಲದೆ ರಾಜಾರೋಷವಾಗಿ ಇದ್ದರೆ, ಇನ್ನೊಂದೆಡೆ ತಮ್ಮದಲ್ಲದ ತಪ್ಪಿಗೆ ಅತ್ಯಾಚಾರದಂತಹ ಘೋರ ಅನ್ಯಾಯಕ್ಕೆ ಒಳಗಾಗಿರುವ ಅಪ್ರಾಪ್ತ ಬಾಲಕಿಯರು ಮತ್ತು ಮಹಿಳೆಯರು ಚಿತ್ರ ಹಿಂಸೆ ಅನುಭವಿಸುತ್ತಿದ್ದಾರೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯರಿಗೆ ಪರಿಹಾರವನ್ನು ನೀಡುವ ಅಥವಾ ಸಾಮಾಜಿಕ ಭದ್ರತೆ ನೀಡುವ ಯಾವುದೇ ವ್ಯವಸ್ಥೆ ಇನ್ನೂ ಕರ್ನಾಟಕದಲ್ಲಿ ಇಲ್ಲ. ದೆಹಲಿಯಲ್ಲಿ ನಡೆದ ಒಂದು ಅತ್ಯಾಚಾರ ಪ್ರಕರಣ ಮಾಧ್ಯಮಗಳಲ್ಲಿ ಬಹಿರಂಗವಾಗಿ ಇಡೀ ದೇಶದ ಕಣ್ಣನ್ನು ತೆರೆಸಿದೆ ನಿಜ, ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ೨೬೯೮ ಅತ್ಯಾಚಾರ ಪ್ರಕರಣಗಳು ಮಾತ್ರ ಯಾರ ಕಣ್ಣನ್ನೂ ತೆರೆಸಿಲ್ಲ.

ರಾಜ್ಯದಲ್ಲಿ ದಿನೇ ದಿನೇ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವುದು ಹಾಗೂ ಅತ್ಯಾಚಾರ ಆರೋಪಿಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಶಾಸನಬದ್ದನ್ಯಾಯ ವಿತರಣೆ ಒಟ್ಟಾಗಿ ಸಾಗದಿರುವುದಕ್ಕೂ ಇದೇ ಕಾರಣ. ಅಭಿವೃದ್ದಿ ಹೊಂದಿದ ದೇಶಗಳಲ್ಲಿ ಅಪರಾಧಗಳಿಂದ ನೊಂದವರ ಮತ್ತು ಆರ್ಥಿಕ ಭದ್ರತೆ ಸರ್ಕಾರಗಳೇ ವ್ಯವಸ್ಥೆ ಮಾಡುತ್ತವೆ. ಅಲ್ಲದೇ ಸಾಕ್ಷ್ಯ ನುಡಿಯುವವರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಇಂತಹ ವ್ಯವಸ್ಥೆ ಇಲ್ಲದಿರುವುದು ಅತ್ಯಾಚಾರಿಗಳಿಗೆ ಇನ್ನಷ್ಟು ಅನುಕೂಲ ಮಾಡಿಕೊಟ್ಟಂತೆ ಆಗಿದೆ. ನಮ್ಮ ದೇಶದ ಶ್ರೇಣಿಕೃತ ವ್ಯವಸ್ಥೆಕೂಡ ಇದಕ್ಕೆ ಇಂಬು ನೀಡುತ್ತದೆ. ರಾಜ್ಯದಲ್ಲಿ ನಡೆದ ಬಹುತೇಕ ಅತ್ಯಾಚಾರ ಪ್ರಕರಣಗಳಲ್ಲಿ ನೊಂದವರು ಅತ್ಯಂತ ಕೆಳವರ್ಗದವರು ಮತ್ತು ಬಡವರೇ ಆಗಿದ್ದಾರೆ. ಅತ್ಯಾಚಾರಕ್ಕೆ ಒಳಗಾಗಿರುವುದೇ ಅಲ್ಲದೇ ತಮ್ಮ ತುತ್ತಿನ ಚೀಲವನ್ನು ತುಂಬಿಕೊಳ್ಳಲು ಹೋರಾಟ ನಡೆಸುವ ಜೊತೆಗೆ ಅತ್ಯಾಚಾರ ಪ್ರಕರಣದ ವಿಚಾರಣೆಗಾಗಿ ಪೋಲೀಸ್ ಠಾಣೆ ಮುಂದೆ ಅಥವಾ ನ್ಯಾಯಾಲಯದ ಮುಂದೆ ಕಾಯುವ ಪರಿಸ್ಥಿತಿ ಕೂಡ ಅವರನ್ನು ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಹಣ, ಜಾತಿ, ಧರ್ಮಗಳೂ ಕೂಡ ಹಲವಾರು ಅತ್ಯಾಚಾರ ಪ್ರಕರಣಗಳನ್ನು ಮುಚ್ಚಿ ಹಾಕಿ ಬಿಡುತ್ತದೆ. ಅಪರಾಧಿಗಳು ಸಂತ್ರಸ್ಥರನ್ನು ಕೊಳ್ಳುವ ವ್ಯವಸ್ಥೆ ಕೂಡ ನಮ್ಮಲ್ಲಿ ಇದೆ. ದಯೆಯ ಹೆಸರಿನಲ್ಲಿ, ಹೋಗಲಿ ಬಿಡು, ಏನೋ ಆಗಿದ್ದು ಹಾಗಿಹೋಯಿತು ಎನ್ನುವ ಮಾತಿನಲ್ಲಿ ಪ್ರಕರಣಗಳು ಮುಚ್ಚಿ ಹೋಗುತ್ತದೆ. ಬಹಳಷ್ಟು ಬಾರಿ ಸಮಾಜ ಸಂತ್ರಸ್ಥ ಮಹಿಳೆಯರ ಪರ ನಿಲ್ಲುವುದಕ್ಕೆ ಬದಲಾಗಿ ಆರೋಪಿಯ ಪರವಾಗಿಯೇ ನಿಂತು ಬಿಡುತ್ತದೆ. ಇದನ್ನು ತಪ್ಪಿಸಲು, ಅತ್ಯಾಚಾರ ಪ್ರಕರಣಗಳು ಕಾನೂನು ಸ್ಪರ್ಧೆಗೆ ಬರುವಂತಾಗಲು ಕಾನೂನಿನ ಎಲ್ಲಾ ಅಂಗ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕು. ಜೊತೆಗೆ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರನ್ನು ಮತ್ತು ಮಕ್ಕಳನ್ನು ಸರ್ಕಾರ ತನ್ನ ರಕ್ಷಣಾ ವ್ಯವಸ್ಥೆಗೆ

ತೆಗೆದುಕೊಂಡು ಅವರ ಕುಟುಂಬದವರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ನೀಡಬೇಕು. ನ್ಯಾಯಾಲಯದಲ್ಲಿ ಹೋರಾಟ ನಡೆಯುವವರೆಗೆ ಅರ್ಜಿದಾರರ, ಸಾಕ್ಷಿಗಳ ಸಂಪೂರ್ಣ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಆದರೆ ನಮ್ಮಲ್ಲಿ ನೊಂದವರಿಗೆ ಪರಿಹಾರ ನಿಡುವ ವ್ಯವಸ್ಥೆಯೇ ಇಲ್ಲ. ಅತ್ಯಾಚಾರಕ್ಕೆ ಒಳಗಾದ ಮಕ್ಕಳನ್ನು ಸರ್ಕಾರಿ ಸಂಸ್ಥೆಗಳಲ್ಲಿ ಇಟ್ಟುಕೊಂಡರೆ ಇತರೆ ಮಕ್ಕಳಿಗೆ ಸಿಗುವ ಎಲ್ಲಾ ಸೌಲಭ್ಯಗಳೂ ಅವರಿಗೂ ಸಿಗುತ್ತದೆ ಎಂದು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಹೇಳುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ಇಷ್ಟೊಂದು ಸಂಖ್ಯೆಯ ಅತ್ಯಾಚಾರ ಪ್ರಕರಣಗಳು ನಡೆದಿದ್ದರೂ ಇತ್ತೀಚೆಗೆ ಬೀದರ್ ಜಿಲ್ಲೆಯಲ್ಲಿ ಐದು ವರ್ಷದ ಬಾಲಕೀಯ ಮೇಲೆ ಅತ್ಯಚಾರ ನಡೆದಾಗ ಆ ಬಾಲಕೀಯ ವೈದ್ಯಕೀಯ ವೆಚ್ಚಕ್ಕೆ ೨೫ ಸಾವಿರ ರೂಪಾಯಿ ಬಿಡುಗಡೆ ಮಾಡಿದ್ದನ್ನು ಬಿಟ್ಟರೆ ಇತರೇ ಯಾವುದೇ ಪ್ರಕರಣಗಳಲ್ಲಿ ಸರ್ಕಾರ ಅತ್ಯಾಚಾರ ಸಂತ್ರಸ್ತರಿಗೆ ಪರಿಹಾರ ನೀಡಿಲ್ಲ. ನಿಜ. ಎಲ್ಲವನ್ನೂ ಕಾನೂನಿಂದಲೇ ಮಾಡಲು ಸಾಧ್ಯವಿಲ್ಲ. ಸಾಮಾಜಿಕವಾದ ಪರಿವರ್ತನೆ ಆಗಿದ್ದರೆ ಪುರುಷ ಸಮಾಜದಲ್ಲಿ ಬದಲಾವಣೆ ಬಾರದಿದ್ದರೆ ಇಂತಹ ಅತ್ಯಾಚಾರ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಸಾರ್ವಜನಿಕ ಪ್ರದೇಶಗಳಲ್ಲಿ ನಡೆಯುವ ಅತ್ಯಾಚಾರ ಪ್ರಕರಣಗಳಿಗೆ ಕಾನೂನಿಂದ ಕೊಂಚವಾದರೂ ಕಡಿವಾಣ ಹಾಕಬಹದು. ಮನೆಯಲ್ಲಿಯೇ ನಡೆಯುವ ಅತ್ಯಾಚಾರ ಪ್ರಕರಣಗಳು ಮಾತ್ರ ನಡೆಯುತ್ತಲೇ ಇರುತ್ತವೆ. ಬಹಳಷ್ಟು ಬಾರಿ ಅವು ಹೊರಕ್ಕೆ ಬರುವುದೇ ಇಲ್ಲ. ಹೆಣ್ಣನ್ನು ದೇವತೆ ಎಂದು ಪೂಜಿಸಿ ಮರೆತುಬಿಡುವ ನಮ್ಮ ನಡವಳಿಕೆಯಲ್ಲಿ ಬದಲಾವಣೆ ಆಗದ ಹೊರತು, ಹೆಣ್ಣನ್ನು ಭೋಗದ ವಸ್ತು ಎಂದು ನೋಡುವುದನ್ನು ಬಿಡದ ಹೊರತು ಇದರ ಅಂತ್ಯ ಅಸಾಧ್ಯವಾಗುತ್ತದೆ.

ಅತ್ಯಾಚಾರ ಪ್ರಕರಣಗಳು ೨೦೦೮ ರಿಂದ ೨೦೧೨ ರವರೆಗೆ		
ಜಿಲ್ಲೆ	ದಾಖಲಾದ ಪ್ರಕರಣಗಳ ಸಂಖ್ಯೆ	ಶಿಕ್ಷೆಗೆ ಒಳಗಾದವರ ಸಂಖ್ಯೆ
ಬೆಂಗಳೂರು	೩೭೧	೧೪
ಬೆಳಗಾವಿ	೧೯೩	೧೨
ಗುಲ್ಬರ್ಗ	೧೩೯	೭
ಮಂಡ್ಯ	೧೩೦	೧
ಮೈಸೂರು	೧೨೪	೯
ಚಿತ್ರದುರ್ಗ	೧೨೩	೦
ತುಮಕೂರು	೧೨೦	೩
ರಾಯಚೂರು	೧೧೯	೪
ಹಾಸನ	೧೧೦	೬
ಬೆಂಗಳೂರು, ಗ್ರಾ	೧೦೪	೪
ಶಿವಮೊಗ್ಗ	೮೩	೧೨
ಕೊಡಗು	೮೨	೬
ರಾಮನಗರ	೭೮	೨
ಬಿಜಾಪುರ	೭೬	೦
ಕೋಲಾರ	೭೧	೩
ದಾವಣಗೆರೆ	೭೦	೬
ಚಿಕ್ಕಮಗಳೂರು	೭೦	೫
ಮೈಸೂರು ನಗರ	೬೭	೦
ಬಳ್ಳಾರಿ	೫೮	೨
ಚಿಕ್ಕಬಳ್ಳಾಪುರ	೫೫	೦
ಮಂಗಳೂರು ನಗರ	೫೪	೬
ಬೀದರ್	೫೨	೨
ಕೊಪ್ಪಳ	೫೦	೦
ಉತ್ತರ ಕನ್ನಡ	೪೮	೫
ಬಾಗಲಕೋಟೆ	೪೫	೧
ಚಾಮರಾಜನಗರ	೪೪	೧

ಹಾವೇರಿ	೪೧	೦
ಯದಗಿರಿ	೩೮	೧
ಉಡುಪಿ	೩೫	೦
ಕೆ.ಜಿ.ಎಫ್	೩೨	೬
ದಕ್ಷಿಣಕನ್ನಡ	೩೧	೧
ಗದಗ	೨೩	೩
ಹುಬ್ಬಳ್ಳಿ–ಧಾರವಾಡ	೧೮	೦
ರೈಲ್ವೆ	೪	೦
ಒಟ್ಟು	೨೭೯೮	೧೨೩

ಆಧಾರ: ಪ್ರಜಾವಾಣಿ ಬೆಂಗಳೂರು ೧೭/೦೩/೨೦

ಕರ್ನಾಟಕದಲ್ಲಿ ಅತ್ಯಾಚಾರ ಪ್ರಕರಣಗಳ ಒಂದು ಪಕ್ಷಿ ನೋಟ

ಪ್ರದೇಶಗಳು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	ಒಟ್ಟು
ಬೆಂಗಳೂರು ನಗರ	೩೮	೩೩	೬೨	೫೪	೬೫	೪೬	೨೯೮
ಮೈಸೂರು ನಗರ	೮	೧೫	೧೩	೨೩	೧೪	೬	೭೯
ಹುಬ್ಬಳ್ಳಿ–ಧಾರವಾಡ	೦	೩	೦	೩	೦	೧	೧೮
ಬೆಂಗಳೂರು ಗ್ರಾಮಾಂತರ	೧೬	೨೬	೨೯	೧೪	೧೪	೦	೧೦೭
ಕೋಲಾರ	೨೦	೧೩	೧೯	೧೪	೧೦	೭	೮೩
ಕೆ.ಜಿ.ಎಫ್	೫	೦	೭	೫	೯	೫	೩೪
ತುಮಕೂರು	೧೪	೧೩	೧೭	೧೨	೧೯	೧೪	೮೯
ಮೈಸೂರು	೧೪	೧೦	೨೦	೧೩	೨೧	೨೪	೧೧೨
ಮಂಡ್ಯ	೧೭	೧೯	೧೭	೧೮	೧೬	೨೫	೧೨೮
ಹಾಸನ	೧೦	೧೩	೧೩	೧೭	೨೨	೧೫	೯೦
ಕೊಡಗು	೧೦	೬	೪	೨೦	೧೪	೧೫	೬೯
ದಕ್ಷಿಣ ಕನ್ನಡ	೧೪	೧೭	೧೧	೧೦	೧೪	೧೦	೮೦
ಉತ್ತರ ಕನ್ನಡ	೩	೭	೪	೧೦	೯	೭	೪೦
ಚಿಕ್ಕಮಗಳೂರು	೧೬	೧೭	೧೧	೧೭	೧೩	೧೪	೮೮
ಬೆಳಗಾವಿ	೧೩	೨೨	೨೨	೩೦	೩೯	೩೪	೧೬೦
ಧಾರವಾಡ	೪	೪	೭	೧	೪	೬	೨೬

ಬಿಜಾಪುರ	೧೮	೧೮	೧೭	೧೯	೧೯	೭	೯೮
ಗುಲ್ಬರ್ಗ	೧೬	೧೮	೩೫	೨೫	೩೨	೨೧	೧೨೪
ಊಾಯಚೂರು	೮	೧೩	೧೯	೧೯	೨೧	೨೦	೧೦೦
ಬೀದರ್	೫	೮	೧೧	೭	೧೨	೩	೪೬
ಂತ್ರದುರ್ಗ	೧೫	೧೬	೧೦	೧೮	೨೬	೨೨	೧೩೩
ಶಿವಮೊಗ್ಗ	೧೭	೨೩	೨೩	೧೪	೧೫	೧೨	೧೦೪
ಬಳ್ಳಾರಿ	೧೭	೧೫	೧೪	೧೧	೧೧	೭	೭೫
ರೈಲ್ವೆ ಪೋಲೀಸ್ ವ್ಯಾಪ್ತಿ	೦	೦	೦	೦	೧	೧	೨
ಬಾಗಲಕೋಟೆ	೪	೧೨	೪	೨	೮	೬	೩೬
ಚಾಮರಾಜನಗರ	೭	೧೬	೩	೪	೮	೬	೪೪
ಉಡುಪಿ	೭	೧೧	೧೧	೧೧	೫	೧೦	೫೫
ಕೊಪ್ಪಳ	೮	೬	೬	೬	೧೪	೯	೪೯
ಗದಗ	೧	೧	೪	೧೦	೪	೪	೨೪
ಹಾವೇರಿ	೪	೫	೮	೫	೫	೬	೩೮
ದಾವಣಗೆರೆ	೧೪	೧೭	೧೦	೧೦	೧೬	೧೩	೮೦
ಚಿಕ್ಕಬಳ್ಳಾಪುರ	೦	೦	೦	೭	೧೧	೮	೨೬
ರಾಮನಗರ	೦	೦	೦	೧೭	೧೨	೧೦	೩೯
ಯಾದಗಿರಿ	೦	೦	೦	೦	೦	೪	೪

ಆಧಾರ: ಕನ್ನಡ ಪ್ರಭ, ಬೆಂಗಳೂರು, ೨೨ ನವೆಂಬರ್ ೨೦೧೦ರ ಸಂಚಿಕೆ

ಈ ಮೇಲ್ಕಂಡಂತೆ ಕೋಷ್ಟಕದಲ್ಲಿರುವಂತೆ ರಾಜ್ಯಾದ್ಯಂತ ಅತ್ಯಾಚಾರದ ಪ್ರಕರಣಗಳು ದಾಖಲಾಗಿರುತ್ತವೆ. ಈ ಎಲ್ಲಾ ಜಿಲ್ಲೆಗಳಿಗೂ ಹೋಲಿಸಿದಲ್ಲಿ ಬೆಂಗಳೂರಿನಲ್ಲಿ

೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	ಒಟ್ಟು
೩೮	೩೩	೬೨	೫೪	೬೫	೪೬	೨೯೮

ಈ ಪ್ರಕರಣಗಳ ಸಂಖ್ಯೆ ಅತಿ ಹೆಚ್ಚಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಂಕೀಅಂಶಗಳನ್ನು ಮೇಲಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ರಾಷ್ಟ್ರೀಯ ಅಪರಾಧ ದಾಖಲೆ ಕೇಂದ್ರದಿಂದ ಆತಂಕಕಾರಿ ಮಾಹಿತಿ ೨೦೦೯-೨೦೧೧ರ ಅವಧಿಯಲ್ಲಿನ ಅಂಕಿ-ಅಂಶ ೬೮ ಸಾವಿರ ರೇಪ್, ಶಿಕ್ಷೆ ಬರೀ ೧೬ ಸಾವಿರ ಮಂದಿಗೆ

ಕಠಿಣ ಕಾನೂನಿದ್ದರೂ, ದೇಶದಲ್ಲಿ ಅತ್ಯಾಚಾರ ಪ್ರಮಾಣ ಕಡಿಮೆಯಾಗುತ್ತಿಲ್ಲವೇಕೆ ಎಂಬ ಪ್ರಶ್ನೆಗೆ ಉತ್ತರ ನೀಡುವಂತಹ ವರದಿಯೊಂದು ಹೊರಬಿದ್ದಿದೆ. ೨೦೦೯-೧೧ ರ ಅವಧಿಯಲ್ಲಿ ದೇಶದಲ್ಲಿ ೬೮೦೦೦ ಅತ್ಯಾಚಾರ ಆರೋಪದ ಪ್ರಕರಣಗಳು ದಾಖಲಾಗಿದ್ದರೆ, ಈ ಪೈಕಿ ೧೬,೦೦೦ ಜನರಿಗೆ ಮಾತ್ರ ಶಿಕ್ಷೆಯಾಗಿದೆ! ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ಬಿಡುಗಡೆ ಮಾಡಿರುವ ವರದಿ ಈ ಆತಂಕದ ವಿಷಯವನ್ನು ಬಹಿರಂಗಪಡಿಸಿದೆ.

೨೦೦೯ರಲ್ಲಿ ೨೧೩೯೭ ಅತ್ಯಾಚಾರಪ್ರಕರಣ ದಾಖಲಾಗಿದ್ದರೆ, ೫೩೧೬ ಜನರಿಗೆ ಶಿಕ್ಷೆಯಾಗಿದೆ, ೨೦೧೦ ರಲ್ಲಿ ೨೨೧೭೨ ಪ್ರಕರಣ ದಾಖಲಾಗಿದ್ದು ೫೬೩೨ ಜನರಿಗೆ ಶಿಕ್ಷೆಯಾಗಿದೆ. ೨೦೧೧ರಲ್ಲಿ ೨೪೨೦೬ ಪ್ರಕರಣ ದಾಖಲಾಗಿದ್ದು ೫೭೨೪ ಜನರಿಗೆ ಶಿಕ್ಷೆಯಾಗಿದೆ. ಎಂಬ ಮಾಹಿತಿ ವರದಿಯಲ್ಲಿದೆ. ಈ ಪೈಕಿ ಅತಿ ಹೆಚ್ಚು ಪ್ರಕರಣ ದಾಖಲಾಗಿರುವುದು ಮಧ್ಯಪ್ರದೇಶದಲ್ಲಿ ಇಲ್ಲಿ ೩ ವರ್ಷಗಳಲ್ಲಿ ೯೫೩೯ ಪ್ರಕರಣ ದಾಖಲಾಗಿದ್ದು,೨೯೮೬ ಜನರಿಗೆ ಮಾತ್ರ ಶಿಕ್ಷೆಯಾಗಿದೆ. ಪಶ್ಚಿಮಬಂಗಾಳದಲ್ಲಿ ದಾಖಲಾದ ೭೦೧೦ ಪ್ರಕರಣಗಳಲ್ಲಿ ೩೮೧ ಜನರಿಗೆ ಮಾತ್ರ ಶಿಕ್ಷೆಯಾಗಿದೆ. ಉತ್ತರ ಪ್ರದೇಶದಲ್ಲಿ ೫೩೬೪ ಪ್ರಕರಣಗಳ ಪೈಕಿ ೩೮೧೬ ಜನರಿಗೆ ಶಿಕ್ಷೆಯಾಗಿದೆ. ಆರೋಪಿಗಳ ವಿರುದ್ದ ಸೂಕ್ತ ಸಾಕ್ಷ್ಯಗಳ ಸಂಗ್ರಹದಲ್ಲಿ ವೈಫಲ್ಯವಾಗುತ್ತಿರುವುದೇ ಶಿಕ್ಷೆ ಪ್ರಮಾಣ ಕಡಿಮೆಯಾಗಲು ಕಾರಣ ಎಂದು ವರದಿಯಲ್ಲಿ ಹೇಳಲಾಗಿದೆ.

ಇದೇ ವೇಳೆ ೨೦೦೯-೧೧ ರ ಅವಧಿಯಲ್ಲಿ ೧೨೨,೯೨ ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗಿದ್ದರೆ, ಈ ಪೈಕಿ ೨೭,೪೦೮ ಜನರಿಗೆ ಮಾತ್ರ ಶಿಕ್ಷೆಯಾಗಿದೆ. ಇಂತಹ ಪ್ರಕರಣಗಳು ದಾಖಲಾಗಿರುವ ರಾಜ್ಯಗಳಪೈಕಿ ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿದೆ.

೨೦೦೯ ರಲ್ಲಿ ೨೧ ಸಾವಿರ ರೇಪ್, ೫೩೦೦ ದುಷ್ಟರಿಗೆ ಶಿಕ್ಷೆ

೨೦೧೦ ರಲ್ಲಿ ೨೨ ಸಾವಿರ ರೇಪ್, ೫೬೦೦ ದುಷ್ಟರಿಗೆ ಶಿಕ್ಷೆ

೨೦೧೧ ರಲ್ಲಿ ೨೪ ಸಾವಿರ ರೇಪ್, ೫೭೦೦ ದುಷ್ಟರಿಗೆ ಶಿಕ್ಷೆ

ವರ್ಷದಿಂದ ವರ್ಷಕ್ಕೆ ಅತ್ಯಾಚಾರ ಪ್ರಕರಣ ಹೆಚ್ಚಳವಾಗುತ್ತಿವೆ."[೧೬]

ಅತ್ಯಾಚಾರ ೪೪೭೯, ಶಿಕ್ಷೆ ೩೧೫

ಒಂದು ದಶಕದ ಅವಧಿಯಲ್ಲಿ ರಾಜ್ಯದಲ್ಲಿ ಅತ್ಯಾಚಾರಕ್ಕೆ ಒಳಗಾದ ೪,೪೭೯ ಮಹಿಳೆಯರು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರೂ, ಶೇಕಡ ರಷ್ಟು ಪ್ರಕರಣಗಳಲ್ಲಿ ಮಾತ್ರ ಅತ್ಯಾಚಾರಿಗಳಿಗೆ ಶಿಕ್ಷೆಯಾಗಿದೆ. ರಾಜ್ಯ ಅಪರಾಧ ದಾಖಲೆಗಳ ವಿಭಾಗದಲ್ಲಿ (ಎಸ್,ಸಿ,ಆರ್,ಬಿ) ಲಭ್ಯವಿರುವ ಅಂಕಿ-ಸಂಖ್ಯೆ ಪ್ರಕಾರ, ರಾಜ್ಯದಲ್ಲಿ ೨೦೦೩ ರಿಂದ ೨೦೧೨ರ (ಅಕ್ಟೋಬರ್) ಅವಧಿಯಲ್ಲಿ ೪.೪೭೯ ಅತ್ಯಾಚಾರ ಪ್ರಕರಣಗಳು

ದಾಖಲಾಗಿವೆ. ಈ ಪೈಕಿ ಕೇವಲ ೩೧೫ ಅಪರಾಧಿಗಳು ಮಾತ್ರ ಶಿಕ್ಷೆಗೆ ಒಳಗಾಗಿದ್ದಾರೆ.೧.೨೪೪ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ. ೩೯ ಆರೋಪಿಗಳು ತಲೆ ಮರೆಸಿಕೊಂಡಿದ್ದರೆ, ಆರು ಆರೋಪಿಗಳು ಪ್ರಕರಣದ ವಿಚಾರಣೆ ಅಂತ್ಯಗೊಳ್ಳುವ ಮುನ್ನವೇ ಮರಣ ಹೊಂದಿದ್ದಾರೆ. ಸುಮಾರು ೩೪೪ ರಷ್ಟು ಪ್ರಕರಣಗಳು ಇನ್ನೂ ತನಿಖೆಯ ಹಂತದಲ್ಲಿಯೇ ಇವೆ. ಅವುಗಳಲ್ಲಿ ಕೆಲವು ಪ್ರಕರಣಗಳು ೨೦೦೩ ರಷ್ಟು ಹಳೆಯವು. ಇತ್ತೀಚೆಗೆ ದೆಹಲಿಯಲ್ಲಿ ಯುವತಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ಹಾಗೂ ಅದರ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳು ರಾಜ್ಯದಲ್ಲಿನ ಪ್ರಕರಣಗಳ ಬಗ್ಗೆಯೂ ಎಲ್ಲರ ಗಮನ ಸೆಳೆಯುವಂತೆ ಮಾಡಿವೆ. ,

ಎಲ್ಲ ಪ್ರಕರಣಗಳನ್ನೂ ತಡೆಯಲಾಗದು ಆರೋಪಿಗಳಿಗೆ ಶಿಕ್ಷೆಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಕಡಿಮೆ ಇರುವುದಕ್ಕೆ ಸಂಪೂರ್ಣವಾಗಿ ಪೋಲೀಸ್ ಇಲಾಖೆಯನ್ನೇ ಹೊಣೆಮಾಡಲಾಗದು. ವ್ಯವಸ್ಥೆಯಲ್ಲಿರುವ ಹಲವು ಲೋಪಗಳನ್ನು ಸರಿಪಡಿಸಿದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ದೊರೆಯಲು ಸಾದ್ಯ. ಮಹಿಳೆಯರು ಅಥವಾ ಮಕ್ಕಳ ಮೇಲಿನ ಅತ್ಯಾಚಾರದ ವಿಷಯ ಒಂದು ಸಾಮಾಜಿಕ ಪಿಡುಗು. ಅದನ್ನು ತಡೆಯುವ ಹೊಣೆಗಾರಿಕೆ ಸಮಾಜದ ಎಲ್ಲರ ಮೇಲೂ ಇದೆ, ಹೆಣ್ಣು–ಗಂಡೆಂಬ ವ್ಯತ್ಯಾಸವಿಲ್ಲದೇ ಪ್ರತಿಯೊಬ್ಬ ನಾಗರೀಕನೂ ಇದರ ಜವಾಬ್ದಾರಿ ಹೊರಬೇಕಾಗುತ್ತದೆ ಎನ್ನುತ್ತಾರೆ ರಾಜ್ಯ ಪೋಲೀಸ್ ಮಹಾ ನಿರ್ದೇಶಕ ಲಾಲ್ ರೋಕುಮಾ ಪಚಾವ್ರೋ. ಎಲ್ಲಾ ಸಮಯದಲ್ಲಿ, ಎಲ್ಲಾ ಕಡೆಗಳಲ್ಲಿ ಉಪಸ್ಥಿತರಿರಲು ಸಾಧ್ಯವಿಲ್ಲ. ತಮ್ಮ ಮಗಳನ್ನು ಒಬ್ಬಂಟಿಯಾಗಿ ರಾತ್ರಿ ಹೊರಗಡೆ ಕಳುಹಿಸಲು ಎಲ್ಲಾ ಪೋಷಕರೂ ಸಿದ್ದರಿರುತ್ತಾರೆಯೇ ಇಲ್ಲ. ಕೆಲವು ನಿರ್ಜನ ಪ್ರದೇಶಗಳಲ್ಲಿ ಇಂತಹ ಘಟನೆಗಳು ನಡೆದುಹೋಗುತ್ತವೆ. ಅದಕ್ಕೆ ಪೋಲೀಸರನ್ನು ಮಾತ್ರ ದೂಷಿಸುವುದು ಸರಿಯೇ? ಎಲ್ಲಾ ಅತ್ಯಾಚಾರ ಪ್ರಕರಣಗಳನ್ನು ಪೋಲೀಸರು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಪೋಲೀಸ್ ಇಲಾಖೆಯ ಜವಾಬ್ದಾರಿ : ಏನೇ ಇದ್ದರೂ, ಅತ್ಯಾಚಾರ ಪ್ರಕರಣಗಳ ತನಿಖೆ ಮತ್ತು ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸುವುದರಲ್ಲಿ ಪೋಲೀಸ್ ಇಲಾಖೆಯ ಜವಾಬ್ದಾರಿ ಹೆಚ್ಚಿದೆ. ಎಂಬುದನ್ನು ಪಚಾವ್ರೋ ಒಪ್ಪಿಕೊಳ್ಳುತ್ತಾರೆ. 'ಇಂತಹ ಪ್ರಕರಣಗಳಲ್ಲಿ ಮಹತ್ವದ ಪಾತ್ರ ವಹಿಸುವ ವಿಧಿ ವಿಜ್ಞಾನ ಪ್ರಯೋಗಾಲಯಗಳ ವರದಿ ಹಾಗೂ ವೈದ್ಯಕೀಯ ವರದಿಗಳನ್ನು ನಾವು ಅವಲಂಬಿಸಬೇಕಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಸಾಕ್ಷಿಗಳು ಹಾಗೂ ಅತ್ಯಾಚಾರಕ್ಕೆ ಒಳಗಾದವರೇ ನ್ಯಾಯಾಲಯದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ' ಎಂದರು."[೧೬]

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ

ದುಡಿಯುತ್ತಿರುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯವೂ ಸಾಮಾನ್ಯವಾಗಿ ಅನು ಲೈಂಗಿಕ ಕಿರುಕುಳವಾಗಿರುತ್ತದೆ. ಇದು ಸಾರ್ವಜನಿಕ ವಲಯದ ಸಂಘಟಿತ ಮತ್ತು ಅಸಂಘಟಿತ ವಲಯವನ್ನು ಸಹ

ಬಿಟ್ಟಿಲ್ಲ. ವಿದ್ಯಾವಂತ ಮತ್ತು ಅವಿದ್ಯಾವಂತ ಎಲ್ಲಾ ಮಹಿಳೆಯರ ಮೇಲೂ ನಡೆಯುತ್ತಿರುವ ತೀವ್ರ ಸ್ವರೂಪದ ದೌರ್ಜನ್ಯವಾಗಿದೆ. ಸಾರ್ವಜನಿಕ ವಲಯದ ಪ್ರಮುಖ ಭಾಗವಾಗಿರುವ ಉದ್ಯೋಗವಲಯ ದಲ್ಲಿ ಮಹಿಳೆ ಪಾಲ್ಗೊಳ್ಳುತ್ತಿರುವುದೆಬುಂದು ತೀರಾ ಇತ್ತೀಚಿನ ಸಂಗತಿಯೇನಲ್ಲ ಹಾಗೆಯೇ ಸಾರ್ವಜನಿಕ ವಲಯಗಳಲ್ಲಿನ ಹಿಂಸೆಗಳಲ್ಲಿ ಲೈಂಗಿಕ ಕಿರುಕುಳವು ಒಂದಾಗಿದೆ. ಮಹಿಳೆಯರು ಕುಟುಂಬ ಕುಟುಂಬದಾಚೆಗಿನ ಸಂದರ್ಭಗಳಲ್ಲಿ ಲೈಂಗಿಕ ದೌರ್ಜನ್ಯವನ್ನು ಸಾಕಷ್ಟು ಅಧ್ಯಯನಗಳು ಶೋಧಿಸಿವೆ.

ಹಲವು ವರ್ಷಗಳಿಂದ ಮಹಿಳಾ ಸಂಘಟನೆಗಳು ಮಹಿಳೆಯರ ವಿರುದ್ಧ ನಡೆಯುವ ಹಿಂಸೆ ದೌರ್ಜನ್ಯ ದಂತಹ ಕೃತ್ಯಗಳು ವಿರುದ್ಧ ಪ್ರತಿಭಟಣೆಯನ್ನು ಮಾಡಿರುವುದು ಕಂಡು ಬರುತ್ತದೆ. ಭಾರತೀಯ ಸಂವಿಧಾನ ೧೯(೧) ಜಿ) ಅನುಚ್ಚೇದಡಿಯಲ್ಲಿ ಯಾವುದೇ ವ್ಯಕ್ತಿಯು ಮಾಡುವ ಅಥವಾ ಯಾವುದೇ ಉದ್ಯೋಗ ಅಥವಾ ವ್ಯಾಪಾರವನ್ನು ಕೈಗೊಳ್ಳುವ ಸ್ವಾತಂತ್ರ್ಯ ಒಂದು ಮುಲಭೂತ ಹಕ್ಕು ಎಂದು ಹೇಳಲಾಗುತ್ತದೆ. ಆದರೆ ಸರ್ವರಿಗೂ ಸಮಾನ ಎಂದು ಜಾರಿಯಲ್ಲಿರುವ ಸಂವಿಧಾನದಲ್ಲಾಗಲೀ ಇತರೇ ಯಾವುದೆ ಅಂಶಗಳಲ್ಲಾಗಲಿ ಮಹಿಳೆಯರನ್ನು ಒಳಗೊಂಡಿಲ್ಲ ಎಂಬುದು ಅಲಿಖಿತ ಶಾಸನದಂತಿದೆ, ಹಾಗೆಯೇ ಕೆಲಸದ ಸ್ಥಳಗಳಲ್ಲಿ ತೊಡಗುವ ಮಹಿಳೆಯರು ಒಳಗಾಗುವ ಲೈಂಗಿಕ ಕಿರುಕುಳವು ಮಹಿಳೆಯರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆಯೆಂದು ಹೇಳಬಹುದು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕಾರಣಗಳು

- ಆತ್ಮ ವಿಶ್ವಾಸದ ಕೊರತೆ.
- ಸರಿಯಾದ ಶಿಕ್ಷಣದ ಪದ್ಧತಿ ಹೊಂದಿಲ್ಲದಿರುವುದು
- ಅನಕ್ಷರತೆ ಮೌಢ್ಯತೆ, ಅಂಧಕಾರದ ರೂಪದಲ್ಲಿ ಮುಳುಗಿರುವುದು.
- ಮಹಿಳೆ ಮಹಿಳೆಯ ನಡುವೆಯ/ ಹೊಂದಾಣಿಕೆಯ ಅಥವಾ ಅಸಮಾನತೆ ಮತ್ತು ತಾರತಮ್ಯ ಭಾವನೆ
- ಹೆಣ್ಣಿನ ಆಲೋಚನೆ ಅಭಿಪ್ರಾಯಗಳು ಆಸೆ ಆಕಾಂಕ್ಷೆಗಳು ಬದಲಾಗಿರುವುದು.
- ಜಾಗತೀಕರಣ ಮತ್ತು ಉದಾರೀಕರಣ ಮತ್ತು ಖಾಸಗೀಕರಣದ ಪ್ರಭಾವ
- ನೀತಿ-ನಿಯಮಗಳು ಕಾಯ್ದೆಗಳು ಬಿಗಿ ಇಲ್ಲದಿರುವುದು.
- ಜೀವನದ ಪಾಠ (Life skils)(ಜೀವನ ಕೌಶಲ್ಯ)ದ ಪ್ರಜ್ಞೆ ಇಲ್ಲದಿರುವುದು.
- ಕೆಲಸದ ಸಮಯಲ್ಲಿ ತನ್ನ ಪಾತ್ರ ಜವಾಬ್ದಾರಿ ಏನು? ಎತ್ತ? ಎಂದು? ಏಕೆ? ಎಂಬ ಅಭಿಪ್ರಾಯ ಅಥವಾ ಮನೋಭೂಮಿಕೆ ಇಲ್ಲದಿರುವುದು.
- ಲಿಂಗ-ವರ್ಗಗಳ ನಡುವಿನ ಸಂಘರ್ಷ

- ಮೇಲು ಕೀಲು ಎಂಬ ಭಾವನೆ
- ಅಧಿಕಾರದ ಅಂತಸ್ತು
- ಅಧಿಕಾರದ ಸಾಮರ್ಥ್ಯ
- ದೂರದರ್ಶಿತ್ವ ಇಲ್ಲದಿರುವುದು.
- ಸಾಮಾಜಿಕಪ್ರಜ್ಞೆ ಇಲ್ಲದಿರುವುದು.
- ಸಂಪನ್ಮೂಲಗಳನ್ನು ಸಮಾನವಾಗಿ ಹಂಚದೇ ಇರುವುದು ಈ ರೀತಿಯಾಗಿ ಇನ್ನೂ ಮುಂತಾದ ಕಾರಣಗಳನ್ನು ಕೊಡುತ್ತಾರೆ. [೧೮]

ಮಹಿಳೆಯರ ಮೇಲಿನ ದೌರ್ಜನ್ಯದ ಹಲವು ಮುಖಗಳು.

೧.ಜಾತಿ ಆಧಾರಿತ ತಾರತಮ್ಯ/ದೌರ್ಜನ್ಯ

೨.ಅಂಗವಿಕಲತೆಯನ್ನಾಧರಿಸಿದ ದೌರ್ಜನ್ಯ

೩.ಲೈಂಗಿತಕೆಯನ್ನಾದರಿಸಿದ ತಾರತಮ್ಯ

೪.ಕೆಲಸ ಮತ್ತು ಪರಿಸರನ್ನಾಧರಿಸಿದ ದೌರ್ಜನ್ಯ

೫.ಆಹಾರ ಮತ್ತು ಪೌಷ್ಟಿಕತೆಯ ದೌರ್ಜನ್ಯ

೬.ಸಾಮಾಜಿಕ ಮೂಲ್ಯ ಉತ್ಪಾದಕಗಳ ದೌರ್ಜನ್ಯ

೭.ಜ್ವಲಂತ ಸಮಸ್ಯೆಗಳನ್ನು ಹೆದರಿಸುವುದು

೮.ಆರೋಗ್ಯ ನೀಡುವಲ್ಲಿ ವಿಫಲತೆ ಹೊಂದಿರುವುದು. ಇತ್ಯಾದಿಗಳು ದುಡಿಯುವ ಸ್ಥಳಗಳಲ್ಲಿನ ಮಹಿಳೆಯರ ಮೇಲಿನ ಹಲವು ಮುಖಗಳಾಗಿವೆ ಎಂದು ತಿಳಿಸಲಾಗಿದೆ.

ಆ್ಯಸಿಡ್ ದಾಳಿಗೆ ಬಲಿಯಾದ ಮಹಿಳಾ ಬಲಿಪಶುಗಳು

ಮಾನವ ಜನಾಂಗವನ್ನು 'ಸ್ತ್ರೀಯರು' ಮತ್ತು 'ಪುರುಷರು' ಎಂದು ವರ್ಗೀಕರಿಸುವುದು ಪಕೃತಿ ಸಹಜವಾದ ವಿಷಯವಾಗಿದೆ. ಈ ಒಂದು ಕಾರಣಕ್ಕಾಗಿಯೇ ಅವರುಗಳ ನಡುವೆ ಬಹಳಷ್ಟು ವ್ಯತ್ಯಸಗಳು ಮತ್ತು ತಾರತಮ್ಯಗಳು ಏರ್ಪಟ್ಟಿರುವುದು ವಿಪರ್ಯಾಸಗಲ್ಲಿ ಒಂದು. ನಾಗರೀಕತೆಯ ಪೂರ್ವಯುಗ ದಲ್ಲಿದ್ದ ಮಹಿಳೆಯರನ್ನು ನೋಡಿದ್ರೆ ಬಂಧುತ್ವ, ಸಮಾಜ ನಿರ್ಮಾಣಗೊಂಡಿರುವುದು ಹೆಣ್ಣಿನಿಂದಲೇ ಎಂಬುದನ್ನು ಸ್ಪಷ್ಟವಿದೆ. ಬದುಕನ್ನು ಕಟ್ಟುವಲ್ಲಿ ಹಣ್ಣಿನ ಶಕ್ತಿ ಸಾಮರ್ಥ್ಯ ಎದ್ದು ಕಾಣುತ್ತದೆ. ಗಂಡನಿಗಿಂತಲೂ ಅಪ್ರತಿಮ ಬುದ್ಧಿಶಾಲಿಯಾಗಿ ಹೆಣ್ಣು ಗೋಚರಿಸುತ್ತಾಳೆ. ಜೀವೋತ್ಪತ್ತಿ ಜೀವನದ ಮೌಲ್ಯವಾಗಿದ್ದ ಕಾಲದಲ್ಲಿ ಜೀವೋತ್ಪತ್ತಿಗೆ ಕಾರಣಳಾದ ಮಹಿಳೆ ಪ್ರಧಾನ ನೆಲೆಯಲ್ಲಿ ಬಿಂಬಿತವಾಗಿ ಜನಾಂಗವನ್ನೇ ಆಕೆ ಸೃಷ್ಟಿಸುತ್ತಾ, ಸಮಾಜವನ್ನೇ ರೂಪಿಸುವುದನ್ನು ನೊಡಿದರೆ ಹೆಣ್ಣಿನ ಬಗ್ಗೆ ಗೌರವ ಹುಟ್ಟುತ್ತದೆ. ಆದರೆ ಒಂದು ಘಟ್ಟದಲ್ಲಿ ಹೆಣ್ಣನ್ನು

ಜೀವೋತ್ಪತ್ತಿ ಮಾತ್ರವೇ ಮೀಸಲಿಟ್ಟು ಜೀವನಕ್ಕೆ ಆಧಾರವಾದ ಉತ್ಪತ್ತಯಿಂದ (ಆರ್ತಿಕಗಳಿಕೆ) ದೂರ ಇಟ್ಟಿದ್ದು ಮತ್ತು ಜನಾಂಗ, ಸಮೂಹ, ಗುಂಪುಗಳು ಮುಂದುವರೆಯುತ್ತಾ ಬಣಗಳಾಗಿ, ಕುಲಗಳಾಗಿ ಪ್ರತ್ಯೇಕಗೊಳ್ಳುತ್ತಿದ್ದಂತೆಯೇ, ಪುರುಷ ಒಂದು ಸಮೂಹದ ನಾಯಕನಾಗಿ ನೇಮಕಗೊಂಡು ಮಹಿಳೆಯರನ್ನು ನಿಯಂತ್ರಣದಲ್ಲಿಡುವ ಯೋಚನೆ ಸಿದ್ದಪಡಿಸಿದ ನಂತರವೇ ಸ್ತ್ರೀಯರ ಕಷ್ಟದ ದಿನಗಳು ಆರಂಭಗೊಂಡವು.

ಮಾನವ ಕುಲವನ್ನು ಗಂಡಸು ಎಂಬ ಅರ್ಥಕ್ಕೆ ಸೀಮಿತಗೊಳಿಸಿ ವ್ಯಾಖ್ಯಾನಿಸಲಾಗಿದೆ. ಹೆಣ್ಣು ಅವನ ಅಧೀನಕ್ಕೊಳಪಟ್ಟಳು ಆದ್ದರಿಂದ ಅವನು ಆಕೆಯನ್ನು ತನಗೆ ಬೇಕಾದ ಹಾಗೆ ಬಳಸಿಕೊಳ್ಳುತ್ತಾನೆ ಮತ್ತು ನಿಯಂತ್ರಣದಲ್ಲಿಟ್ಟುಕೊಂಡು ಅಧಿಕಾರ ಚಲಾಯಿಸುತ್ತಾನೆ. ಹೀಗೆ ಹೆಣ್ಣಿನ ಶೋಷಣೆಯ ನೆಲೆಯಿಂದಲೇ ಪ್ರಾರಂಭವಾಗಿದೆ ಎಂಬ ಅಭಿಪ್ರಾಯವನ್ನು ಮಹಿಳಾ ಚಿಂತಕಿ **ಸಿಮೋನ್ ದಿ ಬೋವಾ** ವ್ಯಕ್ತ ಪಡಿಸುತ್ತಾಳೆ.

ಇಂದು ಮಹಿಳೆಯರ ಬದುಕಿನ ಅಸ್ತಿತ್ವದ ಎಲ್ಲಾ ನೆಲೆಗಳಲ್ಲಿಯೂ ಸಾಮಾಜಿಕ ಚೌಕಟ್ಟಿನ ಬಂಧನ ಅವಳನ್ನು ಸುತ್ತುವರೆದಿದೆ. ಸ್ತ್ರೀಯರನ್ನು ತುಳಿಯುವ ದಮನ ಮಾಡುವ ಶೋಷಕ ಪ್ರವೃತ್ತಿ ಪುರುಷರಲ್ಲಿ ಪರಂಪರಾಗತವಾಗಿ ಬೇರೂರಿದೆ. ಪಿತೃ ಪ್ರಧಾನ ವ್ಯವಸ್ಥೆಯ ಮೌಲ್ಯಗಳೇ ತುಂಬಿರುವ ಇಂತಹ ನೆಲೆಗಟ್ಟಿನಲ್ಲಿ ಮಹಿಳೆಯರು ಪುರುಷರೊಂದಿಗೆ ಸಮಾನ ಸ್ಥಾನಮಾನವನ್ನು ಹೊಂದಿಲ್ಲ, ಅದಕ್ಕಿಂತ ಘೋರವಾಗಿ ದಾರುಣ ದುಃಖವನ್ನು ಹೊರಬರಲಾರದ ಕಟ್ಟುನಿಟ್ಟನ್ನು ಒಪ್ಪಿಕೊಳ್ಳಬೇಕಾಗಿದೆ. ಹುಟ್ಟುವ ಮುಂಚಿನಿಂದಲೂ 'ಹೆಣ್ಣು ಹಡಿಯಲು ಬ್ಯಾಡ ಹೆರವರಿಗೆ ಕೊಡಬ್ಯಾಡ' ಎಂಬ ಸೂಚನೆ ಅಥವಾ ಎಚ್ಚರಿಕೆಯೊಂದಿಗೆ ಭೂಮಿಗೆ ಆಗಮಿಸುವ ಹೆಣ್ಣು ಮಗುವಿಗೆ ಅಲ್ಲಿಂದಲೇ ಅಸ್ತಿತ್ವದ ಪ್ರಶ್ನೆ ಉದ್ಬವಿಸುತ್ತದೆ. ಇಂಥ ಪರಿಸ್ಥಿತಿ ಭಾರತಕ್ಕೆ ಮಾತ್ರ ಸೀಮಿತವಾಗಿರದೇ, ಪ್ರಪಂಚದ ನಾನಾ ಭಾಗಗಳಲ್ಲಿಯೂ ಕಂಡುಬರುತ್ತದೆ. ಹೀಗಾಗಿ ಸ್ತ್ರೀ ವಿರೋಧಿ ಪ್ರವೃತ್ತಿಗಳಿಗೆ ಒಂದು ಬಗೆಯ ಸಾರ್ವತ್ರಿಕತೆ ಇರುವುದು ಗೋಚರಿಸುತ್ತದೆ.

ಆಧುನಿಕತೆಯ ತುತ್ತತುದಿಯಲ್ಲಿರುವ ಸಮಾಜಗಳಲ್ಲಿರುವ ಮಹಿಳೆಯರುಸಹ ಲಿಂಗ ಸಂಬಂಧಿ ಪೂರ್ವಗ್ರಹ ಪೀಡನೆ, ದೌರ್ಜನ್ಯ ಕಿರುಕುಳಗಳಿಗೆ ಈಡಾಗುತ್ತಿರುವುದು ಸರ್ವವಿಧಿತ, ಬಾಲ್ಯವಿವಾಹ, ಸತಿಪದ್ದತಿ, ಮುಂತಾದ ಅನಿಷ್ಟ ಆಚರಣೆಗಳು ಇಂದಿಗೂ ಸಂಪೂರ್ಣವಾಗಿ ಮರೆಯಾಗಿಲ್ಲ. ಹೆಣ್ಣು ಮಕ್ಕಳ ಜೀವಂತ ದಹನ ಮರ್ಯಾದೆ ಹತ್ಯೆಯಂಥ ಹಲವಾರು ಸಮಸ್ಯೆಗಳು ಹೆಣ್ಣು ಮಕ್ಕಳನ್ನು ಕಾಡುತ್ತಿವೆ. ಮಹಿಳೆಯರು ಎದುರಿಸುತ್ತಾ ಬಂದಿರುವ ಸಮಸ್ಯೆಗಳಿಗೆ ಒಂದು ದೀರ್ಘವಾದ ಇತಿಹಾಸವಿದೆ. ಬಾಲ್ಯವಿವಾಹ, ಪರದಾ ಪದ್ದತಿ, ಹೆಣ್ಣು ಶಿಶು ಹತ್ಯೆ, ಸತಿಪದ್ದತಿ, ದೇವದಾಸಿಪದ್ದತಿ, ಬಹುಪತ್ನಿತ್ವ, ವರದಕ್ಷಿಣೆ ಇವೇ ಮುಂತಾದ ಘೋರ ಸಮಾಜ ಪಿಡುಗುಗಳ ಬಗ್ಗೆ ವೇದಗಳು. ಧರ್ಮಶಾಸ್ತ್ರಗಳು ಪುರಾಣಗಳು ಮತ್ತು ಶಾಸನಗಳಲ್ಲಿ ಉಲ್ಲೇಖಗಳಿವೆ. ಈ ಸ್ತ್ರೀ ವಿರೋಧಿ ಪ್ರವೃತ್ತಿಗಳು ಬದಲಾದ ಸಮಾಜದ ಆಯಾಮಗಳಿಗೆ ಅನುಗುಣವಾಗಿ ಹೊಸ ಹೊಸ ರೂಪಗಳನ್ನು ಪಡೆದು ಮುಂದುವರೆಯುತ್ತಿವೆ. ಮಹಿಳೆಯರ ವಿರುದ್ದ ಅಪರಾಧಗಳು ವರದಿಗೊಳ್ಳುವುದೇ ಇಲ್ಲ. ಅದಕ್ಕೆ ಕಾರಣಗಳು ಹಲವು ಇವೆ. ಮೊದಲೇ ಹೆಣ್ಣೆಂದರೆ ತಿರಸ್ಕಾರ.

ಅಲ್ಲದೇ ಪುರುಷನಿಗಿರದ ಕಳಂಕಿತ ನಿಷ್ಠೆ ನಿಯಮಗಳು ಮಹಿಳೆಯರಿಗೆ ಮಾತ್ರವೇ ಅಂಟಿಕೊಂಡಿವೆ. ಹೀಗಾಗಿ ಅತ್ಯಾಚಾರ, ಹಿಂಸೆ ಕಿರುಕುಳ, ಅಪರಾಧಗಳು ಬೆಳಕಿಗೆ ಬರುವುದೇ ಇಲ್ಲ. ಇದರಿಂದ ಪುರಷ ಪ್ರಧಾನ ಮೌಲ್ಯಗಳ ಕಠಿಣತೆ ಎಷ್ಟಿದೆ ಎಂಬುದು ವ್ಯಕ್ತವಾಗುತ್ತದೆ.

ಭ್ರೂಣಹತ್ಯೆಗೆ ಅಥವಾ ಗರ್ಭಪಾತಕ್ಕೆ ಸ್ತ್ರೀಯರನ್ನು ಪ್ರೇರೇಪಿಸುವುದು, ಕುಟುಂಬ ಯೋಜನೆಯ ಪರಿಣಾಮವಾಗಿ ಸ್ತ್ರೀಯರ ಜನಾಂಗಗಳ ಛೇದನಕ್ಕೆ ಒತ್ತಡ ತರುವುದು, ಹೆಣ್ಣು ಮಕ್ಕಳಿಗೆ ಕೀಟಲೆ ಕೊಡುವುದು, ಅಪ್ರಾಪ್ತ ಕನ್ಯೆಯರನ್ನು ಅಪಹರಿಸಿ ವಿವಾಹವಾಗಲು ಒತ್ತಾಯಿಸುವುದು, ಸ್ತ್ರೀಯರಿಗೆ ಆಸ್ತಿಯಲ್ಲಿ ಅವರ ಪಾಲನ್ನು ಕೊಡದೇ ನಿರಾಕರಣೆ ಮಾಡುವುದು, ಅರೇ ಹೊಟ್ಟೆ ಊಟ ಹಾಕಿ ಅವಿಶ್ರಾಂತವಾಗಿ ದುಡಿಮೆಗೆ ಒಳಪಡಿಸುವುದು, ಹೆಣ್ಣು ಮಕ್ಕಳನ್ನು ವಿಧವೆಯರನ್ನಾಗಿ ಮಾಡಿ ವೈಶ್ಯಾವಾಟಿಕೆಯ ನರಕಕ್ಕೆ ದೂಡುವುದು, ಹೆಣ್ಣು ಮಕ್ಕಳನ್ನು ಅಪಹರಿಸಿ ಅವರ ಕೈಕಾಲು ಕಣ್ಣು ಮತ್ತಿತರ ಅಂಗಗಳನ್ನು ಕತ್ತರಿಸಿ ಭಿಕ್ಷಾಟನೆಗಾಗಿ ಬಳಸುವುದು, ಬಂಧಿತರಾಗಿ ಪೋಲೀಸರ ವಶದಲ್ಲಿರುವ ಹಾಗೂ ಜೈಲು ಶಿಕ್ಷೆಯನ್ನು ಅನುಭವಿಸುತ್ತಿರುವ ಸ್ತ್ರೀಯರ ಮೇಲೆ ಕಾನೂನು ಪಾಲಕರೇ ಅತ್ಯಾಚಾರವೆಸಗುವುದು. ಉದ್ಯೋಗಸ್ಥ ಮಹಿಳೆಯರಿಗೆ ದುಡಿಯುವ ಸ್ಥಳದಲ್ಲಿ ಲೈಂಗಿಕ ಪೀಡನೆಗೆ ಗುರಿಪಡಿಸುವುದು. ಹೀಗೆ ಪುರುಷ ಪ್ರಧಾನವಾದ ಸಮಾಜದಲ್ಲಿ ಸ್ತ್ರೀಯರ ವಿರುದ್ಧದ ಲಿಂಗ ತಾರತಮ್ಯದ ನೆಲೆಗಳನ್ನು ಅನಾವರಣಗೊಳ್ಳುತ್ತವೆ.

ಪ್ರಸ್ತುತ ದಿನಗಳಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಜೀವನವನ್ನು ನರಕ ಮಾಡಿರುವ ಸಂಗತಿಯೆಂದರೆ 'ಆ್ಯಸಿಡ್ ದಾಳಿ' ಇದು ಪುರುಷನ ವಿಕೃತ ವಿಕಾರ ಮನಸ್ಸಿನ ಕ್ರೌರ್ಯವೆಂದೇ ಹೇಳಬಹುದು. ತನಗೆ ಸಿಗಲಿಲ್ಲ ಎಂಬ ಕಾರಣಕ್ಕೋ, ತನ್ನ ಪ್ರೀತಿಯನ್ನು ನಿರಾಕರಿಸಿದಳು ಎಂದೋ, ಬೇರೊಬ್ಬನ ಜೊತೆ ವಿವಾಹವಾದಳು ಎಂದೋ, ವರದಕ್ಷಿಣೆ ತರಲಿಲ್ಲ ಎಂಬ ಕಾರಣಕ್ಕೊ, ಹೆಣ್ಣು ಮಕ್ಕಳ ಮೇಲೆ ಆ್ಯಸಿಡ್ ಎರಚಿ ಅವರನ್ನು ವಿರೂಪಗೊಳಿಸುವ ಬದುಕನ್ನೇ ಬಲಿತೆಗೆದುಕೊಳ್ಳುವ ಕ್ರೌರ್ಯವಂತೂ ಸಮಕಾಲೀನ ಸಮಾಜದ ಘೋರ ಸಮಸ್ಯೆಯಾಗಿದೆ. ಇಂಥ ಮಹಿಳೆಯರು ಕುಟುಂಬದ ಅನಾಧಾರಕ್ಕೆ ಒಳಗಾಗಿ, ಅಗತ್ಯತೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಸಾಹಾಯಕರಾಗಿ, ಸಕಾರದ ನೆರವಿನಿಂದಲೂ ವಂಚಿತರಾಗಿ ಯಾತನೆಮಯ ಜೀವನವನ್ನು ನಡೆಸುತ್ತಾರೆ.

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಆ್ಯಸಿಡ್ ದಾಳಿ ಪ್ರಕರಣಗಳ ಸ್ವರೂಪ

ಆ್ಯಸಿಡ್ ದಾಳಿಯು ಜಗತ್ತಿನ ಎಲ್ಲಾ ಸಮಾಜಗಳಲ್ಲೂ ಸಾರ್ವತ್ರಿಕ ಎಂಬಂತೆ ಕಂಡುಬರುತ್ತದೆ. 'ಮಹಿಳೆಯರಿಗೆ ತಕ್ಕ ಪಾಠ ಕಲಿಸಬೇಕು' ಎಂಬ ಪುರುಷ ಪ್ರಧಾನ ಧೋರಣೆಯಿಂದ ಆಧುನಿಕ ಸಮಾಜದಲ್ಲಿ ಆ್ಯಸಿಡ್ ದಾಳಿಯು ವ್ಯಾಪಕವಾಗಿದೆ. ಈ ರೀತಿ ಮಹಿಳೆಯರ ಮೇಲೆ ಹಿಡಿತ ಸಾಧಿಸಬೇಕೆಂಬ ಉದ್ಧೇಶದಿಂದ ಶಿಕ್ಷೆಯ ರೂಪದಲ್ಲಿ ಆ್ಯಸಿಡ್ ಬಳಕೆಯಾದ ಘಟನೆಗಳು ಮೊದಲಿಗೆ ಕೊಲಂಬಿಯಾ, ನೈಜೀರಿಯಾ, ಚೀನಾ,

ಅರ್ಜೆಂಟೈನಾ, ನಂತರ ಭಾರತದಲ್ಲಿ ಸಂಭವಿಸಿದವು. ೨೦೦೨ ರಲ್ಲಿ ಬಾಂಗ್ಲದೇಶ ವೊಂದರಲ್ಲೇ ೪೮೫ ಮಹಿಳೆಯರು ಆ್ಯಸಿಡ್ ದಾಳಿಗೆ ಒಳಗಾಗಿರುವುದು ಆ್ಯಸಿಡ್ ದಾಳಿಯ ಕಠೋರತೆಗೆ ಸಾಕ್ಷಿಯಾಗಿದೆ.

ಪಾಕಿಸ್ಥಾನ ಪಂಜಾಬ್ ಪ್ರಾಂತ್ಯದಲ್ಲಿ ೨೦೦೩ ಅವಧಿಯಲ್ಲಿ ೨೫ ಮಹಿಳೆಯರು ಆ್ಯಸಿಡ್ ದಾಳಿಗೆ ಬಲಿಯಾಗಿದ್ದಾರೆ ಎಂಬ ಅಂಶವನ್ನು ಪಾಕಿಸ್ಥಾನ ಮಾನವ ಹಕ್ಕುಗಳ ಆಯೋಗ ಮಾಡಿರುವ ವರದಿಯ ಈ ಪ್ರಕರಣಗಳು ದಿನೇ ದಿನೇ ಹೆಚ್ಚಳವಾಗುತ್ತಿರುವುದನ್ನು ಸೂಚಿಸುತ್ತದೆ. ಬಾಂಗ್ಲದೇಶದಲ್ಲಿ ಹುಡುಗನಿಟ್ಟ ಮದುವೆಯ ಪ್ರಸ್ಥಾಪವನ್ನು ಹುಡುಗಿಯ ಅಮ್ಮ ನಿರಾಕರಿಸಿದ ಕಾರಣಕ್ಕೆ ಹುಡುಗ ಆ ಹುಡುಗಿಯ ಮೇಲೆ ಆ್ಯಸಿಡ್ ದಾಳಿ ಮಾಡಿದ ಘಟಣೆ ೧೯೬೭ರಲ್ಲಿ ಜರುಗಿದೆ. ಇದು ಪ್ರಥಮ ಆ್ಯಸಿಡ್ ದಾಳಿಯೆಂದು ದಾಖಲಾಗಿದೆ. ಢಾಕಾದ ಯೂನಿಸೆಟ್ ಕಛೇರಿಯ ವರದಿಯಂತೆ ೧೯೯೯ ರಲ್ಲಿ ೨೦೦ ಮಹಿಳೆಯರು ಬಲಿಯಾಗಿದ್ದಾರೆ. ಆದರೆ ಇದಕ್ಕೂ ಹೆಚ್ಚಿನ ಪ್ರಕರಣಗಳು ನಡೆದಿದ್ದು ಅವು ವರದಿಯಾಗದೇ ಮುಚ್ಚಿ ಹೋಗಿವೆ ಎಂದು ತಿಳಿದು ಬರುತ್ತದೆ. ೨೦೦೨ ರಲ್ಲಿ ನ್ಯೂಯಾರ್ಕ್ **'ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆ'** ತನ್ನ ವರದಿಯಲ್ಲಿ ಅಂದಾಜು ಮಾಡಿರುವಂತೆ ೨೮೦ ಮಹಿಳೆಯರು ಆ್ಯಸಿಡ್ ದಾಳಿಗೆ ಒಳಗಾಗಿ ಸಾವನ್ನಪ್ಪಿದರು. ೭೫೦ ಮಹಿಳೆಯರು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದಾರೆ ಎಂಬುದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಒಂದು ಸಮೀಕ್ಷೆಯ ಪ್ರಕಾರ ಜಗತ್ತಿನಾದ್ಯಂತ ಶೇಕಡ ೪೭ ರಷ್ಟು ಮಹಿಳೆಯರು, ಶೇಕಡ ೨೭ ರಷ್ಟು ಮಕ್ಕಳು, ಶೇಕಡ ೨೬ ರಷ್ಟು ಪುರುಷರ ಮೇಲೆ ಆ್ಯಸಿಡ್ ದಾಳಿ ನಡೆದಿದ್ದು ಇವರಲ್ಲಿ ಹೆಚ್ಚು ಬಲಿಯಾದವರು ಮಹಿಳೆಯರೇ ಆಗಿದ್ದಾರೆ.[೧೯]

ಆ್ಯಸಿಡ್ ಪರಿಣಾಮ ತೀವ್ರವಾಗಿರುವುದರಿಂದ ಚರ್ಮದ ಪದರಗಳು ಮತ್ತು ಮಾಂಸ ಖಂಡಗಳು ಸುಟ್ಟು ಕರಗಿಹೋಗುತ್ತವೆ, ಕೆಲವು ಸಂದರ್ಭಗಳಲ್ಲಿ ಮೂಳೆಗಳು ಸುಟ್ಟುಹೋಗುತ್ತವೆ. ಕಣ್ಣಿನ ಮೇಲೆ ಬಿದ್ದರಷ್ಟೇ ಕಣ್ಣನ್ನು ಕಳೆದುಕೊಳ್ಳಬೇಕಾಗುತ್ತದೆ. ಮುಖ ಕುರೂಪಗೊಳ್ಳುತ್ತದೆ. ಅಂಗವಿಕಲತೆ ಉಂಟಾಗುತ್ತದೆ. ಆ್ಯಸಿಡ್ ದಾಳಿಗೆ ಬಲಿಯಾದ ಮಹಿಳೆಯರ ಜೀವನದಲ್ಲಿ ಆತಂಕಕಾರಿ ಬದಲಾವಣೆ ಉಂಟಾಗಿದ್ದು ಇದರಿಂದ ಸಾರ್ವಜನಿಕ ಜೀವನ ಮತ್ತು ಆರ್ಥಿಕ ನಿರ್ವಹಣೆಗೆ ದಕ್ಕೆ ಒದಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಣ್ಣ ಮಕ್ಕಳಿರುವ ತಾಯಿಯಾದರೆ ಮಕ್ಕಳು ಎದುರು ತಾಯಿಯ ಬಳಿಯೇ ಬರುವುದಿಲ್ಲ. ಅವಿವಾಹಿತ ಹೆಣ್ಣು ಮಕ್ಕಳಾದರೆ ಅವರಿಗೆ ಮದುವೆಯೇ ಆಗದ ಪರಿಸ್ಥಿತಿಗಳು ನಿರ್ಮಾಣವಾಗುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯ ಎಷ್ಟೆಂಬುದು ಆ್ಯಸಿಡ್ ದಾಳಿ ಪ್ರಕರಣಗಳ ಮೂಲಕ ವ್ಯಕ್ತಗೊಳ್ಳುತ್ತದೆ.

ಕನಾಟಕದಲ್ಲಿ ಆ್ಯಸಿಡ್ ದಾಳಿಯ ಸ್ವರೂಪ

ಶತಮಾನಗಳಿಂದಲೂ ಸ್ತ್ರೀಯ ದೇಹವನ್ನು ಲೈಂಗಿಕ ಶೋಷಣೆಗೆ ಗುರಿಮಾಡುವ ಪ್ರವೃತ್ತಿಯಲ್ಲಿ ಎಲ್ಲಾ ಸಮಾಜಗಳಲ್ಲೂ ಕಂಡು ಬರುತ್ತವೆ. ಆಕೆ ದೈಹಿಕವಾಗಿ ದುರ್ಬಲಳು ಎಂಬ ನೆಪವನ್ನು ಮುಂದಿಟ್ಟುಕೊಂಡು ಆಕೆಯ ದೇಹವನ್ನು ಹಿಂಸೆ ಮತ್ತು ಕ್ರೌರ್ಯಗಳಿಗೆ ವಸ್ತುವನ್ನಾಗಿ ಮಾಡಿ ಅವಳ ಮೇಲೆ ಪ್ರಭುತ್ವವನ್ನು ಸಾಧಿಸಲು ಪ್ರಯತ್ನಿಸುವುದು ಪುರುಷ ಪ್ರಧಾನ ಸಮಾಜದ ಒಂದು ಪ್ರವೃತ್ತಿ. ಪುರುಷನಿಗೆ ಸ್ತ್ರೀಯ ದೇಹ ಹಾಗೂ ಮನಸ್ಸುಗಳೆರಡರ ಮೇಲೂ ಅದಿಕಾರವಿದೆ ಎಂಬ ನಂಬಿಕೆ ಬಹುಕಾಲದಿಂದಲೂ ಪ್ರಚಲಿತವಾಗಿರುವುದರಿಂದ, ಆಕೆಯ ದಮನ ಮಾಡಲು ಅನೇಕ ಪುರುಷರಿಗೆ ಮೊದಲು ಗೋಚರವಾಗುವುದು ಸ್ತ್ರೀ ದೇಹ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಹಿಳೆಯರ ವಿರುದ್ದ ಅಪರಾಧಗಳ ಮಾಹಿತಿಯನ್ನು ಅವಲೋಕಿಸಿದಾಗ ಮಹಿಳೆಯರ ವಿರುದ್ದದ ಅಪರಾಧಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದು ಕಂಡುಬರುತ್ತದೆ. ರಾಜ್ಯ ಅಪರಾಧ ದಾಖಲೆ ವಿಭಾಗದ ವರದಿಯಂತೆ ಕ್ರಮವಾಗಿ ೧೯೯೯ ರಲ್ಲಿ ೬೪೫೩, ೨೦೦೦ ರಲ್ಲಿ ೬೮೪೧, ೨೦೦೧ ರಲ್ಲಿ ೬೭೪೬, ೨೦೦೨ ರಲ್ಲಿ ೬೯೮೯ ಮತ್ತು ೨೦೦೩ ರಲ್ಲಿ ೬೫೫೮ ಮಹಿಳೆಯರ ವಿರುದ್ದದ ವಿವಿಧ ಬಗೆಯ ಅಪರಾಧಳು ದಾಖಲಾಗಿವೆ. ಆ್ಯಸಿಡ್ ದಾಳಿಗೆ ಸಂಬಂಧಿಸಿದಂತೆ ಅವಲೋಕಿಸಿದಾಗ ಕರ್ನಾಟಕದಲ್ಲಿ ೧೯೯೯ ರಿಂದ ಇಲ್ಲಿಯವರೆಗೆ ೬೫ ಆ್ಯಸಿಡ್ ಪ್ರಕರಣಗಳು ನಡೆದಿವೆ, ಎಂದು ಮಹಿಳೆಯರ ಮೇಲಿನ ಆ್ಯಸಿಡ್ ದಾಳಿ ವಿರೋಧಿ ಪ್ರಚಾರಾಂದೋಲನ ಮತ್ತು ಹೋರಾಟ ಸಂಸ್ಥೆ (CSAAAW) ತನ್ನ ವರದಿಯಲ್ಲಿ ದಾಖಲಿಸಿದೆ. ಮಾಹಿತಿಯನ್ನು ಕೋಷ್ಟಕ ೧ರಲ್ಲಿ ನೀಡಲಾಗಿದೆ.

ಕರ್ನಾಟಕದಲ್ಲಿ ಆ್ಯಸಿಡ್ ದಾಳಿಗೊಳಗಾದ ಮಹಿಳೆಯರು ವಿವಿಧ ವರ್ಗ, ಜಾತಿ, ಪ್ರದೇಶಗಳಿಂದ ಬಂದವರಾಗಿದ್ದಾರೆ. ಅವರ ಉದ್ಯೋಗ ಶಿಕ್ಷಣ ವಿವಿಧ ಸ್ವರೂಪದ್ದು, ಆ್ಯಸಿಡ್ ದಾಳಿಗೊಳಗಾದ ತಾರಾ ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿ, ನೂರ್ ಜಹಾನ್ ಬೆಂಗಳೂರಿನ ಕಂಠೀರವ ನಗರದ ಕೊಳೆಗೇರಿಯಲ್ಲಿ ಟೀ ಅಂಗಡಿ ನಡೆಸುತ್ತಿದ್ದರು. ಶೃತಿ ಇನ್ನೂ ವಿದ್ಯಾರ್ಥಿನಿ. ಮತ್ತಿಬ್ಬರು ಮಹಿಳೆಯರು ಪ್ರತಿಷ್ಠಿತ ರಾಜಕಾರಣಿಗಳ ಕುಟುಂಬಕ್ಕೆ ಸೇರಿದರು. ಹೀಗೆ ಬಹುಸ್ತರದ ಹಿನ್ನೆಲೆಯನ್ನು ಹೊಂದಿದ್ದಾರೆ. ಬೆಂಗಳೂರಿನಂತ ಮಹಾನಗರ, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ರಾಯಚೂರು ಜಿಲ್ಲೆಯ ಅಲ್ಲೆಸುಗೂರು, ಉತ್ತರಕನ್ನಡ ಜಿಲ್ಲೆಯ ಬನವಾಸಿ, ಕುಮುಟ, ಬೆಳಗಾವಿ ಜಿಲ್ಲೆಯ ಅಥಣಿ ಸೇರಿದಂತೆ ಕರ್ನಾಟಕದ ಸಣ್ಣ ಸಣ್ಣ ಹಳ್ಳಿಗಳಲ್ಲೂ ಘಟನೆಗಳು ನಡೆದಿವೆ. ಆದ್ದರಿಂದ ಸಮಸ್ಯೆಗಳು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ, ಈ ದಾಳಿಯಲ್ಲಿ ಶೇಕಡ ೮೦ ರಷ್ಟು ಘಟನೆಗಳು ಸಾರ್ವಜನಿಕ ಸ್ಥಳಗಳಲ್ಲೇ ನಡೆದಿವೆ.

ಕೋಷ್ಟಕ ೧: ಕರ್ನಾಟಕದಲ್ಲಿ ಮಹಿಳೆಯರ ಮೇಲೆ ನಡೆದಿರುವ ಆ್ಯಸಿಡ್ ದಾಳಿ ಪ್ರಕರಣಗಳು

ದಾಳಿಗೆ ಒಳಗಾದವರ ಸಂಖ್ಯೆ	ದಿನಾಂಕ	ಹೆಸರು	ವಯಸ್ಸು	ಸ್ಥಳ
೧	ಏಪ್ರಿಲ್ ೧೯೯೯	ಹಸೀನ	೧೯	ಜಾಲಹಳ್ಳಿ ಬೆಂಗಳೂರು
೨-೩	ಮೇ ೧೯೯೯	ನೃತ್ಯಗಾತೀಯರು	---	ಬೆಂಗಳೂರು
೪	ಆಗಸ್ಟ್ ೨೦೦೦	ನೂರ್‌ಜಹಾನ್	೨೬	ಗುರುಗುಂಟೆ ಪಾಳ್ಯ
೫	ಅಕ್ಟೋಬರ್ ೨೦೦೦	ನಾಗಮ್ಮ	----	ಹಳದಿಲುರ ಉತ್ತರಕನ್ನಡ
೬	ಜನವರಿ ೨೦೦೧	ಡಾ.ಮಹಾಲಕ್ಷ್ಮಿ	೩೫	ಮೈಸೂರು ಹರದನಹಳ್ಳಿ
೭-೮	ಫೆಬ್ರವರಿ ೨೦೦೧	ಚೆನ್ನಮ್ಮ ಮತ್ತು ಸೊಸೆ	---	ಹಾಸನ
೯	ಅಕ್ಟೋಬರ್ ೨೦೦೧	ಶಾಂತಿ	೩೦	ಪಂಚವಲ್ಲಿ ಪಿರಿಯಾಪಟ್ಟಣ
೧೦-೧೧	ನವೆಂಬರ್ ೨೦೦೧	ನೃತ್ಯಗಾತಿಯ	---	ಬೆಂಗಳೂರು
೧೨	ಫೆಬ್ರವರಿ೨೦೦೨	ಪ್ರೇಮಾ	೩೦	ಹೊಸದುಗ್ ತುಮಕೂರು
೧೪-೧೫	ಜುಲೈ ೨೦೦೨	ಶಾಲಿನಿ ಮತ್ತು ಅವರ ಚಿಕ್ಕಮ್ಮ	--	ವಿಜಯನಗರ ಬೆಂ
೧೬	ಆಗಸ್ಟ್ ೨೦೦೨	ಶೃತಿ	೧೬	ಮಾರೇನಹಳ್ಳಿ ಬೆಂ
೧೭	ನವೆಂಬರ್ ೨೦೦೨	ಸ್ವಪ್ನ	೧೯	ರಾಯಚೂರು
೧೮	ಡಿಸೆಂಬರ್ ೨೦೦೨	ದಿನ ಪತ್ರಿಕೆ ವರದಿ	--	ರಾಜಗೋಪಾಲನಗರ ಬೆಂ
೧೯	ಜನವರಿ ೨೦೦೩	ದಿನ ಪತ್ರಿಕೆ ವರದಿ	---	ಬಿ.ಎಂ.ಎಲ್.ಲೇಔಟ್ ಬೆಂ
೨೦	ಮಾರ್ಚ್ ೨೦೦೩	ಬಿ.ಬಿ.ಹಾಜಿರಾ	---	ತಿಲಕ್ ಪಾರ್ಕ್ ತುಮಕೂರು
೨೧-೨೫	ಮಾರ್ಚ್ ೨೦೦೩	ವಿದ್ಯಾವತಿ ಮತ್ತು ಅವರ ನಾಲ್ಕು ಮಕ್ಕಳು	೩೫	ಬೀದರ್
೨೬	ಏಪ್ರಿಲ್ ೨೦೦೩	ತಾರಾ	೨೮	ಇಳಕಲ್ ಬಾಗಲಕೋಟೆ
೨೭	ಆಗಸ್ಟ್ ೨೦೦೩	ತಿಮ್ಮಪ್ಪ	---	ಚಿಕ್ಕನಾಯಕನಹಳ್ಳಿ
೨೮	ಆಗಸ್ಟ್ ೨೦೦೩	ಕಾವೇರಿ	೨೨	ಬೆಂಗಳೂರು
೨೯	ಸೆಪ್ಟೆಂಬರ್ ೨೦೦೩	ಗೀತಾನಾಯಕ್	೧೯	ಕುದಪುರ
೩೦	ಸೆಪ್ಟೆಂಬರ್ ೨೦೦೩	ಜಯಲಕ್ಷ್ಮಿ	---	ತಿಪಟೂರು ತುಮಕೂರು
೩೧	ಅಕ್ಟೋಬರ್ ೨೦೦೩	ದಿನ ಪತ್ರಿಕಾ ವರದಿ	೧೯	ಕುದಪುರ
೩೨	೨೦೦೩	ರಜಿಯಾ ಬೇಗಂ	೩೫	ಬಿಜಾಪುರ
೩೩	೨೦೦೩	ಜೇರೀನಾ	೨೦	ಮೈಸೂರು
೩೪	ಫೆಬ್ರವರಿ ೨೦೦೪	ವಿಮಲಾ	೪೦	ಅಥಣಿ ಬೆಳಗಾಂ
೩೫	ಫೆಬ್ರವರಿ ೨೦೦೪	ದಿನ ಪತ್ರಿಕೆ ವರದಿ	೨೫	ಬೆಳಗಾಂ
೩೬	ಏಪ್ರಿಲ್ ೨೦೦೪	ನಿರ್ಮಲ	೪೦	ಕೊಳ್ಳೇಗಾಲ
೩೭	ಮೇ ೨೦೦೪	ಆಶಾ	೨೭	ಬೆಂಗಳೂರು
೩೮	ಆಗಸ್ಟ್ ೨೦೦೪	ಪುಷ್ಪಾವತಿ	೨೬	ಕುದೂರು ಮಾಗಡಿ
೩೯	ಮೇ ೨೦೦೫	ಎಲಿಜಬತ್	೪೫	ಸದಾಶಿವನಗೆ ಬೆಂಗಳೂರು
೪೦	೨೦೦೫	ಸಲ್ಮಾ	--	ಕಲಾಸಿಪಾಲ್ಯ ಬೆಂಗಳೂರು

೪೧	೨೦೦೫	ದಿನ ಪತ್ರಿಕೆ ವರದಿ	--	ಶಿರಾ
೪೨	ಮಾರ್ಚ್ ೨೦೦೬	ಹೇಮಾವತಿ	೨೭	ಬೆಂಗಳೂರು
೪೩	ಏಪ್ರಿಲ್ ೨೦೦೬	ಶರ್ಮಿಳಾ	೧೪	ರಾಬರ್ಟ್‌ಸನ್ ಪೇಟೆ ಕೆ.ಜಿ.ಎಫ್.
೪೪	ಜುಲೈ ೨೦೦೬	ಸವಿತ	೨೩	ಗಿರಿನಗರ ಬೆಂಗಳೂರು
೪೫	ಅಕ್ಟೋಬರ್ ೨೦೦೬	ಶಾಂತಿ	--	ಚೆನ್ನಮ್ಮನಹಳ್ಳಿ ಬೆಂಗಳೂರು (ಗ್ರಾ)
೪೬	ಸೆಪ್ಟೆಂಬರ್ ೨೦೦೩	ಫಾತಿಮಾಬಿ	೪೫	ಬೆಂಗಳೂರು
೪೭-೫೬	ಜನವರಿ ೨೦೦೭	ಲೈಂಗಿಕ ಕಾರ್ಯಕರ್ತೆಯರು	--	ಕೆ,ಆರ್ ಮಾರ್ಕೆಟ್ ಬೆಂಗಳೂರು

ಆಧಾರ: ಸಿ ಎಸ್ ಎ ಎ ಡಬ್ಲ್ಯು ರಿಪೋರ್ಟ್ ೨೦೦೭, ಪು.ಸಂ-೭೫

ಆ್ಯಸಿಡ್ ದಾಳಿಗಳು ದಿನದಿಂದ ದಿನಕ್ಕೆ ವರದಿಗೊಳ್ಳುತ್ತವೆ. ಆ್ಯಸಿಡ್ ದಾಲಿಗೆ ಒಳಪಡಿಸಿದ ಅಪರಾಧಗಳಿಗೆ ಕಠಿಣವಾದ ಶಿಕ್ಷೆಯಾಗಬೇಕು. ಆ್ಯಸಿಡ್ ದಾಳಿಗಳಿಗೆ ಒಳಗಾದ ಮಹಿಳೆಯರಿಗೆ ಕುಟುಂಬದವರು ನೈತಿಕ ಬೆಂಬಲವನ್ನು ನೀಡಬೇಕು. ಸರ್ಕಾರ ಅವರ ಪುನರ್ವಸತಿಗಾಗಿ ಕ್ರಮ ಕೈಗೊಳ್ಳಬೇಕು.

ಕುರುಡನಾಗಿಸಿದವನ ಕಣ್ಣಿಗೂ ಆ್ಯಸಿಡ್ ಲಂಡನ್, (ಐ.ಎ.ಎನ್.ಎಸ್) ಪ್ರೇಯಸಿಯ ಪತಿ ಕಣ್ಣಿಗೆ ಆ್ಯಸಿಡ್ ಸುರಿದು ಆತನನ್ನು ಕುರುಡನನ್ನಾಗಿಸಿದ ಅಪರಾಧಿಯ ಕಣ್ಣಿಗೂ ಆ್ಯಸಿಡ್ ಸುರಿಯಲು ಇರಾನ್ ಸುಪ್ರಿಂ ಕೋರ್ಟ್ ಆದೇಶಿಸಿದೆ.[೨೦]

ಕೋಮ್ ನಿವಾಸಿ, ಟ್ಯಾಕ್ಸಿ ಚಾಲಕ ಅಲಿರೆಜ ಎಂಬುವರ ಪತ್ನಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಮೋಜ್ತಾಬ ಎಂಬಾತ ಅಲಿರೆಜ ಕಣ್ಣಿಗೆ ಆ್ಯಸಿಡ್ ಹಾಕಿ ಆತನನ್ನು ಅಂಧನನ್ನಾಗಿಸಿದ. ಈ ಆರೋಪ ದೃಢಪಟ್ಟಿದ್ದು! ಇರಾನ್ ಸ್ಥಳೀಯ ನ್ಯಾಯಾಲಯ ಮೋಜ್ತಾಬನ ಕಣ್ಣಿಗೂ ಆ್ಯಸಿಡ್ ಸುರಿಯುವಂತೆ ನೀಡಿದ್ದ ಆದೇಶವನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ ಎಂದು ಪತ್ರಿಕಾ ವರದಿ ಮಾಡಿದೆ.

ಇರಾನ್ ರಾಜಧಾನಿ ಟೆಹರಾನ್ ನಿಂದ ೬೦ಕಿ.ಮೀ. ದೂರದಲ್ಲಿರುವ ಕೋಮ್ ನಗರದಲ್ಲಿ ಈ ಘಟನೆ ನಡೆದಿತ್ತು. ಪ್ರಾಸಿಕ್ಯೂಟರ್ ಮುಸ್ತಾಫ ಬರ್ಜೆಂಗರ್ ಗಾಂಜಿ ಅವರು, 'ಕಣ್ಣು ಕಳೆದುಕೊಂಡ ಅಲಿರೆಜ ತನನ್ ಹಕ್ಕಾದ 'ಕಿಸಾನ್' ಈ ಪ್ರಕರಣದಲ್ಲಿ ಬಳಕೆ ಮಾಡಿಕೊಂಡ 'ಕಿಸಾನ್' ಎಂದರೆ ಇರಾನ್‌ನ ಇಸ್ಲಾಮಿಕ್ ನಿಯಮದ ಪ್ರಕಾರ ಕಣ್ಣಿಗೆ ಕಣ್ಣು ತೆಗೆದುಕೊಂಡು ಪ್ರತೀಕಾರ ತೀರಿಸಿಕೊಳ್ಳುವುದು ಎಂದು ಹೇಳಿದರು.

ಅಪರಾಧಿಗೆ ಶಿಕ್ಷೆ ಜಾರಿಯಾದ ನಂತರ ಆತ ಕುರುಡನಾಗಿದ್ದಾನೆಯೇ ಇಲ್ಲವೇ ಎಂಬುದನ್ನು ತಜ್ಞರು ಪರಿಶೀಲಿಸಿ ದೃಢಪಡಿಸಬೇಕೆಂದು ನ್ಯಾಯಾಲಯವನ್ನು ಕೋರಿರುವುದಾಗಿ ಅವರು ತಿಳಿಸಿದರು.[೨೧]

ಅಪಹರಣ (ಹೆಣ್ಣು ಮಕ್ಕಳ ಹಾಗೂ ಸ್ತ್ರೀಯರ ಅಪಹರಣ)

'ಅಪಹರಣ' ಎಂದರೆ ಸಾಮಾನ್ಯವಾಗಿ ೧೬ ವರ್ಷಕ್ಕಿಂತಲೂ ಕಿರಿಯನಾದ ಗಂಡುಮಗುವನ್ನು ಅಥವಾ ೧೮ ವರ್ಷಕ್ಕೂ ಕಿರಿಯಳಾದ ಹೆಣ್ಣು ಮಗಳನ್ನು ಅವನ ಅಥವಾ ಆಕೆಯ ಕಾನೂನು ಬದ್ದ ಪಾಲಕರ ಅನುಮತಿ ಇಲ್ಲದೆ ಮೋಸದಿಂದ ಹಾರಿಸಿಕೊಂಡು ಹೋಗುವುದು ಎಂದರ್ಥ. ಅಪಹರಣದ ಬಲಿಪಶುವಾದ ವ್ಯಕ್ತಿಯು ಅಂತಹ ಅಪಹರಣಕ್ಕೆ ತನ್ನ ಅನುಮತಿಯನ್ನು ಕೊಡಲಿ ಅಥವಾ ಕೊಡದಿರಲಿ ಅದೊಂದು ಅಪರಾಧವೆನಿಸಿ ಕೊಳ್ಳಲಾಗುವುದು.

ಪ್ರಾಪ್ತ ವಯಸ್ಕರ ಅಪಹರಣ ಎಂದರೆ ಪ್ರಬುದ್ಧ ವಯಸ್ಕಳಾದ ಸ್ತ್ರೀಯೊಬ್ಬಳನ್ನು ಆಕೆಯ ಇಚ್ಛೆಗೆ ವಿರುದ್ದವಾಗಿ ವಿವಾಹವಾಗಲು ಅಥವಾ ಹಠ ಸಂಭೋಗ ನಡೆಸಲು ಮೋಸದಿಂದ ಅಥವಾ ಬಲಾತ್ಕಾರದಿಂದ ಕದ್ದೊಯ್ಯುವುದು ಎಂದರ್ಥ, ಇದೂ ಕೂಡ ಗಂಭೀರ ಅಪರಾಧವಾಗಿದ್ದರೂ ಈ ಪ್ರಕರಣದ ಬಲಿಪಶುವಾದ ಸ್ತ್ರೀ ಈ ಕೃತ್ಯದ ಬಗ್ಗೆ ತನ್ನ ಸ್ವ-ಇಚ್ಛೆಯಿಂದ ಸೂಚಿಸಿದ್ದಲ್ಲಿ ಮಾತ್ರ ಅಪರಾಧಕ್ಕೆ ವಿನಾಯಿತಿ ಅಥವಾ ಕ್ಷಮೆ ಲಭಿಸುವುದು.

ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳನ್ನು ಹಾಗೂ ಪ್ರಬುದ್ದ ವಯಸ್ಸಿನ ಹೆಂಗಸರನ್ನು ಅಪಹರಿಸುವ ಪ್ರಕರಣಗಳು ಕೂಡ ಭಾರತದಲ್ಲಿ ಹೆಚ್ಚುತ್ತವೆ. ೧೯೮೩ ರಿಂದ ೧೯೮೮ ನಡುವಿನ ೧೬ ವರ್ಷಗಳ ಅಂತರದಲ್ಲಿ ದೇಶದಲ್ಲಿ ಸರಾಸರಿ ದಿನ ಒಂದಕ್ಕೆ ೪೨ ಮಂದಿ ಹೆಣ್ಣು ಮಕ್ಕಳ ಸ್ತ್ರೀಯರ ಅಪಹರಣವಾಗುತ್ತಿದ್ದ ಈ ಸಂಖ್ಯೆ ವರ್ಷವೊಂದರಲ್ಲಿ ೧೫೦೦ ಕ್ಕೂ ಅಧಿಕವಾಗುತ್ತಿತ್ತು.

ಕೇಂದ್ರ ಗೃಹಖಾತೆಯ 'ಕ್ರೈಮ್ ರೆಕಾರ್ಡ್ ಬ್ಯೂರೋದ ೧೯೯೪ರ ಪ್ರಕರಣದಂತೆ ಸ್ತ್ರೀಯರು ಅಪಹರಣದ ಹಾಗೂ ಅವರನ್ನು ಒತ್ತೆಯಿರಿಸಿಕೊಳ್ಳುವ ಪ್ರಕರಣಗಳು ೧೯೭೪-೧೯೯೩ ರ ನಡುವಿನ ೨೦ ವರ್ಷಗಳಲ್ಲಿ ಶೇಕಡ ೩೦ ರಷ್ಟು ಅಧಿಕಗೊಂಡಿವೆ. ಅಂದರೆ ೧೯೭೪ ರಲ್ಲಿ ಸುಮಾರು ೯೯೮೦ ರಷ್ಟಿದ್ದ ಈ ಸಂಖ್ಯೆ ೧೯೯೩-೯೪ ರಲ್ಲಿ ೧೧೭೫ ಕ್ಕೆ ಏರಿದ್ದಿತು. 'ಕ್ರೈಮ್ ಇನ್ ಇಂಡಿಯಾ' ೧೯೯೮ ರ ವರದಿಯಂತೆ ವರ್ಷವೊಂದರಲ್ಲಿ, ದೇಶಾದಾದ್ಯಂತ ವ್ಯಕ್ತಿಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ ೮೬.೫ ರಷ್ಟು ಸ್ತ್ರೀಯರಾಗಿದ್ದಾರೆ. ಕೇವಲ ಶೇಕಡ ೧೩.೫ ಮಂದಿ ಮಾತ್ರ ಪುರುಷರಾಗಿರುವವರು. ಅದೇ ರೀತಿಯಲ್ಲಿ ಅಪಹರಣ ನಡೆಸಿದ್ದಕ್ಕಾಗಿ ವರ್ಷವೊಂದರಲ್ಲಿ (೧೯೮೩-೮೮) ಪುರುಷರಾಗಿದ್ದಾರೆ. ಶೇಕಡ ೪ ರಷ್ಟು ಮಾತ್ರ ಸ್ತ್ರೀಯರಾಗಿದ್ದಾರೆ.

ಹೆಣ್ಣು ಮಕ್ಕಳನ್ನು ಮತ್ತು ಸ್ತ್ರೀಯರನ್ನು ಚುಡಾಯಿಸುವುದು

ಯಾವುದೇ ಒಬ್ಬ ವ್ಯಕ್ತಿಯು ಮಹಿಳೆಯ ಮರ್ಯಾದೆಗೆ ಅಪಮಾನ ಮಾಡುವ ಹಾಗಿಲ್ಲ. ಆ ಉದ್ದೇಶದಿಂದ ಆಕೆ ಕೇಳಿಸಿಕೊಳ್ಳಲಿ ಎಂಬ ಉದ್ದೇಶದಿಂದ ಯಾವುದೇ ಮಾತು ಹೇಳುವುದು, ಆಕೆ ನೋಡಲಿ ಎಂದು ಸನ್ನೆ ಮಾಡುವುದು, ಅಥವಾ ಯಾವುದೇ ವಸ್ತುವನ್ನು ಪ್ರದರ್ಶಿಸುವುದು, ಅಥವಾ ಮಹಿಳೆಯ ಏಕಾಂತದಲ್ಲಿ ಆಕೆಗೆ ತೋರಿಸಿದರೆ ಅಂತವರಿಗೆ ಶಿಕ್ಷೆ ಇದೆ. ಒಂದು ವರ್ಷದವರೆಗೆ ಅಥವಾ ದಂಡವನ್ನು

ವಿಧಿಸುವುದು. ಸಿಳ್ಳೇ ಹಾಕುವುದು, ಕಣ್ಣು ಹೊಡೆಯುವುದು, ಇರಬಹುದು ಸನ್ನೆ ಮಾಡುವುದು, ಅಸಭ್ಯ ಸಂಗತಿಗಳೊಂದಿಗೆ ಪತ್ರ ಬರೆಯುವುದು ಇರಬಹುದು, ಪೋಲಿ ಮಾತನಾಡುವುದು, ಚುಡಾಯಿಸುವುದು ಎಲ್ಲವೂ ಅಪರಾಧಗಳಾಗುತ್ತವೆ.[೨೨]

ಮಹಿಳೆಯನ್ನು ಮಾರಾಟ ಮಾಡುವುದು

ಮಹಿಳೆಯನ್ನು ಮಾರಾಟ ಮಾಡುವುದು ೧೮ ವರ್ಷ ದೊಳಗಿನ ಹೆಣ್ಣು ಮಕ್ಕಳು ಅಥವಾ ಯಾವುದೇ ಮಹಿಳೆಯನ್ನು ಯಾವುದೇ ವಯಸ್ಸಿನಲ್ಲಿ ವೇಶಾ ವೃತ್ತಿಯ ಅಥವಾ ಯಾವುನೇ ವ್ಯಕ್ತಿಯೊಂದಿಗೆ ಕಾನೂನು ನಿಷಿದ್ದ ಸಂಭೋಗನೆ ನಡೆಸುವ ಅಥವಾ ಕಾನೂನು ಬದ್ದವಲ್ಲದ ಮತ್ತು ಅನೈತಿಕ ಪ್ರಯೋಜನಾರ್ತವಾಗಿ ನಿಯೋಜಿಸುವ ಅಥವಾ ಉಪಯೋಗಿಸುವ ಸಂಬಂಧವಿದೆ ಎಂದು ತಿಳಿದು ಮಾರಾಟ ಮಾಡುವ ಅವರ ಕ್ರಯಕ್ಕೆ ಕೊಡುವ ಅಥವಾ ಅನ್ಯತಾ ವಿಲೇ ಮಾಡುವ ಯಾವನೇ ವ್ಯಕ್ತಿಯು ೧೦ ವರ್ಷಗಳ ವರೆಗಿನ ಕಾರಗೃಹ ವಾಸದಿಂದ ದಂಡಿತನಾಗತಕ್ಕದ್ದು.[೨೩] ಈ ಮೇಲಿನ ಎಲ್ಲಾ ಮಹಿಳಾ ದೌರ್ಜನ್ಯ ಪ್ರಕರಣಗಳು ಸಹ ಸಾರ್ವಜನಿಕವಲಯದಲ್ಲಿನ ದೌರ್ಜನ್ಯ ಸ್ವರೂಪಗಳಾಗಿವೆ.

ಖಾಸಗಿ ವಲಯದಲ್ಲಿನ ಮಹಿಳಾ ದೌರ್ಜನ್ಯ

ಜಗತ್ತಿನ ಇತರೇ ದೇಶಗಳ ಮಹಿಳೆಯರ ಸ್ಥಾನಮಾನಗಳಿಗಿಂತ ಭಾರತೀಯ ಮಹಿಳೆಯರ ಸ್ಥಾನಮಾನಗಳು ತುಂಬಾ ಭಿನ್ನವಾಗಿರುವುದು ಕಂಡುಬರುತ್ತದೆ. "ಮಾತೃ ದೇವೋಭವ" ಎಂದು ಹೇಳಲಾಗಿದೆ. ಹೀಗೆ ಹೇಳುವುದರ ಮೂಲಕ ಮಹಿಳೆಯನ್ನು ಆರಾಧನೆಯ ನೆಲೆಯಲ್ಲಿ ಕಾಣಲಾಗುತ್ತಿದೆಯಾದರೂ ಇದು ಕೇವಲ ತೋರಿಕೆಗೆ ಮಾತ್ರ. ಏಕೆಂದರೆ ಮಾತೃ ಸ್ಥಾನಕ್ಕೆ ಏರಿಸಿದ ಅದೇ ಮಹಿಳೆಯನ್ನು ಎಂದಿನಿಂದಲೂ ನಾನಾ ವಿಧದಲ್ಲಿ ಶೋಷಿಸಲಾಗುತ್ತಿದೆ. ಹಲವಾರು ರೀತಿಯಲ್ಲಿ ಹಿಂಸಿಸಲಾಗುತ್ತಿದೆ. ಸಮಾಜದ ಅತ್ಯಂತ ಚಿಕ್ಕ ಘಟಕವಾದ ಕುಟುಂಬದಿಂದ ಹಿಡಿದು ವ್ಯವಸ್ಥೆಯ ಎಲ್ಲಾ ರಂಗಗಳಲ್ಲಿಯೂ ಮಹಿಳೆಯನ್ನು ಒಂದಲ್ಲಾ ಒಂದು ಕಾರಣದಿಂದ ಹಿಂಸಿಸಲಾಗುತ್ತಿದೆ. ಇದಕ್ಕೆಲ್ಲಾ ಕಾರಣ ಪುರುಷಶಾಹಿ ವ್ಯವಸ್ಥೆ, ಮತ್ತು ಮಹಿಳೆ ಎರಡನೇ ದರ್ಜೆಯ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು. ಮುಖ್ಯವಾಗಿ ಕುಟುಂಬದಿಂದಲೇ ಮಹಿಳೆಯರಿಗೆ ಎಲ್ಲಾ ಬಗೆಯ ಸಮಸ್ಯೆಗಳು ಆರಂಭವಾಗುತ್ತವೆಎಂದು ಹೇಳಬಹುದು. ಏಕೆಂದರೆ ಕುಟುಂಬವು ಮಹಿಳೆಗೆ ಒಂದು ಮಹತ್ವಪೂರ್ಣ ಸಂಸ್ಥೆಯಾಗಿದೆ. ಇಂದು ಮಹಿಳೆಯ ಎಲ್ಲಾ ಚಟುವಟಿಕೆಗಳು ಕೂಡ ಕುಟುಂಬದ ಪರಿಧಿಯಲ್ಲಿಯೇ ಹೆಚ್ಚಾಗಿ ನಡೆಯುತ್ತವೆ. ಹಾಗಾಗಿ ಮಹಿಳೆಗೆ ಸಂಬಂಧಿಸಿದ ಯಾವುದೇ ಚರ್ಚೆಗಳಗಾಲಿ ಅಥವಾ ಅಧ್ಯಯನಗಳಾಗಲಿ ಕುಟುಂಬವನ್ನು ಒಳಗೊಂಡಂತೆಯೇ ನಡೆಯುತ್ತವೆ. ಕುಟುಂಬದಲ್ಲಿ ಮಹಿಳೆ ಮಗಳಾಗಿ, ಸೊಸೆ, ಪತ್ನಿಯಾಗಿ, ತಾಯಿಯಾಗಿ, ಹೀಗೆ ಹಲವಾರು ಜವಾಬ್ಧಾರಿ ಪಾತ್ರಗಳನ್ನು ವಹಿಸುತ್ತಾಳೆ. ಈ ಪಾತ್ರಗಳಿಗೆ ಅನುಗುಣವಾಗಿ ಜವಾಬ್ದಾರಿಗಳನ್ನ ಸಹ ನಿರ್ವಹಿಸುತ್ತಿದ್ದಾಳೆ. ಹಾಗಾಗಿ ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಕೂಡ ಅವಳಿಂದ ಏನನ್ನಾದರೂ ನಿರೀಕ್ಷಿಸುತ್ತಲೇ ಇರುತ್ತಾರೆ. ಅವಳು ಎಲ್ಲಾ

ನಿರೀಕ್ಷೆಗಳಿಗೆ ಅನುಗುಣವಾಗಿ ಕಾರ್ಯಗಳನ್ನು ಮಾಡುತ್ತಿದ್ದಾಳೆ. ಇದಕ್ಕೆ ನಿಗದಿತ ಸಮಯ ಎಂದಾಗಲಿ ಅಥವಾ ಬಿಡುವಿನ ಸಮಯ ಎಂದಾಗಲಿ ಇರದೇ ನಿರಂತರವಾಗಿ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡೇ ಇರುತ್ತಾಳೆ. ಆದರೆ ಇಷ್ಟೆಲ್ಲಾ ಬಿಡುವಿಲ್ಲದೇ ದುಡಿಯುತ್ತಿದ್ದರೂ ಸಹ ಅವಳಿಗೆ ಹಿಂಸೆ ಎಂಬುವುದು ತಪ್ಪಿಲ್ಲ. ಕುಟುಂಬದಲ್ಲಿ ಮಾನಸಿಕವಾಗಿ, ದೈಹಿಕವಾಗಿ, ಲೈಂಗಿಕವಾಗಿ ಹಲವಾರು ರೀತಿಯಲ್ಲಿ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ.

"ಹಿಂಸೆ" ಎಂಬ ಪದಕ್ಕೆ ಒಂದು ನಿರ್ಧಿಷ್ಟವಾದ ಅರ್ಥ ಕೊಡಲು ಸಾಧ್ಯವಿಲ್ಲ. ಹಿಂಸೆ ಎಂದರೆ ಕಿರುಕುಳವನ್ನು ನೀಡುವುದು ಎನ್ನಬಹುದು. ಹಲವಾರು ಭಾರತೀಯ ಧರ್ಮಶಾಸ್ತ್ರಜ್ಞರು ಭಾರತೀಯ ಸ್ತ್ರೀ ಹೇಗಿರಬೇಕು ಎಂಬುದನ್ನು ಹೀಗೆ ತಿಳಿಸುತ್ತಾರೆ.

"ಪತಿ ಚಾರಿತ್ಯ" ಹೀನ, ವಿಷಯಾಸಕ್ತ ಮತ್ತು ಒಳ್ಳೆಯ ಗುಣಗಳ ಅಭಾವ ಉಳ್ಳವನಾಗಿದ್ದರೂ ಪತ್ನಿಯು ಅವನನ್ನು ದೇವರಂತೆಯೇ ಕಾಣಬೇಕು" (ಮನುಜ–೧೫೪)

"ಸ್ತ್ರೀಯರು ತಮ್ಮ ಪತಿಯ ಆಜ್ಞೆಯನ್ನು ಪಾಲಿಸಬೇಕು. ಇದೇ ಅವರ ಪರಮ ಧರ್ಮವಾಗಿದೆ"(ಯಜ್ಞವಲ್ಕ್ಯ ೧–೧೮)

"ಸ್ತ್ರೀಗೆ ಪತಿಯ ಹೊರೆತಾಗಿ ಬೇರೇ ಲೋಕವು ಇಲ್ಲ. ಯಾವಸ್ತ್ರೀಯು ತನ್ನ ಪತಿಗೆ ವಿರುದ್ದವಾಗಿ ವರ್ತಿಸುತ್ತಾಳೋ, ಅವಳು ಮರಣಾಂತರ ಪತಿಯಲೋಕಕ್ಕೆ ಹೋಗುವುದಕ್ಕೆ ಶಕ್ತಿಳಾಗಿರುವುದಿಲ್ಲ, ಹಾಗಾಗಿಯೇ, ಅವಳು ಎಂದಿಗೂ ಪತಿಯ ವಿರುದ್ದವಾಗಿ ನಡೆಯಬಾರದು(ವಾನಿಷ್ಟ ೧೨–೧೪)'

ಹೀಗೆ ಇರಬೇಕು ಎಂಬ ಸ್ತ್ರೀಯರ ಶೋಷಣೆಗೆ ಮುನ್ನುಡಿಯನ್ನು ಹಾಡುತ್ತದೆ. ಸ್ಮೃತಿ ಗ್ರಂಥಗಳಲ್ಲಿನ ಈ ರೀತಿಯ ಹೇಳಿಕೆಗಳು ಭಾರತೀಯ ಸ್ತ್ರೀಗೆ ಇರಬೇಕಾದ ಎಲ್ಲಾ ಸ್ವತಂತ್ರಗಳನ್ನು ಕಿತ್ತುಕೊಂಡು ಬಿಟ್ಟಿದೆ. ಈ ರೀತಿಯ ಮೌಲ್ಯಗಳು ಇಂದಿಗೂ ಪಾಲಿತವಾಗುತ್ತಿವೆ. ಆದರೆ ಅವುಗಳ ಸ್ವರೂಪ ಮಾತ್ರ ಬೇರೆಯಾಗಿದೆಯಷ್ಟೇ. ಶಾಸ್ತ್ರೋಕ್ತವಾಗಿ ನಡೆದುಕೊಂಡು ಸ್ಮೃತಿಗಳಿಗೆ ಬದ್ದವಾಗಿ ನಡೆಯುತ್ತಿರುವ ಮಹಿಳೆಯರು ಇಂದಿಗೂ ಕಂಡುಬರುತ್ತಿದ್ದಾರೆ. ಆಧುನೀಕರಣದ ಸಂದರ್ಭದಲ್ಲಿ ಸುರಕ್ಷಿತ ಮಹಿಳೆಯರು ಈ ಸ್ಮೃತಿಗಳಿಗೆ ಬದ್ದರಾಗಿಲ್ಲ ಎಂದು ಹೇಳಲಾಗುತ್ತಿದ್ದರೂ ಸಹ, ದಾಸ್ಯದ ಜೀವನವನ್ನು ಸಾಗಿಸುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಪೂರಕ ಎಂಬಂತೆ ಇಂದಿನ ಸಂದರ್ಭದಲ್ಲಿ ಮಹಿಳೆ ಅನುಭವಿಸುತ್ತಿರುವ ಹಿಂಸೆಯೇ ಸಾಕ್ಷಿಯಾಗಿ ನಿಲ್ಲುತ್ತದೆ. [೨೪]

ಕಾನೂನಿನ ಪ್ರಕಾರ ಕೌಟುಂಬಿಕ ಹಿಂಸೆ ಎಂದರೆ ಮಹಿಳೆ ಮೇಲೆ ದಿನನಿತ್ಯ ತನ್ನ ಗಂಡನಿಂದ ಅಥವಾ ಗಂಡನ ಸಂಬಂಧಿಕರಿಂದ ಅಂದರೆ ಅತ್ತೆ, ಮಾವ, ನಾದಿನಿ, ಸಹೋದರ ಇತ್ಯಾದಿಯವರಿಂದ ನಡೆಯುವ ಅಥವಾ ನಡೆಯುತ್ತಿರುವ ದೌರ್ಜನ್ಯವಾಗಿದೆ. ಕೌಟುಂಬಿಕ ಹಿಂಸೆ ಎನ್ನುವಾಗ ಸಾಮಾನ್ಯವಾಗಿ ಕಾನೂನಿನ ಪರಿಭಾಷೆಯೂ ಕೂಡ ವಿವಾಹಿತ ಮಹಿಳೆಯ ಮೇಲಾಗುವ ದೌರ್ಜನ್ಯವನ್ನು ಮುಖ್ಯವಾಗಿ ಪರಿಗಣಿಸುತ್ತದೆ. ವಾಸ್ತವದಲ್ಲಿಯಾದರೆ ಅವಿವಾಹಿತ ಸ್ಥಿತಿಯಲ್ಲಿ, ವಿವಾಹ ಪೂರ್ವದ ಕೌಟುಂಬಿಕ ಸಂದರ್ಭದಲ್ಲಿ ಕೂಡ ಇದು

ತೀವ್ರ ಸ್ವರೂಪದ್ದೇ ಆಗಿರುತ್ತದೆ. ಇಲ್ಲಿ ಮುಖ್ಯವಾಗಿ ಕೌಟುಂಬಿಕ ಹಿಂಸೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸಿಕೊಳ್ಳಲಾಗುತ್ತದೆ. ಮೊದಲನೆಯದಾಗಿ ತಾನು ಹುಟ್ಟಿ ಬೆಳೆದಂತಹ ತವರು ಮನೆಯಲ್ಲಿನ ಹಿಂಸೆ ಹಾಗೂ ಗಂಡನ ಮನೆಯಲ್ಲಿನ ಹಿಂಸೆ ಈ ಎರಡೂ ಕುಟುಂಬಗಳಲ್ಲಿಯೂ ಸಹ ಮಹಿಳೆ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ.

ಕುಟುಂಬಗಳಲ್ಲಿ ಹೆಣ್ಣಿನ ಮೇಲಿನ ಹಿಂಸೆಯು ಭ್ರೂಣಾವಸ್ಥೆಯಲ್ಲಿಯೇ ಆರಂಭವಾಗುತ್ತದೆ. ಹೆಣ್ಣು ಭ್ರೂಣಗಳು ಹಾಗೂ ಹೆಣ್ಣು ಶಿಶು ಹತ್ಯೆಗಳ ಹಂತಗಳನ್ನು ದಾಟಿ ಹೆಣ್ಣು ಮಗುವೊಂದು ಕುಟುಂಬದಲ್ಲಿ ಉಳಿದರೂ, ಆ ಕುಟುಂಬದಲ್ಲಿ ಹೆಣ್ಣು ಮಗುವು ಅದರ ಪೂರ್ವಕವಾದ ಜೀವನವನ್ನು ನಡೆಸುತ್ತದೆ. ಎಂದು ತಿಳಿಯುವುದು ತಪ್ಪು. ಏಕೆಂದರೆ ಆ ಮಗು ಆಹಾರ, ಆರೋಗ್ಯ, ಶಿಕ್ಷಣ, ಕುಟುಂಬದ ದುಡಿಮೆ ಇತ್ಯಾದಿ ಎಲ್ಲಾ ಹಂತಗಳಲ್ಲಿಯೂ ನಿರ್ಲಕ್ಷ್ಯಕ್ಕೆ ಒಳಪಟ್ಟು ಬೆಳೆಯುತ್ತದೆ. ತವರನ್ನು ಹೆಣ್ಣಿನ ಸುಖದ ದಿನಗಳ ಬದುಕಾಗಿ ಗ್ರಹಿಸುವ ಸಮಾಜದಲ್ಲಿಯೇ ಹೆಣ್ಣು ಅಪಮಾನ, ಅಸಹಾಯಕತೆ, ಅನಾಧಾರಗಳ ಬದುಕನ್ನು ನಡೆಸುತ್ತಾಳೆ.

ಕುಟುಂಬದಲ್ಲಿ ಹೆಣ್ಣು ಮಗು ಋತುಮತಿಯಾಗುವುದಕ್ಕಿಂತ ಮೊದಲು ಕೆಲವು ಸಮಸ್ಯೆಗಳನ್ನು ಎದುರಿಸಿದರೆ ಅದರ ನಂತರದ್ದೇ ಬೇರೆ ಬೇರೆ ಸಮಸ್ಯೆಗಳನ್ನು ಎದುರಿಸುತ್ತಾಳೆ. ಋತುಮತಿಯಾಗುವುದಕ್ಕಿಂತ ಮುಂಚಿನ ಸಮಸ್ಯೆಗಳಲ್ಲಿ ಹೆಚ್ಚಿನವು ಅಸಮಾನತೆಯನ್ನು ಕುರಿತಾದವೂ. ತಂದೆ-ತಾಯಿಗಳಿಂದ ಹಿಡಿದು ರಕ್ತ ಸಂಬಂಧಗಳೆಲ್ಲಾ ಗಂಡು ಮಗುವಿನ ಜನನವನ್ನು ಹರ್ಷದಿಂದ, ಸಂಭ್ರಮದಿಂದ ಸ್ವಾಗತಿಸಿದರೆ, ಹೆಣ್ಣು ಮಗುವಿನ ಆಗಮನವನ್ನು ಇಷ್ಟವಿಲ್ಲದೇ ಸಹಿಸುತ್ತಾರೆ. ಈಗಂತೂ ಹುಟ್ಟುವ ಮಗು ಹೆಣ್ಣು ಎಂದು ಮೊದಲೇ ತಿಳಿದರೆ ಗರ್ಭಪಾತ ಮಾಡಿಕೊಳ್ಳುವ ಅಥವಾ ಮಾಡಿಸಿ ಬಿಡುವ ತಂದೆ ತಾಯಂದಿರೇ ಹೆಚ್ಚಾಗುತ್ತಿದ್ದಾರೆ. ಆಹಾರ, ವಿದ್ಯೆಗಳ ವಿಷಯದಲ್ಲಿ ತಾರತಮ್ಯ ತಪ್ಪದು. ಬೇರೆಯವರ ಮನೆಯ ಗಿಡವನ್ನು ತಾವೇಕೆ ಗೊಬ್ಬರ ಹಾಕಿ ಪೋಷಿಸಬೇಕೆಂಬ ಭಾವನೆ ತಂದೆ ತಾಯಿಗಳಲ್ಲಿ ಇರುವುದರಿಂದ ಹೆಣ್ಣುಮಗುವನ್ನು ಕೀಳಾಗಿ ಕಾಣುತ್ತಾರೆ. ಇಷ್ಟೇ ಅಲ್ಲದೆ ಮಕ್ಕಳಿಗೆ ನೀಡುವ ಆಟಿಕೆಗಳು, ತೊಡಿಸುವ ಬಟ್ಟೆ ಬರೆಗಳು, ಅವರಿಗೆ ಕಲಿಸುವ ನಡೆನುಡಿಗಳು, ಇವುಗಳಲ್ಲಿ ಮಾಡುವ ಬೇಧಹೆಣ್ಣು ಮಗುವಿಗೆ ತಾನು ಗಂಡಿಗಿಂತ ಭಿನ್ನ, ಕೀಳು ಎಂಬ ಭಾವನೆಯನ್ನು ಬೆಳೆಸುವಂತಹದು. ಹೀಗಾಗಿ ಹೆಣ್ಣು ಮಗು ಮಾನಸಿಕವಾಗಿ ತುಂಬಾ ನೋವನ್ನು ಅನುಭವಿಸುತ್ತಿರುತ್ತಾಳೆ. ಅನೇಕ ಹೆಣ್ಣು ಮಕ್ಕಳು ತಂದೆ ತಾಯಿಯರಿಂದ ಹೊಡೆಸಿಕೊಳ್ಳುತ್ತಾರೆ. ಆದ್ದರಿಂದ ಮಾನಸಿಕವಾಗಿಯೂ ದೈಹಿಕವಾಗಿಯೂ ನೋವನ್ನು ಅನುಭವಿಸುತ್ತಾರೆ. ಇನ್ನೂ ಮೊದಲ ಮುಟ್ಟು ಹೆಣ್ಣಿನ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿದೆ. ಈ ಸಂದರ್ಭದಲ್ಲಿ ಕೂಡ ಇದು ತೀವ್ರ ಸ್ವರೂಪದ್ದೆ ಆಗಿರುತ್ತದೆ. ಇಲ್ಲಿ ಮುಖ್ಯವಾಗಿ ಕೌಟುಂಬಿಕ ಹಿಂಸೆಯನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ತಾನು ಹುಟ್ಟಿ ಬೆಳೆದಂತಹ ತವರು ಮನೆಯಲ್ಲಿನ ಕೌಟುಂಬಿಕ ಹಿಂಸೆ, ಎರಡನೇದಾಗಿ

ತಾನು ಮದುವೆಯಾದ ನಂತರ ಗಂಡನ ಮನೆಯಲ್ಲಿ ಕೌಟುಂಬಿಕ ಹಿಂಸೆ. ಈ ಎರಡೂ ಕುಟುಂಬಗಳಲ್ಲಿಯೂ ಸಹ ಮಹಿಳೆ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ.

ಈ ಸಂದರ್ಭದಲ್ಲಿ ಆಗುವಂತಹ ಬದಲಾವಣೆಗಳು ಅವಳ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತದೆ. ಅನೇಕ ಸಮುದಾಯಗಳಲ್ಲಿ ಮೈನೆರೆದ ಮೇಲೆ ಶಾಲೆಗೆ ಹೋಗುವುದನ್ನು ಬಿಡಿಸುತ್ತಾರೆ. ಈ ಅವಧಿಯ ಹೆಣ್ಣು ಮಗುವಿಗೆ ಕಠಿಣವಾದ ಕಾಲವಾಗಿದೆ. ಏಕೆಂದರೆ ಎಲ್ಲಾ ಸಾಮಾಜಿಕ, ಧಾರ್ಮಿಕ ಕಟ್ಟಳೆಗಳು ಈ ಹಂತದಲ್ಲಿಯೇ ಹೆಣ್ಣಿನ ಮೇಲೆ ಹೇರಲಾಗುತ್ತದೆ. ಅಷ್ಟೇ ಅಲ್ಲ ಮೆಲ್ಲಗೆ ನಡೆಯಬೇಕು, ಹಾರಿ–ಕುಣಿದು ಓಡಿ ಮಾಡಬಾರದು, ಗಂಡಸರಂತೆ ಕತ್ತರಿಗಾಲಲ್ಲಿ ಕುಳಿತುಕೊಳ್ಳಬಾರದು, ಜೋರಾಗಿ ಮಾತನಾಡಬಾರದು, ಜೋರಾಗಿ ನಗಬಾರದು ಹೀಗೆ ನಾನಾ ವಿಧದಲ್ಲಿ ಅವಳ ಬದುಕಿಗೆ ಚೌಕಟ್ಟನ್ನು ಹಾಕಲಾಗುತ್ತದೆ. ಒಂದು ವೇಳೆ ಋತುಮತಿಯಾದ ನಂತರವೂ ವಿದ್ಯಾಭ್ಯಾಸವನ್ನು ಮುಂದುವರೆಸಿದರೆ ಗಂಡು ಹುಡುಗರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬಾರದು. ಒಂದು ವೇಳೆ ಮಾಡಿಕೊಂಡರೆ ಕುಟುಂಬದಲ್ಲಿ ದಿನಾಲು ಜಗಳಗಳು ಆರಂಭವಾಗುತ್ತವೆ. ಇದರಿಂದಲೂ ಸಹ ಮಾನಸಿಕವಾಗಿ ಬಹಳ ನೋವನ್ನು ಅನುಭವಿಸಬೇಕಾಗುತ್ತದೆ. ಮಗಳು ಏನಾದರೂ ತಪ್ಪು ಎಸಗಿದರೆ ಅದಕ್ಕೆ ಅವಳ ಅಮ್ಮನನ್ನು ಹೊಣೆಗಾರಳನ್ನಾಗಿ ಮಾಡಿ ಅವಳನ್ನು ಶಿಕ್ಷಿಸಲಾಗುತ್ತದೆ. ಏಕೆಂದರೆ ಮಕ್ಕಳ ಬೆಳವಣಿಗೆಯ ಸಂಪೂರ್ಣ ಜವಾಬ್ದಾರಿಯನ್ನು ಅವಳೇ ಹೊತ್ತಿರುತ್ತಾಳೆ. ನಮ್ಮ ಸಮಾಜ ತಾಯಿಯನ್ನು ಆರಾಧನೆಯ ನೆಲೆಯಲ್ಲಿ ಕಾಣುತ್ತಿದೆ. ಸರ್ವ ನಮಸ್ಕಾರಗಳಿಗೂ ಮುಂಚಿತವಾಗಿ "ಮಾತೃದೇವೋಭವ" ಎಂದು ತಾಯಿಗೆ ನಮಸ್ಕರಿಸಲಾಗುತ್ತದೆ. "ತಾಯಿಗಿಂತ ಬಂದುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ" ಎಂಬ ಗಾದೆಯೊಂದೇ "ಮಾತೇಯಿಂ ಹಿತವರಲ್ಲ" ಎಂಬ ಸರ್ವಜ್ಞನ ನುಡಿ, ವ್ಯಕ್ತಿಯ ಜೀವನದಲ್ಲಿ ತಾಯಿಗಿರುವ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಇಷ್ಟೊಂದು ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ. ಆದರೆ ಇದು ಸಭೆ ಸಮಾರಂಭಗಳಲ್ಲಿ ಮಾತ್ರ ಹೇಳಲಿಕ್ಕೆ ಸೀಮಿತವಾಗಿರುತ್ತದೆ. ವಾಸ್ತವದಲ್ಲಿ ಇದೆಲ್ಲವೂ ಸುಳ್ಳು, ಏಕೆಂದರೆ ಒಂದು ಕುಟುಂಬದಲ್ಲಿ ಎಲ್ಲಾ ಆಗು ಹೋಗುಗಳಿಗೆ ತಾಯಿಯನ್ನೇ ಗುರಿಯಾಗಿಸಿ ಅವಳನ್ನು ಅನೇಕ ಬಗೆಯಲ್ಲಿ ಹಿಂಸಿಸುತ್ತಾರೆ. ಪೋಷಣೆಯ ಜವಾಬ್ದಾರಿ ತಾಯಿಯ ಮೇಲೇ ಇರುತ್ತದೆ. ಹಾಗಾಗಿ ಮಕ್ಕಳು ಅದರಲ್ಲಿಯೂ ಹೆಣ್ಣು ಮಕ್ಕಳು ಏನಾದರೂ ತಪ್ಪು ಮಾಡಿದರೆ ಮೊದಲು ತಾಯಿಯನ್ನೇ ಆರೋಪಿಯನ್ನಾಗಿ ಮಾಡಲಾಗುತ್ತದೆ. ಹೆಣ್ಣು ಮಗು ಋತುಮತಿಯಾಗಿ ೨–೩ ವರ್ಷಗಳಲ್ಲಿಯೇ ಅವಳಿಗೆ ಮದುವೆಯಾಗಿ ಬಿಡಬೇಕು ಎಂಬ ಆಲೋಚನೆಗಳು ಈ ತಂದೆ ತಾಯಿಯದ್ದಾಗಿರುತ್ತದೆ. ಮದುವೆಯಾಗುವುದು ತಡವಾದರೆ ಕುಟುಂಬದಲ್ಲಿ ದಿನಾಲು ಬೈಸಿಕೊಳ್ಳುವುದು ಅವಳಿಗೆ ತಪ್ಪುವುದಿಲ್ಲ. ಹಾಗೆಯೇ ಮನೆಯಲ್ಲಿ ನಡೆಯುವ ಎಲ್ಲಾ ಅನಿಷ್ಟಗಳಿಗೆ ಅವಳನ್ನೇ ದೂಷಿಸುತ್ತಾರೆ. ಅವಳು ಪಕ್ಕದ ಮನೆಯವರೊಂದಿಗೆ ಚೆನ್ನಾಗಿ ಮಾತನಾಡುವಂತಿಲ್ಲ. ಒಬ್ಬಂಟಿಯಾಗಿ ಎಲ್ಲಿಗೂ ಹೋಗುವಂತಿಲ್ಲ. ಹೀಗೇನಾದರೂ ಮಾಡಿದರೆ ವಯಸ್ಸಿಗೆ ಬಂದ ಹುಡುಗಿ ಹಾಗೆಲ್ಲಾ

ಮಾಡಬಾರದು, ಹಾಗೆಲ್ಲ ಮಾಡಿದರೆ ಜನ ಏನೆಂದುಕೊಳ್ಳುತ್ತಾರೆ ಎಂದು ಬೈಯುತ್ತಾರೆ. ಮದುವೆಯ ವಯಸ್ಸು ದಾಟಿದರಂತೂ ಮಗಿದೇ ಹೋಯಿತು ಅವಳ ಜೀವನ ನರಕಮಯವಾಗಿ ಬಿಡುತ್ತದೆ. ಇವಳು ಯಾವಾಗ ನಮ್ಮ ಮನೆಯಿಂದ ತೊಲಗುತ್ತಾಳೋ, ಇವಳನ್ನು ಹೇಗೆ ಖರ್ಚು ಮಾಡುವುದು, ಇವಳನ್ನು ಮದುವೆ ಮಾಡಿಕೊಟ್ಟರೆ ನಮಗೆ ದೊಡ್ಡ ಭಾರ ಇಳಿಯುತ್ತದೆ. ಇವಳು ಮನೆಯಲ್ಲಿ ಇದ್ದಷ್ಟು ದಿನ ನಮಗೆ ಕಷ್ಟಗಳು ತಪ್ಪಲ್ಲ ಹೀಗೆ ನಾನಾ ರೀತಿಯ ಚುಚ್ಚು ಮಾತುಗಳಿಂದ ಹಿಯ್ಯಾಳಿಸುತ್ತಲೇ ಇರುತ್ತಾರೆ.

ಕುಟುಂಬದಲ್ಲಿ ಒಂದು ಹೆಣ್ಣು ಮಗು ಮದುವೆಯಾಗದೇ ಬಹಳಷ್ಟು ದಿನ ಇದ್ದರೆ ಅದು ಆ ಕುಟುಂಬಕ್ಕೆ ಒಂದು ರೀತಿಯ ಅವಮಾನಕರವಾದ ಸಂಗತಿಯಾಗಿರುತ್ತದೆ. ಹಾಗಾಗಿ ಮನೆಯಲ್ಲಿ ಎಷ್ಟೇ ಕಷ್ಟ ಬರಲಿ, ಮೊದಲು ಮಗಳ ಮದುವೆ ಮಾಡಿಕೊಟ್ಟು ಬಿಡುತ್ತಾರೆ. ಇದು ಎಲ್ಲಾ ಸಮುದಾಯಗಳ ಕುಟುಂಬ ವ್ಯವಸ್ಥೆಯಲ್ಲಿಯೂ ಕಂಡುಬರುವಂತಹ ಸಾಮಾನ್ಯ ವಿಷಯವಾಗಿಬಿಟ್ಟಿದೆ. ಹೆಣ್ಣು ಮಗುವನ್ನು ಒಂದು ಮಾರಾಟದ ವಸ್ತುವನ್ನಾಗಿ ಅವಳ ಎಲ್ಲಾ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಬಿಟ್ಟಿರುತ್ತಾರೆ. ಹೀಗಾಗಿ ತನ್ನ ಸ್ವಂತ ಕುಟುಂಬದಲ್ಲಿಯೇ ಮಹಿಳೆ ಸಾಕಷ್ಟು ಹಿಂಸೆಗಳನ್ನು ಅನುಭವಿಸುತ್ತಲೇ ಬಂದಿದ್ದಾಳೆ. ಮತ್ತೆ ಕೆಲವು ಕುಟುಂಬಗಳಲ್ಲಿ ಕುಡುಕ ತಂದೆಯಿಂದ ಮಕ್ಕಳು ತುಂಬಾ ಹಿಂಸೆಯನ್ನು ಅನುಭವಿಸುತ್ತಾಳೆ. ಬಹಳ ಪ್ರಮುಖ ವಿಷಯವೆಂದರೆ ಪ್ರಸ್ಥುತ ಸಂದರ್ಭದಲ್ಲಿ ಹೆತ್ತ ತಂದೆಯೇ ಮಕ್ಕಳಿಗೆ ಲೈಂಗಿಕವಾಗಿ ಕಿರುಕುಳವನ್ನು ಕೊಡುತ್ತಿರುವ ಪ್ರಸಂಗಗಳು ನಡೆಯುತ್ತಿವೆ. ಪುರುಷ ವ್ಯವಸ್ಥೆ ತಾನೇ ನಿರ್ಮಿಸಿಕೊಂಡಿರುವ ಈ ವ್ಯವಸ್ಥೆಯ ಮೌಲ್ಯಗಳಿಗೆ ಅನುಗುಣವಾಗಿಯೂ ಜೀವನ ಸಾಗಿಸುತ್ತಿಲ್ಲ. ಹಾಗಾಗಿ ಈ ರೀತಿ ಲೈಂಗಿಕ ಕಿರುಕುಳಗಳನ್ನು ಅನುಭವಿಸುತ್ತಿರುವ ಮಹಿಳೆಯ ಮುಂದಿನ ಬದುಕು ಹೇಳಲು ಸಾಧ್ಯವಾಗಿದೆ. ತಂದೆಯು ಹೆತ್ತ ಮಗಳ ಮೇಲೆಯ ಅತ್ಯಾಚಾರ ಮಾಡುತ್ತಿರುವಂತಹ ಘಟನೆಗಳು ಇತ್ತೀಚ್ಚೆಗಂತೂ ಹೆಚ್ಚಾಗುತ್ತಲೇ ಇವೆ. ಈ ರೀತಿಯ ಘಟನೆಗಳಿಂದಲೂ ಕೂಡ ಮಹಿಳೆ ತನ್ನ ಸ್ವಂತ ಕುಟುಂಬದಲ್ಲಿಯೇ ಹಲವಾರು ರೀತಿಯಲ್ಲಿ ಹಿಂಸೆಯನ್ನು ಅನುಭವಿಸುತ್ತಳೇ ಇದ್ದಾಳೆ.

ಎರಡನೇಯದಾಗಿ ಮದುವೆಯ ನಂತರದಲ್ಲಿನ ಹಿಂಸೆಗಳು, ಮದುವೆ ಎನ್ನುವ ಸಂಸ್ಥೆಯಿಂದ ತವರಿಗೆ ವಿದಾಯ ಹೇಳಿ ಗಂಡನ ಮನೆಯನ್ನು ಪ್ರವೇಶಿಸಿದ ನಂತರ ಮಹಿಳೆ ಕೌಟುಂಬಿಕ ಹಿಂಸೆಯ ಇನ್ನೊಂದು ಮುಖವನ್ನು ಕಾಣುತ್ತಾಳೆ. ಕೌಟುಂಬಿಕ ಜವಾಬ್ದಾರಿಗಳನ್ನು ಗ್ರಹಿಸಲಾರದ ಗ್ರಹಿಸಿದರೂ ಹೊರಲಾರದ ಬಾಲ್ಯವು ಗಂಡನ ಮನೆಯಲ್ಲಿ ಗಂಡ, ಅತ್ತೆ, ಮಾವ, ನಾದಿನಿ ಮತ್ತು ಅವರ ಸಂಬಂಧಿಕರು ಹೀಗೆ ಮುಂತಾದವರಿಂದ ನಾನಾ ರೀತಿಯಲ್ಲಿ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ. ಕುಡಿತಕ್ಕೆ ದಾಸನಾದ ಗಂಡನಿದ್ದರೆ ಆ ಕುಟುಂಬದಲ್ಲಿ ಜಗಳಗಳು ಸಾಮಾನ್ಯವಾಗಿ ಇರುತ್ತವೆ. ಇದು ಕೆಳ ವರ್ಗಗಳ ಕುಟುಂಬಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಮೇಲ್ವರ್ಗದಲ್ಲಿನ ಕುಟುಂಬಗಳಲ್ಲಿ ಪುರುಷರು ಜಗಳವಾಡಿದರೂ ಸಹ ಅದು ಸಮಾಜಕ್ಕೆ ತಿಳಿದು ಬರುವುದಿಲ್ಲ. ಅಲ್ಲಿ ಮಹಿಳೆ ಮಾನಸಿಕವಾಗಿ ಬಹಳ ಹಿಂಸೆಯನ್ನು ಅನುಭವಿಸುತ್ತಿರುತ್ತಾಳೆ.

ಆದರೆ ಆ ಹಿಂಸೆಯನ್ನು ಯಾರಿಗೂ ಹೇಳದೇ ತನ್ನಲ್ಲಿಯೇ ಮುಚ್ಚಿಟ್ಟುಕೊಂಡು ಬಿಡುತ್ತಾಳೆ. ಇದಕ್ಕೆ ಕಾರಣ ಮೇಲ್ವರ್ಗದ ಮನೆತನದ ಗೌರವ, ಇದಕ್ಕೆ ವಿರುದ್ಧವಾದ ಸನ್ನಿವೇಶಗಳು ಕಂಡುಬರುತ್ತವೆ, ಗಂಡ ಕುಡಿದು ಬಂದು ದಿನಾಲು ಹೊಡೆಯುವುದು, ಬೈಯುವುದು, ಸಾಮಾನ್ಯವಾಗಿರುತ್ತದೆ. ಹಾಗೆಯೇ ಕುಟುಂಬದಲ್ಲಿ ಗಂಡ–ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗಲು ಪ್ರಾರಂಭಿಸಿದರೆ ಆವಾಗ ಗಂಡನಾದವನು ತನ್ನ ದುಡಿತದಿಂದ ಬಂದ ಕೂಲಿಯನ್ನು ಮನೆಗೆ ಕೊಡುವುದನ್ನು ನಿಲ್ಲಿಸಿಬಿಡುತ್ತಾನೆ. ಅನಿವಾರ್ಯವಾಗಿ ಹೆಂಡತಿಯೇ ಮನೆಯ ಖರ್ಚಿಗೆ ತನ್ನ ಕೂಲಿಯನ್ನು ಬಳಸುತ್ತಾಳೆ. ಗಂಡನಾದವನು ತಾನು ದುಡಿದ ಹಣದಿಂದ ಕುಡಿಯುವುದು, ಜೂಜಾಡುವುದು, ಹೀಗೆ ನಾನಾ ವಿವಿಧ ಕೆಟ್ಟ ಚಟುವಟಿಕೆಗಳಿಗೆ ಬಲಿಯಾಗುತ್ತಾನೆ. ಕೆಲವು ಸಂದರ್ಭಗಳಲ್ಲಿ ಅವನು ಕೆಲಸಕ್ಕೂ ಹೋಗದೇ ಹಣ ಕೊಡುವಂತೆ ಹೆಂಡತಿಗೆ ಕಿರುಕುಳವನ್ನು ಕೊಡುತ್ತಿರುವ ಸಂಗತಿಗಳೂ ಇವೆ.

ದೈಹಿಕ ಹಿಂಸೆಯನ್ನು ಕಂಡುಹಿಡಿಯುವುದು ಸುಲಭ. ಆದರೆ ಮಾನಸಿಕ ಹಿಂಸೆಯನ್ನು ಕಂಡುಹಿಡಿಯುವುದು ಕಷ್ಟ. ಕುಟುಂಬದಲ್ಲಿನ ಗಂಡ ವಿವಾಹ ಬಾಹಿರ ಸಂಬಂಧವನ್ನು ಹೊಂದಿದ್ದರೆ, ಕುಡಿತದ ಚಟಕ್ಕೆ ದಾಸನಾಗಿದ್ದರೆ, ದುಡಿದ ಹಣವನ್ನು ಮನೆಯ ಸಂಸಾರಕ್ಕೆ ಕೊಡದಿದ್ದರೆ ಹೀಗೆ ನಾನಾ ಕಾರಣಗಳಿಂದ ಮಹಿಳೆ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ. ಭಾರತೀಯ ನಾರಿಗೆ ಎಷ್ಟೊಂದು ಪತಿಭಕ್ತಿ (ಇಲ್ಲಿ ಪತಿಭಕ್ತಿ ಎಂಬುದೂ ಸಹ ಪುರುಷ ಪ್ರಧಾನ ಮೌಲ್ಯದಲ್ಲಿನ ಒಂದು ಶೋಷಣೆಯ ವಿಧಾನ) ಇರುತ್ತದೆ ಎಂದರೆ, ಗಂಡ ಕುಡಿದು ಎಲ್ಲಿಬೇಕೆಂದರಲ್ಲಿ ಬಿದ್ದಿದ್ದರೂ ಸಹ ಅವನನ್ನು ಮನೆಗೆ ಕರೆತರುತ್ತಾಳೆ. ಆದರೆ ಗಂಡನನ್ನು ಮನೆಗೆ ಕರೆತಂದರೂ ಸಹ ಗಂಡನಿಂದ ಬೈಸಿಕೊಳ್ಳುವುದು ತಪ್ಪುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಹೊಡೆಯಿಸಿಕೊಳ್ಳುತ್ತಾಳೆ ಕೂಡ. ಇಷ್ಟೆಲ್ಲಾ ನೋವನ್ನು ದಿನಾಲು ಅನುಭವಿಸುತ್ತಲೇ ಇರುತ್ತಾಳೆ. ಏನೂ ಅರಿಯದ ವಯಸ್ಸಿನಲ್ಲಿ ಹೆಣ್ಣು ಮಗುವಿಗೆ ಬಾಲ್ಯವಿವಾಹ ಮಾಡಿ ಅವಳು ಗಂಡನನ್ನು ಕಳೆದುಕೊಂಡರೆ "ಮಗನನ್ನು ನುಂಗಿಕೊಂಡವಳು" ಎಂದು ಅತ್ತೆ ಮಾವಂದಿರಿಂದ ಪಟ್ಟವನ್ನು ಕಟ್ಟಿಕೊಳ್ಳುತ್ತಾಳೆ. ಹಾಗೆಯೇ ಅವಳು ಇನ್ನೊಂದು ಮದುವೆಯಾಗುವಂತಿಲ್ಲ. ಸಾಯುವವರೆಗೂ ಅಲ್ಲಿಯೇ ಗಂಡನ ಮನೆಯಲ್ಲಿ ಇರಬೇಕು ಅಥವಾ ತವರು ಮನೆಗೆ ಹೋಗಬೇಕು ಎನ್ನುವಂತಹ ಗೊಂದಲದಲ್ಲಿ ತೊಳಲಾಡುತ್ತಿರುತ್ತಾಳೆ. ವಿಧವೆಯಾದವಳು ಯಾವುದೇ ಮಂಗಳಕಾರ್ಯದಲ್ಲಿ ಭಾಗವಹಿಸಬಾರದು ಎಂಬುದು ಹಿಂದೂ ಸಾಂಪ್ರದಾಯವಾದ್ದರಿಂದ ಅವಳು ಅವುಗಳಿಂದ ದೂರವಿರಬೇಕಾಗುತ್ತದೆ. ಹೀಗೆ ವಿಧವೆಯಾದವಳು ಕುಟುಂಬದಲ್ಲಿ ನಾನಾ ವಿಧದಲ್ಲಿ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ.

ಕೆಲವು ಕುಟುಂಬಗಳಲ್ಲಿ ಮಹಿಳೆಯರು ತಮಗೆ ಮಕ್ಕಳಾಗಲಿಲ್ಲವೆಂದು ದಿನಾಲೂ ಕಿರುಕುಳವನ್ನು ಎದುರಿಸುತ್ತಿದಾರೆ. ಅವಳನ್ನು "ಗೊಡ್ಡಿ" ಏನೂ ಕೆಲಸಕ್ಕೆ ಬಾರದವಳು, ಒಂದು ಮಗುವನ್ನು ಹೆರುವುದು ಆಗುತ್ತಿಲ್ಲ; ಹೀಗೇ ನಾನಾ ವಿಧದಲ್ಲಿ ಮಹಿಳೆಯನ್ನೇ ಬೈಯಲಾಗುತ್ತದೆ. ಆದರೆ ಮಹಿಳೆ ನಿಸರ್ಗ ನೀಡಿದ

ವಿಶಿಷ್ಟವಾದ ಕೊಡುಗೆ ಎಂದರೆ ಫಲವಂತಿಕೆ ಆಕೆಗೆ ಸಮಾಜದಲ್ಲಿಯಾಗಲಿ ಅಥವಾ ಕುಟುಂಬದಲ್ಲಿ ಯಾಗಲಿ ಒಂದು ಸ್ಥಾನವೇನಾದರೂ ದೊರೆತಿದ್ದರೆ ಆ ಕಾರಣದಿಂದಾಗಿಯೇ ಹೆಣ್ಣಿನ ಗರ್ಭಧಾರಣ ಶಕ್ತಿಗೂ ಭೂಮಿಯ ಸಸ್ಯಧಾರಣ ಶಕ್ತಿಗೂ ಸಂಬಂಧ ಕಲ್ಪಿಸಲಾಗುತ್ತದೆ. "ಗದ್ದೆಗೆ ಹಸಿರು ಚಂದ ಹೆಂಗಸಿಗೆ ಬಸಿರು ಚೆಂದ" ಎಂಬ ಗಾದೆ ಮಾತು ಇದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಹಾಗೆಯೇ ಗ್ರಾಮೀಣ ಪ್ರದೇಶಗಳಲ್ಲಿ ಸಂತಾನವಿಲ್ಲದವರಿಗೆ ನಾಟಿ ಔಷಧಿಯನ್ನು ಕೊಡುವುದು ಕಂಡುಬರುತ್ತದೆ. ಇಂತಹ ಪ್ರಯತ್ನಗಳು ಇವೆ. ಹಾಗೆಯೇ ವಿಫಲವಾಗಿರುವ ಪ್ರಯತ್ನಗಳು ಇವೆ. ಮಹಿಳೆ ಒಂದು ಸಂತಾನಕ್ಕಾಗಿ ಎಷ್ಟೊಂದು ರೋಧಿಸುತ್ತಾಳೆ ಎಂದರೆ ಅದನ್ನು ಜನಪದ ಗೀತೆಗಳು ಚೆನ್ನಾಗಿ ಕಟ್ಟಿಕೊಡುತ್ತಿವೆ.

"ಕಂಡಕಂಡ ಕಲ್ಲಿಗೆಲ್ಲ ಕೈ ಮುಗಿದಾಯ್ತು
ತಿನ್ನಬಾರದ ಮದ್ದನ್ನೆಲ್ಲ ತಿಂದದ್ದಾಯ್ತು
ಮಾಡಬಾರದ ಮಾಟ ಮಾಡಿದ್ದಾಯ್ತು
ಆದರೂ ಶಿವ ಒಂದು ಸಂತಾನ ಕೊಡಲಿಲ್ಲ."

ಇಷ್ಟೆಲ್ಲಾ ಚಿಕಿತ್ಸೆಗಳನ್ನು ಪಡೆದರೂ ಸಹ ಒಂದು ಮಗುವನ್ನು ಕರುಣಿಸಲಿಲ್ಲ. ಎಂದು ಶಿವನಲ್ಲಿ ಮೊರೆಹೋಗುತ್ತಾಳೆ. ಹಾಗೆಯೇ ಕುಟುಂಬದಲ್ಲಿ "ಬಂಜೆ" "ಗೊಡ್ಡಿ" ಎಂಬ ಕುಶಬ್ದಗಳಿಂದ ತಪ್ಪಿಸಿಕೊಳ್ಳಲು '

"ಕಂದನ ಕುಡು ಶಿವನೆ ಬಂದನ ಬಿಡಲಾರೆ
ಹಂಗಿನ ಬಾನ ಉಣಲಾರೆ ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ"

ಎಂದು ತನ್ನ ಅಳಲನ್ನು ತೋಡಿಕೊಳ್ಳುತ್ತಿರುತ್ತಾಳೆ. ಮಕ್ಕಳಿಲ್ಲದ ಮಹಿಳೆ ಸಮಾಜದ ಕ್ರೂರ ದೃಷ್ಟಿಗೆ ಬೀಳಬೇಕಾಗುತ್ತದೆ. ಸಂತಾನ ಹೀನತೆಗೆ ಗಂಡಿನ ದೈಹಿಕ ದೋಷವಿದ್ದ ಸಂದರ್ಭದಲ್ಲಿಯೂ ಪುರುಷ ಪ್ರಧಾನ ಸಮಾಜ ಅದನ್ನು ಮುಚ್ಚಿ ಹಾಕಿ ಆ ದೋಷವನ್ನು ಹೆಣ್ಣಿನ ತಲೆಗೆ ಕಟ್ಟಿ ಆಕೆಯನ್ನು ನಿಕೃಷ್ಟವಾಗಿ ಕಾಣಲಾಗುತ್ತಿದೆ. ಇದರಿಂದ ಮಹಿಳೆ ಅತಿ ಹೆಚ್ಚಿನ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ ಎಂಬುದು ವೇದ್ಯವಾಗುತ್ತದೆ.

ಇನ್ನು ಬರೀ ಹೆಣ್ಣು ಮಕ್ಕಳು ಜನಿಸಿದರಂತೂ ಅವಳಿಗೆ ಕೊಡುವಂತಹ ಕಿರುಕುಳವನ್ನು ಹೇಳತೀರದು. ಏಕೆಂದರೆ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಪುರುಷನಿಗೆ ಅತ್ಯಂತ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತದೆ. ಅವನನ್ನು ವಂಶೋದ್ಧಾರಕನೆಂದೇ ಬಿಂಬಿಸಲಾಗಿದೆ. ಗಂಡು ಮಗನಿಂದಲೇ ವಂಶ ಬೆಳೆಯುತ್ತದೆ ಹಾಗೂ ತಾವು ಸತ್ತ ನಂತರ ಚಿತೆಗೆ ಬೆಂಕಿ ಹಚ್ಚುವವನು ಮಗನೇ ಆಗಿರಬೇಕು ಎಂಬುದು ತಂದೆ ತಾಯಿಗಳ ಆಶಯವಾಗಿರುತ್ತದೆ. ಹಾಗಾಗಿ ಗಂಡು ಮಗುವಿಗೆ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತದೆ. ಆದರೆ ಮಹಿಳೆ ಗಂಡು ಮಗು ಹೇರುವುದು ಅಥವಾ ಹೆಣ್ಣು ಮಗು

ಹೇರುವುದು ಅವಳ ಕೈಯಲ್ಲಿಲ್ಲ. ಇದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಆದರೆ ಇದರ ಬಗ್ಗೆ ನಮ್ಮ ಜನಕ್ಕೆ ಅರಿವೇ ಇಲ್ಲದಾಗಿದೆ. ಒಂದು ಕುಟುಂಬಕ್ಕೆ ಗಂಡು ಮಗು ಎಷ್ಟೊಂದು ಮುಖ್ಯ ಎಂಬುದನ್ನು ಜನಪದ ಗೀತೆಗಳು ತುಂಬಾ ಚೆನ್ನಾಗಿ ಚಿತ್ರಿಸುತ್ತವೆ.

"ಬಾಲಕರಿಲ್ಲದ ಬಾಲೆದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ ಬಾಳೆಲೆಯ
ಹಾಸುಂಡು ಬೀಸಿ ಒಗೆದಂಗ."

ಇಲ್ಲಿ ಗಂಡು ಮಗುವಿಗೆ ಜನ್ಮನೀಡದ್ದಿದರೆ ಬಾಡಿಗಿ ಎತ್ತು ದುಡಿದಂಗ ಮತ್ತು ಬಾಳೆಲೆಯ ರೀತಿ ಆವಳ ಬಾಳು ಆಗುತ್ತದೆ. ಎಂಬುದನ್ನು ತಿಳಿಸುತ್ತದೆ. ಇಲ್ಲಿ ಮುಖ್ಯವಾಗಿ ನಾವು ಗಂಡುಮಗುವನ್ನು ಹೆರದಿದ್ದರೆ ಸಮಾಜದಿಂದ ಮತ್ತು ಕುಟುಂಬದಿಂದ ಯಾವರೀತಿ ದೂಷಿಸಲ್ಪಟ್ಟು ಹಿಂಸೆಗೆ ಒಳಗಾಗುತ್ತಿದ್ದಾಳೆ ಎಂಬುದನ್ನು ತಿಳಿಯಬಹುದಾಗಿದೆ.[೨೫]

ಪ್ರಸ್ತುತ ಸಂದರ್ಭದಲ್ಲಿ ಹೆಚ್ಚಾಗಿ ಪ್ರೇಮ ವಿವಾಹಗಳು ನಡೆಯುತ್ತಿರುವುದು ನಮಗೆಲ್ಲಾ ತಿಳಿದಿರುವ ವಿಷಯ. ಈ ಪ್ರೇಮ ವಿವಾಹಗಳು ಹೆಚ್ಚಿನ ಅಂತರ್ಜಾತಿಯ ವಿವಾಹಗಳಾಗಿರುತ್ತವೆ. ಈ ವಿವಾಹಗಳು ತಂದೆ ತಾಯಿಯರನ್ನು ಧಿಕ್ಕರಿಸಿ ಮಾಡಿಕೊಂಡ ವಿವಾಹಗಳಾಗಿರುತ್ತವೆ. ಹೆಚ್ಚಿನ ಪ್ರೇಮ ವಿವಾಹಗಳು ಮುರಿದು ಬಿದ್ದಿರುವಂತಹ ಘಟನೆಗಳು ನಡೆಯುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಅವರಲ್ಲಿನ ಸರಿಯಾದ ಹೊಂದಾಣಿಕೆ ಇಲ್ಲದಿರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಹುಡುಗನ ತಂದೆ ತಾಯಿಗಳು ವಲ್ಲದ ಮನಸ್ಸಿನಿಂದ ಅವರಿಬ್ಬರನ್ನು ಮನೆಗೆ ಸೇರಿಸಿಕೊಂಡರೂ ಸಹ ಆ ಕುಟುಂಬದಲ್ಲಿ ಹುಡುಗಿಗೆ ಅತ್ತೆ ಮಾವಂದಿರಿಂದ, ನಾದಿನಿಯರಿಂದ ಪ್ರತಿನಿತ್ಯವೂ ಒಂದಲ್ಲಾ ಒಂದು ಕಾರಣಕ್ಕಾಗಿ ಜಗಳಗಳು ನಡೆಯುತ್ತಲೇ ಇರುತ್ತವೆ.ಏಕೆಂದರೆ ತಂದೆ ತಾಯಂದಿರಿಗೆ ತಮ್ಮ ಮಗನ ಭವಿಷ್ಯದ ಮೇಲೆ ತುಂಬಾ ನಿರೀಕ್ಷೆಗಳು ಇರುತ್ತವೆ.ಹಾಗಾಗಿ ಆ ನಿರೀಕ್ಷೆಗಳೆಲ್ಲವನ್ನು (ಇಲ್ಲಿ ನಿರೀಕ್ಷೆಗಳೂ ಕೂಡ ಪುರುಷ ವ್ಯವಸ್ಥೆಯ ಮೌಲ್ಯಗಳಾಗಿರುತ್ತವೆ.) ಹುಸಿ ಮಾಡಿಬಿಡುವ ಈ ಪ್ರೇಮ ವಿವಾಹಗಳು ಮಹಿಳೆಯ ಹಿಂಸೆಗೆ ಮತ್ತೊಂದು ದಾರಿಯನ್ನು ಮಾಡಿಕೊಡುತ್ತವೆ. ಹಾಗಾಗಿ ಇಂದು ಹೆಚ್ಚಿನ ಪ್ರೇಮ ವಿವಾಹಗಳು ವಿಚ್ಛೇದನವನ್ನು ಮಾಡಿಕೊಳ್ಳುತ್ತವೆ. ಇಲ್ಲಿಯೂ ಸಹ ಮಹಿಳೆ ಹಿಂಸೆಯಿಂದ ಹೊರಬರಲಾಗುತ್ತಿಲ್ಲ.

ದಿನನಿತ್ಯ ಪತ್ರಿಕೆಗಳಲ್ಲಿ "ಹೆಂಡತಿಯ ಶೀಲ ಶಂಕಿಸಿದ ಗಂಡನಿಂದ ಹೆಂಡತಿಯ ಸಾವು" ಎಂಬಂತಹ ಸುದ್ದಿಗಳನ್ನು ಕೇಳುತ್ತಿರುತ್ತೇವೆ. ಪಾತಿವ್ರತ್ಯ ಶ್ರೇಷ್ಠ ಮೌಲ್ಯವಾಗಿರುವ ಭಾರತೀಯ ಸಂಸ್ಕೃತಿಯಲ್ಲಿ ಅದು ಪಕ್ಷಪಾತಿಯಾದದ್ದು ಹೌದು. ಬಹುಪತ್ನಿತ್ವವು ಕಾನೂನು ಬಾಹಿರವಾದರೂ ಅದನ್ನು ಒಪ್ಪಿಕೊಂಡಿರುವ ನಮ್ಮ ಸಮಾಜದಲ್ಲಿ ಹೆಣ್ಣಿನ ಶೀಲಕ್ಕೆ ಮಾತ್ರ ದೊಡ್ಡ ಬೇಲಿಯನ್ನು ಹಾಕಲಾಗಿದೆ. ಈ ಲಕ್ಷ್ಮಣ ರೇಖೆಯನ್ನು ದಾಟಿದವರಿಗೆ ಮತ್ತು ದಾಟಿದ ಬಗ್ಗೆ ಅನುಮಾನ ಮೂಡಿದ ತಕ್ಷಣ ಅವಳನ್ನು ಕೊಚ್ಚಿ ಹಾಕಿದ ಸಂದರ್ಭಗಳು

ಎಷ್ಟೋ ಇವೆ. ಹಾಗೆಯೇ ಅಂತರ್ಜಾತೀಯ ವಿವಾಹಗಳನ್ನು ಮಾಡಿಕೊಂಡು ಎಳೆಯರನ್ನು ಕೊಚ್ಚಿಹಾಕಿದ ಸಂದರ್ಭಗಳು ಹಲವಾರಿವೆ. ನೆರೆಯ ಪಾಕಿಸ್ತಾನದಲ್ಲಿ ನಡೆಯುತ್ತಿದ್ದ ಮರ್ಯಾದ ಹತ್ಯೆಗಳು ಭಾರತದಲ್ಲಿಯೂ ಕಾಣಿಸಿಕೊಳ್ಳುತ್ತಿವೆ. ಜಾತಿ, ಧರ್ಮ, ಕುಲ, ಗೋತ್ರ ಮುಂತಾದವುಗಳು ಇಂದಿಗೂ ಆಚರಣೆಯಲ್ಲಿದ್ದು ಇವುಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಹತ್ಯೆಗಳು ಸಂಭವಿಸುವುದು ಕಂಡುಬರುತ್ತದೆ. "ಕಳೆದ ಏಪ್ರಿಲ್ ೯ರಿಂದಜೂನ್ ೨೦ರ ತನಕ ಮರ್ಯಾದೆ ಹತ್ಯೆಯ ೧೯ ಪ್ರಕರಣಗಳು ವರದಿಯಾಗಿವೆ. ಅದರಲ್ಲಿಯೂ ಉತ್ತರಭಾರತದಲ್ಲಿ ಈ ಮರ್ಯಾದೆ ಹತ್ಯೆಗಳು ಹೆಚ್ಚಾಗಿ ಸಂಭವಿಸಿವೆ. ಹಾಗಾಗಿ ಹೆಣ್ಣಿನ ಜೀವನ ಪುರುಷ ಪ್ರಧಾನ ಮೌಲ್ಯಗಳ ಅಂಕೆಯಲ್ಲಿ ಸಿಲುಕಿಕೊಂಡು ನರಳಾಡುತ್ತಿದೆ ಎಂದು ಹೇಳಬಹುದಾಗಿದೆ."[೨]

ಆಧುನಿಕತೆಯ ಪ್ರವೇಶದೊಂದಿಗೆ ಹಳ್ಳಿಗಳೆಲ್ಲವೂ ನಗರಗಳತ್ತ ಧಾವಿಸಲಾರಂಭಿಸಿವೆ. ಹಾಗಾಗಿ ಕುಟುಂಬಗಳಲ್ಲಿಯ ಹಿಂಸೆಯ ಸ್ವರೂಪಗಳು ಬೇರೆಯ ರೂಪವನ್ನು ಪಡೆಯಲಾರಂಭಿಸಿವೆ. ಇಂದು ವಿದ್ಯಾವಂತ ಕುಟುಂಬಗಳಲ್ಲಿಯೂ ಕೂಡ ವರದಕ್ಷಿಣೆಯಂತ ಕಿರುಕುಳಗಳು ಹೆಚ್ಚಾಗುತ್ತಲೇ ಇವೆ. ಹಾಗೆಯೇ ಅತ್ಯಾಚಾರ, ಲೈಂಗಿಕ ಕಿರುಕುಳಗಳೂ ಸಹ ಮಹಿಳೆಯರ ಜೀವನವನ್ನು ಹಿಂಡುತ್ತಿವೆ. ವರದಕ್ಷಿಣೆಯ ಕಾರಣಕ್ಕಾಗಿ ಮಹಿಳೆ ನಾನಾ ವಿಧದಲ್ಲಿ ಹಿಂಸೆಯನ್ನು ಅನುಭವಿಸಿ ಕೊನೆಗೆ ಸಾವಿಗೆ ಶರಣಾಗುತ್ತಿರುವ ಘಟನೆಗಳು ಹೆಚ್ಚಾಗಿ ನಡೆಯುತ್ತಿವೆ. ಇನ್ನು ಚಿಕ್ಕ ಮಕ್ಕಳ ಲೈಂಗಿಕ ದುರ್ಬಳಕೆ, ಅತ್ಯಾಚಾರದಂತಹ ಪ್ರಕರಣಗಳು ಕುಟುಂಬದಲ್ಲಿ ಪರಿಚಿತರು, ನೆರೆಯವರು, ಸಂಬಂಧಿಗಳು, ಮನೆಯವರಿಂದಲೇ ನಡೆಯುತ್ತಿರುವುದು ಕಂಡುಬರುತ್ತದೆ. ಆಧುನಿಕತೆಯ ಪ್ರವೇಶದಿಂದಾಗಿ ಹಳ್ಳಿಗಳು ನಗರ ಪ್ರದೇಶಗಳನ್ನು ಅನುಕರಿಸುತ್ತಿರುವುದು ನಿಜ. ಇದರಿಂದ ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಈ ವಿಭಕ್ತ ಕುಟುಂಬಗಳಲ್ಲಿಯೂ ಸಹ ಪುರುಷನದೇ ಅಧಿಕಾರ ಮಹಿಳೆಯದು ಕೇವಲ ಜವಾಬ್ದಾರಿಗಳಾಗಿರುತ್ತವೆ. ಕೆಲವು ಕುಟುಂಬಗಳಲ್ಲಿ ಹಿಂಸೆ ಎಂಬುದು ಹೇಗಿರುತ್ತದೆ ಎಂದರೆ ಮನೆಯಲ್ಲಿ ಟಿ.ವಿ, ಸಿ,ಡಿ. ಯ ಸೌಂಡನ್ನು ಜೋರಾಗಿ ಇಟ್ಟು ಹೆಂಡತಿಯನ್ನು ಹೊಡೆಯುವ ಘಟನೆಗಳು ಕೂಡ ಕಂಡುಬರುತ್ತವೆ. ಏಕೆಂದರೇ ಅವಳು, ಚೀರುವುದು ಬೇರೆಯವರಿಗೆ ಗೊತ್ತಾಗದಿರಲಿ ಎಂದು ಹೊಡೆಯುತ್ತಿರುತ್ತಾರೆ. ಕುಟುಂಬದ ಹೊರಗಿನ ನಾನಾ ರೀತಿಯ ಒತ್ತಡಗಳೆಲ್ಲವನ್ನೂ ಕೂಡ ಹೆಂಡತಿಯ ಮೇಲೆ ಹಾಕಿ ಹಿಂಸಿಸಲಾಗುತ್ತಿದೆ. ಇದರಿಂದಲೂ ಸಹ ಮಹಿಳೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ಹಿಂಸೆಯನ್ನು ಅನುಭವಿಸುತ್ತಿರುವುದು ನಮಗೆ ವೇದ್ಯವಾಗುತ್ತದೆ.

ಇನ್ನು ಪಿತೃಪ್ರಧಾನ ಸಮಾಜವು ಹೆಣ್ಣು ಎಂಬ ಪದಕ್ಕೆ ಕೇವಲ ದೈಹಿಕ ನಿರ್ವಚನವನ್ನು ಮಾತ್ರ ಕಟ್ಟಿಕೊಂಡಿರುವುದರಿಂದ ಹೆಣ್ಣಿನ ಮಾನಸಿಕ ಸ್ಥಿತಿಯ ಬಗ್ಗೆ ಅದಕ್ಕೆ ಆದರ್ಶದ ನೆಲೆಯಲ್ಲಿಯೂ ಕೂಡ ಅರಿವಿರುವುದಿಲ್ಲ. ಹಾಗಾಗಿ ಈ ಸಮಾಜವು ಸ್ತ್ರೀಯ ಸುಖ ಎಂದರೆ ಊಟ, ಬಟ್ಟೆ, ವಸತಿ, ಒಡವೆ ಇತ್ಯಾದಿ ಭೌತಿಕ ಸಂಗತಿಗಳ ಹಿನ್ನಲೆಯಲ್ಲಿಯೇ ಅಳೆಯುತ್ತದೆ. ಪರಿಣಾಮವಾಗಿ ಶ್ರೀಮಂತ ಕುಟುಂಬಗಳ ಹೆಣ್ಣುಮಕ್ಕಳಿಗೂ ಕೌಟುಂಬಿಕ ಹಿಂಸೆಗೂ ನಡುವಿನ ಸಂದರ್ಭಗಳಲ್ಲಿ ಅರಿವಾಗುವುದಿಲ್ಲ. ಯಾವ ಕುಟುಂಬಗಳು

ಹೆಣ್ಣಿನ ಭೌತಿಕ ಅಗತ್ಯವನ್ನು ಪೂರೈಸುತ್ತಾವಯೋ ಅಲ್ಲಿನ ಮಹಿಳೆ ಸುಖಿ ಎಂದು ಭಾವಿಸುತ್ತದೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ಭೌತಿಕ ಸರಕುಗಳು ಸ್ತ್ರೀಯನ್ನು ಅಪಾರ ಹಿಂಸೆಗೆ ಗುರಿಪಡಿಸುತ್ತಿರುತ್ತವೆ. ಆದರೆ ಕುಟುಂಬದ ಯಾವ ನೆಲೆಯಲ್ಲಿಯೂ ಸ್ತ್ರೀಗೆ ಇಚ್ಛೆಗಳನ್ನು, ನಿರ್ಧಾರಗಳನ್ನು ವ್ಯಕ್ತಪಡಿಸುವ, ಅಳವಡಿಸುವ ಅವಕಾಶವಿರುವುದಿಲ್ಲ. ಗಂಡನೊಂದಿಗೆ ಲೈಂಗಿಕ ಜೀವನದ ನಿರಾಕರಣೆಯಾಗಲಿ, ಮಕ್ಕಳನ್ನು ಹೇರುವುದರ ಬಗೆಗಿನ ಅಭಿಪ್ರಾಯವನ್ನಾಗಲಿ ಕೂಡ ಆಕೆ ವ್ಯಕ್ತಪಡಿಸುವಂತಿಲ್ಲ.[೨೭] ಹಾಗಾಗಿ ಮಹಿಳೆ ಕೇವಲ ಪುರುಷನ ಕೈ ಗೊಂಬೆಯಾಗಿ ಜೀವಿಸುತ್ತಿರುವುದು ವಾಸ್ತವ ಸತ್ಯ. ಇಂದು ಕುಟುಂಬದಲ್ಲಿ ಹೆಂಡತಿಯ ನೋವಿನ ತಾತ್ವಿಕ ನೆಲೆಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯವಿದೆ.ಒಂದು ಇಂದ್ರಿಯ ಗಮ್ಯ ಅನುಭವವಾಗಿ ನೋವು ಅದನ್ನು ಅನುಭವಿಸುತ್ತಿರುವವರ ಹೊರತು ಬೇರೆ ಯಾರಿಗೂ ತಲುಪುವುದು ಸಾಧ್ಯವಿಲ್ಲ. ನೋವನ್ನು ಮತ್ತೊಬ್ಬರಿಗೆ ಸಂವಹನ ಮಾಡುವುದು ಅಸಾಧ್ಯವೆನಿಸುವುದು ಕಷ್ಟ. ಏಕೆಂದರೆ ನೋವಿನ ವರ್ಣನೆಗೆ ಅದನ್ನು ಹಿಡಿದುಕೊಡುವ ಶಕ್ತಿ ಇರುವುದಿಲ್ಲ. ನೋವು ಜಾಸ್ತಿಯಾದಂತೆ ಮಾತು ಕಡಿಮೆಯಾಗುತ್ತಾ ಹೋಗುವುದು, ನಿಜವಾದ ನೋವನ್ನು ಮಾತು ನಿರಾಕರಿಸುವುದು ಅಷ್ಟೇ ಅಲ್ಲ ಆ ಸಾಮರ್ಥ್ಯವನ್ನೇ ನಾಶ ಮಾಡಿಬಿಡುತ್ತದೆ. ನೋವುಗಳು ಪ್ರಕಟಗೊಳ್ಳುವ ಐದು ಆಯಾಮಗಳನ್ನು ಹೆಚ್.ಎಸ್.ರಾಘವೇಂದ್ರರಾವ್ ಅವರು ಹೀಗೆ ಗುರುತಿಸುತ್ತಾರೆ.

ಶಾರೀರಿಕ ನೆಲೆ ಹಸಿವು, ರೋಗ, ಅತಿ ಲೈಂಗಿಕತೆ, ಹಿಂಸೆ, ಅಂಗವಿಕಲತೆ ಹಾಗೂ ಮತಿ ವಿಕಲತೆಗಳ ಫಲವಾದ ದೇಹಗಳು ನೋವುಗಳು.

ಮಾನಸಿಕ ನೆಲೆ ಭಾವನಾತ್ಮಕವಾದ ನೋವು, ಸ್ಪರ್ಧೆ, ಈರ್ಷೆ,ನಿರಾಶೆ, ಮರಣ, ಭಯ ಇತ್ಯಾದಿ. **ಕೌಟುಂಬಿಕ ನೆಲೆ** ದೇಶ, ಕಾಲ, ಸಮಾಜಗಳ ಹಿನ್ನೆಲೆಯಲ್ಲಿ ಆದರೆ ಕುಟುಂಬದ ಚೌಕಟ್ಟಿನೊಳಗೆ, ಅಂತರ್ ಮನುಷ್ಯ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ನೋವುಗಳು (ಸ್ತ್ರೀ ಪುರುಷ ಸಂಬಂಧ ಸಂಕೀರ್ಣ ನೆಲೆಗಳು ಸೇರಿದಂತೆ)

ಆರ್ಥಿಕ ಹಾಗೂ ಸಾಮಾಜಿಕ ನೆಲೆ ವರ್ಗ, ವರ್ಣ, ವ್ಯವಸ್ಥೆಗಳಿಂದಲೂ ಉಂಟಾದ ನಿಯಂತ್ರಿತವಾದ ಹಲವು ಬಗೆ ನೋವುಗಳು, ಎಲ್ಲಾ ರೀತಿಯ ಅಸಮಾನತೆ ಇದರ ಮುಖ್ಯ ಕಾರಣ.

ತಾತ್ವಿಕ ನೆಲೆ ಮನುಷ್ಯ ತನ್ನ ಬದುಕಿನ ಬಗೆಗೆ ಕೆಲವು ಮಹತ್ವದ ಪ್ರಶ್ನೆಗಳನ್ನು ಕೇಳಿಕೊಂಡು ದೊರೆಯುವ ಉತ್ತರಗಳ ಫಲವಾಗಿ ಅನುಭವಿಸುವ ನೋವು, ಮನುಷ್ಯ ಸಂಬಂಧಗಳ ಅರ್ಥಶೂನ್ಯತೆ, ಜೀವನದ ಅರ್ಥಶೂನ್ಯತೆ, ಬದಲಾವಣೆಯ ಬಗೆಗಿನ ಭ್ರಮ ನಿರಸನದ ಫಲವಾಗಿ ಯಾತನೆಗಳು ಇಲ್ಲಿ ಸೇರಿಕೊಳ್ಳುತ್ತವೆ. ಒಂದು ರೀತಿಯ ಅಸಹಾಯಕತೆ ಇಂಥ ನೋವಿಗೆ ಮುಖ್ಯ ಕಾರಣ. ಹೀಗೆ ಕುಟುಂಬದಲ್ಲಿ ಹೆಂಡತಿಯಾದವಳು ಈ ಮೇಲೆ ಹೇಳಿದ ನೆಲೆಯಲ್ಲಿ ನೋವುಗಳನ್ನು ಅನುಭವಿಸು ತ್ತಿರುವುದು ಕಂಡುಬರುತ್ತದೆ.

ಇಂದು ಶಿಕ್ಷಣವನ್ನು ಪಡೆದು ವಿವಿಧ ಉದ್ಯೋಗಗಳಲ್ಲಿರುವ ಮಹಿಳೆಯರು ಗ್ರಾಮೀಣ ಭಾಗದಲ್ಲಿ ಕಂಡುಬರುತ್ತಾರೆ. ಇದರಿಂದಾಗಿ ಅವರು ಮನೆಯಿಂದ ಹೊರ ಬಂದು ಉದ್ಯೋಗಗಳಲ್ಲಿ ತೊಡಕಿಕೊಂಡು

ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆಂದು ಹೇಳಲಾಗುತ್ತಿದೆಯಾದರೂ ವಾಸ್ತವದಲ್ಲಿ ಇದು ಸುಳ್ಳು ಇವರು ದುಡಿದು ತಂದ ಹಣವನ್ನು ಗಂಡನ, ಅತ್ತೆ ಅಥವಾ ಮಾವಂದಿರ ಕೈಗೆ ಕೊಡಬೇಕು. ಇಲ್ಲವಾದರೆ ದುಡಿಯುವ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಿಡುತ್ತಾಳೆ. ಮತ್ತೇ ಕುಟುಂಬಕ್ಕೆ ಮಾತ್ರ ಸೀಮಿತವಾಗಬೇಕಾಗುತ್ತದೆ. ಹಾಗಾಗಿ ಮನೆಯಿಂದ ಹೊರ ಹೋಗಿ ದುಡಿಯಬಹುದು. ಆದರೆ ಅದನ್ನೇ ಮಹಿಳೆಗೆ ಆರ್ಥಿಕ ಸ್ವತಂತ್ರಸಿಕ್ಕಿದೆ, ಎಂದು ಹೇಳಲು ಸಾಧ್ಯವಿಲ್ಲ. ಶಿಕ್ಷಣವನ್ನು ಪಡೆದು ಉದ್ಯೋಗದಲ್ಲಿ ತೊಡಗಿಕೊಂಡಿರುವ ಮಹಿಳೆಯರು ಕುಟುಂಬದ ಕಾರ್ಯಗಳಿಂದ ಮುಕ್ತರಾಗಿಲ್ಲ. ಅವರು ಸರ್ಕಾರಿ ಕೆಲಸದಲ್ಲಿಯೇ ಇರಲಿ ಅಥವಾ ಖಾಸಗಿ ಕೆಲಸದಲ್ಲಿ ಇರಲಿ ಮನೆಗೆಲಸಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇಲ್ಲವಾದರೆ ಕುಟುಂಬದ ಸದಸ್ಯರಿಂದ ದೂಷಿಸಲ್ಪಡುತ್ತಾಳೆ. ಹೀಗೆ ಮಹಿಳೆ ಒಂದಲ್ಲಾ ಒಂದು ಕಾರಣಕ್ಕಾಗಿ ಕುಟುಂಬದಲ್ಲಿ ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾಳೆ. ಈ ಮೇಲಿನ ಕಾರಣಗಳನ್ನು ಹೊರತುಪಡಿಸಿಯೂ ಹಲವಾರು ಹಿಂಸೆಯನ್ನು ಅನುಭವಿಸುತ್ತಿರುವುದು ಕಂಡುಬರುತ್ತಿದೆ. ಈ ಕುಟುಂಬ ಹಿಂಸೆಯಿಂದಾಗಿ ಮಹಿಳೆಯರ ಆರೋಗ್ಯ ತುಂಬಾ ಹದಗೆಟ್ಟಿರುವುದು ಸಹ ಗೋಚರಿಸುತ್ತದೆ. ಅಂದರೆ ರಕ್ತಹೀನತೆ, ಖಿನ್ನತೆ, ಲೈಂಗಿಕ ತೊಂದರೆಗಳು ಮುಂತಾದ ರೋಗಗಳಿಗೆ ತುತ್ತಾಗುತ್ತಿದ್ದಾಳೆ. ಅಷ್ಟೇ ಅಲ್ಲದೇ ಕುಡುಕ ಗಂಡಂದಿರಿಂದ ಕಣ್ಣುಗಳನ್ನು ಕೈಕಾಲುಗಳನ್ನು ಕಳೆದುಕೊಂಡವರೂ ಇರುವುದು ಕಂಡುಬರುತ್ತದೆ. ಮುಖ್ಯವಾಗಿ ಸಾಂಪ್ರದಾಯಿಕ ಮತ್ತು ಆಧುನಿಕ ಸಮಾಜಗಳೆರಡೂ ಹೆಣ್ಣನ್ನು ಪ್ರಧಾನವಾಗಿ ಗ್ರಹಿಸುವುದು ಒಂದು ದೇಹವಾಗಿ ಮಾತ್ರ. ಹಾಗಾಗಿ ಪುರುಷನ ಉಪಯುಕ್ತತೆ ಅಗತ್ಯತೆ ಹೆಣ್ಣಿನ ದೇಹದ ಆರೋಗ್ಯ ಮತ್ತು ಅನಾರೋಗ್ಯಗಳನ್ನು ನಿರ್ದೇಶಿಸುತ್ತದೆ.

ಇಂದು ಕುಟುಂಬದಲ್ಲಿ ನಡೆಯುತ್ತಿರುವ ಹಿಂಸೆಯಿಂದ ಹೆಚ್ಚಿನ ಮಹಿಳೆಯರು ಮಾನಸಿಕ ರೋಗಿಗಳಾಗಿ ಮಾರ್ಪಟ್ಟಿದ್ದಾರೆ. ಈ ಮನೋರೋಗಿಗಳು ಅಜೀವ ಪರ್ಯಂತ ರೋಗಿಯಾಗಿಯೇ ಮೂಢನಂಬಿಕೆಗಳನ್ನು ಅನುಸರಿಸಿಕೊಂಡು ಯಾತನೆಯನ್ನು ಅನುಭವಿಸಬೇಕಾಗುತ್ತದೆ. ಇಂದು ಹೆಚ್ಚಿನ ಮನೋರೋಗಿಗಳು ಮಹಿಳೆಯರೇ ಹೊರತು ಪುರುಷರಲ್ಲ. ಈ ಮನೋರೋಗಕ್ಕೆ ಭೂತ ಪ್ರೇತದ ಮುಖವಾಡವನ್ನು ಹಾಕಿ ಮೂಢನಂಬಿಕೆಯಲ್ಲಿ ತೊಳಲಾಡುವಂತೆ ಮಾಡಲಾಗುತ್ತಿದೆ. ಹೆಚ್ಚಿನ ಮಹಿಳೆ ಯರು ಕುಟುಂಬದಲ್ಲಿ ತಮಗೆ ಆಗುವಂತಹ ಹಿಂಸೆಯಿಂದಾಗಿ ಮಾನಸಿಕವಾಗಿ ಕುಗ್ಗಿಬಿಡುತ್ತಾರೆ. ಹಾಗಾಗಿ ಅವರು ಅವರಿಗೆ ಅರಿವಿಲ್ಲದಂತೆ ಏನೇನೋ ಮಾಡುತ್ತಿರುತ್ತಾರೆ. ಆದರೆ ನಮ್ಮ ಸಮಾಜ ಅವಳಿಗೆ ದೆವ್ವ, ಭೂತ, ಹಿಡಿದಿದೆ ಎಂದು ತಿಳಿದು ಮತ್ತೆ ಹಲವಾರು ವಿಧದಲ್ಲಿ ದೈಹಿಕವಾಗಿ ಹಿಂಸಿಸುತ್ತಾರೆ. ಕಾದ ಕಬ್ಬಿಣದಿಂದ ಬರೆ ಹಾಕುವುದು, ಮೆಣಸಿನಕಾಯಿ ಹೊಗೆ ಹಾಕುವುದು, ಕಸಬರಿಗೆ ಹಾಗೂ ಬೇವಿನ ತಪ್ಪಲಿನಿಂದ ಹೊಡೆಯುವುದು, ದೇವಸ್ಥಾನಗಳಲ್ಲಿ ತಲೆಯ ಮೇಲೆ ಕಲ್ಲನ್ನು ಹೊರಿಸಿ ಕುಳ್ಳಿರಿಸುವುದು ಹೀಗೆ ನಾನಾ ವಿಧದಲ್ಲಿ ಚಿತ್ರಹಿಂಸೆಯನ್ನು ಮಹಿಳೆಯರಿಗೆ ನೀಡುತ್ತದೆಂದು ಕಂಡುಬರುತ್ತದೆ.

ಇನ್ನೂ ಮಕ್ಕಳಾಗಲಿಲ್ಲವೆಂದು ದೇವರುಗಳಿಗೆ ಹರಕೆ ಹೊತ್ತುಕೊಳ್ಳುವುದು, ಪೂಜೆ, ಉಪವಾಸ, ಮುಂತಾದವುಗಳನ್ನು ಕೂಡ ಮಾಡುತ್ತಿರುವುದು ಕಂಡುಬರುತ್ತದೆ. ಮಹಿಳೆಯ ಗರ್ಭವನ್ನು ಒಂದು ಪ್ರಯೋಗಾಲಯದಂತೆ ರೂಪಿಸಿಕೊಳ್ಳಲಾಗಿದೆ. ಹೆಣ್ಣಿನ ದೇಹವು ಪುರುಷನ ಅಂಶವನ್ನು ಬೆಳೆಸುವಂತಹ ಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ. ಹೀಗಾಗಿ ಹೆಣ್ಣಿನ ಗರ್ಭಾಶಯದ ಮೇಲೆ ಹಲವು ರೀತಿಯಲ್ಲಿ ದೌರ್ಜನ್ಯಗಳು ನಡೆಯುತ್ತಲೇ ಇವೆ. ಇದರಿಂದಲೂ ಕೂಡ ಮಹಿಳೆಯ ಆರೋಗ್ಯವೂ ಹದಗೆಟ್ಟಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಕಂಟುಂಬದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ಹಿಂಸೆಯು ವಿವಿಧ ಸ್ವರೂಪಗಳನ್ನು ಪಡೆದುಕೊಂಡಿದ್ದು ಅದರಿಂದ ಅನಾರೋಗ್ಯದಿಂದ ಬಳಲುತ್ತಿರುವುದು ಕಂಡುಬರುತ್ತದೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆ ಎರಡನೇ ದರ್ಜೆ ಸ್ಥಾನದಲ್ಲಿದ್ದು ಪುರುಷನ ದಾಸಿಯಾಗಿ ಬದುಕುತ್ತಾ ಹಲವು ಬಗೆಯ ಕ್ರೌರ್ಯಗಳಿಗೆ ಒಳಗಾಗುತ್ತಿರುವುದನ್ನು ಈ ಮೇಲಿನ ಎಲ್ಲಾ ವಿಷಯಗಳಿಂದ ತಿಳಿಯಬಹುದಾಗಿದೆ.

ಕೌಟುಂಬಿಕ ದೌರ್ಜನ್ಯಗಳ ಸ್ವರೂಪಗಳು

ಮಹಿಳೆಯು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅನೇಕ ಸ್ವರೂಪಗಳಲ್ಲಿ ಸಾರ್ವಜನಿಕವಲಯದ ದೌರ್ಜನ್ಯವನ್ನು ಎದುರಿಸುತ್ತಿದ್ದಾಳೆ. ಸಾರ್ವಜನಿಕವಲಯದಲ್ಲಿನ ದೌರ್ಜನ್ಯಗಳನ್ನು ಯಾವ ಹಂತದಲ್ಲಾದರೂ ತಪ್ಪಿಸಿಕೊಳ್ಳಬಹುದು ಆದರೆ ಕೌಟುಂಬಿಕ ದೌರ್ಜನ್ಯವನ್ನು ಅವಳು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಹಾಗೂ ಇದನ್ನು ಅನಭವಿಸಬೇಕಾಗಿರುವುದು ಅನಿವಾರ್ಯವಾಗಿದೆ.

ವರದಕ್ಷಿಣೆ

ವರದಕ್ಷಿಣೆ ಪದ್ಧತಿ ಕೂಡಲೆ ನಿವಾರಿಸಬೇಕಾಗಿರುವ ಒಂದು ಸಾಮಾಜಿಕ ಪಿಡುಗು. ಹಿಂದೆ ಮಗಳು ತಂದೆಯ ಆಸ್ತಿಯಲ್ಲಿ ಪಾಲು ಪಡೆಯುತ್ತಿರಲಿಲ್ಲ. ಈ ಕಾರಣಕ್ಕಾಗಿ ಮದುವೆಯಲ್ಲಿ ಮಗಳಿಗೆ ಉಡುಗೊರೆಯ ರೂಪದಲ್ಲಿ ವಧುವಿನ ತಂದೆ ಕೊಡಬಯಸಿದ ಹಣ ಹಾಗೂ ವಸ್ತುಗಳೇ ಮುಂದೆ ವರದಕ್ಷಿಣೆಯ ರೂಪ ತಾಳಿರಬೇಕು. ಅಲ್ಲದೆ ಆರ್ಥಿಕವಾಗಿ ಅವಳಂಬಿತಳಾದ ಪತ್ನಿಯ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ವರ ವಧುವಿನ ತಂದೆಯಿಂದ ನಿರೀಕ್ಷಿಸುವ ಹಣವೇ ವರದಕ್ಷಿಣೆಯಾಗಿರಬೇಕು. ಹೆಣ್ಣಿನ ಅಧೀನ ಸ್ಥಾನಮಾನ ಧ್ಯೋತಕವೂ ಆಗಿರಬಹುದು.

ವರದಕ್ಷಿಣೆ ಕೊಡುವ ಪದ್ಧತಿಯ ಉಲ್ಲೇಖ ನಮಗೆ ಬಹು ಹಿಂದಿನಿಂದಲೇ ದೊರೆಯುತ್ತದೆ. ನಮ್ಮ ಪೌರಾಣಿಕ ಕಥೆಗಳಲ್ಲಿಯೂ ಇದರ ಉಲ್ಲೇಖ ದೊರೆಯುತ್ತದೆ. ಸೀತಾ, ದ್ರೌಪದಿ, ಸುಭದ್ರ ಮುಂತಾದವರ ಮದುವೆಯ ಸಂದರ್ಭದಲ್ಲಿ ವರನಿಗೆ ವಧುವಿನ ಜೊತೆಗೆ ಧನ, ಕನಕ, ಗಜ, ತುರಗ, ಆದಿಯಾಗಿ ಉಡುಗೊರೆ ನೀಡಿದ ಉದಾಹರಣೆಗಳು ಇವೆ.

ವಧುವಿನ ತಂದೆ ಸ್ವಚ್ಚೆಯಿಂದ ತನ್ನ ಸಾಮರ್ಥ್ಯವನ್ನರಿತು ಮಗಳಿಗೆ ತನ್ನ ಪ್ರೀತಿಯ ಧ್ಯೋತಕವಾಗಿ ಕೊಡುತ್ತಿದ್ದ ಉಡುಗೊರೆ ಇಂದು ವಧುವಿನ ತಂದೆಗೆ ಭಯ ಹುಟ್ಟಿಸುವ, ವಧುವಿನ ಜೀವನಕ್ಕೆ ಮುಳುವಾಗುವ

ಒಂದು ಸಾಮಾಜಿಕ ಪಿಡುಗಿನ ರೂಪ ತಾಳಿದೆ. ಪ್ರತಿನಿತ್ಯ ವಧುದಹನ, ವರದಕ್ಷಿಣೆ ಕಿರುಕುಳಗಳ ಸುದ್ದಿಯಿಲ್ಲದೆ ಪತ್ರಿಕೆಗಳಲ್ಲಿ ಎನ್ನುವಷ್ಟು ಈ ಪದ್ದತಿ ವ್ಯಾಪಕವಾಗಿ ಬಿಟ್ಟಿದೆ, ವರದಕ್ಷಿಣೆ ತರಲಿಲ್ಲವೆಂದು ಸೊಸೆ ಅಥವಾ ಹೆಂಡತಿಯನ್ನು ಜೀವಂತವಾಗಿ ಸುಟ್ಟ ಸುದ್ದಿಗಳು, ಅತ್ತೆ ಅಥವಾ ಗಂಡನ ಕಿರುಕುಳವನ್ನು ತಾಳದೆ ಆತ್ಮಹತ್ಯೆ ಮಾಡಿಕೊಂಡ ಹೆಣ್ಣಿನ ಕರುಣೆಯ ಕಥೆಗಳು ಈ ಪಿಡುಗಿನ ಕರಾಳ ರೂಪವನ್ನು ತೆರೆದದಿಡುತ್ತವೆ. ವರದಿಯಾಗುವ ಇಂಥ ಸಾವುಗಳಿಗಿಂತ ವರದಿಯಾಗದ ಸಾವುಗಳು ಲೆಕ್ಕವಿಲ್ಲದಷ್ಟು.

ವರದಕ್ಷಿಣೆ ಪದ್ಧತಿಯನ್ನು ನಿವಾರಿಸುವುದಕ್ಕಾಗಿ ೧೯೬೧ರಲ್ಲಿ ವರದಕ್ಷಿಣೆ ನಿಷೇಧ ಅಧಿನಿಯಮವನ್ನು ಜಾರಿಗೆ ತರಲಾಯಿತು. ಈ ಅಧಿನಿಯಮ ಜಾರಿಗೆ ಬಂದು ದಶಕಗಳೇ ಉರುಳಿದರೂ ಈ ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಒಳಪಟ್ಟವರ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು. ವರದಕ್ಷಿಣೆಯನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಬಹಳ ಗುಟ್ಟಾಗಿ ನಾಲ್ಕು ಗೋಡೆಗಳ ನಡುವೆ ನಡೆಯುವುದರಿಂದ, ನ್ಯಾಯಾಲಯ ಅಗತ್ಯಪಡಿಸುವ ಸಾಕ್ಷ್ಯಾಧಾರಗಳು ದೊರೆಯುವ ಸಾಧ್ಯತೆಗಳು ಬಹು ಕಡಿಮೆ. ಹೀಗಾಗಿ ಇಂಥ ಸಾವಿನ ಪ್ರಕರಣಗಳು ಆತ್ಮಹತ್ಯೆ ಸಾವುಗಳೆಂಬುದಾಗಿ ದಾಖಲಾಗಿಬಿಡುವ ಸಂಭವವೇ ಹೆಚ್ಚು. ಅಲ್ಲದೇ ಕಾನೂನಿನಲ್ಲಿ 'ವರದಕ್ಷಿಣೆ' ಎಂಬುದಕ್ಕೆ ನೀಡಿರುವ ಪರಿಭಾಷೆಯೂ ಅಸ್ಪಷ್ಟವಾಗಿದೆ.[೨೮]

ಅಧಿನಿಯಮದ ೨ನೇ ಪ್ರಕರನಲ್ಲಿ 'ವರದಕ್ಷಿಣೆ'ಯನ್ನು ಪರಿಭಾಷಿಸಲಾಗಿದೆ.

ಎ) ವಿವಾಹದ ಒಂದು ಪಕ್ಷಕಾರರು ವಿವಾಹದ ಇನ್ನೊಂದು ಪಕ್ಷಕಾರರಿಗೆ ಅಥವಾ

ಬಿ) ವಿವಾಹದ ಒಬ್ಬ ಪಕ್ಷಕಾರನ ತಂದೆ ತಾಯಿಯರು ಅಥವಾ ಇತರ ಯಾವನೇ ವ್ಯಕ್ತಿ ವಿವಾಹದ ಇನ್ನೊಬ್ಬ ಪಕ್ಷಕಾರನ ತಂದೆ ತಾಯಿಯರಿಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ. ವಿವಾಹದಲ್ಲಿ ಅಥವಾ ವಿವಾಹಕ್ಕೆ ಮುಂಚೆ ಅಥವಾ ವಿವಾಹದ ನಂತರ ಯಾವುದೇ ಸಮಯದಲ್ಲಿ ಪಕ್ಷಕಾರರು ವಿವಾಹ ಸಂದರ್ಭದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಕೊಟ್ಟ ಅಥವಾ ಕೊಡಲು ಒಪ್ಪಿಕೊಂಡಿರುವ ಯಾವುದೇ ಆಸ್ತಿ ಅಥವಾ ಮೌಲಿಕ ಭದ್ರತೆ. ಆದರೆ ಈ ಪರಿಭಾಷೆಯಲ್ಲಿ ಮುಸ್ಲಿಂರಲ್ಲಿ ಇರುವ 'ಮೆಹರ್' ಅಥವಾ 'ಡವರ್' ಸೇರುವುದಿಲ್ಲ.

ವಿವಾಹ ಸಮಯದಲ್ಲಿ ಎರಡೂ ಪಕ್ಷಕಾರರಿಗೆ ತಂದೆ ತಾಯಿಯರು ಮತ್ತು ಬಂಧುಗಳು ಪ್ರೀತಿ ವಾತ್ಸಲ್ಯದ ಉಡುಗೊರೆಯಾಗಿ ನೀಡುವ ನಗದು ಹಣ, ಒಡವೆಗಳು ಉಡುಪುಗಳು ಹಾಗೂ ಇತರ ವಸ್ತುಗಳು 'ವರದಕ್ಷಿಣೆಯ' ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೆ ಅವನ್ನೇ ವಿವಾಹಕ್ಕೆ ಪ್ರತಿಫಲವೆಂಬುದು ಕೊಟ್ಟಲ್ಲಿ ಮಾತ್ರ ಅವು ವರದಕ್ಷಿಣೆ ಎನಿಸುತ್ತದೆ. ಇನ್ನು ೨ನೇ ಪ್ರಕರಣದ ಅಡಿಯಲ್ಲಿ ನೀಡಲಾದ ವಿವರಣೆಯಲ್ಲಿ ಸ್ಪಷ್ಟಪಡಿಸಲಾಗಿತ್ತು. ಆದರೆ ಮುಂದೆ ವರದಕ್ಷಿಣೆಯ ಪರಿಭಾಷೆಯಲ್ಲಿ ಬಳಸಲಾದ 'ಪ್ರತಿಫಲ' ಎಂಬುದು ವರದಕ್ಷಿಣೆಯ ಅರ್ಥವನ್ನು ಹಾಗೂ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ ಎಂಬ ಕಾರಣದಿಂದ ಅದನ್ನು ತಿದ್ದುಪಡಿ ಮಾಡಲಾಯಿತು.

೩ ಮತ್ತು ೪ನೇ ಪ್ರಕರಣಗಳಲ್ಲಿ, ವರದಕ್ಷಿಣೆ ಕೊಡುವುದು, ಪಡೆಯುವುದು ಹಾಗೂ ಕೇಳುವುದನ್ನು ದಂಡನೀಯ ಅಪರಾಧವನ್ನಾಗಿಸಲಾಗಿದೆ. ಈ ಅಧಿನಿಯಮದ ಪ್ರಾರಂಭದ ನಂತರ ಯಾವನೇ ವ್ಯಕ್ತಿ ವರದಕ್ಷಿಣೆ ನೀಡಿದರೆ ಅಥವಾ ಪಡೆದರೆ ಅಥವಾ ಪಡೆದರೆ ಅವನು ೫ ವರ್ಷಗಳ ಕಾರಾಗೃಹ ವಾಸದ ಮತ್ತು ಹದಿನೈದು ಸಾವಿರ ರೂಪಾಯಿಗಳು ಅಥವಾ ವರದಕ್ಷಿಣೆಯ ಮೊತ್ತ ಇವೆರಡರಲ್ಲಿ ಯಾವುದು ಜಾಸ್ತಿಯೋ ಅಂಥ ಜುಲ್ಮಾನೆಯ ಶಿಕ್ಷೆಗೆ ಒಳಗಾಗುತ್ತಾನೆ.

ವಧು ಅಥವಾ ವರನ ತಂದೆತಾಯಂದಿರಿಂದ ಅಥವಾ ಅವರ ಇತರ ಸಂಬಂಧಗಳಿಂದ ಅಥವಾ ಪೋಷಕರಿಂದ ವರದಕ್ಷಿಣೆ ಕೇಳಿದಲ್ಲಿ ಹಾಗೆ ಕೇಳಿದ ವ್ಯಕ್ತಿಯೂ ಸಹ ಆರು ತಿಂಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾಗೃಹ ವಾಸದ ಶಿಕ್ಷೆ ಮತ್ತು ಹತ್ತು ಸಾವಿರ ರೂಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯ ಶಿಕ್ಷೆಗೆ ಗುರಿಯಾಗುತ್ತಾನೆ.

ಅಧಿನಿಯಮದ ೫ನೇ ಪ್ರಕರಣದ ಮೇರೆಗೆ, ವರದಕ್ಷಿಣೆಯನ್ನು ಕೊಡಲು ಅಥವಾ ತೆಗೆದುಕೊಳ್ಳಲು ಮಾಡಿಕೊಂಡ ಯಾವುದೇ ಒಪ್ಪಂದ ಶೂನ್ಯವಾಗುತ್ತದೆ. ೬ನೇ ಪ್ರಕರಣದಲ್ಲಿ ಯಾವೊಬ್ಬ ವ್ಯಕ್ತಿ ಸ್ವೀಕರಿಸಿದ ವರದಕ್ಷಿಣೆ ವಧುವಿನ ಹಾಗೂ ಆಕೆಯ ವಾರಸುದಾರರ ಪ್ರಯೋಜನಕ್ಕೆ ಬಳಸಬೇಕು. ಎಂದು ಹೇಳಲಾಗಿದೆ. ಪತಿ ಆ ಸ್ವತ್ತನ್ನು ತನ್ನ ಪತ್ನಿಯ ಪರವಾಗಿ ನ್ಯಾಯವಾಗಿ ಹೊಂದಿರುತ್ತಾನೆ. ವಿವಾಹವಾದ ಮೂರು ತಿಂಗಳೊಳಗಾಗಿ ಆ ಸ್ವತ್ತನ್ನು ಪತ್ನಿಯ ಹೆಸರಿಗೆ ವರ್ಗಾಯಿಸಬೇಕು. ಹೀಗೆ ಮಾಡಲು ತಪ್ಪಿದಲ್ಲಿ ಅವನು ೬ ತಿಂಗಳ ವರೆಗಿನ ಅವಧಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸಕ್ಕೆ ಮತ್ತು ೫೦೦೦ ರೂ ಜುಲ್ಮಾನೆಗೆ ಗುರಿಯಾಗುತ್ತಾನೆ.

ವರದಕ್ಷಿಣೆಯ ಪದ್ಧತಿ ಸಾಮಾಜಿಕ ಪಿಡುಗಿನ ರೂಪತಾಳಿದ್ದು ಸುಮಾರು ೧೩ ಅಥವಾ ೧೪ ನೇ ಶತಮಾನಗಳಲ್ಲಿ ರಜಪೂತ ಕುಟುಂಬಗಳಲ್ಲಿ ೧೬ ನೇ ಶತಮಾನದ ಉತ್ತರಾರ್ಧದಲ್ಲಿ ಇದು ಗಂಭೀರ ಸ್ವರೂಪ ಸಮಸ್ಯೆಯಾಯಿತು. ಖ್ಯಾತ ಕಾದಂಬರಿಕಾರರಾದ ಬಂಕಿಮಚಂದ್ರ ಚಟರ್ಜಿ ಅವರ ಮಗಳು ಉತ್ಕಲ ಕುಮಾರಿ ಸಾಕಷ್ಟು ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕಾಗಿ ಆಕೆಯ ಗಂಡ ಜ್ಯೋತೀಂದ್ರ ಮೋಹನ್ ಮುಖರ್ಜಿ ೧೮೮೬ ರ ನವೆಂಬರ್ ೮ ರಂದು ಅವಳಿಗೆ ವಿಷ ಹಾಕಿ ಸಾವಿಗೀಡು ಮಾಡಿದ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು. ಈ ಪದ್ಧತಿಯು ಅನೇಕ ಹೆಣ್ಣುಮಕ್ಕಳ ಹಿಂಸೆಗೆ ಅಸಹನೀಯ ಬಾಳಿಗೆ ಹಾಗೂ ಅವರ ಸಾವಿಗೆ ಕಾರಣವಾಗಿದೆ. ಬಹಳಷ್ಟು ವರದಕ್ಷಿಣೆ ಸಾವುಗಳು ವರದಿಯಾಗುವುದೇ ಇಲ್ಲ. ಆದರೆ ವರದಿಯಾಗುವ ಇಂತ ಸಾವುಗಳು ಸಮಾಜದ ದೃತಿ ಗೆಡಿಸುವಷ್ಟು ಪ್ರಮಾಣದಲ್ಲಿದೆ, ಎಂದರೆ ಈ ಸಮಸ್ಯೆಯ ವ್ಯಾಪಕತೆ ಹಾಗೂ ಭೀಕರತೆಯನ್ನು ಊಹಿಸಬಹುದು.

೧೯೬೧ ರಲ್ಲಿ ಜಾರಿಗೆ ಬಂದ ವರದಕ್ಷಿಣೆ ನಿಷೇಧ ಅದಿನಿಯಮದ ಪ್ರಕಾರ ವರದಕ್ಷಿಣೆ ಬೇಡಿದನೆಂಬ ಕಾರಣಕ್ಕಾಗಿ ಬೇಡಿದ ವ್ಯಕ್ತಿಯನ್ನು ಕಾನೂನು ಕ್ರಮಕ್ಕೆ ಗುರಿಪಡಿಸಲು ಸರ್ಕಾರದ ಪೂರ್ವಾನುಮತಿಯನ್ನು

ಪಡೆಯಬೇಕಿತ್ತು ಹಾಗೂ ತೊಂದರೆಗೊಳಗಾದ ವ್ಯಕ್ತಿಯೇ ಒಂದು ವರ್ಷದೊಳಗಾಗಿ ದೂರು ನೀಡಬೇಕಿತ್ತು. ಆದರೆ ೧೯೭೦ರ ಮತ್ತು ೧೯೮೦ ದಶಕದ ಪ್ರಾರಂಭದಲ್ಲಿ ಮಹಿಳಾ ಸಂಘಟನೆಗಳ ಪ್ರಯತ್ನದಿಂದ ೧೯೬೧ ರ ಕಾನೂನಿಗೆ ತಿದ್ದುಪಡಿ ತರಲಾಯಿತು. ೧೯೮೪ ರಲ್ಲಿ ಮಾಡಿದ ತಿದ್ದುಪಡಿಯ ಪ್ರಕಾರ ಮನ್ನಣೆ ಪಡೆದ ಯಾವುದೇ ಒಂದು ಸೇವಾಸಂಸ್ಥೆಗಳು ವರದಕ್ಷಿಣೆ ಅಪರಾಧದ ವಿರುದ್ಧ ದೂರು ನೀಡಬಹುದಾಗಿದೆ. ಅಲ್ಲದೇ ೨ ನೇ ಪ್ರಕರಣದಲ್ಲಿ 'ವರದಕ್ಷಿಣೆ' ನೀಡಲಾಗಿದ್ದ ಪರಿಭಾಷೆಗೂ ತಿದುಪಡಿ ತರಲಾಯಿತು. ಅಲ್ಲಿಯ 'ವಿವಾಹಕ್ಕೆ ಪ್ರತಿಫಲವಾಗಿ' ಎಂಬ ಪದಗಳನ್ನು ತೆಗೆದುಹಾಕಿ 'ವಿವಾಹದ ಸಂಬಂಧದಲ್ಲಿ' ಎಂಬ ಪದಗಳನ್ನು ಪ್ರತಿಸ್ಥಾಪಿಸಲಾಯಿತು. ಈ ಪದಗಳು ಮೂಲದ ಅರ್ಥವನ್ನು ಸ್ವಲ್ಪ ಮಟ್ಟಿಗೆ ವಿಸ್ತರಿಸಿದರೂ ವಿವಾಹದ ನಂತರ ಬೇಡಿದ ಅಥವಾ ಕೊಟ್ಟ ಯಾವುದೇ ಹಣ ಅಥವಾ ವಸ್ತುವಿಗೆ ಅನ್ವಯವಾಗುವುದಿಲ್ಲ. ಹೀಗಾಗಿ ಈ ತಿದ್ದುಪಡಿ ಕಾನೂನಿನ ಕೈ ಬಿಗಿಗೊಳಿಸುವುದಕ್ಕೆ ಹೆಚ್ಚೇನು ಸಹಾಯಕವಾಗಲಿಲ್ಲ.

ಹಾಗೆಯೇ, ಭಾರತ ದಂಡ ಸಂಹಿತೆಗೆ ತಿದ್ದುಪಡಿ ಮಾಡಿ, ಪತಿ ಅಥವಾ ಪತಿಯ ಸಂಬಂಧಗಳಿಂದ ಪತ್ನಿಗೆ ಉಂಟಾಗುವ ಹಿಂಸೆಯನ್ನು ಹೊಸ ಅಪರಾಧವನ್ನಾಗಿ ಸೇರಿಸಲಾಯಿತು. ಇದರ ಪ್ರಕಾರ, ಪತ್ನಿಯ ಆತ್ಮಹತ್ಯೆಗೆ ಅಥವಾ ಆತ್ಮಹತ್ಯೆಯ ಪ್ರಯತ್ನಕ್ಕೆ ಕಾರಣವಾಗುವ ಪತಿಯ ಉದ್ದೇಶಪೂರ್ವಕ ವರ್ತನೆಯನ್ನೂ ಸಹ 'ವಿವಾಹಿತ ಸ್ತ್ರೀ ವಿರುದ್ಧ ಕ್ರೌರ್ಯ' ಎಂಬ ಹೊಸ ಉಪ ಬಂಧದ ಅಡಿಯಲ್ಲಿ ಪರಿಗಣಿಸಿ ಅದಕ್ಕೆ ಮೂರು ವರ್ಷಗಳ ಕಾರಾಗೃಹ ವಾಸ ಮತ್ತು ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಲಾಯಿತು. ಭಾರತ ದಂಡದ ಸಂಹಿತೆಗೆ ೩೦೪ ಬಿ ಪ್ರಕರಣವನ್ನು ಸೇರಿಸುವ ಮೂಲಕ 'ವರದಕ್ಷಿಣೆ ಸಾವಿನ' ಅಪರಾಧವನ್ನು ಪರಿಭಾಷಿಸಲಾಯಿತು.

ಈ ಎಲ್ಲಾ ತಿದ್ದುಪಡಿಗಳಿಗೆ ಸಂಘಟಿತ ಮಹಿಳಾ ಚಳುವಳಿಯ ಬೇಡಿಕೆಗಳು ಹಾಗೂ ಒತ್ತಾಯ ಬಹುಮಟ್ಟಿಗೆ ಕಾರಣವಾಯಿತೆನ್ನಬಹುದು. ಆದರೆ ಕೆಲವು ಮಹಿಳಾವಾದಿಗಳು ಈ ತಿದ್ದುಪಡಿಗಳು ಪಿಡುಗನ್ನು ನಿವಾರಿಸಲು ಯಾವ ರೀತಿಯಲ್ಲಿಯೂ ಸಹಾಯಕವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಇವುಗಳಿಂದ ಸಮಸ್ಯೆಯ ಚಿಹ್ನೆಗಳನ್ನು ಗುರುತಿಸದಂತಾಯಿತೇ ವಿನಃ ಸಮಸ್ಯೆಯ ಕಾರಣವನ್ನು ನಿವಾರಿಸಿದಂತಾಗಲಿಲ್ಲ ಎಂದು ವಾದಿಸಿದರು. ಈ ಯಾವುದೇ ಕಾನೂನು ಅಥವಾ ಸುಧಾರಣಾಕ್ರಮ ಕುಟುಂಬದಲ್ಲಿನ ಮಹಿಳೆಯ ಅಸಮಾನತೆಯ ನಿವಾರಣಾ ಕ್ರಮವಲ್ಲ. ಮಹಿಳೆಗೆ ತನ್ನ ವೈವಾಹಿಕ ಗೃಹದಲ್ಲಿ ಇರುವ ಅಧಿಕಾರದ ಕೊರತೆಯನ್ನಾಗಲಿ, ಆರ್ಥಿಕ ಅವಲಂಬನೆಯನ್ನಾಗಲಿ ನಿವಾರಿಸುವುದಿಲ್ಲ. ಮಹಿಳೆಯ ಈ ಆರ್ಥಿಕ ಅವಲಂಬನೆಯಿಂದಲೇ ಇಂದು ವರದಕ್ಷಿಣೆ ಸಮಾಜಕ್ಕೆ ಇಡೀ ಶಾಪವಾಗಿ ಪರಿಣಮಿಸಿರುವುದು. ಆದ್ದರಿಂದ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವ ಕ್ರಮಗಳನ್ನು ಕೈಗೊಳ್ಳುವ ಮೂಲಕ ಈ ಸಮಸ್ಯೆಯನ್ನು ಎದುರಿಸುವ ಹಾಗೂ ನಿವಾರಿಸುವ ಪ್ರಯತ್ನಗಳಾಗಬೇಕು ಎಂದು ಇವರು ವಾದಿಸಿದರು.

ಹೆಣ್ಣು ಭ್ರೂಣಹತ್ಯೆ

ಇಂದು ಎಲ್ಲೆಲ್ಲೂ ಗಂಡು ಮಕ್ಕಳಿಗೆ ಆದ್ಯತೆ ದೊರೆಯುತ್ತಿರುವುದು ಮತ್ತು ಅನೇಕ ಸಂದರ್ಭಗಳಲ್ಲಿ ಪ್ರಸ್ತುತ ವಿದ್ಯಮಾನ ಪ್ರಚಲಿತದಲ್ಲಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಣ್ಣ ಕುಟುಂಬ ಎಂಬುದು ಸಾಮಾನ್ಯ ಸಂಗತಿಯಾಗುವ ಮೊದಲ ದಂಪತಿಗಳು ಗಂಡುಮಗುವಿನ ಹಂಬಲದಿಂದ ಕುಟುಂಬವನ್ನು ಬೆಳೆಸುತ್ತಾ, ಅಂತಿಮವಾಗಿ ಹೆಣ್ಣು ಮಕ್ಕಳ ಉದ್ದನೆ ಸಾಲು ಹೊಂದುತ್ತಿದ್ದು ತೀರಾ ಸಾಮಾನ್ಯ ದೃಶ್ಯವಾಗಿತ್ತು. ಆದರೆ ಗರ್ಭಪಾತಕ್ಕೆ ಪರವಾನಿಗಿ ಇರುವ ಈ ದಿನಗಳಲ್ಲಿ ಹೆಣ್ಣು ಭ್ರೂಣಹತ್ಯೆ ತೀರಾ ಸಾಮಾನ್ಯ ಸಂಗತಿಯಾಗಿಬಿಟ್ಟಿದ್ದು, ಮುಂದಿನ ತಲೆಮಾರಿನ ಲಿಂಗಾನುಪಾತವು ಭಾರೀ ಅಸಮತೋಲನದಿಂದ ಕೂಡಬಹುದೆಂಬ ಕಳವಳವನ್ನು ಉಂಟುಮಾಡುತ್ತದೆ.

ಹೆಣ್ಣು ಭ್ರೂಣಹತ್ಯೆ ಎಂದರೆ ಭ್ರೂಣವು ಹೆಣ್ಣಾಗಿರುವ ಕಾರಣಕ್ಕೆ ಮತ್ತು ಪಾಲಕರ ಗಂಡು ಮಗುವನ್ನು ಮಾತ್ರ ಹೊಂದಲು ಬಯಸುವ ಕಾರಣಕ್ಕೆ ಅದನ್ನು ನಾಶಪಡಿಸುವುದು. ಈ ರೂಢಿಯು ಭಾರತದಲ್ಲಿ ಮಾತ್ರ ವ್ಯಾಪಕವಾಗಿರುವುದಿಲ್ಲ. ಚೈನಾ ಮತ್ತು ಏಷ್ಯಾದ ಇತರ ಕೆಲವು ದೇಶಗಳಲ್ಲಿಯೂ ಅಸ್ತಿತ್ವದಲ್ಲಿದೆ. ಅಲ್ಲಿ ಹೆಣ್ಣು ಮಗುವಿಗೆ ಕೆಳಗಿನ ಸ್ಥಾನ ಸರಿ ಸುಮಾರು ೨೫ ವರ್ಷಗಳಿಂದೀಚೆಗೆ ನಮ್ಮ ಪಟ್ಟಣ ಮತ್ತು ಅರೆ ಪಟ್ಟಣ ಕೇಂದ್ರಗಳಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನ್ ಕೇಂದ್ರಗಳು ಗಣನೀಯವಾಗಿ ಹೆಚ್ಚಿವೆ. ಭ್ರೂಣದಲ್ಲಿ ಏನಾದರೂ ಅಣುವಂಶೀಯ ದೋಷಗಳು ಇವೆಯೋ ಎಂದು ಪತ್ತೆ ಮಾಡುವುದು. ಈ ಅಲ್ಟ್ರಾಸೌಂಡ್ ಸ್ಕ್ಯಾನ್ ಧ್ಯೇಯ ಆದರೆ ಮಗನ ಗುರುತು ಸಮಾಜದ ಮೋಹವು ಈ ಪರೀಕ್ಷೆ ವಿಧಾನದ ಸಹಾಯದಿಂದ ಅನಗತ್ಯವಾದ ಹೆಣ್ಣು ಭ್ರೂಣವನ್ನ ನಿವಾರಿಸತೊಡಗಿದೆ.

ಹೆಣ್ಣು ಭ್ರೂಣಹತ್ಯೆಯಲ್ಲಿ ತಾಯಿಯ ಸಹಮತ ಮತ್ತು ಸಹಕಾರವೂ ಸೇರುವುದಿಲ್ಲವೇ ಎಂದು ಕೆಲವೊಮ್ಮೆ ಪ್ರಶ್ನೆಗಳನ್ನು ಎತ್ತಲಾಗುತ್ತಾದರೂ, ಇಲ್ಲಿ ತಾಯಿಗೆ ಅಂತಹ ಯಾವ ಆಯ್ಕೆಯ ಅವಕಾಶಗಳೂ ಇರುವುದಿಲ್ಲ ಎನ್ನುವುದು ಸದ್ಯದ ಸಂಗತಿ. ಅಷ್ಟೇಅಲ್ಲ, ವಾಸ್ತವದಲ್ಲಿ ಹೆಣ್ಣ ಭ್ರೂಣ ಮತ್ತು ಭಾವಿ ತಾಯಿ ಇಲ್ಲಿ ಲಿಂಗತ್ವ ದೌರ್ಜನ್ಯದ ಎರಡೆರಡು ಬಲಿಪಶುಗಳಾಗಿರುತ್ತಾರೆ. ಈ ಭಾವಿ ತಾಯಿಗೆ ತನ್ನ ದೇಹದ ಮೇಲೆ ನಿಯಂತ್ರಣವೂ ಇರುವುದಿಲ್ಲ. ಹೆಣ್ಣು ಭ್ರೂಣವನ್ನು ತನ್ನ ವಿರುದ್ದವಾಗಿ ಗರ್ಭಪಾತ ಮಾಡಲು ಆಕೆಯನ್ನು ಅನೇಕ ಸಂದರ್ಭಗಳಲ್ಲಿ ಬಲವಂತಪಡಿಸಲಾಗುತ್ತದೆ. 'ಹಸೀನಾ' ಕನ್ನಡ ಚಲನಚಿತ್ರ ಇದಕ್ಕೊಂದು ಒಳ್ಳೆಯ ಉದಾಹರಣೆಯಾಗಿದೆ. ಯಾವ ಸಮುದಾಯಗಳಲ್ಲಿ ಗಂಡು ಮಕ್ಕಳ ಸಂಖ್ಯೆಗೆ ಹೆಣ್ಣು ಮಕ್ಕಳ ಸಂಖ್ಯೆಯನ್ನು ಹೋಲಿಸಿದರೆ ಹೆಣ್ಣು ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆ ಇರುತ್ತದೋ ಆ ಸಮುದಾಯಗಳಲ್ಲಿ ಈ ಹೆಣ್ಣು ಭ್ರೂಣ ಹತ್ಯೆ ಎಂಬ ಕ್ರೂರ ಪದ್ಧತಿ ಚಾಲ್ತಿಯಲ್ಲಿ ರುವುದಕ್ಕೆ ಪ್ರತ್ಯೇಕ ಪುರಾವೆಯೇ ಅಗತ್ಯವಿಲ್ಲ ಎನ್ನಬಹುದು.

ಮಗುವಿನ ಲಿಂಗ ಪತ್ತೆ ಹಚ್ಚಲು ಆಮ್ನಿಯೊಸಿಂಥಸಿಸ್ ಪರೀಕ್ಷೆ ಬಳಸುವುದರ ಮತ್ತು ಹೆಣ್ಣು ಮಗುವನ್ನು ಆಯ್ಕೆ ಮಾಡಿ ಗರ್ಭಪಾತ ಮಾಡುವುದರ ವಿರುದ್ಧ ೧೯೯೪ ರಲ್ಲಿ ಒಂದು ಮಸೂದೆಯನ್ನು ಅಂಗೀಕರಿಸಲಾಗಿದೆ. ಆದರೂ ವಸ್ತುಸ್ಥಿತಿ ಹೇಗಿದೆಯೆಂದರೆ, ಈ ರೂಢಿಯೂ ಯಾವ ಎಗ್ಗು ಇಲ್ಲದೇ ಮುಂದುವರೆದಿದೆ ಎಲ್ಲೋ ದೂರದ ಚೈನಾದಲ್ಲಿಯೋ, ಅಥವಾ ಶ್ರೀಮಂತ ಪಂಜಾಬಿನಲ್ಲಿಯೋ ಮಾತ್ರವಲ್ಲ. ನಮ್ಮದೇ ರಾಜ್ಯದಲ್ಲಿಯೂ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತದೆ. ಗ್ರಾಮೀಣ ಅಥವಾ ಬಡತನದಿಂದ ನರಳುತ್ತಿರುವ ಪ್ರದೇಶಗಳ ಬದಲಿಗೆ ಶ್ರೀಮಂತರು ಮತ್ತು ವಿದ್ಯಾವಂತರು ವಾಸಿಸುವ ನಗರ ಕೇಂದ್ರಗಳಲ್ಲಿ ಹೆಣ್ಣು ಮಕ್ಕಳು ಕಣ್ಮರೆಯಾಗುತ್ತಿರುವುದು ಹೆಚ್ಚು ಎನ್ನುವ ಅಂಶವು ಬೆಳಕಿಗೆ ಬಂದಿದೆ.

ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಮೊದಲು ವೈದ್ಯರುಗಳು ಲಿಂಗಪತ್ತೆ ಪರೀಕ್ಷೆಗಳನ್ನು ಒದಗಿಸುವುದನ್ನು ನಿಲ್ಲಿಸಬೇಕು. ಮತ್ತು ಅನುವಂಶಿಕ ಹತ್ಯೆಗಳನ್ನು ಪತ್ತೆ ಹಚ್ಚಲು ಮಾತ್ರ ಅಲ್ಟ್ರಾ ಸೌಂಡ್ ಸ್ಕ್ಯಾನ್‌ಗಳು ಬಳಸಬೇಕು. ಅದೇ ಹೊತ್ತಿನಲ್ಲಿ ಸಮಾಜವು 'ಪುತ್ರ' ಪೂಜೆಯ ಮನೋಭಾವವನ್ನು ಪ್ರಜ್ಞಾಪೂರಕವಾಗಿ ಬದಲಾಯಿಸಿಕೊಳ್ಳಬೇಕು. ಇಲ್ಲವಾದರೆ ಹೆಣ್ಣು ಭ್ರೂಣಹತ್ಯೆ ನಿರಂತರವಾಗಿ ನಡೆಯುತ್ತಿರುತ್ತದೆ.

ಹೆಣ್ಣು ಶಿಶುಹತ್ಯೆ

ಸಾಮಾನ್ಯವಾಗಿ ಹೆಣ್ಣು ಭ್ರೂಣಹತ್ಯೆಗೆ ವೈದ್ಯಕೀಯ ನೆರವು ಬೇಕಾಗುತ್ತದೆ ಮತ್ತು ಅದಕ್ಕೆ ಒಂದಷ್ಟು ಖರ್ಚು ಇರುತ್ತದೆ. ಆದರೆ ಹೆಣ್ಣು ಶಿಶುಹತ್ಯೆ ಪ್ರಾಯಶಃ ಬಹಳ ಅಗ್ಗ ಏಕೆಂದರೆ ತಾಯಿ/ಕುಟುಂಬದ ಸದಸ್ಯರು ಮಗುವಿಗೆ ಅವಶ್ಯ ಆಹಾರ ಅಥವಾ ಹಾರೈಕೆ ನೀಡುವುದರ ಮೂಲಕ ಅಥವಾ ಇತರ ನಾನಾ ವಿಧಿಗಳ ಮೂಲಕ ಆ ಮಗುವಿಗೆ ಉಸಿರುಗಟ್ಟಿಸಿ ಸ್ವತಃ ಶಿಶುಹತ್ಯೆ ಎಸಗಿಬಿಡುತ್ತಾರೆ. ಸಮಾಜದಲ್ಲಿ ಇರುವ ಗಣನೀಯ ಪ್ರಮಾಣದ ವರದಕ್ಷಿಣೆಯ ನಿರೀಕ್ಷೆಗಳು ಮತ್ತು ಕುಟುಂಬದ ಬಡತನವು ಇಂತಹ ಅಮಾನವೀಯ ಕೃತ್ಯಗಳಿಗೆ ಕಾರಣವೆಂದು ಹೇಳಲಾಗುತ್ತದೆ. ಕುಟುಂಬದ ಒಳಗಡೆಯೇ ಆಸ್ತಿಯನ್ನು ಉಳಿಸಿಕೊಳ್ಳುವ ಬಯಕೆ ಇನ್ನೊಂದನ್ನು ಅವ್ಯಕ್ತ ಕಾರಣವೆನ್ನಬಹುದು. ಹೀಗೆ ಈ ರೂಢಿಯು ಕೇವಲ ಕೆಲವರ್ಗಗಳಿಗೆ ಮಾತ್ರ ಸೀಮಿತವಾಗಿಲ್ಲ.

ಉತ್ತರದಲ್ಲಿ ರಜಪೂತ ಮುಂತಾದ ಸಮುದಾಯಗಳಲ್ಲಿ ಈ ರೂಢಿಯು ಚಾಲ್ತಿಯಲ್ಲಿತ್ತು ಎನ್ನುವುದು ಚರಿತ್ರೆಯಿಂದ ತಿಳಿದು ಬರುತ್ತದೆ. ತಮಿಳುನಾಡಿನ ಸೇಲಂ ಮತ್ತು ಮಧುರೈ ಜಿಲ್ಲೆಗಳಲ್ಲಿ ಈ ಅನಿಷ್ಟ ಪದ್ಧತಿಯು ಇತ್ತೀಚೆಗೆ ಪತ್ತೆಯಾಗಿದೆ. ಇಂತಹ ಶಿಶುಹತ್ಯೆಗಳ ವಿರುದ್ಧ, ಕಾನೂನುಗಳು ಇವೆಯಾದರೂ, ಕಾನೂನು ಜಾರಿ ಮಾಡಬೇಕಾದ ಪೋಲೀಸರು ಇವುಗಳ ಬಗ್ಗೆ ಜಾಣ ಕುರುಡು ಪ್ರದರ್ಶಿಸುತ್ತಾರೆ. ಅವರೂ ಕೂಡ, ಇಂತಹ ಆಯ್ದ ಶಿಶುಹತ್ಯೆಯನ್ನು ರೂಢಿಯಾಗಿಸಿಕೊಂಡಿರುವ ಸಮಾಜಕ್ಕೆ ಸೇರಿದವರಾಗಿರುವುದು ಅಂಶಿಕವಾಗಿ ಇದಕ್ಕೆ ಕಾರಣವಾಗಬಹುದು. ವಾಸ್ತವದಲ್ಲಿ, ಹೆಣ್ಣು ಶಿಶು ಹತ್ಯೆ ಯೆಸಗಿದವರಿಗೆ ಇಂದಿನತನಕ ಶಿಕ್ಷೆಯಾಗಿರುವ ನಿದರ್ಶನಗಳು ತೀರಾ ಕಡಿಮೆ. ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆಯ ಕಾರಣವಾಗಿ ಹೆಣ್ಣು

ಮಗುವಿನ ಅಸ್ತಿತ್ವವೇ ಅಪಾಯದಂಚಿನಲ್ಲಿರುವುದರಿಂದ 'ಕಣ್ಮರೆಯಾಗುತ್ತಿರುವ' ಹುಡುಗಿಯರ ಸಂಖ್ಯೆ ಹೆಚ್ಚುತ್ತಿದೆ. ಇದರಿಂದಾಗಿ, ನಮ್ಮ ಮುಂದಿನ ತಲೆಮಾರುಗಳ ಯುವಕರುಗಳಿಗೆ ಅರ್ಹ ಯುವತಿಯರು ಸಿಗುವುದೇ ಅಸಾಧ್ಯವಾಯಿತು. ನಿರ್ದೇಶನಕ್ಕೆ ಪತ್ರಿಕಾ ವರದಿಯೊಂದರ ಪ್ರಕಾರ ಈಗಾಗಲೇ ಚೈನಾದಲ್ಲಿಇಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಲ್ಲಿನ ಹಳ್ಳಿಯಲ್ಲಿ ೩೮ ವಿವಾಹ ವಯಸ್ಕ ಯುವಕರು ಯುವತಿಯರ ಅಲಕ್ಷತೆಯಿಂದ ಮದುವೆಯಾಗಲು ತೊಂದರೆ ಅನುಭವಿಸುತ್ತಿರುವುದು ತಿಳಿದು ಬರುತ್ತಿದೆ. ಇಂತಹ ಪರಿಸ್ಥಿತಿಯ ಸರಹದ್ದು ಪ್ರದೇಶಗಳಲ್ಲಿ ಮತ್ತು ಯುದ್ಧ ಮತ್ತು ವಿಕೋಪ ಕಾಲದಲ್ಲಿ ಮಹಿಳೆಯರ ಕೊರತೆ ಉಂಟಾದಾಗ ಆಗುವಂತೆ, ಲೈಂಗಿಕ ಅತ್ಯಾಚಾರದ ಮತ್ತು ಹೆಣ್ಣು ಮಗುವಿನ ಮೇಲಿನ ದೌರ್ಜನ್ಯದ ಪ್ರಮಾಣವು ಇನ್ನಷ್ಟು ಹೆಚ್ಚುವುದಕ್ಕೆ ದಾರಿ ಮಾಡಿಕೊಡಬಹುದು. ಆದುದರಿಂದ ಹೆಣ್ಣು ಗಂಡು ಅನುಪಾತದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಸ್ತ್ರೀತ್ವ ಮತ್ತು ಪುರುಷತ್ವಗಳ ನಡುವೆ ಸಮತೋಲನ ಹೊಂದಿರುವ ಸಮಾಜ ಮಾತ್ರ ಒಂದು ಆರೋಗ್ಯವಂತ ಸಮಾಜವೆನಿಸಿಕೊಂಡಿತು.[೨೯]

ಹೆಂಡತಿಯನ್ನು ಹೊಡೆಯುವುದು.

ಹೆಂಡತಿಯಾದವಳಿಗೆ ತನ್ನನ್ನು ಸಂರಕ್ಷಿಸಿ ಪ್ರೀತಿಯಿಂದ ನಡೆಸಿಕೊಳ್ಳಬೇಕಾದ ಗಂಡನೇ ತನ್ನನ್ನು ಹೊಡೆದು, ಬಡಿದು, ದೌರ್ಜನ್ಯ ನಡೆಸುವನೆಂಬುದು ಬಹಳ ಅಘಾತಕಾರಿಯಾದ ಅನುಭವವಿರುತ್ತದೆ. ಹೆಂಡತಿಯನ್ನು ಹೊಡೆಯುವ ವರ್ತನೆ ಅವಾಚ್ಯ ಶಬ್ದಗಳೊಂದಿಗೆ ಆಕೆಯ ಕಪಾಳಕ್ಕೆ ಬಾರಿಸುವ, ಕಾಲಿನಿಂದ ಒದೆಯುವ, ಗೋಡೆಗೆ ಅಪ್ಪಳಿಸುವ, ತಲೆ ಕೂದಲು ಕಿತ್ತುಬರುವಂತೆ ಹಿಡಿದೆಳೆದೊಡೆಯುವ, ಮುಖ–ಮೈಯನ್ನು ಪ್ರಾಣಿಗಳಂತೆ ಪರಚುವ, ಮೈ ಮೇಲೆ ಗುರುತು ಮಾಡುವಂತೆ ಹೊಡೆಯುವ, ಉರಿಯುವ ಬೆಂಕಿಕೊಳ್ಳಿಯಿಂದ ಸುಟ್ಟಗಾಯ ಮಾಡುವ, ಕತ್ತು ಹಿಸುಕುವ, ಕೊನೆಗೆ ಆಕೆಯನ್ನು ಕೊಲೆ ಮಾಡಲು ಪ್ರಯತ್ನಿಸುವವರೆಗೂ ತನ್ನ ವ್ಯಾಪ್ತಿಯನ್ನು ಹೊಂದಿರಬಲ್ಲದು.

ಹೆಂಗಸರ ಮೇಲೆ ಕೈ ಮಾಡುವುದು ಕೈ ಹಿಡಿದ ಹೆಂಡತಿಯ ಮೇಲೆ ಕ್ರೌರ್ಯ ಪ್ರದರ್ಶಿಸುವುದು, ಹೆಂಡತಿಯನ್ನು ಹೊಡೆಯುವುದು, ಇದೆಲ್ಲವೂ ಬಹಕಾಲದಿಂದಲೂ ಇದ್ದಿರಬಹುದಾದರೂ ಈ ಬಗ್ಗೆ ಇತ್ತೀಚೆಗೆ ಅಧ್ಯಯನಗಳಾಗಿ ತೊಡಗಿವೆ. ಪಿತೃ ಪ್ರಧಾನ ಕುಟುಂಬಗಳಲ್ಲಿ ಹೆಂಡತಿಯ ಮೇಲೆ ತನಗಿರುವ ಅಧಿಕಾರವನ್ನು ಪ್ರದರ್ಶಿಸಲು ಹಾಗೂ ಆಕೆಯನ್ನು ನಿಯಂತ್ರಣದಲ್ಲಿಡಲು ಗಂಡಸು ಆಕೆಯನ್ನು ಹೊಡೆಯುವುದರಲ್ಲಿ ತಪ್ಪೇನಿಲ್ಲವೆಂಬ ಸಮರ್ಥನೆ ಇದ್ದಿರಬಹುದಾದರೂ, ಸ್ತ್ರೀ ಪುರುಷರ ಸಮಾನತೆಯ ಸಿದ್ಧಾಂತವನ್ನು ಒಪ್ಪಿರುವ ಆಧುನಿಕ ಸಮಾಜದಲ್ಲಿ ಅದು ಅಸಭ್ಯ ಹಾಗೂ ಅನಾಗರೀಕ ವರ್ತನೆಯಾಗಿದೆ.

ಹೊಡೆತಕ್ಕೆ ಒಳಗಾದ ಪತ್ನಿಯ ಅಸಹಾಯಕತೆ

ತನ್ನನ್ನು ಹಲವು ವಿಧಗಳಲ್ಲಿ ಹಿಂಸಿಸುವ ಪತಿಯೊಂದಿಗೆ ದಿನವೂ ವಾಸಿಸಬೇಕಾದ ಅನಿವಾರ್ಯತೆ ಪತ್ನಿಯದಾಗಿರುವುದು, ಗಂಡನು ತನ್ನನ್ನುಕ್ರೂರವಾಗಿ ಹೊಡೆಯುವನೆಂದು, ಹಿಂಸಿಸುವನೆಂದು, ಪೋಲೀಸರಿಗೆ

ಆಕೆ ಸಾಮಾಜಿಕ ಅಪನಂಬಿಕೆಯ ಕಾರಣದಿಂದ ದೂರು ನೀಡಳಾರಳು. ಗಂಡನ ಅಂತಹ ವರ್ತನೆಯ ವಿರುದ್ಧ ಬಂಡೇಳುವಷ್ಟು ಧೈರ್ಯ ಆಕೆಗಿರುವುದಿಲ್ಲ.

ಅವಲೋಕನಗಳು

೧. ೨೦ ರಿಂದ ೩೦ ವರ್ಷ ದೊಳಗಿನ ಯುವತಿಯರಾದ ಪತ್ನಿಯರು ತಮ್ಮ ಗಂಡಂದಿರ ದೈಹಿಕ ಒಡೆತಕ್ಕೆ ಹೀಡಾಗುವ ಸಾಧ್ಯತೆ ಹೆಚ್ಚು.

೨. ನಿರಕ್ಷರಿಗಳಿಂದ ಹಿಡಿದು ಸ್ನಾತಕೋತ್ತರ ಪದವೀಧರೆಯ ವರೆಗೂ ಪತ್ನಿಯರು ಹೊಡೆತಕ್ಕೆ ಒಳಗಾಗುವರು.

೩. ಆದಾಗ್ಯೂ ಶಿಕ್ಷಣ ಮಟ್ಟ ಮತ್ತು ಆದಾಯದ ಮಟ್ಟ ಹೆಚ್ಚಾದಂತೆ ಕುಟುಂಬದಲ್ಲಿ ಸ್ತ್ರೀಯರ ಮೇಲಿನ ಹಿಂಸೆ ಪ್ರಮಾಣ ಕಡಿಮೆಯಾಗುವುದು ಕಂಡುಬಂದಿದೆ.

೪. ಹೆಚ್ಚಿನ ಸಂದರ್ಭಗಳಲ್ಲಿ ಗಂಡ ಹೆಂಡತಿಯರ ಅಪನಂಬಿಕೆ ಭಾವನಾತ್ಮಕ ಗೊಂದಲಗಳು ಗಂಡನಾದವರ ತೀರಾ ಅತಿರೇಖದ ಅಹಂಭಾವ ಎಲ್ಲವನ್ನೂ ಮೌನವಾಗಿ ಸಹಿಸಿಕೊಳ್ಳುವ ಹೆಂಡತಿಯ ಮೃದು ಸ್ವಭಾವ.

೫. ಹಿಂಸಾ ಪ್ರವೃತ್ತಿ ಕಲಿಕಾ ವರ್ತನೆಯಾಗಿದ್ದು, ತಮ್ಮ ತಂದೆ ತಾಯಿಗಳು ಹಿಂಸಾಕೃತ್ಯಗಳಲ್ಲಿ ತೊಡಗಿರುವುದನ್ನು ತಮ್ಮ ಬಾಲ್ಯಾವಸ್ಥೆಯಲ್ಲಿ ನೋಡಿದ ಹಾಗೂ ಅದನ್ನು ರೂಢಿಸಿ ಕೊಂಡವರಲ್ಲಿ ಹಿಂಸೆ ಹೆಚ್ಚಾಗಿರುತ್ತದೆ ಎನ್ನಲಾಗಿದೆ.

೬. ಹೆಂಡತಿಯ ಹೊಡೆತದಿಂದ ಕುಟುಂಬದ ಶಾಂತಿ ಕಲಕುವ, ವೈವಾಹಿಕ ಅಸಾಮರಸ್ಯ ಉಂಟಾಗುವ, ಗಂಡ–ಹೆಂಡತಿ ಬೇರ್ಪಡೆಗೊಳ್ಳುವ ಅವರ ವಿವಾಹ ವಿಚ್ಛೇದನಗೊಳ್ಳುವ, ಮಕ್ಕಳ ಸಾಮಾಜಿಕರಣವು ಹದಗೆಡುವ ಅಂತಹ ಕುಟುಂಬವಿರುವ ಸಾಮಾಜಿಕ ಪರಿಸರವು ಕಲುಶಿತಗೊಳ್ಳುವ ದುಷ್ಪರಿಣಾಮಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಈಗೆ ಹೆಂಡತಿಯನ್ನು ಹೊಡೆಯುವುದು ವಿವಿಧ ಸ್ವರೂಪಗಳಲ್ಲಿ ಮೇಲಿನ ಅವಲೋಕನದಂತೆ ಕಾಣಬಹುದು.

೩. ೩ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಮಹಿಳಾ ದೌರ್ಜನ್ಯದ ವಿಶ್ಲೇಷಣೆ

ದೌರ್ಜನ್ಯ ಕುರಿತು ಸ್ತ್ರೀವಾದಿ ಚಿಂತನೆಗಳು

೭೦ರ ದಶಕದಲ್ಲಿ ಬೆಳೆದು ಬಂದ ಸ್ತ್ರೀವಾದಿ ಚಿಂತನಾ ಕ್ರಮವು ಜಾತಿ, ವರ್ಗ, ವರ್ಣಾಧಾರಿತ ನೆಲೆಗಳಲ್ಲಿ ಚರ್ಚಿಸುತ್ತಿರುವ ದೌರ್ಜನ್ಯ ಹಿಂಸೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಚರ್ಚೆಯಾಗಿಲ್ಲವೆಂಬುದನ್ನು ಗ್ರಹಿಸಿಕೊಂಡಿತು. ಉದಾ: ದೌರ್ಜನ್ಯ–ಹಿಂಸೆಗಳ ಕುರಿತು ಸುಧಾರಣವಾದಿ ಗಳು, ಚಿಂತಕರೆನಿಸಿರುವ ಬುದ್ದ,

ಗಾಂಧಿ, ರಸೆಲ್ ಮೊದಲಾದವುಗಳೆಲ್ಲರೂ ಸಹ ದೌರ್ಜನ್ಯ-ಹಿಂಸೆಗಳನ್ನು ಕುರಿತು ಚಿಂತನೆಗಳನ್ನು ರೂಪಿಸಿದ್ದಾರೆ. ಮನುಷ್ಯತ್ವದ ನೆಲೆಯನ್ನಾಧರಿಸಿ ರೂಪಿತವಾದ ಈ ಯಾವುದೇ ಚಿಂತನಗಳಲ್ಲಿ ಮಹಿಳೆಯನ್ನು ವಿಶೇಷವಾಗಿ ಎಂಬಂತೇನು ಪ್ರಸ್ತಾಪಿಸಿಲ್ಲ. ಈ ಚಿಂತನೆಗಳು ಮನುಷ್ಯರನ್ನು ಹಿಂಸಿಸಬಾರದು. ಇದು ಮಹಾಅಪರಾಧ ಎನ್ನುವಂತೆ ದೊಡ್ಡ ತತ್ವಶಾಸ್ತ್ರಜ್ಞರಿಂದ ಹಿಡಿದು, ಸಮಾಜ ಸುಧಾರಕರು ಮತ್ತು ಆಡಳಿತಾರೂಢ ಪ್ರಭುತ್ವಗಳವರೆಗೆ ಸಾಮಾನ್ಯವಾಗಿ ಎಲ್ಲರೂ ಸಹ ಒಂದಲ್ಲಾ ಒಂದು ಸಂದರ್ಭದಲ್ಲಿ ಈ ಬಗೆಯ ಚಿಂತನೆಯನ್ನು ಮಾಡಿದ್ದಾರೆ. ಹೀಗೆ ಮಾಡುವ ಸನ್ನಿವೇಶಗಳಲ್ಲೆಲ್ಲೂ ಸಹ ಹೆಂಗಸಿನ ವಿಶಿಷ್ಟ ಸಮಸ್ಯೆಗಳು ಕೇಂದ್ರಕ್ಕೆ ಬಂದಿಲ್ಲವಾಗಿದೆ. ಆದ್ದರಿಂದ ೭೦ರ ದಶಕದಲ್ಲಿ ಬಂದ ಸ್ತ್ರೀವಾದಿ ಚಿಂತನಾ ಕ್ರಮದಿಂದ ಈ ಅಂಶಗಳು ಬೆಳಕಿಗೆ ಬಂದಿವೆ. ಹೀಗೆ ವರ್ಗ, ಜಾತಿ, ವರ್ಣ, ಜನಾಂಗಗಳ ನೆಲೆಯಿಂದ ದೌರ್ಜನ್ಯ-ಹಿಂಸೆಯನ್ನು ಗಮನಿಸಿದಾಗ ಮಹಿಳೆ ಅದೃಶ್ಯವಾಗುತ್ತಾಳೆ. ಪರಿಣಾಮವಾಗಿ 'ಮಹಿಳೆಯರ ವಿರುದ್ದ ನಡೆಯು ದೌರ್ಜನ್ಯ' ಎಂಬ ಪರಿಕಲ್ಪನೆಯನ್ನು ಸ್ತ್ರೀವಾದಿ ಚಿಂತನೆಗಳು ಹುಟ್ಟುಹಾಕಿದ ನಂತರ ಶತಮಾನಗಳಿಂದಲೂ ಚರ್ಚಿತವಾಗುತ್ತಿರುವಂತೆ ಜಾತಿ, ವರ್ಗ, ವರ್ಣಗಳಂತೆಯೇ 'ಲಿಂಗಾಧಾರಿತ' ನೆಲೆಯಲ್ಲೂ ದೌರ್ಜನ್ಯದ ಚರ್ಚೆಗೊಳಗಾಗಬೇಕೆಂದು ಪ್ರತಿಪಾದಿಸಿತು. ತದನಂತರದಲ್ಲಿ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯವು ಪರಿಕಲ್ಪನೆಯಾಗಿ ಗ್ರಹಿಸುವುದು ಪ್ರಾರಂಭವಾಯಿತು.

ಈ ಬಗೆಯ ಚಿಂತನೆಗೆ ಅನುಗುಣವಾಗಿ ಚರಿತ್ರೆಯನ್ನು ಅವಲೋಕಿಸಿದಾಗ ಮನುಷ್ಯ ಸಂತತಿಯ ಆರಂಭದಿಂದಲೂ ಮಹಿಳೆಯ ವಿರುದ್ದ ನಡೆಯುವ ದೌರ್ಜನ್ಯದ ಸಮಸ್ಯೆಯೂ ಹೊಸದಾಗಿಲ್ಲವೆಂಬುದು ತಿಳಿದು ಬರುತ್ತದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನಾಧರಿಸಿ ಹೇಳುವುದಾದರೆ ಇಲ್ಲಿ ಬೆಳೆದು ಬಂದ ಕೌಟುಂಬಿಕ, ಸಾಮಾಜಿಕ ಪರಿಸರದಲ್ಲಿ ಮಹಿಳಾ ಬದುಕು ದಮನಗೊಂಡಿರುವುದಕ್ಕೆ ಹಲವಾರು ದಾಖಲೆಗಳು ಸಿಗುತ್ತವೆ. ಆದರೆ ಇದನ್ನು ಒಂದು ಸಾಮಾಜಿಕ ಸಮಸ್ಯೆಯಾಗಿ ಸ್ವೀಕರಿಸುವುದಕ್ಕೆ ಆಧಾರಗಳು ಕಂಡುಬರುವುದಿಲ್ಲ. ಸುದೀರ್ಘ ಕಾಲದವರೆಗೂ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರು ದೌರ್ಜನ್ಯಕ್ಕೊಳಗಾಗುತ್ತಿರುವಂತಹ ಕಟು ಸತ್ಯವನ್ನು ಹೊರ ಹಾಕದಿರುವುದು ಮಹಿಳಾ ಬದುಕಿನ ಬಗ್ಗೆ ಪುರುಷ ಸಂಸ್ಕೃತಿಗಿರುವ ನಿರ್ಲಕ್ಷ್ಯವೂ ಹೌದು ಪುರುಷ ರಾಜಕಾರಣವು ಹೌದೆನ್ನಬಹುದು.

ಸಾಮಾನ್ಯವಾಗಿ ಲಿಂಗಾಧಾರಿತ ನೆಲೆಯಲ್ಲಿ ಬೆಳೆದು ಬಂದ ಚಿಂತನೆಗಳು ಯಾವುದೇ ವ್ಯಕ್ತಿಯಿಂದ ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಮಹಿಳೆಯರ ಇಚ್ಚೆಗೆ ವಿರುದ್ಧವಾಗಿ, ಒತ್ತಾಯಪೂರ್ವಕವಾಗಿ ನಡೆಯುವ ಭೌದ್ದಿಕ, ಮಾನಸಿಕ, ಭಾವನಾತ್ಮಕ, ದೈಹಿಕ ಹಿಂಸೆಯನ್ನು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ'ವೆಂದು ಗ್ರಹಿಸಲಾಗಿದೆ. ಭಾರತೀಯ ಸಂವಿಧಾನ ಮತ್ತು ಈವರೆಗೂ ಈ ಸಂಬಂಧಿತ ಜಾರಿಯಾದ ಕಾನೂನುಗಳು ಈ ವ್ಯಾಖ್ಯಾನವನ್ನು ತಾತ್ವಿಕವಾಗಿ ಒಪ್ಪಿಕೊಂಡು ನಡೆದಿವೆ.

ಆಳವಾಗಿ ಬೇರೂರಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿನ ಪುರುಷನ ಮೇಲಾಳ್ತನವು ಸ್ವೀಕಾರಾರ್ಹರಾಗಿರುವುದರಿಂದ, ಮಹಿಳೆಯರ ವಿರುದ್ಧದ ಹಿಂಸಾತ್ಮಕ ಕ್ರಿಯೆಗಳೆಲ್ಲವೂ ಸಹ ಸಾಮಾಜಿಕತೆಯಲ್ಲಿ ಹಿಂಸೆ ಎಂದು ನೋಡುವುದಿಲ್ಲ. ಸ್ವತಃ ಮಹಿಳೆಯರು ಸಹ ಇದನ್ನು ಬದುಕಿನ ಭಾಗವೇನೋ ಎಂಬಂತೆ ಸ್ವೀಕರಿಸಿ ಪೋಷಿಸುತ್ತಾ ಜೀವನವನ್ನು ಸಾಗಿಸುತ್ತಿರುವುದು ಸಾಮಾಜಿಕ ಅಂತರ್ಗತಗೊಳಿಸುವಿಕೆಯಿಂದಲೇ ಆಗಿದೆ. ಇದಕ್ಕೆ ಧರ್ಮ, ಸಂಸ್ಕೃತಿ, ಇತ್ಯಾದಿಗಳ ಚಹರೆಯನ್ನು ರೂಪಿಸಲಾಗಿದೆ. ಹೀಗಾಗಿಯೇ ಎಲ್ಲಾ ಗುಂಪುಗಳು ಮತ್ತು ಸಮುದಾಯಗಳಲ್ಲಿ ಪುರುಷರು ಮಹಿಳೆಯ ಮೇಲೆ ಎಸಗುವ ದೌರ್ಜನ್ಯದ ಘಟನೆಗಳನ್ನು ಇಂದಿಗೂ ದೌರ್ಜನ್ಯವೆಂದು ವ್ಯಾಖ್ಯಾನಿಸುವುದು ಕಷ್ಟಕರ ಸಂಗತಿಯಾಗಿದೆ. ಸಾಮಾಜಿಕ ನೀತಿ–ನಿಯಮ, ನಂಬಿಕೆಗಳು, ಕುಟುಂಬ, ಸಮುದಾಯ, ಗುಂಪುಗಳಿಂದ–ಗುಂಪಿಗೆ ಭಿನ್ನವಾಗಿವೆ. ಈ ಕಾರಣದಿಂದ ಸಾಮಾನ್ಯ ಹಂತದಿಂದಲೂ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಗ್ರಹಿಸಿಕೊಳ್ಳಬೇಕಾಗಿದೆ.

ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಕುರಿತು ಚರ್ಚಿಸಿದಾಗ, ಇದು ಕೇವಲ ಪುರುಷರು ಮಾತ್ರ ಎಸಗುತ್ತಾರೆ ಎನ್ನುವ ಪ್ರಶ್ನೆ ಸಾಕಷ್ಟು ಸಂಘರ್ಷವನ್ನುಂಟು ಮಾಡುತ್ತದೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಸ್ತ್ರೀ–ಪುರುಷರಿರ್ವರಿಂದಲೂ ನಡೆಯುತ್ತದೆಯಾದರೂ ಪ್ರಮಾಣದಲ್ಲಿ ವ್ಯತ್ಯಾಸವನ್ನು ಗಮನಿಸಿದಾಗ ಪುರುಷರು ಎಸಗುವ ಪ್ರಮಾಣ ಎಣಿಕೆಗೆ ಸಿಗದಷ್ಟೇ ಎಲ್ಲೆ ಮೀರಿದೆಯೆಂಬುದು ಸಹಜವಾದ ಸಂಗತಿಯಾಗಿದೆ. ಅದರಲ್ಲೂ ಮಹಿಳೆಯರು ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ ಕಾರಣಗಳು ಸಹ ಪುರುಷ ಮೂಲದಿಂದಲೇ ಹುಟ್ಟುತ್ತವೆ. ಉದಾ: ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಹೇಳುತ್ತಾ 'ಅತ್ತೆ–ಸೊಸೆ' ಸಂಬಂಧದ ಹಿನ್ನಲೆಯಲ್ಲಿ ಅತ್ತೆ–ಸೊಸೆಯ ಮೇಲೆ ಎಸಗುವ ದೌರ್ಜನ್ಯವನ್ನು ಸಾಕಷ್ಟು ಸಂದರ್ಭಗಳಲ್ಲಿ ಪ್ರತಿಪಾದಿಸಲಾಗುತ್ತದೆ. ಈ ತೆರನಾದ ಶತೃತ್ವಕ್ಕೆ ಈ ಎರಡು ಪಾತ್ರಗಳಲ್ಲಿನ ಮಹಿಳೆಯರಿಗಿರುವ ಅಭದ್ರತೆ, ಆತಂಕಗಳೇ ಕಾರಣ ಮತ್ತು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕುಟುಂಬದಲ್ಲಿ 'ಅತ್ತೆಗೆ ದಕ್ಕಿರುವ ಅಧಿಕಾರ' ಪುರುಷ ಮಾದರಿಯಲ್ಲೆ ನಿಭಾಯಿಸುವಂತಿ ರುವ ಸಾಮಾಜೀಕರಣ ಮತ್ತು ಅಧೀನ ನೆಲೆಯ ಹೆಣ್ಣಿನ ಮೇಲಿನ ಅಕ್ರಮಣಕ್ಕೆ ಕಾರಣವಾಗುತ್ತದೆ. ಆದರೆ ಇದೇ ಸಮಾಜ ವ್ಯವಸ್ಥೆಯಲ್ಲಿ 'ಗಂಡಿಗೆ ಗಂಡೇ ಶತ್ರು' ವಾಗಿರುವ ಸಾಕಷ್ಟು ಉದಾರಣೆಗಳು ಕಂಡು ಬರುತ್ತವೆ. ಉದಾ: ಪ್ರೇಯಸಿಗಾಗಿ ಆಕೆಯ ಗಂಡನ ಕೊಲೆ ಎಂದು ದಿನ ಪತ್ರಿಕೆಗಳಲ್ಲಿ ಇಂತವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಾಣಬಹುದು. ಆದರೆ ಇಲ್ಲಿಯ ಅಪರಾಧಿಯ ಸ್ಥಾನದಲ್ಲಿ ಮಹಿಳೆಯನ್ನಿರಿಸಿ ನೋಡಲಾಗುತ್ತದೆ. ಹೀಗೆ ಸಂಗತಿಗಳು ಸ್ತ್ರೀ ಪುರುಷರ ಸಂದರ್ಭಗಳಲ್ಲಿ ವಿಭಿನ್ನವಾಗಿ ತಿರುಚಲ್ಪಡುತ್ತೆವೆ. ಮತ್ತು ಬಹುತೇಕವಾಗಿ ವ್ಯವಸ್ಥೆಯಲ್ಲಿ ಇವುಗಳು ಪರಿಗಣನೆಗೆ ಬರುವುದಿಲ್ಲ. ಹೆಣ್ಣಾಗಿರುವ ಕಾರಣದಿಂದಲೇ ಈ ಎರಡು ಸಂದರ್ಭಗಳಲ್ಲಿನ ಪರಿಣಾಮ ಹೆಣ್ಣಿನ ಮೇಲಿನ ಆಕ್ರಮಣವೇ ಆಗಿದೆಯೆಂಬುದು ಮುಖ್ಯವಾಗಿ ಗ್ರಹಿಸಬೇಕಾದ ಸಂಗತಿ.

ಇತ್ತೀಚಿನ ಜಾಗತಿಕ ಸಂಗತಿಗಳಲ್ಲಿ ಲಿಂಗಾಧಾರಿತ ದೌರ್ಜನ್ಯವು ಸಹ ಪ್ರಮುಖವಾದ ಸಂಗತಿಯಾಗಿದೆ. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕವಲಯಗಳಿಗೂ ವಿಸ್ತರಿಸುವ ಈ ಅಂಶವೂ ಮಹಿಳಾ ಹಕ್ಕುಗಳನ್ನು ಮತ್ತು ಅಂತಸ್ತಿನ ಸಂದರ್ಭದಲ್ಲಿಟ್ಟುಕೊಂಡು ನೋಡಿದಾಗ ಲಿಂಗಾಧಾರಿತ ದೌರ್ಜನ್ಯವು ಮಹಿಳೆಯನ್ನು ನಿಯಂತ್ರಣಕ್ಕೊಳಪಡಿಸುವ ಸಂಗತಿಯೆಂಬುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಸಂಸ್ಕೃತಿಗೆ ಸಂಬಂಧಿತವಾದ ಮಹಿಳೆಯರ ವಿರುದ್ದ ನಡೆಯು ದೌರ್ಜನ್ಯವು ರಾಷ್ಟ್ರೀಯ ಮಟ್ಟಗಳಾಚೆಗೂ ದಾಖಲೆಗಳಾಗಿವೆ. CEDAW ಒಡಂಬಡಿಕೆಯಲ್ಲಿ ಸ್ತ್ರೀವಾದಿ ಚಳುವಳಿಗಳಿಗೆ ಸಂಯುಕ್ತ ಸಂಸ್ಥಾನದ ಮೂಲಕ ಕೆಲವು ಅವಕಾಶಗಳನ್ನು ಒದಗಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಅಂಕಿ-ಅಂಶಗಳ ಪ್ರಕಾರ ಶೇಕಡ ೧೮ ಪ್ರತಿ ಶತ ಮಹಿಳೆಯರು ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇಂತಹ ಸ್ಥಿತಿಯು ಅಭಿವೃದ್ದಿ ಹೊಂದಿದ ದೇಶಗಳೆಂದು ಗುರುತಿಸಲ್ಪಡುವ ದೇಶಗಳಲ್ಲಿಯೂ ಕೂಡ ಮಹಿಳೆಯ ವಿರುದ್ಧ ನಡೆಯುವ ದೌರ್ಜನ್ಯದ ಕುರಿತು ಖಚಿತವಾಗಿ ದಾಖಲೆಗಳು ಮತ್ತು ಅಂಕಿ-ಅಂಶಗಳನ್ನು ಸ್ಪಷ್ಟವಾಗಿ ಒದಗಿಸಿಲ್ಲ. ಯು.ಎಸ್.ನ ವರದಿಯಂತೆ ಪ್ರತಿ ವರ್ಷವೂ ೩-೪ ಮಿಲಿಯನ್ ನಷ್ಟು ಮಹಿಳೆಯರು ವಿವಿಧ ಬಗೆಯ ದೌರ್ಜನ್ಯಕ್ಕೊಳಗಾಗುತ್ತಾರೆ. ಪ್ರಪಂಚದಲ್ಲಿ ಮಹಿಳೆಯರ ವಿರುದ್ದ ನಡೆಯು ದೌರ್ಜನ್ಯಕ್ಕೆ ಸ್ವೀಡನ್ ದೇಶ ಪ್ರಥಮ ಸ್ಥಾನದಲ್ಲಿದೆ.

ವರದಿಯಲ್ಲಿ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯವು ಮೂಲಭೂತವಾದ ಮಾನವ ಹಕ್ಕುಗಳ ವಿರೋಧಾಭ್ಯಾಸವಾಗಿದ್ದು. ಅದು ಕೇವಲ ಮಹಿಳೆಯ ಸ್ಥಾನಮಾನಕ್ಕಷ್ಟೇ ದಕ್ಕೆ ತರುವುದಿಲ್ಲ. ಅವಳ ಸಮಗ್ರ ಬದುಕನ್ನು ಕಲುಷಿತಗೊಳಿಸುತ್ತದೆ. ತತ್ಪರಿಣಾಮವಾಗಿ ಅವಳ ಉತ್ಪಾದನೆ ಮತ್ತು ಕಾರ್ಯ ಸಮರ್ಥತೆಯನ್ನು ಕುಗ್ಗಿಸುತ್ತದೆ. ಇಷ್ಟಾದರೂ ಸಹ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯವು ದೈಹಿಕ, ಭೌತಿಕಮತ್ತು ಭಾವನಾತ್ಮಕ ಹಿಂಸೆಗಳನ್ನು ಒಳಗೊಂಡಿದ್ದು ಬಹುವಿಧದ ದೌರ್ಜನ್ಯದಲ್ಲಿ ಅದು ಬದುಕಿನ ಸಾಮಾನ್ಯ ಸಂಗತಿಯೆನ್ನುವ ಮೂಲಕ ಕಡೆಗಣಿಸಲ್ಪಟ್ಟಿದೆ. ಧರ್ಮ, ಸಂಸ್ಕೃತಿ, ಸಾಂಪ್ರದಾಯಿಕ ನಂಬಿಕೆಗಳ ಪಾಲುದಾರಿಕೆಯಿಂದ ಅನೇಕ ವಿಧದ ದೌರ್ಜನ್ಯಗಳು ಕ್ಷಮಾರ್ಹವೆಂದು ಅವುಗಳು ಅಪರಾಧಗಳೇ ಅಲ್ಲ ಎಂಬುದಾಗಿದೆ. ಹೀಗೆ ದೌರ್ಜನ್ಯವು ಪ್ರಮುಖವಾಗಿ ಕುಟುಂಬದ ಒಳ ಮತ್ತು ಹೊರ ಬದುಕಿನ ಎಲ್ಲಾ ಹಂತಗಳಲ್ಲೂ ಸಹ ಜೀವಂತವಾಗಿರುವುದನ್ನು ಗುರುತಿಸಿದ **ನ್ಯಾಷನಲ್ ಕ್ರೈಮ್ಸ್ ರಿಕಾರ್ಡ್ಸ್ ಬ್ಯೂರೋ** ಸಲ್ಲಿಸುವ ೧೯೯೮ರ ವರದಿಯಂತೆ, ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯದ ಅಪರಾಧಗಳ ಸಂಖ್ಯೆಯ ಬೆಳವಣಿಗೆಯೂ ೨೦೧೦ರ ವೇಳೆಗೆ ದೇಶದ ಜನಸಂಖ್ಯೆಗಿಂತಲೂ ಹೆಚ್ಚಾಗುತ್ತದೆ ಎಂದು ಹೇಳಲಾಗುತ್ತದೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಲಿಂಗಾಧಾರಿತ ತಾರತಮ್ಯವೇ ಮೂಲ ಕಾರಣವಾಗಿದೆ. ಈ ರೀತಿಯ ಕೃತ್ಯಗಳು ಸಮಾಜವ್ಯವಸ್ಥೆಯಲ್ಲಿ ಸ್ತ್ರೀ--ಪುರುಷರ ಅಸಮಾನ ಸಂಬಂಧಗಳನ್ನು ಹೊರಹಾಕುತ್ತವೆ. ಹಾಗಾಗಿ ಮಹಿಳೆಯರ ವಿರುದ್ದ ನಡೆಯು ದೌರ್ಜನ್ಯವೆಂದರೆ ಲಿಂಗಾಧಾರಿತ ದೌರ್ಜನ್ಯಕ್ಕೆ ಸಂಬಂಧಿಸಿದ

ಯಾವುದೇ ಕೃತ್ಯದ ಪರಿಣಾಮವಾಗಿದೆ. ಒತ್ತಾಯ ಪೂರ್ವಕವಾಗಿ ಅವಳ ಇಚ್ಛಾನುಸಾರವೆನ್ನುವಂತೆ ಅವಳ ಸ್ವಾತಂತ್ರ್ಯವನ್ನು ಅಪಹರಿಸಲು, ಅವಳ ಖಾಸಗೀ ಸಾರ್ವಜನಿಕ ಬದುಕಿನ ಮೇಲೆ ನಿಯಂತ್ರಣ ಸಾಧಿಸುವುದು, ಅವಳ ಅಭಿವೃದ್ದಿಯ ಮೂಲ. ಮೂಲಭೂತ ಚಟುವಟಿಕೆ, ಚಲನಶೀಲತೆಯ ಮೇಲೆ ಶಾಶ್ವತ ನಿರ್ಬಂಧಗೊಳಿಸುವುದು. ಹೀಗೆ ಹಿಂಸಾತ್ಮಕ ಕೃತ್ಯಗಳ ಮೂಲಕ ಭಯವನ್ನು ಸೃಷ್ಟಿಸಿ, ನಿಯಂತ್ರಣ ಕಳೆದುಕೊಳ್ಳುವ ಪರಿಣಾಮಕಾರಿ ತಂತ್ರಗಾರಿಕೆಯೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ. ಈ ಬಗೆಯ ದೌರ್ಜನ್ಯಗಳು ವಾಸ್ತವವಾಗಿ ಮಹಿಳೆಯ ಸಾಧನೆಯಲ್ಲಿ ಅಭಿವೃದ್ದಿಯಲ್ಲಿ ತೊಡಕುಂಟು ಮಾಡಲು ಬಳಸುವ ಅಸ್ತ್ರವಾಗಿದೆ. ಈ ಕ್ರಮವನ್ನು ಮಹಿಳೆಯರ ಮಾನವ ಹಕ್ಕುಗಳ ಉಲ್ಲಂಘನೆಯೆಂದು ಹೇಳಬಹುದು.

ಇಡೀ ಮಹಿಳಾ ಅಸ್ತಿತ್ವವನ್ನೇ ಇಲ್ಲವಾಗಿಸುವ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಕುರಿತು ಸಾಕಷ್ಟು ಚಿಂತನೆಗಳು ನಡೆದರೂ ಸಹಿತ ಇದನ್ನು ಗುರುತಿಸುವಲ್ಲಿ ಮತ್ತು ಅದನ್ನು ನಿವಾರಿಸುವಲ್ಲಿ ಪ್ರಯತ್ನಗಳು ಮಂದಗತಿಯಲ್ಲಿಯೇ ನಡೆದಿವೆಯೆನ್ನಬಹುದು. ಉದಾ: ೧೯೬೫ ರಲ್ಲಿ ಜಾರಿಯಾದ ವರದಕ್ಷಿಣೆ ನಿಷೇಧ ಕಾಯ್ದೆ ಹಲವಾರು ತಿದ್ದುಪಡಿಗೊಳಗಾದರೂ, ಮಹಿಳೆಯ ಬದುಕಿನಲ್ಲಿ ಇಂದಿಗೂ ಅಂತಹ ಬದಲಾವಣೆಗಳು ಕಂಡುಬಂದಿಲ್ಲ. ಜೊತೆಗೆ ಮಹಿಳೆಯ ಇತರೇ ಎಲ್ಲಾ ಸಮಸ್ಯೆಗಳು ಸಹ ಇದರಡಿಯಲ್ಲಿ ಮುಚ್ಚಿ ಹಾಕಲಾಗುತ್ತದೆ. ಈ ಬಗೆಯ ಹಲವಾರು ಮಹಿಳಾ ಕಾನೂನುಗಳು ಸ್ತ್ರೀವಾದಿ ಹೋರಾಟದ ಫಲದಿಂದ ಪಡೆಯಲಾಗಿದೆಯಾದರೂ ಮಹಿಳಾ ಬದುಕಿನ ಹಲಾವಾರು ಸಮಸ್ಯೆಗಳಿಗೆ ಪರಿಹಾರ ಕೊಡುವಲ್ಲಿ ವಿಫಲವಾಗುತ್ತಿವೆ. ಕಾನೂನುಗಳ ಪರಿಗಣನೆಯು ತರ್ಕಬದ್ಧವಾದ ಉತ್ತರಗಳನ್ನು ಹೇಳುವ ಮಟ್ಟಿಗೆ ಸೀಮಿತವಾಗಿದೆ. ಆದರೆ ಜೀವನ ತರ್ಕವನ್ನು ಆದರಿಸಿ ರೂಪಿತಗೊಂಡಿಲ್ಲ. ಮಹಿಳೆಯರ ವಾಸ್ತವದ ಬದುಕಿಗೆ ಕಾನೂನುಗಳು ಇತ್ಯಾತ್ಮಕವಾದ ಪ್ರತಿಕ್ರಿಯೆ ನೀಡುವ ಜರೂರಿದೆ.

ಬಹುತೇಕ ಚಿಂತಕರು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಭಾವನಾತ್ಮಕ, ದೈಹಿಕ, ಲೈಂಗಿಕ, ಮೌಖಿಕ ದೌರ್ಜನ್ಯವೆಂದು ೪ ಆಯಾಮಗಳಲ್ಲಿ ವಿವರಿಸುತ್ತಿದ್ದಾರೆ. ಹೀಗೆ ಸಂಶೋಧಕರಿಂದ–ಸಂಶೊಧಕರಿಗೆ, ಒಂದು ಜ್ಞಾನಶಿಸ್ತಿನಿಂದ–ಇನ್ನೊಂದು ಜ್ಞಾನಶಿಸ್ತಿಗೆ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ವ್ಯಾಖ್ಯಾನಗಳು ಒಳಗೊಳ್ಳುವ ಆಯಾಮಗಳಿಗೆ ಭಿನ್ನವೆಂದು ಹೇಳಲಾಗುತ್ತದೆ. ಬಹುತೇಕ ವ್ಯಾಖ್ಯಾನಗಳು ಈ ನಾಲ್ಕು ಆಯಾಮಗಳನ್ನು ಒಳಗೊಂಡಿಲ್ಲವೆಂಬುದು ಚಿಂತಕರ ಅಭಿಪ್ರಾಯವಾಗಿದೆ. ಹಾಗಾಗಿ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯದ ವ್ಯಾಖ್ಯಾನವು ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆಯೂ ಕಾರಣ ಅದರ ಪರಿಣಾಮಗಳು ಒಳಗೊಳ್ಳಬೇಕು. ಅವುಗಳೆಂದರೆ ಊಟದ ವ್ಯಾಧಿ ಅಥವಾ ಆತ್ಮಹತ್ಯ ಭಾವನೆಗಳು, ಪೋಸ್ಟಸ್ಟ್ರೋಮೆಟಿಕ್ ಸ್ಟ್ರೆಸ್ ಡಿಸಾರ್ಡರ್ (ಪಿ.ಟಿ.ಎಸ್.ಡಿ.) ಗಳು ಈ ವ್ಯಾಖ್ಯಾನದ ವಲಯದೊಳಗೆ ಮುಖಾಮುಖಿಯಾಗಬೇಕಿದೆ. ಹೀಗಾಗಿ ಮಹಿಳೆಯರ ವಿರುದ್ದ ನಡೆಯು ದೌರ್ಜನ್ಯದ

ವ್ಯಾಖ್ಯಾನವು ಬಳಸುವ ಆಯಾಮಗಳನ್ನು ಪರಿಗಣನೆಗೆ ಅನುಗುಣವಾಗಿ ಅದರ ಪ್ರಮಾಣ ಭಿನ್ನವಾಗಿದೆ. ಈ ಅಂಶಗಳನ್ನು ಒಳಗೊಂಡಿರುವ ಕೆಲವು ವ್ಯಾಖ್ಯಾನಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಲಿಂಗಾಧಾರಿತ ದೌರ್ಜನ್ಯದ ಕುರಿತಾದ ಯಾವುದೇ ಕೃತ್ಯದ ಫಲವು, ಮಹಿಳೆಗೆ ಲೈಂಗಿಕ, ದೈಹಿಕ, ಮಾನಸಿಕವಾಗಿ ಹಿಂಸಿಸುವುದು, ಸ್ವಾತಂತ್ರ್ಯವಿಲ್ಲದಂತೆ ನರಳಿಸುವುದು ಅವಳ ಖಾಸಗೀ ಮತ್ತು ಸಾರ್ವಜನಿಕ ಬದುಕಿನಲ್ಲಿ ಸ್ವಾತಂತ್ರ್ಯ ಪಡೆಯಲಾಗಿದೆ. ಕೊರಗುವುದನ್ನು ದೌರ್ಜನ್ಯವೆಂದು ಹೇಳಲಾಗುತ್ತದೆ. ತನ್ನ ಕುಟುಂಬ ಮತ್ತು ಸಮುದಾಯದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಅರ್ಥೈಸಿಕೊಳ್ಳುವ ಒಂದು ಮಿತಿಯೆನ್ನವುದಿಲ್ಲ. ಹುಟ್ಟಿನಿಂದ–ಸಾಯುವವರೆಗೂ ಅವಳು ವಿಭಿನ್ನವಾದ ದೌರ್ಜನ್ಯಗಳಿಗೆ ಬಲಿಯಾಗುತ್ತಲೇ ಇದ್ದಾಳೆ. ಉದಾ: ದೈಹಿಕ, ಲೈಂಗಿಕ ಮತ್ತು ಮಾನಸಿಕ ಹಿಂಸೆಗೆ ಸಂಬಂಧಿಸಿದಂತೆ ಕುಟುಂಬ ಮತ್ತು ಸಮುದಾಯಗಳಲ್ಲಿ ಮಹಿಳೆಯ ಮೇಲೆ ಅಕ್ರಮಣವೆಸಗುವುದು. ಗಂಡನೇ ಹೆಂಡತಿಯ ಮೇಲೆ ಬಲಾತ್ಕಾರ ಮಾಡುವುದು. ಅಂಗಾಂಗಗಳನ್ನು ಊಣ ಮಾಡುವುದು. ಹೆಣ್ಣು ಶಿಶುಗಳ ಲೈಂಗಿಕ ದುರುಪಯೋಗ, ಹಿಂಸಿಸುವ, ಗಂಡನಲ್ಲದೇ ಬೇರೆಯುವನಿಂದಾಗುವ ದೌರ್ಜನ್ಯ. ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಇನ್ನಿತರ ಯಾವುದೇ ವಲಯಗಳಲ್ಲಿ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ನೀಡುವುದು, ಲೈಂಗಿಕ ಕ್ರಿಯೆಗೆ ಒತ್ತಾಯ ಪಡಿಸುವುದು, ಸಮ್ಮತಿಸದಿದ್ದಾಗ ಹೆಣ್ಣು ಮಕ್ಕಳನ್ನು ಸಾಗಿಸಿ ಒತ್ತಾಯ ಪೂರ್ವಕವಾಗಿ ವೇಶ್ಯಾವಾಟಿಕೆಗೆ ತಳ್ಳುವುದು. ಇತ್ಯಾದಿ ಬಗೆಯ ದೌರ್ಜನ್ಯವನ್ನು ದೌರ್ಜನ್ಯದ ಅಪರಾಧಗಳನ್ನು ಪ್ರಭುತ್ವವು ಮನ್ನಿಸುತ್ತದೆ. ಪ್ರಭುತ್ವದ ಮೂಲಕವೇ ಘೋಷಿಸಲಾಗುತ್ತದೆ. ಅಸಮಾನವಾದ ಅಧಿಕಾರ ಸಂಬಂಧಗಳಿರುವುದರಿಂದ ಪುರುಷನು-ಸ್ತ್ರೀಯ ಮೇಲೆ ದಬ್ಬಾಳಿಕೆ ನಡೆಸಲು ಮತ್ತು ತಾರತಮ್ಯ ಎಸಗಲು ಮೂಲ ಕಾರಣವಾಗಿದೆ. ಬಲವಂತವಾಗಿ ಅವಳನ್ನು ಅಧೀನತೆಯ ಸ್ಥಾನಕ್ಕೆ ನೂಕುವುದೇ ಅವಳ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ದಾರಿಯಾಗಿದೆ ಎಂಬುದು ವಿಶ್ವಸಂಸ್ಥೆಯ ವ್ಯಾಖ್ಯಾನವಾಗಿದೆ.

ಈ ವ್ಯಾಖ್ಯಾನದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಪ್ರಮುಖವಾಗಿ ಕುಟುಂಬ–ಸಾರ್ವಜನಿಕ ವಲಯಗಳೆರಡನ್ನು ಆಧರಿಸಿ ವಿವರಿಸಲಾಗಿದೆ. ಆದರೆ ಹುಟ್ಟಿನಿಂದ–ಸಾಯುವವರೆಗಿನ ವಿಭಿನ್ನ ಬಗೆಯ ದೌರ್ಜನ್ಯಕ್ಕೆ ಮಹಿಳೆಯು ಬಲಿಯಾಗುತ್ತಿರುವುದನ್ನು ಹೇಳುವಾಗ, ಜನನ ಪೂರ್ವ ಸಂಗತಿಯ (ಭ್ರೂಣಹತ್ಯೆಯ) ಪ್ರಸ್ತಾಪ ಕಾಣಿಸುವುದಿಲ್ಲ. ಹಾಗೂ ಈ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಪ್ರಸ್ತಾಪ ಕಾಣಿಸುತ್ತಿರುವುದು ಈ ಅಧ್ಯಾಯದಲ್ಲಿ ಬಹುಮುಖ್ಯವಾಗಿ ಕೆಲಸದ ಸ್ಥಳದಲ್ಲಿ ನಡೆಯವ ಲೈಂಗಿಕ ಕಿರುಕುಳ ತಡೆ ಕಾಯ್ದೆಯ ಚರ್ಚೆಗೆ ಆಧಾರವಾಗಿ ನಿಲ್ಲುತ್ತದೆ.

"ಸಮಾಜದಲ್ಲಿನ ಸ್ತ್ರೀ ಪುರುಷರ ಮಧ್ಯದ ಅಸಮಾನ ಅಧಿಕಾರ ಸಂಬಂಧಗಳ ಕಾರ್ಯಾಚರಣೆಯನ್ನು ನಿಭಾಯಿಸಲು, ಲಿಂಗಾಧಾರಿತವಾಗಿ ನಡೆಯುವ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವು ಉಪಯುಕ್ತ ಅಸ್ತ್ರವಾಗಿದೆ. ಎಲ್ಲಾ ಅಧಿಕಾರಗಳಲ್ಲೂ ಮಹಿಳೆಯ ಸ್ಥಾನಮಾನಕ್ಕಿಂತ ಪುರುಷನು

ಶ್ರೇಷ್ಟನೆಂದು, ಪುರುಷ ಪ್ರಧಾನತೆಯ ಮೂಲಕ ಪ್ರತಿಬಿಂಭಿಸಲ್ಪಟ್ಟ ಸಿದ್ಧಾಂತಕ್ಕನು ಗುಣವಾಗಿ ಪುರುಷ ಮಹಿಳೆಯ ಮೇಲೆ ನಿಯಂತ್ರಣ ಮತ್ತು ದಬ್ಬಾಳಿಕೆಯನ್ನು ನಡೆಸುತ್ತಾನೆಂಬುದಕ್ಕೆ ಸಮಾಜದಲ್ಲಿನ ವಿಭಿನ್ನ ಮಾರ್ಗಗಳಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಈ ಬಗೆಯ ದೌರ್ಜನ್ಯಕ್ಕೆ ಪುರುಷ ಪ್ರಧಾನತೆಯ ಹೆಜ್ಜೆಗಳೇ ಕಾರಣವಾಗಿವೆ."[೩೦] **ಮೈತ್ರಿಯ ಕೃಷ್ಣರಾಜ್** ರವರು ಅಧೀನ ಪ್ರಾಧಾನತೆಯ ಏಣಿ ಶ್ರೇಣಿಕರಣವನ್ನು ಹೊಂದಿರುವ ಪುರುಷ ಪ್ರಧಾನ ವ್ಯವಸ್ಥೆಯೇ ಮಹಿಳೆಯ ವಿರುದ್ದ ನಡೆಯು ದೌರ್ಜನ್ಯಕ್ಕೆ ಆಧಾರವೆಂದು ಸೂಚಿಸುತ್ತಾರೆ.

ಪುರುಷಪ್ರಧಾನ ವಿಚಾರಧಾರೆಯೊಳಗೆ ಮಹಿಳೆಯ ಮೇಲೆ ನಡೆಯುವ ದೈಹಿಕ, ಲೈಂಗಿಕ ಮತ್ತು ಮಾನಸಿಕ ವ್ಯಾಧಿ ದೌರ್ಜನ್ಯಗಳಿಗೆ ಸಮಾಜವ್ಯವಸ್ಥೆಯಲ್ಲಿ ಅಲಿಖಿತ ಸಮ್ಮತಿಯನ್ನು ನೀಡಲಾಗಿದೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ ಕೇವಲ ಖಾಸಗೀ ವಲಯಕ್ಕೆ ಮಾತ್ರ ಸೀಮಿತವಾಗಿಲ್ಲವಾದ್ದರಿಂದ ಒಟ್ಟು ಸ್ತ್ರೀ ಪುರುಷ ಸಂಬಂಧಗಳುದ್ದಕ್ಕೂ ಚೌಕಟ್ಟಿನಲ್ಲಿರಿಸಿ ನೋಡಬಹುದಾಗಿದೆ. ಹೀಗೆ ವಿಶಾಲವ್ಯಾಪ್ತಿಯನ್ನು ಹೊಂದಿರುವ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯದ ಕುರಿತು ಚಿಂತನೆ ಸಂಶೋಧನಾ ಸಾಹಿತ್ಯದಲ್ಲಿ ಸಾಕಷ್ಟು ಕಾಣಬಹುದಾಗಿದೆ. ದೈಹಿಕ, ಮಾನಸಿಕ, ಭೌದ್ದಿಕ, ಆರ್ಥಿಕ ದುರಾಕ್ರಮಣ, ಲೈಂಗಿಕ ಹಿಂಸೆ ಇತ್ಯಾದಿಗಳನ್ನು ಕಾಲ, ಸಂದರ್ಭ, ಸನ್ನಿವೇಶಗಳಿಗನುಗುಣವಾಗಿ ಈ ಸಂಗತಿಯನ್ನು ವ್ಯಾಖ್ಯಾನಿಸಿದ್ದಾರೆ. ಒಟ್ಟು ವ್ಯಾಖ್ಯಾನಗಳನ್ನು ಎರಡು ಗುಂಪುಗಳಲ್ಲಿ ವಿಭಾಗಿಸಿ ನೋಡಿದಾಗ ಸಾಂಪ್ರದಾಯಿಕ ಚಿಂತಕರ ವ್ಯಾಖ್ಯಾನಗಳಲ್ಲಿನ ಒಟ್ಟು ಸ್ವರೂಪವು ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯಕ್ಕೆ ಪ್ರಕೃತಿಯೇ ಮಾಡಿದ ಅನ್ಯಾಯವು ಕಾರಣವೆಂದು ಹೇಳಲಾಗುತ್ತದೆ. ಸಾಂಪ್ರದಾಯಿಕ ಸಂಶೋಧನಾ ವಿಧಿವಿಧಾನಗಳನ್ನು ಅಳವಡಿಸಿಕೊಂಡು ಅಧ್ಯಯನ ನಡೆಸುವಲ್ಲಿ ಪ್ರಧಾನ ಲಿಂಗೀಯ ಪರವಾದ ಫಲಿತಗಳೇ ಬಂದಿವೆ ಎಂಬುದನ್ನು ಸ್ತ್ರೀವಾದಿಗಳು ಪ್ರತಿಪಾದಿಸಿದ್ದಾರೆ. ವಸ್ತು ನಿಷ್ಟತೆಯನ್ನೇ ಪ್ರಮುಖವಾಗಿ ಪರಿಗಣಿಸುವ ಸಾಂಪ್ರದಾಯಿಕ ಚಿಂತನೆಗಳಲ್ಲಿ ಸಂಕುಚಿತ ಮತ್ತು ಮೇಲ್ಮನೆಯ ಅಂಶಗಳನ್ನು ಮಾತ್ರ ಗ್ರಹಿಸಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ವ್ಯಾಖ್ಯಾನಿಸಿದ್ದಾರೆ. ಇಂತಹ ಲೈಂಗಿಕತಾವಾದಿ ತಾತ್ವಿಕತೆಯನ್ನು ಆಧರಿಸಿ ರೂಪಿತವಾಗಿರುವ ಕಾನೂನುಗಳು ಸಹ ಮಹಿಳಾ ಬದುಕನ್ನು ಸುಧಾರಿಸುವಲ್ಲಿ ಯಶಸ್ವಿಯಾಗುವುದಕ್ಕಿಂತ ಹೆಚ್ಚು ವೈಫಲ್ಯಗಳೇ ಆಗಿವೆ. ಅಲ್ಲದೆ ಮಹಿಳೆಯ ಬದುಕು ಸಾಮಾಜೀಕತೆಯ ಹಿನ್ನೆಲೆಯನ್ನಾಧರಿಸಿಯೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಗ್ರಹಿಸಿ ಸಿದ್ದಾಂತಗಳನ್ನು ರೂಪಿಸುವ ಜರೂರಿದೆ.

ಸ್ತ್ರೀವಾದಿ ಸಿದ್ದಾಂತಗಳಲ್ಲಿ ಈ ಕುರಿತ ವಿವಿಧ ಆಯಾಮಗಳು

೧೯೬೦ರ ಕೊನೆ ಮತ್ತು ೧೯೭೦ರ ದಶಕದ ಪ್ರಾರಂಭದಲ್ಲಿ ಮಹಿಳೆಯರ ವಿರುದ್ಧ ನೆಡೆಯುವ ದೌರ್ಜನ್ಯವು ನಿಧಾನವಾಗಿ ಅಲ್ಲಲ್ಲಿ ಕೇಳಲ್ಪಟ್ಟು ಮುಂಬರುವ ದಿನಗಳಲ್ಲಿ ಗಂಭೀರವಾದ ಸಾಮಾಜಿಕ ಸಮಸ್ಯೆಯಾಯಿತು. ಈ ಹಿಂದೆ ಮಹಿಳೆಯರ ವಿರುಧ್ಧ ದೌರ್ಜನ್ಯಗಳು ಇರಲೇ ಇಲ್ಲವೆಂದಲ್ಲ. ಮಹಿಳೆಯರು

ಮನೆಯೊಳಗಿನ ನಾಲ್ಕು ಗೋಡೆಯ ಮಧ್ಯದಲ್ಲಿರುವುದರಿಂದ ಅವಳ ಮೇಲೆ ನಡೆಯುವ ದೌರ್ಜನ್ಯ-ಹಿಂಸೆಗಳು ಅದರೊಳಗೆ ಅಡಕವಾಗಿದ್ದವು. ಗೃಹಬಂಧನದಿಂದ ಹೊರಬಂದ ಮಹಿಳೆ ಯಾವಾಗ ಸಾಮಾಜಿಕ ಬದುಕಿಗೆ ಮುಖಾಮುಖಿಯಾಗಲು ಪ್ರಾರಂಭಿಸಿದಳೋ, ಅಂದಿನಿಂದ ಅವಳ ಬದುಕಿನ ಬಹುಪಾಲು ಸಂಗತಿಗಳು ಅನಾವರಣಗೊಂಡವು. ಮಹಿಳೆಯರ ವಿರುದ್ಧ ನಡೆಯುವ ಹಿಂಸೆ-ದೌರ್ಜನ್ಯವನ್ನು ಅರ್ಥೈಸಿಕೊಳ್ಳಲು ಸುದೀರ್ಘ ಚಿಂತನೆಯನ್ನು ನಡೆಸುವ ಮೂಲಕ ಆಧಾರವನ್ನು ರೂಪಿಸಿಕೊಳ್ಳಲು, ಆಗಾಗ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ದಮನದ ಕೆಲವು ಆಯಾಮಗಳನ್ನು ತಿಳಿದುಕೊಳ್ಳುವುದು ಸೂಕ್ತ ಸಂಗತಿಯಾಗಿದೆ. ಆರಂಭದಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಆರ್ಥಿಕ ಶೋಷಣೆ, ಲೈಂಗಿಕತೆ, ಜಾತಿ-ವರ್ಗ, ಗ್ರಾಮ-ನಗರ, ಮತ್ತು ಸಂಸ್ಕೃತಿ ಇತ್ಯಾದಿಗಳ ಸಂಬಂಧಗಳನ್ನು ಸ್ಥೂಲವಾಗಿ ಪರೀಕ್ಷೆಗೊಳಪಡಿಸಬೇಕಾಗುತ್ತದೆ. ಮಹಿಳೆಯು ದಮನವಾಗಲು ಆರ್ಥಿಕಶೋಷಣೆಯ ಪಾತ್ರವು ದೌರ್ಜನ್ಯದಲ್ಲಿ ಮುಖ್ಯವಾಗಿ ಗುರುತಿಸಲಾಗಿದೆ. ಈ ಮೂಲಕ ಮಹಿಳೆಯನ್ನು ನಿಯಂತ್ರಣದಲ್ಲಿರಿಸಿಕೊಳ್ಳುವ ಪ್ರಯತ್ನವು ಆರ್ಥಿಕ ಅವಲಂಬನೆ ಶೋಷಣೆಯಿಂದಾಗಿ ಮಹಿಳಾ ಸಮುದಾಯ ಅಧಿಕಾರವನ್ನು ಪಡೆಯುವಲ್ಲಿ ಮತ್ತು ಹಿಂಸೆ ದೌರ್ಜನ್ಯಗಳನ್ನು ಪ್ರತಿಭಟಿಸುವಲ್ಲಿ ಅಸಮರ್ಥರಾಗುವುದರಿಂದ ಇದನ್ನು ಪ್ರಮುಖವಾಗಿ ಪ್ರತಿನಿಧಿಸಲಾಗಿದೆ.

ಮಹಿಳೆಯ ಒಟ್ಟು ಸಮಸ್ಯೆಗಳ ಮೂಲ ಲೈಂಗಿಕತೆಯೇ ಆಗಿದೆ. ಸಾಮಾಜಿಕವಾಗಿ ಕಟ್ಟಲ್ಪಟ್ಟ ಲೈಂಗಿಕತೆಯ ವ್ಯಾಖ್ಯಾನ ಅವಳ ಅಸ್ತಿತ್ವದ ದಮನವನ್ನೇ ಬಯಸುತ್ತದೆ. ಇಂದಿಗೂ ರೂಢಿಯಲ್ಲಿರುವ ವಿವಿಧ ಬಗೆ ದೌರ್ಜನ್ಯಗಳತ್ತ ಗಮನಹರಿಸಿದಾಗ ಬಹುಪಾಲು ಸಂಗತಿಗಳಲ್ಲಿ ಲೈಂಗಿಕತೆಯ ಪ್ರಶ್ನೆ ಪ್ರಮುಖವಾಗಿ ಬೆಳಕಿಗೆ ಬರುತ್ತದೆ. ಮಹಿಳೆಯ ಸಮಗ್ರ ಚಹರೆಯನ್ನೇ ಲೈಂಗಿಕತೆ ಅಂದರೆ ಅವಳ ದೇಹ ಮತ್ತು ಅದರಿಂದ ಲಭ್ಯವಾಗುವ ಸೇವೆಯನ್ನೇ ಆಧರಿಸಿರುವುದರಿಂದ ಎಲ್ಲ ಬಗೆಯ ಒತ್ತಡ ದಬ್ಬಾಳಿಕೆ ಮತ್ತು ದೌರ್ಜನ್ಯಗಳಲ್ಲಿ ಇದು ಕಾಣಿಸುವುದು:

ಎಲ್ಲಾ ಜಾತಿ-ವರ್ಗ-ವರ್ಣಗಳಲ್ಲಿ ಮಹಿಳೆಯು ಸೇರಿಕೊಂಡಿರುವುದರಿಂದ, ಆಯಾ ಬಗೆಯ ಪರಿಸರಕ್ಕನುಗುಣವಾಗಿ ಅಲ್ಲಿನ ಹಿಂಸೆ – ದೌರ್ಜನ್ಯದ ಸ್ವರೂಪವು ಕಾಣಿಸಿಕೊಳ್ಳುತ್ತದೆ. ಉದಾ: ಒಬ್ಬ ಸುಶಿಕ್ಷಿತ ಮಹಿಳೆ ಮತ್ತು ಅನಕ್ಷರಸ್ಥ ಮಹಿಳೆ ಇವರನ್ನು ಹೋಲಿಸಿದಾಗ ಇಬ್ಬರ ಮೇಲೂ ಹಿಂಸೆ ದೌರ್ಜನ್ಯಗಳಾಗುತ್ತಿರುವುದಕ್ಕೆ ಉದ್ದೇಶ ಒಂದೇ ಆಗಿದ್ದು ಆದರೆ ಸ್ವರೂಪದಲ್ಲಿ ಭಿನ್ನತೆಗಳಾಗುತ್ತವೆ. ಹಾಗಾಗಿ ಆಯಾ ಪರಿಸ್ಥಿತಿ, ಸನ್ನಿವೇಶಗಳಿಗನುಗುಣವಾಗಿ ಮಹಿಳೆಯರ ವಿರುದ್ಧ ನಡೆಯುವ ಹಿಂಸೆ-ದೌರ್ಜನ್ಯವನ್ನು ವಿವರಿಕೊಳ್ಳಬೇಕಾಗುತ್ತದೆ. ಈ ಎಲ್ಲ ಅಂಶಗಳಿಗೂ ಪೂರಕವಾಗಿ ಸಂಸ್ಕೃತಿ, ರೂಢಿ, ಆಚರಣೆಗಳು ಕಾಣಿಸಿಕೊಳ್ಳುತ್ತವೆ. ಈ ನಿಟ್ಟಿನಲ್ಲಿ ಮೊದಲು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ಚರ್ಚೆಯನ್ನು

ಪ್ರಾರಭಿಸಿದವರು ತೀವ್ರವಾದಿ ಸ್ತ್ರೀವಾದಿಗಳು. ವಿವಾಹ ಮತ್ತು ಕುಟುಂಬ ಸಂಸ್ಥೆಗಳೇ ಮಹಿಳಾ ಶೋಷಣೆಯ ಕೇಂದ್ರಬಿಂದುವೆಂದು ತಮ್ಮ ಸಿದ್ಧಾಂತದಲ್ಲಿ ಪ್ರತಿಪಾದಿಸಿದರು.

ತೀವ್ರವಾದಿ ಸ್ತ್ರೀವಾದ ಮತ್ತು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ-ಹಿಂಸೆ

ಅರವತ್ತರ ದಶಕದ ಉತ್ತರಾರ್ಧ ಮತ್ತು ೭೦ರ ದಶಕದ ಪ್ರಾರಂಭದಲ್ಲಿ ಸ್ತ್ರೀವಾದದ ೨ನೇಯ ಅಲೆಯೆಂದೇ ತೀವ್ರವಾದಿ ಸ್ತ್ರೀವಾದವನ್ನು ಗುರುತಿಸಲಾಗುತ್ತದೆ. ಈ ಸ್ತ್ರೀವಾದವು ಪುರುಷನನ್ನು ಶತ್ರುವೆಂದು ಪರಿಭಾವಿಸಿತ್ತೆಂಬ ಆರೋಪವು ಇದೆ. ಮೊಟ್ಟಮೊದಲು ಮಹಿಳಾ ಶೋಷಣೆಯ ಪ್ರಶ್ನೆಯನ್ನು ಹುಟ್ಟಿಹಾಕಿರುವುದೇ ತೀವ್ರವಾದಿ ಸ್ತ್ರೀವಾದಿಗಳು. ವರ್ಗ, ಜನಾಂಗ ಮೂಲವಾದ ದೌರ್ಜನ್ಯಕ್ಕಿಂತ ಲೈಂಗಿಕ ದಮನವು ಮೊದಲನೆಯದು. "ಲೈಂಗಿಕ ದಾಸ್ಯ ಮತ್ತು ಒತ್ತಾಯದ ತಾಯ್ತನಗಳ ಆಕರವಾದ ಕುಟುಂಬವೇ ಹೆಣ್ಣಿನ ಶೋಷಣೆಯ "ಕೀಲಿಕೈ" ಎಂಬುದನ್ನು ಪ್ರತಿಪಾದಿಸಿತು. ಕುಟುಂಬವೆಂಬುದು ಮಹಿಳೆಯ ರಕ್ಷಣೆಯ ತಾಣವೆಂಬುಧು ಭ್ರಮಾತ್ಮಕ ಕಲ್ಪನೆ. ವ್ಯಾಲರಿ ಸೊಲಾಸಿಸ್, ಜೋರಿನ ಮುಂದುವರೆದಂತೆ **ಮೇರಿಡಾಲಿ ಮತ್ತು ಸೂಸನ್ ಗ್ರಿಫೆನ್** "ಪರುಷ ಪ್ರಧಾನ ವ್ಯವಸ್ಥೆಯಲ್ಲಿ ಲಿಂಗದ ಕಾರಣದಿಂದಾಗಿಯೇ ಹೆಣ್ಣು ದಮನಕ್ಕೊಳಗಾಗಿದ್ದಾಳೆ. ಪುರುಷ ಸಮುದಾಯ ಶ್ರೇಷ್ಠತೆಯನ್ನು ಬಳಸಿಕೊಂಡು ತನ್ನ ಅಧಿಕಾರಗಳನ್ನು ಗಟ್ಟಿಗೊಳಿಸಿಕೊಂಡಿದೆ". ಎನ್ನುವುದು ಈ ಚಿಂತಕೀಯರ ಅಭಿಮತ. ಈ ಬಗೆಯ ತಂತ್ರಗಾರಿಕೆಯಿಂದ ಪಡೆಯಲಾದ ಅಧಿಕಾರವನ್ನು ನಿರಂತರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. **ಮೇರಿಡಾಲಿ** ರವರು ತಮ್ಮ 'ಗೈನಕಾಲಜಿ' ಪುಸ್ತಕದಲ್ಲಿ ಎಲ್ಲಾ ವಿಧವಾದ ಪರಿಸರ ವಿನಾಶಗಳು, ಪುರುಷಾಧಿಪತ್ಯದ ಹಿಂಸಾತ್ಮಕ ಅಧಿಕಾರದ ವಿವಿಧ ರೂಪಗಳೆಂದು ಮಹಿಳೆಯರ ಮೇಲಿನ ದೌರ್ಜನ್ಯವನ್ನು ಪ್ರಸ್ತಾಪಿಸುತ್ತಾರೆ.

ಉತ್ಪಾದನಾ ವ್ಯವಸ್ಥೆಯಲ್ಲಿ ಲಿಂಗಾಧಾರಿತ ಶ್ರಮವಿಭಜನೆಯ ಕಾರಣಗಳನ್ನು ಗುರುತಿಸುವುದರ ಬದಲು ಪುರುಷ ಪ್ರಧಾನ ಸಂರಚನೆಯಲ್ಲಿ ಶೋಧಿಸುವುದು ಸೂಕ್ತ. ನಿಜವಾದ ಸ್ತ್ರೀಯನ್ನು ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿ ತಿರುಚಲ್ಪಟ್ಟಿದೆ. ಪ್ರಾಕೃತಿಕವಾಗಿ ದತ್ತವಾದ, ಜೈವಿಕ ಭಿನ್ನತೆಯನ್ನಾಧರಿಸಿದ ಸ್ತ್ರೀ-ಪುರುಷ ಮಧ್ಯದ ಭಿನ್ನತೆಗಳನ್ನು ನಿರಾಕರಿಸಿ, ಇವುಗಳನ್ನು ಮೀರುವುದರೊಂದಿಗೆ ಬಹುಮುಖ್ಯವಾಗಿ "ಶಿಶ್ನಯೋನಿ ಕೇಂದ್ರಿತ" ಚಿಂತನೆಯ ಆದರ್ಶದತ್ತ ಮುಖ ಮಾಡುತ್ತದೆ. ತೀವ್ರವಾದಿ ಸ್ತ್ರೀವಾದದ ಒಟ್ಟು ಇತಿಹಾಸವನ್ನು ಗಮನಿಸಿ ಹೇಳುವುದಾದರೆ, ಈ ಚಿಂತನೆಯ ಎಲ್ಲಾ ನಿಲುವುಗಳಲ್ಲೂ ಸಹ ಲೈಂಗಿಕತೆ ಮತ್ತು ಲೈಂಗಿಕ ದಬ್ಬಾಳಿಕೆ ಹೆಚ್ಚು ಒತ್ತು ಕೊಡಲಾಗಿದೆ. ಅಲ್ಲದೆ ಕೌಟುಂಬಿಕ ವಲಯದ ದೌರ್ಜನ್ಯದ ಮುಖ್ಯವಾದ ಎಳೆಗಳನ್ನು ಹೊರಹಾಕುತ್ತದೆ, "ತಾಯ್ತನ ಮತ್ತು ಶಿಶುವಿನ ಪಾಲನೆ" ಶೋಷಣೆ (ಕುಟುಂಬದ)ಯು ಮಹಿಳೆಯ ಸಾಧನೆಗಳಿಗೆ ಅಡ್ಡಿಯೆಂದು ಭಾವಿಸಿರುವ ಈ ಸ್ತ್ರೀವಾದವು, ಆಧುನಿಕ ವಿಜ್ಞಾನ ತಂತ್ರಜ್ಞಾನಗಳು ಮಹಿಳೆಯ ಸಾಧನೆಯ ಹಾದಿಯಲ್ಲಿ ಸಕಾರಾತ್ಮಕ ಸಂಗತಿಯಾಗಿದೆ. ಮೇಲೆ ಸೂಚಿಸಿದ ಹೊರೆಗಳಿಂದ ಮುಕ್ತವಾಗಿಸುತ್ತದೆ ಎಂದು ಹೇಳಲಾಗುತ್ತದೆ.

ಮುಂದಿನ ಅಧ್ಯಯನದಲ್ಲಿ ಆರೋಗ್ಯ ವಲಯದ ಹಿಂಸೆ–ದೌರ್ಜನ್ಯವನ್ನು ವಿವರಿಸುವಲ್ಲಿ ಇದನ್ನು ಸಾಂದರ್ಭಿಕ ಚರ್ಚೆಗೆತ್ತಿಕೊಳ್ಳಲಾಗುತ್ತದೆ. ನಂತರದಲ್ಲಿ ಮಾರ್ಕ್ಸ್‌ವಾದದ ನೆಲೆಯಲ್ಲಿ ಹಿಂಸೆ–ದೌರ್ಜನ್ಯದ ಚಿಂತನೆಯನ್ನು ಅವಲೋಕಿಸಬೇಕಾಗಿದೆ.

ಮಾರ್ಕ್ಸ್‌ವಾದ ಮತ್ತು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ

ಹೆಣ್ಣಿನ ಆರ್ಥಿಕ ಪರಾಧೀನತೆಯನ್ನು ತಳಹದಿಯನ್ನಾಗಿಸಿಕೊಂಡು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಮಾರ್ಕ್ಸ್‌ವಾದವು ವಿವರಿಸುತ್ತದೆ. ಉತ್ಪಾದನಾ ವಲಯದಿಂದ ಮಹಿಳೆಯನ್ನು ಹೊರಹಾಕುವುದು, ಅಧಿಕ ಅವಲಂಬನೆಯನ್ನುಂಟು ಮಾಡಲು ಈ ನೆಲೆಯಿಂದ ಮಹಿಳೆಯ ಸಂಪೂರ್ಣ ಬದುಕಿನ ಮೇಲೆ ಹಕ್ಕು ಸಾಧಿಸುವ ಯತ್ನ ಪುರುಷ ಸಂಸ್ಕೃತಿಯ ಚಿಂತನೆಯಾಗಿದೆ. "ಪ್ರಭುತ್ವವು ವರ್ಗ ಶೋಷಣೆಯ ಸಾಧನವಾದರೆ, ಕುಟುಂಬವು ಸ್ತ್ರೀಯನ್ನು ಶೋಷಿಸಲು ಪುರುಷನ ಸಾಧನವಾಯಿತು." ಎಂದು **ಪೆಡ್ರಿಕ್ ಏಂಗೆಲ್ಸ್** ಹೇಳುತ್ತಾರೆ. ಸಾಮುದಾಯಿಕ ಬಗೆಯ ಪುರುಷ ಪ್ರಧಾನ ಕುಟುಂಬಗಳಲ್ಲಿ ಹೆಂಡತಿಯು ಸರ್ವರಿಗೂ ದಾಸಿಯಾದರೆ, ಏಕ ಪತ್ನಿತ್ವದ ಪದ್ಧತಿ ಬೆಳೆದು ಬಂದ ಮೇಲೆ ಮಹಿಳೆಯು ಪುರಷನ ವೈಯಕ್ತಿಕ ದಾಸಿಯಾಗಿ ಮುಂದುವರಿದಳು ಮಹಿಳೆಯ ಎಲ್ಲಾ ಸಮಸ್ಯೆಗಳನ್ನು ದುಡಿಮೆ, ಉತ್ಪಾದನಾವಲಯವನ್ನಾಧರಿಸಿ ನೋಡುವ ಎಂಗೆಲ್ಸ್ ರವರು ಆಕೆಯ ಶಾರೀರಿಕ ದೌರ್ಬಲ್ಯವೇ ಶೋಷಣೆಯ ಮೂಲವಾಗಿ ಪ್ರತಿನಿಧಿಸುತ್ತದೆ. ಸಾಮುದಾಯಿಕ ಆಸ್ತಿ, ಯಾವುದೇ ಬಗೆ ಕುಟುಂಬಗಳಲ್ಲಿಯೂ ಹೆಣ್ಣು ಪುರುಷನ ಆಸ್ತಿಯೆಂಬುದೇ ಖಚಿತಪಡಿಸಿದರೆ ಅವಳ ಶೋಷಣೆಯ ವಿಮುಕ್ತಿಗೆ ಸ್ತ್ರೀ ಸಮುದಾಯದ ಮತ್ತೆ ಸಾರ್ವಜನಿಕ ಕೈಗಾರಿಕೆಯೊಳಗೆ ಪ್ರವೇಶಿಸಬೇಕೆಂದಾಗಿದೆ.

ಒಟ್ಟಾರೆ ಮಾರ್ಕ್ಸ್‌ವಾದಿಗಳು ಉತ್ಪಾದನಾವಲಯ ಮತ್ತು ಖಾಸಗೀ ಆಸ್ತಿಯ ಮೇಲೆ ಪ್ರಮುಖವಾಗಿ ಗಮನ ಹರಿಸುತ್ತಾರೆ. ಮಹಿಳೆಯರ ಒಟ್ಟಾರೆ ದಮನಕ್ಕೆ ಇವುಗಳನ್ನೇ ಕಾರಣಗಳನ್ನಾಗಿ ಸ್ಪಷ್ಟಪಡಿಸುತ್ತಾರೆ. ಸಾಂಪ್ರದಾಯಿಕ ಮಾರ್ಕ್ಸ್ ವಾದವು ಕೆಲವು ಸಂಗತಿಗಳನ್ನು ಹೊರಹಾಕುತ್ತದೆ. ವರ್ಗ ಹೋರಾಟದ ತಳಹದಿಯಲ್ಲಿ ರೂಪಿತವಾದ ಮಾರ್ಕ್ಸ್‌ವಾದವು ಮಹಿಳೆಯ ಶೋಷಣೆಗಳತ್ತ ಖಚಿತವಾಗಿ ಗಮನಹರಿಸುವಲ್ಲಿ ಸಾಕಷ್ಟು ಪುರುಷ ಪ್ರಧಾನತೆಯ ಸಂಗತಿಗಳು ಅಡ್ಡಿಯಾಗಿವೆಂಬುದನ್ನು ಮಾರ್ಕ್ಸ್‌ರ ಬರಹಗಳಲ್ಲಿ ಕಾಣಿಸುತ್ತದೆ. ಏಂಗೆಲ್ಸ್‌ರ ಕೃತಿಯಲ್ಲಿ ಉತ್ಪಾದಕತ್ವದ ಪಾತ್ರದಲ್ಲಿ ಮಹಿಳೆಯರ ಕೌಟುಂಬಿಕ ಕೆಲಸಗಳನ್ನು ಹೇಳಿದ್ದಾರೆ. ಆದರೆ ಬಂಡವಾಳ ಶಾಹಿಯ ಶೋಷಣಾತ್ಮಕ ಸಂಬಂಧಗಳನ್ನು ತೊಡಕುಗಳನ್ನು ಅವರು ವಿಶ್ಲೇಷಿಸಲಿಲ್ಲ. ಮಹಿಳಾ ದುಡಿಮೆಗಾರರು, ದುಡಿಯುವ ವರ್ಗದ ಒತ್ತಡಗಳು, ಅವರು ಗಂಡಂದಿರ ನಿಯಂತ್ರಣದಿಂದ ಸ್ವತಂತ್ರರಲ್ಲ. ಮಹಿಳೆಯರ ಮೇಲಿನ ಆಕ್ರಮಣದ ಕುರಿತು ಸಾಮನ್ಯವಾಗಿ ಗುರುತಿಸಲಾದ ದೌರ್ಜನ್ಯದ ಎಲ್ಲಾ ಬಗೆಯು ಕೇವಲ ಆರ್ಥಿಕತೆ ಮೂಲವಲ್ಲ. ಇದು ಖಾಸಗೀ ಆಸ್ತಿಯ ಹೆಚ್ಚಿನ ಒತ್ತಡವಾಗಿದೆ. ಆಸ್ತಿ ಹಕ್ಕಿನ ರಕ್ಷಣೆಯ ಅಗತ್ಯತೆಯ ಭಾಗವಾಗಿ ಅಲ್ಲಿ ದೌರ್ಜನ್ಯವು ಹುಟ್ಟಿಕೊಂಡಿತು. ಸಾಂಪ್ರದಾಯಿಕ

ಸಮಾಜದಲ್ಲಿನ ಸ್ವರೂಪ ಮತ್ತು ಆಯಾಮಗಳಲ್ಲಿ ಹಿಂಸಾತ್ಮಕ ಹೋರಾಟಗಳು ಸ್ವಯಂ ರಕ್ಷಣೆಗಾಗಿ ಮಾನವ ಸಮಾಜದಲ್ಲಿ ದೌರ್ಜನ್ಯವನ್ನು ಒತ್ತಾಯಪೂರ್ವಕವಾಗಿ ಸ್ವೀಕರಿಸಲಾಯಿತು. ವಿವಿಧ ಸಾಮಗ್ರಿಗಳ ಸ್ವರೂಪದಿಂದ ಪರಿವರ್ತಿಸಲ್ಪಟ್ಟ ಸಮಾಜದ ಅಭಿವೃದ್ಧಿ ಹಂತಗಳಲ್ಲಿ ಖಾಸಗೀ ಆಸ್ತಿಯ ಮೂಲವಸ್ತುವನ್ನು ಪರಿಚಯಿಸಲ್ಪಟ್ಟಿದ್ದರಿಂದಾಗಿ, ತಾರತಮ್ಯ ಮತ್ತು ಶೋಷಣೆಯಿಂದಾಗಿ, ಒತ್ತಡಗಳು, ದೌರ್ಜನ್ಯಗಳು ತುತ್ತತುದಿಗೇರಿದವು. ಸಾಂಪ್ರದಾಯಿಕ ಮಾರ್ಕ್ಸ್‌ವಾದವು ಮಹಿಳೆಯ ಸ್ವತಂತ್ರಕ್ಕಾಗಿ ಒಟ್ಟು ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧದ ಹೋರಾಟ ಸ್ತ್ರೀ ಪುರುಷರ ಮಧ್ಯದಲ್ಲಿ ಸಾಮಾನ್ಯವಾಗಿ ಅಲ್ಲಿ ಸಮಾನತೆಯಿತ್ತೆನ್ನುವಾಗಲೂ ಅಲ್ಲಿನ ಲಿಂಗಾಧಾರಿತ ಶ್ರಮ ವಿಭಜನೆಯು ಪುರುಷರು, ಉತ್ಪಾದಕರು ಮತ್ತು ಮಹಿಳೆಯರು, ಮರುತ್ಪಾದಕರು, ಆದಾಗ್ಯೂ ಪುನರುತ್ಪಾದಕತೆಯು ಹೆಚ್ಚು ನಿರ್ಣಯಾತ್ಮಕವಾಗಿದ್ದು ಮಹಿಳೆಗೆ ಉನ್ನತ ಸ್ಥಾನಮಾನವಿತ್ತು. ಮುಂದುವರೆದು ಲೈಂಗಿಕತೆಯ ನಿರ್ಬಂಧವಿರಲಿಲ್ಲ. ಹುಟ್ಟುವ ಮಗುವಿಗೆ ತಂದೆಯ ಚಹರೆಯಿಲ್ಲದ್ದಕ್ಕೆ ಮಾತೃ ಹಕ್ಕು ಪ್ರಭಲವಾಗಿತ್ತು. ನಾಗರೀಕತೆಯು ಬೆಳೆದಂತೆಲ್ಲಾ ಬೀಜ-ಕ್ಷೇತ್ರ ನ್ಯಾಯದ ಪರಿಕಲ್ಪನೆಯಲ್ಲಿ ಮಹಿಳೆಯು 'ಪುರುಷ ಸಂಸ್ಕೃತಿಯ ಸ್ವತ್ತುಗಳು' ಈ ಸಂದರ್ಭದಲ್ಲಿ ಜನ್ಮತಳೆದ ವರ್ಗ ಸಂಘರ್ಷಗಳಲ್ಲಿ ಪುರುಷ ಪ್ರಧಾನ ಕುಟುಂಬ ಮತ್ತು ಪ್ರಭುತ್ವದ ಬೆಳವಣಿಗೆಗಳು ಒಂದೇ ಪ್ರಕ್ರಿಯೆಯಲ್ಲಿ ಕಾಣತೊಡಗಿದವು. ಮೊದಮೊದಲು ಆರ್ಥಿಕ ಶೋಷಣೆಯ ಫಲಿತವಾಗಿ ಕಂಡುಬಂದಿರುವ ದೌರ್ಜನ್ಯವು ವರ್ಗ ವಿಭಜನೆಗಳನ್ನು ಹೆಚ್ಚಿಸಿತು. ಇಲ್ಲಿ ಕಂಡುಬಂದ ಖಾಸಗೀ ಆಸ್ತಿಯ ಪರಿಕಲ್ಪನೆಯು ಗಟ್ಟಿಯಾಗುತ್ತಾ ಬಂದಂತೆಲ್ಲಾ ಸ್ತ್ರೀಯರ ವಿರುದ್ಧದ ಹಿಂಸೆ- ದೌರ್ಜನ್ಯಕ್ಕೆ ನಾಂದಿಯಾಯಿತು.

ಸಮಾಜವಾದಿ ಸ್ತ್ರೀವಾದ ಮತ್ತು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ

"ಜೀತದ ಅನುಭವವನ್ನು ಮೊಟ್ಟ ಮೊದಲು ಅನುಭವಿಸಿದ ಮಾನವ ಜೀವಿಯೆಂದರೆ ಮಹಿಳೆ. ಪುರುಷ ಜೀತದಾಳು ಹುಟ್ಟುವಮೊದಲೇ ಮಹಿಳೆ ಜೀತದಾಳಲಾಗಿದ್ದಳು." **ಅಗಸ್ಟ್‌ಬೇಬರ್** 'ವುಮೆನ್ ಅಂಡ್ ಸೋಶಿಯಾಲಿಜಿಮ್' ಕೃತಿಯಲ್ಲಿ ಗುರುತಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಆಗಸ್ಟ್‌ಬೇಬರ್‌ನು ಮಹಿಳೆಯು ಕೇವಲ ಬಂಡವಾಳಶಾಹಿಯಿಂದ, ಉತ್ಪಾದನಾ ವಲಯದ ಆಚೆಗಿರುವುದರಿಂದ ಹಿಂಸೆ-ದೌರ್ಜನ್ಯಕ್ಕೆ ಬಲಿಯಾಗುತ್ತಾಳೆಂಬುದನ್ನು ತಿರಸ್ಕರಿಸುತ್ತಾನೆ. ಸಮಾಜವಾದ ಬರೆದ ಲಿಂಗ ಸಮಾನತೆ ಅಸಾಧ್ಯವೆಂಬುದಕ್ಕೆ ಒತ್ತು ಕೊಡುತ್ತಾನೆ. ಮಹಿಳೆಯೊಬ್ಬಳು ಸೋವಿಯತ್ ರಷ್ಯಾದ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ, ವಿದೇಶಿರಾಯಭಾರಿಯಾಗಿರುವುದು ಚಾರಿತ್ರಿಕ ಮಹತ್ವ ಘಟನೆಯನ್ನಾಗಿಸಿದ ಅಲೆಗ್ಸಾಂಡರ್ ಕೊಲಂಬೈಯವರು ಬೆಬೆಲ್ ಚಿಂತನೆ ಪೂರ್ವಕವಾಗಿದ್ದಾರೆ. ಹಾಗೆಯೇ ತಾಯಿಯು, ಹೆಣ್ಣಾಗಿ ಶತಮಾನದುದ್ದಕ್ಕೂ ದೌರ್ಜನ್ಯದ ಬಲಿಪಶುವಾಗಿದ್ದಾಳೆಂದು ಹೇಳುತ್ತಾರೆ. ಸಮಾಜವಾದಿ ಸ್ತ್ರೀವಾದಿಗಳು, ಚರಿತ್ರೆಯನ್ನು ಹೆಣ್ಣಿನ ಆರ್ಥಿಕ ಮತ್ತು ಭೌತಿಕ ದಾಸ್ಯದ ಚರಿತ್ರೆಯಿಂದ ವಿಶ್ಲೇಶಿಸುತ್ತಾರೆ. ಸಾಂಪ್ರದಾಯಿಕ ಮಾರ್ಕ್ಸ್‌ವಾದವು ಕಡೆಗಣಿಸಿರುವ ಕೆಲವು ಮಹಿಳಾ ಸಂಗತಿಗಳನ್ನು ಪ್ರಸ್ತಾಪಿಸುತ್ತಾ ಶೀಲಾರೊಬಾತಮ್ ಮಹಿಳೆ ಕುಟುಂಬ ಮತ್ತು ಕೆಲಸದ ಸ್ಥಳಗಳಲ್ಲಿ

ವಿಶಿಷ್ಟ ಅನುಭವವನ್ನು ಉತ್ಪಾದನಾ ಸಂಬಂಧದಲ್ಲಿ ಪಡೆಯುತ್ತಾಳೆಂದು ಹೇಳುತ್ತಾರೆ. "ಮಿಶೇಲ್ ಬ್ಯಾರೆಟ್" ತನ್ನ "ವಿಮೆನ್ಸ್ ಪ್ರೆಶನ್ ಟುಡೆ" ಕೃತಿಯಲ್ಲಿ ಅಸಮಾನತೆಗೆ ಉತ್ಪಾದನೆ ಮತ್ತು ಸಂತಾನೋತ್ಪಾದನೆಯೇ ಕಾರಣವಾಗಿವೆಯೆಂದು ಹೇಳುವುದರೊಂದಿಗೆ, ವಿಭಕ್ತಕುಟುಂಬಗಳೇ ವಿಶೇಷವಾಗಿ ಆರ್ಥಿಕ ಅಧಿಕಾರದ ಮೂಲಕ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸಲು ಪುರುಷನಿಗೆ ಅನುಕೂಲ ಕಲ್ಪಿಸಿಕೊಡುತ್ತದೆ. ಸಾಮಾಜಿಕ ಸಂಸ್ಥೆಯಲ್ಲೊಂದಾದ ಕುಟುಂಬದಲ್ಲಿನ ಲಿಂಗ ತಾರತಮ್ಯದ ವಿಚಾರಧಾರೆಯ ಲಿಂಗಾಧಾರಿತ ಶ್ರಮವಿಭಜನೆ ವಿಸ್ತರಿಸುತ್ತದೆಯಾದ್ದರಿಂದ ಕೆಲಸದ ಸ್ಥಳದಲ್ಲಿ ಮತ್ತು ಮನೆಯಲ್ಲಿ ಹೆಣ್ಣಿನ ಪಾತ್ರಗಳು ದಮನಕ್ಕೊಳಗಾಗುತ್ತವೆಂದು ವಿವರಿಸಿದ್ದಾರೆ.

ಸಮಾಜವಾದಿ ಸ್ತ್ರೀವಾದವು ಪಿತೃಪ್ರಧಾನತೆಯ ಎಲ್ಲಾ ಬಗೆಯ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಮೂಲ ಆಧಾರವಾಗಿದೆ. ಈ ಸಂಬಂಧ ಮೂಲದಿಂದ ಜನಿಸುವ, ಗುರುತಿಸಿಕೊಳ್ಳುವ ಯಾವುದೇ ಸಂಗತಿಯು ಸಹ ಮಹಿಳೆಯರ ವಿರುದ್ಧ ದೌರ್ಜನ್ಯಕ್ಕೆ ಪ್ರೇರಣೆಯಾಗಿದೆಯೆಂಬ ನಿಲುವನ್ನು ತಳೆಯುತ್ತದೆ. ಆರಂಭದಲ್ಲಿ ಬಂದಿರುವ ಸ್ತ್ರೀವಾದಿ ಸಿದ್ಧಾಂತಗಳು ಮೊದಲಿನಿಂದಲೂ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯಗಳನ್ನು ಪ್ರಸ್ತಾಪಿಸುತ್ತಲೇ ಬಂದಿವೆ. ಪ್ರತಿಯೊಂದು ಸಿದ್ದಾಂತವು ಸಹ ಮಹಿಳೆಯ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಒಂದೊಂದೇ ಅಂಶಗಳನ್ನು ಕಾರಣವಾಗಿಸಿ ಅದರತ್ತ ಹೆಚ್ಚಿನ ಗಮನಹರಿಸುವುದು ಸ್ಪಷ್ಟವಾಗಿದೆ. ಆದರೆ ಸಮಾಜವಾದಿ ಸ್ತ್ರೀವಾದಿ ಸಿದ್ಧಾಂತವು ಮಾತ್ರ ಮಾತೃಪಿತೃ ಪ್ರಧಾನತೆಯೂ ಎಲ್ಲಾ ಬಗೆಯ ಮಹಿಳೆಯ ಮೇಲಿನ ಅಕ್ರಮಣಕ್ಕೂ ಮೂಲ ತಳಹದಿಯೆಂಬುದನ್ನು ಸ್ಪಷ್ಟಪಡಿಸುತ್ತದೆ. ತೀರ ಇತ್ತೀಚೆಗೆ ಕಾಣಿಸಿಕೊಳ್ಳುತ್ತಿರುವ ಅಭಿವೃದ್ದಿಸಿದ್ಧಾಂತದಲ್ಲಿ ಮಹಿಳೆಯ ವಿರುದ್ದ ನಡೆಯುವ ದೌರ್ಜನ್ಯವನ್ನು ೧೫ ಸಿದ್ದಾಂತಗಳಲ್ಲಿ ಗುರುತಿಸಲಾಗಿದೆ. ಈ ಸಿದ್ಧಾಂತಗಳನ್ನು ಮೂರು ಹಂತದಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಅಂತರ್ ವ್ಯಕ್ತಿಗತ ಸಿದ್ದಾಂತ (Intral Individual Theory) ಮನೋಸಾಮಾಜಿಕ ಸಿದ್ಧಾಂತ(Social psychological theory) ಸಮಾಜ ಸಾಂಸ್ಕೃತಿಕ ಸಿದ್ಧಾಂತ(Socio cultural theory)ಎಂದು Gellel and Straus ರವರು ೧೯೭೪ ರಲ್ಲಿ ಪ್ರಸ್ತಾಪಿಸಿದರು. ನಂತರ ಇದೇ ವರ್ಷದಲ್ಲಿ Barnett, Mileer-perrim and perrim ಎನ್ನುವವರು ಮೈಕ್ರೋ ಓರಿಯೆಂಟೆಡ್ ಮತ್ತು ಮ್ಯಾಕ್ರೋ ಓರಿಎಂಟೆಡ್ ಥೇರೀಸ್ ಎಂದು ಅದೇ ವಿಶೇಷ ಲಕ್ಷಣಗಳನ್ನು ಹೊಂದಿರುವುದನ್ನು ಈ ಸಿದ್ದಾಂತಗಳಡಿಯಲ್ಲಿ ಪ್ರತಿಪಾದಿಸಿದ್ದಾರೆ. ಈ ಬಗೆಯನ್ನು ಬಹುತೇಕ ಚಿಂತಕರು ಬಳಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ಮಾದರಿಗಳು ಬಹುಮುಖಿ ಆಯಾಮಗಳಲ್ಲಿ ಬಳಕೆಯಾಗುತ್ತಿರುವುದು ನಿಶ್ಚಿತವಾಗಿದ್ದು, ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ. ಈ ಅಧ್ಯಯನದಲ್ಲಿ ಮೈಕ್ರೋ ಓರಿಯೆಂಟೆಡ್ ಸಿದ್ಧಾಂತವು ಒಳಗೊಂಡಿರುವ ಸಾಮಾಜಿಕ ಕಲಿಕಾ ಸಿದ್ಧಾಂತ ಮತ್ತು ಮ್ಯಾಕ್ರೋ ಓರಿಯೆಂಟೆಡ್ ಥೇರೀಸ್ ಒಳಗೊಂಡಿರುವ ಸ್ತ್ರೀವಾದಿ ಸಿದ್ಧಾಂತವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

ಸಾಮಾಜಿಕ ಕಲಿಕಾ ಸಿದ್ಧಾಂತ

ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ಚೌಕಟ್ಟನ್ನು ವ್ಯಾಖ್ಯಾನಿಸುವಲ್ಲಿ ಸಾಮಾಜಿಕ ಕಲಿಕಾ ಸಿದ್ಧಾಂತವು ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ. ದೌರ್ಜನ್ಯಕ್ಕೆ ತೆರೆದುಕೊಂಡವರು ಮತ್ತು ಅನುಭವಿಸಿದವರೀರ್ವರ ವೈಯಕ್ತಿಕ ಕಲಿಕೆಯು ಹೇಗೆ ಅವರ ವರ್ತನೆಗಳುದ್ದಕ್ಕೂ ಸೂಚಿಸುತ್ತವೆಂಬುದನ್ನು ಮುಖ್ಯವಾಗಿ ಪರಿಗಣಿಸುತ್ತವೆ. ಈ ಮಾದರಿ ಪರಿಕಲ್ಪನೆಯ ದೃಷ್ಟಿಕೋನದ ಪ್ರಭಾವದಿಂದ ಅಪರಾಧಿಯ ವರ್ತನೆಗಳನ್ನು ನೋಡುವ ಕೆಲಸ ಮೊದಲಿನಿಂದಲೂ ನಡೆದಿದೆ. ಸಾಮಾಜಿಕ ಕಲಿಕಾ ಸಿದ್ಧಾಂತವು ಶಾಸ್ತ್ರೀಯವಾದ ಮತ್ತು ಪ್ರಮುಖ ಪರಿಕಲ್ಪನೆಗಳನ್ನು ಬಳಸಲು ಈಗಾಗಲೇ ಮನೋವೈಜ್ಞಾನಿಕ ಜ್ಞಾನಶಿಸ್ತಿನಿಂದ ನಿರ್ಬಂಧಿತವಾಗಿದೆ. ಉತ್ತೇಜನ ಮತ್ತು ಜವಾಬ್ದಾರಿಗಳ ಸಂಯೋಜನೆಯಲ್ಲಿ ಕಲಿಕೆಯು ಸಾಗುತ್ತದೆ. ಈ ಕಲಿಕೆಯು ಸಂಭವಿಸಿದಂತೆಲ್ಲಾ ವರ್ತನೆಗಳು ಭದ್ರವಾಗುತ್ತವೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಈ ಸಿದ್ಧಾಂತವನ್ನು ಅನ್ವಯಿಸುವುದಾದರೆ, ದೌರ್ಜನ್ಯವು ತಲೆಮಾರುಗಳಿಂದಲೂ ಎಲ್ಲೆಡೆಯೂ ಸಂಚರಿಸುತ್ತಲೇ ಇದೆ. **ಹಾಗೂ ಇದು ಕುಟುಂಬದೊಳಗಿನ ಸಾಮಾಜೀಕರಣ ಚೌಕಟ್ಟಿನೊಳಗೆ ಕಲಿಯಲ್ಪಡುತ್ತದೆ. ಕುಟುಂಬವೇ ಇದರ** ಪ್ರಾಥಮಿಕ ಮಧ್ಯವರ್ತಿಯೆಂದು ಹೇಳಲಾಗುತ್ತದೆ. ಕುಟುಂಬ ಮೂಲದಿಂದ ವಿಶೇಷವಾಗಿ ಯಾರು ದೌರ್ಜನ್ಯವನ್ನು ಅನುಭವಿಸಿದ್ದಾರೋ ಮತ್ತು ನಡೆವ ದೌರ್ಜನ್ಯಗಳಿಗೆ ಸಾಕ್ಷಿಯಾಗಿದ್ದಾರೋ, ಅವರು ಈ ದೌರ್ಜನ್ಯವನ್ನು ವ್ಯೂಹ ರಚನೆಯನ್ನು ಸ್ಥೂಲವಾಗಿಯೂ ಅರಿತಿರುತ್ತಾರೆ. "ಸ್ವಕೇಂದ್ರಿತ" ಚಿಂತನೆಯನ್ನು ಹೊಂದಿದ ಜೀವಿ ತನ್ನದನ್ನು ಈಡೇರಿಸಿಕೊಳ್ಳಲು ಹಿಂಸೆ- ದೌರ್ಜನ್ಯವನ್ನು ಅಸ್ತ್ರವಾಗಿ ಬಳಸುತ್ತಾನೆ. ಸ್ಟ್ರಾಸ್ ಮತ್ತು ಸಂಯೋಜಕರು ಪ್ರತಿಯೊಂದು ತಲೆಮಾರುಗಳು ಸಹ ಸಮಾಜ ನಿರ್ಮಿತ ಕೌಟುಂಬಿಕ ವ್ಯವಸ್ಥೆಯಲ್ಲಿ ಓಡಾಡುವುದರಿಂದ, ದೌರ್ಜನ್ಯಪ ನಿರಂತರ ಪ್ರಕ್ರಿಯೆಗಳನ್ನು ಸಾಮಾನ್ಯ ಸಂಗತಿಗಳೆಂಬಂತೆ ಕಲಿಯುತ್ತಾರೆ. ಕೌಟುಂಬಿಕ ಪಾತ್ರಗಳಲ್ಲಿ ಬರುವ ಯಜಮಾನ–ಅಧೀನ ನೆಲೆಯ ಪಾತ್ರಗಳಲ್ಲಿ ಸಹಜವೆನ್ನುವಂತೆ ಕಂಡು ಬರುವ ದೌರ್ಜನ್ಯವು ಸ್ವೀಕಾರಾರ್ಹವೆಂದು ಸಮ್ಮತಿಸಲ್ಪಡುವುರಿಂದ ಕುಟುಂಬವೇ ದೌರ್ಜನ್ಯದ ತರಬೇತಿ ಕೇಂದ್ರವಾಗಿ ನಿಲ್ಲುತ್ತದೆ.

ಸಾಮಾಜಿಕ ಕಲಿಕಾ ಸಿದ್ಧಾಂತದ ಪ್ರಮುಖ ಪ್ರತಿಪಾದಕರಾದ **ಅಲ್ಬರ್ಟ್‌ಬಂಡುರಾ** ಅವರು ದೌರ್ಜನ್ಯವನ್ನು ಪ್ರಾಥಮಿಕವಾಗಿ ಮೂರು ಮೂಲಗಳಿಂದ ಕಲಿಯಲಾಗುತ್ತದೆಯೆಂದು ತಿಳಿಸಿದ್ದಾರೆ.

- ಕುಟುಂಬ
- ಸಂಸ್ಕೃತಿ ಮತ್ತು ಉಪ ಸಂಸ್ಕೃತಿ
- ಮಾಧ್ಯಮ

ಇತ್ತೀಚಿನ ದಿನಗಳಲ್ಲಿ ಮಾಧ್ಯಮವು ವಿಶೇಷವಾದ ಪಾತ್ರವನ್ನು ವಹಿಸುತ್ತದೆ. ಮಾಧ್ಯಮದಲ್ಲಿ ಬಿಂಬಿಸಲಾಗುತ್ತಿರುವ ದೌರ್ಜನ್ಯದ ಚಟುವಟಿಕೆಗಳನ್ನು ಪುನರಾವರ್ತಿಸುವ ಮೂಲಕ ನೋಡುಗರನ್ನು

ಗುರಿಯಾಗಿಸಿಕೊಂಡಿದೆಯಲ್ಲದೆ, ವೈಚಾರಿಕತೆಯಿಂದ ಹಿಂಸಾತ್ಮಕ ಕ್ರಿಯೆಗಳಿಗೆ ಬದ್ಧವಾಗಿರುವಂತೆ ಸ್ಪಷ್ಟವಾಗಿ ಚಿತ್ರಿಸಲಾಗುತ್ತದೆ. ಮಹಿಳೆಯರ ಸ್ಥಿರ ಮಾದರಿ ಪಾತ್ರಗಳನ್ನು ಮತ್ತು ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ ಮಿಥ್ಯಾ ಕಲ್ಪನೆಗಳನ್ನು ಸುದೀರ್ಘ ಕಾಲದವರೆಗೆ ಮುಂದುವರಿಸುತ್ತದೆ. ಉದಾ: ಪುರುಷರಿಬ್ಬರ ಮಧ್ಯದ ಯಾವುದೋ ಕಲಹದಿಂದಾಗಿ ದ್ವೇಷವನ್ನು ತೀರಿಸಿಕೊಳ್ಳಲು ಅವರಿಗೆ ಸಂಬಂಧಿಸಿದ ಹೆಂಗಸಿನ ಮೇಲೆ ಆಕ್ರಮಣವೆಸಗುವುದು, ಅತ್ಯಾಚಾರವೆಸಗುವುದು, ಅವಹೇಳನ ಮಾಡುವುದು, ವಾಸ್ತವದಲ್ಲಿಯೂ ಇತ್ಯಾದಿ, ಇದನ್ನು ಜಾತಿ, ಧರ್ಮ, ಕೋಮುಗಲಭೆಗಳಲ್ಲಿ ಕಾಣಬಹುದು, ಗೋದ್ರಾಹತ್ಯೆಯಂತಹ ಗಲಭೆಗಳಲ್ಲಿ ಮಹಿಳೆಯರ ಮೇಲಾದ ಆಕ್ರಮಣಗಳು ಈ ಸಂಗತಿಯನ್ನು ಹೆಚ್ಚು ಖಚಿತಪಡಿಸುತ್ತದೆ.

ಸಾಮಾಜಿಕ ಕಲಿಕಾ ಸಿದ್ಧಾಂತವು ಬಲಿಪಶುಗಳಾದವರು ಮತ್ತು ಅಪರಾಧಿಗಳ ಮಧ್ಯದ ಸಂಭಾಷಣೆಯನ್ನಾಧರಿಸಿದವರು ದೌರ್ಜನ್ಯದ ಮುಂದುವರಿಕೆಯಲ್ಲಿ ಹೇಗೆ ಕೊಡುಗೆಯಾಗಿದ್ದಾರೆಂಬು ದನ್ನು ಪರಿಶೀಲಿಸಿ ಬಳಸಬಹುದ್ದಾಗಿದೆ. (Walker ೧೯೮೪) ಉದಾ: ಕಲಿಕೆಯಲ್ಲಿ ಅಸಹಾಯಕತೆ ಎಂಬ ಪದ ಬಳಕೆಯ ಚರ್ಚೆಯನ್ನಾಧರಿಸಿ ಮಹಿಳೆಯರು ಯಾಕೆ ದುರಾಚಾರದ ಸಂಬಂಧಗಳನ್ನು ಬಿಟ್ಟು ಬರುವುದು ಕಷ್ಟಕರವಾಗುತ್ತದೆ. ಇಲ್ಲಿ ವಾಕರ್ ಅವರ ಪ್ರತಿಪಾದನೆಯಂದರೆ ಮಹಿಳೆಯರು ಅಸಂಬದ್ದ ದುರಾಚಾರದ ಸಂಗತಿಗಳ ವರ್ತನೆಗಳನ್ನು ನಿಯಂತ್ರಿಸುವ ಪ್ರಯತ್ನ ಮಾಡುವುದಿಲ್ಲ. ಅಥವಾ ಅವರನ್ನು ತ್ಯಜಿಸುವುದಿಲ್ಲವೇಕೆ ಎಂಬುದಕ್ಕೆ ಉತ್ತರವಾಗಿ ಕಲಿಕೆಯಲ್ಲಿನ ಅಸಹಾಯಕತೆಯ ಅನುಭವಗಳನ್ನು ಹೇಳುತ್ತಾರೆ, ಅಸಹಾಯಕತೆಯ ಆಲೋಚನೆಯೇ ಹಿಂಸಾತ್ಮಕ ಸಂಬಂಧಗಳೊಂದಿಗೆ ಜೀವಿಸುತ್ತಾಳೆಂಬ ಪ್ರಶ್ನೆ ಸಾಮಾನ್ಯವಾಗಿ ಕೇಳಲಾಗುತ್ತದೆ. ಇದಕ್ಕೆ ಫಲಿತವೆನ್ನುವಂತೆ ಮಹಿಳೆಯು ಸಂಪೂರ್ಣವಾಗಿ ಅವಳ ಸಾಮಾಜಿಕ, ಸಂದರ್ಭವನ್ನು ಅರೋಪಿಸುತ್ತಾಳೆ. ಕೆಲವು ವಕೀಲರು ಈ ಸಂಬಂಧಿತ ಸಂಗತಿಗಳನ್ನು ಆಧರಿಸಿ ತಕ್ಷಣಕ್ಕೆ ಪ್ರತಿಕ್ರಿಯಿಸುವುದೆಂದರೆ ಈ ಕ್ಷೇತ್ರದಲ್ಲಿನ ಸ್ತ್ರೀವಾದಿ ಚಿಂತಕರು ಮತ್ತು ಚಳುವಳಿಗಾರರು ಈ ಒಟ್ಟು ಆರೋಪವನ್ನು ಒಬ್ಬ ಮಹಿಳೆಯ ಬದಲಾಗಿ ಪುರುಷ ಪ್ರಧಾನ ಸಾಮಾಜಿಕ ಸಂರಚನೆಯ ಮೇಲೆ ಹೇರಲು ಪ್ರಯತ್ನಿಸುತ್ತಾರೆಂದು ಹೇಳಿದ್ದಾರೆ, ಇನ್ನಿತರೇ ವಿಮರ್ಶೆಗಳು ಹೀಗೆ ಕಲಿಸಲಾಗುವ ಅಸಹಾಯಕತೆಯನ್ನು ವಿವರಿಸುವ ಗೋಜಿಗೆ ಹೋಗದೇ ಸಾಕಷ್ಟು ಮಹಿಳೆಯರು ಹಿಂಸಾತ್ಮಕ ಸಂಗತಿಗಳಿಂದ ಸಂಬಂಧಗಳಿಂದ ಹೊರಬಂದು ಸಮರ್ಥವಾಗಿ ಬದುಕುತ್ತಿರುವ ಉದಾಹರಣೆಗಳನ್ನು ಮುಂದಿಡುತ್ತವೆ. ಇಲ್ಲಿ ವಕೀಲರು ಸ್ತ್ರೀವಾದಿ ಚಿಂತಕರು ಮತ್ತು ಚಳುವಳಿಗಾರರನ್ನು ಆರೋಪಿಸುವುದನ್ನಾಧರಿಸಿದರೆ ಯಾವುದೋ ಬೆರಳಣಿಕೆಯ ಸಂಗತಿಗಳನ್ನು ಒಟ್ಟು ಮಹಿಳಾ ಸಮುದಾಯಕ್ಕೆ ಅನ್ವಯಿಸುವುದು ಸೂಕ್ತವಲ್ಲ. ಹಾಗೆಯೇ ಮಹಿಳಾ ಸಾಧನೆಯ ಕುರಿತು ಹೇಳುವಾಗ ಕಲ್ಪಾನಾ ಚಾವ್ಲಾ, ಸಾನಿಯಾ ಮಿರ್ಜಾ, ಇಂದಿರಾ ಗಾಂಧಿ, ಮಾಯಾವತಿ, ಮುಂತಾದವರನ್ನು ಪ್ರತಿನಿಧಿಸುವ ಮೂಲಕ ಒಟ್ಟು ಮಹಿಳೆಯರ ಸಾಧನೆಯನ್ನು ಅಳತೆಮಾಡುವುದು ಸರಿಯಾದ ಕ್ರಮವಲ್ಲ.ಆ ಮಹಿಳೆಯರಿಗೆ ದೊರೆತಿರುವ ಪರಿಸರ ಕಲಿಕೆಯನ್ನಾಧರಿಸಿ ಅವಳ ವ್ಯಕ್ತಿತ್ವ ರೂಪಿಕೆ ಯಾವುದೋ ಎಂಬುದು ಗಮನಾರ್ಹ

ಸಂಗತಿ "ಕಲ್ಪಿಸಲ್ಪಡುವ ಅಸಹಾಯಕತೆಯ ಪರಿಕಲ್ಪನೆಯು ಮಹಿಳೆಯನ್ನು ನಿಷ್ಕ್ರಿಯಳೆಂದು ಬಿಂಬಿಸುವುದಾಗಿದೆ. ಒಂಟಿ ಮಹಿಳೆಯ ಕ್ರಿಯಾಶೀಲತೆಯ ಸಹಾಯದತ್ತ ಶೋಧನೆ ಆರಂಭವಾಗಬೇಕೆಂಬುದು ಬೌಕರ್ ಅವರ ಪ್ರತಿಪಾದನೆಯಾಗಿದೆ."

ವ್ಯಕ್ತಿಯ ವ್ಯಕ್ತಿತ್ವಗಳ ರೂಪಿಕೆಯಲ್ಲಿ ಸಾಮಾಜಿಕ ಕಲಿಕಾ ಸಿದ್ಧಾಂತವು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಹಾಗಾಗಿಯೇ ಮಹಿಳೆಯರ ವಿರುದ್ಧವೆಸಗುವ ಆಕ್ರಮಣಗಳನ್ನು ಮತ್ತು ಸಾಮಾಜಿಕ ಕಲಿಕೆಯನ್ನಾದರಿಸಿ ಪ್ರತಿಪಾಧಿಸುವ ಈ ಚಿಂತನೆಯು ಪ್ರಸ್ತುತ ಅಧ್ಯಯನಕ್ಕೆ ಹೆಚ್ಚು ಪೂರಕವಾಗಿ ನಿಲ್ಲುತ್ತದೆ.

'ಸ್ತ್ರೀ ವಾದಿ ಸಿದ್ಧಾಂತ'

ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯದ ಕುರಿತು ಸ್ತ್ರೀವಾದಿ ವಿಶ್ಲೇಷಣೆ ಎಂದರೆ ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಲಿಂಗಸಂಬಂಧಿಯಾಗಿ ಸಂರಚನೆಗೊಂಡ ಅಧಿಕಾರಗಳ ಸಂಬಂಧಗಳ ಮಧ್ಯದಲ್ಲಿ ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡು ಅಧ್ಯಯನ ಮಾಡುವುದು. ಹಾಗೂ ಪುರುಷ ಪ್ರಧಾನ ಸಮಾಜ ಸಂರಚನೆಯ ಐತಿಹಾಸಿಕ ಹಿನ್ನಲೆಯನ್ನು ಮತ್ತು ಸಾಮಾಜಿಕರಣದಲ್ಲಿ ಅಂತರ್ಗತಗೊಳಿಸುವ ಸ್ತ್ರೀ, ಪುರುಷರ ಸ್ಥಿರ ಮಾದರಿ ಪಾತ್ರಗಳು ಅಥವಾ ಲಿಂಗ ನಿರ್ದಿಷ್ಟ ಪಾತ್ರಗಳೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಇರುವ ಕಾರಣಗಳ ಪ್ರಧಾನ ಲಕ್ಷಣಗಳಲ್ಲಿ ಒಂದಾಗಿದೆ. ಇದನ್ನೇ ಸಂಶೋಧಕರು ಸಾಂಪ್ರದಾಯಿಕ ವಿವಾಹಗಳಲ್ಲಿ ಪುರುಷ ಪ್ರಧಾನತೆಯ ಉಳಿಸಿಕೊಂಡು ಬಂದಿರುವ ತಂತ್ರಗಾರಿಕೆಯೆಂದು ಹೇಳಿದ್ದಾರೆ. ಈ ದೌರ್ಜನ್ಯದ ಕುರಿತು ಸ್ತ್ರೀವಾದಿಗಳ ವಿವರಣೆಯಿಂದ ಪುರುಷ ಪ್ರಧಾನತೆ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳ ಮಧ್ಯೆ ಇರುವ ಸಂಬಂಧದತ್ತ ಹೆಚ್ಚು ಗಮನಹರಿಸುತ್ತದೆ. ಮಹಿಳೆಯರ ವಿರುದ್ಧ ನಡೆಯುವ ಮೂಲ ದೌರ್ಜನ್ಯವೆಂದರೆ ಸಾಮಾಜಿಕ ಸಂರಚನೆಯಲ್ಲಿ ಮಹಿಳೆಗೆ ದತ್ತವಾದ ಸ್ಥಾನಮಾನ. ಈ ಅಧೀನತೆಯು ಸಾಂಪ್ರದಾಯಿಕ ಕುಟುಂಬ ಮತ್ತು ಸಂಸ್ಕೃತಿಯ ಪೂರ್ವಾರ್ಜಿತವಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವನ್ನು ಸ್ಪಷ್ಟಗೊಳಿಸಬೇಕಾದರೆ ಪುರುಷ ಪ್ರಧಾನ ವ್ಯವಸ್ಥೆಯ ಐತಿಹಾಸಿಕ ಹಿನ್ನೆಲೆಯಿಂದ ಮತ್ತು ಅದಕ್ಕೆ ಅಡ್ಡಿಯಾಗಿರುವ ಸಾಂಸ್ಕೃತಿಕ ಕಾರಣಗಳಿಂದ ಹೊರಬರುವ ಅಗತ್ಯತೆಗಳನ್ನು ಹೇಳುತ್ತದೆ. । ಮಹಿಳೆಯರನ್ನು ದಮನಗೊಳಿಸುವ ಪುರುಷಾಧಿಕಾರ ಮತ್ತು ಅದನ್ನು ಸಮರ್ಥಿಸುವ ಸಾಮಾಜಿಕ ನಿಯಂತ್ರಣವು ದೌರ್ಜನ್ಯದ ವಿಧಾನಗಳಲ್ಲೊಂದಾಗಿದೆ. ದೌರ್ಜನ್ಯವಿಲ್ಲದ ಸ್ಥಳ ನಿರ್ಮಾಣವಾಗುವುದು ಕೇವಲ ಸಮಾನತಾ ಪ್ರತಿಪಾದಕ ಸಮಾಜದಲ್ಲಿ, ಸ್ತ್ರೀವಾದಿ ದೃಷ್ಟಿಕೋನವನ್ನಾಧರಿಸಿಕೊಂಡು ಹೊರಟಿರುವ ಬೇರೆ ಬೇರೆ ಸಂಶೋಧನೆಗಳು ಹೇಳುವಂತೆ "ದಾಂಪತ್ಯ ವಿಷಯ ಸಂಬಂಧಿತ ದೌರ್ಜನ್ಯಗಳನ್ನು ಎದುರಿಸುತ್ತಿರುವುದರ ಮೂಲವು ವಿವಾಹಗಳಲ್ಲಿರುವ ಅಸಮಾನತೆ ಮತ್ತು ಸಹ ಸಂಬಂಧಗಳಲ್ಲಿಯೇ ನಡೆಯುವ ವಿವಾಹಗಳೇ ಕಾರಣವೆಂದು ಸಲಹೆ ಮಾಡಿದ್ದಾರೆ. ಅಸಮಾನ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಾಚಾರದ ಹೊಣೆಯು ಪುರುಷನದೇ ಆದರೂ, ಅದನ್ನು ಮರೆಮಾಚುವುದರೊಂದಿಗೆ, ಅದರ

ಪರಿಣಾಮ ಮತ್ತು ಆರೋಪಗಳಿಂದ ಅದರ ಹೊಣೆಗಾರಿಕೆಯನ್ನು ಮಹಿಳೆಗೆ ಹೇರಲಾಗಿದೆ."[೩೧] ಇವೆಲ್ಲದರ ಪರಿಣಾಮವಾಗಿ ಸ್ತ್ರೀವಾದಿ ಚಿಂತನೆಗಳು, ಅತ್ಯಾಚಾರ ಕೇವಲ ಲೈಂಗಿಕ ತೃಪ್ತಿಯಷ್ಟೆ ಅಲ್ಲ. ಅದು ಕೇವಲ ಪ್ರಾಥಮಿಕ ಉದ್ದೇಶವಷ್ಟೇ ಅತ್ಯಾಚಾರದ ನೈಜತೆಯೆಂದರೆ ಒಂದು ವಸ್ತುವಿನ ಮೇಲೆ ನಿಯಂತ್ರಣ ಸಾಧಿಸುವ ಹಾಗೂ ದಬ್ಬಾಳಿಕೆಗೊಳಪಡಿಸುವುದು ಎಂಬ ನಿಲುವನ್ನು ತಾಳಿದ್ದಾರೆ.

ಪುರುಷ ಪ್ರಾಧಾನ ಪರಿಕಲ್ಪನೆಯೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಮೂಲ ಕಾರಣ ಮತ್ತು ಜವಾಬ್ಧಾರಿ. ಅದು ನಾಶವಾಗದಂತೆ ನಿತ್ಯದಮನವನ್ನು ಪ್ರೋತ್ಸಾಹಿಸಿ ಪ್ರಭಾವಗೊಳಿ ಸುವಂತೆ ಮಹಿಳೆಯರನ್ನು ರೂಪಿಸಲಾಗುತ್ತಿದೆಯೆಂಬುದು ಸ್ತ್ರೀವಾದದ ವಿವರಣೆಯಾಗಿದೆ. **ಡ್ಯೂಮ್** ಎನ್ನುವ ಚಿಂತಕರು ಪುರುಷ ಪ್ರಧಾನತೆಯ ಪರಿಕಲ್ಪನೆಗಣುಗುಣವಾಗಿ, ಸಮಾಜ ವ್ಯವಸ್ಥೆಯಲ್ಲಿ ಪುರುಷ ದಬ್ಬಾಳಿಕೆ ಹಾಗೂ ವಿಶೇಷ ಪ್ರಯೋಜನೆಗಳನ್ನು ಒದಗಿಸುವುದು ಬಹಳ ಸಾಮಾನ್ಯವಾದಂತಹ ಸಂಗತಿ, ಪುರುಷ ಪ್ರಧಾನತೆಯ ಪರಿಕಲ್ಪನೆಯಿಂದ ಮುಂದುವರೆದನ್ನಾಧರಿಸಿ ರಚಿತವಾಗುವ ಪುರುಷ ಪ್ರಧಾನ ಸಂರಚನೆಯೇ ದೌರ್ಜನ್ಯಕ್ಕೆ ಮೂಲ ಕಾರಣವೆಂದು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ಈ ಎಗಡು ಸಿದ್ಧಾಂತಗಳು ಪುರುಷ ಪ್ರಧಾನತೆ ಮತ್ತು ಅಲ್ಲಿನ ಸಾಮಾಜಿಕ ಕಲಿಕೆಯನ್ನಾಧರಿಸಿ ಮಹಿಳೆಯುರ ವಿರುದ್ಧ ನಡೆಯುವ ದೌರ್ಜನ್ಯವನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ವಿಶ್ಲೇಷಿಸಲಾಗಿದೆ.

------*****------

ಅಡಿ ಟಿಪ್ಪಣಿ

೧. ಗೈಲ್ ಹೋಮ್‌ವೇಡ್ತ್, ವೈಲೆನ್ಸ್ ಅಗೆನೆಸ್ಟ್ ವುಮೆನ್, ನ್ಯೂ ಮೂಮೆಂಟ್ಸ್ ಅಂಡ್ ನ್ಯೂ ಥೇರೀಸ್ ಇನ್ ಇಂಡಿಯಾ, ಕಾಲಿ ಫಾರ್ ವುಮೆನ್ ೧೯೯೦, ಪುಟ, ೩೫.

೨. ಅದೇ ಪು.ಸಂ ೩೬

೩. ರಾಮಚಂದ್ರ ಜೋಷಿ, ಸಮಗ್ರ ಸಮಾಜ ಶಾಸ್ತ್ರ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೦, ಪು.ಸಂ, ೬೫೯

೪. ಚ.ನಾ ಶಂಕರ್ ರಾವ್, ಸಾಮಾಜಿಕ ಸಮಸ್ಯೆಗಳು, ಜೈ ಭಾರತ್ ಪ್ರಕಾಶನ, ಮಂಗಳೂರು,೧೯೯೯, ಪು.ಸಂ, ೯೩

೫. ಲಿಂಗತ್ವ ಸಮನ್ಯಾಯ, ಮಂಗಳೂರು ವಿವಿ, ಪು.ಸಂ, ೬೦-೬೧

೬. ಆರ್. ಇಂದಿರ, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ರಾಘವಾ ಟ್ರಸ್ಟ್ ಮೈಸೂರು, ೨೦೦೦, ಪು.ಸಂ- ೧೫

೭. ಎಮ್.ನಾರಾಯಣ್, ಸಾಮಾಜಿಕ ಸಮಸ್ಯೆಗಳು. ಜೈ ಭಾರತ್ ಪ್ರಕಾಶನ, ಮಂಗಳೂರು, ೨೦೦೨, ಪು.ಸಂ, ೧೭೫-೧೭೮

೮. ರಾಮಚಂದ್ರ ಜೋಷಿ. ಸಮಗ್ರ ಸಮಾಜ ಶಾಸ್ತ್ರ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೦, ಪು.ಸಂ, ೨೩೪-೨೩೫

೯. ಜೋಗನ್ ಶಂಕರ್, ಗ್ರಾಮ ಸಮಾಜ, ೧೯೮೯, ಪು.ಸಂ, ೩೮

೧೦. ರಾಮಚಂದ್ರ ಜೋಷಿ, ಸಮಗ್ರ ಸಮಾಜ ಶಾಸ್ತ್ರ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೦, ಪು.ಸಂ, ೨೪೧

೧೧.ಹೆಚ್.ಎಸ್ ಶ್ರೀಮತಿ, ಸ್ತ್ರೀವಾದಿ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ, ಪು.ಸಂ, ೬೮

೧೨.ಡಾ. ಹಾಲತಿ ಸೋಮಶೇಖರ್, ಸ್ತ್ರೀ ಪರ ಕಾನೂನುಗಳು, ಎಚ್ ಎಂ ಲೋಕೇಶ್ ವಿಸ್ಮಯ ಪ್ರಕಾಶನ ೨೦೦೮, ಪು.ಸಂ, ೪-೫

೧೩.ಡಾ. ವಿಜಯ ಶ್ರೀ ಸಬರದ, ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಂಗ ಗುಲ್ಬರ್ಗ ವಿ.ವಿ ಗುಲ್ಬರ್ಗ, ೨೦೦೫ ಪು.ಸಂ, ೬೦

೧೪. ಲಿಂಗತ್ವ ಸಮನ್ಯಾಯ, ಮಂಗಳೂರು ವಿಶ್ವವಿದ್ಯಾಲಯ, ಪು.ಸಂ, ೭೧-೭೨

೧೫. ಪ್ರಜಾವಾಣಿ, ಭಾನುವಾರ, ೧೭/೦೩/೨೦೧೩

೧೬. ಉದಯವಾಣಿ, ೦೪/೦೨/೨೦೧೩

೧೭. ಪ್ರಜಾವಾಣಿ, ೨೩/೧೨/೨೦೧೨

೧೮.ಲಿಂಗತ್ವ ಸಮನ್ಯಾಯ, ಮಂಗಳೂರು ವಿವಿ, ಪು.ಸಂ ೨೪

೧೯. ಡಾ. ಸಿ.ಡಿ. ವೆಂಕಟೇಶ್, ಮಹಿಳಾ ಅಧ್ಯಯನ ನೆಲೆಗಳು, ಪು.ಸಂ ೫೦

೨೦. CSAAAW Report, ೨೦೦೭, page-೭೫

೨೧.ಪ್ರಜಾವಾಣಿ, ೧೪ ಡಿಸೆಂಬರ್, ೨೦೧೦, ಪು.ಸಂ ೧೦

೨೨. ಬಿ.ಕೆ ಮೂರ್ತೇಶ್ವರಯ್ಯ, ಮಹಿಳಾ ಸಮಾಜ ಮತ್ತು ಕಾನೂನು, ಕರ್ನಾಟಕ ಬುಕ್ ಏಜೇನ್ಸಿ ೨೦೦೦, ಪು.ಸಂ, ೧೬೧-೧೬೪

೨೩.ಲಿಂಗತ್ವ ಸಮನ್ಯಾಯ, ಮಂಗಳೂರು ವಿವಿ, ಪು.ಸಂ ೫೭-೫೮

೨೪. ಡಾ. ವಿಠಲ್‌ರಾವ್ ಗಾಯಕ್‌ವ್ಹಾಡ್, ಭಾರತೀಯ ಸ್ತ್ರೀ ಜೀವನ ಶಾಸ್ತ್ರ, ಪು.ಸಂ ೧೭-೧೮

೨೫.ಡಾ. ಹೆಚ್.ಎಸ್ ಶ್ರೀಮತಿ (ಸಂ), ಮಹಿಳಾ ಅಧ್ಯಯನ ಉತ್ತರಾಯಣ, ಸಂಚಿಕೆ, ಪು.ಸಂ ೨೭-೨೮

೨೬. ಪ್ರಜಾವಾಣಿ ದಿನಪತ್ರಿಕೆ, ಜುಲೈ, ೦೭ ೨೦೧೦ ಪುಟ, ೮,

೨೭. ಡಾ.ಎಂ. ಉಷಾ, ಮಹಿಳಾ ಚಳುವಳಿ ಮಹಿಳಾ ವಿಷಯಗಳು, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಪು.ಸಂ, ೧೫೧

೨೮.ಡಾ. ಹಾಲತಿ ಸೋಮಶೇಖರ್, ಸ್ತ್ರೀ ಪರ ಕಾನೂನುಗಳು, ಎಚ್ ಎಂ ಲೋಕೇಶ್ ವಿಸ್ಮಯ ಪ್ರಕಾಶನ, ೨೦೦೮, ಪು.ಸಂ, ೪೯-೫೦

೨೯. ಲಿಂಗತ್ವ ಸಮನ್ಯಾಯ, ಮಂಗಳೂರು ವಿವಿ, ಪು.ಸಂ, ೪೬

೩೦. ಡಾ.ಮೈತ್ರಿ ಕೃಷ್ಣರಾಜ್, ವುಮೆನ್ ಅಂಡ್ ವೈಯಲೆನ್ಸ್, ಎ ಕಂಟ್ರಿ ರಿಪೋರ್ಟ್, ರಿಸರ್ಚ ಸೆಂಟರ್ ಫಾರ್ ವುಮೆನ್ ಸ್ಟಡಿ, ೧೯೯೧, ಪು.ಸಂ, ೧೬೦

೩೧.ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮಹಿಳಾ ಚಳುವಳಿಗಳು,
ಪ್ರಸಾರಂಗ ಕನ್ನಡ ವಿ.ವಿ. ಹಂಪಿ, ೨೦೦೨, ಪು.ಸಂ, ೧೬೮.

------*****------

ಅಧ್ಯಾಯ ೪

ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರಿಗೆ ಕಾನೂನಾತ್ಮಕ ಕ್ರಮಗಳು

ಅಧ್ಯಾಯ – ೪

ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರಿಗೆ ಕಾನೂನಾತ್ಮಕ ಕ್ರಮಗಳು

ಮಹಿಳಾ ಚಳುವಳಿಗಳು ರೂಪುಗೊಳ್ಳಲು ಕಾನೂನುಗಳ ಬಹಳ ಮುಖ್ಯ ಪಾತ್ರ ವಹಿಸಿರುವುದನ್ನು ಮರೆಯವಂತಿಲ್ಲ. ಅದರಲ್ಲೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಮಹಿಳಾ ಸಮಾನತೆಗಾಗಿ ಒಳಗೊಂಡಂತೆ ಅನೇಕ ಕಾನೂನುಗಳು ರಚನೆಯಾಗಿವೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ, ಸ್ವಾತಂತ್ರ್ಯಪೂರ್ವದಲ್ಲಿ ಸುಧಾರಣಾವಾದಿಗಳಿಂದ ಈ ಬಗೆಯ ಪ್ರಕ್ರಿಯೆ ಆರಂಭವಾಗಿತ್ತು. ಅದಕ್ಕೆ ಕಾರಣವಾದದ್ದು ಭಾರತೀಯ ಧರ್ಮಶಾಸ್ತ್ರಗಳು ಸ್ತ್ರೀಯರ ವಿಷಯದಲ್ಲಿ ಸೃಷ್ಟಿಸಿದ ವಿರೋಧಭಾಸ ಗಳಾಗಿದ್ದವು. ಅವುಗಳನ್ನು ಪ್ರಭುಸಂಹಿತೆಯಂತೆ ಒಪ್ಪಿ ನಡೆಯಬೇಕೇ ವಿನಃ ಪ್ರಶ್ನಿಸುವಂತಿಲ್ಲ. ಅದರಲ್ಲೂ ಮುಖ್ಯವಾಗಿ ಮನುಸ್ಮೃತಿ ಉಂಟುಮಾಡಿದ ಅವಾಂತರಗಳು ಹೇಳತೀರದಾಗಿತ್ತು. ಶಾಸ್ತ್ರಕಾರರು ಹೆಣ್ಣನ್ನು ಮನುಷ್ಯಳಾಗಿ ನೋಡಿರುವುದು ಕಾಣುವುದೇ ಇಲ್ಲ. ಮಹಿಳೆಯರೆಂದರೆ ಪ್ರಲೋಭಿಗಳು, ಕಾಮಾತುರರು, ಆಸೆಬುರುಕರು, ವಸ್ತುಪ್ರಿಯರು, ಅಲಂಕಾರ ಪ್ರಿಯರೆಂದೇ ಭಾವಿಸಿ ವಿಧಿ ನಿಷೇಧಗಳನ್ನು ರೂಪಿಸಲಾಗಿತ್ತು.

- ಯಾಜ್ಞವಲ್ಕ್ಯ, ಪರಶಾರ, ಮಾರೀಚ ಮುಂತಾದ ಸ್ಮೃತಿಕಾರರು ಸ್ತ್ರೀಯರನ್ನು ಪ್ರೌಢಾವಸ್ಥೆಗೆ ಬರುವುದಕ್ಕೆ ಮುಂಚೆಯೇ ಮದುವೆ ಮಾಡಬೇಕೆಂದು ಹೇಳಿದ್ದರಿಂದ ಬಾಲ್ಯವಿವಾಹ ಜಾರಿಯಾಯಿತು.
- ಪಾತಿವ್ರತ್ಯ ಮೌಲ್ಯಗಳನ್ನು ವೈಭವೀಕರಿಸಿ ಪುರುಷ ಪಕ್ಷಪಾತಿಯಾಗಿ ನಿಯಮ ರಚಿಸಿದ್ದರಿಂದ ಸತಿಯಾಚರಣೆ ಜಾರಿಗೆ ಬಂತು.
- ಸತ್ತ ಗಂಡನೊಡನೆ ಸಹಗಮನ ಮಾಡದ ವಿಧವೆಯರು ಸಮಾಜ ನಿಂದನೆಗೆ ಒಳಗಾದರು.
- ಕಡ್ಡಾಯ ಬಾಲ್ಯವಿವಾಹದ ಅನಿವಾರ್ಯತೆಯಿಂದಾಗಿ ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗು ಬಹು ದೊಡ್ಡ ಸಮಸ್ಯೆಯಾಗಿ ಬೆಳೆಯಿತು.
- ದೇವಾಲಯದ ಸೇವೆಗೆ ಬಾಲ ಹೆಣ್ಣುಗಳನ್ನು ನೇಮಿಸಿ ಅವರನ್ನು ವಿವಾಹ ಮಾಡದೇ ಉಳಿಸಿದ್ದು ದೇವದಾಸಿ ಸಾಂಪ್ರದಾಯದ ಬೆಳವಣಿಗೆ ಕಾರಣವಾಯಿತು.[1] ಬ್ರಿಟೀಷರು ಭಾರತವನ್ನು ಅಕ್ರಮಿಸಿಕೊಂಡು ಆಳ್ವಿಕೆ ನಡೆಸಲು ಆರಂಭಿಸಿದ ಮೇಲೆ ಭಾಗತೀಯ ಸಮಾಜದಲ್ಲಿ ಜನರ ಜೀವನ ವಿಧಾನಗಳು ಬದಲಾಗತೊಡಗಿದವು. ಫ್ರಾನ್ಸಿನ ಮಹಾಕ್ರಾಂತಿಯಿಂದ ಹುಟ್ಟಿದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸ್ತ್ರೀ ಪುರುಷರ ನಡುವಿನ ಗೌರವದ ಸ್ಥಾನಮಾನಗಳು ದೇವರಿಂದ ಬರುವುದಲ್ಲ. ನಾವೇ ರೂಪಿಸಿಕೊಳ್ಳಬೇಕು ಎಂಬುದನ್ನು ಕಲಿಸಿತು. ಇದರಿಂದಾಗಿ ನಮ್ಮ ಸಂಪ್ರಾದಾಯಗಳನ್ನು ಮೌನವಾಗಿ ಅನುಭವಿಸಬೇಕಾದ್ದಿಲ್ಲ. ಅಮಾನವೀಯವಾದುದನ್ನು ನಿರಾಕರಿಸುವ, ತಿರಸ್ಕರಿಸುವ, ವೈಚಾರಿಕವಾಗಿ ನೋಡುವ ಮತ್ತು ಟೀಕಿಸುವ ಸ್ವಾತಂತ್ರ್ಯ ಎಲ್ಲರಿಗೂ ಇದೆ ಎಂಬುದನ್ನು ಕಲಿಸಿತು.

೧೮ ನೇ ಶತಮಾನದಿಂದ ೨೦ನೇ ಶತಮಾನದ ಮಧ್ಯ ಭಾಗದವರೆಗೆ ಅನೇಕ ಸಮಾಜ ಸುಧಾರಕರು ಭಾರತದಲ್ಲಿ ಜನ್ಮ ತಾಳಿದರು. ಆಧುನಿಕ ಶಿಕ್ಷಣ ಮತ್ತು ವೈಚಾರಿಕತೆ ಬೆಳೆಸಿಕೊಂಡಿದ್ದ ರಾಜಾರಾಂ ಮೋಹನ್‌ರಾಯ್, ದಯಾನಂದಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ, ಜ್ಯೋತೀರಾವ್‌ಫುಲೆ, ರಾಮಕೃಷ್ಣ ಪರಮಮಹಂಸ, ಸ್ವಾಮಿವಿವೇಕಾನಂದ, ರಾನಡೆ, ಮುಂತಾದವರು ಸ್ತ್ರೀಯರ ಸ್ಥಾನಮಾನಗಳನ್ನು ಉತ್ತಮ ಪಡಿಸಲು ಶ್ರಮಿಸಿದ್ದರು. ಇದೇ ವೇಳೆಗೆ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹೋರಾಟಗಾರರು ದೊಡ್ಡ ಪ್ರಮಾಣದಲ್ಲಿ ಬಂದರು. ಅವರೆಂದರೆ ಲಾಲಾಲಜಪತರಾಯ್, ಬಿಪಿನ್ ಚಂದ್ರಪಾಲ್, ಗೋಪಾಲಕೃಷ್ಣ ಗೋಖಲೆ, ನಿವೇದಿತ, ಅನಿಬೆಸೆಂಟ್, ರಮಾಬಾಯಿ ರಾನಡೆ, ಮಹಾತ್ಮಗಾಂಧೀಜಿ, ರಾಮ ಮನೋಹರ ಲೋಹಿಯಾ, ಮುಂತಾದವರು ದೇಶದ ಸ್ವಾತಕತ್ರ್ಯಕ್ಕಾಗಿ ಹೋರಾಡುತ್ತಿದ್ದ ಸಂದರ್ಭದಲ್ಲಿಯೇ ಸ್ತ್ರೀ ವಿಮೋಚನೆಗಾಗಿಯೂ ಚಿಂತಿಸಿದರು.

ಈ ಹಿನ್ನೆಲೆಯಲ್ಲಿ ಸ್ತ್ರೀಯರ ಸಮಸ್ಯೆಗಳಿಗೆ ಕಾನೂನಾತ್ಮಕ ಪರಿಹಾರ ಕಂಡುಕೊಳ್ಳುವುದು ಮೊದಲಾಯಿತು. ದೇಶವೇ ದಾಸ್ಯದಲ್ಲಿದ್ದಾಗ ನಮ್ಮನ್ನು ಆಳುತ್ತಿದ್ದ ಬ್ರಿಟಿಷರಿಂದಲೇ ನಮ್ಮಲ್ಲಿ ಅಸ್ತಿತ್ವದಲ್ಲಿದ್ದ ಸ್ತ್ರೀ ವಿರೋಧಿ ಆಚರಣೆಗಳನ್ನು ನಿಷೇಧಿಸುವ ಆಜ್ಞೆ ಹೊರಡಿಸಿದ್ದು ನಿಜವಾದ ಸಾಧನೆ. ಆಧುನಿಕ ಭಾರತದ ಪಿತಾಮಹಾರೆನಿಸಿದ ರಾಜಾರಾಮ ಮೋಹನ್ ರಾಯರು, ಇದರಲ್ಲಿ ಮೊದಲಿಗರು. ಗಂಡ ಸತ್ತ ಕೂಡಲೆ ಆತನ ಹೆಂಡತಿಯನ್ನು ಉರಿಯುವ ಚಿತೆಗೆ ನೂಕಿ ಸಾಯಿಸುವ ಅನಿಷ್ಟ ಸಂಪ್ರದಾಯ ನಮ್ಮಲ್ಲಿತ್ತು. ಆದರೆ ವೇದೋಪನಿಷತ್ತುಗಳೇ ಇಂತ ಅಮಾನುಷ ಆಚರಣೆಗಳನ್ನು ಹೇಳಿರಲಿಲ್ಲ. ಮತ್ತು ಸತೀ ಪದ್ಧತಿ ಅಮಾನುಷವಾದದ್ದೆಂದು ಭಾರತೀಯರು ಭಾವಿಸಿರಲಿಲ್ಲ. ಇಂತ ಹೊತ್ತಿನಲ್ಲಿ ರಾಜಾರಾಮ್ ಮೋಹನ್‌ರಾಯರು ಸತಿ ಪದ್ದತಿಯನ್ನು ಹೇಗಾದರೂ ನಿರ್ಮೂಲನೆ ಮಾಡಬೇಕೆಂದು ಆಗಿನ ಬ್ರಿಟೀಷ್ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಕ್‌ನ ಮೇಲೆ ಒತ್ತಡ ಹೇರಿ ೧೮೨೬ ರಲ್ಲಿ ಸತಿ ಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದರು. ಅಲ್ಲದೆ ಈ ಕಾಯ್ದೆಯನ್ನು ಉಲ್ಲಂಘಿಸಿದವರಿಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲು ಕಾಯ್ದೆಯಲ್ಲಿ ಅವಕಾಶವಾಯಿತು. ಅದು ಮೂಲಭೂತ ವಾದಿಗಳಿಗೆ ನುಂಗಲಾರದ ತುತ್ತಾಯಿತು. ಆದರೆ ಸ್ತ್ರೀಯರ ಸ್ಥಾನಮಾನಗಳನ್ನು ಉತ್ತಮಪಡಿಸಲು ಮಾಡಿದ ಸ್ವಾತಂತ್ರ್ಯ ಪೂರ್ವದ ಮೊದಲ ಕ್ರಮ ಇದಾಯಿತು.

ಸತಿ ಪದ್ಧತಿ ಕಾಯ್ದೆ ಬಂದಿದ್ದರಪರಿಣಾಮ ಸತಿ ಹೋಗುವುದು ಪೂರ್ಣ ಕಡಿಮೆಯಾಗದಿದ್ದರೂ ನಿಯಂತ್ರಣಕ್ಕೆ ಬಂತು. ಆದರೆ ಬಾಲ ವಿಧವೆಯರು ಹೆಚ್ಚಾದರು ಪುರುಷ ಯಾವುದೇ ವಯೋಮಾನವಾಗಿರಲಿ ಚಿಕ್ಕ ಬಾಲಕೀಯರನ್ನೆ ಮದುವೆ ಮಾಡಿಕೊಳ್ಳುತ್ತಿದ್ದ ಕಾರಣದಿಂದ ಗಂಡ ಸತ್ತಕೂಡಲೇ ವಿಧವಾ ಪಟ್ಟ ಬಯಸದೇ ಬರುತ್ತಿತ್ತು. ಅಂಥ ವಿಧವೆಯರಿಗೆ ಸಾಮಾಜಿಕ ಕಿರುಕುಳ ಆರಂಭವಾಗುತ್ತಿತ್ತು, ಕುಂಕುಮ, ಬಳೆ. ಆಭರಣ ಹೂಗಳನ್ನು, ಕಳೆದಿಟ್ಟು ಮನೆಯ ಹೊರಗೆ ಮತ್ತು ಒಳಗೆ ನಿಂದನೆ ಮಾತನ್ನು ಕೇಳುತ್ತಾ ತಲೆ ಬೋಳಿಸಿಕೊಂಡು ಬಿಳಿ ಸೀರೆ ತೊಟ್ಟು ಅಪೌಷ್ಟಿಕ ಆಹಾರ ಸೇವಿಸುತ್ತಾ ಮನೆಯಾಳಿನಂತೆ ದುಡಿಯಬೇಕಿತ್ತು.

ಅವರಿಗೆ ಪುನರ್ವಿವಾಹ ವಿರಲಿಲ್ಲ. ಇವರ ಮೇಲೆ ಅತ್ಯಾಚಾರವೂ ನಡೆಯುತ್ತಿದ್ದವು. ಈ ಹಿನ್ನೆಲೆಯಲ್ಲಿ ವಿಧವೆಯರ ಪುನರ್ವಿವಾಹಕ್ಕೆ ಅವಕಾಶ ಮಾಡಿಕೊಡುವ ಕಾಯ್ದೆ ತರುವ ಅವಶ್ಯಕತೆ ಉಂಟಾಯಿತು. ಅದಕ್ಕಾಗಿ ಬ್ರಹ್ಮ ಸಮಾಜ ಮತ್ತು ಆರ್ಯಸಮಾಜದ ಕಾರ್ಯಕರ್ತರು ಬ್ರಿಟೀಷರಮೇಲೆ ಒತ್ತಡ ತಂದು ೧೮೫೬ ರಲ್ಲಿ ವಿಧವಾ ಪುನರ್ವಿವಾಹ ಕಾಯ್ದೆಯನ್ನು ಜಾರಿಗೊಳಿಸಿದರು. ಅಲ್ಲದೆ ಬ್ರಹ್ಮ ಸಮಾಜ ಮತ್ತು ಆರ್ಯಸಮಾಜಗಳ ಆಶ್ರಯದಲ್ಲಿ ವಿಧವಾ ವಿವಾಹಗಳು ನಡೆಯತೊಡಗಿದವು.

ಸ್ತ್ರೀಯರ ವೈವಾಹಿಕ ಬದುಕನ್ನು ಉತ್ತಮ ಪಡಿಸುವಲ್ಲಿ ನಾಗರೀಕ ವಿವಾಹ ಕಾಯ್ದೆ ಅತ್ಯಂತ ಪರಿಣಾಮಕಾರಿಯಾಗಿದ್ದು. ಬ್ರಹ್ಮ ಸಮಾಜದ ಕಾರ್ಯಕರ್ತರಾಗಿದ್ದ ಕೇಶವಚಂದ್ರ ಸೇನರ ಹೋರಾಟದ ಫಲವಾಗಿ ಈ ಕಾಯ್ದೆ ಜಾರಿಯಾಯಿತು. ೧೮೭೨ ರಲ್ಲಿ ಜಾರಿಗೆ ಬಂದ ನಾಗರೀಕ ವಿವಾಹ ಕಾಯ್ದೆಯ ಅನ್ವಯ ಪುರುಷರು ಬಹು ಪತ್ನಿಯರನ್ನು ಹೊಂದುವುದನ್ನು ನಿಷೇಧಿಸಲಾಯಿತು. ಒಬ್ಬ ಪುರುಷನಿಗೆ ಜೀವಂತ ಒಬ್ಬಳೇ ಪತ್ನಿ ಇರುವಂತೆ ಸೂಚಿಸಲಾಯಿತು. ಅಂತರ್ಜಾತಿ ವಿವಾಹಗಳಿಗೆ ಮತ್ತು ವಿಧವೆಯರ ಅಂತರ್ಜಾತಿ ವಿವಾಹಗಳ ಮನ್ನಣೆಗೆ ಅವಕಾಶ ಮಾಡಿಕೊಡಲಾಯಿತು. ಸ್ತ್ರೀಯರ ವಿವಾಹದ ವಯಸ್ಸನ್ನು ೧೪ ವರ್ಷವಾಗಿರಬೇಕೆಂದು ಕಡ್ಡಾಯ ಮಾಡಲಾಯಿತು. ಅಲ್ಲದೇ ಈ ಕಾಯ್ದೆ ಅಡಿ ವಿವಾಹ ನೋಂದಣಿ ಮಾಡುವುದೆಂದು ಕಡ್ಡಾಯವೆಂದು ಘೋಷಿಸಲಾಯಿತು. ಒಂದು ರೀತಿಯ ಹಳೆಯ ಗೊಡ್ಡು ಸಾಂಪ್ರದಾಯವನ್ನೇ ನಂಬಿದ್ದವರಿಗೆ ಶಾಕ್ ನೀಡಿತು. ಆದರೆ ಮಹಿಳೆಯರ ಹಿತ ದೃಷ್ಟಿಯಿಂದ ಇದು ಆರೋಗ್ಯಕರ ಕ್ರಮವೆನಿಸಿತು. ಬಾಲ್ಯ ವಿವಾಹ ತಡೆಗೆ ಅವಕಾಶ ನೀಡಿತು. ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿತು. ಏಕವಿವಾಹಕ್ಕೆ ಅನುವು ಮಾಡಿತು.

ವಿವಾಹಿತ ಸ್ತ್ರೀಯರಿಗೆ ವಿವಾಹದ ಸಂದರ್ಭದಲ್ಲಿ ನೀಡಿದ ಉಡುಗೆ-ತೊಡುಗೆಗಳನ್ನು ಹೊರತುಪಡಿಸಿದರೆ ಬೇರಾವುದೇ ಆಸ್ತಿಯ ಹಕ್ಕು ಇರಲಿಲ್ಲ. ಈಗಲೂ ಸನ್ನಿವೇಶ ತುಂಬಾ ಬದಲಾಗಿಲ್ಲ. ಆದರೂ ೧೯ ನೇ ಶತಮಾನದ ಕಾಲಕ್ಕೆ ಜಾರಿಗೆ ಬಂದ ವಿವಾಹಿತ ಮಹಿಳೆಯರ ಆಸ್ತಿಯ ಕಾಯ್ದೆ ಸ್ತ್ರೀಯರಿಗೆ ಆಸ್ತಿ ಹಕ್ಕನ್ನು ದೊರಕಿಸುವಲ್ಲಿ ಮೊದಲ ಹೆಜ್ಜೆ ಎನ್ನಬಹುದು. ಈ ಕಾಯ್ದೆ ಮದುವೆಯಾದ ಹೆಣ್ಣು ಗಂಡನ ಆಸ್ತಿಯ ಒಡತಿಯಾಗುತ್ತಾಳೆ ಎಂದೇನು ಘೋಷಿಸಿಲ್ಲ. ಆದರೆ ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಆಕೆ ಕಲೆ, ಸಂಗೀತ, ಕರಕುಶಲತೆಯಿಂದ ಸಂಪಾದಿಸಿದ ಹಣ, ಆಸ್ತಿ ಎಲ್ಲವೂ ಆಕೆಗೆ ಸೇರಿದ್ದು ಎಂದು ಘೋಷಿಸಿತು. ಹೀಗೆ ಸ್ತ್ರೀಯರು ತಾವು ಗಳಿಸಿದ್ದರ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಲು ಇದರಿಂದ ಸಾಧ್ಯವಾಯಿತು.

೧೮೮೧ ರಲ್ಲಿ ಜಾರಿಗೆ ಬಂದ ಸಮ್ಮತಿ ವಯಸ್ಸಿನ ವಿವಾಹ ಕಾಯ್ದೆ ಮತ್ತೊಂದು ಮೈಲುಗಲ್ಲು. ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲೇ ಮದುವೆ ಮಾಡುತ್ತಿದ್ದರಿಂದ ಬಾಲ ವೈಧ್ಯವಕ್ಕೆ ಒಳಗಾಗುತ್ತಿದ್ದರು. ಆದರೆ ನಾಗರೀಕ ವಿವಾಹ ಕಾಯ್ದೆ ಪ್ರಕಾರ ೧೪ ವರ್ಷಕ್ಕೆ ಮೊದಲೇ ಮದುವೆ ಮಾಡಬಾರದೆಂಬ ನಿಷೇಧವಿದ್ದರೂ ಅದನ್ನು ಮೀರಿ ಮದುವೆ ಮಾಡುತ್ತಿದ್ದವರಿಗೆ ಯಾವ ಶಿಕ್ಷೆಯೂ ಇರಲಿಲ್ಲ. ಅದನ್ನು ಮನಗಂಡು ೧೮೮೧ ರಲ್ಲಿ

ಕಾಯ್ದೆಯನ್ನು ಜಾರಿ ಗೊಳಿಸಲಾಯಿತು. ಇದರಲ್ಲಿ ೧೨ ವರ್ಷಕ್ಕೂ ಮುಂಚೆ ಹೆಣ್ಣುಮಕ್ಕಳನ್ನು ಮದುವೆ ಮಾಡುವವರಿಗೆ ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶ ಮಾಡಿತು. **ಇದಕ್ಕೆ ಪೂರಕವಾಗಿ ೧೯೨೯ ರಲ್ಲಿ ಬಾಲ್ಯವಿವಾಹ ನಿಷೇಧ ಜಾರಿಗೆ ಬಂತು.** ಜೊತೆಗೆ ವಿವಾಹದ ವಯಸ್ಸನ್ನು ಹೆಣ್ಣಿಗೆ ೧೪ ವರ್ಷವೆಂದು, ಗಂಡಿಗೆ ೧೮ ವರ್ಷವೆಂದು ನಿಗದಿಪಡಿಸಲಾಯಿತು. ಈ ಕಾಯ್ದೆಯನ್ನು ಉಲ್ಲಂಘಿಸುವವರ, ತಾಯಿ–ತಂದೆಯವರು, ಮದುವೆ ಮಾಡಿಸಿದ ಪುರೋಹಿತರು ಜೈಲುಶಿಕ್ಷೆಗೆ ಒಳಗಾಗಬೇಕು ಹಾಗೂ ದಂಡ, ತರಬೇಕೆಂದು ಕಾನೂನು ತರಲಾಯಿತು, ಈ ಕಾನೂನು ಜನಪ್ರಿಯ ವಾಗುತ್ತಿದ್ದಂತೆ ಬಾಲ್ಯವಿವಾಹದ ಪ್ರಮಾಣ ಕಡಿಮೆಯಾಯಿತು. [೨]

ವಿಧವೆಯಾದ ಎಲ್ಲರಿಗೂ ಪುನರ್ವಿವಾಹ ಸಾಧ್ಯವಾಗಲಾರದು. ಅಲ್ಲದೇ ಕಾನೂನುಗಳು ರಚನೆಯಾದ ಕೂಡಲೆ ಸಮಾಜ ಕಾನೂನಿನಂತೆ ಹೆಜ್ಜೆ ಇಡುತ್ತದೆ ಎಂದು ನಂಬುವಂತೆಯೂ ಇಲ್ಲ. ವಿಧವೆಯರನ್ನ ಮದುವೆಯಾಗಲು ಪುರುಷರು ಮುಂದೆ ಬರುವುದು ಕಡಿಮೆ. ಈ ಕಾಲದಲ್ಲಿಯೇ ಅಂಥ ಸ್ಥಿತಿಇರುವಾಗ ೨೦೦ ವರ್ಷಗಳ ಹಿಂದೆ ಇದಕ್ಕಿಂತ ಭಿನ್ನವಾಗಿತ್ತು ಎಂದು ಭಾವಿಸುವಂತಿಲ್ಲ. ಆದ್ದರಿಂದ ಅನೇಕ ವಿಧವೆಯರು ಅನಾಥ ಸ್ಥಿತಿಯಲ್ಲಿ ಬದುಕಿದ್ದರು, ಹೀಗಾಗಿ ೧೯೩೭ ರಲ್ಲಿ ವಿಧವೆಯರಿಗೆ ಆಸ್ತಿಯ ಹಕ್ಕಿನ ಕಾಯ್ದೆ ಜಾರಿಗೊಳಿಸಲಾಯಿತು. ಈ ಕಾನೂನಿಂದಾಗಿ ಪರಂಪರಾಗತವಾಗಿ ಬಂದಿದ್ದ ಪುರುಷನೇ ಆಸ್ತಿಯ ಒಡೆಯ ಎಂಬ ಮನೋಭಾವನೆಯಲ್ಲಿ ತಲ್ಲಣಗಳು ಶುರುವಾದವು. **ಇದು ಮುಂದೆ ಹಿಂದೂ ಸ್ತ್ರೀಯರ ಆಸ್ತಿ ಹಕ್ಕಿನ ಕಾಯಿದೆ (೧೯೩೯) ಜಾರಿಗೆ ಅವಕಾಶ ಮಾಡಿತು.**

೧೮೫೯ ರಲ್ಲಿ ಬ್ರಿಟೀಷ್ ಸರ್ಕಾರ ಪುರುಷರಿಗೆ ಸಮಾನವಾಗಿ ಸ್ತ್ರೀಯರಿಗೆ ಸೂಕ್ತವಾದ ಶಿಕ್ಷಣವನ್ನು ಸುರಕ್ಷಿತ ವಾತಾವರಣದಲ್ಲಿ ನೀಡಬೇಕೆಂದು ಪ್ರತಿಪಾದಿಸಿತು. ೧೮೮೨ ರ ಶಿಕ್ಷಣ ಆಯೋಗವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿತು. ಆದರೆ ೧೨ ವರ್ಷಕ್ಕೆ ಮೇಲ್ಪಟ್ಟು ಹೆಣ್ಣು ಮಕ್ಕಳಿಗೆ ಶಿಕ್ಷಕಿಯರನ್ನೇ ನೇಮಕ ಮಾಡುವಂತೆ ಶಿಫಾರಸ್ಸು ಮಾಡಿತು. ಇದರಿಂದಾಗಿ ಮಹಿಳಾ ಶಿಕ್ಷಣಕ್ಕೆ ಆದ್ಯತೆ ದೊರೆತು ಅನೇಕ ಸ್ತ್ರೀಯರು ವಿದ್ಯಾವಂತರಾದರು. ಆಧುನಿಕ ಶಿಕ್ಷಣದಿಂದಾಗಿ ಮಹಿಳೆಯರಿಗೆ ಭಾರತೀಯ ಸಮಾಜದ ಕೆಡಕುಗಳು ಅರ್ಥವಾಗತೊಡಗಿದವು. ಇದು ಮಹಿಳಾ ಸಂಘಗಳ ರಚನೆಗೆ ಪ್ರೇರಣೆಯಾಯಿತು. ಮಹಿಳಾ ಚಳುವಳಿಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ರಚಿತವಾದ ಮಹಿಳಾ ಸಂಘಗಳು ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಮುಂದಾದವು. ಪಂಡಿತ ರಮಾಬಾಯಿಯವರ 'ಶಾರದಸದನ' (೧೮೮೭) ಭಂಡಾರ್ಕರ್ ಮಹದೇವ ರಾನಡೆಯವರ 'ಆರ್ಯ ಮಹಿಳಾ ಸಮಾಜ' 'ಮುಕ್ತಿ ಸದಸ' ಅನಿಬೆಸೆಂಟರ 'ಮಹಿಳೆಯರ ಭಾರತೀಯ ಸಂಘ' ಸಾಮಾಜಿಕ ಸಮಸ್ಯೆಗಳ ಕಡೆ ಬೆಳಕು ಚೆಲ್ಲಿದವು. ೧೯೨೦ ರ ವೇಳೆಗೆ ಭಾರತ ಸ್ವಾತಂತ್ರ್ಯ ಚಳುವಳಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆಯುತ್ತಿದ್ದಾಗ ಸ್ತ್ರೀಯರು ಸಂಘಟಿತರಾಗಿ ಧುಮುಕಿದರು. ೧೯೨೦ ರ ಉಪ್ಪಿನ ಸತ್ಯಾಗ್ರಹದಲ್ಲಂತೂ ಸಹ ಮಹಿಳೆಯರೇ ಹೆಚ್ಚಿದ್ದರು. ಈ ವೇಳೆಗಾಗಲೇ ಸ್ತ್ರೀಯರನ್ನು ಸಂಘಟಿಸಿ ಸರಿ

ದಾರಿಯಲ್ಲಿ ನಡೆಸುವ ಪ್ರಜ್ಞಾವಂತ ಮಹಿಳೆಯರು ಚಳುವಳಿಯ ನೇತಾರರಾಗಿದ್ದರು. ಅವರುಗಳೆಂದರೆ ಮುಖ್ಯವಾಗಿ ಸರೋಜಿನಿನಾಯ್ಡು, ವಿಜಯಲಕ್ಷ್ಮಿ ಪಂಡಿತ್, ಕಮಲಾದೇವಿ ಚಟ್ಟೋಪಾಧ್ಯಾಯ, ಲೀಲಾ ದೇವಿ ಮುನ್ಶಿ, ಕ್ಯಾಪ್ಟನ್ ಲಕ್ಷ್ಮಿ ಮುಂತಾದವರು ನಾಯಕತ್ವ ವಹಿಸಿದ್ದರು.

ಇವರೆಲ್ಲರ ಹೋರಾಟದ ಫಲವಾಗಿ ಸ್ವತಂತ್ರ ಭಾರತದ ಸಂವಿಧಾನ ರಚನೆಯಲ್ಲಿ ಸ್ತ್ರೀಪರ ಕಾಳಜಿಗಳು ಸ್ಥಾನ ಪಡೆಯಲು ಅವಕಾಶವಾಯಿತ್ತೆನ್ನಬಹುದು. ಅಲ್ಲದೇ ಮಾನವ ಹಕ್ಕುಗಳನ್ನು ಸಮರ್ಥಿಸುವ ಮತ್ತು ಮಹಿಳೆಯರಿಗೆ ಪುರುಷರ ಚಿತ್ರಹಿಂಸೆ, ಕ್ರೂರವರ್ತನೆ, ಗುಲಾಮರನ್ನಾಗಿ ನಡೆಸಿಕೊಳ್ಳುವುದು, ಅತಿಯಾಗಿಶಿಕ್ಷಿಸುವುದು. ಲಿಂಗ ತಾರತಮ್ಯ ಮಾಡುವುದು. ಈ ಎಲ್ಲವೂಗಳ ವಿರುದ್ಧ ಕಾನುನು ಸಮರ ಸಾರುವಂತೆ ಶಾಸನಾತ್ಮಕ ರಕ್ಷಣೆ ದೊರೆಕಿಸಿ ಮಹಿಳೆಯರ ಜೀವಿಸುವಹಕ್ಕನ್ನು ಎತ್ತಿ ಹಿಡಿಯಲಾಯಿತು.[೩]

ಹೀಗಿದ್ದರೂ ಮಹಿಳೆಯರ ಬದುಕನ್ನು ಸುಧಾರಿಸುವಲ್ಲಿ ವಿಜಯ ಸಾಧಿಸಿದ್ದೇವೆ, ಎಂದು ಬೆನ್ನು ತಟ್ಟಿಕೊಳ್ಳುವಂತಿಲ್ಲ. ಲಿಂಗ ತಾರತಮ್ಯ, ಅನ್ಯಾಯ, ಹಿಂಸೆಗಳು ಮುಂದುವರೆಯುತ್ತಲೇ ಇವೆ. ಮಹಿಳೆಯರು ಅಭದ್ರತೆಯಲ್ಲಿಯೇ ಇಂದಿಗೂ ಇದ್ದಾರೆ. ರಚಿತವಾಗಿರುವ ಕಾನೂನಿಗಳಿಗೂ ಮತ್ತು ಸಾಮಾಜಿಕ ಆಚರಣೆಗಳಿಗೂ ವ್ಯತ್ಯಾಸಗಳಿವೆ. ಮಹಿಳಾ ಸಮಸ್ಯೆಗಳನ್ನು ಕುರಿತು ಗಂಭಿರವಾದ ಚರ್ಚೆಗಳು ನಡೆಯುತ್ತಲೇ ಇವೆ. ಮಹಿಳೆಯರಿಗೆ ಅಸುರಕ್ಷತೆ ಇದ್ದೇ ಇದೆ. ಹೀಗಿದ್ದರೂ ಸಮಾಧಾನದ ಸಂಗತಿ ಎಂದರೆ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಕಾಲಕಾಲಕ್ಕೆ ಕಾನೂನು ರಚನೆಯಾಗುತ್ತಲೇ ಇವೆ. ಕಾನೂನನ್ನು ಉಲ್ಲಂಘಿಸಿ ಪುರುಷ ಪ್ರಾಬಲ್ಯ ವಿಜೃಂಭಿಸುತ್ತಲೇ ಇದೆ.

'ಸ್ತ್ರೀಯರನ್ನು ಶೈಕ್ಷಣಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿ ಸಮರ್ಥರನ್ನಾಗಿಸುವುದರ ಮೂಲಕವೇ ಸಾಮಾಜಿಕ ಶಕ್ತಿಯನ್ನುಂಟು ಮಾಡಲು ಸಾಧ್ಯವಾಗುವುದು. ಸಾಮಾಜಿಕ ಅಶಕ್ತತೆ ಎಂಬುದು ಬಹಳ ದೊಡ್ಡ ಸವಾಲು. ಆದರೂ ಅಂಥ ಶಕ್ತಿ ಮಹಿಳೆಯರಿಗೆ ಅವಶ್ಯಕವಾಗಿರುವುದರಿಂದ ಸಂವಿಧಾನಾತ್ಮಕ ಕಾನೂನುಗಳು ಅತ್ಯಂತ ಅವಶ್ಯಕ. ಈ ಕಾನೂನುಗಳಿಗೂ ಮೀರಿದ್ದು ಸ್ತ್ರೀಯರ ವಿಷಯದಲ್ಲಿ ಪ್ರೀತಿ ತುಂಬಿದ ಸಹಾನುಭೂತಿಯ ವರ್ತನೆಯಾಗಿದೆ.

ಮಹಿಳಾ ದೌರ್ಜನ್ಯಕ್ಕೆ ಪ್ರಮುಖ ಕಾರಣಗಳು

ಪುರುಷ ಪ್ರಧಾನತೆ, ಲಿಂಗ ತಾರತಮ್ಯ, ಆರ್ಥಿಕಾವಲಂಬನೆ, ಶೈಕ್ಷಣಿಕ ಕೊರತೆ, ಸಾಮಾಜಿಕ ಸ್ಥಾನಮಾನ ಕೊರತೆ, ಸಾಮಾಜಿಕ ಅರಿವಿನ ಕೊರತೆ, ವರದಕ್ಷಿಣೆ, ಇತ್ಯಾದಿ ಸಾಂಪ್ರದಾಯಿಕ, ಧಾರ್ಮಿಕ ಕಾರಣಗಳು ಆತ್ಮವಿಶ್ವಾಸ ಮತ್ತು ಧೈರ್ಯದ ಕೊರತೆ, ಅವಕಾಶ ವಂಚಿತರಾಗಿರುವುದು ಮತ್ತು ಎಲ್ಲಾ ದೌರ್ಜನ್ಯವನ್ನು ಸಹಿಸಿಕೊಳ್ಳುವ ವಿವೇಚನಾ ರಹಿತ ಮನೋವೃತ್ತಿ ಇತ್ಯಾದಿ ಅನೇಕ ಕಾರಣಗಳನ್ನು ಗುರುತಿಸಬಹುದಾದರೂ, ಮುಖ್ಯವಾಗಿ ಶತಮಾನಗಳಿಂದ ಬೆಳೆದು ಬಂದಿರುವ ಪುರುಷ ಉತ್ತಮ ಸ್ತ್ರೀ ಕೀಳು ಎಂಬ ಅತಿರೇಖದ ಧೋರಣೆಯು ಸ್ತ್ರೀಯರ ಮೇಲಿನ ಎಲ್ಲಾ ದೌರ್ಜನ್ಯಗಳಿಗೂ ಮೂಲ ಕಾರಣವಾಗಿದೆ.

ದೌರ್ಜನ್ಯಕ್ಕೆ ಒಳಗಾಗುವವರು ಬಹತೇಕ ಮಹಿಳೆಯರಲ್ಲಿ ಅಸಾಹಯಕರು, ಖಿನ್ನರು, ಆತ್ಮ ಗೌರವ, ಧೈರ್ಯದ ಕೊರತೆ ಇರುವವರು, ಅವಿದ್ಯಾವಂತರು, ಆರ್ಥಿಕವಾಗಿ ಬೇರೇಯವರ ಮೇಲೆ ಅವಲಂಬಿತರಾದವರು, ಒತ್ತಡ ಪೂರಿತ ಕುಟುಂಬದಲ್ಲಿರುವ ಅಶಕ್ತರು, ಸಾಮಾಜಿಕ ಅರಿವಿನ ಕೊರತೆಯಿರುವವರು, ಕುಡುಕ ಮಾನಸಿಕ ವಿಕೃತಿಯ ಪುರುಷ ಸಂಬಂಧಿಗಳಲ್ಲಿರುವ ಮುಂತಾದವರು.

ಹಣಕ್ಕಾಗಿ ಸ್ವಾರ್ಥ ಸಾಧನೆಗಾಗಿ, ಅಧಿಕಾರಕ್ಕಾಗಿ, ವಿಕೃತ ಸುಖಕ್ಕಾಗಿ, ಮಾನಸಿಕ ವ್ಯಾಧಿ, ಕುಟುಂಬದಲ್ಲಿನ ಒತ್ತಡ, ಕುಡುಕ ಇತ್ಯಾದಿಗಳ ಜೊತೆಗೆ ಸ್ತ್ರೀಯರ ಮೇಲಿರುವ ಉಚ್ಚ ನೀಚ ಎಂಬ ಮಾನಸಿಕ ಧೋರಣೆಯು ದೌರ್ಜನ್ಯದ ಪ್ರಮುಖ ಉದ್ದೇಶಗಳೆಂದು ಗುರುತಿಸಬಹುದು.[೬] ಭಾರತ ಸಂವಿಧಾನವು ಸರ್ವ ಸಮಾನತೆಯನ್ನೆತ್ತಿದೆ. ಸ್ತ್ರೀ ಎಂಬ ಕಾರಣಕ್ಕಾಗಿ ಯಾವುದೇ ಬಗೆಯ ತಾರತಮ್ಯ ನಿಷಿದ್ದ ಎಂದು ತೋರಿಸಿರುವ ಈ ದೇಶದಲ್ಲಿ ಸಾವಿರಾರು ಹೆಣ್ಣು ಮಕ್ಕಳಿಗೆ ಜನ್ಮ ತಳೆಯುವ ಸ್ವತಂತ್ರ ವೂ ಇಲ್ಲ, ಎಂದರೆ ಸ್ತ್ರೀ ವಿರೋಧಿ ಪ್ರವೃತ್ತಿಗಳು ಎಷ್ಟು ಆಳವಾಗಿ ಬೇರೂರಿವೆ ಎಂಬುದರ ಅರಿವು ಉಂಟಾಗಿದೆ. ಇಂದು ಮಹಿಳೆಯರು ಕುಟುಂಬದ ಒಳಗೆ ಹೊರಗೆ ವಿವಿಧ ಬಗೆಯ ದೌರ್ಜನ್ಯ ಹಿಂಸೆ ಮತ್ತು ಸಮಸ್ಯೆಗಳಿಗೆ ಒಳಗಾಗಿ ಪರಿತಪ್ಪಿಸುವಂತಾಗಿದೆ.

"ಕೌಟುಂಬಿಕ ದೌರ್ಜನ್ಯ"ಮಹಿಳೆ ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿ ಪುರುಷರಿಗೆ ಸರಿಸಮಾನವಾದ ಸಾಧನೆ ತೋರುತ್ತಿದ್ದಾಳೆ. ಆಧುನಿಕ ಸಮಾಜದಲ್ಲಿ ಮಹಿಳೆಗೆ ತನ್ನದೇ ಆದ ಸ್ಥಾನಮಾನವಿರುವುದು ಕಂಡುಬಂದಿದೆ, ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ ಎಂಬ ನಾಣ್ನುಡಿಗನುಗುಣವಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಸಮಾಜ, ಸರ್ಕಾರ ತುಂಬಾ ಗಮನ ನೀಡುತ್ತದೆ. ಭಾರತೀಯ ಮೂಲದ ಸುನಿತಾ ವಿಲಿಯಂರಂತೆ ಸಾಧನೆಯ ಉನ್ನತ ಶಿಖರವನ್ನೇರಿದ ಮಹಿಳೆಯರು ಇಂದಿನ ವಿದ್ಯಾವಂತ ಮಹಿಳೆಯರಿಗೆ ಆದರ್ಶವಾಗುತ್ತದೆ. ದಿವಂಗತ ಇಂದಿರಾಗಾಂಧಿಯಂತಹ ಅಸಾಧಾರಣ ಮಹಿಳೆಯ ಇತಿಹಾಸ ಪ್ರಸ್ತುತ ಆಧುನಿಕ ಮಹಿಳೆಗೆ ರಾಜಕೀಯ ಸ್ಥಾನಮಾನಕ್ಕಾಗಿ ಚಿಂತಿಸುವ ಅವಕಾಶ ಒದಗಿದೆ. ಮಹಿಳಾ ವಿದ್ಯಾಭ್ಯಾಸ ಮಹಿಳಾ ಸಬಲೀಕರಣ ಇತ್ಯಾದಿ ವಿಷಯಗಳು ೧೯೮೦–೧೯೯೦ ರಿಂದೀಚೆಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರವರ್ಧಮಾನಕ್ಕೆ ಬಂದಿವೆ. ಮಹಿಳೆಯರ ಸ್ಥಾನಮಾನದಲ್ಲಿ ಈ ರೀತಿ ಬದಲಾವಣೆಗಳ ಅಲೆ ಬೀಸುತ್ತಿರುವ ಸಂದರ್ಭದಲ್ಲೇ ಅತ್ಯಂತ ದುಃಖ ಮಯವಾದ ಸಂಗತಿಯೆಂದರೆ ಇಂದಿಗೂ ಮಹಿಳೆಗೆ ಒಂದಲ್ಲಾ ಒಂದು ರೀತಿಯಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು. ಈ ದೌರ್ಜನ್ಯ ಶತಮಾನಗಳಿಂದಲೂ ಇತ್ತು ಹಾಗೂ ಇಂದಿಗೂ ಇದೆ. ನಮ್ಮ ದೇಶ ಭಾರತವು ಸೇರಿದಂತೆ ಅಭಿವೃದ್ದಿ ಹೊಂದುತ್ತಿರುವ ದೇಶಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ದಬ್ಬಾಳಿಕೆ ಅವರು ಜನಿಸುವುದಕ್ಕಿಂತ ಮೊದಲೇ ಹುಟ್ಟುವ ಮೊದಲೇ ಗಂಡೋ–ಹೆಣ್ಣೋ ಎಂಬಲ್ಲಿಯೇ ಪ್ರಾರಂಭವಾಗಿರುತ್ತದೆ. ಪ್ರತಿ ವರ್ಷ ನವೆಂಬರ್ ೨೫ ರಂದು ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿ ದಿನವೆಂದು ಆಚರಿಸಲಾಗುತ್ತದೆ. ಆದರೆ ಮಹಿಳೆಯರ

ಮೇಲಿನ ದೌರ್ಜನ್ಯಗಳನ್ನು ಖಂಡಿಸಲು ವಿರೋಧಿದಿನವೆಂದು ವರ್ಷದಲ್ಲಿ ಒಂದು ದಿನವನ್ನು ಅದಕ್ಕಾಗಿ ಮೀಸಲಿಡಬೇಕಾದ ವಿಕೋಪಸ್ಥಿತಿಗೆ ಸಮಾಜ ಮಹಿಳೆಯರನ್ನು ತಳ್ಳುತ್ತಿದೆ. ಭಾರತ ಒಟ್ಟು ಜನಸಂಖ್ಯೆ ೫೦% ರಷ್ಟು ಮಹಿಳೆಯರಿದ್ದಾರೆಂದು ಅಂಕಅಂಶಗಳು ಹೇಳುತ್ತವೆ. ಭಾರತದಲ್ಲಿ ಪ್ರತಿದಿನ ೧೮ ಸಾವಿರ ಮಹಿಳೆಯರು ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ. ದಾಖಲಾಗುವ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕಾರಗಳಲ್ಲಿ ಶೇ.೯೪ ರಷ್ಟು ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸುತ್ತಾರೆ. ಹಾಗಾದರೆ ಕೌಟುಂಬಿಕ ದೌರ್ಜನ್ಯ ಎಂದರೇನು ಮಹಿಳೆಯರೆಂದರೆ ಯಾರೆಲ್ಲಾ ಸೇರ್ಪಡೆಯಾಗುತ್ತಾರೆ. ಎಂಬ ಇತ್ಯಾದಿ ಪ್ರಶ್ನೆಗಳು ಮೂಡುತ್ತವೆ. ತಮ್ಮ ಮನೆಯಲ್ಲಿಯೇ ಪತಿಯಿಂದಲೇ ಮನೆಯಲ್ಲಿನ ಮಹಿಳೆಯರ ಅತ್ಯಾಚಾರ, ಬಲಾತ್ಕಾರ ಮಾನಭಂಗಕ್ಕೆ ಒಳಗಾಗುವುದು. ಹೆಣ್ಣು ಮಕ್ಕಳ ಸ್ವಹಿತಾಸಕ್ತಿಯನ್ನು ಖಂಡಿಸುವುದು, ವಸತಿ ವಿಷಯದಲ್ಲಿ ತೊಂದರೆ ನೀಡುವುದು, ವರದಕ್ಷಣೆ ಕಿರುಕುಳ, ಕುಡಿದುಬಂದು ಹೆಂಡತಿ ಮಕ್ಕಳನ್ನು ಹೊಡೆಯುವುದು, ದೈಹಿಕ ಮತ್ತು ಮಾನಸಿಕ ಕಿರುಕುಳ ಬಲತ್ಕಾರದಿಂದ ಭ್ರೂಣ ಹತ್ಯೆ ಮಾಡುವುದು. ಅವಮಾನ, ತಾರತಮ್ಯ ಮಾಡಿ ದರ್ಪ ತೋರುವುದು, ಈ ಪರಿಧಿಯಲ್ಲಿ ಬರುವ ಎಲ್ಲಾ ದೌರ್ಜನ್ಯ ದಬ್ಬಾಳಿಕೆಗಳನ್ನು ಕೌಟುಂಬಿಕ ದೌರ್ಜನ್ಯ ಎಂದು ಕರೆಯುತ್ತೇವೆ.

ಹಾಗೆಯೇ ಮಹಿಳೆ ಎಂದರೆ ಗೃಹಿಣಿಯರು, ವಿಧವೆಯರು ಅವಿವಾಹಿತೆಯಲ್ಲಿನ ಹೆಣ್ಣು ಮಕ್ಕಳು ಎಂದು ಅರ್ಥೈಸಬಹುದು. ಸಾಮಾನ್ಯವಾಗಿ ವಿವಾಹಿತ ಮಹಿಳೆಯರು ಗೃಹಿಣಿಯಾಗಿರುತ್ತಾರೆ. ಇದರಲ್ಲಿ ಮಹಿಳೆ ಮತ್ತು ವಿವಾಹಕ್ಕೆ ಸಂಬಂಧಿಸಿದ ಬಹಳಷ್ಟು ಕಾನೂನುಗಳು ಗೃಹಿಣಿಯರಿಗೆ ಅನ್ವಯಿಸುತ್ತದೆ. ಕರ್ನಾಟಕದ ರಾಜ್ಯಧಾನಿಯಾದ ಬೆಂಗಳೂರು ನಗರ ಒಂದರಲ್ಲೇ ಪ್ರತಿದಿನ ೮-೧೦ ಮಹಿಳೆಯರು ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ. ಶೇಕಡ ೯೨ ರಷ್ಟು ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿರುತ್ತದೆ. ವಿಶ್ವಸಂಸ್ಥೆಯ ಸಾಂಸ್ಥಿಕ ಅಭಿವೃದ್ದಿ ಕಾರ್ಯಕ್ರಮದಡಿಯಲ್ಲಿ ಇತ್ತೀಚೆಗೆ ನಡೆಸಲಾದ ಅಧ್ಯಯನವೊಂದರ ಪ್ರಕಾರ ನಮ್ಮ ದೇಶದಲ್ಲಿ ೧೫-೪೯ ವಯೋಮಾನದ ಶೇಕಡ ೭೧ ರಷ್ಟು ವಿವಾಹಿತ ಮಹಿಳೆಯರು ಅತ್ಯಾಚಾರ, ಹೊಡೆತ, ಕಿರುಕುಳ ಮತ್ತು ಬೈಗುಳಗಳಿಂದ ಅವಮಾನಿತರಾಗುವಂತ ಕೌಟುಂಬಿಕ ದೌರ್ಜನ್ಯಗಳಿಗೆ ಒಳಗಾಗುತ್ತಾರೆ.

ನಮ್ಮ ದೇಶದಲ್ಲಿ ಕೆಳವರ್ಗ ಬಡಕುಟುಂಬದಲ್ಲಿ ಹೆಂಡತಿಯನ್ನು ಹೊಡೆಯುವುದು ಸಾಮಾನ್ಯವಾಗಿದೆ. ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಸಾಂಪ್ರದಾಯ ಸ್ಥಿತಿ ಮುಂದುವರೆದ ಕುಟುಂಬ ಎಂಬ ಭೇದಭಾವ ವಿಲ್ಲದೇ ಮಹಿಳೆಯರ ಮೇಲೆ ಆಯಾ ಹಂತಕ್ಕೆ ತಕ್ಕಂತೆ ದೌರ್ಜನ್ಯ ನಡೆಯುತ್ತದೆ. ವಿದ್ಯಾವಂತ ಕುಟುಂಬದಲ್ಲಿನ ದೌರ್ಜನ್ಯವು ವ್ಯವಸ್ಥಿತ ಸಂಚಿನಿಂದ ಕೂಡಿರುತ್ತದೆ. ಈಜಿಪ್ಟ್ ನಂತರ ಮುಸ್ಲಿಂ ಪ್ರಧಾನ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆ ಸಂಖ್ಯೆಯಲ್ಲಿದೆ.

"ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ"ಈ ವರೆಗಿನ ಕಾನೂನುಗಳಿಗಿಂತ ಹೊಸ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯು ಬಹುಮುಖ್ಯವಾದ ಸುಧಾರಣೆಗಳನ್ನು ಒಳಗೊಂಡಿದೆ. ಹಿಂದಿನ ನಾಗರೀಕ ಕಾನೂನುಗಳಲ್ಲಿ ಕಾಯ್ದೆಗಳಲ್ಲಿ ಕುಟುಂಬದಲ್ಲಿನ ಮಹಿಳೆಯರ ಹಕ್ಕುಗಳ ಸಮರ್ಪಕವಾದ ರಕ್ಷಣೆಗಳು ಹೊರಬಂದಿರುವುದು ಕಂಡುಬರುವುದಿಲ್ಲ. ವೈವಾಹಿಕ ಸಂಬಂಧಗಳಾಚೆಗೂ ವಿಸ್ತರಿಸಿದ ಕೌಟುಂಬಿಕ ಹಿಂಸೆಯು ವ್ಯಾಖ್ಯಾನವು ಯಶಸ್ವಿಯಾಗ್ಗಿ ಸಮರ್ಪಿಸಲ್ಪಟ್ಟಿದ್ದು, ಬೃಹತ್ ಪ್ರಮಾಣದಲ್ಲಿ ಹೊರ ಬಂದಿರುವ ಈ ಕಾಯ್ದೆ ಪ್ರತಿಷ್ಟೆಯ ಮಹತ್ವಕಾಂಕ್ಷೆಯನ್ನು ಹೊಂದಿದ್ದರೆ ಸಾಕಷ್ಟು ಪ್ರಮಾಣದಲ್ಲಿ ಸೂಕ್ಷ್ಮತೆಯ ಕೊರತೆ ಇದೆ, ಎಂದು **ಮಧುಪೂರ್ಣಿಮಕೇಶ್ವರ** ಅಭಿಪ್ರಾಯ ಪಟ್ಟಿದ್ದಾರೆ. ಈ ಕಾಯ್ದೆಯು ದಮನಕ್ಕೊಳಗಾದ ಎಲ್ಲಾ ಮಹಿಳೆಯನ್ನು ಸಮರ್ಪಕವಾಗಿ ರಕ್ಷಿಸುವ ಸಾಧ್ಯತೆಯನ್ನು ಹೇಳುತ್ತದೆ. ಸರ್ಕಾರ ಮತ್ತು ಸರ್ಕಾರೇತರ ಜಾಲಸಂಬಂಧಗಳನ್ನು ಸಮರ್ಥವಾಗಿ ರೂಪಿಸಲಾಗಿದೆ. ಆದ್ದರಿಂದ ಎಲ್ಲಾ ಮಹಿಳೆಯರಿಗೂ ಇದು ನ್ಯಾಯವನ್ನೇ ಒದಗಿಸುತ್ತದೆ ಎಂದು ಈ ಕಾಯ್ದೆಯನ್ನು ರೂಪಿಸಿರುವವರು ನಿರೀಕ್ಷಿಸಿದ್ದಾರೆ. ಈ ವರೆಗಿನ ಕಾನೂನಿನಲ್ಲಿ ವರದಕ್ಷಿಣೆಯನ್ನು ಮಾತ್ರ ಕೌಟುಂಬಿಕ ಹಿಂಸೆ ಎಂದು ಪರಿಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ಬಂದ ತಿದ್ದುಪಡಿಗಳಿಂದ ಕೌಟುಂಬಿಕ ಹಿಂಸೆಯು ಕೇವಲ ವರದಕ್ಷಿಣೆ ನೆಪದಲ್ಲಿ ಮುಚ್ಚಿಹೋಗಿದೆಯೆಂಬ ಅಂಶವನ್ನು ಹೊರಹಾಕಿದೆ. ಹಾಗೆಯೇ ವರದಕ್ಷಿಣೆಯು ಕೌಟುಂಬಿಕ ಹಿಂಸೆಯು ಒಂದು ಬಗೆಯೋ ಏನೋ ವರದಕ್ಷಿಣೆಯಷ್ಟೇ ಕೌಟುಂಬಿಕ ಹಿಂಸೆಯಲ್ಲವೆಂದು ವ್ಯಾಖ್ಯಾನಿಸಿದೆ, ಮಹಿಳಾ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯದ ನಿರ್ಲಕ್ಷ್ಯದಿಂದ ಅಂಚಿಗೆ ತಳ್ಳಲಾಗಿದೆ. ಭಾರತ ದೇಶದಲ್ಲಿನ ಕೌಟುಂಬಿಕ ದೌರ್ಜನ್ಯದ ನೈಜ ಮುಖವನ್ನು ಇದು ಪರೀಕ್ಷಿಸಿದೆ. ಮಹಿಳೆಯರವಿರುದ್ದ ನಡೆಯುವ ದೌರ್ಜನ್ಯದ ಕಾರಣ ವರದಕ್ಷಿಣೆಯೆಂಬ ಸರಳೀಕೃತ ವ್ಯಾಖ್ಯಾವನ್ನು ಇದು ತಳ್ಳಿ ಹಾಕುತ್ತದೆ. ಭಾರತೀಯ ದಂಡ ಸಂಹಿತೆಯ ಕಲಂ ೪೯೮(ಎ)ಅಡಿಯಲ್ಲಿ ಅಪರಾಧಿಕ ನ್ಯಾಯಾಲಯಗಳು ಮತ್ತು ನಾಗರೀಕ ನ್ಯಾಯಾಲಯಗಳು ಕೌಟುಂಬಿಕ ದೌರ್ಜನ್ಯಕ್ಕೊಳಗಾದವರಿಗೆ ಪರಿಹಾರವನ್ನು ಒದಗಿಸುವುದರತ್ತ ಗಮನ ಹರಿಸಿದೆ.

ಗಂಡ ಅಥವಾ ಹೆಂಡತಿಯೊಂದಿಗಿನ ಸಂಬಂಧದಲ್ಲಿ ಮಹಿಳೆಯರಿಗೆ ಆಗುವ ಅನ್ಯಾಯವನ್ನು ಮತ್ತು ಕಾನೂನಿನಲ್ಲಿ ಈ ಸಂಬಂಧಿತವಾಗಿ ಒದಗಿಸಲಾಗಿರುವ ಸವಲತ್ತುಗಳನ್ನು ಹರಿತುಕೊಂಡು, ಮಹಿಳೆಯರ ನಾಗರೀಕ ಮತ್ತು ವೈವಾಹಿಕ ಹಕ್ಕುಗಳು ಸಾಕಾರಾತ್ಮಕ ರಕ್ಷಣೆಗಳನ್ನು ಒದಗಿಸಲ್ಪಡುವ ಮಾರ್ಗಸೂಚಿಯಾಗಿ ಈ ಹೊಸ ಕಾಯ್ದೆಯು ನಿಲ್ಲುತ್ತದೆ. ೨ ನೇ ಹಂತದ ಪರಿಹಾರವೂ ಈ ಕಾನೂನಿನಡಿಯಲ್ಲಿ ಅಪರಾಧಗಳಿಗೆ ಸೆರೆಮನೆ ವಾಸ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಈ ಕಾನೂನಿನ ವ್ಯಾಪ್ತಿಯಲ್ಲಿ ಸೊಸೆಯಂದಿರು ಹೆಂಡತಿಯರ ಪಾತ್ರಗಳಲ್ಲಿರುವ ಮಹಿಳೆಯರಷ್ಟೇ ಅಲ್ಲದೇ ಅಜ್ಜಿಯರು, ನಾದಿನಿ, ಸೊಸೆ, ತಾಯಂದಿರು, ಅಕ್ಕ ತಂಗಿಯರು, ಮಕ್ಕಳನ್ನೊಳಗೊಂಡ ಕೌಟುಂಬಿಕ ಹಿಂಸೆಯಲ್ಲಿನ ವ್ಯಾಖ್ಯಾನದ ವ್ಯಾಪ್ತಿಗೊಳಪಡಿಸಲಾಗಿದೆ.

ಈ ಹೊಸ ಕಾಯ್ದೆಯು ಮಕ್ಕಳ ಬಂಧನದಲ್ಲಿರುವ ಮಹಿಳೆಯರ ವಿರುದ್ಧ ದೌರ್ಜನ್ಯದ ರಕ್ಷಣೆ, ವೈವಾಹಿಕ ಕುಟುಂಬದ ಹಕ್ಕುಗಳ ಸಂರಕ್ಷಣೆಗಾಗಿ ಘೋಷಣೆಯಾಗಿರುವ ನಾಗರೀಕ ಪರಿಹಾರವನ್ನು ಒಳಗೊಂಡಿರುವುದರಿಂದ, ಸಾಕಷ್ಟು ವ್ಯಾಪಕತೆಯನ್ನು ಮತ್ತು ತ್ವರಿತವಾದ ಪರಿಹಾರಗಳನ್ನು ನಿಗದಿತ ಸಮಯದಲ್ಲಿ ಒದಗಿಸುವುದನ್ನು ಸೂಚಿಸುವುದು ಪ್ರಮುಖ ಸುಧಾರಣೆಯಾಗಿದೆ. ಈ ಬಗೆ ಉಪಯುಕ್ತ ಅಂಶಗಳನ್ನು ಹೊಂದಿರುವ ಈ ಕಾನೂನು ದಮನಕಾರಿ ಸಂಬಂಧದಲ್ಲಿ ನಡೆಯುವ ದೌರ್ಜನ್ಯಗಳನ್ನು ಹೊಸ ವ್ಯಾಖ್ಯಾನಗಳಲ್ಲಿ ಸಮಾನತೆಯ ದೃಷ್ಟಿಯಿಂದ ಪರಿಶೀಲಿಸಿದೆ. ಇದರಿಂದಾಗಿ ಮಹಿಳೆಯರನ್ನು ಮನೆಯಲ್ಲಿನ ದೌರ್ಜನ್ಯದಿಂದ ರಕ್ಷಿಸುವ ಕಾಯ್ದೆ ೨೦೦೫ ಜಾರಿಗೆ ಬಂದಿದೆ. ಇದು ೨೬ ಅಕ್ಟೋಬರ್ ೨೦೦೬ ರಿಂದ ಜಾರಿಗೆ ಬಂದಿದೆ.[೫] ಎಷ್ಟೋ ಬಾರಿ ಒಂದೇ ಮನೆಯಲ್ಲಿ ವಾಸಿಸುವ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು ಸಾರ್ವಜನಿಕ ಸ್ಥಳದಲ್ಲಿ ಅಪರಿಚಿತರ ಮೇಲೆ ನಡೆಯುವ ದೌರ್ಜನ್ಯ ಹಿಂದಿನ ದಿನಗಳಿಗಿಂತ ಎಷ್ಟೋ ಪಾಲು ಹೆಚ್ಚಿರುತ್ತದೆ. ಮನೆಯೊಳಗೆ ನಡೆಯುವ ಇಂಥ ದೌರ್ಜನ್ಯಗಳು ಬೂದಿ ಮುಚ್ಚಿದಂತಹ ಕೆಂಡದಂತಿರುತ್ತವೆ. ನ್ಯೂಕ್ಲಿಯರ್ ಕುಟುಂಬ ಪದ್ಧತಿ ನೆರೆ–ಹೊರೆ ಸಂಬಂಧಗಳಲ್ಲಿನ ಕಂದಕವೂ ಇವುಗಳಿಂದಾಗಿಯೇ ಮನೆಯಲ್ಲಿಯೇ ಮುಸುಕಿನ ದೌರ್ಜನ್ಯಕ್ಕೆ ಸಂಬಂಧಿಸಿದ ದೂರು ಅರ್ಜಿಗಳು ತಲುಪಿದ ೩ ದಿನಗಳೊಳಗೆ ಸೂಕ್ತ ಕ್ರಮ ೧೦ ದಿನಗಳೊಳಗೆ ಸೂಕ್ತ ಕ್ರಮ ತನಿಖೆ ಪೂರ್ಣಗೊಳಿಸಬೇಕು.ಒಂದು ವರ್ಷ ಜೈಲು, ೨೦ ಸಾವಿರ ರೂ ದಂಡ ವಿಧಿಸಬೇಕು. ಗುದ್ದಾಟದಂತೆ ನಡೆಯುವ ಕೌಟುಂಬಿಕ ದೌರ್ಜನ್ಯಗಳು ಕೆಲವೊಮ್ಮೆ ಬೆಳಕಿಗೆ ಬರುವುದಿಲ್ಲ. ಆದ್ದರಿಂದ ಈ ಎಲ್ಲಾ ರೀತಿಯ ಕೌಟುಂಬಿಕ ,ದೌರ್ಜನ್ಯಗಳು ಇತ್ತೀಚೆಗೆ ಪ್ರಥಮ ಬಾರಿಗೆ ಕೌಟುಂಬಿಕ ಹಿಂಸಾಚಾರ ಕಾಯ್ದೆ ವ್ಯಾಪ್ತಿಗೆ ಬಂದಿತು.

೪.೧ ಕೌಟುಂಬಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ ತಡೆ ಕಾಯ್ದೆಗಳು

ಪ್ರಾಥಮಿಕ ರಕ್ಷಣೆಯನ್ನು ಒದಗಿಸಬೇಕಾದ ಕುಟುಂಬವು ಅನೇಕ ಸಮಸ್ಯೆಗಳಿಗೆ ಮೂಲವಾಗಿದ್ದರೆ. ಇನ್ನೂ ಸಮಾಜ ಹಾಗೂ ಸಾರ್ವಜನಿಕ ಜೀವನದಲ್ಲಿಯೇ ಬೇರೆ ಬೇರೆ ಮುಖಗಳಲ್ಲಿ ಮಹಿಳೆಯರ ಶೋಷಣೆ ಅವ್ಯಾಹತವಾಗಿ ನಡೆಯುತ್ತದೆ. ಇಂತಹ ಅಮಾನವೀಯ ಶೋಷಣೆ ಮತ್ತು ಸವಾಲುಗಳನ್ನು ಹೊಗಲಾಡಿಸಲು ನಮ್ಮ ಸರ್ಕಾರವು ಕಾನೂನಾತ್ಮಕ ಶಾಸನಗಳನ್ನು ಜಾರಿಗೊಳಿಸಿರುವುದನ್ನು ನಾವು ಕಾಣಬಹುದಾಗಿದೆ. ಅಂದರೆ ಸರ್ಕಾರ ಕೌಟುಂಬಿಕ ವಲಯ, ಸಾರ್ವಜನಿಕ ವಲಯಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯಲು ದೌರ್ಜನ್ಯ ತಡೆ ಕಾಯ್ದೆಗಳಿಗೆ ಜಾರಿಗೆ ತಂದಿರುವುದನ್ನು ನಾವು ನೋಡಬಹುದು. ಆದರೆ ಕೌಟುಂಬಿಕ ದೌರ್ಜನ್ಯವನ್ನು ತಡೆಯಲು ೨೦೦೬ ಆಕ್ಟೋಬರ್ ೨೬ ರಂದು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಗೆ ಬಂದಿದೆ. ಇಂತಹ ಅನೇಕ ದೌರ್ಜನ್ಯಗಳನ್ನು ತಡೆಯಲು ಸರ್ಕಾರವು ವಿವಿಧ ಕಾನೂನುಗಳನ್ನು ಜಾರಿಗೆ ತಂದಿರುವುದನ್ನು ಈ ಕೆಳಗಿನಂತೆ ನೋಡಬಹುದು.

೪.೧.೦. ವರದಕ್ಷಿಣೆ ಪಿಡುಗನ್ನು ತೊಲಗಿಸಲು ಕಾನೂನುಗಳು

ವಿವಾಹವಾಗುವಾಗ ವರದಕ್ಷಿಣೆಯನ್ನು ಪಡೆದ ಯುವಕನು ತನ್ನ ಸಮಾಜವನ್ನು ಹಾಗೂ ಶಿಕ್ಷಣವನ್ನು ಅವಹೇಳನ ಮಾಡುತ್ತಾನೆ ಹಾಗೂ ಸ್ತ್ರೀತನಕ್ಕೆ ಅಪಚಾರಮಾಡುತ್ತಾನೆ. ಈ ಬಗೆಯ ದುರಾಚಾರವನ್ನೆಸಗಿ ಪಡೆದ ಚಿನ್ನದಿಂದ ಕೈಯನ್ನು ಹೊಲಸು ಮಾಡಿಕೊಂಡ ಯುವಕನನ್ನು ಸಮಾಜ ತಿರಸ್ಕರಿಸಬೇಕು. ಯಾವನೇ ಒಬ್ಬ ಯುವಕ ವರದಕ್ಷಿಣೆ ಕೊಟ್ಟರೇನೆ ತಾನು ಮದುವೆಮಾಡಿ ಕೊಳ್ಳುವುದು ಎಂಬ ಷರತ್ತನ್ನು ಹಾಕಿದರೆ ಅವನು ತಾನು ಪಡೆದ ಶಿಕ್ಷಣಕ್ಕೆ ಅವಮಾನಗೈಯುತ್ತಾನೆ. ಮತ್ತು ತನ್ನ ದೇಶಕ್ಕೂ ಕಳಂಕತರುತ್ತಾನೆ ಹಾಗೂ ಮಹಿಳೆಯರು ಸ್ಥಾನಮಾನಗಳನ್ನು ಅಗೌರವಯುತವಾಗಿ ಕಾಣುತ್ತಾನೆ' ಎಂದು ಗಾಂಧೀಜಿ ಹೇಳುತ್ತಾರೆ. ಯಾರು ಏನೇ ಹೇಳಲಿ 'ವರದಕ್ಷಿಣೆ' ಎಂಬ ಸಾಮಾಜಿಕ ಪಿಡುಗು ನಮ್ಮ ಸಮಾಜದಲ್ಲಿ ಹೆಣ್ಣನ್ನು ಬಾಧಿಸುತ್ತಿರುವುದು ತಪ್ಪಿಲ್ಲ. ವರದಕ್ಷಿಣೆ ಸಾವುಗಳು ನಿತ್ಯದ ಸುದ್ದಿಗಳಾಗಿವೆ. ಮದುವೆಗೆ ಮುನ್ನ ಮತ್ತು ಆನಂತರವೂ ಮುಂದುವರಿದು ಕೊನೆಗೆ ಹೆಣ್ಣನ್ನು ನುಂಗುವುದರೊಂದಿಗೆ ಕೊನೆಯಾಗುವ ಈ ರೋಗ ವಿದ್ಯಾವಂತರು ಅವಿದ್ಯಾವಂತರೆಂಬ ಬೇಧವಿಲ್ಲವೆಂದು ಹರಡಿಕೊಂಡಿದೆ. ಸಾಂಕ್ರಾಮಿಕ ರೋಗದಂತೆ ಹರಡುತ್ತಲೇ ಇದೆ. ಸ್ತ್ರೀಯರಿಗೆ ಕೆಳಮಟ್ಟದ ಸ್ಥಾನಗಳು ಪ್ರಾಪ್ತವಾಗಲು ವರದಕ್ಷಿಣೆಯೂ ಕಾರಣವಾಗಿದೆ. ಈ ಪದ್ಧತಿಯಲ್ಲಿಯೇ ಅಸಮಾನತೆಯನ್ನು ಸೃಷ್ಟಿಸುತ್ತದೆ. ಸ್ತ್ರೀ–ಪುರುಷರಲ್ಲಿನ ಸಮಾನತೆ ಅಡ್ಡಿಯಾಗಿದೆ.[೬]

ವರದಕ್ಷಿಣೆಯಿಂದಾಗಿ ಮಾದುವೆಯಾಗುವ ಹೆಣ್ಣು ಮಾತ್ರ ನೋಯವುದಿಲ್ಲ. ಆಕೆಯನ್ನು ಹಡೆದವರು ಆರ್ಥಿಕ ಒತ್ತಡಕ್ಕೆ ಬಲಿಯಾಗಿ ಮನೆ, ತೋಟ, ಬೆಲೆಬಾಳುವ ವಸ್ತು ಆಭರಣಗಳನ್ನು ಮಾರಿ ನಿರ್ಗತಿಕರಾಗುವ ಪರಿಸ್ಥಿತಿ ಒದಗಿ ಸಾವಿಗೆ ಶರಣಾಗಿದ್ದಾರೆ. ವರದಕ್ಷಿಣೆ ನೀಡಲು ಅಸಮರ್ಥರಾದ ಕುಟುಂಬದ ಹೆಣ್ಣು ಮಕ್ಕಳು ಮದುವೆಯೇ ಆಗದೇ ಅನೈತಿಕ ಲೈಂಗಿಕತೆಗೆ ಬಲಿಯಾಗಿದ್ದಾರೆ. ಒಬ್ಬಳನ್ನು ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಸಾಕಷ್ಟು ಪಡೆದಿದ್ದರೂ ಅನಂತರವೂ ದಾಹತೀರದೆ, ಮತ್ತೆ ಮತ್ತೆ ಪೀಡಿಸಿ ಕೊನೆಗೆ ಕೈ ತುಂಬಾ ಪಡೆದು ಕೈಹಿಡಿದವಳನ್ನು ಕೊಂದು ಇನ್ನೊಬ್ಬಳ ಕೈ ಹಿಡಿದು ಅವಳ ಮನೆಯಿಂದಲೂ ಸಾಕಷ್ಟು ವರದಕ್ಷಿಣೆ ಪಡೆಯುವ ಗಂಡಸರಿದ್ದಾರೆ. ಈ ಸಂಬಂಧವಾಗಿ ರಚಿತವಾಗಿರುವ ಕಾನೂನುಗಳು ಮಂಕಾಗಿದೆ. ವರದಕ್ಷಿಣೆ ಪಡೆಯುವುದು ರಾಜಾರೋಷವಾಗಿ ನಡೆಯುತ್ತದೆ. ಎಷ್ಟೇ ಬಲಿಷ್ಟ ಕಾನೂನುಗಳಿದ್ದರೂ ತಪ್ಪಿತಸ್ಥರನ್ನು ಶಿಕ್ಷಿಸುತ್ತಿಲ್ಲ. ಬಹತೇಕ ಜನರಿಗೆ ಈ ಸಂಬಂಧದ ಕಾನೂನುಗಳ ಅರಿವಾಗಲಿ, ಅವುಗಳ ಕಾರ್ಯಾನುಷ್ಠಾನದ ಕ್ರಮವಾಗಲಿ ತಿಳಿದಿಲ್ಲ. ಆದ್ದರಿಂದ ವರದಕ್ಷಿಣೆ ಮತ್ತು ಅದರ ದುಷ್ಪರಿಣಾಮಗಳನ್ನು ಕುರಿತು ಹೆಚ್ಚು ಹೆಚ್ಚು ಅರಿವಿನ ಕಾರ್ಯಕ್ರಮಗಳು ಇನ್ನೂ ಆಗಬೇಕು. ಈ ಹಿನ್ನೆಲೆಯಲ್ಲಿ ಕಾನೂನುಗಳ ರಕ್ಷಣೆ ಏನಿದೆ ಎಂಬುದನ್ನು ಇಲ್ಲಿ ಪರಿಶೀಲಿಸಲಾಗಿದೆ. ವರದಕ್ಷಿಣೆ ನಿಷೇಧ ಅಧಿನಿಯಮ ೧೯೬೧ ರಂತೆ

- ವರದಕ್ಷಿಣೆ ಕೇಳುವುದು
- ವರದಕ್ಷಿಣೆ ತೆಗೆದುಕೊಳ್ಳುವುದು

• ವರದಕ್ಷಿಣೆ ಕೊಡುವುದು

• ವರದಕ್ಷಿಣೆ ಕೊಡುವುದಾಗಿ ಜಾಹೀರಾತು ನೀಡುವ ಅಪರಾಧ

ವರದಕ್ಷಿಣೆ ಪಡೆದಿದ್ದರೆ ಅದನ್ನು ಪಡೆದ ಮೂರು ತಿಂಗಳೊಳಗೆ ಮದುವೆಯಾದ ಹೆಣ್ಣಿನ ಹೆಸರಿಗೆ ವರ್ಗಾಯಿಸಬೇಕು. ಇದ್ದು ಕಡ್ಡಾಯ, ಹಾಗೆ ಮಾಡದಿದ್ದರೆ ಅದು ಅಪರಾಧ.

ಶಿಕ್ಷೆ: ವರದಕ್ಷಿಣೆ ನೀಡುವ ಅಥವಾ ಪಡೆಯುವ ಅಪರಾಧಕ್ಕೆ ಶಿಕ್ಷೆ ಕನಿಕಷ್ಟ ೫ ವರ್ಷಗಳ ಕಾರಾಗೃಹವಾಸಮತ್ತು ೧೫ ಸಾವಿರ ರೂ ಗಳವರೆಗೆ ಜುಲ್ಮಾನೆ.

• ವರದಕ್ಷಿಣೆ ಕೇಳುವ ಅಪರಾಧಕ್ಕೆ ಶಿಕ್ಷೆ ಕನಿಷ್ಟ ಎರಡು ವರ್ಷಗಳ ಕಾರಾಗೃಹವಾಸ ಮತ್ತು ಹತ್ತು ಸಾವಿರ ರೂ ಗಳವರೆಗೆ ಜುಲ್ಮಾನೆ.

• ವರದಕ್ಷಿಣೆ ನಿರ್ಬಂಧ ಕಾಯಿದೆ ೧೯೬೧ ರಲ್ಲಿ ಜಾರಿಗೆ ಬಂತು. ಈ ಕಾಯ್ದೆಯಷ್ಟು ಅಪಹಾಸ್ಯಕ್ಕೆ ಒಳಗಾದ ಕಾಯ್ದೆ ಮತ್ತೊಂದಿಲ್ಲ. ಈ ಕಾಯ್ದೆ ಹೇಳುವುದರ ವಿರುದ್ಧ ದಿಕ್ಕಿನಲ್ಲಿ ಬಹುತೇಕ ಜನರ ವರ್ತನೆಗಳಿವೆ. ಕಾಯ್ದೆ ಪರ ನಿಂತವರು ಹಾಸ್ಯಾಸ್ಪದವಾಗಿ ಹೋಗಿದ್ದಾರೆ. ಈ ಕಾಯ್ದೆಯ ಮುಖ್ಯಾಂಶಗಳೆಂದರೆ.

• ವಿವಾಹದ ಸಂದರ್ಭದಲ್ಲಿ ವಿವಾಹದ ಕಾರಣಕ್ಕಾಗಿ ಒಂದು ಪಕ್ಷದವರು ಮತ್ತೊಂದು ಪಕ್ಷದವರಿಂದ ಆಸ್ತಿಯನ್ನೋ ಅಥವಾ ಮೌಲ್ಯಯುತವಾದ ಭದ್ರತಾ ವಸ್ತುವನ್ನೋ, ಪತ್ರವನ್ನೋ ಸ್ವೀಕರಿಸುವುದು.

• ಒಂದು ಪಕ್ಷದ ಮಾತಾ-ಪಿತೃಗಳು ಮತ್ತೊಂದು ಪಕ್ಷದ ಮಾತಾ-ಪಿತೃಗಳಿಗೆ ಸ್ವತ್ತು ಅಥವಾ ಹಣವನ್ನು ಕೊಡುವುದು.

• ವಿವಾಹದ ಎರಡು ಪಕ್ಷಗಳಿಗೆ ಸೇರಿದ ಯಾವೊಬ್ಬ ವ್ಯಕ್ತಿಯಾಗಲಿ ಅಥವಾ ದಳ್ಳಾಳಿಯಾಗಲೀ ಮತ್ತೊಂದು ಪಕ್ಷದವರಿಂದ ಹಣ, ಆಸ್ತಿ, ಒಡವೆ ಇವುಗಳನ್ನು ಪಡೆಯುವುದು.

• ವಿವಾಹದ ಸಮಯದಲ್ಲಿ ವಿವಾಹದ ಸಂಬಂಧವಾಗಿ ವಿವಾಹಕ್ಕೂ ಮುಂಚೆ ಅಥವಾ ವಿವಾಹದನಂತರ ಹೆಣ್ಣಿನ ಕಡೆಯವರು ಗಂಡಿಗೆ ಅಥವಾ ಗಂಡಿನ ಕಡೆಯವರಿಗೆ, ಗಂಡಿನ ಕಡೆಯವರು ಹೆಣ್ಣಿಗೆ, ಹೆಣ್ಣಿನ ಕಡೆಯವರಿಗೆ ನಿಡುವ ಹಣ, ಆಸ್ತಿ ಸ್ವತ್ತು ಇತ್ಯಾದಿಗಳೇ ವರದಕ್ಷಿಣೆ.

ವರದಕ್ಷಿಣೆ ಪಡೆದವರಿಗೆ ವಿಧಿಸಬಹುದಾದ ಶಿಕ್ಷೆಗಳೆಂದರೆ

• ವರದಕ್ಷಿಣೆ ಕೊಡುವುದಾಗಲಿ, ಪಡೆಯುವುದಾಗಲಿ ದಂಡಾರ್ಹವಾದ ಅಪರಾಧಗಳೆನಿಸುತ್ತವೆ.

• ವರದಕ್ಷಿಣೆ ಕೊಡುವವರಿಗೂ, ತೆಗೆದುಕೊಳ್ಳುವವರಿಗೂ ೫೦೦೦/- ರೂ ಗಳವರೆಗೆ ದಂಡ ಹಾಗೂ ಆರು ತಿಂಗಳು ಸರೆಮನೆ ವಾಸ ವಿಧಿಸಲಾಗುವುದು.

• ವಿವಾಹಕ್ಕೆ ಮುಂಚೆಯೇ ಹೆಣ್ಣಿನಕಡೆಯವರಿಂದ ಹಣವನ್ನು ಪಡೆದಿದ್ದಲ್ಲಿ ಸ್ತ್ರೀಯು ಪ್ರಾಪ್ತ ವಯಸ್ಸಿಗೆ ಬಂದ ಮೇಲೆ ಅದನ್ನು ಆಕೆಯ ಹೆಸರಿಗೆ ವರ್ಗಾಯಿಸಬೇಕು.

• ಈ ಕಾಯ್ದೆಯನುಸಾರ ಬಟ್ಟೆಗಳು, ಒಡವೆಗಳು ಮತ್ತು ಇತರ ವಸ್ತುಗಳ ಬೆಲೆ ೨೦೦೦ ರೂ ಗಿಂತ ಹೆಚ್ಚಿಗೆಯಾಗಿದ್ದಲ್ಲಿ ಉಡುಗೊರೆಯಾಗಿ ಕೊಡಬಹುದಾಗಿದೆ.

• ಈ ಕಾಯ್ದೆಯು ಮುಸ್ಲೀಂರನ್ನು ಬಿಟ್ಟು ಉಳಿದೆಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ ಎಂಬುದಾಗಿದೆ.

ಇದೊಂದು ಕಾಗದದ ಹುಲಿ. ವರದಕ್ಷಿಣೆ ತೆಗೆದುಕೊಳ್ಳುವುದು ಮತ್ತು ನೀಡುವುದು ವಿವಾಹಗಳ ಒಪ್ಪಂದದಲ್ಲಿ ಮುಖ್ಯ ಪಾತ್ರವಹಿಸುತ್ತದೆಯಾದರೂ ಈ ಪ್ರಕ್ರಿಯೆಗಳು ಮಾತ್ರ ಕಾನೂನಿನ ಕಣ್ಣಿಗೆ ಮಣ್ಣೆರಚಿ ಗುಟ್ಟಾಗಿ ನಡೆಯುತ್ತವೆ. ಕೊಡುವವರು ಪಡೆಯುವವರು ಕಾನೂನಿನ ಸಮೀಪಕ್ಕೂ ಬರುವುದಿಲ್ಲ. ವರದಕ್ಷಿಣೆ ಪಡೆದ ಮತ್ತು ನೀಡಿದ ಅಪರಾಧಕ್ಕೆ ಸಂಬಂಧಿಸಿದಂತೆ ವಧು ವಧುವಿನ ತಾಯಿ, ತಂದೆ ಅಥವಾ ಆಕೆಯ ಇತರ ಸಂಬಂಧಿಗಳು ಅಥವಾ ಸಮಾಜ ಕಲ್ಯಾಣ ಇಲಾಖೆ ಇವರಲ್ಲಿ ಯಾರಾದರೂ ದೂರನ್ನು ಸಲ್ಲಿಸಬಹುದು. ಯಾವಗಲಾದರೂ ಸಲ್ಲಿಸಬಹುದು. ಅದಕ್ಕೆ ಕಾಲ ಮಿತಿ ಇಲ್ಲ ಎಂದಿದೆ. ಆದರೆ ದೂರು ಕೊಡುವವರೆ ಇಲ್ಲ ಎಂಬಂತಾಗಿದೆ. ಹೀಗಾಗಿ ಮದುವೆಯ ಜೊತೆಯಲ್ಲಿ ತೆಗೆದುಕೊಳ್ಳುವ ಯಾವುದೂ ದಾಖಲಾಗುವುದಿಲ್ಲ. ನ್ಯಾಯಾಲಯದಲ್ಲಿ ಸಾಬೀತಾಗುವುದಿಲ್ಲ. ಆದ್ದರಿಂದ ಮೊನ್ನೆತಾನೆ ಮದುವೆಗಳ ಕಡ್ಡಾಯ ನೋಂದಣಿಯನ್ನು ಸರ್ವೋಚ್ಚ ನ್ಯಾಯಾಲಯ ಹೇಳಿರುವಂತೆ ವರದಕ್ಷಿಣೆ ನಿಷೇಧ ಕಡ್ಡಾಯವನ್ನು ಹೇಳಬೇಕು. ಕೊಟ್ಟಿದ್ದು ಪಡೆದಿದ್ದು ದಾಖಲಾಗಬೇಕು.

ವಿವಾಹಿತ ಮಹಿಳೆ ಮದುವೆಯಾದ ಏಳು ವರ್ಷಗಳಲ್ಲಿ

೧. ಸುಟ್ಟ ಗಾಯದಿಂದ ಅಥವಾ ಬೇರೆ ರೀತಿಯ ಗಾಯಗಳಾಗಿ ಆ ಕಾರಣದಿಂದಾಗಿ ಅಥವಾ ಸಹಜವಲ್ಲದೇ ಸಂದರ್ಭಗಳಲ್ಲಿ ಸತ್ತಿದ್ದರೆ ಮತ್ತು

೨. ಆಕೆ ಸಾಯುವ ಪೂರ್ವದಲ್ಲಿ ಆಕೆಯ ಪತಿ ಅಥವಾ ಆತನ ಸಂಬಂಧಿಗಳು ಆಕೆಯನ್ನು ವರದಕ್ಷಿಣೆಯ ಸಂಬಂಧವಾಗಿ ಹಿಂಸಿಸಿದ್ದರೆ,

೩. ವಿವಾಹಿತ ಮಹಿಳೆಯನ್ನು ಕ್ರೂರತನದಿಂದ ನಡೆಯಿಸಿಕೊಂಡು ಆ ಮೂಲಕ ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋಧಿಸುವುದು ಶಿಕ್ಷಾರ್ಹ ಅಪರಾಧಗಳಾಗುತ್ತವೆ. ಇಂಥ ವರದಕ್ಷಿಣೆ ಸಾವಿಗೆ ಕಾರಣರಾದವರಿಗೆ ಕನಿಷ್ಟ ೭ ವರ್ಷ ಅಥವಾ ಜೀವಾವಧಿ ಕಾರಾಗೃಹ ವಾಸವನ್ನು ವಿಧಿಸಲಾಗಿದೆ.

• ಕೂಡಲೆ ಹತ್ತಿರದ ಪೋಲೀಸ್ ಠಾಣೆಯಲ್ಲಿ ದೂರು ನೀಡಬೇಕು.

• ದೂರು ನೀಡಿದ ನಂತರ ಎಫ್.ಐ.ಆರ್. ಪ್ರತಿಯನ್ನು ಕೇಳಿ ಪಡೆಯಬೇಕು.

• ಶವದ ಮರಣೋತ್ತರ ಪರೀಕ್ಷೆ ನಡೆಸಿ ಮರಣದ ಕಾರಣವನ್ನು ಖಚಿತಪಡಿಸಿಕೊಳ್ಳಬೇಕು.

• ಮಹಿಳೆ ಕಡೆಯುಸಿರೆಳೆಯುವ ಮುನ್ನ ಸಾಧ್ಯವಾದರೆ ಅವಳ ಹೇಳಿಕೆ ಪಡೆಯುವಂತೆ ಪೋಲೀಸರಿಗೆ ತಿಳಿಸಬೇಕು.

ವರದಕ್ಷಿಣೆ ಕಿರುಕುಳ

- ಮಹಿಳೆಯರ ಗಂಡ, ಅತ್ತೆ, ಮಾವ, ಗಂಡನ ಬಂಧುಗಳು ಮಹಿಳೆಯನ್ನು ಹೊಡೆದರೆ
- ಆತ್ಮಹತ್ಯೆ ಮಾಡಿಕೊಳ್ಳಬೇಕು ಎನಿಸುವ ಹಾಗೆ ಹಿಂಸಿಸಿದರೆ
- ತೀವ್ರ ಗಾಯ ಆಗುವ ಹಾಗೆ ಹೊಡೆದರೆ
- ಹಣ, ಆಸ್ತಿ, ತರಲಿಲ್ಲವೆಂದು ಅಥವಾ ಈಗ ತರುವಂತೆ ಮಹಿಳೆಯನ್ನು ಪೀಡಿಸಿದರೆ
- ಮಾನಸಿಕ ಹಿಂಸೆ ನೀಡಿದರೆ ಅದು ಕ್ರೌರ್ಯ ಅಥವಾ ಹಿಂಸೆ ಎನಿಸಿಕೊಳ್ಳುತ್ತದೆ. ಹೆಂಡತಿಯನ್ನು ಹಿಂಸಿಸುವುದು ಅಪರಾಧ. ಭಾರತದ ದಂಡ ಸಂಹಿತೆಯ ೪೯೮ಎ ಪ್ರಕರಣದ ಪ್ರಕಾರ ಶಿಕ್ಷಾರ್ಹ.
- ಇಂತ ಹಿಂಸೆಗೆ ಒಳಗಾದ ಕೂಡಲೇ ಪೋಲೀಸರಿಗೆ ದೂರು ಕೊಡಬೇಕು.
- ಎಫ್.ಐ.ಆರ್ ಪ್ರತಿಯನ್ನ ಪೋಲೀಸರಿಂದ ಉಚಿತವಾಗಿ ಪಡೆಯುವುದು.
- ಹಿಂಸೆ ನೀಡಿದವನು ಗಂಡ ಅಥವಾ ಗಂಡನ ಬಂಧುಗಳು ಎಂಬುದನ್ನು ರುಜುವಾತು ಪಡಿಸಬೇಕು.
- ಹಿಂಸಿಸುವಾಗ ದೇಹದ ಮೇಲೆ ಆದ ಗಾಯ ಪೆಟ್ಟು ಇತ್ಯಾದಿಗಳ ಬಗ್ಗೆವೈದ್ಯರ ವರದಿ.
- ನೋಡಿದವರ ಸಾಕ್ಷ್ಯ
- ಈಗಾಗಲೇ ಪೋಲೀಸರಿಗೆ ದೂರು ನೀಡಿದ್ದರೆ ಅದರ ಪ್ರತಿ.
- ಹಿಂಸೆಯನ್ನು ತಾಳಲಾರದೇ ಬಂಧುಗಳಿಗೆ ಹಾಗೂ ಆತ್ಮಿಯರಿಗೆ ಬರೆದ ಪತ್ರಗಳು ದೇಹದ ಮೇಲೆ ಆದ ಗಾಯದ ಚಿತ್ರಗಳು ಇತ್ಯಾದಿಗಳನ್ನು ಹಾಜರುಪಡಿಸಬೇಕು.

ಎಫ್.ಐ.ಆರ್ ನಲ್ಲಿ ಇರಬೇಕಾದ ವಿವರಗಳು

- ಆರೋಪಿಯ ಹೆಸರು ಮತ್ತು ವಿಳಾಸ
- ಅಪರಾಧ ನಡೆದ ದಿನಾಂಕ, ಸ್ಥಳ ಮತ್ತು ಸಮುದಾಯ
- ಅಪರಾಧದ ಹಿಂದಿನ ಉದ್ದೇಶ.
- ಸಾಕ್ಷಿಗಳಿದ್ದರೆ ಅವರ ಹೆಸರುಗಳು
- ದೇಹಕ್ಕೆ ಗಾಯಗಳಾಗಿದ್ದರೆ ಅದರ ವಿವರಗಳು

ಯಾವುದೇ ಪೋಲೀಸರು ಠಾಣೆಯಲ್ಲಿಯೂ ದೂರು ದಾಖಲು ಮಾಡಿಕೊಳ್ಳಲು ನಿರಾಕರಿಸುವಂತಿಲ್ಲ. ಹಾಗೆ ನಿರಾಕರಿಸಿದರೆ ಪೋಲೀಸ್ ಹಿರಿಯ ಅಧಿಕಾರಿಗಳಿಗೆ ಮತ್ತು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ತಿಳಿಸಬೇಕು. ಕೂಡಲೆ ಕ್ರಮ ಜರುಗಿಸುತ್ತಾರೆ.

ವರದಕ್ಷಿಣೆ ನಿಷೇಧ ಕಾಯಿದೆ ೯ನೇ ವಿಧಿಯಂತೆ ವರದಕ್ಷಿಣೆ ನಿಷೇಧ ನಿಯಮಗಳು ಎಂಬುದಾಗಿ ೧೯೮೫ ರಲ್ಲಿ ಕೇಂದ್ರ ಸರ್ಕಾರವು ಕಾನೂನು ರಚಿಸಿದೆ, ಅದರಂತೆ ಮದುವೆ ಸಮಯದಲ್ಲಿ ವಧುವಿಗೆ ನೀಡಿದ ಬಹುಮಾನಗಳ ಪಟ್ಟಿಯನ್ನು ವಧು, ವರನಿಗೆ ಬಹುಮಾನಗಳಾಗಿ ಕೊಟ್ಟ ಪಟ್ಟಿಯನ್ನು ವರ ತಯಾರಿಸಿ ಜೋಪಾನ ಮಾಡಬೇಕು. ಹೀಗೆ ಬಹುಮಾನ ಕೊಟ್ಟವರ ವಿವರಗಳನ್ನು ನಮೂದಿಸಬೇಕು (ಅವರು ಬಂಧುಗಳಾಗಿದ್ದಾರೆ) ವಧು-ವರರಿಬ್ಬರೂ ಈ ಪಟ್ಟಿಗಳಿಗೆ ಸಹಿ ಹಾಕಬೇಕು. ಮದುವೆ ಸಮಯದಲ್ಲಿದ್ದ ಇತರ ಬಂದುಗಳ ಸಹಿ ಹಾಕಬೇಕು ಎಂದಿದೆ.

೧೦ (೧) ನೇ ,ವಿಧಿಯು ರಾಜ್ಯ ಸರ್ಕಾರಗಳು ವರದಕ್ಷಿಣೆ ನಿಷೇಧಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸಬೇಕು.

೮(ಬಿ) ವಿಧಿಯು ರಾಜ್ಯ ಸರ್ಕಾರಗಳು ವರದಕ್ಷಣೆ ನಿಷೇಧ ಅಧಿಕಾರಗಳನ್ನು ನೇಮಿಸುವಂತೆ ಮತ್ತು ಈ ಅಧಿಕಾರಿಗಳಿಗೆ ಸಲಹೆ ಮತ್ತು ಸಹಾಯ ಮಾಡಲು ಸಲಹಾ ಮಂಡಳಿಗಳನ್ನು ನೇಮಿಸುವಂತೆ ಆದೇಶಿಸುತ್ತದೆ.

ವರದಕ್ಷಿಣೆ ಸಂಬಂಧಪಟ್ಟ ಆರೋಪಗಳ ವಿಚಾರಣೆಗೆ ಮತ್ತು ಶಿಕ್ಷೆ ವಿಧಿಸುವುದಕ್ಕೆ ಭಾರತ ಸಾಕ್ಷ್ಯ ಕಾಯ್ದೆ, ಭಾರತ ದಂಡ ಸಂಹಿತೆ, ದಂಡ ಪ್ರಕ್ರಿಯಾ ಸಂಹಿತೆಗಳಿಗೆ ತಿದ್ದುಪಡಿ ತಂದು ಹೊಸವಿಧಿಗಳನ್ನು ಸೇರಿಸಿ ಕಠಿಣಗೊಳಿಸಿದೆ.

೬ (೧) ನೇ ಪ್ರಕರಣದ ಪ್ರಕಾರ ವರದಕ್ಷಿಣೆಯು ಯಾವ ಮಹಿಳೆಯ ಸಂಬಂಧದಲ್ಲಿ ಕೊಡಲ್ಪಟ್ಟಿದೆಯೋ ಆಕೆಯಲ್ಲಿನ ಇತರ ಯಾವನೇ ವ್ಯಕ್ತಿಯಿಂದ ಹಿಂದಿರುಗಿಸದಿದ್ದರೆ ಅಂತಹ ವ್ಯಕ್ತಿ ನಿಗದಿಗೊಳಿಸಲ್ಪಟ್ಟ ಸಮಯದೊಳಗೆ ವರದಕ್ಷಿಣೆಯ ಸ್ವತ್ತನ್ನು ಹಸ್ತಾಂತರದಲ್ಲಿಲ್ಲ ಎಂದಾದರೆ ಪ್ರಕರಣ ದನ್ವಯ, ಆರು ತಿಂಗಳಿಗಳಿಗೆ ಕಡಿಮೆ ಇಲ್ಲದ ಎರಡು ವರ್ಷದವರೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆ ಅಥವಾ ಐದು ವರ್ಷ ಶಿಕ್ಷೆ ಅಥವಾ ಐದು ಸಾವಿರ ರೂ ಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗಬೇಗುತ್ತದೆ.

ಒಂದು ವಿವಾಹದ ಸಂದರ್ಭದಲ್ಲಿ ೨೫ ಜನರಿಗಿಂತ ಹೆಚ್ಚು ಜನರನ್ನು ಕರೆದುಕೊಂಡು ಹೋಗುವುದನ್ನು ಹಾಗೂ ೧೧ ಜನರಿಗಿಂತ ಹೆಚ್ಚು ಜನರ ವಾದ್ಯ .ತಂಡವನ್ನು ಕರೆದುಕೊಂಡು ಹೋಗುವುದನ್ನು ನಿಷೇಧಿಸಿದೆ.

ಇಷ್ಟಾದರೂ ವರದಕ್ಷಿಣೆಯ ನಿಷೇಧವನ್ನು ಜಾರಿಗೊಳಿಸುವಲ್ಲಿನ ನಮ್ಮ ವ್ಯವಸ್ಥೆ ಮತ್ತು ವರದಕ್ಷಿಣೆ ರಹಿತ ಸಮಾಜವನ್ನು ರೂಪಿಸಬೇಕೆಂಬ ಸಾಮಾಜಿಕರಲ್ಲಿ ಇರಬೇಕಾದ ಇಚ್ಛಾಶಕ್ತಿಗಳ ಕೊರತೆ ಎದ್ದು ಕಾಣುತ್ತಿದೆ. ಇದು ಇರಬಾರದ ಅನಿಷ್ಟ ವ್ಯಾಧಿ ಎಂದು ನಿಷೇಧ ಹೇರಿಕೊಂಡೆ ಕಾನೂನು ರಚಿಸಿದ (೧೯೬೧) ನಂತರವೂ ಪರೋಕ್ಷವಾಗಿ ಅದನ್ನು ಪೋಷಿಸಿಕೊಂಡು ಬರುತ್ತಿದೆ. ಸಾಮಾಜಿಕ ಮನಸ್ಥಿತಿಗಳು ಹದಗೊಳ್ಳುವತನಕ ಈ ಪಿಡುಗು ಉಳಿದೇ ಇರುತ್ತದೆ. ಜನರ ಮನಸ್ಸಿನ ಪರಿವರ್ತನೆ, ಪರಸ್ಪರ ಸಹಕಾರ, ಕಾನೂನುಗಳನ್ನು

ಗೌರವಿಸುವುದು, ಮದುವೆಯಾಗಬಯಸುವಗಂಡು-ಹೆಣ್ಣುಗಳಲ್ಲಿ ದೃಢ ಸಂಕಲ್ಪ ಕುಟುಂಬಗಳಲ್ಲಿ ಏರ್ಪಡುವ ಸಾಮರಸ್ಯ ಇವೆಲ್ಲವೂ ಇಂಥ ಅನಿಷ್ಟಗಳನ್ನು ತಡೆಯಲು ಸಹಾಕಾರಿಯಾಗುತ್ತದೆ.

- ವರದಕ್ಷಿಣೆಯಂಥ ಬಹು ದೊಡ್ಡ ಸಮಸ್ಯೆಗಳನ್ನು ಸಮಾಜದಿಂದ ಕಿತ್ತೊಗೆಯಬೇಕಾದರೆ ಕಾನೂನುಗಳ ಪಾತ್ರವೇ ಸಾಕಾಗುವುದಿಲ್ಲ. ಅದರಾಚೆಗೂ ಚಿಂತಿಸಬೇಕಾಗುತ್ತದೆ. ಕಾನೂನೇತರ ಕ್ರಮಗಳು ಕಾನೂನಿಗಿಂತ ಬಲಿಷ್ಟವಾಗುತ್ತವೆ. ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುತ್ತವೆ. ಆದ್ದರಿಂದ ಅಂಥ ಸಾಧ್ಯತೆಗಳತ್ತಲೂ ನಮ್ಮ ಒಲವಿರಬೇಕು.

- ವರದಕ್ಷಿಣೆ ಕೇಳುವ ಹುಡುಗನನ್ನು ಸಮಾಜ ಬಹಿಷ್ಕರಿಸಬೇಕು. ಆತನನ್ನು ಹೇಡಿಯಾಗಿ ನೋಡ ಬೇಕು. ಮದುವೆಯಾಗಬಯಸುವ ಹುಡುಗಿಯರೇ ಹೇಳಬೇಕು. ವರದಕ್ಷಿಣೆಯನ್ನು ಅಭಿಯಾಚಿಸುವ ಭಿಕ್ಷುಕನನ್ನು ನಾನು ಮದುವೆಯಾಗುವುದಿಲ್ಲ ಎಂದು ಇಂಥ ಅರಿವಿನ ವಾತಾವರಣಕ್ಕಾಗಿ ಇಂಥ ಹುಡುಗಿಯರು ಸಂಘಟಿತರಾಗಬೇಕು. ತಮ್ಮ ಓದು, ಆಸ್ತಿಗಳ ಜತೆಗೆ ಇಂಥ ಸಾಮಾಜಿಕ ಪಿಡುಗನ್ನು ಹೋಗಲಾಡಿಸುವ ಸಂಕಲ್ಪ ಮಾಡಬೇಕು. ಅದಕ್ಕಾಗಿ ಸಂಘಟಿತರಾಗಬೇಕು. ಯಾವ ಯಾವುದೋ ಕೆಲಸಕ್ಕೆ ಬಾರದ ಮಹಿಳೆಯರ ಸಂಘಗಳಿವೆ. ಅದಕ್ಕೆ ಬದಲು ವರದಕ್ಷಣೆ ವಿರೋಧಿ ಮಹಿಳೆಯರ ಸಂಘವೇ ಏಕೆ ಸ್ಥಾಪಿತವಾಗಬಾರದು? ಎಂಬ ಬಗ್ಗೆ ಯುವ ಮಹಿಳಾ ಮನಸ್ಸುಗಳು ಆಲೋಚಿಸಬೇಕು.

- ಶಾಲೆಗಳು ಮಾನಸಿಕ ವಿಕಾಸದ ತಾಣಗಳು ಆದ್ದರಿಂದ ಶಾಲಾ- ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ವರದಕ್ಷಿಣೆ ಪಡೆಯದೇ ಮದುವೆಯಾಗುತ್ತಾನೆಂಬ ಪ್ರತಿಜ್ಞಾವಿಧಿ ಸ್ವೀಕರಣೆ ಒಳ್ಳೆಯದು, ಅದಕ್ಕಾಗಿ ಶಾಲಾ ಮಕ್ಕಳು, ಭೋಧಿಸುವ ಅಧ್ಯಾಪಕರುಗಳು ಸಜ್ಜುಗೊಳ್ಳಬೇಕು.

- ವರದಕ್ಷಿಣೆ ವಿರುದ್ದ ಪ್ರಚಾರ ರೂಪಿಸುವುದು ಒಳಿತು. ಪತ್ರಿಕೆ, ರೇಡಿಯೋ, ದೂರದರ್ಶನ, ಅಂತರ್ಜಾಲಗಳಲ್ಲಿ ಈ ಸಂಬಂಧದಲ್ಲಿ ಪ್ರಚಾರ ನೀಡುವುದು, ಕರ ಪತ್ರ ಹಂಚುವುದು, ಚಲನಚಿತ್ರ, ಸಾಹಿತ್ಯ ಮುಂತಾದ ಮಾಧ್ಯಮಗಳಲ್ಲಿಯೂ ಇಂಥ ವಿಷಯಗಳನ್ನು ಬಿಂಬಿಸುವುದು ಆಗಬೇಕಾಗಿದೆ. ಈಗಾಗಲೇ ಈ ಕೆಲಸ ಸ್ವಲ್ಪ ಮಟ್ಟಿಗೆ ನಡೆಯುತ್ತಿದೆ.

- ವರದಕ್ಷಿಣೆಯಿಲ್ಲದೆ ಮದುವೆಯಾಗ ಬಯಸುವ ನೈತಿಕ ಬದ್ಧತೆಯನ್ನು ಸ್ತ್ರೀ ಪುರುಷರೆಂಬ ಭೇದವಿಲ್ಲದೇ ಬೆಳೆಸಬೇಕಾಗಿದೆ. ಯಾರು ಏನೇ ಹೇಳಿದರೂ ಮದುವೆಯಾಗುವ ಹೆಣ್ಣು ಗಂಡುಗಳಲ್ಲಿಯೇ ಈ ಸಂಸ್ಕಾರವಿಲ್ಲದಿದ್ದರೆ ಮತ್ತೆ ಹಳೇ ಚಾಳಿಯ ಹಾದಿ ತುಳಿಯುತ್ತಾರೆ. ಆದ್ದರಿಂದ ಜನ ಶಿಕ್ಷಣದ ಮೂಲಕ ನೈತಿಕ ಪ್ರಜ್ಞೆಯನ್ನು ಎಚ್ಚರಿಸಬೇಕು.

- ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ನೀಡಿದರೆ ಬಹುಶಃ ಇದು ಕಡಿಮೆಯಾಗುತ್ತದೆ. ಏಕೆಂದರೆ ಅಂತರ್ಜಾತಿ ವಿವಾಹಗಳಲ್ಲಿ ಸಾಮಾನ್ಯವಾಗಿ ಪರಸ್ಪರ ಇಷ್ಟಪಟ್ಟು ಮದುವೆಯಾಗುವ ಸಾಧ್ಯತೆಗಳೆ ಹೆಚ್ಚು.

ಅಲ್ಲದೇ ಹೊರಗಿನ ಒತ್ತಡಕ್ಕಿಂತ ಒಳಗಿನ ಒತ್ತಡವೇ ಕಾರಣವಾಗುತ್ತವೆ. ಆದ್ದರಿಂದ ಅಂತಃಕರಣ ಪೂರ್ವಜವಾಗಿ ಮದುವೆಯಾಗ ಬಯಸುವವರಿಗೆ ಪ್ರೀತಿಗಿಂತ ಮಿಗಿಲಾದ ಧನ-ಕನಕಗಳು ಇರುವುದೇ ಇಲ್ಲ. ಆದ್ದರಿಂದ ಜಾತಿಗಿಂತ ಪ್ರೀತಿಯೇ ಮುಖ್ಯ ಎನ್ನುವಂಥ ಮದುವೆಗಳು ಆಗುವುದು ಹೆಚ್ಚು ಸೂಕ್ತ ಮತ್ತು ವರದಕ್ಷಿಣೆ ಕಡಿವಾಣಕ್ಕೆ ಅನುಕೂಲವಾಗುತ್ತದೆ. ಈ ಮೇಲಿನ ಅಂಶಗಳ ವರದಕ್ಷಿಣೆ ಪಿಡುಗನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ.

೪.೧.೧. ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಕಾನೂನು

ಹೆಣ್ಣು ಮಕ್ಕಳು ಹುಟ್ಟುವುದಕ್ಕೆ ಅವಕಾಶ ನೀಡದ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳು ಸುಧಾರಣೆ ಕುರಿತು ಮಾತನಾಡುವುದೇ ಹಾಸ್ಯಾಸ್ಪದವೆನಿಸುತ್ತದೆ. ನಮ್ಮ ಸಮಾಜದಲ್ಲಿ ಬೇರೂರಿರುವ ಹೆಣ್ಣು ಮಕ್ಕಳ ಬಗೆಗಿನ ಅನಾದರ ಎಷ್ಟೊಂದು ಘೋರವಾಗಿದೆಯೆಂದರೆ, ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್‌ಗಳು ಭ್ರೂಣ ಹೆಣ್ಣು ಎಂದು ಪತ್ತೆ ಹಚ್ಚಿ ಕೊಲ್ಲುತ್ತಿದೆ. ಒಂದು ಅಂದಾಜಿನ ಪ್ರಕಾರ ಪ್ರತಿ ಆರನೇ ಹೆಣ್ಣು ಮಗುವಿನ ಸಾವು ಹೆಣ್ಣು ಮಕ್ಕಳ ಬಗ್ಗೆ ಹೊಂದಿರುವ ಪೂರ್ವಾಗ್ರಹದಿಂದ ಉಂಟಾಗುತ್ತಿದೆ. ಹೀಗಾಗಿ ಪ್ರತಿವರ್ಷ ಮೂರು ಲಕ್ಷ ಹೆಣ್ಣುಮಕ್ಕಳು ಸಾಯುತ್ತಾ-ಸಾಯಿಸುತ್ತಾ ಸಾಮಾಜಿಕ ಎಚ್ಚರವಿಲ್ಲದೇ ಸಾಗುತ್ತಿದ್ದೇವೆ. 'ಕುಮಾರನಾದೊಡೆ ಬಂದ ಗುಣವೇನದರಿಂದ, ಕುವರಿಯಾದೊಡೆ ಕುಂದೇನು' (ಹದಿಬದೆಯಧರ್ಮ) ಎಂದು ಹೇಳುವವರೆ ಕುವರಿಯಾದರೆ ಕುಟುಂಬಕ್ಕೆ ಕುಂದೆಂದು ಭಾವಿಸುತ್ತಾರೆ. ಹೆಣ್ಣು ಭ್ರೂಣಗಳ ಹತ್ಯೆಯ ವಿರುದ್ಧ ಅನೇಕ ಕಾನೂನುಗಳು ರಚಿತವಾಗಿದ್ದರೂ ಬದುಕುತ್ತಿರುವವರು ಪುರುಷರೇ ಎಂಬಂತಾಗಿದೆ. ಹೆಣ್ಣುಗಳು ನಾಪತ್ತೆಯಾಗುವುದರಿಂದ (ಹುಟ್ಟುವ ಮುನ್ನ ಮತ್ತು ಹುಟ್ಟಿದ ನಂತರ) ಹೆಣ್ಣುಗಳ ಸಂಖ್ಯೆಯೇ ಕ್ಷೀಣಿಸಿ ಮುಂದೊಂದು ದಿನ ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುತ್ತದೆ.

ಆದ್ದರಿಂದ ಭ್ರೂಣ ಹತ್ಯೆಯ ವಿರುದ್ದ ಕಾನೂನಿನ ರಕ್ಷಣೆಯನ್ನು ಅರ್ಥ ಮಾಡಿಕೊಂಡು ಹೋರಾಟ ರೂಪಿಸುವುದುಜರೂರು ಕ್ರಮವಾಗಿದೆ. ಇಲ್ಲದಿದ್ದರೆ ಸಾವಿರ ಪುರುಷರಿಗೆ ಒಂಬೈನೂರು ಇಪ್ಪತ್ತೇಳು ಮಂದಿ ಸ್ತ್ರೀಯರಿರುವುದಿಲ್ಲ. ಅರ್ಧಕ್ಕಿಂತ ಕಡಿಮೆಯಾಗುವ ಸ್ಥಿತಿ ನಿರ್ಮಾಣವಾಗುತ್ತದೆ. ಭ್ರೂಣ ಹತ್ಯೆಗೆ ಚಾಲನೆ ಸಿಕ್ಕಿದ್ದು ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಭಾರತ ಸರ್ಕಾರವು ಕುಟುಂಬ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೊಳಿಸಿ ಮಕ್ಕಳಾಗುವುದನ್ನು ತಡೆಗಟ್ಟುವ ವಿಧಿ ವಿಧಾನಗಳನ್ನು ರೂಪಿಸುವಾಗ ನಮ್ಮ ವೈದ್ಯಕೀಯ ರಂಗ ಈ ಸಂಬಂಧದಲ್ಲಿ ಹೆಚ್ಚಿನ ಸಂಶೋಧನೆಗೆ ಮುಂದಾಯಿತು. ಅದು ಹುಟ್ಟುವ ಸ್ಥಿತಿಯಲ್ಲಿರುವ ಮಗುವನ್ನು ಹುಟ್ಟದಂತೆ ಮಾಡುವುದನ್ನು ಕಂಡುಕೊಂಡಿತು. ಇದರಿಂದಾಗಿ ಮೊದಲಿಗೆ ಗರ್ಭಪಾತಗಳು ಹೆಚ್ಚಾಗತೊಡಗಿದವು. ಸಾಮಾನ್ಯವಾಗಿ ಅನೈತಿಕ ಸಂಬಂಧದಿಂದಲೂ, ಮದುವೆಗೆ ಮುಂಚೆಯೇ ವಿವಾಹೇತರ ಸಂಬಂಧಿಗಳಿಂದಲೋ ಗರ್ಭಧರಿಸಿದರೆ ಅದನ್ನು ತೆಗೆದುಹಾಕಿಸುವುದು ಮೊದಲಾಯಿತು. ಭಾರತ ಸರ್ಕಾರ

ಕೂಡ ೧೯೭೧ ರ ಗರ್ಭಪಾತ ಅಧಿನಿಯಮವನ್ನು ಚರ್ಚಿಸಿ ೧೯೭೫ ರಲ್ಲಿ ಗರ್ಭಪಾತ ನಿಯಮವನ್ನು ರೂಪಿಸುವುದು. ಇದರಿಂದಾಗಿ ಗರ್ಭಪಾತ ಬಗ್ಗೆ ಇದ್ದ ಅಪರಾಧಿ ಭಾವನೆಗಳು ಮಾಯವಾಗಿ ಆಸ್ಪತ್ರೆಯಲ್ಲಿಯೇ ಈ ಸೌಲಭ್ಯ ದೊರೆಯುವಂತಾಯಿತು. ಆಗ ಹೆಣ್ಣು ಭ್ರೂಣವನ್ನೇ ಹತ್ಯೆ ಮಾಡುವ ಉದ್ದೇಶದಿಂದ ಗರ್ಭಪಾತ ಮಾಡಿಸಿಕೊಳ್ಳುತ್ತಿರಲಿಲ್ಲ. ಸಮಾಜದಲ್ಲಿ ಹೆಣ್ಣು ಮಕ್ಕಳ ಮದುವೆ ದುಬಾರಿಯೆನಿಸಿ, ವರದಕ್ಷಿಣೆ ಪಿಡುಗಾಗಿ, ಹೆಣ್ಣು ಹೆತ್ತವರು ಸಂಕಟ ಪಡುವ ಸ್ಥಿತಿ ನಿರ್ಮಾಣವಾದಾಗ ಮೊದಲಿಗೆ ವಿದ್ಯಾವಂತರು ನಾವಿಬ್ಬರೂ–ನಮಗಿಬ್ಬರೂ, ಒಂದು–ಹೆಣ್ಣು, ಒಂದು–ಗಂಡು, ಎರಡೂ ಹೆಣ್ಣಾದರೆ ತುಂಬಾ ಕಷ್ಟ ಎಂದು ವ್ಯವಹಾರಿಕವಾಗಿ ಆಲೋಚಿಸಿ ಹೆಂಡತಿ ಗರ್ಭದರಿಸುವುದು ದೃಢಪಟ್ಟಕೂಡಲೇ ಭ್ರೂಣದಲಿಂಗಪತ್ತೆಹಚ್ಚಿ ಹೆಣ್ಣು ಭ್ರೂಣವನ್ನು ತೆಗೆಸಿಹಾಕುವುದನ್ನು ಆರಂಭಿಸಿದರು. ಇದೊಂದು ಅಪರಾಧ ಎಂಬ ಶಂಕೆಯೇ ಇಲ್ಲದೇ ಬಹಳ ವರ್ಷಗಳ ಕಾಲ ಸಹಜವೆಂಬಂತೆ ನಡೆಯಿತು.

ಗರ್ಭಸ್ಥ ಶಿಶುವಿನ ಬೆಳವಣಿಗೆ ಸರಿಯಾಗದೇ ಅಂಗವಿಕಲ ಅಥವಾ ವಿಕೃತವಾಗಿ ಜನಿಸುವುದನ್ನು ತಡೆಗಟ್ಟುವ ಅನುವಂಶೀಯ ಮತ್ತು ಲಿಂಗ ಸಂಬಂಧಿತ ರೋಗಗಳನ್ನು ಪಡೆದುಕೊಂಡು ಜನಿಸುವ ಶಿಶುಗಳ ಜನನವನ್ನು ,ತಡೆಗಟ್ಟುವ ಸದುದ್ದೇಶದಿಂದ ಭ್ರೂಣದ ವೈದ್ಯಕೀಯ ಪರೀಕ್ಷಾ ವಿಧಾನವನ್ನು ಅನುಸರಿಸಿ ಅದರ ಬೆಳವಣಿಗೆಯ ಗುಣಮಟ್ಟವನ್ನು ತಿಳಿಯುವುದು ಇದರ ಉದ್ದೇಶವಾಗಿದೆ. ಆದರೆ ಅದು ಮುಂದೆ ಗರ್ಭಧಾರಣೆ ಪೂರ್ವದಲ್ಲಿಯೇ ಜನಿಸಲಿರುವ ಶಿಶುವಿನ ಲಿಂಗವನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಗರ್ಭಧಾರಣೆಯ ನಂತರ ಗರ್ಭಸ್ಥ ಶಿಶುವಿನ ಲಿಂಗ ಯಾವುದು ಎಂದು ಗುರುತಿಸುವುದು ಇದರಿಂದ ಸಾಧ್ಯವಾಯಿತು. ಇದೊಂದು ಅಮಾನವೀಯ ಕ್ರಮವೆಂದು ತಿಳಿದ ಮೇಲೆ ಗರ್ಭಧಾರಣೆ ಪೂರ್ವ ಮತ್ತು ಜನನಪೂರ್ವ ರೋಗಪರೀಕ್ಷೆ ತಂತ್ರಜ್ಞಾನ ಲಿಂಗ ಆಯ್ಕೆ ಕಾನೂನು ೧೯೯೪ ರಲ್ಲಿ ಜಾರಿಯಾಯಿತು ಅದರ ಮುಖ್ಯಾಂಶಗಳು ಹೀಗಿವೆ.[೬]

'ಭ್ರೂಣಹತ್ಯೆ' ಎಂದರೆ ತಾಯಿಯ ಗರ್ಭದಲ್ಲಿರುವ ಭ್ರೂಣವು ತಾನಾಗಿಯೇ ಬದುಕುವ ಹಂತ ತಲುಪುವ ಮುನ್ನ ತಾಯಿಯ ಗರ್ಭಚೀಲದಿಂದ ಅದನ್ನು ಒತ್ತಾಯಪೂರ್ವಕವಾಗಿ ಹೊರದೂಡುವುದೇ ಗರ್ಭಪಾತ ಎನಿಸಿಕೊಳ್ಳುತ್ತದೆ. ಗರ್ಭಿಣಿಯಾದವಳು ತನಗೆ ಅಕ್ರಮವಾಗಿ ಗರ್ಭಧಾರಣೆಯಾಗಿದೆ ಎಂದು ತಿಳಿದರೆ ತನ್ನ ಇಚ್ಚೆಗೆ ವಿರುದ್ದವಾಗಿ ಗರ್ಭಧಾರಣೆಯಾಗಿದೆಯೆಂದು ತಿಳಿಸಿದರೆ ಅಥವಾ ಕುಟುಂಬ ಯೋಜನಾ ಸಾಧನಗಳ ಲೋಪದೋಷಗಳಿಂದ ಗರ್ಭಾಧಾರಣೆಯಾಗಿದೆಯೆಂದು ತಿಳಿಸಿದರೆ ಅಂಥ ಮಹಿಳೆಗೆ ಗರ್ಭಪಾತಗೊಳಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಬಲವಂತವಾಗಿ ಮತ್ತು ಒತ್ತಾಯಪೂರ್ವಕವಾಗಿ ಗರ್ಭಪಾತವನ್ನು ಮಾಡಿಸಿದರೆ ಭ್ರೂಣ ಹೆಣ್ಣು ಎಂಬ ಕಾರಣಕ್ಕೆ ಮಾಡಿಸಿದರೆ ಅದು ಅಪರಾಧವಾಗುತ್ತದೆ. ಭಾರತ ದಂಡ ಸಂಹಿತೆಯು ೩೧೨ ರಿಂದ ೩೧೬ ನೇ ಪ್ರಕರಣಗಳವರೆಗೆ ಗರ್ಭಪಾತವನ್ನು ಅಪರಾಧ ಎಂದು ಪರಿಗಣಿಸಿ, ಶಿಕ್ಷಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

- ಭಾರತ ದಂಡ ಸಂಹಿತೆ ೩೧೨ರ ಪ್ರಕಾರ "ಯಾವನೇ ವ್ಯಕ್ತಿಯು ಗರ್ಭವತಿಯಾದ ಹೆಂಗಸಿಗೆ ಸ್ವಇಚ್ಛೆಯಿಂದ ಗರ್ಭಪಾತವನ್ನುಂಟು ಮಾಡಿದರೆ ಮತ್ತು ಆ ಹೆಂಗಸಿನ ಪ್ರಾಣವನ್ನು ರಕ್ಷಿಸುವ ಸದ್ಭಾವನೆಯಿಂದಲ್ಲದೇ ಗರ್ಭಪಾತವನ್ನುಂಟು ಮಾಡಿದರೆ ಅವರು ಮೂರು ವರ್ಷಗಳವರೆಗಿನ ಅವಧಿಯ ಕಾರಾಗೃಹ ವಾಸ ಅಥವಾ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಆ ಹೆಂಗಸಿನ ಆ ಗರ್ಭದಲ್ಲಿರುವ ಮಗು ಚಲಿಸುವ ಸ್ಥಿತಿಯಲ್ಲಿದ್ದರೆ ಏಳು ವರ್ಷಗಳವರೆಗಿನ ಅವಧಿಯ ಕಾರಾಗೃಹ ವಾಸ ಮತ್ತು ಜುಲ್ಮಾನೆಗೆ ಗುರಿಯಾಗತಕ್ಕದ್ದು.
- ಗರ್ಭಪಾತ ಮಾಡಿಸಿಕೊಳ್ಳುವ ಹೆಂಗಸು ಅಪರಾಧದ ವ್ಯಾಪ್ತಿಯಲ್ಲಿ ಬರುತ್ತಾಳೆ. ಯಾರು ಮಹಿಳೆಯ ಪ್ರಾಣ ರಕ್ಷಣೆಯ ಸದುದ್ಧೇಶದಿಂದ, ಸದ್ಭಾವನೆಯಿಂದ ಗರ್ಭಪಾತವನ್ನು ಮಾಡುವುದಿಲ್ಲವೋ ಅಂಥ ವ್ಯಕ್ತಿಯು ಅಪರಾಧ ಎಸಗಿದಂತಾಗುತ್ತದೆ.
- ಭಾರತ ದಂಡ ಸಂಹಿತೆ ೩೧೩, ಹೆಂಗಸಿನ ಸಮ್ಮತಿಯಿಲ್ಲದೆ ಗರ್ಭಪಾತವನ್ನುಂಟುಮಾಡುವುದರ ಬಗ್ಗೆ ಹೇಳುತ್ತದೆ.ಹೆಂಗಸಿನ ಸಮ್ಮತಿಯಿಲ್ಲದೆ ಅವಳ ಗರ್ಭದಲ್ಲಿ ಮಗುವು ಚಲಿಸುವ ಸ್ಥಿತಿಯಲ್ಲಿರಲಿ ಇಲ್ಲದಿರಲಿ ಗರ್ಭಪಾತ ಮಾಡುವುದು ಅಪರಾಧವಾಗುತ್ತದೆ. ಅಂಥ ಅಪರಾಧಕ್ಕೆ ಆಜೀವ ಕಾರಾಗೃಹವಾಸ ಮತ್ತು ೧೦ ವರ್ಷದವರೆಗಿನ ಸೆರೆವಾಸ ಮತ್ತು ಜುಲ್ಮಾನೆಗೆ ಗುರಿಯಾಗಬೇಕು.
- ಮಹಿಳೆ ತನಗೆ ದೈಹಿಕ ಕೃತ್ಯ ಉಂಟುಮಾಡುವರೆಂಬ ಭಯದ ವಾತಾವರಣದಲ್ಲಿರುವಾಗ ಅಥವಾ ತಮ್ಮ ಅಭಿಪ್ರಾಯದಲ್ಲಿರುವಾಗ ಅಥವಾ ಆಕೆಗೆ ಬುದ್ಧಿಭ್ರಮಣೆಯಾಗಿರುವಾಗ ಅಥವಾ ಮದ್ಯದ ಅಮಲಿನಲ್ಲಿರುವಾಗ ನೀಡುವ ಒಪ್ಪಿಗೆ ಸಹಜವಾದ ಒಪ್ಪಿಗೆಯಾಗಿರುವುದಿಲ್ಲ. ೧೨ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬಾಲಕೀಯ ಒಪ್ಪಿಗೆಯು ಸಹಜವಾದ ಒಪ್ಪಿಗೆಯಲ್ಲ ಎನ್ನುತ್ತದೆ.
- ಭಾರತ ದಂಡಸಂಹಿತೆ ೩೧೪ ರ ಪ್ರಕಾರ " ಯಾವನೇ ವ್ಯಕ್ತಿಯು ಗರ್ಭವತಿಯಾದ ಯಾವುದೇ ಹೆಂಗಸಿಗೆ ಗರ್ಭಪಾತವನ್ನು ಮಾಡಿಸುವ ಉದ್ದೇಶದಿಂದ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಆ ಪರಿಣಾಮವಾಗಿ ಅಂಥ ಹೆಂಗಸಿನ ಮರಣ ಉಂಟಾದರೆ ಅವನು ೧೦ ವರ್ಷಗಳವರೆಗಿನ ಅವಧಿಯ ಕಾರಾಗೃಹ ವಾಸ ಮತ್ತು ದಂಡ ವಿಧಿಸತಕ್ಕದ್ದು ಎನ್ನುತ್ತದೆ.
- ಭಾರತ ದಂಡ ಸಂಹಿತೆ ೩೧೫ ರಂತೆ "ಯಾವುದೇ ವ್ಯಕ್ತಿಯ ಒಂದು ಮಗುವು ಸಜೀವವಾಗಿ ಹುಟ್ಟದಂತೆತಡೆಯುವ ಅಥವಾ ಅದು ಹುಟ್ಟಿದ ಆ ನಂತರ ಅದು ಸಾಯುವಂತೆ ಮಾಡುವ ಉದ್ದೇಶದಿಂದ ಆ ಮಗು ಹುಟ್ಟುವುದಕ್ಕೆ ಮುಂಚೆ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಆಕೃತ್ಯದಿಂದ ಆ ಮಗು ಸಜೀವವಾಗಿ ಹುಟ್ಟದಂತೆ ತಡೆದರೆ ಆ ಕೃತ್ಯವನ್ನು ತಾಯಿಯ ಪ್ರಾಣವನ್ನು ಉಳಿಸುವ ಸದ್ಭಾವನೆಯಿಂದಲ್ಲದೇ ಮಾಡಿದ್ದರೆ ಹತ್ತು ವರ್ಷಗಳ ಕಾರಾಗೃಹ ವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗಬೇಕಾಗುತ್ತದೆ.

• ಭಾರತ ದಂಡ ಸಂಹಿತೆ ೩೧೬ ಹೇಳುವುದೆಂದರೆ " ಯಾವನೇ ವ್ಯಕ್ತಿಯ ಯಾವ ಪರಿಸ್ಥಿಯಲ್ಲಿ ಒಂದು ಕೃತ್ಯವನ್ನು ಮಾಡಿ ಆಮೂಲಕ ಮರಣವನ್ನುಂಟು ಮಾಡಿದ್ದರೆ. ಅಪರಾಧಿಕ ಮಾನವ ಹತ್ಯೆಯ ಬಗ್ಗೆ ತಪ್ಪಿತಸ್ಥನಾಗುತ್ತಿದ್ದಾನೋ ಆ ಪರಿಸ್ಥಿಯಲ್ಲಿ ಅಂತ ಕೃತ್ಯವನ್ನು ಮಾಡಿ ಗರ್ಭದಲ್ಲಿ ,ಚಲಿಸುತ್ತಿರುವ ಮಗುವಿನ ಮರಣವನ್ನುಂಟು ಮಾಡಿದರೆ, ಅಪರಾಧಿತ ಮಾನವಹತ್ಯೆಯೆಂದು ಪರಿಗಣಿಸಿ ೧೦ ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ."

• ಜನಿಸಲಿರುವ ಶಿಶುವಿನ ಲಿಂಗದ ಆಯ್ಕೆಯನ್ನು ಗರ್ಭಧಾರಣೆಯ ಪೂರ್ವದಲ್ಲಿಯೇ ಮಾಡಿಕೊಳ್ಳುವುದು ಮತ್ತು ಗರ್ಭಧಾರಣೆಯ ನಂತರ ಒಂದು ಭ್ರೂಣ ನಿರ್ದಿಷ್ಟ ಲಿಂಗದ್ದೇ ಆಗುತ್ತದೆನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಜರುಗಿಸುವ ಯಾವುದೇ ಪ್ರಕ್ರಿಯೆ ತಂತ್ರಜ್ಞಾನ, ಪರೀಕ್ಷೆ ಅಥವಾ ಇಂಥ ಉದ್ಧೇಶಕ್ಕಾಗಿ ಯಾವುದೇ ಔಷಧಿಯನ್ನು ಕೊಡುವುದು ಅಥವಾ ಸೂಚಿಸುವುದು ಅಥವಾ ಒದಗಿಸುವುದು ಅಪರಾಧದ ವ್ಯಾಪ್ತಿಗೆ ಬರುತ್ತದೆ.

• ಮಹಿಳೆಯೊಬ್ಬಳ ಗಂಡ ಅಥವಾ ಸಂಬಂಧಿಯನ್ನೊಳಗೊಂಡಂತೆ ಯಾವುದೇ ವ್ಯಕ್ತಿ ಆಕೆಯನ್ನು ಲಿಂಗ ಆಯ್ಕೆಯ ತಂತ್ರಜ್ಞಾನದ ಪರೀಕ್ಷೆಗೆ ಒಳಪಡುವಂತೆ ಮಾಡುವುದು ಅಥವಾ ಅಂಥದ್ದಕ್ಕೆ ಒತ್ತಾಯಿಸುವುದು ಅಥವಾ ಪ್ರೋತ್ಸಾಹಿಸುವುದು ಶಿಕ್ಷಾರ್ಹ ಅಪರಾದವಾಗುತ್ತದೆ. ಈ ಅಪರಾಧಕ್ಕೆ ಗರಿಷ್ಟ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ಗರಿಷ್ಟ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ಗರಿಷ್ಟ ಹತ್ತು ಸಾವಿರ ರೂಗಳ ದಂಡ ವಿಧಿಸಲಾಗುತ್ತದೆ. ಪುನಃ ಇಂಹದದ್ದೇ ಅಪರಾಧ ಮಾಡಿದಲ್ಲಿ ಜೈಲು ಶಿಕ್ಷೆಯನ್ನು ಐದು ವರ್ಷಗಳವರೆಗೆ ಮತ್ತು ದಂಡವನ್ನು ಐವತ್ತು ಸಾವಿರ ರೂಗಳವರೆಗೆ ವಿಧಿಸಲಾಗುತ್ತದೆ.

• ಲಿಂಗಪತ್ತೆಗಾಗಿ ಭ್ರೂಣದ ಪರೀಕ್ಷೆಯನ್ನು ಮಾಡಿಸಿಕೊಂಡ ಗರ್ಭಿಣಿ ಸ್ತ್ರೀ ಕೂಡಾ ಇಷ್ಟೇ ಪ್ರಮಾಣದ ಶಿಕ್ಷೆಗೆ ಗುರಿಯಾಗುತ್ತಾಳೆ. ಪರೀಕ್ಷೆಯನ್ನು ಆಕೆ ಬೇರೇಯವರ ಒತ್ತಾಯಕ್ಕೊಳಗಾಗಿ ಮಾಡಿಸಿಕೊಂಡಿದ್ದಲ್ಲಿ ಮಾತ್ರ ಆಕೆ ಶಿಕ್ಷೆಯಿಂದ ಪಾರಾಗಬಹುದು. ಭ್ರೂಣ ಪರೀಕ್ಷೆಯನ್ನು ಈ ಕೆಳಕಂಡ ಸಂದರ್ಭಗಳಲ್ಲಿ ಮಾಡಿಸಿಕೊಳ್ಳಬಹುದಾಗಿದೆ.

೧. ಮಹಿಳೆಯ ವಯಸ್ಸು ೩೫ ವರ್ಷ ದಾಟಿದ್ದರೆ.

೨. ಆಕೆಯ ಆ ಹಿಂದೆ ಎರಡು ಅಥವಾ ಮೂರು ಸಾರಿ ಆಕೆ ಆಪೇಕ್ಷಿಸಿರದ ಗರ್ಭಪಾತಕ್ಕೆ ಅಥವಾ ಭ್ರೂಣ ನಷ್ಟಕ್ಕೆ ಒಳಗಾಗಿದ್ದಾರೆ.

೩. ಆಕೆಯು ಭ್ರೂಣಕ್ಕೆ ವಿಕೃತಿಯನ್ನುಂಟು ಮಾಡುವ ಸಾಮರ್ಥ್ಯವುಳ್ಳ ಯಾವುದೇ ಔಷಧಿ, ವಿಕಿರಣ, ಸೋಂಕು, ಅಥವಾ ರಾಸಾಯನಿಕ ಪರಿಣಾಮಕ್ಕೊಳಗಾಗಿದ್ದರೆ.

೪. ಆಕೆಯ ಅಥವಾ ಆಕೆಯ ಪತಿಯ ಕೌಟುಂಬಿಕ ಇತಿಹಾಸ ಬುದ್ದಿಮಾಂದ್ಯತೆ, ಶಾರೀರಿಕ ಊನತ್ವ ಅಥವಾ ಅನುವಂಶೀಯ ರೋಗವಿದ್ದಲ್ಲಿ,

೫.ಕೇಂದ್ರೀಯ ವಿಚಾರಣೆ ಮಂಡಳಿ ನಿರ್ದಿಷ್ಟಪಡಿಸಿದ ಮತ್ತಾವುದೇ ಸ್ಥಿತಿಯಲ್ಲಿದ್ದರೆ ಮಾತ್ರ ಭ್ರೂಣ ಪರೀಕ್ಷೆ ಮಾಡಿಸಿಕೊಳ್ಳಬಹುದು.

ಈಗ ಗರ್ಭಧಾರಣ ಮತ್ತು ಪ್ರಸವಪೂರ್ವರೋಗ ವಿಧಾನ ತಂತ್ರಗಳ ಲಿಂಗ ಆಯ್ಕೆ ನಿಷೇಧ ಅಧಿನಿಯಮ ೧೯೯೪ ಜಾರಿಯಲ್ಲಿದೆ.

ಇದರ ಉದ್ದೇಶ

೧.ವೈಜ್ಞಾನಿಕ ತಂತ್ರಗಳು ಲಿಂಗಪತ್ತೆಗಾಗಿ ದುರ್ಬಳಕೆಯಾಗದಂತೆ ತಡೆಯುವುದು.

೨.ಮಗು ಭ್ರೂಣ ವ್ಯವಸ್ಥೆಯಲ್ಲಿರುವಾಗಲೇ ಅದಕ್ಕೆ ಇರುವ ಕಾಯಿಲೆ ಹಾಗೂ ದೋಷಗಳನ್ನು ಪತ್ತೆ ಹಚ್ಚಿ ಸರಿಪಡಿಸುವುದಕ್ಕೆ ಮಾತ್ರ ಬಳಕೆಯಾಗುವಂತೆ ನೊಡಿಕೊಳ್ಳುವುದು.

ಭ್ರೂಣದ ಪರೀಕ್ಷೆಯನ್ನು ಜರುಗಿಸುವ ವ್ಯಕ್ತಿ ಈ ನಿಬಂಧನೆಗಳನ್ನು ಪಾಲಿಸಬೇಕಾಗುತ್ತದೆ.

- ಗರ್ಭಿಣಿ ಮಹಿಳೆಯ ಭ್ರೂಣದ ಪರೀಕ್ಷೆಗೆ ಒಳಪಡಿಸಿದ ಬಗ್ಗೆ ಪರೀಕ್ಷಿಸುವವರು ಬರವಣಿಗೆಯಲ್ಲಿ ದಾಖಲಿಸತಕ್ಕದ್ದು
- ಭ್ರೂಣದ ಪರೀಕ್ಷೆಗಾಗಿ ಒಳಗಾಗುವ ಗರ್ಭಿಣಿಯ ಲಿಖಿತ ಒಪ್ಪಿಗೆಯನ್ನು ನಿಗದಿತ ನಮೂನೆಯಲ್ಲಿ ಪಡೆದುಕೊಂಡು ಅದರ ಒಂದು ಪ್ರತಿಯನ್ನು ಆಕೆಗೆ ಕೊಡತಕ್ಕದ್ದು.
- ಭ್ರೂಣದ ಪರೀಕ್ಷೆಯಿಂದಾಗಿ ಆ ಗರ್ಭಿಣಿ ಮಹಿಳೆಯ ಆರೋಗ್ಯದ ಮೇಲೆ ಆಗಬಹುದಾದ ಅಡ್ಡ ಪರಿಣಾಮ ಮತ್ತು ನಂತರದ ಪರಿಣಾಮ ಇವುಗಳ ಬಗ್ಗೆ ಆಕೆಗೆ ತಿಳಿಸತಕ್ಕದ್ದು.
- ಭ್ರೂಣವನ್ನು ಪರೀಕ್ಷಿಸಿದವನು ಗರ್ಭಿಣಿಗೆ ಮತ್ತು ಆಕೆಯ ಸಂಬಂಧಿಗಳಿಗೆ ಭ್ರೂಣದ ಲಿಂಗ ಯಾವುದೆಂಬುದಾಗಿ ಮಾತುಗಳಲ್ಲಾಗಲಿ, ಸಂಜ್ಞೆಯ ಮೂಲಕವಾಗಿ ಅಥವಾ ಬೇರಾವುದೋ ವಿಧದಲ್ಲಿಯಾಗಲಿ ತಿಳಿಸತಕ್ಕದ್ದಲ್ಲ.
- ಭ್ರೂಣಧ ಲಿಂಗಪತ್ತೆಗಾಗಿ ಭ್ರೂಣ ಪರೀಕ್ಷೆಯನ್ನು ಮಾಡುವಂತಿಲ್ಲ.

ಹೀಗೆ ಅನೇಕ ಪ್ರತಿಬಂಧಕಗಳು, ಕಾನೂನಾತ್ಮಕ ರಕ್ಷಣೆಗಳು " ಸ್ತ್ರೀ ಭ್ರೂಣ ಹತ್ಯೆಯ ವಿರುದ್ಧ ಇರುವುದಾದರೂ ಹೆಣ್ಣು ಮಗುವಿಗೆ ಜನ್ಮನೀಡಿದ ಹೆಣ್ಣು ಸಾಂಪ್ರದಾಯವಾದಿ ಜನರಿಂದ ಅನುಭವಿಸುವ ಕಿರುಕುಳ, ಅಣಕ, ಅಪಮಾನ ಅಮಾನುಷವಾಗುತ್ತದೆ. ಮಹಿಳೆ ಗರ್ಭಧರಿಸಿದಾಗ ಭ್ರೂಣದ ಲಿಂಗನಿರ್ಧಾರಕ ಸಂಗತಿ ಪುರುಷನಿಂದ ಬಿಡುಗಡೆಯಾಗುವ ವೀರ್ಯಾಣುವನ್ನು ಆಧರಿಸುತ್ತದೆ ಎಂಬ ವೈಜ್ಞಾನಿಕ ಸತ್ಯ ಗೊತ್ತಿದ್ದರೂ ಹೆಣ್ಣನ್ನು ದೂಶಿಸಲಾಗುತ್ತಿದೆ. ಹೆಣ್ಣಾಗಲಿ, ಗಂಡಾಗಲಿ ಇಬ್ಬರೂ ಸರಿಸಮಾನರು ಎಂಬ ಭಾವನೆಗಳು ಸತಿ–ಪತಿಗಳಲ್ಲಿ ಬಾರದ ಹೊರತು ಈ ಸಮಸ್ಯೆ ಸುಲಭವಾಗಿ ಬಗೆಹರಿಸಲಾರದು."

ಹೆಣ್ಣು ಭ್ರೂಣ ಹತ್ಯೆ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತಿದೆ. ಇದರಿಂದ ಸ್ತ್ರೀಯರ ಸಂಖ್ಯೆ ಕಡಿಮೆಯಾಗಿ ಸಾಮಾಜಿಕ ಅಸಮತೋಲನ ಉಂಟಾಗುತ್ತದೆ, ಮದುವೆಯಾಗಲು ಹುಡುಗಿಯರು ದೊರಕದೆ ಅತ್ಯಾಚಾರ ಪ್ರಕರಣಗಳು ಹೆಚ್ಚಾದರೆ ಆಶ್ಚರ್ಯವಿಲ್ಲ. ಸಮಾಜದ ಕಾನೂನು ಸುವ್ಯವಸ್ಥೆ ಹಾಳಾಗುತ್ತದೆ. ಸ್ತ್ರೀಯರಿಗಿರುವ ಸಾಮಾಜಿಕ ಭದ್ರತೆ ಕುಸಿದು ಕೌಟುಂಬಿಕ ವ್ಯವಸ್ಥೆ ಅವ್ಯವಸ್ಥೆಯಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

೪.೧.೨. ಅತ್ಯಾಚಾರದ ವಿರುದ್ಧ ಕಾನೂನು

ಪುಟ್ಟ ಬಾಲೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿವೆ. ೬ ವರ್ಷದ ಪುಟ್ಟ ಪೋರಿ ಅಪ್ಪನಿಂದಲೇ ಅತ್ಯಾಚಾರಕ್ಕೊಳಗಾಗಿರುವುದು, ಆಟವಾಡುತ್ತಿದ್ದ ೩ ವರ್ಷದ ಕಂದಮ್ಮ ವಿಕೃತ ಕಾಮಿಯ ಕಾಮುಕತೆಗೆ ಒಳಗಾಗಿ ಜೀವತೆತ್ತಿರುವುದು, ಕಲಿಯಲು ಶಾಲೆಗೆ ಹೋದ ೧ನೇ ತರಗತಿ ೨ನೇ ತರಗತಿ ಓದುವ ಹೆಣ್ಣುಮಕ್ಕಳ ಮೇಲೆ ಕಲಿಸುವ ಶಿಕ್ಷಕನೇ ಲೈಂಗಿಕ ಆಕ್ರಮಣ ನಡೆಸಿರುವುದು, ಯಾವುದೋ ಅಪರಾಧ ಪತ್ತೆಗಾಗಿ ಮನೆಗೆ ಬಂದ ಪೋಲೀಸ್ ಮನೆಯಲ್ಲಿ ಹುಡುಗಿ ಒಬ್ಬಂಟಿಯಾಗಿರುವುದನ್ನು ನೋಡಿ ಆಕೆಯ ಮೇಲೆ ಅತ್ಯಾಚಾರವೆಸಗಿ ತಾನೇ ಅಪರಾಧಿಯಾಗಿರುವುದು, ಅಪ್ರಾಪ್ತ ಬಾಲಕಿ ವೇಶ್ಯಾವೃತ್ತಿ ನಡೆಸುತ್ತಿದ್ದಾಳೆಂದು ಆಕೆಯನ್ನು ಪೋಲೀಸ್ ಠಾಣೆಗೆ ಕರೆದೊಯ್ದು ಆಕೆಯನ್ನು ವಿಚಾರಣೆ ನಡೆಸುವ ನೆಪದಲ್ಲಿ ಆಕೆಯನ್ನು ಭೋಗಿಸಿರುವುದು ಹೀಗೆ ನೂರಾರು ಪ್ರಕರಣಗಳು ಪತ್ರಿಕೆಯಲ್ಲಿ ವರದಿಯಾಗಿವೆ. ಮಾತ್ರವಲ್ಲ ವರದಿಯಾಗುತ್ತಲೇ ಇವೆ. ಪ್ರತಿ ವರ್ಷ ಕರ್ನಾಟಕವೊಂದರಲ್ಲಿ ಏಳು ನೂರರಿಂದ ಸಾವಿರಕ್ಕೂ ಹೆಚ್ಚು ಅತ್ಯಾಚಾರ ಪ್ರಕರಣಗಳು ಪೋಲೀಸ್ ಇಲಾಖೆಯಲ್ಲಿ ದಾಖಲಾಗುತ್ತಿವೆ. ಆದರೆ ಆ ನಂತರ ಅಪರಾಧಿ ಶಿಕ್ಷೆಗೊಳಗಾದರೆ, ಇಲ್ಲವೆ ತಿಳಿಯುವುದೆ ಇಲ್ಲ.

ಒಟ್ಟಾರೆ ಭ್ರೂಣ ಹತ್ಯೆಯಿಂದ ತಪ್ಪಿಸಿಕೊಂಡು ಜಗತ್ತಿಗೆ ಬಂದ ಹೆಣ್ಣು ಮಕ್ಕಳು ಇಂಥ ವಿಕೃತ ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದನ್ನು ನಿತ್ಯವೂ ನೋಡುತ್ತಿದ್ದೇವೆ. ದಿನೇ ದಿನೇ ಇದು ಹೆಚ್ಚುತ್ತಿದೆ. ವಿದ್ಯಾವಂತರು, ಸುಸಂಸ್ಕೃತರು, ಸಮಾಜದಲ್ಲಿ ಹೆಚ್ಚಾಗುತ್ತಿದ್ದಂತೆಯೇ ಇಂಥ ಅನೈತಿಕ ಕೃತ್ಯಗಳು ಕಡಿಮೆಯಾಗಬೇಕಾಗಿತ್ತು. ಆದರೆ ತದ್ವಿರುದ್ಧವೆಂಬಂತೆ ಹೆಚ್ಚುತ್ತಿದೆ ಅತ್ಯಾಚಾರವೆಸಗುವವರು ವಿದ್ಯಾವಂತರೇ ಹೆಚ್ಚಾಗಿ ಆಗಿದ್ದಾರೆ. ಕೌಟುಂಬಿಕ ರಕ್ಷಣೆಯಲ್ಲಿರುವ ಮಕ್ಕಳ ಸ್ಥಿತಿಯೇ ಹೀಗಿದ್ದ ಮೇಲೆ ಇನ್ನೂ ಅನಾಥ ಮಕ್ಕಳ ಸ್ಥಿತಿಯಂತೂ ಕೇಳುವಂತಿಲ್ಲ. ಬಾಲಾಪರಾಧ ಮಾಡಿ ರಿಮ್ಯಾಂಡ್ ಹೋಂಗೆ ಹೋದ ಹೆಣ್ಣುಮಕ್ಕಳು ಲೈಂಗಿಕ ಶೋಷಣೆಗೆ ಒಳಗಾಗದೇ ಇರುವುದು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇದೆಯಂತೆ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆಂದು ಮನೆಗೆಲಸಕ್ಕೆ ಬರುವ ಹೆಣ್ಣು ಮಕ್ಕಳು ಮನೆಯ ಮಾಲೀಕನ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವುದು ಹೊಸ ವಿಷಯಗಳಲ್ಲ. ಕಾಮ ಪ್ರಚೋದನೆಗೊಳಗಾದ ಕಾಲೇಜು ಹುಡುಗರು ಸಿನಿಮಾ, ದೂರದರ್ಶನ, ನೀಲೀಚಿತ್ರಗಳು(ಬ್ಲೂಫಿಲಂ)

ಲಿಂಗ ಪ್ರಚೋದನೆ ಸಾಹಿತ್ಯ ಇತ್ಯಾದಿಗಳ ದಾಸರಾಗಿ ಸಿಕ್ಕ ಹೆಣ್ಣು ಮಕ್ಕಳನ್ನು ಲೈಂಗೀಕತೆಗೆ ಪ್ರಚೊಧಿಸುತ್ತಿರುವುದು ಕಂಡುಬರುತ್ತಿದೆ. ಅಲ್ಲೊಂದು ಇಲ್ಲೊಂದು ಪ್ರಕರಣಗಳು ಬೆಳಕಿಗೆ ಬಂದು ಪೋಲೀಸ್ ಠಾಣೆಯಲ್ಲಿ ದಾಖಲಾಗಿದ್ದು ತಪ್ಪಿತಸ್ಥರಿಗೆ ಶಿಕ್ಷೆಗಳು ಆಗುತ್ತವೆ ನಿಜ. ಆದರೆ ಬಹುತೇಕ ಪ್ರಕರಣಗಳು ಬೆಳಕಿಗೆ ಬರುತ್ತಿಲ್ಲ. ಹೆಣ್ಣು ಮಕ್ಕಳ ಲೈಂಗಿಕ ವಿಷಯ ತೆಗೆದುಕೊಂಡು ಪೋಲೀಸು, ಕೋರ್ಟು ಎಂದು ಅಲೆಯುವುದು ಹೆತ್ತವರಿಗೆ ಇಷ್ಟವಾಗಿರುವುದಿಲ್ಲ. ಹೆಣ್ಣು ಮಕ್ಕಳ ಭವಿಷ್ಯದ ದೃಷ್ಟಿಯನ್ನು ಮುಂದಿಟ್ಟುಕೊಂಡು ಅತ್ಯಾಚಾರ ಪ್ರಕರಣಗಳನ್ನು ಮುಚ್ಚಿಡುವುದೇ ಹೆಚ್ಚು. ಆದರೆ ಅತ್ಯಾಚಾರಕ್ಕೊಳಗಾದ ಹೆಣ್ಣು ಮಗಳನ್ನು ಬೇರೆಯವರು ವಿವಾಹವಾಗಲು ಹಿಂಜರಿಯುತ್ತಾರೆ. ಎಷ್ಟೋ ಹಳ್ಳಿಗಳ ನ್ಯಾಯ ಅತ್ಯಾಚಾರಿಗೆ ಅತ್ಯಾಚಾರಕ್ಕೊಳಗಾದ ಹೆಣ್ಣನ್ನು ಮದುವೆ ಮಾಡಿಸಿ ಹೆಣ್ಣಿಗಾದ ನಷ್ಟ ತುಂಬಿಕೊಟ್ಟಂತೆ ಬಿಗುತ್ತಾರೆ. ಅದು ಅತ್ಯಾಚಾರ ವಿಜಯವೆ ಆಗಿರುತ್ತದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು ೧೯೯೬ ರಲ್ಲಿ ಅತ್ಯಾಚಾರವನ್ನು ಕುರಿತು ಹೀಗೆ ಹೇಳುತ್ತದೆ. "ಅತ್ಯಾಚಾರವು ಅತ್ಯಂತ ಅಮೂಲ್ಯವಾದ ಮೂಲಭೂತಹಕ್ಕೊಂದರ ಅಂದರೆ ೨೧ ನೇ ವಿಧಿಯನ್ವಯ ಮಾನವ ಘನತೆಯಿಂದ ಬಾಳುವ ಹಕ್ಕಿನ ಅತಿಕ್ರಮಣ" ಎಂದಿದೆ. ಆದ್ದರಿಂದ ಹೆಣ್ಣಿನ ಮೇಲೆ ಅತ್ಯಾಚಾರವೆಸಗುವುದು ಅತ್ಯಂತ ಘೋರ ಅಪರಾಧ. "ಕೊಲೆಗಾರ ಭೌತಿಕ ದೇಹವನ್ನು ನಾಶ ಮಾಡುತ್ತಾನೆ. ಅತ್ಯಾಚಾರ ಒಂದು ಅಸಹಾಯಕ ಹೆಣ್ಣಿನ ಆತ್ಮವನ್ನೇ ಅಪಮಾನಿಸುತ್ತಾನೆ.' ಇಂಥ ಅಮಾನವೀಯ ರೀತಿಯ ಅವಮಾನಪಡಿಸುವುದರ ವಿರುದ್ಧ ಭಾತರ ದಂಡ ಸಂಹಿತೆ ೩೭೫ನೇ ಕಲಂ ಹೀಗೆ ಹೇಳುತ್ತದೆ."

- ಹೆಣ್ಣಿಗೆ ಇಷ್ಟವಿಲ್ಲದೆ, ಅವಳ ಒಪ್ಪಿಗೆ ಇಲ್ಲದೆ, ಭಯದಲ್ಲಿ ಅಥವಾ ಹಿಂಸೆಯ ಮೂಲಕ, ಮೋಸದಿಂದ ಅಥವಾ ಅಮಲಿನ ಸ್ಥಿತಿಯಲ್ಲಿ ನಡೆಸಿದ ಲೈಂಗಿಕ ಸಂಬಂಧವೇ ಅತ್ಯಾಚಾರ. ಆಕೆ ೧೬ ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿದ್ದಲ್ಲಿ–ಒಪ್ಪಿಗೆ ಇದ್ದಾಗಲೂ, ಇಲ್ಲದಿದ್ದಾಗಲೂ ಅದು ಅತ್ಯಾಚಾರವೆಂದು ಪರಿಗಣಿತವಾಗುತ್ತದೆ.
- ಇದು ಪುರುಷನೊಬ್ಬನು ಮಹಿಳೆಯೊಬ್ಬಳ ಮೇಲೆ ಆಕೆಯ ಇಚ್ಚೆಗೆ ವಿರೋಧವಾಗಿ ಅಥವಾ ಆಕೆಯ ಸಮ್ಮತಿ ಇಲ್ಲದೆಯೇ ಜರುಗಿಸುವ ಲೈಂಗಿಕ ಸಂಭೋಗ.
- ೧೫ ವರ್ಷಕ್ಕಿಂತ ಚಿಕ್ಕವಳೊಂದಿಗೆ ಆಕೆಯ ಗಂಡನೇ ಆಕೆಯ ವಿರುದ್ದವಾಗಿ ಜರುಗಿಸಿದ ಸಂಭೋಗವು ಅತ್ಯಾಚಾರ.

ಕೃತ್ಯಕ್ಕೊಳಗಾದ ಮಹಿಳೆಯು ಲೈಂಗಿಕ ಸಂಭೋಗಕ್ಕೆ ಸಮ್ಮತಿಯಿದ್ದರೂ ಕೂಡ ಕೃತ್ಯಎಸಗುವುದು ಆ ಸಮ್ಮತಿಯನ್ನು

೧. ಆಕೆಯನ್ನು ಅಥವಾ ಆಕೆಗೆ ಬೇಕಾದ ವ್ಯಕ್ತಿಯನ್ನು ಭಯಕ್ಕೊಡ್ಡಿ ಪಡೆದಿದ್ದಲ್ಲಿ ಅಥವಾ

೨. ಆತನು ಆಕೆಯ ಗಂಡನೆಂದು ಆಕೆ ನಂಬುವಂತೆ ಮಾಡಿ ಪಡೆದಿಲ್ಲಿ ಅಥವಾ

೩. ಆಕೆಗೆ ಮತ್ತು ಬರುವ ಪದಾರ್ಥ ಸೇವಿಸುವಂತೆ ಮಾಡಿ, ಅದರಿಂದಾಗಿ ತಾನು ಯಾವುದಕ್ಕೆ

ಸಮ್ಮತಿಸುತ್ತಿರುವಳೋ ಎನ್ನುವ ಪರಿಜ್ಞಾನ ಆಕೆಗೆ ಇಲ್ಲದಾಗ ಪಡೆದಿದ್ದಲ್ಲಿ ಅಥವಾ

೪. ಆಕೆ ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಗ ಪಡೆದಿದ್ದಲ್ಲಿ ಅದು ಅತ್ಯಾಚಾರವಾಗುತ್ತದೆ.

- ಅತ್ಯಾಚಾರ ಅಪರಾಧಕ್ಕೆ ೭ ವರ್ಷಗಳಿಗೆ ಕಡಿಮೆ ಇಲ್ಲದ ಆದರೆ ಆಜೀವ ಕಾರಾಗೃಹವಾಸ ವಿಸ್ತರಿಸಬಹುದಾದ ಮತ್ತು ದಂಡದ ಶಿಕ್ಷೆ ಇರುತ್ತದೆ.
- ಅಧಿಕಾರ ಮತ್ತು ಪ್ರಭಾವಿ ಸ್ಥಾನದಲ್ಲಿರುವ ವ್ಯಕ್ತಿಗಳು ಅತ್ಯಾಚಾರದ ಅಪರಾಧ ಎಸಗಿದಲ್ಲಿ ಅವರಿಗೆ ಹೆಚ್ಚಿನ ಶಿಕ್ಷೆ ವಿಧಿಸಲಾಗುತ್ತದೆ.

ಅತ್ಯಾಚಾರಕ್ಕೆ ಶಿಕ್ಷೆಗಳಾಗಬೇಕೆಂದರೆ ಮತ್ತು ಆತ ಯಾವ ಕಾರಣಕ್ಕೂ ನಿರಪರಾಧಿ ಎಂದು ನ್ಯಾಯಾಲಯ ತೀರ್ಪು ನೀಡುವುದನ್ನು ತಪ್ಪಿಸಬೇಕೆಂದರೆ ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳು ಅತ್ಯಾಚಾರಗೊಳಗಾದವರು ತೆಗೆದುಕೊಳ್ಳಬೇಕಾಗುತ್ತದೆ. ಅವುಗಳೆಂದರೆ

- ಅತ್ಯಾಚಾರಕ್ಕೊಳಗಾದ ನಂತರ ಸ್ನಾನ ಮಾಡಬಾರದು ಹಾಗೂ ಬಟ್ಟೆ ಬದಲಾಯಿಸಬಾರದು.
- ತಕ್ಷಣ ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಇದಕ್ಕೆ ಸರ್ಕಾರಿ ವೈದ್ಯರೇ ಆಗಬೇಕೆಂದಿಲ್ಲ. ಹೋಗುವಾಗ ಹತ್ತಿರ ಸಂಬಂಧಿಯೊಬ್ಬರ ಜೊತೆ ಹೊಗುವುದು ಸೂಕ್ತ.
- ಹತ್ತಿರದ ಪೋಲೀಸ್ ಠಾಣೆಯಲ್ಲಿ ಸಾಧ್ಯವಾದಷ್ಟು ಬೇಗ ಒಂದು ಪ್ರಥಮ ವರ್ತಮಾನ ವರಿಯನ್ನು (ಎಫ್.ಐ.ಆರ್.) ದಾಖಲು ಮಾಡಿ ಅದರ ಪ್ರತಿಗಳನ್ನು ಉಚಿತವಾಗಿ ಪಡೆದುಕೊಳ್ಳಬೇಕು. ಭಾರತ ದಂಡ ಸಂಹಿತೆ ೧೫೪ (೨) ರಲ್ಲಿ ಇದಕ್ಕೆ ಅವಕಾಶ ಕಲ್ಪಿಸಿದೆ.
- ಪೋಲೀಸ್ ಠಾಣೆಗೆ ಹೊಗುವಾಗ ವಕೀಲರ ಜತೆ ಹೋದರೆ ಕಾನೂನಾತ್ಮಕ ರಕ್ಷಣೆಯ ದುರುಪಯೋಗವನ್ನು ತಡೆಯಲು ಸಾಧ್ಯವಾಗುತ್ತದೆ.
- ಬಲಾತ್ಕಾರಕ್ಕೊಳಗಾದ ಮಹಿಳೆ ಮಾತ್ರ ವೈಧ್ಯಕೀಯ ಪರೀಕ್ಷೆಗೊಳಗಾದರೆ ಸಾಲದು, ಬಲಾತ್ಕರಿಸಿದವನನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಲು ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.
- ವೈದ್ಯಕೀಯ ಪರೀಕ್ಷೆ ಪೂರ್ಣವಾಗುವತನಕ ಬಟ್ಟೆಬದಲಾಯಿಸುವುದಾಗಲೀ, ಆಗಿರುವ ಕಲೆ ಇತ್ಯಾದಿ ತೊಳೆಯುವುದಾಗಲಿ ಮಾಡಬಾರದು.
- ಆರೋಪಿಯಿಂದ ಪಡೆದ ಬಟ್ಟೆ, ಚಪ್ಪಲಿ, ಕನ್ನಡಕ ಇತ್ಯಾದಿ ವಸ್ತು ಮತ್ತು ವಸ್ತ್ರಗಳನ್ನು ಪೋಲೀಸರ ವಶದಲ್ಲಿಡಬೇಕು.
- ಪೋಲೀಸ್ ಅಧಿಕಾರಿ ಅತ್ಯಾಚಾರ ನಡೆದ ಸ್ಥಳಕ್ಕೆ ಬಂದು ಸ್ಥಳದ ವರದಿ ತಯಾರಿಸುವ ತನಕ ಅಪರಾಧ ಘಟಿಸಿದ ಸ್ಥಳದ ಸ್ಥಿತಿಯನ್ನು ಹಾಗೇ ಉಳಿಸಿಕೊಳ್ಳಬೇಕು. ಸ್ಥಳದ ನಿರೀಕ್ಷಣಾ ವರಧಿಯು ಸಾಂದಾರ್ಭಿಕ ಸಾಕ್ಷ್ಯವಾಗುತ್ತದೆ.

- ಈ ಎಲ್ಲಾ ಸಂದರ್ಭಗಳಲ್ಲಿಯು ಅತ್ಯಚಾರಕ್ಕೊಳಗಾದವಳು ತನ್ನ ಹತ್ತಿರದ ಸಂಬಂಧಿಯ ಜತೆಯಲ್ಲಿಯೇ ಹೋಗುವುದು ಹೆಚ್ಚು ಸೂಕ್ತ.
- ಅತ್ಯಾಚಾರಕ್ಕೊಳಗಾದ ಮಹಿಳೆಯನ್ನು ಅಪರಾಧಿಯಂತೆ ಕಾಣಬಾರದು.
- ಅವಳಿಗೆ ಎಲ್ಲಾ ರೀತಿಯ ನೈತಿಕ ಬೆಂಬಲವನ್ನು ನೀಡಬೇಕು.
- ಆಕೆ ಅಘಾತದಿಂದ ಹೊರಬಂದು ಆತ್ಮ ವಿಶ್ವಾಸದಿಂದ ಬಾಳುವಂತೆ ಧೈರ್ಯ ತುಂಬಬೇಕು.
- ಅತ್ಯಾಚಾರಿಯನ್ನು ಪತ್ತೆ ಹಚ್ಚಿ ಸಾಮಾಜಿಕ ಬಹಿಷ್ಕಾರ ಹಾಕಬೇಕು. ಆತನ ಅವಿವಾಹಿತನಾಗಿದ್ದಲ್ಲಿ ಅವನಿಗೆ ಹೆಣ್ಣು ಕೊಡಲು ನಿರಾಕರಿಸಬೇಕು.

ಅತ್ಯಾಚಾರಕ್ಕೊಳಗಾದ ಮಹಿಳೆ ಕೂಡಲೇ ಪೊಲೀಸರಿಗೆ ದೂರು ನೀಡಬೇಕು. ಇಂಥ ಅಪರಾಧ ನಡೆದಾಗ ಪೋಲೀಸರು ಸ್ವೀಕರಿಸಿದ ಮಾಹಿತಿಯೇ ಪ್ರಥಮ ಮಾಹಿತಿ ವರದಿ ದೂರನ್ನು ಅತ್ಯಾಚಾರಕ್ಕೊಳಗಾದ ಹೆಂಗಸೇ ನೀಡಬೇಕೆಂದಿಲ್ಲ ಯಾರಾದರೂ ನೀಡಬಬಹುದು. ಅಲ್ಲದೆ ಎಫ್.ಐ.ಆರ್. ನಲ್ಲಿರಬೇಕಾದ ಸಂಗತಿಗಳು ನ್ಯಾಯ ನಿರ್ಣಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವುಗಳೆಂದರೆ,

- ಆರೋಪಿಯ ಹೆಸರು, ವಿಳಾಸ.
- ಅಪರಾಧ ನಡೆದ ದಿನಾಂಕ, ಸ್ಥಳ, ಸಮಯ.
- ಅತ್ಯಾಚಾರ ನಡೆಯಿತೆಂಬುದರ ಸ್ಪಷ್ಟ ಸೂಚನೆ.
- ಅತ್ಯಾಚಾರಕ್ಕೆ ಸಂಬಂಧಿಸಿದಂತೆ ನಡೆದ ಅಪರಾಧಗಳು ಉದಾ: ಅಪಹರಣ, ಹಲ್ಲೆ, ಕೊಲೆ, ಇತ್ಯಾದಿ
- ಸಾಕ್ಷಿಗಳಿದ್ದರೆ ಅವರ ಹೆಸರು, ವಿಳಾಸ, ವಿವರ.
- ಎಫ್.ಐ.ಆರ್ ಗೆ ಕರ್ತವ್ಯದ ಮೇಲೆ ಇದ್ದ ಅಧಿಕಾರಿಯ ಸಹಿ. ಇಷ್ಟು ಇರಬೇಕು. ಅತ್ಯಾಚಾರ ಪ್ರಕರಣದ ವಿಚಾರಣೆಗೆ ಗೌಪ್ಯವಾಗಿ ನ್ಯಾಯಾಧೀಶರ ಕೊಠಡಿಯಲ್ಲಿ ಜರುಗುತ್ತದೆ. ಪತ್ರಿಕೆ ಅಥವಾ ಮಾಧ್ಯಮಗಳಲ್ಲಿ ಅದನ್ನು ಪ್ರಕಟಿಸುವುದಿಲ್ಲ.

ಭಾರತ ದಂಡ ಸಂಹಿತೆಯ ಅನುಚ್ಚೇದನ ೨೨೮ (೧೯೮೩ರ ತಿದ್ದುಪಡಿ) ರ ಪ್ರಕಾರ ಲೈಂಗಿಕ ಅಪರಾಧಕ್ಕೆ ಬಲಿಪಶುಗಳಾದವರ ಗುರುತನ್ನು ಬಹಿರಂಗ ಪಡಿಸುವುದು ಅಥವಾ ಪ್ರಕಟಿಸುವುದು ಒಂದು ಅಪರಾಧ. ಅದಕ್ಕಾಗಿ ಅನುಚ್ಚೇದ ೩೭೬, ೩೭೬(ಎ) (ಬಿ) (ಸಿ) ಮತ್ತು (ಡಿ) ಪ್ರಕಾರ ೨ ವರ್ಷಗಳ ಕಾರಾಗೃಹ ವಾಸ ಹಾಗೂ ದಂಡದ ಶಿಕ್ಷೆಗೆ ಗುರಿ ಯಾಗಬೇಕಾಗುತ್ತದೆ. ಅತ್ಯಾಚಾರ ಪ್ರಕರಣದಲ್ಲಿ ಪೋಲೀಸರು, ವೈದ್ಯರು ಮತ್ತು ನ್ಯಾಯಾದೀಶರ ಪಾತ್ರ ಬಹಳ ಮುಖ್ಯವಾದದ್ದು. ಮೊದಲಿಗೆ ಪೋಲೀಸರು

೧. ಇಂಥ ಸಂದರ್ಭದಲ್ಲಿ ಮಾನವೀಯ ನೆಲೆಯಲ್ಲಿ ಹೆಣ್ಣಿನ ಸ್ಥಿತಿ ಅರ್ಥ ಮಾಡಿಕೊಳ್ಳಬೇಕು.

ವಸ್ತು ಸ್ಥಿತಿಯವನ್ನು ಸರಿಯಾಗಿ ಸ್ವಯಂ ಆಸಕ್ತಿಯಿಂದ ತಿಳಿದುಕೊಂಡ ಸತ್ಯ ಸಂಗತಿಯನ್ನು

ವರದಿಯಲ್ಲಿ ದಾಖಲಿಸಬೇಕು.

೨. ದೂರು ನೀಡಿದ ತಕ್ಷಣ ಬಹುಬೇಗ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕು.

೩. ಅತ್ಯಾಚಾರಕ್ಕೊಳಗಾದವರಿಗೆ ವೈದ್ಯಕೀಯ ಪರೀಕ್ಷೆ ಮತ್ತು ಕಾನೂನು ನೆರವಿಗೆ ಮುಂದಾಗಬೇಕು.

೪. ಅತ್ಯಾಚಾರಕ್ಕೊಳಗಾದ ಮಹಿಳೆಯೊಂದಿಗೆ ಅನುಚಿತ ವರ್ತನೆ ಸಲ್ಲದು ಮತ್ತು ಮಹಿಳಾ ಪೋಲೀಸ್ ಸಮಾಲೋಚನೆ ನಡೆಸಿದರೆ ಸತ್ಯದ ವಿವರ ಸಮಗ್ರವಾಗಿ ದೊರೆಯುತ್ತದೆ.

೫. ತಡಮಾಡದೇ ಅತ್ಯಾಚಾರಕ್ಕೊಳಗಾದವರನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಬೇಕು.

೬. ಅತ್ಯಚಾರ ನಡೆದ ಸ್ಥಳಕ್ಕೆ ಪೋಲೀಸ್ ಅಧಿಕಾರಿ ಹೋಗಿ ವರದಿ ಮಾಡಬೇಕೆ ಹೊರತು ಆಕೆಗೆ ಠಾಣೆಗೆ ಅನಗತ್ಯವಾಗಿ ಕರೆಸಬಾರದು.

ಅತ್ಯಾಚಾರ ಜರುಗಿದ ಸಂದರ್ಭದಲ್ಲಿ ವೈದ್ಯರ ಪಾತ್ರ ಬಹಳ ಪ್ರಮುಖವಾದುದು. ಮತ್ತು ಸಾಂದಾರ್ಭಿಕ ಸಾಕ್ಷ್ಯ ಒದಗಿಸುವಲ್ಲಿ ವೈದ್ಯರ ಪ್ರಮಾಣ ಪತ್ರ ನ್ಯಾಯ ನಿರ್ಣಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ

೧. ವೈದ್ಯರು ಅತ್ಯಾಚಾರಕ್ಕೊಳಗಾದವರೊಂದಿಗೆ ಸೌಜನ್ಯಯುತ ಸಮಾಲೋಚನೆ ನಡೆಸಬೇಕು.

೨. ಯಾವುದೇ ಸಂದರ್ಭದಲ್ಲೂ ವೈದ್ಯಕೀಯ ತಪಾಸಣೆ ನಿರಾಕರಿಸಬಾರದು.

೩. ವೈದ್ಯರು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು.

೪. ವೈದ್ಯಕೀಯ ಪರೀಕ್ಷೆಯ ಪ್ರಮಾಣ ಪತ್ರವನ್ನು ಸಮೀಪದ ಪೋಲೀಸ್ ಠಾಣೆಗೆ ನೀಡಬೇಕು.

೫. ಅತ್ಯಾಚಾರಕ್ಕೊಳಗಾದವರ ಹೇಳಿಕೆಯನ್ನು ವೈದ್ಯರು ವರದಿ ಮಾಡಿ ನೀಡಬೇಕು.

೬. ವೈದ್ಯರು ವೈದ್ಯಕೀಯ ಸಾಕ್ಷಿಗಳನ್ನು ಅವಲೋಕಿಸಿ ತಾಳ್ಮೆಯಿಂದ ವಿಚಾರಣೆ ನಡೆಸಿ ಸಂವೇದನಾ ಶೀಲರಾಗಿ ಅಪರಾಧಿಗೆ ದಂಡ ವಿಧಿಸಿ ನಿರಪರಾಧಿಗೆ ನ್ಯಾಯ ದೊರಕಿಸುವ ಬಹುದೊಡ್ಡ ಜವಾಬ್ದಾರಿ ನ್ಯಾಯಾಧೀಶರಿಗಿರುತ್ತದೆ. ಆದ್ದರಿಂದ

೧. ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಬೇಕು,

೨. ಪ್ರತಿವಾದಿ ವಕೀಲರು ಪಾಟೀ ಸವಾಲನ್ನು ಹಾಕುವಾಗ ತಮ್ಮ ವಿವೇಚನೆ ಮಸುಕಾಗದಂತೆ ನೋಡಿಕೊಳ್ಳಬೇಕು.

೩. ಅತ್ಯಾಚಾರಕ್ಕೊಳಗಾಗಿ ಮೊದಲೇ ಜರ್ಝರಿತಳಾದ ಹೆಣ್ಣನ್ನು ಸಾರ್ವಜನಿಕವಾಗಿ ಇನ್ನಷ್ಟು ನಿಂದಿಸಿ ಕುಗ್ಗಿಸುವ ಕಾರ್ಯ ಸಂದರ್ಭದಲ್ಲಿ ವಿಚಾರಣೆ ನಡೆಸುವ ನೆಪದಲ್ಲಿ ನಡೆಯುತ್ತದೆ. ಅದಕ್ಕೆ ಆಸ್ಪಾದ ಕೊಡಬಾರದು.

೪. ಇಂಥ ಪ್ರಕರಣಗಳಲ್ಲಿ ಖಾಸಗಿಯಾಗಿ ವಿಚಾರಣೆ ನಡೆಸಬೇಕು.

೫. ಸಾಕ್ಷಿಗಳ ನಾಶಕ್ಕೆ ಅವಕಾಶ ನಿಡದೇ ತಾವೂ ಯಾವುದೇ ಫಲಾಪೇಕ್ಷೆಗೆ ಬಲಿಯಾಗದೇ ಅಪರಾಧಿಗೆ ಶಿಕ್ಷೆ ಒದಗಿಸುವ ಒದಗಿಸುವ ಜವಾಬ್ದಾರಿ ನ್ಯಾಯಾಧೀಶರಿಗಿರುತ್ತದೆ.

ಹೀಗೆ ಹೆಣ್ಣಿಗೆ ನ್ಯಾಯ ಸಿಗಬೇಕಾದರೆ, ಆಕೆಯ ಲೈಂಗಿಕ ದೌರ್ಜನ್ಯಕ್ಕೆ ಪ್ರತಿರೋಧ ಒಡ್ಡಬೇಕಾದರೆ ಪೋಲೀಸರು–ವೈದ್ಯರು ಮತ್ತು ನ್ಯಾಯಾಧೀಶರು ಈ ಮೂವರು ಜನರೂ ಒಕ್ಕೊರಲಿನಿಂದ ಕೆಲಸ ಮಾಡಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಮಾಡಲು ಪರಸ್ಪರ ಕೈ ಜೋಡಿಸಬೇಕು. ಎಷ್ಟೋ ಸಂದರ್ಭದಲ್ಲಿ ಈ ಮೂವರು ಅಪರಾಧಿ ತಪ್ಪಿಸಿಕೊಳ್ಳಲು ಕೈ ಜೊಡಿಸುತ್ತಾರೆ. ಅದ್ದರಿಂದಲೇ ಅತ್ಯಾಚಾರಗಳು ನಿತ್ಯವೂ ಜರುಗುತ್ತವೆ ಮತ್ತು ಅತ್ಯಾಚಾರಿಗಳು ಹೆಚ್ಚಾಗುತ್ತಿದ್ದಾರೆ. ಆರೋಗ್ಯಕರ ಸಮಾಜವನ್ನು ನಿರ್ಮಿಸಲು ಇಂಥ ದುಷ್ಕೃತ್ಯಗಳು ದೊಡ್ಡ ಅಡ್ಡಿಗಳಾಗಿವೆ ಎಂಬುದನ್ನು ನೆನಪಿಡಬೇಕು.

೪.೧.೩. ಕೌಟುಂಬಿಕ ಕ್ರೌರ್ಯ– ಶಿಕ್ಷಾರ್ಹಅಪರಾಧ

'ಕುಟುಂಬ' ಸಾಮಾಜಿಕ ಮೂಲಘಟಕ. ಇಂಥ ಪುಟ್ಟ ಘಟಕದಿಂದಲೇ ಹೆಣ್ಣಿನ ಮೇಲೆ ಕ್ರೌರ್ಯ ಆರಂಭವಾಗುತ್ತದೆ. ಕೌಟುಂಬಿಕ ಕ್ರೌರ್ಯದ ಪರಿಣಾಮದಿಂದಲೇ ಹೆಣ್ಣು ಅಸಹಾಯಕಳಾಗಿ ಸಾವನ್ನು ಅಪ್ಪುತ್ತಿರುವುದು ಹೆಚ್ಚಾಗುತ್ತಿದೆ. ಎಷ್ಟೋ ಬಾರಿ ಈ ಕ್ರೌರ್ಯ 'ಸಹಜ' ಎಂಬಂತೆ ನಡೆಯುತ್ತಿರುತ್ತದೆ, ಇದರ ಬಗ್ಗೆ ತಲೆ ಕೆಡೆಸಿಕೊಳ್ಳದೇ ನಮ್ಮ ಸಾಮಾಜಿಕ ಪರಿಸರ ನಿರ್ಲಕ್ಷ್ಯತೆಯಿಂದಿರುತ್ತದೆ. ಯಾವುದು ಕೌಟುಂಬಿಕ ಕ್ರೌರ್ಯ ಎಂಬುದು ಕ್ರೌರ್ಯಕ್ಕೆ ಒಳಗಾದವರಿಗೂ ತಿಳಿಯದಿರುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಸರಿಯಾದ ಜಾಗೃತಿ ಉಂಟಾದರೆ ಎಷ್ಟೋ ಹೆಣ್ಣುಗಳ ಜೀವ ಉಳಿಯುತ್ತದೆ. ಕೌಟುಂಬಿಕ ಕ್ರೌರ್ಯ ಎಂದರೆ

- ಗಂಡ ಹೆಂಡತಿಯನ್ನು ಮನಸಾರೆ ಹೊಡೆಯುವುದು,
- ವಿನಾಕರಣ ಶೀಲವನ್ನು ಶಂಕಿಸುವುದು.
- ಮಕ್ಕಳನ್ನು ಹಿಂಸಿಸುವ ಮೂಲಕ ಹೆಣ್ಣಿಗೆ ವೇದನೆಯುಂಟು ಮಾಡುವುದು,
- ಗಂಡನಾದವನು ಬೇರೊಂದು ಹೆಣ್ಣಿನೊಂದಿಗೆ ಸಂಬಂಧವಿರಿಸಿಕೊಂಡಿದ್ದರೆ
- ಹೆಣ್ಣಿನ ಜೀವನ ನಿರ್ವಹಣೆಗೆ ಹಣ ಕೊಡದಿದ್ದರೆ
- ಕಾರಣವಿಲ್ಲದೆ ಗಂಡ– ಹೆಂಡತಿಯನ್ನು ದೂರ ಮಾಡಿದ್ದರೆಇಂಥ ವರ್ತನೆಗಳು ಕೌಟುಂಬಿಕ ಕ್ರೌರ್ಯ ಎನಿಸಿಕೊಳ್ಳುತ್ತವೆ.

ಸಿವಿಲ್ ಕಾನೂನಿನಲ್ಲಿ ದೊರೆಯುವ ಪರಿಹಾರಗಳು:

ನ್ಯಾಯಿಕ ಬೇರ್ಪಡೆ : ವಿವಾಹ ವಿಚ್ಛೇಧನ ಪಡೆಯದೆ ಗಂಡನಿಂದ ಬೇರೆಯಾಗಿ ವಾಸಿಸಲು ಅನುಮತಿ ಪಡೆಯಬಹುದಾಗಿದೆ.

ವಿಚ್ಛೇದನ : ಗಂಡನಿಂದ ಶಾಶ್ವತವಾಗಿ ದೂರವಾಗುವ ಮತ್ತು ಇಚ್ಚೆ ಪಟ್ಟರೆ ಇನ್ನೊಬ್ಬನನ್ನು ಮದುವೆಯಾಗುವ ಅವಕಾಶ.

ದಾಂಪತ್ಯಹಕ್ಕುಗಳ ಪೂರ್ವ ಸ್ಥಿತಿ ಸ್ಥಾಪನೆ : ಹೆಂಡತಿಯಂತೆ ನಡೆಸಿಕೊಳ್ಳುವಂತೆ ನ್ಯಾಯಾಲಯದಿಂದ ಆದೇಶ ಪಡೆಯುವುದು.

ಜೀವನಾಂಶ: ಆಹಾರ, ಬಟ್ಟೆ, ಮನೆ, ಶಿಕ್ಷಣ, ವೈದ್ಯಕೀಯ ಚಿಕಿತ್ಸೆ ಮುಂತಾದವುಗಳಿಗಾಗಿ ಜೀವನಾಂಶ ಕೊರುವುದು.

ನಿರ್ಬಂಧಾಜ್ಞೆ : ಹಿಂಸಿಸುವುದನ್ನು ಮುಂದುವರೆಸುವಂತೆ ನ್ಯಾಯಾಲಯದಿಂದ ನಿರ್ಬಂಧಾಜ್ಞೆ ಪಡೆಯುವುದು.

ಇವುಗಳಲ್ಲಿ ಯಾವುದೇ ಪರಿಹಾರವನ್ನು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಪಡೆಯಬಹುದು. ಅರ್ಜಿ ಸಲ್ಲಿಸಿದ ಕೂಡಲೆ ಪರಿಹಾರ ದೊರೆಯುವುದಿಲ್ಲ ಆದ್ದರಿಂದ ನ್ಯಾಯ ತೀರ್ಮಾನ ಆಗುವವರೆಗೆ ಮಧ್ಯಂತರ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿ ಗಂಡನಿಂದ ಪ್ರತ್ಯೇಕ ಮನೆ ಮಾಡಿಸಿಕೊಂಡು ಇರಬಹುದು. ಅಷ್ಟೊಂದು ಸ್ಥಿತಿವಂತ ಗಂಡನಾಗಿರದಿದ್ದರೆ ಗಂಡನ ಮನೆಯಲ್ಲಿಯೇ ಯಾವುದೇ ಕಿರುಕುಳವಿಲ್ಲದಂತೆ ಇರಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಗಂಡನ ಮನೆಯಿಂದ ಹೊರ ಬರುವಾಗ ಉಡುಗೊರೆ, ಆಸ್ತಿ, ಸ್ತ್ರೀಧನ, ಇತ್ಯಾದಿ ಎಲ್ಲವನ್ನೂ ತನ್ನೊಂದಿಗೆ ತೆಗೆದುಕೊಂಡು ಬರಲು ಅವಕಾಶ ವಿದೆ.

ರುಜುವಾತು ಪಡಿಸಬೇಕಾದ ಅಂಶಗಳು :

ಕೌಟುಂಬಿಕ ಕ್ರೌರ್ಯ ಮಹಿಳೆಯ ಮೇಲೆ ಆಗಿದೆ ಎಂಬುದನ್ನು ನ್ಯಾಯಾಲಯದಲ್ಲಿ ರುಜುವಾತು ಪಡಿಸಬೇಕು ಅವುಗಳೆಂದರೆ:

- ಹಿಂಸಿಸುವವನು ಗಂಡ ಅಥವಾ ಆತನ ಬಂಧುಗಳು ಎಂಬುದು, ಇದಕ್ಕೆ ಸಹಾಯಕವಾಗುವ ಅಂಶಗಳೆಂದರೆ ವಿವಾಹದ ಆಹ್ವಾನ ಪತ್ರಿಕೆ, ಭಾವಚಿತ್ರಗಳು ಮದುವೆ ಫೋಟೋಗಳು, ರೇಷನ್ ಕಾರ್ಡ್ ಇತ್ಯಾದಿ
- ಹಿಂಸೆಯ ಸ್ವರೂಪವನ್ನು ರುಜುವಾತು ಪಡಿಸುವ ವೈದ್ಯಕೀಯ ವರದಿ–ಹೊಡೆತ, ಪೆಟ್ಟು ಗಾಯ ಇತ್ಯಾದಿಗಳನ್ನು ಕುರಿತು ವೈದ್ಯಕೀಯ ವರಧಿ.
- ಗಂಡ ಅಥವಾ ಆತನ ಬಂಧುಗಳು ಮಹಿಳೆಯನ್ನು ಹಿಂಸಿಸುವಾಗ ನೋಡಿದ ಸಾಕ್ಷ್ಯಗಳು.
- ಈ ಸಂಬಂಧ ನೀಡಿರುವ ದೂರುಗಳು ಪೋಲೀಸರಿಗೆ, ನ್ಯಾಯಾಲಯಕ್ಕೆ ಮಹಿಳಾ ಆಯೋಗಕ್ಕೆ ಇತ್ಯಾಧಿ.
- ಹಿಂಸೆಯನ್ನು ತಾಳಲಾರದೇ ತವರು ಮನೆಗೆ, ಗೆಳತಿಯರಿಗೆ ಬರೆದ ಪತ್ರಗಳು ಮತ್ತು ದಿನಚರಿ.
- ಗಂಡ, ಅತ್ತೆ, ಮಾವ, ಗಂಡನ ಯಾರೇ ಬಂಧುಗಳು ಹೊಡೆದರೆ, ಹಿಂಸಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ನೋವುಂಟು ಮಾಡಿದರೆ, ತೀವ್ರತರ ಗಾಯವಾಗುವಂತೆ ಹೊಡೆದರೆ, ಹಣ ಆಸ್ತಿ ತರುವಂತೆ ಪೀಡಿಸಿದರೆ,

ಮಾನಸಿಕವಾಗಿ ಹಿಂಸಿಸಿದರೆ ಅದು ಕೌಟುಂಬಿಕ ಕ್ರೌರ್ಯ ಎನಿಸಿಕೊಳ್ಳುತ್ತದೆ. ಮತ್ತು ಇದಕ್ಕೆ ಕಾರಣರಾದವರು ಕ್ರಿಮಿನಲ್ ಕಾನೂನು ಅಪರಾಧಿಯಾಗಿ ಶಿಕ್ಷೆಗೊಳಗಾಗಬೇಕಾಗುತ್ತದೆ.

ಇಂಥ ತೀವ್ರತರ ನೋವಿಗೆ ಗುರಿಯಾದ ಮಹಿಳೆ ಕೂಡಲೆ ಪೋಲೀಸರಿಗೆ ದೂರು ನೀಡಿ ತನ್ನ ಹಿಂಸೆಯನ್ನು ಬರೆದುಕೊಟ್ಟ ಪೋಲೀಸರಿಂದ ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್) ಯ ಪ್ರತಿಯನ್ನು ಪಡೆದುಕೊಳ್ಳಬೇಕು. ಹೆಂಡತಿಗೆ ಹಿಂಸೆ ಕೊಡುವುದು ಭಾರತ ದಂಡ ಸಂಹಿತೆಯ (ಐಪಿಸಿ) ೪೯೮ (ಎ) ಪ್ರಕರಣದ ಪ್ರಕಾರ ಅಪರಾಧ ಎನಿಸಿಕೊಳ್ಳುತ್ತದೆ.

ದಂಡ ಪ್ರಕ್ರಿಯಾ ಸಂಹಿತೆಯ (CRPC) ೧೨೫ ನೇ ಪ್ರಕರಣದ ಪ್ರಕಾರ ನೊಂದ ಮಹಿಳೆ ಜೀವನಾಂಶ ಪಡೆಯಬಹುದಾಗಿದೆ. ಈ ಮೇಲಿನ ಕಾಯ್ದೆಗಳು ಮತ್ತು ತಿಳುವಳಿಕೆಯನ್ನು ದೌರ್ಜನ್ಯಕ್ಕೆ (ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಿನ) ಒಳಗಾದವರಿಗೆ ಕಾನೂನಾತ್ಮಕ ಕ್ರಮಗಳನ್ನು ವಿವರಿಸಲಾಗಿದೆ.

೪.೨ ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ ತಡೆ ಕಾಯ್ದೆಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ವಲಯದಷ್ಟೇ ಪ್ರಮುಖವಾಗಿ ಕಾಣಿಸಿಕೊಳ್ಳುವುದೇ ಸಾರ್ವಜನಿಕವಲಯ ಈ ವಲಯವನ್ನು ವ್ಯಾಖ್ಯಾನಿಸುವಾಗ ಬಹುತೇಕ ಚಿಂತಕರು ಆರ್ಥಿಕ ವ್ಯವಹಾರಗಳು ಮಾತ್ರ ಪರಿಗಣಿಸುವುದು ಕಂಡು ಬರುತ್ತಿದೆ. ಮಹಿಳಾ ಪ್ರವೇಶವನ್ನುನಿರಾಕರಿಸಿದ ಈ ವಲಯವು ಪುರುಷ ವ್ಯವಸ್ಥೆಯಲ್ಲಿ ಪುರುಷ ವಲಯವೆಂದು ಸಮಾಜ ವ್ಯವಸ್ಥೆಯಲ್ಲಿ ಬಿಂಬಿತವಾಗಿದೆ. ಆದರೆ ಇತ್ತೀಚೆಗೆ ಮಹಿಳೆಯರು ಪುರುಷ ಸಂಸ್ಥೆಯ ಕೆಲವು ಹುನ್ನಾರಗಳಿಂದಾಗಿ ಸಾರ್ವಜನಿಕ ಪ್ರವೇಶ ಪಡೆದರು. ಮಹಿಳಾ ವಲಯವೆಂದು ಹೇಳಲಾದ ಕೌಟುಂಬಿಕವಲಯ ಮೇಲ್ನೋಟಕ್ಕೆ ಅವಳ ರಕ್ಷಣೆಯನ್ನು ಒಡೆತನವನ್ನು ಪೋಷಿಸುವಂತೆ ಅವಳಿಗೆ ಗೌರವ ತರುವ ಅಸತ್ಯದ ಸಂಗತಿಯಾಗಿದೆ. ಇನ್ನೂ ಗೌರವ ರಕ್ಷಣೆ ಭದ್ರತೆ ಇವುಗಳಿಗೆ ಅವಕಾಶವೇ ಇಲ್ಲವೆಂದು ಪ್ರಚಲಿತವಾಗಿರುವ ವಲಯದಲ್ಲಿ ಅದರ ಸ್ವರೂಪ ಇನ್ನಷ್ಟು ಭೀಕರವಾಗಿದೆ. ಮೇಲ್ನೋಟಕ್ಕೆ ಇದನ್ನು ಸಮಾಜ ಒಪ್ಪಿಕೊಳ್ಳುತ್ತೇದೆ. ಇದನ್ನು ಭೀಕರವೆಂದು ವ್ಯಾಖ್ಯಾನಿಸುವಲ್ಲಿಯೇ ಸಾರ್ವಜನಿಕ ವಲಯದಲ್ಲಿ ಅವಳ ಮೇಲಾಗುವ ದೌರ್ಜನ್ಯಗಳು ಗೋಚರಿಸುತ್ತವೆ ಎನ್ನುವ ತರ್ಕವಿದೆ. ಆದರೆ ವಾಸ್ತವ ಸಂಗತಿಯಲ್ಲಿ ಈತರ್ಕವೂ ಅಸಮಂಜಸವಾಗಿದೆ. ಪುರುಷಪರವಾದಂತಹ ರೂಢಿಯಲ್ಲಿರುವ ಸಮಾಜ ವ್ಯವಸ್ಥೆಯಲ್ಲಿ ಎಲ್ಲಾ ಪುರುಷರಿಗೂ ಎಲ್ಲಾ ಹೆಂಗಸರ ಮೇಲೆ ಅಧಿಕಾರವಿದ್ದು ಯಾರ ಮೇಲೆಯೂ ಸಹ ಅಕ್ರಮಣವನ್ನು ಮಾಡಬಹುದೆಂಬ ಅಲಿಖಿತ ಕಾನೂನಿದೆ.

ಕೌಟುಂಬಿಕ ವಲಯವನ್ನು ಸುರಕ್ಷಿತವಲಯವೆಂದು ಹೇಳುವಾಗ ಸಾರ್ವಜನಿಕವಲಯದಲ್ಲಿನ ಕೆಲವು ಸ್ಥಳಗಳನ್ನು ಸುರಕ್ಷಿತ ಜಾಗವೆಂದು ಹೇಳಲಾಗುತ್ತದೆ. ಉದಾ: ದೇವಸ್ಥಾನ, ಸರ್ಕಾರಿ ಕಛೇರಿಗಳು ಸಂಸ್ಥೆಗಳು, ಹಾಗೂ ಗುಂಪುಗಳಲ್ಲಿ ಕೆಲಸ ಮಾಡುವ ಸ್ಥಳಗಳು, ಕಾರ್ಖಾನೆಗಳು, ಇತ್ಯಾದಿ ಆದರೆ ಸ್ತ್ರೀ ಕೇಂದ್ರಿತ

ನೆಲೆಗಳಲ್ಲಿ ನೋಡಿದಾಗ ಈ ಸ್ಥಳಗಳು, ವಲಯಗಳು, ಸಹಿತ ರಕ್ಷಣೆಯ ತಾಣಗಳಾಗಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಸಂಘಸಂಸ್ಥೆ, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ನೌಕರರ ಸಂಘಗಳೆಂದೂ, ಯೂನಿಯನ್‌ಗಳೆಂದೂ, ಅಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ರೂಪಿಸಿಕೊಳ್ಳಲಾಗಿದೆ. ಆದರೆ ಇವೆಲ್ಲವೂ ಸಹ ಮಹಿಳೆಯ ಸಮಸ್ಯೆಗಳನ್ನು ಸಮಸ್ಯೆಗಳಾಗಿ ಪರಿಗಣಿಸುವ ಗೋಜಿಗೆ ಹೋಗುವುದಿಲ್ಲ. ಸಾಮಾನ್ಯ ಸಂಗತಿಗಳಿಗೂ ಸೌಕರ್ಯಗಳಿಗೂ ಹೋರಾಡಲೆಂದು ರಚಿಸಿಕೊಂಡಿರುವ ಇವುಗಳಲ್ಲಿ ಮಹಿಳಾ ಬದುಕಿನ ಆಲೋಚನೆಗಳು ಒಳಗೊಂಡಿರುವುದಿಲ್ಲ. ಹಾಗಾಗಿ ಅಲ್ಲಿನ ಮಹಿಳೆಯರ ಪರಿಸ್ಥಿತಿಗಳಿಗೆ ವಿಶೇಷ ಗಮನಹರಿಸಬೇಕಾದುರತ್ತ ಯಾರೂ ಸಹ ಕಾಳಜಿಯನ್ನು ವಹಿಸುವುದಿಲ್ಲ. ಆದ್ದರಿಂದ ಕುಟುಂಬಗಳಲ್ಲಿ ನಡೆಯುವಂತೆ ಸಾರ್ವಜನಿಕವಲಯಗಳಲ್ಲಿ ಪ್ರಕಟಗೊಳ್ಳದಿರುವ ಸಂಗತಿಗಳಿವೆ. ಅದೇ ರೀತಿ ಪ್ರಕಟಗೊಳ್ಳುವ ಭಾಗಗಳೆಂದರೆ ಮಾರ್ಕೆಟ್ ಪ್ರಯಾಣದ ಸಂದರ್ಭ ಇತ್ಯಾದಿ ಈ ಬಗೆಯ ಸಾರ್ವಜನಿಕ ಸ್ಥಳಕ್ಕೆ ಪ್ರವೇಶಿಸಿದ ಮಹಿಳೆಯರು ಕೆಲಸದ ಕಾರಣಕ್ಕಾಗಿಯೇ ಕೆಲವು ವಲಯಗಳಿಗೆ ನಿಗದಿತಗೊಳ್ಳುತ್ತದೆ. ಉದಾ: ಕಛೇರಿಗಳು, ರಾಜಕೀಯ ಪಕ್ಷಗಳು, ಇತ್ಯಾದಿ ಈ ಸಾರ್ವಜನಿಕ ವಲಯಗಳಲ್ಲಿನ ಮಹಿಳೆಯರ ವಿರುದ್ಧ ಹಿಂಸೆ ದೌರ್ಜನ್ಯಗಳು ಬಹುತೇಕವಾಗಿ ಪ್ರಕಟಗೊಳ್ಳುವುದಿಲ್ಲ.

ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯವನ್ನು ಕುರಿತು ಚರ್ಚಿಸುತ್ತಾ ಹೊದಾಗ ಸಾರ್ವಜನಿಕ ವಲಯಗಳಲ್ಲಿ ಸಾಮಾನ್ಯ ಸ್ಥಳ ಮತ್ತು ಕೆಲಸದ ಸ್ಥಳಗಳೆಂದು ಎರಡು ಭಾಗಗಳಾಗುತ್ತವೆ. ಕೆಲಸದ ಸ್ಥಳದಲ್ಲಿನ ಉಪವಲಯಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯಗಳು ಈ ವರೆಗೂ ಸಾಕಷ್ಟು ಚರ್ಚೆಗಳು ಚಿಂತನೆಗಳು ನಡೆಯುತ್ತಲೇ ಇವೆ. ಸಂವಿಧಾನ ಮತ್ತು ಸರ್ಕಾರದ ಕಾಯ್ದೆ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುವ ಉದ್ಯೋಗ ಭದ್ರತೆ ನೀಡುವ ಸಂಘಟನೆಗೊಂಡ ಕಾರ್ಮಿಕರಿರುವ ಮತ್ತು ಉತ್ಪಾದನೆ ಅನೇಕ ಆಧುನಿಕ ತಂತ್ರ ಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತವಲಯ, ಇದಕ್ಕೆ ವಿರುದ್ದವಾದ ಲಕ್ಷಣಗಳನ್ನು ಹೊಂದಿರುವ ವಲಯವೇ ಅಸಂಘಟಿತ ವಲಯವೆಂದು ಹೇಳಲಾಗುತ್ತಿದೆ. ಸಮಾನತೆಯೆಡೆಗಿನ ವರದಿಯು ಉದ್ಯೋಗ ಭದ್ರತೆಯನ್ನು ಒದಗಿಸುವ ಸೇವಾ ನಿಯಮಗಳನ್ನು ಪಾಲಿಸುವ ಸಲುವಾಗಿ ಸರ್ಕಾರವು ರೂಪಿಸಿರುವ ಶಾಸನಗಳು ಮತ್ತು ಕಾನೂನುಗಳ ಚಿಕ್ಕಟ್ಟಿನಿಂದ ಹೊರಗಿರುವ ಕಾರ್ಮಿಕ ಸಂಘ ಸಂಘಟನೆಗಳು ಇಲ್ಲದ ಉತ್ಪಾದನಾ ವಲಯವನ್ನು ಅಸಂಘಟಿತ ವಲಯವೆಂದು ಕರೆಯುತ್ತಾರೆ.

ಕೆಲಸದ ಸ್ಥಳಗಳಲ್ಲಿ ಪ್ರಮುಖವಾಗಿ ಗುರುತಿಸಲಾದ ಸಂಘಟಿತ ಮತ್ತು ಅಸಂಘಟಿತ ವಲಯಗಳು ಸಾರ್ವಜನಿಕ ವಲಯದ ಭಾಗವಾಗಿಯೇ ಇರುವುದಾದರೂ ಇಲ್ಲಿ ಕಂಡುಬರುವ ಮಹಿಳೆಯರ ಮೇಲಿನ ಆಕ್ರಮಣದ ಸ್ವರೂಪಗಳು ಭಿನ್ನವಾಗಿವೆ. ಸಾಮಾನ್ಯವಾಗಿ ಅಸಂಘಟಿತವಲಯದಲ್ಲಿನ ದೌರ್ಜನ್ಯಗಳು ಭೀಕರವೆನಿಸುತ್ತವೆ. ಹಾಗೂ ಸಂಘಟಿತ ವಲಯಗಳಲ್ಲಿನ ದೌರ್ಜನ್ಯಗಳು ನಡೆಯುವುದೇ ಇಲ್ಲವೆಂಬ

ಧೋರಣೆಗಳು ಸಾಧರಾಣವಾಗಿ ಮಹಿಳೆಯು ಸಮೂಹಗಳಿಗಿಂತಲೂ ಒಂಟಿಯಾದಂತಹ ಸನ್ನಿವೇಶಗಳಲ್ಲಿ ಹೆಚ್ಚು ಹಿಂಸೆ ದೌರ್ಜನ್ಯಕ್ಕೊಳಗಾಗುತ್ತಾರೆ.ಆದರೆ ಕೌಟುಂಬಿಕ ವಲಯದಲ್ಲಿನ ಪರಿಭಾಷೆಯಂತೆಯೇ ಸಂಘಟಿತ ವಲಯದಲ್ಲಿನ ರಹಸ್ಯ ಲೋಕವು ಅನಾವರಣಗೊಳ್ಳದಂತಹ ಅಂಶವು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ಪ್ರಮಾಣಗಳಲ್ಲಿನ ಭಿನ್ನತೆ ಇರಬಹುದಾದರೂ ಒಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ರಕ್ಷಣೆ ಮತ್ತು ಭದ್ರತೆಯ ಪ್ರಶ್ನೆ ಇದೆ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯ ವಿಧಾನದಲ್ಲಿ ಮಹಿಳಾ ಬದುಕು ಎದುರಿಸುತ್ತಿರುವ ಪ್ರಮುಖವಾದ ಸಂಗತಿ ಇದು. ಈ ಬಗೆಯ ದೌರ್ಜನ್ಯಗಳು ಮಹಿಳೆಯರ ಮೇಲೆ ಆಗಬಹುದಾದ ಆಶಾದಾಯದಿಂದಲೇ ಮಹಿಳಾ ಪರ ಚಿಂತನೆಗಳು ಚಳುವಳಿಗಳು ಪ್ರಸ್ತುತವಾಗಿಯೇ ಕೆಲಸ ಮಾಡುತ್ತವೆ. ಕಾನೂನುಗಳು ಎಲ್ಲರಿಗೂ ಒಂದೇ ಹೇಳುವಲ್ಲಿ ಅರ್ಥವಿಲ್ಲ. ಸರ್ವರೂ ಸಮಾನರು ಎಂದು ಚಿಂತನೆಗಳಲ್ಲಿ ಮಹಿಳೆಯರನ್ನು ಅಂಚಿಗೆ ಸರಿಸಲಾಗಿದೆ ಎಂಬ ಅಂಶವು ಸ್ಪಷ್ಟವಾದ ಹಿನ್ನಲೆಯಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ಕಾನೂನುಗಳ ಅವಶ್ಯಕತೆಯನ್ನು ವ್ಯಕ್ತಪಡಿಸಲಾಯಿತು. ಆದ್ದರಿಂದ ಈಗಾಗಲೇ ಆಗಿರುವ ಪ್ರಯತ್ನಗಳಲ್ಲಿ ಮಹಿಳಾ ಕಾನೂನುಗಳು ಜಾರಿಗೆ ಬಂದಿವೆ. ಹೀಗೆ ಮಹಿಳೆಯರಿಗೆ ವಿಶೇಷ ಕಾನೂನು ಒದಗಿಸಿಕೊಂಡುವಲ್ಲಿ ಹಲವು ಬಗೆಯ ಯಶಸ್ಸನ್ನು ಸ್ತ್ರೀ ವಾದಿ ಚಿಂತನೆಗಳು ಹೊರಾಡಲು ಗಳಿಸಿಕೊಳ್ಳತ್ತಾ ಬಂದಿವೆ. ಬೇರೆ ಬೇರೆ ದೇಶಗಳಲ್ಲಿ ಭಿನ್ನ ಬಗೆಯ ಯಶಸ್ಸನ್ನು ಪಡೆದುಕೊಂಡಿವೆ. ಮತದಾನದ ಹಕ್ಕಿಗಾಗಿ ಹೋರಾಟದ ಕಾಲದಿಂದಲೂ ಹಿಡಿದು ಹೆಂಗಸಿನ ಪ್ರತಿಯೊಂದು ಸಂಗತಿಗಳಲ್ಲೂ ವಿಶೇಷವಾದ ಹೋರಾಟವನ್ನು ಮಹಿಳಾ ಹಕ್ಕನ್ನು ಪಡೆಯಬೇಕಾಗಿರುವುದು ಅನಿವಾರ್ಯವಾಗಿದೆ. ಇಂಥ ಕಾನೂನುಗಳಲ್ಲಿ ಸುದೀರ್ಘವಾದ ಚರ್ಚೆಯಾದ ಕೌಟುಂಬಿಕ ಹಿಂಸೆ ತಡೆಕಾಯ್ದೆ ೨೦೦೬ ಕೌಟುಂಬಿಕ ವಲಯದಲ್ಲಿದ್ದರೆ, ಸಾರ್ವಜನಿಕ ವಲಯಕ್ಕಾಗಿ ಜಾರಿಗೊಳಿಸಲಾಗುತ್ತಿರುವ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಕಾಯ್ದೆಯನ್ನು ಜಾರಿಗೆ ತರಲಾಗಿದೆ.

೪.೨.೦. ವಸಾಹತು ಕಾಲ ಮತ್ತು ಸಂವಿಧಾನದಲ್ಲಿ ದತ್ತವಾದ ಮಹಿಳಾ ದೌರ್ಜನ್ಯ ತಡೆ ಕಾಯ್ದೆಗಳು

ಭಾರತೀಯ ಸಂವಿಧಾನ ೧೪ನೇ ವಿಧಿಯು "ಭಾರತ ರಾಜ್ಯ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಲ್ಲಿ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸುವುದಿಲ್ಲ ಎಂದು ಹೇಳುತ್ತದೆ." ಆದ್ದರಿಂದ ಮಹಿಳೆಯರು ಪುರುಷರಿಗಿಂತ ಕೀಳಲ್ಲ, ಅಥವಾ ಮೇಲಲ್ಲ, ಕಾನೂನಿನ ಮುಂದೆ ಸಮಾನರು. ಈ ನೆಲೆಯಲ್ಲಿ ನೋಡಿದಾಗ ಮಹಿಳೆಯರನ್ನು ಪುರುಷರು ಎರಡನೇ ವ್ಯಕ್ತಿಯನ್ನಾಗಿ ನಡೆಸಿಕೊಳ್ಳುವುದು ಮಹಾಪರಾಧ ಮಾತ್ರವಲ್ಲ, ಅಂಥ ಸಂದರ್ಭದಲ್ಲಿ ಮಹಿಳೆಯರು ಕಾನೂನುಗಳ ನೆರವು ಪಡೆದು ಸಮಾನ ಸಂರಕ್ಷಣೆಯನ್ನು ಪಡೆಯಲು ಸಂವಿಧಾನ ಹಕ್ಕುಳ್ಳವರಾಗಿರುತ್ತಾರೆ ಎಂಬುದನ್ನು ಮನಗಾಣಬೇಕು. ಭಾರತ ಸಂವಿಧಾನದ ಮುಂದಿನ ವಿಧಿ ಅಂದರೆ ೧೫ ನೇ ವಿಧಿ ಉಲ್ಲೇಖಿತ ವಿಷಯಕ್ಕೆ

ಇನ್ನಷ್ಟು ಸ್ಪಷ್ಟತೆಯನ್ನು ನೀಡುತ್ತದೆ. ಅದೇಂದರೆ ಧರ್ಮ, ಮೂಲವಂಶ, ಜಾತಿ. ಲಿಂಗ, ಜನ್ಮಸ್ಥಳಗಳ ಆಧಾರದ ಮೇಲೆ ಯಾವ ತಾರತಮ್ಯಗಳನ್ನು ಮಾಡತಕ್ಕದ್ದಲ್ಲ. ಅಂಗಡಿಗಳು, ಸಾರ್ವಜನಿಕ ಉಪಹಾರಗಳ, ಹೋಟಲ್‌ಗಳು ಮತ್ತು ಸಾರ್ವಜನಿಕರ ಮನೋರಂಜನೆಯ ಸ್ಥಳಗಳು, ಸಾರ್ವಜನಿಕ ಬಾವಿಗಳು, ಕೆರೆಗಳು, ಸ್ನಾನಘಟ್ಟಗಳು, ರಸ್ತೆಗಳು ಮತ್ತು ಸರ್ವ ಜನರು ಸೇರುವ ಸ್ಥಳಗಳ ಉಪಯೋಗದ ಸಂದರ್ಭದಲ್ಲಿ ಯಾವುದೇ ಅಸಮರ್ಥತೆ, ಹೊಣೆ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ. ಈ ವಿಧಿಯಲ್ಲಿರುವುದು ಯಾವುದೂ ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧವನ್ನು ಮಾಡುವುದಕ್ಕೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ ಎಂಬುದಾಗಿ ಹೇಳಿರುವ ಸಂವಿಧಾನವು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ದಿಗೆ ವಿಶೇಷ ಅವಕಾಶಗಳನ್ನು ನೀಡುವ ಕಾನೂನುಗಳನ್ನು ರಚಿಸಿಕೊಳ್ಳಲು ಆಯಾ ರಾಜ್ಯ ಸರ್ಕಾರಗಳಿಗೆ ಅವಕಾಶ ಮಾಡಿದೆ.

ಸಂವಿಧಾನದ ೧೬ ನೇ ವಿಧಿಯು (ಎ) ನಾಗರೀಕರು, ಸಾರ್ವಜನಿಕ ಹುದ್ದೆ ನೇಮಕಾತಿಯಲ್ಲಿ ಸಮಾನ ಅವಕಾಶಗಳಿರಬೇಕೆಂದು ಹೇಳುತ್ತದೆ. ರಾಜ್ಯಾದಲ್ಲಿನ ಯಾವುದೇ ಅಧಿಕಾರ, ಪದವಿಗೆ ಸಂಬಂಧಿಸಿದಂತೆ ನಿಯೋಜನೆ ಅಥವಾ ನೇಮಕಾತಿಯ ವಿಷಯಗಳಲ್ಲಿ ಎಲ್ಲಾ ನಾಗರೀಕರಿಗೂ ಸಮಾನ ಅವಕಾಶ ಇರತಕ್ಕದ್ದು. ಸಂವಿಧಾನದ ೧೬ ನೇ ವಿಧಿಯು (ಎ) ನಾಗರೀಕರು, ಪುರುಷರು ಮತ್ತು ಸ್ತ್ರೀಯರುಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಸಾಧನೆಗಳನ್ನು ಹೊಂದಲು ಹಕ್ಕನ್ನು ಹೊಂದಿರುವುದು (ಬಿ) ಪುರುಷರಿಗೂ ಮತ್ತು ಸ್ತ್ರೀಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವುದು (ಸಿ) ಕೆಲಸಗಾರರ, ಪುರುಷರು ಮತ್ತು ಸ್ತ್ರೀಯರ ಆರೋಗ್ಯದ ಮತ್ತು ಬಲದ ಹಾಗೂ ಮಕ್ಕಳ ಎಳೆಯ ವಯಸ್ಸಿನ ದುರುಪಯೋಗವಾಗದಂತೆ ಮತ್ತು ಆರ್ಥಿಕ ಅವಶ್ಯಕತೆಯಿಂದಾಗಿ ನಾಗರೀಕರು ತಮ್ಮ ವಯಸ್ಸಿಗೆ ಅಥವಾ ಬಲಕ್ಕೆ ತಕ್ಕುದಲ್ಲದ ಉಪವೃತ್ತಿಗಳಲ್ಲಿ ತೊಡಗಲು ಬಲತ್ಕಾರಿಸದೇ ಇರುವುದು. ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ ೫೧–ಎ ವಿಧಿಯಲ್ಲಿ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಮಹಿಳೆಯರಿಗೆ ಕುಂದುಂಟು ಮಾಡುವ ಆಚರಣೆಗಳನ್ನು ಬಿಟ್ಟು ಬಿಡುವುದು ಪ್ರಜೆಯ ಮೂಲಭೂತ ಕರ್ತವ್ಯವಾಗಿರತಕ್ಕದ್ದು. ಇದನ್ನು ೫೧–ಎ ವಿಧಿಯಲ್ಲಿ ಮೂಲಭೂತಕರ್ತವ್ಯಗಳನ್ನು ಸೇರಿಸಲಾಗಿದೆ. ಇದನ್ನು ೫೧–ಎ ವಿಧಿಯ (ಇ) ಉಪವಿಧಿಯಲ್ಲಿ ಹೇಳಲಾಗಿದೆ. (ಭಾಗ –೪ರಲ್ಲಿ ಸಂವಿಧಾನ ೪೨ನೇ ತಿದ್ದುಪಡಿ (೧೯೭೬) ಮಾಡಿ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ.)

ಸಂವಿಧಾನದ ೩ ನೇ ಭಾಗದಲ್ಲಿ ವಿಶ್ಲೇಷಿಸಲಾಗಿರುವ ಮೂಲಭೂತ ಹಕ್ಕುಗಳಲ್ಲಿ ಮಹಿಳೆಯರನ್ನು ಒಳಗೊಂಡಂತೆ ಸಮಾನತೆಯನ್ನು ಎತ್ತಿ ಹಿಡಿಯುವ ೧೪,೧೫, ಮತ್ತು ೧೬ ನೇ ವಿಧಿಗಳು ಅತ್ಯಂತ ಮಹತ್ವದ ವಿಧಿಗಳೆನಿಸಿವೆ. ಭಾರತದಂತ ವೈವಿಧ್ಯಮಯವಾದ ದೇಶದಲ್ಲಿ ಅನೇಕ ಭಾಷೆ, ಧರ್ಮ, ಜಾತಿ, ಪ್ರಾದೇಶಿಕತೆ ಮತ್ತು ಲಿಂಗಗಳ ಆಧಾರದಮೇಲೆ ಯಾವುದೇ ತಾರತಮ್ಯಕ್ಕೆ ಈ ವಿಧಿಗಳು ಅವಕಾಶ ನೀಡುವುದಿಲ್ಲ. ಸ್ತ್ರೀ ಪರ ಕಾಳಜಿಯನ್ನು ಈ ವಿಧಿಗಳು ಸ್ಥಾಪಿಸುತ್ತವೆ. ಆದ್ದರಿಂದ ಈ ವಿಧಿಗಳು ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತವೆ.

ಶೋಷಣೆಯ ವಿರುದ್ಧ ನ್ಯಾಯಯುತ ಹಕ್ಕಿಗಾಗಿ ಅವಕಾಶ ನೀಡಿ ಸಂವಿಧಾನ ಬದ್ಧವಾಗಿ ಪರಿಹಾರೋಪಾಯಕ್ಕೆ ಅನುವು ಮಾಡಿಕೊಟ್ಟಿದೆ. ಈ ಮೂಲಭೂತಹಕ್ಕುಗಳನ್ನು ಯಾರೂ ಉಲ್ಲಂಘಿಸಿಲ್ಲ. ನಾಗರೀಕ ಸ್ವಾತಂತ್ರ್ಯ ರಕ್ಷಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಅಲ್ಲದೇ ಯಾವುದೇ ಕಾನೂನುಗಳಿಂದಲೂ ಈ ಹಕ್ಕುಗಳಿಗೆ ಚ್ಯುತಿಯುಂಟು ಮಾಡುವಂತಿಲ್ಲ. ಅಂತಹ ಮೂಲಭೂತ ಹಕ್ಕುಗಳನ್ನು ಸ್ತ್ರೀಯರಿಗೆ ನೀಡಿರುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಭಾರತ ಸಂವಿಧಾನದ ಅನುಚ್ಛೇದ ೧೫(೧) ರಲ್ಲಿ ತಾರತಮ್ಯವನ್ನು ನಿಷೇಧಿಸಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಶಿಕ್ಷಣ. ಆರೋಗ್ಯ. ಉದ್ಯೋಗಾವಕಾಶ. ಸಮಾನ ವೇತನ, ಸಂಘಸಂಸ್ಥೆ ರಚಿಸುವ, ೧೯೬೭ ರಲ್ಲಿ ಸ್ತ್ರೀಯರ ವಿರುದ್ಧ ತಾರತಮ್ಯ ನಿರ್ಮೂಲನೆಗೊಳಿಸಲು ಒಂದು ಘೋಷಣೆಯನ್ನು ಘೋಷಿಸಲಾಗಿದೆ. ಅನುಚ್ಛೇದ ೧೦ರ ಪ್ರಕಾರ

೧. ವೈವಾಹಿಕ ಸ್ಥಿತಿ ಅಥವಾ ಇನ್ನಾವುದೇ ಕಾರಣವನ್ನಾಧರಿಸಿ ತಾರತಮ್ಯವಿಲ್ಲದೇ ವೃತ್ತಿ ತರಬೇತಿ, ವೃತ್ತಿ ಮತ್ತು ನೌಕರಿಯ ಆಯ್ಕೆಗಾಗಿ ಪುರುಷನಂತೆಯೇ ಸಮಾನ ಹಕ್ಕು ಹೊಂದಿರುತ್ತಾಳೆ.

೨. ವೇತನ ಸಹಿತ ರಜೆ, ನಿವೃತ್ತಿಯ ಸೌಲಭ್ಯ, ಕಾಯಿಲೆ, ವೃದ್ದಾಪ್ಯ, ಅಸಾಮರ್ಥ್ಯ ನಿರುದ್ಯೋಗ ಸಂಬಂಧದಲ್ಲಿ ಭದ್ರತೆಯ ಹಕ್ಕು.

೩. ಪುರುಷರಿಗೆ ಸಮಾನವಾಗಿಯೇ ವೇತನ, ಕೌಟುಂಬಿಕ ಭತ್ಯೆ ಪಡೆಯುವ ಹಕ್ಕು ಇವುಗಳನ್ನು ಆಕೆಯ ವಿವಾಹ, ಮಾತೃತ್ವ ಇದಾವುದನ್ನೂ ಗಣನೆಗೆ ತೆಗೆದುಕೊಳ್ಳದೆಯೇ ಹೊಂದಿರುತ್ತಾಳೆ, ಅಲ್ಲದೆ ಗರ್ಭಧಾರಣೆ ಕಾರಣ ಮತ್ತು ವೈವಾಹಿಕ ಸ್ಥಿತಿ ಆಧಾರದಲ್ಲಿ ಕೆಲಸದಿಂದ ವಜಾ ಮಾಡುವುದರ ವಿರುದ್ಧಹಕ್ಕು, ವೇತನ ಸಹಿತವಾಗಿ ಮಾತೃತ್ವ ರಜೆಯ ಹಕ್ಕು, ಕೌಟುಂಬಿಕ ಹೊಣೆಗಾರಿಕೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಸಮಾನವಾಗಿ ಭಾಗವಹಿಸಲು ಬಿಡಬೇಕು. ಯಾವುದೇ ನಿರ್ಬಂಧ ಹೇರುವಂತಿಲ್ಲ. ಅಂತರಾಷ್ಟ್ರೀಯ ಮಾನವ ಹಕ್ಕುಗಳ ವಿಧೇಯಕವೂ ಇದನ್ನೇ ಪ್ರತಿಪಾದಿಸುತ್ತದೆ.

೧ ಸ್ತ್ರೀವಿರುದ್ಧ ತಾರತಮ್ಯ ನಿರ್ಮೂಲನೆ

೨. ಸ್ತ್ರೀಯರ ರಾಜಕೀಯ ಹಕ್ಕು

೩. ವಿವಾಹಿತ ಸ್ತ್ರೀಯರ ರಾಷ್ಟ್ರೀಯತೆ ಹಕ್ಕು

೪. ವಿವಾಹಿತ ಸಮ್ಮತಿಗೆ ಕನಿಷ್ಟ ವಯಸ್ಸು

೫. ವಿವಾಹ ನೋಂದಣಿ

೬. ಗುಲಾಮಗಿರಿ

೭. ವ್ಯಾಪಾರ ನಿಷೇಧ (ಹೆಣ್ಣು ಮಕ್ಕಳನ್ನು ಗುಲಾಮಗಿರಿಗೆ ಮಾರುವುದು)

೮. ವೇಶ್ಯಾ ವೃತ್ತಿ ನಿರ್ಮೂಲನೆ

೯. ಶಿಕ್ಷಣ ನೀಡುವುದು

'ಸಮಾನತೆ' ಎಂಬುದು ಸಂವಿಧಾನದ ದೊಡ್ಡಶಕ್ತಿ. ಅದೊಂದು ಆದರ್ಶ, ಅದನ್ನು ಮುಟ್ಟಬೇಕೆಂಬುದು ಮನುಷ್ಯನ ಧರ್ಮದ ಆಶಯಕೂಡ. ಇದನ್ನು ಸಾಧಿಸಲು ಸಂವಿಧಾನ ಮುಲಭೂತ ಹಕ್ಕುಗಳಲ್ಲಿಯೇ ಅವಕಾಶ ಮಾಡಿದೆ. ಒಂದು ವೇಳೆ ಈ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದರೆ ರಾಜ್ಯದ ಉಚ್ಚನ್ಯಾಯಾಲಯಕ್ಕೆ ಅಥವಾ ದೇಶದ ಸರ್ವೋಚ್ಚ ನ್ಯಾಲಯಕ್ಕೆ ಅರ್ಜಿ ಸಲ್ಲಿಸಿ ಸಂಬಂಧಿಸಿದವರಿಗೆ ಮೂಲಭೂತಹಕ್ಕುಗಳನ್ನು ಉಲ್ಲಂಘಿಸದಂತೆ ನಿರ್ದೇಶನ ಕೊಡಿಸುವ ಸಾಧ್ಯತೆ ಇದೆ. ಆದ್ದರಿಂದ ಮಹಿಳೆಯರ ಸಮಾನತೆ ಹಕ್ಕನ್ನು ಉಲ್ಲಂಘಿಸಿದವರ ವಿರುದ್ದ ಮೊಕದ್ದಮೆ ಹೂಡುವ ಅಧಿಕಾರವಿದೆ ಎಂಬುದನ್ನು ಅರಿಯಬೇಕು. ಜೊತೆಗೆ ಪುರುಷನ ಸರ್ವಾಧಿಕಾರಿ ಪ್ರವೃತ್ತಿಯನ್ನು ಪ್ರಶ್ನಿಸಬೇಕಾಗುತ್ತದೆ. ಕಾನೂನಿನ ಸಮರ್ಪಕ ಅರಿವಿಲ್ಲದೆ ನಮ್ಮಲ್ಲಿ ಅನೇಕ ಮಹಿಳೆಯರು ಮಾನವ ಹಕ್ಕು ಮತ್ತು ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಅಲ್ಲದೆ ಅನೇಕ ಸಮಸ್ಯೆಗಳ ಸುಳಿಗೆ ಸಿಲುಕುತ್ತಾರೆ, ಆರ್ಥಿಕವಾಗಿ ನಷ್ಟವನ್ನೂ ಅನುಭವಿಸುತ್ತಾರೆ. ಒಮ್ಮೊಮ್ಮೆ ನಿಷ್ಪ್ರಯೋಜಕರಾಗಿ, ಹತಾಶರಾಗಿ ಬದುಕಿಗೆ ಬೆನ್ನು ತಿರುಗಿಸುತ್ತಾರೆ. ಆದ್ದರಿಂದ ಜೀವನಕ್ಕೆ ಅಗತ್ಯವಾದ ಕಾನೂನಿನ ತಿಳುವಳಿಕೆ ಮಹಿಳೆಯರಿಗೆ ದೈನಂದಿನ ಬದುಕಿಗೆ ನೆರವಾಗುತ್ತದೆ ಮತ್ತು ಎದುರಾದ ಸಮಸ್ಯೆಯನ್ನು ಧೈರ್ಯದಿಂದ ಪರಿಹರಿಸಿಕೊಂಡು ಇರುವ ಸ್ಥಿತಿಗಿಂತ ಉತ್ತಮ ಬದುಕು ನಡೆಸಲು ಅವಕಾಶವಾಗುತ್ತದೆ.

"ಪುರುಷರು ಪ್ರಪಂಚದ ವ್ಯವಹಾರಗಳನ್ನು ಸಂಪೂರ್ಣವಾಗಿ ಕುಲಗೆಡಿಸಿದ್ದಾರೆ. ಅವುಗಳನ್ನು ಸರಿಪಡಿಸುವುದು ಇನ್ನೂ ಅವರಿಂದ ಆಗಿಲ್ಲ. ಇನ್ನು ಅವರಿಗಿರುವ ಒಂದೇ ಮಾರ್ಗವೆಂದರೆ ಎಲ್ಲಾ ಅಧಿಕಾರ ಸೂತ್ರಗಳನ್ನು ಸ್ತ್ರೀಗೆ ಬಿಟ್ಟುಕೊಡುವುದು" ಎಂದು ವಿನೋಭಾಬಾವೆ ಹೇಳುತ್ತಾರೆ. ಅದನ್ನು ಒಪ್ಪಿನಡೆಯುವುದು ಸೂಕ್ತವಾದುದು. ಏಕೆಂದರೆ ಸಮಾಜದ ಅತ್ಯಂತ ಚಿಕ್ಕ ಘಟಕವಾದ ಕುಟುಂಬ ಜೀವನ ಅತ್ಯಂತ ಸಂತೋಷದಾಯಕವಾಗಿದ್ದು ಮನೆ ಮತ್ತು ಮನಃಶಾಂತಿ ನೆಲೆಸಬೇಕಾದರೆ ಸ್ತ್ರೀಯರನ್ನು ದಬ್ಬಾಳಿಕೆಯಿಂದಲೇ ಹತೋಟಿಯಲ್ಲಿಟ್ಟುಕೊಳ್ಳುವುದರಿಂದ ಪುರುಷ ಬಿಡುಗಡೆ ಪಡೆಯಬೇಕು. ಎಲ್ಲದಕ್ಕೂ ಪುರುಷನೇ ಒಡೆಯನಾಗಬೇಕೆಂಬ ಭಾವನೆಯಿಂದ ಹೊರ ಬರಬೇಕು.ಸ್ತ್ರೀಯನ್ನು ಮತ್ತವಳ ಅಭಿಪ್ರಾಯವನ್ನು ನಿರಾಕರಿಸಿದ ಬಾಳು ಬಾಳಲ್ಲ. ಪುರುಷನ ಪ್ರಯತ್ನಗಳು ಸಫಲವಾಗಬೇಕಾದರೆ ಸ್ತ್ರೀಯರ ಸಹಕಾರ ಅತ್ಯವಶ್ಯಕ ಇವರಿಂದ ವೈಯಕ್ತಿಕ ಬದುಕು ಹಸನಾಗುವುದು ಮಾತ್ರವಲ್ಲದೇ, ಸಮಾಜದ ಆರೋಗ್ಯಕರ ಬೆಳವಣಿಗೆಗೆ ಸಹಾಯವಾಗುತ್ತದೆ. ಸ್ತ್ರೀಯಾಗಲಿ, ಪುರುಷನಾಗಲಿ ಸಂಪೂರ್ಣ ಪರಿಪೂರ್ಣರಲ್ಲ. ಆದ್ದರಿಂದ ಇಬ್ಬರಲ್ಲೂ ನೈತಿಕ ಬಲ ನೆಲೆಗೊಳ್ಳಬೇಕು. ಪುರುಷನ ಮೇಲರಿಮೆ ಮತ್ತು ಸ್ತ್ರೀಯರ ಕೀಳರಿಮೆಗಳೆರಡೂ ತೊಲಗಿ ಸಮಾನುಭವ, ಸಮತಾಭಾವ ಬೆಳೆಸಿಕೊಳ್ಳುವುದು ಸಾಧ್ಯವಾಗಬೇಕು. ಅಂಥ ಪರಿಪೂರ್ಣತೆಯೆಡೆಗೆ ಸ್ತ್ರೀ-ಪುರುಷರು ಒಮ್ಮುಖವಾಗಿ ಚಲಿಸಲೆಂದೇ ಸಂವಿಧಾನದಲ್ಲಿ ಸಮಾನತೆಯ ಹಕ್ಕು ನೀಡಿದೆ.

ಈ ಜಾಗತೀಕ ಸಂವಿಧಾನವು ೩೦ ಅನುಚ್ಛೇಧಗಳಲ್ಲಿ ಮಾನವ ಹಕ್ಕುಗಳ ಸಂಕರಕ್ಷಣೆ ಮಾಡುವುದನ್ನು ತಿಳಿಸುತ್ತದೆ. ವಿಶ್ವದಲ್ಲಿರುವ ಜನಾಂಗವೂ ತಮ್ಮ ಸ್ವಾತಂತ್ರ್ಯ ಹರಣ ಮತ್ತು ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವ ಕಾರ್ಯ ಮಾಡುತ್ತಿದೆ.ವಿಶ್ವದ ವಿವಿಧ ದೇಶಗಳ ಸಂವಿಧಾನಗಳು, ನ್ಯಾಯಾಲಯಗಳು ಇಂಥ ಮಾನವ ಹಕ್ಕುಗಳನ್ನು ಅಂಗೀಕರಿಸಿ ಅವುಗಳನ್ನು ಕಾಪಾಡುವ ಸಲುವಾಗಿ ಕಾನೂನುಗಳನ್ನು ರಚಿಸಿ, ಮಾನವ ಹಕ್ಕುಗಳ ಉಲ್ಲಂಘನೆಗೆ ಶಿಕ್ಷೆ ವಿಧಿಸುತ್ತದೆ. ಹೀಗಾಗಿ ಅಂತರಾಷ್ಟ್ರೀಯ ಮಾನ್ಯತೆ ಇರುವ ಈ ಶಾಸನಗಳು ಜಗತ್ತಿನಾದ್ಯಂತ ಮನುಷ್ಯರ ಹೋರಾಟವನ್ನು ರೂಪಿಸುತ್ತದೆ.[೧೦]

ಪ್ರಾಚೀನ ಗ್ರೀಕ್‌ನಲ್ಲಿದ್ದ ನೈಸರ್ಗಿಕ ಮಾನವ ಹಕ್ಕುಗಳ ಅಮೇರಿಕಾ ಕ್ರಾಂತಿ (೧೭೭೬) ಮತ್ತು ಫ್ರಾನ್ಸ್‌ನ ಮಹಾಕ್ರಾಂತಿ(೧೭೮೯) ಗಳ ನಂತರ ಮಾನವ ಸಮಾಜದಲ್ಲಿ ಜರುಗುವ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅನ್ಯಾಯಗಳ ವಿರುದ್ದ ಹೋರಾಡುವ್ರದನ್ನು ಪ್ರತಿಪಾದಿಸಿತು. ಕಳೆದ ಶತಮಾನಗಳಲ್ಲಿ ಜರುಗಿದ ೨ ಮಹಾ ಯುದ್ದಗಳು ಅಂತರಾಷ್ಟ್ರೀಯ ಕಾನೂನುಗಳ ರಚನೆಗೆ ಮತ್ತು ಅಂತರಾಷ್ಟ್ರೀಯ ನ್ಯಾಯಾಲಯಗಳ ಸ್ಥಾಪನೆಗೆ ಅವಕಾಶ ಮಾಡಿತು. ಈ ಎಲ್ಲದರ ಪರಿಣಾಮವಾಗಿ ಸಾಮಾಜಿಕ ತಾರತಮ್ಯವನ್ನು ಹೊಗಲಾಡಿಸುವ ಸ್ತ್ರೀಪರ ಕಾನೂನುಗಳು ರಚನೆಯಾದವು. ಅವುಗಳು ಹೀಗಿವೆ.

ಮಾನವ ಹಕ್ಕುಗಳ ಅನುಚ್ಚೇದ೨೨-೨೭ ರವರೆಗಿನ ನಿಯಮಗಳು ಸಾಮಾಜಿಕ ತಾರತಮ್ಯಗಳ ನಿರ್ಮೂಲನೆಯನ್ನು ಕುರಿತಾಗಿದೆ.

ಅನುಚ್ಚೆದ-೨೨ ಸಮಾಜದ ಪ್ರತಿಯೊಬ್ಬ ಸದಸ್ಯನೂ ಸಾಮಾಜಿಕ ಭದ್ರತೆಯ ಹಕ್ಕುಗಳನ್ನು ಹೊಂದಿರುತ್ತಾನೆ.

ಅನುಚ್ಚೆದ ೨೩(೩) ಯಾವುದೇ ತಾರತಮ್ಯವಿಲ್ಲದೆ ಸಮಾನ ಕೆಲಸಕ್ಕಾಗಿ ಸಮಾನ ವೇತನ ಪಡೆಯುವ ಹಕ್ಕು ತನ್ನ ಹಾಗೂ ತನ್ನ ಕುಟುಂಬ ಘನತೆಯಿಂದ ಜೀವಿಸುವ ಹಕ್ಕನ್ನು ನೀಡಿದೆ.

ಅನುಚ್ಚೇದ ೨೪ ಪ್ರತಿಯೊಬ್ಬರಿಗೂ ವಿಶ್ರಾಂತಿ ಮತ್ತು ಬಿಡುವಿನ ಹಕ್ಕನ್ನು ನೀಡುತ್ತದೆ.

ಅನುಚ್ಚೆದ ೨೫- (೨) ತಾಯಿ ಮತ್ತು ಮಕ್ಕಳ ಬಗ್ಗೆ ವಿಶೇಷ ಗಮನ ಮತ್ತು ಸಹ ಮದುವೆಯಾದ ಅಥವಾ ಮದುವೆ ಇಲ್ಲದ ಸಂಬಂಧದಿಂದಲೂ ಹುಟ್ಟಿದ ಮಕ್ಕಳಿಗೆ ಸಮಾನ ರಕ್ಷಣೆ ನೀಡಿದೆ.

ಅನುಚ್ಚೆದ -(೨೬) (೧) ಪ್ರತಿಯೊಬ್ಬರಿಗೂ ಶಿಕ್ಷಣದ ಹಕ್ಕು ಆ ಮೂಲಕ ಮಾನವನ ಸಂಪನ್ಮೂಲದ ಅಭಿವೃದ್ಧಿ ಸಾಧಿಸಲು ಅನುವು ಮಾಡಿದೆ.

ಅನುಚ್ಚೆದ-೨೭- ಪ್ರತಿಯೊಬ್ಬರೂ ಸಮುದಾಯದ ಸಾಂಸ್ಕೃತಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಪಡೆದವರಾಗಿದ್ದು, ಈ ಸಾಮಾಜಿಕ ಹಕ್ಕುಗಳ ಉಲ್ಲಂಘನೆಯಾಗದಂತೆ ಯಾವುದೇ ರೀತಿಯ ತಾರತಮ್ಯ, ದೇಶ, ಭಾಷೆ, ಧರ್ಮ, ಜನಾಂಗ, ವರ್ಣ ಮತ್ತು ಲಿಂಗ ಭೇದಗಳಿಲ್ಲದೆ ನಡೆದುಕೊಳ್ಳಬೇಕಾಗಿದೆ.

ಸಂಯುಕ್ತ ರಾಷ್ಟ್ರಗಳ ಘೋಷಣೆಯ ಅನುಚ್ಚೇದ ೭ ರಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಹೇಳುತ್ತದೆ. ಇದರನ್ವಯ ಹೆಣ್ಣು-ಗಂಡು ಎಂಬ ತಾರತಮ್ಯ ಮಾಡುವಂತಿಲ್ಲ ಸ್ತ್ರೀಯರ ವಿರುದ್ದ

ತಾರತಮ್ಯ ನಿರ್ಮೂಲನೆಗೊಳಿಸಲು ೧೯೬೭ ರಲ್ಲಿ ಘೋಷಣೆ ಹೊರಡಿಸಲಾಗಿದೆ. ಅನುಚ್ಛೇಧ ೧೦ ರ ಪ್ರಕಾರ ವಿವಾಹಿತ ಮತ್ತು ಅವಿವಾಹಿತ ಸ್ತ್ರೀಯರು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಪುರುಷರಿಗೆ ಸಮಾನವಾದ ಹಕ್ಕುಗಳನ್ನೆಲ್ಲಾ ಖಾತರಿಪಡಿಸಿದೆ.

೧. ವೈವಾಹಿಕಸ್ಥಿತಿ ಅಥವಾ ಇನ್ನಾವುದೇ ಕಾರಣವನ್ನಾಧರಿಸಿ ಸ್ತ್ರೀ ಎಂಬ ಕಾರಣದಿಂದ ತಾರತಮ್ಯ ಮಾಡುವಂತಿಲ್ಲ. (ವೃತ್ತಿ, ತರಬೇತಿ, ನೌಕರಿಗಳಲ್ಲಿ)

೨. ಪುರುಷರಂತೆಯೇ ಸಮಾನ ದುಡಿಮೆ, ಸಮಾನ ಸಂಬಳ ಹಕ್ಕು ನೀಡಿದೆ.

೩. ಗರ್ಭಧಾರಣೆಯ ಕಾರಣ ಮತ್ತು ವೈವಾಹಿಕ ಸ್ಥಿತಿ ಆಧಾರದ ಮೇಲೆ ಕೆಲಸದಿಂದ ವಜಾ ಮಾಡುವುದರ ವಿರುದ್ದದ ಹಕ್ಕು ಮತ್ತು ವೇತನ ಸಹಿತವಾಗಿ ಮಾತೃತ್ವ ರಜೆಯ ಹಕ್ಕು ನಿಡುವುದಲ್ಲದೇ, ಸಾರ್ವಜನಿಕ ಜೀವನದಲ್ಲಿ ಸಮಾನವಾಗಿ ಭಾಗವಹಿಸುವಿಕೆ ನಿರ್ಬಂಧಿಸಬಾರದು ಎನ್ನುತ್ತದೆ.

ಮಾನವ ಹಕ್ಕುಗಳ ಅನುಚ್ಚೆದ ೩ ರಿಂದ ೨೦ ರ ವರೆಗೆ ನಾಗರೀಕ ಮತ್ತು ರಾಜಕಿಯ ಹಕ್ಕುಗಳನ್ನು ನಿಡಲಾಗಿದೆ.

ಅನುಚ್ಚೇದ ೩– ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕನ್ನು ಹೇಳುತ್ತದೆ. ವ್ಯಕ್ತಿ ಸ್ವಾಂತಂತ್ರ್ಯವನ್ನು ಎತ್ತಿ ಹಿಡಿಯುತ್ತದೆ.

ಅನುಚ್ಚೇದ –೪ ಯಾರಿಗೆ ಯಾರೂ ಗುಲಾಮರಾಗಿರುವಂತಿಲ್ಲ.

ಅನುಚ್ಚೇದ –೫ ಯಾರೂ ಮತ್ತೊಬ್ಬರನ್ನು ಚಿತ್ರಹಿಂಸೆ, ಕ್ರೌರ್ಯ, ಅಮಾನವೀಯ ಹಾಗೂ ಕೆಟ್ಟ ಶಿಕ್ಷೆಯ ವಿರುದ್ದದ ಹಕ್ಕು ನೀಡಿದೆ.

ಅನುಚ್ಚೇದ–೭ ಕಾನೂನಿನ ಮುಂದೆ ಸಮಾನತೆಯ ಉಲ್ಲಂಘನೆಯಾದರೆ ತಾರತಮ್ಯ ವಿರುದ್ದದ ಕಾನೂನಿನ ಸಮಾನ ರಕ್ಷಣೆಯ ಹಕ್ಕು ನೀಡಿದೆ.

ಅನುಚ್ಚೇದ–೧೬– ಯಾವುದೇ ತಾರತಮ್ಯಗಳಿಲ್ಲದೇ ಸ್ತ್ರೀ–ಪುರುಷರು ವಿವಾಹವಾಗಿ ಕುಟುಂಬ ಹೊಂದುವುದು, ವಿವಾಹದಲ್ಲೂ ಸಮಾನತೆ, ವಿಚ್ಚೇದನದಲ್ಲೂ ಸಮಾನತೆ ನೀಡಿದೆ. ಮದುವೆಯು ಸ್ತ್ರೀ ಪುರುಷನ ಮುಕ್ತ ಸಮ್ಮತಿಯಿಂದಾಗಬೇಕು. ಇಬ್ಬರೂ ಒಪ್ಪಿರಬೇಕು ಎಂಬುದಾಗಿದೆ.[೧೧]

ಮಾನವನ ಹಕ್ಕುಗಳ ಉಲ್ಲಂಘನೆಯಾದರೆ ಮಾನವ ಹಕ್ಕುಗಳಆಯೋಗವು ಸರ್ಕಾರಗಳ ಮೇಲೆ ಪ್ರಭಾವ ಬೀರುತ್ತದೆ. ಯಾವುದೇ ರಾಷ್ಟ್ರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವುದು ವಿಶ್ವಸಂಸ್ಥೆ ಮಟ್ಟದಲ್ಲಿ ಸಂಬಂಧಿಸಿದ ರಾಷ್ಟ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಾನವ ಜೀವನಕ್ಕೆ ರಕ್ಷಣೆಯಿಲ್ಲದ ರಾಷ್ಟ್ರ ಎಂಬ ಅಪಕೀರ್ತಿಗೆ ಒಳಗಾಗುತ್ತದೆ. ಹಕ್ಕು ಉಲ್ಲಂಘನೆಯಾದ ವ್ಯಕ್ತಿಯ ಪರಿಹಾರ ಪಡೆಯುವ ಹಕ್ಕನ್ನು ಹೊಂದಿರುತ್ತಾನೆ. ಸರ್ಕಾರಗಳು ಪರಿಹಾರೋಪಾಯ ನೀಡಲು ಬದ್ದವಾಗಿರುವಂತೆ ನೋಡಿಕೊಳ್ಳುತ್ತದೆ. ಮಾನವ ಹಕ್ಕುಗಳ ಉಲ್ಲಂಘನೆಯಾದಂತೆ ಮತ್ತೆ ಮರುಕಳಿಸದಂತೆಹೆಚ್ಚರ ವಹಿಸಲು

ಸರ್ಕಾರಗಳಿಗೆ ತಿಳಿಸುವ ಪರಮಾಧಿಕಾರ ಮಾನವ ಹಕ್ಕುಗಳ ಆಯೋಗಕ್ಕಿದೆ. ಆದ್ದರಿಂದ ಮಾನವ ಹಕ್ಕುಗಳು ಸಂವಿಧಾನ, ಕಾನೂನು ಮತ್ತು ಅಂತರಾಷ್ಟ್ರೀಯ ಕಾನೂನು ಘೋಷಣೆಗಳ ಮೂಲಕ ಅಪ್ರಾಪ್ತವಾಗಿದ್ದು ಸರ್ಕಾರಗಳ ಶಾಸನಗಳು ಅದಕ್ಕೆ ಪೂರಕವಾಗಿ ಕಾನೂನುಗಳನ್ನು ರಚಿಸಬೇಕಾಗುತ್ತದೆ.

ಮಹಿಳೆಯರಿಗೆ ರಾಜನೈತಿಕ ಹಕ್ಕುಗಳನ್ನು ದೊರೆಕಿಸುವಲ್ಲಿ ಮಾನವ ಹಕ್ಕುಗಳ ಆಯೋಗದ ಪರಿಶ್ರಮ ತುಂಬಾ ಇದೆ. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ೧೯೪೬ ರ ಜೂನ್ ನಲ್ಲಿ ಸ್ಥಾಪಿಸಲಾದ ಮಹಿಳೆಯರ ಸ್ಥಾನ ಮಾನ ಸುಧಾರಣಾ ಆಯೋಗವು ಮಹಿಳೆಯರ ರಾಜನೈತಿಕ ಹಕ್ಕಿನ ಬಗ್ಗೆ ಚರ್ಚಿಸಿ ಮಹಿಳೆಯರು ಮತದಾನ ಮಾಡುವುದು ಸೇರಿದಂತೆ ಸರ್ಕಾರದಲ್ಲಿ ಪಾಲ್ಗೊಳ್ಳಬೇಕೆಂದು ಪ್ರತಿಪಾದಿಸಿತು. ಅದರ ಪರಿಣಾಮದಿಂದ ೧೯೫೨ ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಹಿಳೆಯರ ರಾಜನೈತಿಕ ಹಕ್ಕಿನ ಬಗ್ಗೆ ಮಸೂದೆಯನ್ನು ಅಂಗೀಕರಿಸಿತು. ಇದರಿಂದ ಜಾಗತಿಕವಾಗಿ ಮಹಿಳೆಯರಿಗೆ ಮತದಾನದ ಹಕ್ಕು ಪ್ರಾಪ್ತವಾಯಿತು. ಭಾರತದಂತಹ ದೇಶಗಳಲ್ಲಿ ಸ್ವಾತಂತ್ರ್ಯ ಹೊಂದಿದ ಮೇಲೆ ಸಂವಿಧಾನಾತ್ಮಕವಾಗಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆತಿಲ್ಲ.

ಮಹಿಳೆಯರಿಗೆ ಮತಾಧಿಕಾರವನ್ನು ನೀಡಬೇಕೆಂದು ಜಾಗತೀಕವಾಗಿ ಘೋಷಣೆಮಾಡಿ ಸುಮಾರು ಅರ್ಧ ಶತಮಾನ ಕಳೆದಿದ್ದರೂ ರಾಜಕೀಯ ಕ್ಷೆತ್ರದಲ್ಲಿ ಪ್ರಬಲರಾಗಿ ಬೆಳೆದ ಮಹಿಳಾ ರಾಜಕಾರಣಿಗಳು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೆಂದೇ ಹೇಳಬೇಕು. ಮಹಿಳೆಯರಿಗೆ ರಾಜನೈತಿಕ ಹಕ್ಕನ್ನು ಮೊದಲಿಗೆ ಪ್ರತಿಪಾದಿಸಿದ ಅಮೇರಿಕಾ ರಾಷ್ಟ್ರದಲ್ಲೂ ಈ ವರೆಗೆ ಒಬ್ಬ ಮಹಿಳೆ ಅಮೇರಿಕಾದ ಅಧ್ಯಕ್ಷ ಪದವಿಗೇರಿಲ್ಲ. ಅಂದ ಮೇಲೆ ಸಮಾನತೆಯ ಘೋಷಣೆ ಬರಹದಲ್ಲಿರುವಷ್ಟು ಪ್ರಮಾಣದಲ್ಲಿ ಅನುಷ್ಟಾನವಾಗಿಲ್ಲವೆನ್ನಲೇಬೇಕು. ಕೇವಲ ನಾಲ್ಕಾರು ಮಂದಿ ಹೆಸರು ಹೇಳಿ ಮಹಿಳೆಯರೂ ರಾಜಕಿಯದಲ್ಲಿ ಪ್ರಬಲ ಪೈಪೋಟಿ ಒಡ್ಡಿದ್ದಾರೆ ಎಂದು ತೋರಿಸುವ ತೋರಿಕೆ ನಡೆಯುತ್ತಿತ್ತು. ವಾಸ್ತವದಲ್ಲಿ ಶೇ೩೩ ರಷ್ಟು ಮಂದಿ ಮಹಿಳಾ ಸದಸ್ಯರನ್ನು ಹೊಂದಿರುವ ಯಾವ ಸಂಸತ್ತು ಅಸ್ತಿತ್ವದಲ್ಲಿಲ್ಲ. ಅಂತರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನಗಳು ಮಹಿಳೆಯರಿಗೆ ಮತದಾನದ ಹಕ್ಕನ್ನು ದೊರಕಿಸುವಲ್ಲಿಗೆ ತೃಪ್ತಿಗೊಂಡರೆ ಸಾಲದು. ಸಂಸತ್ತಿನಲ್ಲಿ ಅರ್ಧಕ್ಕೂ ಹೆಚ್ಚು ಮಹಿಳೆಯರು ಆಯ್ಕೆಯಾಗಿ ಬರುವಂತೆ ಮಾಡಬೇಕು. ಆಗ ಮಾತ್ರ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರಿಗೂ ತಮ್ಮ ಅಪೇಕ್ಷಗಳಿಗನುಗುಣವಾಗಿ ಕಾರ್ಯ ಯೋಜನೆ ರೂಪಿಸಿ ಕಾನೂನು ರಚಿಸುವುದು ಸಾಧ್ಯವಾಗುತ್ತದೆ.

ವಿಶ್ವ ಕುಟುಂಬ ಪರಿಕಲ್ಪನೆಯುಳ್ಳ ಜಾಗತೀಕ ಮಾನವ ಹಕ್ಕುಗಳ ಆಯೋಗವು ಮಾನವ ಜೀವನದ ಮೇಲೆ ಪ್ರಭಾವ ಬೀರಿರುವುದನ್ನು ತಳ್ಳಿಹಾಕುವಂತಿಲ್ಲ. ಅದರಲ್ಲೂ ಮುಖ್ಯವಾಗಿ ಮನುಷ್ಯನ ಬದುಕನ್ನು ಪ್ರಭಾವಿಸುವ ಅಂಶಗಳೆಂದರೆ ಕುಟುಂಬ, ಸಮುದಾಯ, ಉದ್ಯೋಗ ಕ್ಷೇತ್ರ ಹಾಗೂ ಸರ್ಕಾರಗಳು ಈ ನಾಲ್ಕು ಘಟಕಗಳಲ್ಲಿಯೂ ಎರಡನೇಯವಳಾಗಿದ್ದಾಳೆ. ಪುರುಷ ಪ್ರಾಬಲ್ಯವನ್ನು ಎದುರಿಸುತ್ತಿದ್ದಾಳೆ. ಸಾಮಾಜಿಕ ಲಾಭದ ಪರಮಾವಧಿಯಲ್ಲಿ ಪುರುಷನಿದ್ದಾನೆ. ೧೯೪೭ ನವೆಂಬರ್ ೧೫ ರಂದು ಸ್ಥಾಪನೆಯಾದ

ಅಂತರಾಷ್ಟ್ರೀಯ ಕಾನೂನು ಆಯೋಗವು ನಾಗರೀಕ ಹಕ್ಕುಗಳ ಕ್ಷೇತ್ರಗಳಲ್ಲಿ ನರಹತ್ಯೆಯಂತಹ ಘೋರ ಅಪರಾಧವನ್ನು ತಡೆಗಟ್ಟಲು ಕಾನೂನುಗಳನ್ನು ರಚಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ಕಾರಣಕ್ಕೆ ಮಹಿಳೆಯರು ಅಕಾಲ ಮರಣಕ್ಕೆ ಒಳಗಾಗುತ್ತಿರುವುದು, ಕೊಲ್ಲುವುದು ಅಕ್ಷಮ್ಯ ಅಪರಾಧವಾಗಿದೆ. ಯಾವುದೇ ರಾಜ್ಯದಲ್ಲಿ ಇಂಥ ಪ್ರಕರಣಗಳು ಜರುಗಿದರೆ ಮಾನವ ಹಕ್ಕುಗಳ ಉಲ್ಲಂಘನೆಯಾದಂತೆಯೇ ಸರಿ, ಆದ್ದರಿಂದ ಅಂತರಾಷ್ಟ್ರೀಯ ಕಾನೂನು ಇಂಥ ಮಾನವ ಹಕ್ಕಗಳು ಇಂಥ ಮಾನವ ಹಕ್ಕುಗಳು ಉಲ್ಲಂಘನೆಯಾಗದಂತೆ ಕಾರ್ಯನಿರ್ವಹಿಸುತ್ತದೆ. ತಪ್ಪಿತಸ್ಥರನ್ನು ಶಿಕ್ಷಿಸುತ್ತದೆ. ಅದಕ್ಕನುಗುಣವಾಗಿ ಸ್ಥಳೀಯ ವ್ಯವಸ್ಥೆಯ ಸಹಕಾರ ಅಗತ್ಯವಾಗಿ ಬೇಕಾಗುತ್ತದೆ.

ವಿಶ್ವಸಂಸ್ಥೆಯ ಮಾನವ ಹಕ್ಕು ಸಂರಕ್ಷಣಾ ಆಯೋಗವು ೧೯೮೭ ರಲ್ಲಿ ಚಿತ್ರಹಿಂಸೆಯ ವಿರುದ್ಧ ಸಮಿತಿ ರಚಿಸಿದೆ. ಇದು ವ್ಯಕ್ತಿಯನ್ನು ಚಿತ್ರಹಿಂಸೆ, ನರಮೇಧ, ಕ್ರೂರ, ಅಮಾನವೀಯ ಮತ್ತು ಕ್ರೂರತ್ವ ನಡೆದ ಬಗ್ಗೆ ವರದಿ ತರಿಸಿಕೊಂಡು ಅಪರಾಧಿಗಳನ್ನು ಶಿಕ್ಷಿಸುತ್ತದೆ. ಹೀಗೆ ಮಾನವ ಹಕ್ಕುಗಳ ಆಯೋಗವು ಸಮಗ್ರವಾಗಿ ಒಟ್ಟಾರೆ ಮಾನವ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಅಂತರಾಷ್ಟ್ರೀಯ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ಸಹ ದಮನಿತ ಮಹಿಳೆಯರನ್ನು ಸಂಕಟದಿಂದ ಪಾರು ಮಾಡಲು ಮತ್ತು ಸ್ತ್ರೀ ಪುರುಷರಲ್ಲಿ ಸಮಾನತೆಯನ್ನು ತರಲು ವಿಧಿಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಇದರಿಂದಾಗಿಯೇ ವಿಶ್ವಸಂಸ್ಥೆಯ ಸಾಮಾನ್ಯಸಭೆ, ಭದ್ರತಾ ಸಮಿತಿ ಮತ್ತು ಅಂತರಾಷ್ಟ್ರೀಯ ನ್ಯಾಯಾಲಯಗಳಲ್ಲಿ ಪುರುಷರಿಗೆ ಸಮಾನ ಸ್ಥಾನಮಾನಗಳು ಮಹಿಳೆಯರಿಗೆ ದೊರಕುತ್ತಿವೆ.

ಕಾನೂನಾತ್ಮಕವಾಗಿ ಜಾಗತಿಕ ಮಟ್ಟದಲ್ಲಿ ಮೇಲೆ ಹೇಳಿದ ಎಲ್ಲಾ ಬಗೆಯ ರಕ್ಷಣೆಗಳು ಲಭ್ಯವಿದ್ದರೂ ಅವುಗಳನ್ನು ಪಡೆಯಲು ಹೋರಾಡಬೇಕಾಗಿದೆ. ಮಹಿಳೆಯರ ಸ್ಥಾನಮಾನಗಳ ಸುಧಾರಣೆಯಲ್ಲಿ ಇಂತಹ ಲಭ್ಯ ರಕ್ಷಣೆಗಳನ್ನು ಪಡೆಯುವುದನ್ನು ಸಾಧ್ಯವಾಗಿಸಿಕೊಳ್ಳಲು ಮಹಿಳೆಯರು ನಿರಂತರ ಹೋರಾಡಬೇಕಾಗಿದೆ. ಸಂಬಂಧಪಟ್ಟವರು ಪ್ರಯತ್ನಿಸದೇ ಕೇವಲ ಕಾನೂನುಗಳೇ ರಕ್ಷಿಸುತ್ತವೆಂದು ಕುಳಿತರೆ ಕಾನೂನುಗಳೆಲ್ಲಾ ಬರಹದಲ್ಲಿಯೇ ಉಳಿಯುತ್ತವೆ.

೪.೨.೧. ಹಿಂದೂ ವಿವಾಹ ಕಾಯ್ದೆಗಳು

"ವಿವಾಹ" ವೆಂಬುದು ಮಾನವ ಬದುಕಿನಲ್ಲಿ ವಿಶಿಷ್ಟವಾದದ್ದು. ಒಂಟಿ ಬಾಳನ್ನು ಭಾರತೀಯ ಸಮಾಜ ಸಹಿಸುವುದಿಲ್ಲ. ಹುಟ್ಟಿದ ಮೇಲೆ ವಯಸ್ಕರಾದವರು ಸಂಸಾರಿಯಾಗಬೇಕು. ಇಲ್ಲವೆ ಸನ್ಯಾಸಿಯಾಗಬೇಕು ಎಂದು ನಮ್ಮ ಸಮಾಜ ಅಪೇಕ್ಷಿಸುತ್ತದೆ. ಮಹಿಳೆಯರ ವಿಚಾರದಲ್ಲಿ ಮದುವೆಯೇ ಸರಿ ಬ್ರಹ್ಮಚಾರಿಯಾಗಿರುವುದು ಎಷ್ಟು ಸರಿ ಎಂದು ಕೇಳುತ್ತದೆ. ಏನೇ ಇರಲಿ ವಿವಾಹವಾಗುವುದರ ಮೂಲಕ ಹೆಣ್ಣು-ಗಂಡು ಸತಿ-ಪತಿಗಳಾಗಿ ಸಾಮರಸ್ಯದ ಬದುಕನ್ನು ಕಟ್ಟಿಕೊಳ್ಳುವುದು ಸಾಮಾನ್ಯ ಸಂಗತಿ. ಆದರೆ ಹೆಣ್ಣಿನ ವಿಚಾರದಲ್ಲಿ

ವಿವಾಹವೇ ಅಸಮಾನತೆಯ ಆರಂಭವೆಂಬಂಥ ವಿಚಿತ್ರ ಸ್ಥಿತಿ ಇದೆ. ಅದಕ್ಕೆ ಇರಬೇಕು ಭಾರತೀಯ ಸಂದರ್ಭದಲ್ಲಿ ಅನೇಕ ಹಿಂದೂ ವಿವಾಹ ಕಾಯ್ದೆಗಳು ರಚಿತವಾಗಿವೆ, ಆದರೆ ಅಸಮಾನತೆ ಮತ್ತು ಅದರಿಂದ ಹುಟ್ಟುವ ಹಿಂಸೆಗಳು ಮುಂದುವರಿಯುತ್ತಲೇ ಇವೆ. ಆದ್ದರಿಂದ ವಿವಾಹ ಸಂಬಂಧದ ಬಗೆಗಿನ ಕಾನೂನುಗಳನ್ನು ಅರ್ಥಮಾಡಿಕೊಂಡು ಅವುಗಳ ಅನುಷ್ಟಾನದಲ್ಲಿ ಪ್ರಾಮಾಣಿಕರಾದರೆ ಎಷ್ಟೋ ಹಿಂಸೆಗಳನ್ನು ತಡೆಗಟ್ಟುವುದು ಸಾಧ್ಯ. ಈ ಹಿನ್ನೆಲೆಯಲ್ಲಿ ಹಿಂದೂ ವಿವಾಹ ಕಾಯಿದೆಗಳನ್ನು ಇಲ್ಲಿ ವಿವೇಚಿಸಲಾಗಿದೆ.

- **೧೮೨೯ ರಲ್ಲಿಯೇ ಸತಿ ಪದ್ಧತಿ ನಿಷೇಧಕಾಯ್ದೆ** ರಚಿತವಾಗಿದ್ದರೂ ೧೯೮೯ ರಲ್ಲಿ ರಾಜಸ್ಥಾನದಲ್ಲಿ ರೂಪಕನ್ವರಳು ಸತ್ತು ಹೋದಳು.

- **೧೮೫೬ ರಲ್ಲಿಯೇ ವಿಧವಾ ಪುನರ್ವಿವಾಹಕಾಯ್ದೆ** ಜಾರಿಯಾಗದಿದ್ದರೂ ವಿಧವಾ ವಿವಾಹವನ್ನು ಆರೋಗ್ಯಕರವಾಗಿ ತೆಗೆದುಕೊಳ್ಳುವ ಸಮಾಜ ಇಂದಿಗೂ ಕಾಣುತ್ತಿಲ್ಲ.

- **೧೮೮೨ ರಲ್ಲಿ ಜಾರಿಯಾದ ನಾಗರೀಕ ವಿವಾಹಕಾಯ್ದೆ** ಜಾತ್ಯಾತೀತ ಧರ್ಮಾತೀತ ಮತ್ತು ಮಾತಾತೀತವಾಗಿ ವಿವಾಹಗಳು ನಡೆಯಬೇಕೆಂದು ಹೇಳುತ್ತದೆ. ಮತ್ತು ವಿವಾಹದ ವಯಸ್ಸು ನೋಂದಣಿಗಳನ್ನು ಕಡ್ಡಾಯವಾಗಿ ಹೇಳುತ್ತದೆ. ಬಹುತೇಕ ವಿವಾಹಗಳು ಜಾತಿಯೊಳಗೆ ನಡೆಯುವುದು. ಧರ್ಮದೊಳಗೆ ನಡೆಯುವುದು ಸಾಮಾನ್ಯವಾಗಿದೆ. ವಯಸ್ಸಿನ ನಿರ್ಬಂಧನವನ್ನು ಮೀರುತ್ತಿರುವುದು ಮತ್ತು ಶೇಕಡ ೯೦ ರಷ್ಟು ವಿವಾಹ ಗಳು ನೋಂದಣಿಯಾಗದಿರುವುದನ್ನು ನಾವು ನಿತ್ಯವೂ ನೋಡುತ್ತಿದ್ದೇವೆ.

- **೧೮೭೪ ರ ಸಮ್ಮತಿಯಲ್ಲಿ ವಯಸ್ಸಿನ ವಿವಾಹದ ಕಾಯ್ದೆ** ಪ್ರಕಾರ ನಿರ್ದಿಷ್ಟ ವಯಸ್ಸಿಗೆ ಬಂದ ಹೆಣ್ಣು ಮಕ್ಕಳನ್ನು ಅವರ ಸಮ್ಮತಿ ಮೇರೆಗೆ ಮದುವೆ ಮಾಡಬೇಕಾಗುತ್ತದೆ. ಆದರೆ ಹೆಂಡತಿ ಸಮ್ಮತಿಗಿಂತ ಹಿರಿಯರ ಸಮ್ಮತಿಗಳೇ ಇಂದಿಗೂ ಹೆಣ್ಣಿನ ವಿಷಯದಲ್ಲಿ ಸ್ಥಾನ ಪಡೆಯುತ್ತದೆ. ಗಂಡಿಗೆ ಮಾತ್ರ ಆತನ ಸಮ್ಮತಿಯಿಲ್ಲದೆ ವಿವಾಹವಾಗುವುದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪದ ಸಂಗತಿಗಳಾಗಿವೆ.

ಸ್ವಾತಂತ್ರ್ಯದ ಪೂರ್ವದಲ್ಲಿ ರಚಿತವಾಗಿದ್ದ ವಿವಾಹ ಶಾಸನಗಳನ್ನು ಪರಿಷ್ಕರಿಸಿ, ಅವುಗಳ ಬೆಳಕಿನಲ್ಲಿ ಸ್ವತಂತ್ರ್ಯೋತ್ತರ ಸಂದರ್ಭದಲ್ಲಿ ಹಲವಾರು ಕಾಯ್ದೆಗಳು ರಚಿತವಾಗಿವೆ. ಸ್ತ್ರೀಯರ ಸ್ಥಾನಮಾನಗಳ ಸುಧಾರಣೆಯಲ್ಲಿ ಈ ಕಾನೂನುಗಳ ಪಾತ್ರವನ್ನು ಮರೆಯುವಂತಿಲ್ಲ.

- **ವಿಶೇಷ ವಿವಾಹ ಕಾಯ್ದೆ** (೧೯೫೪) ಇದು ಜಾತೀಯ ನಿಯಮಗಳನ್ನು ಬಿಟ್ಟು ಮದುವೆಯಾಗುವುದನ್ನು ಬೆಂಬಲಿಸುತ್ತದೆ. ಏಕೆಂದರೆ ಜಾತಿಯೊಳಗಿನ ವಿವಾಹಗಳು ಹೆಣ್ಣನ್ನು ಹೆಚ್ಚಾಗಿ ನಿರ್ಬಂಧಿಸುತ್ತದೆ. ಮಾತ್ರವಲ್ಲ ಹಿಂಸೆಗೆ ಅವಕಾಶ ನಿಡುತ್ತವೆ. ಇದನ್ನು ತಪ್ಪಿಸಬೇಕೆಂಬ ಉದ್ದೇಶ ಈ ಕಾನೂನುಇದೆ. ಅಲ್ಲದೆ ಬಾಲ್ಯ ವಿವಾಹವನ್ನು ಇದು ನಿಷೇಧಿಸುತ್ತದೆ. ಯೋಗ್ಯ ವಯಸ್ಸಿಗೆ ಸ್ತ್ರೀ–ಪುರುಷರು ಸಮಾನ ಧೋರಣೆಯಿಂದ ಸತಿ–ಪತಿಗಳಾಗುವುದನ್ನು ಇದು ನಿರ್ದೇಶಿಸುತ್ತದೆ. ಮತ್ತು ವಿವಾಹವಾದವರು ಸಮಾನತೆಯಡಿ ಬದುಕುವುದು

ಸಾಧ್ಯವಾಗದಿದ್ದರೆ ವಿಚ್ಛೇದನವನ್ನು ಪಡೆಯಲು ಅವಕಾಶನೀಡಿದೆ. ಆದ್ದರಿಂದ ವಿವಾಹವನ್ನು ಕಡ್ಡಾಯವಾಗಿ ನೋಂದಣಿ ಮಾಡುವಂತೆ ತಿಳಿಸುತ್ತದೆ.

- **೧೯೫೫ ರ ಹಿಂದೂ ವಿವಾಹಕಾಯ್ದೆ** ಬಹಳ ಮಹತ್ವದ ಕಾಯ್ದೆಯಾಗಿದೆ. ಈ ಕಾಯ್ದೆಯು ಬಹುಪತ್ನಿತ್ವವನ್ನು ಮತ್ತು ಬಹುಪತಿತ್ವವನ್ನು ರದ್ದುಗೊಳಿಸುತ್ತದೆ. ಹೆಂಡತಿಯ ಒಪ್ಪಿಗೆ ಇಲ್ಲದೆ ಭೋಗಿಸಿದರೆ, ಪರಿತ್ಯಜಿಸಿದರೆ, ಕ್ರೌರ್ಯದಿಂದ ನಡೆಸಿಕೊಂಡು ಹಿಂಸಿಸಿದರೆ, ದೀರ್ಘಕಾಲ ದೇಶಾಂತರ ಹೋದರೆ ಇವುಗಳ ಆಧಾರದ ಮೇಲೆ ವಿಚ್ಛೇದನ ಪಡೆದು ಬೇರೊಬ್ಬನನ್ನು ಮದುವೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಮದುವೆ ಸಮಯದಲ್ಲಿ ವರನಿಗೆ ಜೀವಂತ ಹೆಂಡತಿ, ವಧುವಿಗೆ ಜೀವಂತ ಗಂಡ ಇರುವಂತಿಲ್ಲ. ೧೯೫೪ ರ ವಿಶೇಷ ವಿವಾಹ ಕಾಯ್ದೆಯಡಿ ನೋಂದಾಯಿತ ವಿವಾಹ ಕಾನೂನು ಸಮ್ಮತವಾಗುತ್ತದೆ. ಒಂದು ವೇಳೆ ತಮ್ಮ ತಮ್ಮ ಧರ್ಮಕ್ಕನುಸಾರವಾಗಿ ಮದುವೆಯಾದವರು ಕಾನೂನು ಸಮ್ಮತ ವಿವಾಹವಾದ ನಂತರ ಯಾವಾಗಬೇಕಾದರೂ ತಮ್ಮ ವಿವಾಹವನ್ನು ನೋಂದಾಯಿಸಿಕೊಂಡು ವಿವಾಹ ದೃಢೀಕರಣ ಪತ್ರ ಪಡೆಯಬಹುದಾಗಿದೆ.

ಮದುವೆ ಸಮಯದಲ್ಲಿ ವರನಿಗೆ ಜೀವಂತ ಹೆಂಡತಿ, ವಧುವಿಗೆ ಜೀವಂತ ಗಂಡ ಇದ್ದಲ್ಲಿ ಅಂಥವರ ವಿವಾಹ ಶೂನ್ಯ ವಿವಾಹ ಎನಿಸಿಕೊಂಡು ಕಾನೂನಿನ ಮಾನ್ಯತೆ ದೊರೆಯುವುದಿಲ್ಲ.

- **೧೯೫೬ ರ ಹಿಂದೂ ಉತ್ತರಾಧಿಕಾರ ಕಾಯ್ದೆ,** ವಿವಾಹಿತ ಮಹಿಳೆಯರ ಆಸ್ತಿಯ ಹಕ್ಕನ್ನು ಹೇಳುತ್ತದೆ, ಮತ್ತು ೧೮೭೪ ರ ಸ್ತ್ರೀಯು ತನ್ನ ಸ್ವಂತ ಸಂಪಾದನೆ ಮತ್ತು ಸ್ತ್ರೀಧನದ ಮೇಲೆ ಮಾತ್ರ ಹಕ್ಕುಳ್ಳವನು ಎಂಬುದನ್ನು ಪರಿಷ್ಕರಿಸುತ್ತದೆ. ಈ ಕಾಯ್ದೆಯನ್ವಯ ಕುಟುಂಬದ ಆಸ್ತಿಯಲ್ಲೂ ಹೆಣ್ಣು ಗಂಡು ಮಕ್ಕಳಂತೆ ಸಮಾನ ಪಾಲುದಾರಳು. ಪಿತ್ರಾರ್ಜಿತ ಆಸ್ತಿಯ ವಾರಸುದಾರರು ಸತ್ತು ಹೋದರೆ ಅವರ ಹೆಂಡತಿಯವರಿಗೆ ಅವರ ಪಾಲು ಸಲ್ಲುತ್ತದೆ ಎಂದು ಹೇಳುತ್ತದೆ. ಆದ್ದರಿಂದ ಒಂದರ್ಥದಲ್ಲಿ ಹೆಣ್ಣು ಹುಟ್ಟಿದ ಮನೆಯಲ್ಲಿ ತಂದೆಯ ಮನೆಯ ಆಸ್ತಿಯ ಮೇಲೂ ಮತ್ತು ಗಂಡನ ಆಸ್ತಿಯ ಮೇಲೂ ಹಕ್ಕುದಾರಳಾಗಿರುತ್ತಾಳೆ. ಆದರೆ ಪ್ರಸ್ತುತ ಎರಡು ಕಡೆಯೂ ವಂಚಿತಳೇ ಆಗಿರುವುದು ಕಂಡು ಬರುತ್ತಿದೆ.

- **೧೯೫೬ ರಲ್ಲಿ ಹಿಂದೂ ದತ್ತಕ ಮತ್ತು ಜೀವನಾಂಶ ಕಾಯ್ದೆಯು** ವಿವಾಹಿತ ದಂಪತಿಗಳು ಪರಸ್ಪರ ಸಮ್ಮತಿಯಿಲ್ಲದೆ ದತ್ತು ಪಡೆಯುವಂತಿಲ್ಲ. ವಿಚ್ಛೇದನ ಪಡೆದವರು ವಿಧವೆಯರಿಗೆ ಈ ನಿಯಮವಿಲ್ಲ. ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗ ಹುಡುಗಿಯರನ್ನು ದತ್ತು ತೆಗೆದುಕೊಳ್ಳಬಹುದಾಗಿದೆ. ಈ ಕಾಯ್ದೆಯು ಸ್ತ್ರೀಯರಿಗೆ ಜೀವನಾಂಶ ಕೊಡಬೇಕೆಂದು ಹೇಳುತ್ತದೆ. ನ್ಯಾಯಾಲಯದ ಮೂಲಕ ವಿಚ್ಛೇದನ ಪಡೆದ ಮಹಿಳೆಯರಿಗೆ ಮೂಲ ಆಸ್ತಿಯಲ್ಲಿ ಜೀವನಾಂಶ ಪಡೆಯುವ ಹಕ್ಕಿದೆ. ಹೆಣ್ಣುಮಕ್ಕಳ ಮತ್ತು ಸ್ತ್ರೀಯರ ಅನೈತಿಕ ಪ್ರತಿ ಬಂಧಕ ಕಾಯಿದೆಯನ್ನು ೧೯೫೬ ರಲ್ಲಿ ಜಾರಿಗೊಳಿಸಲಾಯಿತು. ಅದರ ಪ್ರಕಾರ ಮುಗ್ಧ ಹೆಣ್ಣು ಮಕ್ಕಳ ಸಾಗಾಣೆ, ಮಾರುವುದು, ವೇಶಾವೃತ್ತಿಗೆ ತಳ್ಳುವುದು, ಹಣಕ್ಕಾಗಿ ಮಾರಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ವಿಚಿತ್ರವೆಂದರೆ ಇಂಥ ಪ್ರಕರಣಗಳಲ್ಲಿ ಶೋಷಿತ ಮಹಿಳೆಯರು ಶಿಕ್ಷೆಗೊಳಗಾಗುತ್ತಿದ್ದಾರೆ.

ಇಂಥ ಹೀನ ಕೃತ್ಯಕ್ಕೆ ತಳ್ಳಿದವರು ನಾಪತ್ತೆಯಾಗುತ್ತಾರೆ. ಆದ್ದರಿಂದ ೧೯೭೮ ಮತ್ತು ೧೯೮೬ ರಲ್ಲಿ ಈ ಕಾನೂನಿಗೆ ತಿದ್ದುಪಡಿ ತಂದು ಇಂಥ ಶೋಷಿತ ಮಹಿಳೆಯರ ಪುನರ್ವಸತಿಗೆ ಸರ್ಕಾರ ಅವಕಾಶ ಕಲ್ಪಿಸಿದೆ.

೪.೨.೨. ಇತರೆ ಕಾಯ್ದೆಗಳು

- **೧೯೬೧ ರಲ್ಲಿ ಪ್ರಸೂತಿ ಸೌಲಭ್ಯ ಕಾಯ್ದೆಯ ಪ್ರಕಾರ** ಸಕಾರಿ ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಗಣಿಗಾರಿಕೆ, ಪ್ಲಾಂಟೇಶನ್, ಬ್ಯಾಂಕ್, ವಿಮಾ ಇಲಾಖೆಗಳಲ್ಲಿ ದುಡಿಯುವ ಮಹಿಳೆಗೆ ಸಂಬಳಸಹಿತ ಹೆರಿಗೆ ರಜೆ ನೀಡುವ ಅವಕಾಶ ಕಲ್ಪಿಸಿದೆ. ಇದರಿಂದ ನೌಕರರಾದ ಮಹಿಳೆಯರು ಇಂಥ ಸಂದರ್ಭದಲ್ಲಿ ನಿರುದ್ಯೋಗಿಗಳಾಗುವ ಭಯವಿಲ್ಲ.

- **೧೯೭೧ ರ ವೈದ್ಯಕೀಯ ಗರ್ಭನಿವಾರಣಾ ಕಾಯ್ದೆಯ** ರೀತಿ ಆರೋಗ್ಯವಂತ ಯುವತಿಯ ಮೇಲೆ ಅತ್ಯಾಚಾರ ನಡೆದು ಗರ್ಭಧಾರಣೆಯಾಗಿದ್ದಲ್ಲಿ, ಅಂಥ ಸ್ತ್ರೀಯು ಮಾನಸಿಕ, ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಭ್ರೂಣ ಬೆಳೆಯುವುದು ಅಥವಾ ಹುಟ್ಟುವ ಮಗು ಅಪಾಯವನ್ನುಂಟು ಮಾಡುತ್ತದೆ ಎನ್ನುವುದಲ್ಲದೇ ದಂಪತಿಗಳು ಉಪಯೋಗಿಸುವ ಗರ್ಭನಿರೋಧಕವು ವಿಫಲವಾಗಿ ಗರ್ಭದಾರಣೆಯಲ್ಲಿ ಈ ಕಾಯ್ದೆಯನುಸಾರ ಗರ್ಭಪಾತಕ್ಕೊಳಗಾಗಬಹುದಾಗಿದೆ. ಇದೊಂದು ಸದುದ್ದೇಶದ ಕಾಯ್ದೆ ಆದರೆ ಈ ಕಾಯ್ದೆಯಡಿ ನಡೆಯುತ್ತಿರುವುದೇ ಬೇರೆ. ಗಂಡು ಮಕ್ಕಳು ಬೇಕೆಂಬ ಆಕಾಂಕ್ಷಿಗಳು ಗರ್ಭದಲ್ಲಿರುವ ಮಗು ಹೆಣ್ಣು ಅಥವಾ ಗಂಡು ಎಂದು ಸ್ಕ್ಯಾನಿಂಗ್ ಮಾಡಿಸಿ ತಿಳಿದುಕೊಂಡು ಹೆಣ್ಣು ಭ್ರೂಣವನ್ನು ನಾಶ ಪಡಿಸುವುದಕ್ಕೆ ಗರ್ಭಪಾತ ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಹುಟ್ಟುವ ಹೆಣ್ಣುಮಕ್ಕಳ ಸಂಖ್ಯೆಯೇ ಕ್ಷೀಣಿಸಿ ೧೦೦೦ ಪುರುಷರಿಗೆ ೯೨೧ ಮಹಿಳೆಯರಿರುವುದು ಕಂಡು ಬಂದಿದೆ, ಇಂಥ ಅಸಮತೋಲನ ಮುಂದಿನ ಆತಂಕಕಾರಿ ಸಾಮಾಜಿಕ ದೌರ್ಜನ್ಯಕ್ಕೆ ಅವಕಾಶ ನೀಡುತ್ತದೆ. ಆದ್ದರಿಂದ ಉದ್ದೇಶಿತ ಕಾನೂನಿನ ದುರ್ಬಳಕೆ ತಡೆಗಟ್ಟಬೇಕಾಗುತ್ತದೆ.

- **೧೯೭೬ ರ ಸಮಾನ ಸಂಬಳ ಕಾಯ್ದೆ** ಸ್ತ್ರೀಪುರುಷರಿಗೆ ಏಕರೀತಿಯ ವೇತನ ನೀಡುವಂತೆ ಹೇಳುತ್ತದೆ. ಈ ಹಿಂದೆ ಹೆಣ್ಣಾಳಿನ ಸಂಬಳ ಗಂಡಾಳಿನ ಸಂಬಳಕ್ಕಿಂತ ಕಡಿಮೆ ಇರುತ್ತಿತ್ತು. ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ದಿನಗೂಲಿಗಳಲ್ಲಿ ಈ ತಾರತಮ್ಯ ಮುಂದುವರೆದಿದೆ. ಆದರೆ ಮೇಲಿನ ಕಾಯ್ದೆಪ್ರಕಾರ ಯಾವುದೇ ಉದ್ಯೋಗ ಕ್ಷೇತ್ರದಲ್ಲಿ ಪ್ಲಾಂಟೇಶನ್, ಕಾರ್ಪೊರೇಷನ್, ಬ್ಯಾಂಕ್, ವಿಮೆ, ರೈಲ್ವೆ, ಕೇಂದ್ರ–ರಾಜ್ಯ ಸಕಾರಗಳ ಆಡಳಿತ ಇಲಾಖೆಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಒಂದೇ ವಿಧವಾದ ಕೆಲಸಕ್ಕೆ ಒಂದೇ ರೀತಿಯ ವೇತನ ನೀಡುವಂತೆ ನಿರ್ದೇಶನ ಮಾಡುತ್ತದೆ.

- **ಕಾರ್ಖಾನೆಗಳ ತಿದ್ದುಪಡಿ ಕಾಯ್ದೆ** ೧೯೭೬ ರಂತೆ ಒಂದು ಕಾರ್ಖಾನೆಯಲ್ಲಿ ಮೂವತ್ತು ಮಂದಿ ಹೆಂಗಸರು ದುಡಿಯುತ್ತಿದ್ದರೆ ಆ ಹೆಂಗಸರಲ್ಲಿ ತಾಯಂದಿರಾಗಿರುವವರ ಮಕ್ಕಳನ್ನು ನೋಡಿಕೊಳ್ಳಲು "ಶಿಶು ರಕ್ಷಣಾ ವ್ಯವಸ್ಥೆ"

ಗಳನ್ನು ಸ್ಥಾಪಿಸಿಪುದು ಉದ್ದಿಮೆಯ ಕರ್ತವ್ಯವಾಗಿರುತ್ತದೆ, ಇದೂ ಕೂಡ ಪ್ರಮಾಣದಲ್ಲಿ ಇಂದಿಗೂ ಅನುಷ್ಟಾನಗೊಂಡಿಲ್ಲ.

- **೧೯೭೮ ಶಿಶು ವಿವಾಹ ನಿರ್ಬಂಧಕಾಯ್ದೆ** ಪ್ರಕಾರ ಸ್ತ್ರೀಯರಿಗೆ ೨೦ ವರ್ಷಗಳು ವಿವಾಹದ ಕನಿಷ್ಟ ವಯಸ್ಸುಗಳಾಗಿವೆ. ಈ ನಿಯಮವನ್ನು ಉಲ್ಲಂಘಿಸುವವರ ವಿರುದ್ಧ ಯಾರು ದೂರು ಸಲ್ಲಿಸಿದರೂ ಪೋಲೀಸರು ಕ್ರಮ ಜರುಗಿಸಬಹುದಾಗಿದೆ. ಇದೂ ಕೂಡ ಅನುಷ್ಟಾನದಲ್ಲಿ ಸೋತಿದೆ. ವಿದ್ಯಾವಂತ ಸಮುದಾಯವೇ ನಿಯಮವನ್ನು ಬಹುತೇಕ ಪಾಲಿಸುತ್ತದೆ. ಎಂದು ಒಪ್ಪಿದ್ದರೂ ಅವಿದ್ಯಾವಂತರು, ಅಲೆಮಾರಿಗಳು, ಆದಿವಾಸಿಗಳು, ಬುಡಕಟ್ಟಿನವರು ತಮ್ಮ ಹೆಣ್ಣು ಮಕ್ಕಳ ವಿವಾಹ ಸಂದರ್ಭದಲ್ಲಿ ವಯಸ್ಸಿನ ನಿಯಮ ಪಾಲನೆಯಾಗುತ್ತಿಲ್ಲ.

- **ಸ್ತ್ರೀಯರ ಅಸಭ್ಯ ಪ್ರತಿನಿಧಿಸುವಿಕೆಯ ನಿಷೇಧಕಾಯ್ದೆ** ೧೯೮೬ ಈ ಕಾಯ್ದೆಯಂತೆ ಸಮೂಹ ಮಾಧ್ಯಮಗಳಲ್ಲಿ ಸ್ತ್ರೀ ಅಸಭ್ಯವಾಗಿ. ಸಮಾಜದ ನೈತಿಕತೆಯನ್ನು ಹಾಳುಮಾಡುವಂತೆ ಪ್ರತಿನಿಧಿಸಲ್ಪಟ್ಟರೆ ಅದಕ್ಕೆ ಕಾರಣರಾದವರನ್ನು ಮತ್ತು ಆಕೆಯನ್ನು ೨ ವರ್ಷಗಳ ಕಾಲ ಕಾರಾಗೃಹಕ್ಕೆ ತಳ್ಳುವುದು ಮತ್ತು ಜುಲ್ಮಾನೆ ವಿಧಿಸಲು ಅವಕಾಶ ನೀಡಿದೆ. ಆದರೆ ಸೌಂದರ್ಯ ಸ್ಪರ್ಧೆಯ ಹೆಸರಿನಲ್ಲಿ ಸ್ತ್ರೀಯರನ್ನು ಅಸಭ್ಯವಾಗಿ ಚಿತ್ರಿಸುವುದು, ಮೈ ಪ್ರದರ್ಶನಕ್ಕಿಡುವುದು ಕಂಡುಬರುತ್ತದೆ.

- **೧೯೮೩ ರ ಕ್ರಿಮಿನಲ್ ಕಾನೂನುಗಳ ತಿದ್ದುಪಡಿ ಕಾಯ್ದೆ** ಪ್ರಕಾರ ಅತ್ಯಾಚಾರಕ್ಕೊಳಗಾದ ಸ್ತ್ರೀಯರನ್ನು ಯಾರೂ ಸಾರ್ವಜನಿಕವಾಗಿ ನಿಂದಿಸುವಂತಿಲ್ಲ. ಮತ್ತು ಆಕೆಯ ಕಡೆ ಬೆರಳು ಮಾಡಿ ತೋರಿಸುವಂತಿಲ್ಲ. ಅಲ್ಲದೇ ಸ್ತ್ರೀಯೊಬ್ಬಳು ಅಪರಾಧಿಯಾಗಿ ಪೋಲೀಸ್ ಠಾಣೆ, ಆಸ್ಪತ್ರೆ, ರಿಮ್ಯಾಂಡ್‌ಹೋಂಗಳಲ್ಲಿ ಇದ್ದರೆ ಅಂಥ ಕಡೆ ಆಕೆಯ ಒಪ್ಪಿಗೆಯಿಲ್ಲದೆ ಅತ್ಯಾಚಾರ ಮಾಡಿದರೆ ಅಂಥ ಪ್ರಕರಣದಲ್ಲಿ ಅಲ್ಲಿನ ಮುಖ್ಯಸ್ಥರೇ ಹೊಣೆಗಾರರಾಗುತ್ತಾರೆ. ಗಂಡನೂ ಸಹ ಇಂಥ ಮೃಗೀಯ ವರ್ತನೆ ಮಾಡುವಂತಿಲ್ಲ. ಆದರೆ ಇದರ ಉಲ್ಲಂಘನೆ ನಡೆಯುತ್ತಲೇ ಇದೆ.

- **೧೯೮೪ ರ ಕುಟುಂಬ ನ್ಯಾಯಾಲಯ ಕಾಯ್ದೆಯಂತೆ** ಕುಟುಂಬದಲ್ಲಿ ಸತಿ–ಪತಿಯರ ನಡುವೆ ವಿವಾದಗಳು ಏರ್ಪಟ್ಟರೆ ಅನೌಪಚಾರಿಕವಾಗಿ ಮತ್ತು ಸಮಾಧಾನಕರವಾಗಿ ಬಗೆ ಹರಿಸಲು ಸ್ಥಾಪನೆಯಾದ ಕುಟುಂಬ ನ್ಯಾಲಯಗಳು ವಕೀಲರ ವಾದ ಪ್ರತಿವಾದಕ್ಕಿಂತ ಭಿನ್ನವಾದ ನೆಲೆಯಲ್ಲಿ ಮಾನವೀಯ ನೆಲೆಯಲ್ಲಿ ಬಗೆಹರಿಸುವಂತೆ ಹೇಳುತ್ತವೆ."[೧೨] ಇದರಲ್ಲಿ ಸಮಾಜ ಸೇವಕರು, ಗಣ್ಯರು, ಕೌಟುಂಬಿಕ ವಿಚಾರತಜ್ಞರು ಪ್ರಮುಖ ಪಾತ್ರ ವಹಿಸುತ್ತಾರೆ. ಇಷ್ಟೆಲ್ಲಾ ಸ್ತ್ರೀ ಪರ ಕಾನೂನುಗಳು ಇದ್ದರೂ ಅನುಷ್ಟಾನದಲ್ಲಿ ಪುರುಷಪರವಾಗಿಯೇ ಪ್ರತಿಕ್ರಿಯಿಸುತ್ತದೆ.ಹೀಗಾಗಿ ಕಾನೂನುಗಳು ನಮಗೆ ನ್ಯಾಯ ದೊರಕಿಸುತ್ತವೆ ಎಂಬ ವಿಶ್ವಾಸವನ್ನೇ ಮಹಿಳೆಯರು ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಕಾನೂನು ಜಾರಿಗೊಳಿಸುವವರ ಸಂಸ್ಕಾರ ಕೂಡ ಇಂತಲ್ಲಿ ಬಹಳ ಮುಖ್ಯವಾಗುತ್ತದೆ.

೪.೨.೩. ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ ತಡೆಯ ಪ್ರಮುಖ ಕಾಯ್ದೆಗಳು

ಸಾರ್ವಜನಿಕ ವಲಯದಲ್ಲಿ ಮಹಿಳಾ ದೌರ್ಜನ್ಯಗಳ ವಿವಿಧ ರೂಪಗಳಲ್ಲಿ ಬದಲಾವಣೆಯಾಗಿ ನಿರಂತರವಾಗಿ ತಮ್ಮ ಸ್ಥಿತಿಯನ್ನು ಬದಲಾಯಿಸುತ್ತಾ ಹೋಗುತ್ತವೆ. ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ ತಡೆಯಲು ಸರ್ಕಾರವು ಜಾರಿಗೊಳಿಸಿರುವ ಕಾನೂನುಗಳು ಈ ಕೆಳಕಂಡಂತೆ ಇವೆ.

ದೌರ್ಜನ್ಯದ ಸ್ವರೂಪಗಳು

೧. ಅತ್ಯಾಚಾರ

೨. ಹೆಣ್ಣುಮಕ್ಕಳ ಹಾಗೂ ಸ್ತ್ರೀಯರ ಅಪಹರಣ

೩. ದುಡಿಯುತ್ತಿರುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ

೪. ಹೆಣ್ಣು ಮಕ್ಕಳನ್ನು ಮತ್ತು ಮಹಿಳೆಯರನ್ನು ಚುಡಾಯಿಸುವುದು

೫. ಆ್ಯಸಿಡ್ ಪ್ರಕರಣಗಳು

೬. ಮಹಿಳೆಯ ಚಿತ್ರವನ್ನು ಅಶ್ಲೀಲವಾಗಿ ಪ್ರದರ್ಶಿಸುವುದು

೭. ಮಹಿಳೆಯರ (ಹೆಣ್ಣು ಮಕ್ಕಳ) ಮಾರಾಟ

೪.೨.೩.೦. ಅತ್ಯಾಚಾರ ತಡೆ ಕಾಯ್ದೆ.

ಹೆಣ್ಣಿನ ಮೇಲೆ ನಡೆಯುವ ಅತ್ಯಂತ ಅಮಾನವೀಯ ದೌರ್ಜನ್ಯವೆಂದರೆ ಅದು ಅತ್ಯಾಚಾರ. ಪುರುಷನು ತನ್ನ ದೈಹಿಕ ದೌರ್ಬಲ್ಯಕ್ಕೋ, ಅಥವಾ ತನ್ನ ಪೌರುಷ ಪ್ರದರ್ಶನಕ್ಕೋ, ನಡೆಯುವ ಈ ಕ್ರಿಯೆ ಖಂಡನೀಯ, ವಿಪರ್ಯಾಸ ಎಂದರೆ ತನ್ನ ಯಾವುದೇ ಪಾತ್ರ ಅಥವಾ ತಪ್ಪು ಇಲ್ಲದೇ ತನ್ನ ಅಸ್ತಿತ್ವವನ್ನು ನುಚ್ಚಾಗಿಸುವ ಈ ಅತ್ಯಾಚಾರದಂತ ಘೋರ ಅಪರಾಧಕ್ಕೆ ಬಲಿಯಾದ ಮಹಿಳೆಗೆ ನಮ್ಮ ಸಮಾಜ ಶೀಲ ಪಾವಿತ್ರತೆ ಇತ್ಯಾದಿಗಳ ಭ್ರಮಾಪಟ್ಟದಲ್ಲಿ ಸಿಕ್ಕಿಸಿ ನರಳಿಸುವುದು. ಈ ಸಂಬಂಧ ಇರುವ ಕಾನೂನು ಎಂದರೆ

ಯಾವೊಬ್ಬ ಗಂಡಸು ಇನ್ನೊಂದು ಮಹಿಳೆಯೊಡನೆ

೧. ಆಕೆಯ ಇಚ್ಚೆಗೆ ವಿರುದ್ದವಾಗಿದ್ದರೆ

೨. ಆಕೆಯ ಒಪ್ಪಿಗೆ ಇಲ್ಲದೇ

೩. ಆಕೆಯ ಸಾವಿನ ಅಥವಾ ಹಾನಿಯ ಭಯ ಹುಟ್ಟಿಸಿ ಒಪ್ಪಿಗೆ ಪಡೆದರೆ

೪. ಆತನಿಗೆ ಆಕೆ ತನ್ನ ಹೆಂಡತಿ ಅಲ್ಲವೆಂದೇ ತಿಳಿದಿದ್ದು ಸಹ ಆಕೆಗೆ ತನ್ನನ್ನು ತಾನು ಕಾನೂನು ಬದ್ದವಾಗಿ ಮದುವೆ ಆದವನೆಂದು ನಂಬಿಸಿ ಒಪ್ಪಿಗೆ ಪಡೆದಿದ್ದಾರೆ.

೫. ಆಕೆಗೆ ಮದ್ಯಪಾನ ಮಾಡಿಸಿ ಒಪ್ಪಿಗೆ ಪಡೆದಿದ್ದರೆ ಅಥವಾ ಆಕೆಗೆ ಬುದ್ದಿ ಭ್ರಮಣೆ ಆಗಿದ್ದಾಗ ಅಥವಾ ಬೇರಾವುದೋ ಮಂಕುಗೊಳಿಸುವ ವಸ್ತುವನ್ನು ಉಪಯೊಗಿಸಿ ಒಪ್ಪಿಗೆ ಪಡೆದಿದ್ದಾರೆ.

೬. ಆಕೆಗೆ ೧೬ ವರ್ಷದೊಳಗೆ ವಯಸ್ಸಾಗಿದ್ದು ಒಪ್ಪಿಗೆ ನೀಡಲಿ ಅಥವಾ ಇಲ್ಲದಿರಲಿ.

ಲೈಂಗಿಕ ಸಂಬಂಧ ಹೊಂದುವುದು ಅಪರಾಧ

ಈ ಅಪರಾಧಕ್ಕೆ ೭ವರ್ಷಕ್ಕೆ ಕಡಿಮೆ ಇಲ್ಲದಂತೆ ಜೀವಾವಧಿ ಶಿಕ್ಷೆ ವಿಧಿಸುವುದು, ೧೦ ವರ್ಷಗಳವರೆಗೆ ಶಿಕ್ಷೆ ಅಥವಾ ದಂಡವನ್ನು ವಿಧಿಸಬಹುದಾಗಿದೆ. ಇದು ಮದುವೆಯಾದ ಹೆಂಡತಿಯಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಅನ್ವಯಿಸುತ್ತದೆ. ೧೨ ತುಂಬಿರದಿದ್ದರೆ ಮೇಲೆ ಹೇಳಿದ ಶಿಕ್ಷೆಗೆ ಗುರಿಯಾಗಬಹುದಾದ ಅಪರಾಧವಾಗಿರುತ್ತದೆ. ಒಂದು ವೇಳೆ ಮದುವೆಯಾದ ಹೆಂಡತಿಯಾಗಿದ್ದರೂ ಸಹ ಆಕೆಗೆ ೧೨–೧೫ ವರ್ಷಗಳವರೆಗೆ ವಯಸ್ಸಾಗಿದ್ದರೂ ಸಹ ಅದು ಅತ್ಯಾಚಾರವಾಗಿರುತ್ತದೆ. ಮತ್ತು ೨ ವರ್ಷದವರೆಗಿನ ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸುವ ಅಪರಾಧವಾಗುತ್ತದೆ.

ಕೆಲವು ವಿಶೇಷ ಸಂದರ್ಭಗಳಲ್ಲಿ ಅಂದರೆ

೧. ಪೋಲೀಸ್ ಅಧಿಕಾರಿಯು ಅತ್ಯಾಚಾರ ಮಾಡಿದ್ದರೆ

೨. ಪೋಲೀಸ್ ಠಾಣೆಯಲ್ಲಿ ಅತ್ಯಾಚಾರವಾಗಿದ್ದರೆ

೩. ತನ್ನ ರಕ್ಷಣೆಯಲ್ಲಿರುವ ಮಹಿಳೆಯ ಮೇಲೆ ಪೋಲೀಸ್ ಅತ್ಯಾಚಾರ ವೆಸಗಿದ್ದರೆ

೪. ಸಾರ್ವಜನಿಕ ನೌಕರನಾಗಿದ್ದು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡರೆ

೫. ಬಂಧಿಖಾನೆ (ಜೈಲಿನ) ಅಥವಾ ರಕ್ಷಣಾ ಗೃಹಗಳ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಸ್ಥೆಗಳ ಆಡಳಿತ ಆಧಿಕಾರಿಯಾಗಿದ್ದು ಅವರು ಅಧಿಕಾರ ದುರುಪಯೋಗ ತನ್ನ ನಿವಾಸಿಗಳ ಮೇಲೆ ಅತ್ಯಾಚಾರ ವೆಸಗಿದರೆ

೬. ಆಸ್ಪತ್ರೆಯ ಮೇಲ್ವಿಚಾರಕ ಸಿಬ್ಬಂದಿ ತನ್ನ ಅಧಿಕಾರ ದುರುಪಯೋಗದಿಂದ ನರ್ಸ್ ಅಥವಾ ಇತರೇ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರೆ

೭. ಗರ್ಭಿಣಿ ಮಹಿಳೆಯೆಂದು ಗೊತ್ತಿದ್ದು ಆತ್ಯಾಚಾರ ಮಾಡಿದರೆ

೮. ೧೨ ವರ್ಷ ದೊಳಗಿನ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿದರೆ

೯. ಸಾಮೂಹಿಕ ಅತ್ಯಾಚಾರ ಮಾಡಿದರೆ.

ಇವರೆಲ್ಲರಿಗೂ ೧೦ ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಶಿಕ್ಷೆಯನ್ನು ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸಬಹುದು. ಇಲ್ಲವಾದರೆ ಮೇಲೆ ಹೇಳಿದ ಶಿಕ್ಷೆ ಮತ್ತು ದಂಡವನ್ನು ವಿಧಿಸಬಹದಾಗಿದೆ. ಇಲ್ಲಿ ಅತ್ಯಾಚಾರ ಸಂದರ್ಭದಲ್ಲಿ ಮಹಿಳೆ ಒಪ್ಪಿಗೆ ನೀಡಿದ್ದರೂ ಅದು ಆಕೆಯ ಮುಕ್ತ ಒಪ್ಪಿಗೆ ಆಗುವುದಿಲ್ಲ. ಮತ್ತು ಆಕೆ ತನ್ನ ಒಪ್ಪಿಗೆ ಇರಲಿಲ್ಲವೆಂದು ಹೇಳಿದರೆ ನ್ಯಾಯಾಲಯ ಅದನ್ನು ನಂಬ ಬಹುದು. ಇದಲ್ಲದೇ ಹಲವಾರು ಸನ್ನಿವೇಶಗಳಲ್ಲಿ ಅಧಿಕಾರದಲ್ಲಿರುವ ಗಂಡಸು ತನ್ನ ಅಧೀನ ಕೆಲಸ ಮಾಡುವ ಮಹಿಳೆಯನ್ನು ತನ್ನ ಅಧಿಕಾರ ದುರುಪಯೋಗದಿಂದ ಪುಸಲಾಯಿಸಿ ಆಕೆಯೊಡನೆ ಸಂಭೋಗ ನಡೆಸಿದರೆ ಅದೂ ಸಹ ಶಿಕ್ಷಾರ್ಹ

ಅಪರಾಧವಾಗುತ್ತದೆ. ಇಲ್ಲಿ ಮೇಲೆ ಹೇಳಿದ ಅಪರಾಧ ಅತ್ಯಾಚಾರವಾಗದಿದ್ದರೂ ೫ ವರ್ಷ ಗಳವರೆಗಿನ ಜೈಲು ಮತ್ತು ದಂಡವನ್ನು ವಿಧಿಸಬಹದಾದ ಅಪರಾಧವಾಗುತ್ತದೆ.

ಹಾಗೆಯೇ ನ್ಯಾಯಾಲಯದಿಂದ ತೀರ್ಪು ಪಡೆದಿದ್ದು ಗಂಡ ಹೆಂಡತಿ ಬೇರೆ ಬೇರೆಯಾಗಿ ವಾಸಿಸುತ್ತಿದ್ದು ಆಕೆಯ ಸಮ್ಮತಿ ಇಲ್ಲದೇ ಸಂಭೋಗ ನಡೆಸಿದರೆ ಆತನಿಗೆ ೨ ವರ್ಷಗಳ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಹಾಗೆಯೇ ಯಾವುದೇ ಜೈಲು ರಿಮ್ಯಾಂಡ್ ಹೋಂ ಅಥವಾ ಮಹಿಳಾ ಮತ್ತು ಕಲ್ಯಾಣ ಸಂಸ್ಥೆಯಡಿ ಇರುವ ರಕ್ಷಣಾ ಗೃಹದಲ್ಲಿರುವ ಮಹಿಳೆಯನ್ನು ಸದರಿ ಸಂಸ್ಥೆಗಳ ಮೇಲ್ವಿಚಾರಕ ಅಥವಾ ವ್ಯವಸ್ಥಾಪಕ ತಪ್ಪುದಾರಿಗಳು ಅಥವಾ ಓಲಿಸಿಕೊಂಡು ಅವಳೊಡನೆ ಸಂಭೋಗಿಸಿದರೆ ಅದು ಅಪರಾಧ ಅಂತಹವನಿಗೆ ೫ ವರ್ಷಗಳ ವರೆಗಿನ ಜೈಲು ಮತ್ತು ಶಿಕ್ಷೆ ದಂಡವನ್ನು ವಿಧಿಸಬಹದಾಗಿದೆ. ಇದೇ ರೀತಿಯಲ್ಲಿ ಆಸ್ಪತ್ರೆ ವ್ಯವಸ್ಥಾಪಕ ಸಿಬ್ಬಂದಿಯಿಂದ ಆಸ್ಪತ್ರೆಯಲ್ಲಿರುವ ಯಾವುದೇ ಮಹಿಳೆಯೊಡನೆ ಲೈಂಗಿಕ ಸಂಬಂಧ ನಡೆದರೂ ಸಹ ಅಪರಾಧ ಮತ್ತು ಅಂತಹ ಅಪರಾಧಿಗೆ ೫ ವರ್ಷಗಳ ಕಾಲ ಕಾರಾಗೃಹ ಶಿಕ್ಷೆ ಮತ್ತು ದಂಡ ವಿಧಿಸಬಹುದು. ಈ ಎಲ್ಲಾ ಸಂದರ್ಭಗಳಲ್ಲಿ ಗಂಡಸು ತನ್ನ ಅಧಿಕಾರದ ದುರುಪಯೋಗ ಮಾಡಿಕೊಂಡಿರಬೇಕು. ಈ ಮೇಲೆ ತಿಳಿಸಿದಂತೆ ಮಹಿಳೆಯರ ಮೇಲೆ ದೌರ್ಜನ್ಯವೆಸಗಿದರೆ ಸರ್ಕಾರವು ಮೇಲಿನ ಕ್ರಮಗಳನ್ನು ಜಾರಿಗೊಳಿಸಬಹುದೆಂದು ತಿಳಿಸಲಾಗಿದೆ.

೪.೨.೩.೧. ಹೆಣ್ಣುಮಕ್ಕಳ ಹಾಗೂ ಸ್ತ್ರೀಯರ ಅಪಹರಣ ತಡೆ ಕಾಯ್ದೆ.

ಇಂದು ಮಹಿಳಾ ದೌರ್ಜನ್ಯಗಳ ವಿವಿಧ ರೂಪಗಳಲ್ಲಿ ನಡೆಯುತ್ತಿರುವುದನ್ನು ನಾವು ಕಾಣಬಹುದಾಗಿದೆ. ಅದರಲ್ಲಿ ಇಂದು ಹೆಣ್ಣು ಮಕ್ಕಳ ಹಾಗೂ ಸ್ತ್ರೀಯರ ಅಪಹರಣ ಬಹಳ ಯಥೇಚ್ಛವಾಗಿ ಇಂದು ಅದರಲ್ಲೂ ನಗರ ಪ್ರದೇಶಗಳಲ್ಲಿ ಈ ಘಟನೆ ಅತಿಯಾಗಿರುವುದು ನಾವು ಇಂದು ನೊಡಬಹುದು. ಇಂದು ಸ್ತ್ರೀಯರ ಅಪಹರಣ ಹಲವು ಬಗೆಯ ಉದ್ದೇಶಗಳಿಂದ ಕೂಡಿರುವುದನ್ನು ನಾವು ಗಮನಿಸಬಹುದು.

- ಕೊಲೆ ಮಾಡುವ ಉದ್ದೇಶದಿಂದ ವ್ಯವಹರಿಸಬಹುದು ಅಥವಾ ಅಪಹರಣ ಮಾಡಿರಬಹುದು (ಸೆಕ್ಷನ್ ೩೬೪) ಅಜೀವ ಕಾರಾಗೃಹ ವಾಸ ೧೦ವರ್ಷಗಳ ಕಠಿಣ ಕಾರಾವಾಸ ಮತ್ತು ಜುಲ್ಮಾನೆ)
- ವ್ಯಕ್ತಿಯನ್ನು ಗೋಪ್ಯವಾಗಿ ಮತ್ತು ಅಕ್ರಮವಾಗಿ ಬಂಧನದಲ್ಲಿಡುವ ಉದ್ದೇಶದಿಂದವ್ಯವಹರಿಸಬಹುದು ಅಥವಾ ಅಪಹರಿಸಬಹುದು.(೩೬೫) ೭ ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದು.
- ಮಹಿಳೆಯನ್ನು ಅವಳ ವಿವಾಹ ಇತ್ಯಾದಿಒತ್ತಾಯಿಸಲು ವ್ಯವಹರಿಸುವುದು ಅಥವಾ ಪ್ರೇರೇಪಿಸುವುದು(೩೬೬ ಸೆಕ್ಷನ್)ಮತ್ತು ಕಾನೂನಿನ ವಿರುದ್ಧ ಸಂಭೋಗ ನಡೆಸಲು ಅಪಹರಿಸಬಹುದು. ೧೦ ವರ್ಷಗಳ ಜೈಲುವಾಸ ದಂಡ ವಿಧಿಸಬಹದು.

- ಗುಲಾಮಗಿರಿ ಇತ್ಯಾದಿಗಳಿಗೆ ಒಳಪಡಿಸಲು ಅಪಹರಿಸಬಹುದು (೩೬೭) ೧೦ ವರ್ಷ ಜೈಲು ಶಿಕ್ಷೆ ದಂಢ ವಿಧಿಸಬಹುದು.)
- ೧೦ ವರ್ಷದೊಳಗಿನ ಮಗುವನ್ನು ಅದರ ಮೈಮೇಲಿರುವ ವಸ್ತುಗಳನ್ನು ಕಳುವು ಮಾಡಲು ಅಪಹರಿಸುವುದು(೩೬೯) ೭ ವರ್ಷವ ಜೈಲು ಮತ್ತು ಜುಲ್ಮಾನೆ ವಿಧಿಸತಕ್ಕದ್ದು
- ವೇಶ್ಯಾವೃತ್ತಿ ಇತ್ಯಾದಿ,ಉದ್ದೇಶಗಳಿಗಾಗಿ ಅಪ್ರಾಪ್ತ ವಯಸ್ಸಿನವರನ್ನು ಅಪಹರಿಸುವುದು(೩೭೨) ೧೦ ವರ್ಷಗಳ ಕಾಲದ ಜೈಲು ವಾಸ ವಿಧಿಸುತ್ತದೆ.
- ಬಲಾತ್ ಸಂಭೋಗಕ್ಕಾಗಿ (೩೭೬) ೭ ವರ್ಷ ಜೈಲು ಶಿಕ್ಷೆ ಅಜೀವ ಕಾರಾವಾಸ
- ಸಾಮೂಹಿಕ ಅತ್ಯಾಚಾರಕ್ಕೆ (ಅಪಹರಣ) ೧೦ ವರ್ಷ ಜೈಲು ಜುಲ್ಮಾನೆಯನ್ನು ವಿಧಿಸುತ್ತಾರೆ.[೧೩]

೪.೨.೩.೨. ದುಡಿಯುತ್ತಿರುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕಾಯ್ದೆ

ದುಡಿಯುತ್ತಿರುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯವೂ ಸಾಮಾನ್ಯವಾಗಿ ಅದು ಲೈಂಗಿಕ ಕಿರುಕುಳವಾಗಿರುತ್ತದೆ. ಇದು ಸಾರ್ವಜನಿಕ ವಲಯದ ಸಂಘಟಿತ ಮತ್ತು ಅಸಂಘಟಿತ ವಲಯವನ್ನು ಸಹ ಬಿಟ್ಟಿಲ್ಲ. ವಿದ್ಯಾವಂತ ಮತ್ತು ಅವಿದ್ಯಾವಂತ ಎಲ್ಲಾ ಮಹಿಳೆಯರ ಮೇಲೂ ನಡೆಯುತ್ತಿರುವ ತೀವ್ರ ಸ್ವರೂಪದ ದೌರ್ಜನ್ಯವಾಗಿದೆ. ಸಾರ್ವಜನಿಕ ವಲಯದ ಪ್ರಮುಖ ಭಾಗವಾಗಿರುವ ಉದ್ಯೋಗವಲಯದಲ್ಲಿ ಮಹಿಳೆ ಪಾಲ್ಗೊಳ್ಳುತ್ತಿರುವುದೆಬುಂದು ತೀರಾ ಇತ್ತೀಚಿನ ಸಂಗತಿಯೇನಲ್ಲ ಹಾಗೆಯೇ ಸಾರ್ವಜನಿಕ ವಲಯಗಳಲ್ಲಿನ ಹಿಂಸೆಗಳಲ್ಲಿ ಲೈಂಗಿಕ ಕಿರುಕುಳವು ಒಂದಾಗಿದೆ. ಮಹಿಳೆಯರು ಕುಟುಂಬ ಕುಟುಂಬದಾಚೆಗಿನ ಸಂದರ್ಭಗಳಲ್ಲಿ ಲೈಂಗಿಕ ದೌರ್ಜನ್ಯವನ್ನು ಸಾಕಷ್ಟು ಅಧ್ಯಯನಗಳು ಶೋಧಿಸಿವೆ. ಹಲವು ವರ್ಷಗಳಿಂದ ಮಹಿಳಾ ಸಂಘಟನೆಗಳು ಮಹಿಳೆಯರ ವಿರುದ್ಧ ನಡೆಯುವ ಹಿಂಸೆ ದೌರ್ಜನ್ಯದಂತಹ ಕೃತ್ಯಗಳ ವಿರುದ್ದ ಪ್ರತಿಭಟನೆಯನ್ನು ಮಾಡಿರುವುದು ಕಂಡು ಬರುತ್ತದೆ. ಭಾರತೀಯ ಸಂವಿಧಾನ ೧೯(೧) (ಜಿ) ಅನುಚ್ಛೇದಡಿಯಲ್ಲಿ ಯಾವುದೇ ವ್ಯಕ್ತಿಯುಮಾಡುವ ಅಥವಾ ಯಾವುದೇ ಉದ್ಯೋಗ ಅಥವಾ ವ್ಯಾಪಾರವನ್ನು ಕೈಗೊಳ್ಳುವ ಸ್ವಾತಂತ್ರ್ಯ ಒಂದು ಮುಲಭೂತ ಹಕ್ಕು ಎಂದು ಹೇಳಲಾಗುತ್ತದೆ. ಆದರೆ ಸರ್ವರಿಗೂ ಸಮಾನ ಎಂದು ಜಾರಿಯಲ್ಲಿರುವ ಸಂವಿಧಾನದಲ್ಲಾಗಲೀ ಇತರೇ ಯಾವುದೆ ಅಂಶಗಳಲ್ಲಾಗಲಿ ಮಹಿಳೆಯರನ್ನು ಒಳಗೊಂಡಿಲ್ಲ ಎಂಬುದು ಅಲಿಖಿತ ಶಾಸನದಂತಿದೆ, ಹಾಗೆಯೇ ಕೆಲಸದ ಸ್ಥಳಗಳಲ್ಲಿ ತೊಡಗುವ ಮಹಿಳೆಯರು ಒಳಗಾಗುವಲೈಂಗಿಕ ಕಿರುಕುಳವು ಮಹಿಳೆಯರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆಯೆಂದು ಹೇಳಬಹುದು.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾಯ್ದೆ.

ಮಹಿಳೆಯರಿಗೆ ಉದ್ಯೋಗಾವಕಾಶಗಳು ಹೆಚ್ಚುತ್ತಿರುವಂತೆ ಇಂದು ಕೆಲಸ ಮಾಡುವ ಸ್ಥಳದಲ್ಲಿ ಅವರ ಮೇಲಿನ ಲೈಂಗಿಕ ಕಿರುಕುಳಗಳು ಹೆಚ್ಚಾಗುತ್ತಿದೆ. ಇದು ಬೀಡಿ ಕಟ್ಟುವ, ಕೃಷಿ ಕೂಲಿ ಕಾರ್ಮಿಕ ಮಹಿಳೆಯರಿಂದ ಹಿಡಿದು ರೂಪೇನ್, ದೇವ್‌ಬಜಾಲ್, ಅಂತಹ ಐ.ಎ.ಎಸ್. ಅಧಿಕಾರಿಯನ್ನು ಬಿಟ್ಟಿದ್ದಲ್ಲ. ಬೀಡಿ ಕಟ್ಟುವ ಮಹಿಳೆಯರು ಸಹಿಸಿಕೊಂಡರೆ, ರೂಪೇನೆ ಅಂತವರು ಪ್ರತಿಭಟಿಸುತ್ತಿದ್ದಾರೆ. ಸಾರ್ವಜನಿಕ ಸಮಾರಂಭವೊಂದರಲ್ಲಿ ಐ.ಎ.ಎಸ್.'ಅದಿಕಾರಿ ರೂಪೇನ್‌ರ ಹಿಂಭಾಗವನ್ನು ಪೋಲೀಸ್ ಇಲಾಖೆಯ ಅಧಿಕಾರಿ ಐ.ಪಿ.ಎಸ್. ಗಿಲ್ ಮುಟ್ಟಿದ್ದನ್ನು ಪ್ರತಿಭಟಿಸಿ ರೂಪೇನ್ ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯ ಪಡೆಯಲು ಹೊರಾಟವನ್ನು ಮಾಡಿದರು.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ದೇಶದ ಗಮನವನ್ನು ಸೆಳೆದಿದ್ದು ಭಾಂವ್ರಿದೇವಿ ಪ್ರಕರಣ. ಈ ಪ್ರಕರಣವು ವಿಶಾಖಾ ತೀರ್ಪು ಎಂಬ ಹೆಸರಿನಿಂದ ಪ್ರಚಾರವನ್ನು ಪಡೆದಿದೆ. ರಾಜಸ್ಥಾನದ ಭ್ರಾಂವಿದೇವಿ ಸಾಥಿನ್ ಆಗಿ, ಅಂದರೆ ಸಮಾಜ ಸೇವಾ ಕಾರ್ಯಕರ್ತೆಯಾಗಿ, ಕೆಲಸ ಮಾಡುತ್ತಿದ್ದಳು. ಮಹಿಳೆಯರನ್ನು ಸಂಘಟಿಸುವ ಹಾಗೂ ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳನ್ನು ನಿವಾರಿಸುವಲ್ಲಿ ನಿರತಳಾದಳು. ರಾಜಸ್ಥಾನದ ಪ್ರತಿಷ್ಟಿತ ಠಾಕೂರ್ ಮನೆತನವೊಂದರಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದುವೆ ಮಾಡುತ್ತಿದ್ದಾಗ ಭಾಂವ್ರಿದೇವಿ ಅದನ್ನು ತಡೆಯುವಲ್ಲಿ ಯಶಸ್ವಿಯಾದಳು. ಈ ಕಾಯ್ದೆಯಿಂದ ಕುಪಿತರಾದ ಠಾಕೂರ್ ಮನೆತನದವರು ಭ್ರಾಂವಿದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದರು. ಭ್ರಾಂವಿದೇವಿ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಳು. ನ್ಯಾಯಾಲಯವು ವಿಚಾರಣೆಯನ್ನು ನಡೆಸಿ "ಭಾಂವ್ರಿದೇವಿಯ ಮೇಲೆ ಅತ್ಯಾಚಾರ ನಡೆದಿಲ್ಲ. ಏಕೆಂದರೆ ಠಾಕೂರ್‌ರರು ಮೇಲ್ವರ್ಗದವರು, ಭಾಂವ್ರಿದೇವಿ ಕೆಳವರ್ಗಕ್ಕೆ ಸೇರಿದವಳು, ಆದ್ದರಿಂದ ಠಾಕೂರರು ನಿರಪರಾಧಿಗಳು' ಎಂದು ತೀರ್ಪು ನೀಡಿತು. ಭಾಂವ್ರಿದೇವಿ ಬೆಂಬಲಕ್ಕಿದ್ದ ಮಹಿಳಾ ಸಂಘಟನೆಗಳು ನ್ಯಾಯಾಲಯದ ಈ ತೀರ್ಪನ್ನು ಪ್ರತಿಭಟಿಸಿದರು. ಈ ಪ್ರಕರಣದ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿ ಭಾಂವ್ರಿದೇವಿ ಪರವಾಗಿ ತೀರ್ಪು ನೀಡಿತು. ಈ ತೀರ್ಪು ವಿಶಾಖಾ ಜಡ್ಜ್‌ಮೆಂಟ್ ಎಂದು ಪ್ರಸಿದ್ದಿಯನ್ನುಪಡೆಯಿತು.

ಸುಪ್ರೀಂ ಕೋರ್ಟ್ ನೀಡಿದ ವಿಶಾಖ ತೀರ್ಪಿನಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಯಲು ಕೆಲವು ಮಾರ್ಗದರ್ಶಿ ಸೂತ್ರಗಳನ್ನುನೀಡಿತು. ಇದರ ಪ್ರಕಾರ ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುವುದು ಅಪರಾಧ. ಲೈಂಗಿಕ ಕಿರುಕುಳ ಎಂದರೆ, ಅನವಶ್ಯಕವಾಗಿ ದೇಹವನ್ನು ಸ್ಪರ್ಶಿಸುವುದು, ಲೈಂಗಿಕ ಸಂಪರ್ಕಕ್ಕಾಗಿ ಒತ್ತಾಯಿಸುವುದು, ಬಡ್ತಿ ನೀಡುವ ಇಲ್ಲವೆ ಸಂಬಳ ಹೆಚ್ಚು ಮಾಡುವ ಮೊದಲಾದ ಆಮಿಷಾಗಳನ್ನೊಡ್ಡಿ ಲೈಂಗಿಕ ಸಂಪರ್ಕ ಹೊಂದುವುದು.

ದ್ವಂದ್ವಾರ್ಥ ಅಶ್ಲೀಲ ಅರ್ಥದ ಮಾತುಗಳನ್ನಾಡುವುದು, ನಗ್ನ ಚಿತ್ರಗಳನ್ನು ತೋರಿಸುವುದು ಇತ್ಯಾದಿಗಳು ಲೈಂಗಿಕ ಕಿರುಕುಳ ವ್ಯಾಪ್ತಿಯೊಳಗೆ ಸೇರಿಕೊಳ್ಳುತ್ತದೆ.[೧೪]

ಲೈಂಗಿಕ ಕಿರುಕುಳದ ಅರ್ಥ

- ದೈಹಿಕ ಸ್ಪರ್ಶ ಮತ್ತು ಲೈಂಗಿಕವೆನಿಸುವಂತಹ ಆಂಗಿಕ ಅಭಿನಯ ಅಥವಾ ಮಾತು.
- ಲೈಂಗಿಕವಾಗಿ ತೃಪ್ತಗೊಳಿಸುವಂತೆ ಒತ್ತಾಯ ಅಥವಾ ಮನವಿ.
- ಲೈಂಗಿಕವೆನಿಸಬಹುದಾದಂತಹ ಅಭಿಪ್ರಾಯಗಳ ಅಭಿವ್ಯಕ್ತ
- ಅಶ್ಲೀಲ ಸಾಹಿತ್ಯ ಅಥವಾ ಪತ್ರಗಳನ್ನು ತೋರಿಸುವುದು.
- ಲೈಂಗಿಕ ಸ್ವರೂಪ ಇತರ ಯಾವುದೇ ಅನುಚಿತವಾದ ಆಂಗಿಕ, ಶಾಬ್ದಿಕ ಅಥವಾ ಶಾಬ್ದಿಕವಲ್ಲದ ನಡವಳಿಕೆ ಇತ್ಯಾದಿ ಅಂಶಗಳನ್ನು ಲೈಂಗಿಕ ಕಿರುಕುಳ ವ್ಯಾಖ್ಯಾನದಡಿಯಲ್ಲಿ ವಿವರಿಸಿದೆ.

''ಕೆಲಸದ ಸ್ಥಳ'' ವೆಂದರೆ

೧. ಯಾವುದೇ ವಿಭಾಗ, ಸಂಘಟನೆ, ಎಂಟರ್ ಪ್ರೈಸಸ್, ಸಂಸ್ಥೆ, ಕಛೇರಿ, ಶಾಖೆ, ಅಥವಾ ಘಟಕಗಳು ಅದು ಸ್ವಯಂ ಸ್ಥಾಪಿತ, ಹಣಕಾಸಿನ ಸೌಲಭ್ಯವನ್ನು ಪಡೆದು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅಕಾರ ನಿಗದಿತ ಅಥವಾ ಸ್ಥಳೀಯ ಸ್ವಾಧೀನ ಪಡೆದಿದ್ದು ಅಥವಾ ಸರ್ಕಾರದಿಂದ ಸ್ಥಾಪಿತ ಕಂಪನಿಗಳು ಅಥವಾ ಸಹಕಾರ ಸಂಘಗಳು ಇತ್ಯಾದಿ.

೨. ಯಾವುದೇ ಖಾಸಗಿವಲಯ, ಸಂಘಟನೆ, ಸಂಸ್ಥೆ, ಸೊಸೈಟಿ, ಘಟಕಗಳು ಸೇವೆಯನ್ನು ಒದಗಿಸುವ ಶಾಖೆಗಳು, ವ್ಯವಹಾರ, ಪ್ರೊಫೇಷನಲ್, ಶೈಕ್ಷಣಿಕ, ವೃತ್ತಿಪರ, ಕೈಗಾರಿಕ ಸಂಸ್ಥೆಗಳು ಅಥವಾ ಹಣಕಾಸಿನ ಚಟುವಟಿಕೆಗಳನ್ನೊಳಗೊಂಡ ಉತ್ಪಾದನೆ, ವಿತರಣೆ, ಮಾರಾಟ, ಹಂಚಿಕೆ ಅಥವಾ ಸೇವೆಗಳನ್ನು ಒಳಗೊಂಡಿರುವಂತಹವು.

೩. ಮನೆ ಅಥವಾ ವಾಸಸ್ಥಳ.

೪. ಉದ್ಯೋಗ ಅಥವಾ ಕೆಲಸದ ತರಬೇತಿಗೆಂದು, ಕೆಲಸಗಾರರು ಭೇಟಿ ನೀಡುವ ಯಾವುದೇ ಸ್ಥಳವನ್ನು ಸಹ ಕೆಲಸದ ಸ್ಥಳವೆಂದು ಹೇಳಲಾಗುತ್ತದೆ.

೫. ಅಸಂಘಟಿತವಲಯವೆಂದು ಕರೆಯಲಾಗುವ ಮತ್ತು ಅದರಡಿಯಲ್ಲಿ ಕೆಲಸ ಮಾಡುವವರನ್ನು ಕೆಲಸದ ಸ್ಥಳದ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಪರಿಗಣಿಸಿದೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ.

"ಸ್ತ್ರೀ-ಪುರುಷರ ಸಮಾನತೆ ಎಂಬುದರಲ್ಲಿ ಲೈಂಗಿಕ ಕಿರುಕುಳದಿಂದ ರಕ್ಷಣೆ ಹಾಗೂ ಗೌರವಯುತವಾಗಿ ಕೆಲಸ ಮಾಡುವ ವಾತಾವರಣವನ್ನು ಹೊಂದಿರುವ ಹಕ್ಕು ಸೇರುತ್ತದೆ. ಇದು ಸಾರ್ವತ್ರಿಕವಾಗಿ ಮಾನ್ಯತೆ ಪಡೆದಿರುವ ಮುಲಭೂತ ಮಾನವ ಹಕ್ಕು. ಈ ಹಕ್ಕನ್ನು ಚಲಾಯಿಸಲು ಅಗತ್ಯವಾದ, ಸಮಾನ ಕನಿಷ್ಠ

ಅಗತ್ಯತೆಗೆ ಜಾಗತಿಕ ಸಮ್ಮತಿ ದೊರೆತಿದೆ. ಆದ್ದರಿಂದ ಈ ಸೂತ್ರಗಳ ರಚನೆಯಲ್ಲಿ ಅಂತರಾಷ್ಟ್ರೀಯ ಒಡಂಬಡಿಕೆ ಹಾಗೂ ಸೂತ್ರಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತವೆ." ಈ ಬಗೆಯ ಸಮಗ್ರ ಶಾಸನವನ್ನು ಶೀಘ್ರವಾಗಿ ರಚಿಸಬೇಕೆಂದು ಸಹ ತೀರ್ಪಿನಲ್ಲಿ ತಿಳಿಸಬೇಕಾಗಿದೆ. ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳದ ವಿರುದ್ಧ, ಮಹಿಳೆಯರ ರಕ್ಷಣಾ ಕಾಯ್ದೆ ೨೦೦೭ ಎಂಬ ಶೀರ್ಷಿಕೆಯನ್ನು ಸೆಕ್ಷನ್ ಒಂದರಲ್ಲಿ ಸೂಚಿಸಲಾಗಿದೆ. ಈ ಕಾಯ್ದೆಯ ನಿಯಮಗಳು ಭಾರತದುದ್ದಕ್ಕೂ ಅನ್ವಯಿಸುತ್ತದೆ. ಕೇಂದ್ರ ಸರ್ಕಾರದ ಒತ್ತಡದಿಂದ ಬಂದ ಸರ್ಕಾರಿ ಪ್ರಕಟಣೆಯು ಪತ್ರಿಕೆಯ ವಿಜ್ಞಾಪನಾ ಪತ್ರವಾಗಿ ಇದನ್ನು ರೂಪಿಸಲಾಗಿದೆ.

ದೂರು ನಿರ್ವಹಣಾ ಸಮಿತಿಯ ರಚನೆ.

ಮಹಿಳೆಯರು ನೆಮ್ಮದಿಯಿಂದ ಕೆಲಸ ಮಾಡುವ ವಾತಾವರಣವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಒಂದು ಸಮಿತಿಯನ್ನು ರಚಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ಯಾವುದೇ ಸಂಸ್ಥೆ, ಕಂಪೆನಿ ಕಾರ್ಖಾನೆಗಳಿಗಿರಲಿ 'ಲೈಂಗಿಕ ಕಿರುಕುಳ ದೂರು ನಿರ್ವಹಣ ಸಮಿತಿಯನ್ನು ರಚಿಸಬೇಕು. ಸಮಿತಿಯಲ್ಲಿ ಕನಿಷ್ಟ ೫೦% ಮಹಿಳೆಯರಿರಬೇಕು. ಸಮಿತಿಯ ಮುಖ್ಯಸ್ಥರು ಮಹಿಳೆಯರಾಗಬೇಕು. ಮಹಿಳೆಯರ ಬಗ್ಗೆ ಕಾಳಜಿ ಇರುವ ಸಾಮಾಜಿಕ ಸೇವಾ ಕಾರ್ಯಕರ್ತೆಯರೊಬ್ಬರು ಸದಸ್ಯರಾಗಿರಬೇಕು. ಕಿರುಕುಳ ಅನುಭವಿಸುವ ಯಾವುದೇ ಮಹಿಳೆಯು ಈ ಸಮಿತಿಗೆ ದೂರು ನೀಡಬಹುದು. ಸಮಿತಿಯು ನಿರ್ದಿಷ್ಟ ಅವಧಿಗೆ ಸಭೆ ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಮಾಲೀಕರು ಮಹಿಳೆಯರು ಕೆಲಸ ಮಾಡಲು ಸೂಕ್ತವಾತಾವರಣವನ್ನು ಕಲ್ಪಿಸುವಂತೆ ನಿರ್ದೇಶಿಸಬೇಕು.[೨೫] ಈ ಮೇಲೆ ವಿವರಿಸಿದಂತೆ ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಮಾಲೀಕರು ಮತ್ತು ಉನ್ನತ ಹುದ್ದೆಯಲ್ಲಿರುವವರು ತನ್ನ ಹತೋಟಿ ಮತ್ತು ಕೈ ಕೆಳಗೆ ಕೆಲಸ ಮಾಡುವ ಮಹಿಳೆಯರಿಗೆ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿನ ಮಹಿಳೆಯರಿಗೆ ಕೆಲಸದಲ್ಲಿ ಹೆಚ್ಚು ಒತ್ತಡ ನೀಡುವುದು. ಸರಿಯಾದ ಸಮಯಕ್ಕೆ ಸಂಬಳನೀಡದೆ ಇರುವುದು ಬಡ್ತಿ ನೀಡುವಲ್ಲಿ ವಿಳಂಬ ಮಾಡುವುದು ಈ ರೀತಿ ಹಿಂಸೆ ನೀಡಿ ಅವರನ್ನೇ ಲೈಂಗಿಕ ಕ್ರಿಯೆಗೆ ಅಹ್ವಾನಿಸುವುದು. ಅವರು ಅಧಿಕಾರಿಗಳಿಗೆ ಸಮ್ಮತಿಸದಿದ್ದಾಗ ಅವರಿಗೆ ದಿನ ನಿತ್ಯ ಲೈಂಗಿಕ ಕಿರುಕುಳವನ್ನು ನೀಡುವುದನ್ನು ನಾವು ಇಂದು ದಿನ ನಿತ್ಯ ಗಮನಿಸಬಹುದು. ಇದರಿಂದ ಇದನ್ನು ಗಮನಿಸಿದ ಸರ್ಕಾರವು ಇದನ್ನು ತಡೆಯಲು ಶಾಸನಾತ್ಮಕ ಕಾನೂನನ್ನು ಜಾರಿಗೊಳಿಸಿದೆ. ಭಾರತೀಯ ದಂಡಸಂಹಿತೆಯ ಪ್ರಕಾರ ಕಾಯ್ದೆ ೩೫೪ ಪ್ರಕಾರ ಎರಡು ವರ್ಷಗಳವರೆಗಿನ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಲ್ಲೂ ದಂಡಿತನಾಗತಕ್ಕದ್ದು.

೪.೨.೩.೩.ಹೆಣ್ಣು ಮಕ್ಕಳನ್ನು ಮತ್ತು ಮಹಿಳೆಯರನ್ನು ಚುಡಾಯಿಸುವ ತಡೆ ಕಾಯ್ದೆ

ಯಾವುದೇ ಒಬ್ಬ ವ್ಯಕ್ತಿಯೂ ಮಹಿಳೆಯ ಮರ್ಯಾದೆಗೆ ಅಪಮಾನ ಮಾಡುವ ಹಾಗಿಲ್ಲ. ಆ ಉದ್ಧೇಶದಿಂದ ಆಕೆ ಕೇಳಿಸಿಕೊಳ್ಳಲಿ ಎಂದು ಯಾವುದೇ ಮಾತು ಹೇಳುವುದು, ಅಥವಾ ಆಕೆ ನೋಡಲಿ ಎಂದು

ಯಾವುದೇ ಫ಼ನ್ನೆ ಮಾಡುವುದು, ಅಥವಾ ಅಸಭ್ಯ ಸಂಗತಿಗಳೊಂದಿಗೆ ಪತ್ರ ಬರೆಯುವುದು ಇರಬಹುದು, ಪೋಲೀ ಮಾತನಾಡುವುದು ಚುಡಾಯಿಸುವುದು ಎಲ್ಲವು ಅಪರಾಧಗಳಾಗುತ್ತವೆ. ಮಾನ ಭಂಗಕ್ಕೆ ಯತ್ನಿಸಿದರೆ ಮಾನ ಭಂಗ ಮಾಡುವ ಉದ್ದೇಶದಿಂದ ಬಲ ಪ್ರಯೋಗ ಮಾಡುವುದು ಅಥವಾ ಅಕ್ರಮವಾಗಿ ಮಾಡುವುದು ಅಪರಾಧ, ಅಂತಹವರಿಗೆ ೨ವರ್ಷ ಜೈಲು ಶಿಕ್ಷೆ ದಂಡವನ್ನು ಮತ್ತು ಎರಡನ್ನೂ ವಿಧಿಸಬಹುದು. ಇಲ್ಲಿ ಮಹಿಳೆ ಎಂದರೆ ಯಾವ ವಯಸ್ಸಿನ ಸ್ತ್ರೀಯೂ ಆಗಬಹುದು, ಹೆಣ್ಣು ಮಗುವನ್ನು ಸಹ ಮಹಿಳೆ ಎಂದೇ ಪರಿಗಣಿಸುತ್ತಾರೆ.

೪.೨.೩.೪. ಆ್ಯಸಿಡ್ ಪ್ರಕರಣಗಳ ತಡೆ ಕಾಯ್ದೆ (ಕರ್ನಾಟಕದಲ್ಲಿ ಆ್ಯಸಿಡ್ ಪ್ರಕರಣದ ಸ್ವರೂಪ)

ಶತಮಾನಗಳಿಂದಲೂ ಸ್ತ್ರೀಯರ ದೇಹವನ್ನು ಲೈಂಗಿಕ ಶೋಷಣೆಗೆ ಗುರಿ ಮಾಡುವ ಪ್ರವೃತ್ತಿ ಎಲ್ಲಾ ಸಮಾಜಗಳಲ್ಲಿ ಕಂಡುಬರುತ್ತದೆ. ಆಕೆ ದೈಹಿಕವಾಗಿ ದುರ್ಬಲಳು ಎಂಬ ನೆಪವನ್ನು ಮುಂದಿಟ್ಟುಕೊಂಡು ಆಕೆಯ ದೇಹವನ್ನು ಹಿಂಸೆ ಮತ್ತು ಕಾರ್ಯಗಳಿಗೆ ವಸ್ತುವನ್ನಾಗಿ ಮಾಡಿ ಅವಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸಿರುವುದು ಪುರುಷ ಪ್ರಧಾನ ಸಮಾಜದ ಒಂದು ಪ್ರವೃತ್ತಿ ಪುರುಷನಿಗೆ ಸ್ತ್ರೀಯ ದೇಹ ಹಾಗೂ ಮನಸ್ಸುಗಳೆರಡರ ಮೇಲೂ ಅಧಿಕಾರವಿದೆ ಎಂಬ ನಂಬಿಕೆ ಬಹುಕಾಲದಿಂದಲೂ ಪ್ರಚಲಿತ ವಾಗಿರುವುದರಿಂದ ಆಕೆಯನ್ನು ದಮನ ಮಾಡಲು ಅನೇಕ ಪುರುಷರಿಗೆ ಮೊದಲು ಗೋಚರಿಸುವುದು ಸ್ತ್ರೀದೇಹ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಹಿಳೆಯರ ವಿರುದ್ಧದ ಅಪರಾಧಗಳ ಮಾಹಿತಿಯನ್ನು ಅವಲೋಕಿಸಿದಾಗ ಮಹಿಳೆಯರ ವಿರುದ್ಧದ ಅಪರಾಧಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ನಾವು ನೋಡಬಹದಾಗಿದೆ. ರಾಜ್ಯ ಅಪರಾಧ ದಾಖಲೆ ವಿಭಾಗದ ವರದಿಯಂತೆ ಕ್ರಮವಾಗಿ ೧೯೯೯ ರಲ್ಲಿ ೬೪೫೩ ೨೦೦೦ ರಲ್ಲಿ ೬೫೫೮ ಮಹಿಳೆಯರ ವಿರುದ್ಧ ವಿವಿಧ ಬಗೆಯ ಅಪರಾಧಗಳನ್ನು ದಾಖಲಿಸಿದಾಗ ಆ್ಯಸಿಡ್ ದಾಳಿಗೆ ಸಂಬಂಧಿಸಿದಂತೆ ಅವಲೋಕಿಸಿದಾಗ ಕರ್ನಾಟಕದಲ್ಲಿ ೧೯೯೯ ರಲ್ಲಿ ಇಲ್ಲಿಯವರೆಗೆ ೬೫ ಆ್ಯಸಿಡ್ ಪ್ರಕರಣಗಳು ನಡೆದಿವೆ. ಎಂದು ಮತ್ತು ಹೋರಾಟ ಸಂಸ್ಥೆ (CSAAAW) ತನ್ನ ವರದಿಯಲ್ಲಿ ದಾಖಲಿಸಿದೆ.

ಕರ್ನಾಟಕದಲ್ಲಿ ಆ್ಯಸಿಡ್ ದಾಳಿಗೊಳಗಾದ ಮಹಿಳೆಯರು ವಿವಿಧ ವರ್ಗ ಜಾತಿ ಪ್ರದೇಶಗಳಿಂದ ಬಂದವರಾಗಿದ್ದಾರೆ. ಅವರ ಉದ್ಯೋಗ, ಶಿಕ್ಷಣ. ವಿವಿಧ ಸ್ವರೂಪದ್ದು. ಆ್ಯಸಿಡ್ ದಾಳಿಗೆ ಒಳಗಾದ ತಾರಾ ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ ಪ್ರಾಥಮಿಕ ಶಿಕ್ಷಕಿ, ನೂರ್‌ಜಹಾನ್ ಬೆಂಗಳೂರಿನ ಕಂಠೀರವ ನಗರ, ಕೊಳಗೇರಿಯಲ್ಲಿ ಟೀ ಅಂಗಡಿ ನಡೆಸುತ್ತಿದ್ದರು. ಮತ್ತು ಶೃತಿಇನ್ನೂ ವಿದ್ಯಾರ್ಥಿನಿ ಮತ್ತಿಬ್ಬರು ಮಹಿಳೆಯರು ಪ್ರತಿಷ್ಟಿತ ರಾಜಕಾರಣ ಕುಟುಂಬಕ್ಕೆ ಸೇರಿದವರು ಹಿಗೆ ಬಹುಸ್ಥರದ ಹಿನ್ನಲೆಯನ್ನು ಹೊಂದಿದ್ದಾರೆ. ಬೆಂಗಳೂರಿನಂತ ಮಹಾನಗರ, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ರಾಯಚೂರು ಜಿಲ್ಲೆಯ ಅಲ್ಲೆಸೂಗೂರು ಉತ್ತರಕನ್ನಡ ಜಿಲ್ಲೆಯ ಬನವಾಸಿ, ಕುಮುಟ, ಬೆಳಗಾವಿ ಜಿಲ್ಲೆಯ ಅರ್ಥಶಿ ಸೇರಿದಂತೆ ಕರ್ನಾಟಕ ಸಣ್ಣ ಪುಟ್ಟ

ಹಳ್ಳಿಗಳಲ್ಲಿ ಘಟನೆಗಳು ನಡೆದಿವೆ. ಆದ್ದರಿಂದ ಈ ಸಮಸ್ಯೆಗಳು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ. ಈ ದಾಳಿಯಲ್ಲಿ ಶೇಕಡ ೮೦ ರಷ್ಟು ಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿಯೇ ನಡೆದಿವೆ.[೧೬]

ಕಳೆದ ೫ ವರ್ಷಗಳಿಂದಿಚೆಗೆ ಆ್ಯಸಿಡ್ ಪ್ರಕರಣಗಳು ಹೆಚ್ಚುತ್ತಿರುವುದು ಸಾರ್ವಜನಿಕರಲ್ಲಿ ಗಾಬರಿ ಹುಟ್ಟಿಸುವ ಸಂಗತಿಯಾಗಿದೆ. ಪ್ರೀತಿಯನ್ನು ನಿರಾಕರಿಸುವ ಮತ್ತು ತನ್ನ ಹೆಂಡತಿ ತನ್ನ ನಿಯಂತ್ರಣಕ್ಕೆ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ಇಂತಹ ಕೃತ್ಯಗಳು ಜರುಗುತ್ತಿವೆ. ಇಂತಹ ಪ್ರಕರಣಗಳು ಹೆಣ್ಣು ಮಕ್ಕಳನ್ನು ಹೊರಗೆ ಕಾಲಿಡಲು ಹೆದರುವಂತೆ ಮಾಡುತ್ತವೆ. ಆ್ಯಸಿಡ್ ದಾಳಿಯಂತಹ ಕೃತ್ಯಗಳಿಗೆ ಪ್ರತ್ಯೇಕವಾದ ಕಾನೂನನ್ನು ರೂಪಿಸುವಲ್ಲಿ ಪ್ರಸ್ತುತ ಇದನ್ನೊಂದು ಕೂಲೆಯ ಪ್ರಯತ್ನವೆಂದು ಪರಿಗಣಿಸಿದೆ. ಈ ಅಪರಾಧಕ್ಕೆ ೧೦ ವರ್ಷಕ್ಕೆ ಕಡಿಮೆ ಇಲ್ಲಸ ಕಾರಗೃಹವಾಸ ಮತ್ತು ಜುಲ್ಮಾನೆ ಹಾಗೂ ವಿಧಿಸಲಾಗುವ ಜುಲ್ಮಾನೆಯ ಮೊತ್ತ ಆಕೆಯ ಚಿಕಿತ್ಸೆಗೆ ಅಗತ್ಯವಾಗಿರುವಷ್ಟು ಮೊತ್ತವಾಗಿರಬೇಕು. ಹಾಗೆ ವಸೂಲು ಮಾಡಿದ ಮೊತ್ತವನ್ನು ಆಕೆಗೆ ಕೊಡಬೇಕು.

೪.೨.೩.೫. ಮಹಿಳೆಯರಿಗೆ ಚಿತ್ರವನ್ನು ಅಶ್ಲೀಲವಾಗಿ ಪ್ರದರ್ಶಿಸುವ ತಡೆ ಕಾಯ್ದೆ.

ಈ ವ್ಯಾಪಾರಿ ಪ್ರಪಂಚದಲ್ಲಿ ವಸ್ತುಗಳ ತಯಾರಕರು ಅವುಗಳನ್ನು ಸುಲಭವಾಗಿ ಮಾರಾಟ ಮಾಡಲು ಜಾಹೀರಾತು ಮತ್ತು ಪ್ರಚಾರ ನೀಡುವುದು ರೂಢಿ, ಆದರೆ ಈ ಎಲ್ಲಾ ಜಾಹೀರಾತುಗಳಲ್ಲಿ ಅನಗತ್ಯವಾಗಿ ಆಕೆ ಅಂಗಗಳ ಪ್ರದರ್ಶನ ಮಾಡುವುದು ನಮ್ಮ ಸಮಾಜದಲ್ಲಿ ಮಹಿಳೆ ವ್ಯಕ್ತಿತ್ವದ ದುರುಪಯೋಗ ಮಾಡಿಕೊಳ್ಳುತ್ತಿರುವ ವ್ಯಾಪಾರಿಬುದ್ದಿಗೆ ತನ್ಮೂಲಕ ಆಕೆಯ ವ್ಯಕ್ತಿತ್ವವನ್ನು ಕೀಳು ಮಟ್ಟದಲ್ಲಿ ಪ್ರತಿಬಿಂಬಿಸುವುದಕ್ಕೆ ಕಡಿವಾಣವಿಲ್ಲದಂತಾಗಿದೆ. ಹೀಗೆ ಯಾವುದೇ ರೀತಿಯ ಜಾಹಿರಾತಿನಲ್ಲಾಗಲಿ ಪತ್ರಿಕೆಯಲ್ಲಾಗಲಿ ಚಿತ್ರದಲ್ಲಿ ಮತ್ತು ಇನ್ನಾವುದೇ ರೀತಿಯ ಮಹಿಳೆಯನ್ನು ಅಸಭ್ಯವಾಗಿ ಪ್ರದರ್ಶಿಸುವುದು ಅಪರಾಧವಾಗುತ್ತದೆ. ಇದಕ್ಕೆ ೨ ವರ್ಷಗಳವರೆಗಿನ ಜೈಲು ಶಿಕ್ಷೆ ಮತ್ತು ೨ ಸಾವಿರ ರೂಗಳ ದಂಡವನ್ನು ವಿಧಿಸಬಹುದಾಗುತ್ತದೆ. ಇದೇ ಅಪರಾಧವನ್ನು ಎರಡನೇ ಬಾರಿ ಮಾಡಿದರೆ ಶಿಕ್ಷೆಯು ೫ ವರ್ಷಗಳವರೆಗಿನ ಜೈಲು ವಾಸ ಮತ್ತು ೧೦ ಸಾವಿರ ರೂಪಾಯಿಗಳವರೆಗೆ ದಂಡಕ್ಕೂ ಗುರಿಯಾಗುತ್ತಾರೆ.[೧೭]

೪.೨.೩.೬.ಮಹಿಳೆಯರ (ಹೆಣ್ಣು ಮಕ್ಕಳ) ಮಾರಾಟ ತಡೆ ಕಾಯ್ದೆ.

ಮಹಿಳೆಯರ ಮಾರಾಟದ ಜಾಲಕ್ಕೆ ಕನಿಷ್ಟ ಪಕ್ಷ ಎರಡು ಆಯಾಮಗಳಿವೆ. ಮನೆಗೆಲಸಕ್ಕಾಗಿ ಮಾರಾಟ ಮಾಡುವುದು ಮತ್ತು ವೇಶಾವೃತ್ತಿಗಾಗಿ ಮಾರಾಟ ಮಾಡುವುದು. ಮನೆವರ್ತೆ ಕೆಲಸಗಳಿಗಾಗಿ ನಿಗದಿತ ಮಹಿಳೆಯರನ್ನು ಅಥವಾ ಹುಡುಗಿಯರನ್ನು ವಸ್ತುಶಃ ಮಾರಾಟ ಮಾಡುವುದು ಮಾರಾಟ ಜಾಲದ ಮೊದಲ ನೆಲೆಯಾಗಿದೆ. ದೇಶದ ಹಿಂದುಳಿದ ಅಥವಾ ಬರಗಾಲಗಳಿಗೆ ಸುಲಭ ತುತ್ತಾಗುವ ಸಾಂಭವ್ಯ ಪ್ರದೇಶಗಳಲ್ಲಿ

ಈ ವಿದ್ಯಮಾನವು ವ್ಯಾಪಕವಾಗಿದೆ. ಇದನ್ನು ಮಾಧ್ಯಮಗಳು ಅನೇಕ ಬಾರಿ ಬಯಲಿಗೆಳೆದಿವೆ ಮಾತ್ರವಲ್ಲ, ಕೆಲವು ರೂಪಾಯಿಗಳಿಗೆ ತನ್ನ ಹೆಂಡತಿಯನ್ನು ಪತ್ರಕರ್ತನೊಬ್ಬನಿಗೆ ಗಂಡನೇ ಮಾರಿದ ನೈಜ ಘಟನೆಯನ್ನು ಆಧರಿಸಿ 'ಕಮಲ' ಎಂಬ ನಾಟಕವೊಂದನ್ನು ಕೂಡ ಬರೆಯಲಾಗಿದೆ. ಹೀಗೆ ಖರೀದಿಸಿದ ಕೆಲಸಗಾರರನ್ನು ತಥಾ–ತಕಥಿತ 'ವಿದ್ಯಾವಂತ' ಉದ್ಯೋಗಿಗಳು ಕೆಟ್ಟದಾಗಿ ಮತ್ತು ಅಮಾನುಷವಾಗಿ ನಡೆಸಿಕೊಳ್ಳುವುದು ಕಂಡುಬರುತ್ತದೆ. ಈ ಬಲಿಪಶುಗಳಿಗೆ ಆಹಾರವನ್ನೇ ಕೊಡದೆ ಉಪವಾಸ ಕೆಡವಲಾಗುತ್ತದೆ. ಸಣ್ಣಪುಟ್ಟ ತಪ್ಪುಗಳಿಗೂ ಥಳಿಸಲಾಗುತ್ತದೆ. ಕಾದ ಅಸ್ತ್ರದಿಂದ ಬರೆ ಹಾಕಲಾಗುತ್ತದೆ. ಅವರ ಚಲನವಲನಕ್ಕೆ ನಿರ್ಬಂಧ ವಿಧಿಸಲಾಗುತ್ತದೆ. ಮತ್ತು ಕೆಲವೊಮ್ಮೆ ಆಕೆಯನ್ನು ಉದ್ಯೋಗದಾತರು ಹೊರಗಡೆ ಹೋಗಿರುವಾಗ ಮನೆಯಲ್ಲಿ ಆಕೆ ಒಂಟಿಯಾಗುತ್ತಾಳೆ ಎಂಬ ನೆಪದಲ್ಲಿ ಸುರಕ್ಷೆಯ ಹೆಸರಿನಲ್ಲಿ ಆಕೆಯನ್ನು ಮನೆಯಲ್ಲಿ ಕೂಡಿ ಹಾಕಿ ಬೀಗ ಜಡಿಸಲಾಗುತ್ತದೆ. ಉದಾಹರಣೆಗೆ, ಉಡುಪಿಯ ಮಾನವಹಕ್ಕುಗಳ ಪ್ರತಿಷ್ಟಾನವು ವರದಿ ಮಾಡಿದ ಮಂಗಳೂರಿನ ಸೋನಿಯಾ ಪ್ರಕರಣ ಅಥವಾ **ನವೆಂಬರ್ ೧–೨೦೦೬ ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ** ವರದಿಯಾದ ಬೆಂಗಳೂರಿನ ಹತ್ತಿರ ಹರೆಯದ ಬಾಲಕಿಯ ಪ್ರಕರಣ. ಇಂತಹ ಜೀತಬಾಲ ಕಾರ್ಮಿಕತೆ ಅಪರಾಧವಾಗಿದೆಯಾದರು, ಬಾಲಕಾರ್ಮಿಕತೆಯನ್ನು (೧೪ ವರ್ಷಕ್ಕಿಂತ ಕೆಳ ಹರೆಯ) ಅಕ್ಟೋಬರ್ ೨೦೦೬ ರ ಅನ್ವಯ ಶಾಸನಾತ್ಮಕವಾಗಿ ಶಿಕ್ಷಾರ್ಹ ಎಂದು ಘೋಷಿಸಲಾಗಿದೆಯಾದರೂ, ಸರಕಾರವು ಈ ಸಮಸ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಮೆಟ್ಟಿ ಹಾಕಬೇಕಾಗಿದೆ.

ಮಾರಾಟದ ಎರಡನೆಯ ನೆಲೆಯಾದ ವೇಶ್ಯಾವೃತ್ತಿಯು ಮಹಿಳೆಯ ದೇಹದ ವಾಣಿಜ್ಯಕರಣ, ಹಾಗೆಯೇ ಗಂಡು ಮತ್ತು ಹೆಣ್ಣಿನ ಲೈಂಗಿಕತೆಗಳ ವಿಚಾರದಲ್ಲಿ ದ್ವಂದ್ವ ನೀತಿ ಇವೆರಡನ್ನು ಆಧರಿಸಿದೆ. ವೇಶ್ಯಾವಾಟಿಕೆಯಲ್ಲಿ ಸ್ತ್ರೀ–ಪುರುಷರಿಬ್ಬರೂ ತೊಡಗಿರುತ್ತಾರಾದರೂ ಸಾಮಾನ್ಯವಾಗಿ ಮಹಿಳೆಗೆ ಮಾತ್ರ ಅನೈತಿಕತೆಯ ಹಣೆಪಟ್ಟಿಯನ್ನು ಅಂಟಿಸಲಾಗುತ್ತದೆ ಮತ್ತು ಬಹಿಷ್ಕಾರ ಹಾಕಲಾಗುತ್ತದೆ. ನಿಜವಾಗಿಯೂ ಸಾಂಪ್ರದಾಯಿಕ ನೈತಿಕತೆಯ ಬೇಡಿಗಳೊಂದಿಗೆ ಗೃಹಿಣಿಯರನ್ನು ಬಂಧಿಯಾಗಿಸಲು, ಹಾಗೆಯೇ ವೇಶ್ಯಾ ವೃತ್ತಿಗೆ ನೂಕಲ್ಪಟ್ಟ, ಅಸಹಾಯಕ ಮಹಿಳೆಯರನ್ನು ಖಂಡಿಸಲು ಗಂಡಿನ ಕೈಯಲ್ಲಿರುವ ಖರೀದಿ ಸಾಮರ್ಥ್ಯವನ್ನು ಬಳಸಲಾಗುತ್ತದೆ. ವೇಶ್ಯೆಯು ವಿಭಿನ್ನ ಗಿರಾಕಿಗಳಿಂದ ದಾಟಿಸಲ್ಪಡುವ ಲೈಂಗಿಕ ರೋಗಗಳಿಗೆ ಸುಲಭ ಬಲಿಪಶುವಾಗುತ್ತಾಳೆ. ನಂತರ ಅದನ್ನೇ ಆಕೆ ಇತರರಿಗೆ ದಾಟಿಸುತ್ತಾಳೆ.

ಬಸವಿ/ಜೊಗತಿ/ದೇವದಾಸಿ ಮತ್ತು ಇತರ ಸಾಂಪ್ರದಾಯಗಳಿಂದ ಭಾರತದಲ್ಲಿ ವೇಶ್ಯಾವೃತ್ತಿಯು ಆರಂಭವಾಗಬಹುದು. ಸ್ಥಳೀಯ ಸುಖಸಂತೋಷಕ್ಕಾಗಿ ಅನೇಕ ವೇಶ್ಯಾಂಗನೆಯರನ್ನು ಶ್ರೀಮಂತರು ಅರಮನೆಗಳಲ್ಲಿ ಇರಿಸಿಕೊಳ್ಳುತ್ತಿದ್ದುದು ಕೂಡಾ ಈ ವೃತ್ತಿಗೆ ಕಾಣಿಕೆ ನೀಡಬಹುದು. ಪ್ರಾಯಶಃ ಇದೊಂದು ವಂಶಪಾರಂಪರ್ಯದಿಂದ ಬಂದ ವೃತ್ತಿಯಾಗಿದ್ದು, ತಾಯಿಯಿಂದ ಮಗಳಿಗೆ ಮುಂದುವರೆಯುತ್ತಿತ್ತು. ಪುರುಷರು ಇದರಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದರು. ಮೇಲೆ ಹೇಳಿದವರಲ್ಲದೇ ನಿರ್ಗತಿಕ ಮಹಿಳೆ ಮತ್ತು

ವಿಧವೆಯರು ಕೂಡಾ ಲೈಂಗಿಕ ಅತ್ಯಾಚಾರ ಮತ್ತು ದೌರ್ಜನ್ಯದ ಬಲಿಪಶುಗಳಾಗಿ ಈ ವೃತ್ತಿಗೆ ನೂಕಲ್ಪಡುತ್ತಾರೆ. ಎಳೆಯ ಬಾಲಕೀಯರು ಕೂಡಾ ಗೊತ್ತಿಲ್ಲದೆಯೇ ಆಮೀಷಕ್ಕೊಳಗಾಗಿ ದುರುಳಲರು ಹಾಕಿದ ಬಲೆಗೆ ಬಿದ್ದು ಬಿಡುವುದಿದೆ. ಹೈದ್ರಾಬಾದ್ ಅಥವಾ ಕರಾವಳಿ ಕರ್ನಾಟಕದ ಬಡಕುಟುಂಬಗಳ ಹಲವು ಎಳೆಯ ಮುಸ್ಲಿಂ ಬಾಲಕಿಯರನ್ನು ಶ್ರೀಮಂತ ಅರಬ್ ವೃದ್ದರಿಗೆ(ತಿಂಗಳ ಮಟ್ಟಿಗೆ ಇವರು ಭಾರತಕ್ಕೆ ಭೇಟಿ ನೀಡುತ್ತಾರೆ.) ಮದುವೆ ಮಾಡಿಕೊಡುವುದು, ಬಳಿಕ ಮೂರು ಬಾರಿಯ ತಲಾಖ್‌ಗೆ (ವಿಚ್ಚೇದನ) ಈಡು ಮಾಡಲಾಗುತ್ತಿರುವುದನ್ನು ವರದಿಗಳು (ಉದಾ ಅಮೀನ ಪ್ರಕರಣ) ಬಯಲು ಮಾಡಿವೆ. ಈ ವಸ್ತುವನ್ನೇ ಆದರಿಸಿದ ಕಥೆ, ಕಾದಂಬರಿಗಳು ಕನ್ನಡದಲ್ಲಿವೆ. ಕೆಲವೊಮ್ಮೆ ತಮ್ಮ ಬಾಲಕೀಯರನ್ನು ವೇಶ್ಯಾವೃತ್ತಿಗೆ ಮಾರಲು ಪಾಲಕರ ಬಡತನ ಕಾರಣವಾಗಬಹುದು. ಆದರೆ ದೈಹಿಕ ಸುಖ ಸಂತೋಷಗಳಿಗಾಗಿ / ದುಬಾರಿ ಐಷರಾಮಿಗಳಿಗಾಗಿ / ಸುಲಭ ಸಂಪತ್ತಿಗಾಗಿ ಉನ್ನತ ವರ್ಗದ ಕರೆವೆಣ್ಣುಗಳು ಈ ವೃತ್ತಿಗೆ ಇಳಿಯುವುದು ಇದೆ.

ಈ ಸಮಸ್ಯೆಯನ್ನು ನಿಯಂತ್ರಿಸಲು ಭಾರತ ಸರ್ಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಉದಾ: 'ಅನೈತಿಕ ಮಾರಾಟ ವ್ಯವಹಾರ ನಿಗ್ರಹ ಅಧಿನಿಯಮ' (Suppression of immoral Trafficking Act-SITA) ವನ್ನು ೧೯೫೬ ರಲ್ಲಿ ಜಾರಿಗೊಳಿಸಲಾಯಿತು. ಮುಂದೆ ೧೯೭೮ ಮತ್ತು ೧೯೮೬ ತಿದ್ದುಪಡಿಗಳಮೂಲಕ ಇದನ್ನು ಅನೈತಿಕ ಮಾರಾಟ ವ್ಯವಹಾರ ಪ್ರತಿಬಂಧಕ ಅಧಿನಿಯಮ (Prevention of immoral trafficking) ಎಂದು ಪುನರ್ನಾಮಕರಣ ಮಾಡಲಾಗಿದೆ. ದೇವದಾಸಿ/ಬಸವಿ ಸಾಂಪ್ರದಾಯಗಳನ್ನು ಬೆಳೆಸಿದ್ದ ಯಲ್ಲಮ್ಮ ಮತ್ತು ಇತರ ದೇವಿಯರ ವಾರ್ಷಿಕ ಜಾತ್ರೆಗಳನ್ನು (ಚಂದ್ರಗುತ್ತಿ ಮತ್ತು ಇತರ ಸ್ಥಳಗಳು) ಕಾನೂನಿನ ಅಡಿಯಲ್ಲಿ ಈಗ ನಿಷೇಧಿಸಲಾಗಿದೆ. ಆದರೂ ಕೂಡ ಈ ಸುಧಾರಣೆಯ ಪ್ರಯತ್ನಗಳು, ಸಮಸ್ಯೆಯ ಸಾಮಾಜಿಕ –ಆರ್ಥಿಕ ಆಯಾಮಗಳ ಕಡೆಗೆ ಹೆಚ್ಚಿನ ಗಮನ ನೀಡಿದೆ. ಉನ್ನತ ನೈತಿಕತೆಯ ನಿಲುವನ್ನು ತೆಗೆದುಕೊಳ್ಳುವುದು ಬಹಳ ದುರದೃಷ್ಟಕರ. ತೀರಾ ಇತ್ತೀಚೆಗೆ, ಈ ಲೈಂಗಿಕ ಕಾರ್ಮಿಕರು ಸಂಘಟಿತರಾಗುವ ಮತ್ತು ತಮ್ಮ ವೃತ್ತಿಗೆ ಮಾನ್ಯತೆ ಪಡೆಯುವ ಯತ್ನಗಳನ್ನು ಪಶ್ಚಿಮ ದೇಶಗಳಲ್ಲಿ ಮಾತ್ರವಲ್ಲ. ನಮ್ಮಲ್ಲಿಯೇ, ಮುಂಬೈ ಮತ್ತು ಕಲ್ಕತ್ತಾಗಳಲ್ಲಿ ಕೂಡಾ ನಡೆಸುತ್ತಿದ್ದಾರೆ. ಆದರೂ, ಇಂತಹ ಕ್ರಮಗಳು ನಿಜವಾಗಿಯೂ ವೇಶ್ಯೆಯರು, ಸಾಮಾಜಿಕವಾಗಿ ತಲೆ ಎತ್ತಿ ನಿಲ್ಲಲು ನೆರವಾಗುತ್ತವೆ ಎಂಬುದು ಕೊನೆಗೂ ಒಂದು ಪ್ರಶ್ನೆಯಾಗಿಯೇ ಉಳಿಯುತ್ತದೆ.[೧೮] ಮಹಿಳೆಯನ್ನು ಮಾರಾಟ ಮಾಡುವುದು ೧೮ ವರ್ಷ ದೊಳಗಿನ ಹೆಣ್ಣು ಮಕ್ಕಳು ಅಥವಾ ಯಾವುದೇ ಮಹಿಳೆಯನ್ನು ಯಾವುದೇ ವಯಸ್ಸಿನಲ್ಲಿ ವೇಶಾವೃತ್ತಿಯ ಅಥವಾ ಯಾವುನೇ ವ್ಯಕ್ತಿಯೊಂದಿಗೆ ಕಾನೂನು ನಿಷಿದ್ಧ ಸಂಭೋಗ ನಡೆಸುವ ಅಥವಾ ಕಾನೂನು ಬದ್ಧವಲ್ಲದ ಮತ್ತು ಅನೈತಿಕ ಪ್ರಯೋಜನಾರ್ತವಾಗಿ ನಿಯೋಜಿಸುವ ಅಥವಾ ಉಪಯೋಗಿಸುವ ಸಂಬಂಧವಿದೆ, ಎಂದು ತಿಳಿದು ಮಾರಾಟ ಮಾಡುವ ಅವಕ್ರಯಕ್ಕೆ ಕೊಡುವ ಅಥವಾ ಅನ್ಯತಾ ವಿಲೆ

ಮಾಡುವ ಯಾವನೇ ವ್ಯಕ್ತಿಯು ೧೦ ವರ್ಷಗಳ ವರೆಗಿನ ಕಾರಗೃಹವಾಸದಿಂದ ದಂಡಿತನಾಗತಕ್ಕದ್ದು. ಈ ಮೇಲಿನ ಎಲ್ಲಾ ಕಾಯ್ದೆಗಳು ಮಹಿಳೆಯರನ್ನು ರಕ್ಷಿಸುವ ಅಪರಾಧ ತಡೆ ಕಾನೂನಾತ್ಮಕ ಕ್ರಮಗಳಾಗಿವೆ.

೪.೨.೩. ಹೊಸದಾಗಿ ಅನುಷ್ಟಾನಕ್ಕೆ ಬಂದಿರುವ ಮಹಿಳೆಯರ ದೌರ್ಜನ್ಯದ ವಿರುದ್ಧದ ಕಾನೂನುಗಳು

ಇತ್ತೀಚೆಗೆ ದೇಶದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳನ್ನು ಕಂಡು ಹೌಹಾರಿದ ಕೇಂದ್ರ ಸರ್ಕಾರ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ಮತ್ತು ಅತ್ಯಾಚಾರಗಳನ್ನು ನಿಯಂತ್ರಿಸಲು ಹಾಗೂ ದೌರ್ಜನ್ಯದ ವ್ಯಾಖ್ಯಾನವನ್ನು ಬದಲಿಸಿ, ಅತ್ಯಾಚಾರದ ವೈದ್ಯಕೀಯ ಪರೀಕ್ಷೆ ಮತ್ತಿತರ ಮಾರ್ಪಾಡುಗಳನ್ನು ಮಾಡಿ ಹೊಸ-ಹೊಸ ಕಾನೂನುಗಳನ್ನು ಜಾರಿಗೊಳಿಸಿದೆ. ಆ ಕಾನೂನುಗಳು ಈ ಕೆಳಗಿನಂತಿವೆ.

ಮಹಿಳಾ ದೌರ್ಜನ್ಯ ತಡೆ ಮಸೂದೆಗೆ ಅಸ್ತು:

ಮಹಿಳೆಯರ ಮೇಲಿನ ಮೇಲಿನ ಅಪರಾಧಗಳನ್ನು ತಡೆಯುವ, ಲೈಂಗಿಕ ದೌರ್ಜನ್ಯದ ವ್ಯಾಖ್ಯೆ ಬದಲಿಸುವ ಮಹತ್ವದ ಮಸೂದೆಗೆ ಕೇಂದ್ರ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ. ದೆಹಲಿ ಸಾಮೂಹಿಕ ಅತ್ಯಾಚಾರ ಪ್ರಕರಣದ ಹಿನ್ನಲೆಯಲ್ಲಿ ರೂಪಿಸಲಾಗಿರುವ ಅಪರಾಧ ಕಾನೂನು (ತಿದ್ದುಪಡಿ) ಮಸೂದೆ-೨೦೧೩ ಕ್ಕೆ ಸಂಪುಟ ಸಮ್ಮತಿ ಸೂಚಿಸಿತು. ಈ ಮಸೂದೆ ಇದೇ ಅಧಿವೇಶನದಲ್ಲಿ ಮಂಡನೆಯಾಗಲಿದೆ. ಅತ್ಯಾಚಾರವು ಸೇರಿದಂತೆ ಮಹಿಳೆಯರ ವಿರುದ್ಧ ನಡೆಯುವ ಅಪರಾಧಗಳಿಗೆ ಅತ್ಯುಗ್ರ ಶಿಕ್ಷೆ ವಿಧಿಸುವಂತೆ ಮಸೂದೆಯಲ್ಲಿ ಹೇಳಲಾಗಿದೆ. ಆಸಿಡ್ ದಾಳಿ, ಮಹಿಳೆಯರನ್ನು ಹಿಂಬಾಲಿಸುವುದು, ಅಶ್ಲೀಲ ಲೈಂಗಿಕ ನಡುವಳಿಕೆಗಳನ್ನು ಅಪರಾಧ ಎಂದು ಪರಿಗಣಿಸಲಾಗಿದೆ. ಹಲವು ಮಹಿಳಾ ಸಂಘಟನೆಗಳ ಒತ್ತಾಯಕ್ಕೆ ಲಿಂಗ ತಟಸ್ಥವಾದ 'ಲೈಂಗಿಕ ದೌರ್ಜನ್ಯ' ಕೈಬಿಟ್ಟು ಅತ್ಯಾಚಾರ ಎಂದು ಮರುವ್ಯಾಖ್ಯೆ ಮಾಡಲಾಗಿದೆ. ಕಾಯ್ದೆಯ ಪ್ರಕಾರ ಈಗ ಪುರುಷರನ್ನು ಮಾತ್ರ ಆರೋಪಿಯನ್ನಾಗಿಸಬಹುದು. ಸಮ್ಮತಿಸಿದ ಲೈಂಗಿಕ ಕ್ರಿಯೆ ವಯಸ್ಸನ್ನು ೧೮-೧೬ ಕ್ಕೆ ಇಳಿಸುವ ಪ್ರಸ್ತಾಪವು ಮಸೂದೆಯಲ್ಲಿದೆ. ಈ ವಿಚಾರಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ **'ಕೃಷ್ಣಾತೀರತ್'** ಬಲವಾಗಿ ವಿರೋಧ ವ್ಯಕ್ತ ಪಡಿಸಿದರು. ಅತ್ಯಾಚಾರಕ್ಕೆ ಒಳಗಾದ ಮಹಿಳೆ ಸತ್ತುಹೋದಲ್ಲಿ ಅಥವಾ ಕೋಮು ಸ್ಥಿತಿಯಲ್ಲಿ ಇದ್ದಲ್ಲಿ ಅಪರಾಧಿಗೆ ಮರಣ ದಂಡನೆ ವಿಧಿಸುವ ಅವಕಾಶವು ಇದೆ. ಮಹಿಳೆಯನ್ನು ಸದಾ ಹಿಂಬಾಲಿಸುವುದು, ಪದೇ ಪದೇ ಪೋನ್ ಕರೆ ಮಾಡುವುದು ಇತ್ಯಾದಿಗಳನ್ನು ಜಾಮೀನು ರಹಿತ ಅಪರಾಧದ ಅಡಿ ವರ್ಗೀಕರಿಸಲಾಗಿದೆ. ದಾಂಪತ್ಯದ ಚೌಕಟ್ಟಿನ ಒಳಗಿನ ಅತ್ಯಾಚಾರವನ್ನು ಪ್ರತ್ಯೇಕ ಅಪರಾಧವೆಂದು ಮಸೂದೆ ಪರಿಗಣಿಸಿಲ್ಲ.

ಪ್ರತ್ಯೇಕ ಅಪರಾಧ: ಆಸಿಡ್ ದಾಳಿಯನ್ನು ಪ್ರತ್ಯೇಕ ಅಪರಾಧವೆಂದು ಪರಿಗಣಿಸಲಾಗಿದ್ದು ಕನಿಷ್ಟ ೧೦ ವರ್ಷದಿಂದ ಗರಿಷ್ಟ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ. ಲೈಂಗಿಕ ದೌರ್ಜನ್ಯಗಳನ್ನು ಕುರಿತು ಸುಳ್ಳು ದೂರು

ದಾಖಲಿಸುವವರ ಮೇಲೆ, ಕಠಿಣ ಕ್ರಮ ತೆಗೆದುಕೊಳ್ಳಬೇಕೆಂಬ ಪ್ರಸ್ತಾಪವನ್ನು ಕರಡು ಮಸೂದೆಯಿಂದ ಕೈಬಿಡಲಾಗಿದೆ. ಪೊಲೀಸ್ ಅಧಿಕಾರಿ, ವೈದ್ಯ ಅಥವಾ ಆಸ್ಪತ್ರೆಯ ಸಿಬ್ಬಂದಿ, ರಿಮೇಂಡ್ ಹೋಮ್‌ನ ವಾರ್ಡನ್ ಅಥವಾ ಸೇನಾಪಡೆಯ ಸಿಬ್ಬಂದಿ ಅತ್ಯಾಚಾರ ಎಸಗಿದಾಗ ಅವರು ತಮ್ಮ ಇಡೀ ಜೀವನವನ್ನು ಜೈಲಿನಲ್ಲಿ ಕಳೆಯಬೇಕೆಂದು ಮಸೂದೆ ಹೇಳಿದೆ.

ಉಚಿತ ಚಿಕಿತ್ಸೆ: ಲೈಂಗಿಕ ಕಿರುಕುಳಕ್ಕೆ ಬಲಿಯಾದ ಮಹಿಳೆಯರಿಗೆ ದೇಶದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಉಚಿತ ಚಿಕಿತ್ಸೆ ನೀಡಬೇಕಾಗುತ್ತದೆ. ಪೊಲೀಸರಿಗಾಗಿ ಕಾಯಿದೆ ಕೂಡಲೇ ಚಿಕಿತ್ಸೆ ನೀಡಬೇಕಾಗುತ್ತದೆ. ಚಿಕಿತ್ಸೆ ನೀಡಲು ನಿರಾಕರಿಸಿದ್ದಲ್ಲಿ ಆಸ್ಪತ್ರೆಯ ಅಧಿಕಾರಿಗಳಿಗೆ ಒಂದು ವರ್ಷದ ವರೆಗಿನ ಜೈಲು ಶಿಕ್ಷೆ ನೀಡುವ ಅವಕಾಶವಿದೆ. (ಪ್ರಜಾವಾಣಿ ಪತ್ರಿಕೆ, ದಿನಾಂಕ: ೧೫.೦೩.೨೦೧೩.)

ರಾಷ್ಟ್ರೀಯ ಮಾಧ್ಯಮಗಳಲ್ಲಿ ಸರಣಿ ಅತ್ಯಾಚಾರ ಚರ್ಚೆ: ಸರಣಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳಿಂದಾಗಿ ಇದೀಗ ಕರ್ನಾಟಕ ದೇಶದ ಗಮನ ಸೆಳೆದಿದೆ. ಕಳೆದ ೬ ತಿಂಗಳಲ್ಲಿ ಬೆಂಗಳೂರು ಒಂದರಲ್ಲೇ ೫೩ ಅತ್ಯಾಚಾರ ಪ್ರಕರಣಗಳು ನಡೆದಿರುವುದರ ಜೊತೆಗೆ ಇತ್ತೀಚೆಗೆ ಪುಲಕೇಶಿನಗರದಲ್ಲಿ ನಡೆದ ಯುವತಿಯ ಕಿಡ್ನಾಪ್, ಅತ್ಯಚಾರ ಪ್ರಕರಣ, ವಿಬ್ ಗಯಾರ್ ಶಾಲೆಯ ೧ನೇ ತರಗತಿ ವಿದ್ಯಾರ್ಥಿನಿ ಮೇಲೆ ನಡೆದ ಲೈಂಗಿಕ ದೌರ್ಜನ್ಯ, ಕ್ರೈಸ್ತ ಸನ್ಯಾಸಿ ಮೇಲಾದ ಲೈಂಗಿಕ ದೌರ್ಜನ್ಯ ಮತ್ತು ರಾಜ್ಯದಲ್ಲೆಡೆ ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತಿರುವುದು ರಾಷ್ಟ್ರವ್ಯಾಪಿ ಆಕ್ರೋಶಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಮಹಿಳೆಯರು ಆತಂಕದಿಂದ ದಿನ ದೂಡುವಾಂತಾಗಿದೆ ಇದಕ್ಕೆ ರಾಜ್ಯ ಸರ್ಕಾರವೇ ಕಾರಣವೆಂದು ರಾಷ್ಟ್ರೀಯ ಮಾಧ್ಯಮಗಳು ಟೀಕಾ ಪ್ರಹಾರ ನಡೆಸುತ್ತಿವೆ. (ವಿಜಯವಾಣಿ ಪತ್ರಿಕೆ, ೨೭.೦೭.೨೦೧೪).

ಯುವತಿ ಮೇಲಿನ ಅತ್ಯಾಚಾರ ಪ್ರಕರಣ, ಇನ್‌ಸ್ಪೆಕ್ಟರ್ ಬಂಧನ: ಪುಲಕೇಶಿನಗರದಲ್ಲಿ ಯುವತಿ ಮೇಲೆ ನಡೆದ ಅತ್ಯಾಚಾರ ಪ್ರಕರಣವನ್ನು ದಾಖಲಿಸುವಾಗ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಇನ್‌ಸ್ಪೆಕ್ಟರ್‌ನ್ನು ಬಂಧಿಸಲಾಗಿತ್ತು. ಕಾರಣ, ದೆಹಲಿ ನಿರ್ಭಯ ಪ್ರಕರಣದ ನಂತರ ಭಾರತೀಯ ದಂಡ ಸಂಹಿತೆಯಲ್ಲಿ ಮಾಡಿರುವ ತಿದ್ದುಪಡಿಯ ಬಗ್ಗೆ ಅರಿವಿರಲಿಲ್ಲ. ನನ್ನ ಜ್ಞಾನದ ಕೊರತೆಯಿಂದ ಈ ಅಚಾತುರ್ಯ ಘಟನೆ ನಡೆದಿದೆ ಎಂದು ಹೇಳಿದ್ದಾರೆ. ಯುವತಿ ದೂರು ನೀಡಿದಾಗ ಮಹಿಳೆಯ ಗೌರವಕ್ಕೆ ದಕ್ಕೆ, ದೌರ್ಜನ್ಯ ಮತ್ತು ಅಕ್ರಮ ಬನಂಧನದ ಬಗ್ಗೆ ದೂರು ದಾಖಲಿಸಿಕೊಂಡಿದ್ದರು. ಆದರೆ ಲೈಂಗಿಕ ದೌರ್ಜನ್ಯವನ್ನು ಅತ್ಯಾಚಾರವೆಂದು ಪರಿಗಣಿಸುವಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನು ನಿರ್ಲಕ್ಷಿಸಿದ ಅವರನ್ನು ಸೂಕ್ತ ಕಲಂಗಳಡಿ ಪ್ರಕರಣ ದಾಖಲಿಸಿರಲಿಲ್ಲ. ಈಗಾಗಿ ಇದೇ ಮೊದಲ ರಫೀಕ್ ವಿರುದ್ಧ ಐಪಿಸಿ-೧೬೬ಎ ಬಳಸಿ ರಫೀಕ್ ವಿರುದ್ದ ಪುಲಕೇಶಿನಗರ ಠಾಣೆಯಲ್ಲಿ ಕ್ರಿಮಿನಲ್ ದಾಖಲಿಸಲಾಗಿದೆ. (ಪ್ರಜಾವಾಣಿ, ೧೯.೦೭.೨೦೧೪)

ಮಹಿಳಾ ದೌರ್ಜನ್ಯ ತಡೆ ಕಾನೂನು ತಜ್ಞರ ಮತ್ತು ತಿದ್ದುಪಡಿ ಸಮಿತಿಗ ಸಾಣಯ್ಯ ಅಧ್ಯಕ್ಷ: ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳನ್ನು ವೈದ್ಯಕೀಯ ತಪಾಸಣೆ ಮಾಡುವ ವಿಧಾನದಲ್ಲಿ ಬದಲಾವಣೆ ತರುವುದಕ್ಕಾಗಿ

ಮತ್ತು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮತ್ತು ಮಕ್ಕಳ ತಪಾಸಣೆ ಮತ್ತು ಅವರಿಗೆ ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸುವ ಕುರಿತು ಸಮಿತಿಗೆ ಮತ್ತು ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸದಂತೆ ಕಾನೂನು ತಿದ್ದುಪಡಿ ತರಲು, ತಪಿತಸ್ಥರಿಗೆ ಶಿಕ್ಷೆಯ ಪ್ರಮಾಣ ಹೆಚ್ಚಿಸುವ ಬಗ್ಗೆ ಅಧ್ಯಯನ ನಡೆಸಲು ಕಾನೂನು ತಜ್ಞ ಎಂ.ಸಿ ನಾಣಯ್ಯರವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಾಜ್ಯಸರ್ಕಾರ ರಚಿಸಿದೆ. ಅಧ್ಯಕ್ಷರು ಸೇರಿ ೨೬ ಜನ ಸದಸ್ಯರಿದ್ದು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಲು ಸಮಿತಿಗೆ ೩ ತಿಂಗಳ ಗಡುವನ್ನು ವಿಧಿಸಲಾಗಿದೆ. (ಪ್ರಜಾವಾಣಿ ೦೧.೦೮.೨೦೧೪)

ಹುಡುಗೀರ ಕೆಣಕಿದ್ರೆ ಗೂಂಡಾ ಕಾಯ್ದೆ: ಸಮಾಜ ಘಾತುಕ ನಿಯಂತ್ರಣ ಮಸೂದೆ ಅಂಗೀಕಾರ,

ಮಹಿಳೆ, ಬಾಲಕಿಯರ ಮೇಲೆ ಕಾಮದೃಷ್ಟಿ ಬೀರುವ, ಅತ್ಯಾಚಾರ ಎಸಗುವ ಮತ್ತು ಲೈಂಗಿಕ ದೌರ್ಜನ್ಯ ನಡೆಸುವವರನ್ನು ಇನ್ನು ಮುಂದೆ ಗೂಂಡಾ ಕಾಯ್ದೆಯಡಿ ಬಂಧಿಸುವ ಕಠಿಣ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ. ಈ ಕಾಯ್ದೆಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ತಿದ್ದುಪಡಿ ವಿಧೇಯಕಕ್ಕೆ ಅಂಗೀಕಾರ ದೊರೆಯಿತು.

ಆಸಿಡ್ ದಾಳಿಕೋರರಿಗೂ ಅನ್ವಯ: ಆಸಿಡ್ ದಾಳಿ, ಪರಿಸರಕ್ಕೆ ದಕ್ಕೆ, ವಿಡಿಯೋ ಮತ್ತು ಆಡಿಯೋ ಪೈರಸಿ, ಮಾದಕ ವಸ್ತುಗಳ ಕಳ್ಳ ಸಾಗಾಟ ಮತ್ತು ಕೊಳಚೆ ಪ್ರದೇಶಗಳನ್ನು ಒತ್ತುವರಿ ಮಾಡಿಕೊಳ್ಳುವ ಅಪರಾಧಗಳಡಿ ಆರೋಪಿಗಳನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ವಿಧೇಯಕಕ್ಕೆ ತಿದ್ದುಪಡಿ ತರಲಾಗಿದೆ. (ವಿಜಯವಾಣಿ: ೨೯.೦೭.೨೦೧೪).

ಅತ್ಯಾಚಾರಿ ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆ ಪ್ರಯೋಗ: ಗೂಂಡಾ ಕಾಯ್ದೆ ಎಂದರೆ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಎಸಗುವವರನ್ನು ಗೂಂಡಾ ಕಾಯ್ದೆಯಡಿಯಲ್ಲಿ ಬಂಧಿಸುವ ತಿದ್ದುಪಡಿಗೆ ಅನುಮೋದನೆ ಸಿಕ್ಕಿದ ನಂತರ ಮೊದಲ ಬಾರಿಗೆ ಗೂಂಡಾಕಾಯ್ದೆ ಪ್ರಯೋಗ **ಮಾಡಲಾಗಿದೆ. ಈ ಕಾಯ್ದೆಯ ಅಡಿ** ಆರೋಪಿಗಳಿಗೆ ಕನಿಷ್ಟ ಒಂದು ವರ್ಷ ಜಾಮೀನು ಸಿಗುವುದಿಲ್ಲ. ನಂತರ ಹೈಕೋರ್ಟ್‌ನ ಸಲಹಾ ಸಮಿತಿಯು ಆರೋಪಿಗೆ ಬಿಡುಗಡೆ ಮತ್ತು ಶಿಕ್ಷೆಯ ಬಗ್ಗೆ ಕೋರ್ಟ್‌ಗೆ ಮಾಹಿತಿ ನೀಡುತ್ತದೆ. ಪುಲಕೇಶಿನಗರದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿ ಮತ್ತು ವಿಬ್‌ಗಯಾರ್ ಶಾಲೆಯ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಗಳ ವಿರುದ್ಧ ಜನಾದೇಶ ವ್ಯಕ್ತಗೊಂಡ ಮೇಲೆ ಗೂಂಡಾಕಾಯ್ದೆ ಮಸೂದೆಗೆ ಸರ್ಕಾರ ತಿದ್ದುಪಡಿ ತಂದಿದೆ. (ವಿಜಯವಾಣಿ: ೦೩.೧೨.೩೦೧೪)

.ದೌರ್ಜನ್ಯ ತಡೆಗೆ ಬೆಂಗಳೂರು ಸೇರಿ ೧೧೪ ಕಡೆ ಕೇಂದ್ರದ ಸಹಾಯವಾಣಿ, ಮಹಿಳೆಯ ರಕ್ಷಣೆಗೆ ದೇಶದಲ್ಲೇ ಮೊದಲ ಬಾರಿ ಜಿ.ಪಿ.ಎಸ್ ತಂತ್ರಜ್ಞಾನ ಬಳಕೆ: ಕರ್ನಾಟಕ ಸೇರಿದಂತೆ ದೇಶದ ಹಲವೆಡೆ ಹೆಚ್ಚುತ್ತಿರುವ ಅತ್ಯಾಚಾರ ಹಾಗೂ ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಮಟ್ಟಹಾಕಲು ಮುಂದಿಟ್ಟಿರುವ ಕೇಂದ್ರ ಸರ್ಕಾರ ರಾಜ್ಯದ ಬೆಂಗಳೂರು, ಮೈಸೂರು, ಹುಬ್ಬಳಿ–ಧಾರವಾಡ ಸೇರಿದಂತೆ ದೇಶಾದ್ಯಂತ ೧೧೪ ನಗರಗಳಲ್ಲಿ

ಕಂಪ್ಯೂಟರ್ ಆಧಾರಿತ ಮಹಿಳಾ ಸಹಾಯವಾಣಿ ಕೇಂದ್ರಗಳ ಸ್ಥಾಪನೆಗೆ ನಿರ್ಧರಿಸಿದೆ. ಅಪಾಯಕ್ಕೊಳಗಾದ ಮಹಿಳೆಯರ ರಕ್ಷಣೆಗೆ ಧಾವಿಸುವ ಉದ್ದೇಶದಿಂದ ಆರಂಭವಾಗಲಿರುವ ಸಹಾಯವಾಣಿ ಸಂತ್ರಸ್ಥರ ಕರೆಗೆ ತಕ್ಷಣವೇ ಪ್ರತಿಕ್ರಿಯಿಸಲಿದೆ. ಘಟನಾ ಸ್ಥಳದ ಮಾಹಿತಿ ಪಡೆದು ಜಿಪಿಎಸ್ ಸಹಾಯದೊಂದಿಗೆ ರಕ್ಷಣಾ ಸಿಬ್ಬಂದಿ ಕಳಿಸುವ ಕಾರ್ಯವನ್ನು ಸಹಾಯವಾಣಿಗಳು ನಿರ್ವಹಿಸುತ್ತವೆ. (ವಿಜಯವಾಣಿ: ೨೩.೦೭.೨೦೧೪).

ಶಾಲಾ ಹೆಣ್ಣುಮಕ್ಕಳ ರಕ್ಷಣೆಗೆ ಗೃಹ ಸಚಿವಾಲಯವು ಶಿಕ್ಷಣ ಮತ್ತು ಪೊಲೀಸ್ ಇಲಾಖೆಗಳಿಗೆ ಸೂಚಿಸಿರುವ ಮಾರ್ಗಸೂಚಿಗಳು:

- ಶಾಲಾ ಆವರಣದೊಳಗೆ ವಿದ್ಯಾರ್ಥಿ/ವಿದ್ಯಾರ್ಥಿನಿ ಪ್ರವೇಶಿಸಿದ ನಂತರ ಆಕೆಯ ರಕ್ಷಣೆ, ಭದ್ರತೆ ಸೇರಿದಂತೆ ಎಲ್ಲಾ ಆಗು-ಹೋಗುಗಳಿಗೆ ಶಾಲಾ ಆಡಳಿತ ಮಂಡಳಿಯೇ ಹೊಣೆ.
- ವಿದ್ಯಾರ್ಥಿ/ವಿದ್ಯಾರ್ಥಿನಿ ಮೇಲೆ ಶಾಲಾ ಸಮಯದಲ್ಲಿ ಲೈಂಗಿಕ ದೌರ್ಜನ್ಯ ನಡೆದಿರುವುದು ಕಂಡ ಬಂದರೆ ಪೊಲೀಸರ ಗಮನಕ್ಕೆ ತರಬೇಕು.
- ಶಾಲಾ ಸಿಬ್ಬಂದಿ ಈ ಕೃತ್ಯದಲ್ಲಿ ಭಾಗಿಯಾಗುವುದು ಕಂಡುಬಂದರೆ ತಕ್ಷಣ ಕಠಿಣ ಕ್ರಮ ಕೈಗೊಳ್ಳಬೇಕು.
- ಮಕ್ಕಳಿಗೆ ಗಂಭೀರ ಶಿಕ್ಷೆ ನೀಡಬಾರದು. ಮಕ್ಕಳನ್ನು ಮನೆಗೆ ಕಳಿಸುವಾಗ ಪಾಲಕರು. ಇಲ್ಲವೇ ಅವರು ನಿಯೋಜಿಸಿರುವ ಸಂಬಂಧಪಟ್ಟ ವ್ಯಕ್ತಿಯೊಂದಿಗೆ ಕಳಿಸಬೇಕು.
- ವಾಹನಗಳಲ್ಲಿ ಮಕ್ಕಳನ್ನು ಕಳಿಸುವಾಗ ಚಾಲಕನ ಗುರುತಿನ ಚೀಟಿ ಪರಿಶೀಲಸಬೇಕು.
- ಶಾಲಾಗಳಲ್ಲಿ ಸಿಸಿಟಿವಿ, ಕ್ಯಾಮರಾ ಅಳವಡಿಗೆಗಳನ್ನು ಕಡ್ಡಾಯಗೊಳಿಸಬೇಕು.
- ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಶಾಲಾ ಮುಖ್ಯಸ್ಥರೆ ಹೊಣೆಯಾಗುತ್ತಾರೆ.
- ತಿಂಗಳಿಗೊಮ್ಮೆ ಪೊಲೀಸರು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸುವುದು.
- ಶಾಲೆಗಳಲ್ಲಿ ನಡೆಯುವ ಬೆಳವಣಿಗೆ ಹಾಗೂ ಬದಲಾಪಣೆ ಬಗ್ಗೆ ಪೊಲೀಸರು ಗಮನಹರಿಸಬೇಕು.
- ಶಾಳೆಗಳ ಆವರಣದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಹಾಗೂ ನಿಯಂತ್ರಣ ಕೊಠಡಿಯ ದೂರವಾಣಿ ಸಂಖ್ಯೆ ಪಟ್ಟಿ ಪ್ರಕಟಿಸಬೇಕೆಂಬ ಮಾರ್ಗಸೂಚಿಗಳನ್ನು ತಿಳಿಸಿದೆ. (ವಿಜಯವಾಣಿ: ೨೧.೦೭.೨೦೧೪).

ಪೋಕ್ಸೋ ಕಾಯ್ದೆ-೨೦೧೨ ಜಾರಿ: ಅಪ್ರಾಪ್ತೆಯರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಕಠಿಣ ಕ್ರಮ ಕೈಗೊಳ್ಳುವ ಲೈಂಗಿಕ ಕಿರುಕುಳದಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯದೆಯಡಿ ಮಕ್ಕಳನ್ನು ರಕ್ಷಿಸಲಾಗತ್ತದೆ. ಈ ಮೇಲಿನ ಕಾಯ್ದೆಗಳು ಇತ್ತೀಚೆಗೆ ಬಂದಂತಹ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆ ಕಾನೂನುಗಳಾಗಿವೆ.

------******------

ಅಡಿ ಟಿಪ್ಪಣಿ

1. ಡಾ. ಹಾಲತಿ ಸೋಮಶೇಖರ್, ಸ್ತ್ರೀ ಪರ ಕಾನೂನುಗಳು, ಎಚ್ ಎಂ ಲೋಕೇಶ ವಿಸ್ಮಯ ಪ್ರಕಾಶನ, ೨೦೦೮ ಪು.ಸಂ,೩
2. ಅದೇ ಪು.ಸಂ ೬
3. ಅದೇ ಪು.ಸಂ ೮
4. ಅನಂತಮೂರ್ತಿ ಯು.ಆರ್, ಹಿಂಸೆಯ ಎಡ–ಬಲ ಅಭಿನವ ಪ್ರಕಾಸನ, ಬೆಂಗಳೂರು, ೨೦೦೭, ಪು.ಸಂ ೪೩
5. ಲಿಂಗತ್ವ ಸಮನ್ಯಾಯ, ಮಂಗಳೂರು ವಿ.ವಿ, ಪು.ಸಂ, ೬೬–೬೭
6. ಬಿ.ಕ ಮೂರ್ತೇಶ್ವರಯ್ಯ, ಮಹಿಳೆ ಸಮಾಜ ಕಾನೂನು, ಕಸಾಟಕ ಬುಕ್ ಏಜೆನ್ಸಿ, ೨೦೦೦ ಪು.ಸಂ, ೧೬೯–೧೭೦
7. ನಿರೂಪಮ.ಎಂ, ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ, ಆರತಿ ಪಬ್ಲಿಕೇಷನ್ಸ್ ಬೆಂಗಳೂರು, ೧೯೯೬, ಪು.ಸಂ, ೭೮
8. ಗೀತಾ ಕೃಷ್ಣಮೂರ್ತಿ, ಮಹಿಳೆ ಸಮಾಜ ಮತ್ತು ಕಾನೂನು, ನವ ಕಸಾಟಕ ಪ್ರಕಾಶನ, ಬೆಂಗಳೂರು, ೨೦೦೭, ಪು.ಸಂ ೧೫೦
9. ಪೋಲೀಸ್ ಮ್ಯಾನ್ಯುಯಲ್–೨, ಪು.ಸಂ, ೨೯೫–೨೯೬
10. ಓಡೆಯರ್ ಡಿ.ಹೆಗ್ಗಡೆ, ಮಹಿಳಾ ಹಕ್ಕುಗಳು, ಅರ್ಜುನ್ ಪಬ್ಲಿಷಿಂಗ್ ಹೌಸ್, ೨೦೦೬, ಪು.ಸಂ, ೬೨–೬೫
11. ಎರಾವಿ ಹೆಚ್.ಎಸ್.ಕವಾಂಟಿ, ಭಾರತದ ಸಂವಿಧಾನ, ಸೂರ್ಯ ಪಬ್ಲೀಷಿಂಗ್, ಮಂಗಳೂರು, ಪು.ಸಂ, ೨೩–೨೫
12. ರಾಮಚಂದ್ರ ಜೋಷಿ, ಸಮಗ್ರ ಸಮಾಜ ಶಾಸ್ತ್ರ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೦, ಪು.ಸಂ, ೬೦೯–೬೧೦
13. ಪೋಲಿಸ್ ಮ್ಯಾನುಯಲ್, ೨೯೮–೩೦೨
14. ಲಿಂಗತ್ವ ಸಮನ್ಯಾಯ, ಮಂಗಳೂರು ವಿ.ವಿ, ಪು.ಸಂ, ೭೪
15. ಅದೇ ಪು.ಸಂ, ೭೫
16. ಡಾ.ಸಿ.ಡಿ.ವೆಂಕಟೇಶ್, ಮಹಿಳಾ ಅಧ್ಯಯನ ನೆಲೆಗಳು, ಪು.ಸಂ, ೫೦–೫೨
17. ಅದೇ ಪು.ಸಂ, ೧೧೦
18. ಲಿಂಗತ್ವ ಸಮನ್ಯಾಯ, ಮಂಗಳೂರು ವಿ.ವಿ, ಪು.ಸಂ, ೫೭–೫೯

------******------

ಅಧ್ಯಾಯ ೫

ಮಹಿಳಾ ದೌರ್ಜನ್ಯದ ವಸ್ತುಸ್ಥಿತಿಯ ವಿಶ್ಲೇಷಣೆ

(ಬೆಂಗಳೂರು ನಗರದ ಪೋಲಿಸ್ ದಾಖಲೆಗಳನ್ನು ಅನುಲಕ್ಷಿಸಿ)

೫.೧. ಅತ್ಯಾಚಾರದ ಪ್ರಕರಣಗಳು

೫.೨. ಹೆಣ್ಣುಮಕ್ಕಳ ಹಾಗೂ ಸ್ತ್ರೀಯರ ಅಪಹರಣ

೫.೩. ವರದಕ್ಷಿಣೆಗೆ ಸಂಬಂಧಿಸಿದ ಪ್ರಕರಣಗಳು

೫.೪ ಕೌಟುಂಬಿಕ ವಲಯ ಮತ್ತು ಸಾರ್ವಜನಿಕ ವಲಯದಲ್ಲಿನ ದೌರ್ಜನ್ಯ

೫.೫ ಹೆಂಡತಿಯನ್ನು ಹೊಡೆಯುವುದು

೫.೬ ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ

೫.೭ ಹೆಣ್ಣು ಮಕ್ಕಳನ್ನು ಚುಡಾಯಿಸುವುದು.

೫.೮ ಲೈಂಗಿಕ ದೌರ್ಜನ್ಯ

೫.೯ ವಿಧವೆಯರ ಮೇಲಿನ ಅತ್ಯಾಚಾರ.

೫.೧೦ ಆ್ಯಸಿಡ್ ಪ್ರಕರಣಗಳು.

೫.೧೧. ಬೆಂಗಳೂರು ನಗರದ ಮಹಿಳಾ ದೌರ್ಜನ್ಯಗಳ ಪೋಲೀಸ್ ದಾಖಲೆಗಳಿಗೂ ಮತ್ತು ಕರ್ನಾಟಕ ರಾಜ್ಯದಲ್ಲಿನ ಮಹಿಳಾ ದೌರ್ಜನ್ಯಗಳ ತೌಲನಿಕ ವಿಶ್ಲೇಷಣೆ.

ಅಧ್ಯಾಯ --೫

ಮಹಿಳಾ ದೌರ್ಜನ್ಯದ ವಸ್ತುಸ್ಥಿತಿಯ ವಿಶ್ಲೇಷಣೆ
(ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ)

ನಾನು ಬೆಂಗಳೂರುನಗರದ ಪೊಲೀಸ್ ದಾಖಲೆಗಳನ್ನು ಅನುಲಕ್ಷಿಸಿ, ಮಹಿಳೆಯರ ಮೇಲಾಗಿರುವ ದೌರ್ಜನ್ಯಗಳನ್ನು ಕುರಿತು ವಿಶ್ಲೇಷಣೆ ಮಾಡಲಿರುವ ವಸ್ತುಸ್ಥಿತಿಯ ಅಧ್ಯಯನಕ್ಕೆ ಈ ಕೆಳಗಿನ ಪ್ರಕರಣಗಳಾದ ಅತ್ಯಾಚಾರದ ಪ್ರಕರಣಗಳು, ಹೆಣ್ಣುಮಕ್ಕಳ ಹಾಗೂ ಸ್ತ್ರೀಯರ ಅಪಹರಣಗಳು, ವರದಕ್ಷಿಣೆಗೆ ಸಂಬಂಧಿಸಿದ ಪ್ರಕರಣಗಳು, ಕೌಟುಂಬಿಕ ವಲಯ ಮತ್ತು ಸಾರ್ವಜನಿಕ ವಲಯದಲ್ಲಿನ ದೌರ್ಜನ್ಯ, ಹೆಂಡತಿಯನ್ನು ಹೊಡೆಯುವುದು, ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಲೈಂಗಿಕ ದೌರ್ಜನ್ಯ, ವಿಧವೆಯರ ಮೇಲಿನ ಅತ್ಯಾಚಾರ, ಆ್ಯಸಿಡ್ ಪ್ರಕರಣಗಳು ಈಗೆ ಅಧ್ಯಾಯವನ್ನು ವಸ್ತುಸ್ಥಿತಿಯಲ್ಲಿ ಅಧ್ಯಯನ ಕೈಗೊಂಡು ಇಂದು ಮಹಿಳೆಯರ ಮೇಲಾಗುತ್ತಿರುವ ಹಿಂಸೆ ಹಾಗೂ ದೌರ್ಜನ್ಯಗಳನ್ನು ವಿಶ್ಲೇಷಿಸಲಾಗಿದೆ.

ನಾಡಪ್ರಭು ಕೆಂಪೇಗೌಡರಿಂದ ಕಟ್ಟಿಸಲ್ಪಟ್ಟ ಬೆಂಗಳೂರು ನಗರ ಹೈದರಾಲಿ, ಟಿಪ್ಪು, ಮೈಸೂರು ರಾಜರಾದಿಯಾಗಿ ಅನೇಕರಿಂದ ಆಳಲ್ಪಟ್ಟ, ಬೆಂಗಳೂರು ನಗರವು ಇಂದು ಭಾರತದಲ್ಲಿ ಅಷ್ಟೇ ಅಲ್ಲ ಇಡೀ ವಿಶ್ವದಲ್ಲಿಯೇ ಒಂದು ಪ್ರಮುಖ ನಗರವಾಗಿದೆ. ಇಂದಿನ ಕೈಗಾರೀಕರಣ ಸಮಯದಲ್ಲಿ ಸಿಲಿಕಾನ್ ಸಿಟಿ ಎಂದು ಗುರುತಿಸಲ್ಪಡುವ ಬೆಂಗಳೂರು ನಗರವು ಭಾರತದ ನಗರಗಳಾದ ಮುಂಬೈ, ದೆಹಲಿ, ಕೊಲ್ಕತ್ತ, ಹಾಗೂ ಚೆನ್ನೈ ನಂತರದ ಅತಿ ದೊಡ್ಡ ನಗರವಾಗಿದೆ. ಇದು ಬಹು ಭಾಷೆ, ಬಹುಜನಾಂಗ, ಮತ್ತು ವೈವಿಧ್ಯಮಯ ಸಂಸ್ಕೃತಿಯ ಜನರನ್ನು ಒಳಗೊಡಂತಹ ನಗರವಾಗಿದ್ದು, ಮಿನಿ ಇಂಡಿಯಾ ಎಂದೇ ಹೆಸರು ಪಡೆದಿದೆ.

ಬೆಂಗಳೂರು ನಗರವು ಇಂದು ಏಷ್ಯಾದಲ್ಲಿಯೇ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ೨೦೧೧ ರ ಜನಗಣತಿಯಂತೆ ೯೫,೮೮,೯೧೦ ಜನ ಸಂಖ್ಯೆಯನ್ನು ತನ್ನ ಒಡಿಲಲ್ಲಿಟ್ಟುಕೊಂಡಿದೆ. ಈ ಜನಸಂಖ್ಯೆಯಲ್ಲಿ ೫೦,೨೫,೪೯೮ ಪುರುಷರಿದ್ದರೆ ೪೫,೬೩,೪೨೧ ಮಹಿಳೆಯರಿದ್ದಾರೆ. ಅಂದರೆ ಪ್ರತಿ ೧೦೦೦ ಪುರುಷರಿಗೆ ೯೦೮ ಮಾತ್ರ ಮಹಿಳೆಯರಿದ್ದಾರೆ. ಹೀಗೆ ಬೃಹತ್ ಜನಸಂಖ್ಯೆ ಇರುವ ಬೆಂಗಳೂರಿನಲ್ಲಿ ಅಪರಾಧಗಳ ಸಂಖ್ಯೆಯು ಸಹ ಅಷ್ಟೇ ಬೃಹತ್ತಾಗಿ ಬೆಳೆದಿದೆ, ಬೆಂಗಳೂರಿನಲ್ಲಿ ಸುಮಾರು ೧೪೦ ಪೋಲೀಸ್ ಠಾಣೆಗಳಲ್ಲಿ ಪ್ರತಿದಿನ ಒಂದಲ್ಲ ಒಂದು ಪ್ರಕರಣವು ದಾಖಲಾಗುತ್ತಿರುತ್ತದೆ. ಸಂಕೀರ್ಣವಾದ ಜೀವನ ಶೈಲಿ ಹಾಗೂ ಔದ್ಯೋಗೀಕ ಕಾರಣಗಳು ಮತ್ತು ಆರ್ಥಿಕ, ಸಮಾಜಿಕ ಹಾಗೂ ಕೌಟುಂಬಿಕ ಕಾರಣಗಳಿಂದಾಗಿ ಪೋಲಿಸ್ ಠಾಣೆಗಳಲ್ಲಿ ದಾಖಲಾಗುವ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುಗತಿಯಾಗಿ ಸಾಗುತ್ತಿದೆ.

ಇಂತಹ ಅಪರಾಧ ಪ್ರಕರಣಗಳಲ್ಲಿ ಪ್ರಮುಖ ಬಲಿಪಶು ಎಂದರೆ ಮಹಿಳೆ. ಇಂದಿನ ಆಧುನಿಕ ಜೀವನ ಶೈಲಿಯಿಂದಾಗಿ ನಗರದ ಮೂಲ ನಿವಾಸಿ ಮಹಿಳೆಯರು ಶಿಕ್ಷಣ, ಜೀವನೋಪಾಯ ಮತ್ತು ಉದ್ಯೋಗಗಳನ್ನು ಅರಿಸಿ ಬೆಂಗಳೂರು ನಗರಕ್ಕೆ ಬಂದು ಇಲ್ಲಿ ವಾಸವಿರುವ ಅನೇಷ್ಟೋ ಮಹಿಳೆಯರು ಇಂದು ನಾನಾ ರೀತಿಯ ದೈಹಿಕ ಮತ್ತು ಮಾನಸಿಕ ದೌರ್ಜನ್ಯಗಳಿಗೆ ಬಲಿಯಾಗುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ದೇಶದಾದ್ಯಂತ ಪ್ರತಿ ವರ್ಷ ಸುಮಾರು ೧೦ ಲಕ್ಷ ಜನ ಸ್ತ್ರೀಯರ ಹತ್ಯೆಗೊಳಗಾಗುತ್ತಿದ್ದಾರೆ. ಇನ್ನೂ ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ.ಮತ್ತಿತರ ಪ್ರಕರಣಗಳಂತು ಲೆಕ್ಕವೇ ಇಲ್ಲ. ಇಂತಹ ಮಹಿಳೆಯರ ವಿರುದ್ಧ ದೌರ್ಜನ್ಯಗಳಿಂದ ಬೆಂಗಳೂರು ನಗರವು ಹೊರತಾಗಿಲ್ಲ. ಬೆಂಗಳೂರು ನಗರವು ಇಂದು ಪ್ರತಿಷ್ಠಿತ ನಗರವಾಗಿದ್ದು ಎಲ್ಲಾ ರಾಜ್ಯಗಳ ಮತ್ತು ಬೇರೆ ಬೇರೆ ದೇಶಗಳಿಂದ ಬಂದು ಜನರು ಜೀವನ ಸಾಗಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಹೊರಗಿನ ಜನ ವಿದ್ಯಾಭ್ಯಾಸದ ಮತ್ತು ಕೆಲಸದ ಕಾರಣಕ್ಕಾಗಿ ಬಂದಿರುತ್ತಾರೆ.ಇದರಿಂದ ಬೆಂಗಳೂರಿನಲ್ಲಿ ಅಧಿಕ ಜನರು ವಾಸಿಸುವ ಪ್ರಮಾಣವು ಅಧಿಕವಾಗುತ್ತಾ ಹೋದಂತೆ ಅದರಲ್ಲೂ ನಗರ ಪ್ರದೇಶಗಳಲ್ಲಿ ಬೆಂಗಳೂರಿನಂತಹ ಪ್ರತಿಷ್ಠಿತ ನಗರದಲ್ಲಿ ಇಂದು ಅಪರಾಧಗಳು ಸಾಮಾನ್ಯವಾಗಿವೆ. ಅದರಂತೆ ಈ ಅಪರಾಧವು ದಿನೇ ದಿನೆ ಹೆಚ್ಚಿ ಇಂದು ಉಗ್ರ ರೂಪ ತಾಳಿರುವುದನ್ನು ನಾವು ಗಮನಿಸಬಹುದಾಗಿದೆ. ಏಷ್ಟೇ ಕಾನೂನುಗಳು ಇದ್ದರೂ ಸಹ ದೌರ್ಜನ್ಯಗಳ ಪ್ರಮಾಣವು ಹಿಗ್ಗಿಲ್ಲದೆ ನಡೆಯುತ್ತಿರುವುದರಿಂದ ನಾವು ಇಂದು ಬೆಂಗಳೂರು ನಗರದಲ್ಲಿ ಅದರಲ್ಲೂ ಮಹಿಳಾ ವಿರುದ್ಧದ ದೌರ್ಜನ್ಯಗಳು ಅಧಿಕವಾಗಿರುವುದರಿಂದ ದೌರ್ಜನ್ಯಗಳು ಏಕೆ ನಡೆಯುತ್ತವೆ, ಮತ್ತು ಎಷ್ಟು ಪ್ರಮಾಣದಲ್ಲಿ ಯಾವ ಯಾವ ಸ್ವರೂಪಗಳಲ್ಲಿ ನಡೆಯುತ್ತಿವೆ ಎಂದು ನಾವು ಪ್ರಸ್ತುತವಾಗಿ ಒಂದು ಅಧ್ಯಯನ ಮಾಡುವುದು ಸೂಕ್ತ ಎಂದು ತಿಳಿದಾಗ, ಬೆಂಗಳೂರು ನಗರದ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಈ ಕೆಳಗಿನಂತೆ ಅಧ್ಯಯನ ಮಾಡಿ ವಿಸ್ತಾರವಾಗಿ ವಿಶ್ಲೇಷಿಸಲಾಗಿದೆ.

೫.೧ ಅತ್ಯಾಚಾರ ಪ್ರಕರಣಗಳು

ಕ್ರ.ಸಂ	ಅತ್ಯಾಚಾರ ಪ್ರಕರಣಗಳು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರಂ	–	–	೦೧	೦೫	೦೨	–	–	೮
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	–	೦೧	೦೭	೦೧	೦೧	–	–	೧೦
೫	ಶೇಷಾದ್ರಿಪುರಂ	–	–	–	–	–	೦೨	–	೦೨
೬	ಜ್ಞಾನಭಾರತಿ	೦೨	೦೨	೦೩	೦೨	--	೦೨	–	೧೧
೭	ವಿವೇಕನಗರ	–	–	–	–	–	೦೧	–	೦೧
೮	ಬಾಣಸವಾಡಿ	–	೦೨	೦೩	೦೧	೦೧	–	೦೧	೦೮
೯	ಹಲಸೂರ್ ಗೇಟ್	–	–	೦೧	೦೬	೦೨	–	–	೦೯
೧೦	ಸದಾಶಿವನಗರ	–	–	೦೧	–	೦೧	೦೧	೦೨	೦೫
೧೧	ಕಬ್ಬನ್ ಪಾರ್ಕ್	೦೧	–	–	–	೦೧	೦೧	೦೧	೦೪
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	೦೧	೦೧	–	–	೦೨
೧೪	ಹೈಗ್ರೌಂಡ್	–	–	೦೧	೦೧	–	–	–	೦೨
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	೦೧	೦೧	೦೨
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೦೩	೦೫	೧೭	೧೭	೦೯	೦೮	೦೫	೬೪
	ಶೇಕಡವಾರು	**೪.೬೮**	**೭.೮೧**	**೨೬.೫೬**	**೨೬.೫೬**	**೧೪.೦೬**	**೧೨.೦೧**	**೭.೮೧**	

೫.೧ ಕೋಷ್ಟಕದಲ್ಲಿ ನೀಡಿದ ಮಾಹಿತಿಯ ನಿರೂಪಣೆ.

ಬೆಂಗಳೂರು ನಗರದ ಪೋಲೀಸ್ ದಾಖಲಾತಿ ಅನ್ವಯಿಸಿ ಅತ್ಯಾಚಾರ ಪ್ರಕರಣಗಳ ಸಾಮಾಜಿಕ ವಿಶ್ಲೇಷಣೆಯಲ್ಲಿ ೨೦೦೫ ರ ಅತ್ಯಾಚಾರ ಪ್ರಕರಣ ಶೇಕಡಾವಾರು ೪.೬೮ ೨೦೦೬ ರಲ್ಲಿ ಶೇಕಡ ೭.೮೧ ೨೦೦೭ ರಲ್ಲಿ ಶೇಕಡ ೨೬.೫೬, ೨೦೦೮ ರಲ್ಲಿ ಶೇಕಡ ೨೬.೫೬ .೨೦೦೯ ರಲ್ಲಿ ಶೇಕಡ ೧೪.೦೬ ೨೦೧೦ ರಲ್ಲಿ ಶೇಕಡ ೧೨.೦೫ ೨೦೧೧ ರಲ್ಲಿ ಶೇಕಡ ೭.೮೧ ಎಂದು ತಿಳಿದು ಬಂದಿದೆ. ಮೇಲಿನ ಕೋಷ್ಟಕದಲ್ಲಿ ೨೦೦೫ ರಿಂದ ೨೦೧೧ ರವರೆಗೆ ಒಟ್ಟು ಪ್ರಕರಣಗಳು ೬೪ ಎಂದು ತಿಳಿದುಬಂದಿದೆ. ಈ ಒಟ್ಟು ಪ್ರಕರಣಗಳಲ್ಲಿ ೨೦೦೫ ರಲ್ಲಿ ಬೆಂಗಳೂರು ನಗರದಲ್ಲಿ ಅತೀ ಕಡಿಮೆ ಪ್ರಕರಣಗಳು ದಾಖಲಾಗಿವೆ. ಅತಿ ಹೆಚ್ಚು ಎಂದರೆ ೨೦೦೮ ರಲ್ಲಿ ೧೭ ಪ್ರಕರಣಗಳು ದಾಖಲಾಗಿವೆ. ಈ ಒಟ್ಟು ಪ್ರಕರಣಗಳಲ್ಲಿ ೮ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ. ೪೦ ಪ್ರಕರಣಗಳನ್ನು ಖುಲಾಸೆ ಮಾಡಲಾಗಿದೆ. ಉಳಿದ ೧೬ ಪ್ರಕರಣಗಳು ತನಿಖೆ ಹಂತದಲ್ಲಿವೆ ಎಂದು ತಿಳಿದುಬಂದಿದೆ. ಆದರೂ ಸಹ ಈ ಮೇಲಿನ ಕೋಷ್ಟಕದಲ್ಲಿ ಪ್ರಕರಣಗಳನ್ನು ನೋಡಿದಾಗ ನನಗೆ ತಿಳಿದು ಬರುವ ಅಂಶಗಳೆಂದರೆ ಅತ್ಯಾಚಾರಗಳು ಎಲ್ಲಾ ವರ್ಗದ ಮಹಿಳೆ ಮತ್ತು ಅಪ್ರಾಪ್ತ ಬಾಲಕಿಯರ ಮೇಲೆಯೂ ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಿರುವುದು ಈ ಅಧ್ಯಯನದಲ್ಲಿ ತಿಳಿದುಬಂದಿದೆ. ಅತಿ ಹೆಚ್ಚಿನ ಅತ್ಯಾಚಾರ ಪ್ರಕರಣಗಳು ಅತಿ ಚಿಕ್ಕ ವಯಸ್ಸಿನ ಅಪ್ರಾಪ್ತ ಬಾಲಕೀಯರ ಮೇಲೆ ನಡೆಯುತ್ತಿವೆ. ಕಾರಣ ಅವರು ತಮ್ಮ ಕಾಮತೃಷೆಯನ್ನು ತೀರಿಸಿಕೊಂಡು ನಂತರ ಆವ್ಯಕ್ತಿ ಕಾನೂನು ಸಂಕೋಲೆಗಳಿಂದ ಮುಕ್ತನಾಗಲು ಹಾಗೂ ಚಿಕ್ಕ ಹುಡುಗಿಯರಿಗೆ ತೀರಾ ಯೋಚನಾ ಶಕ್ತಿ ಮತ್ತು ಬುದ್ದಿವಂತಳಾಗಿರುವುದಿಲ್ಲ ಎಂದು ಅವಳನ್ನು ಬಾರೀ ಚಾಣಕ್ಷತಣದಿಂದ ಚಾಕೊಲೇಟ್ ಮತ್ತು ಇತರೇ ಆಕರ್ಷಣೆಗಳಿಂದ ಆಕರ್ಷಣೆಮಾಡಿ ಬೇರೆಯವರಿಗೆ ತಿಳಿಯದ ರೀತಿ ಅಪ್ರಾಪ್ತ ಮಗುವಿಗೂ ಕೂಡ ಅರ್ಥವಾಗದ ರೀತಿಯಲ್ಲಿ ಅತ್ಯಾಚಾರ ನಡೆಸುತ್ತಾರೆ ಹಾಗೂ ತಮ್ಮ ಸೇಡನ್ನು ತೀರಿಸಿಕೊಳ್ಳಲು ಸಹ ಅತ್ಯಾಚಾರ ಮಾಡುತ್ತಾರೆ.

ಈ ಮೇಲಿನ ಎಲ್ಲಾ ಅತ್ಯಾಚಾರಗಳನ್ನು ನಾವು ಗಮನಿಸಿದಾಗ ಇಲ್ಲಿ ಕಂಡುಬರುವುದೇನೆಂದರೆ ಇಲ್ಲಿ ಜಾತೀಯ ಹೆಸರಿನಲ್ಲಿ ಅತ್ಯಾಚಾರ, ಶಿಕ್ಷಕ ವಿದ್ಯಾರ್ಥಿ ಜೊತೆಯಲ್ಲಿ, ತಂದೆ ಮಗಳ ಮೇಲಿನ ಅತ್ಯಾಚಾರ, ಸಹಪಾಠಿಯಿಂದ ಅತ್ಯಾಚಾರ, ಇವುಗಳನ್ನು ನಾವು ಸಂಕ್ಷಿಪ್ತವಾಗಿ ಗಮನಿಸಿದಾಗ ಇದರಲ್ಲಿ ಕಂಡುಬರುವುದೇನೆಂದರೆ ಬಹುತೇಕವಾಗಿ ಕುಟುಂಬದವರು ನೆರೆಹೊರೆಯವರು, ಸ್ನೇಹಿತರು ಮತ್ತು ಪ್ರೇಮಿಗಳಿಂದ ಅತ್ಯಾಚಾರ ನಡೆಯುವುದು ಕಂಡುಬಂದಿದೆ ಹಾಗೂ ಸಾಮೂಹಿಕ ಅತ್ಯಾಚಾರಗಳು ಕಂಡುಬಂದಿವೆ. ಇಲ್ಲಿ ಹೆಣ್ಣಿನ ಆರ್ಥಿಕತೆ ಹಾಗೂ ಅವಳು ಪುರುಷನ ಆಕಾಂಕ್ಷೆಗಳನ್ನು ತೀರಿಸಿಕೊಳ್ಳುವ ವಸ್ತುವೆಂದು ಭಾವಿಸಿ ಒಟ್ಟಾರೆಯಾಗಿ ಇಲ್ಲಿ ಹೆಣ್ಣನ್ನು ದುರ್ಬಲಳು, ಅಶಕ್ತಳು, ಎಂದು ಜಾತಿ ಮತ್ತು ಅಧಿಕಾರದ ದುರ್ಬಳಕೆಯಿಂದಲೂ ಸಹ ಅತ್ಯಾಚಾರ ವೆಸಗುವುದನ್ನು ಕಾಣಬಹುದು. ತಂದೆಯ ವಿಷಯದಲ್ಲಿ ಭದ್ರತೆ ನೆಲೆಯಲ್ಲಿ ಸಾಕಿ ಸಲುವ ನೆಪದಲ್ಲಿ ದುರ್ಬಳಕೆ ಅಧಿಕಾರ, ಅಂತಸ್ತು, ಜಾತಿ ಇಂತಹ ಪುರುಷ

ಪ್ರಧಾನತೆಯ ಗುಣಗಳಿಂದ ಎಲ್ಲಾ ವರ್ಗದ ಮಹಿಳೆಯರನ್ನು ಅಥವಾ ಅಪ್ರಾಪ್ತ ವಯಸ್ಸಿನ ಬಾಲಕಿಯರನ್ನು ಅತ್ಯಾಚಾರವೆಸಗಿರುವುದನ್ನು ನಾವು ಈ ಮೇಲೆ ಗಮನಿಸಬಹುದು.

ಕಾನೂನಿನ ದೃಷ್ಟಿಯಿಂದ ಇಂದು ನಮ್ಮ ರಾಜ್ಯ ಮತ್ತು ದೇಶದಲ್ಲಿ ಕಾನೂನುಗಳು ಅತ್ಯಂತ ಪ್ರಬಲ ಹಾಗೂ ಪರಿಣಾಮಕಾರಿ ಶಿಕ್ಷೆಗಳಾದ ಜೀವಾವಧಿ ಶಿಕ್ಷೆ, ಗುಂಡಾಕಾಯ್ದೆ, ದಂಡವಿಧಿಸುವುದು, ಮರಣದಂಡನೆಯಂತಹ ಶಿಕ್ಷೆ ಇದ್ದರೂ ಸಹ ಅತ್ಯಾಚಾರಗಳು ನಿರಂತರವಾಗಿ ಎಲ್ಲಾ, ಜಾತಿ, ವರ್ಗ, ಪ್ರದೇಶಗಳಲ್ಲಿ ಅಪ್ರಾಪ್ತವಯಸ್ಸಿನವರ ಮೇಲೂ ನಿರಂತರವಾಗಿ ನಡೆಸುತ್ತಿರುವುದು ಕಂಡುಬರುತ್ತಿದೆ. ಕಾರಣ ನಮ್ಮ ಕಾನೂನಿನಲ್ಲಿ ಒಬ್ಬ ಆರೋಪಿ ಅಪರಾಧಿಯಾಗಬೇಕಾದರೆ ನ್ಯಾಯಾಲಯಗಳು ತೀರ್ಪನ್ನು ನೀಡಬೇಕಾದರೆ ಕೇಸನ್ನು ಅಧ್ಯಯನ ಮಾಡಿ ಅಂತಿಮ ತೀರ್ಪು ನೀಡುವುದರೊಳಗೆ ಕೆಲವು ವರ್ಷಗಳಾಗುತ್ತವೆ. ಅತ್ಯಾಚಾರದ ಬಗ್ಗೆ ಸಾಕ್ಷ್ಯಾಧಾರಗಳ ಸಹಿತ ವಿಚಾರಣೆ ಮಾಡುವುದರಿಂದ ಅತ್ಯಾಚಾರದಲ್ಲಿ ಸಾಕ್ಷಿಯೇ ಪ್ರಮುಖವಾಗಿರುವುದರಿಂದ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಸಮಯದಲ್ಲಿ ಮಾತ್ರ ಸಾಕ್ಷಿ ಲಭ್ಯವಾಗುವುದರಿಂದ ೨ ಅಥವಾ ೩ ದಿವಸಗಳ ಕಾಲ ಬಿಟ್ಟು ಹೋಗಿ ಠಾಣೆಯಲ್ಲಿ ದೂರು ದಾಖಲು ಮಾಡಿದರೆ ಅವು ಸಾಕ್ಷಿಗೆ ನೆರವು ನೀಡಲು ಸಾಧ್ಯವಿಲ್ಲ. ಕೆಲವು ಸಾಕ್ಷ್ಯಾಪುರಾವೆಗಳು ಇಲ್ಲದೇ ಕೇಸುಗಳು ನಾಯ್ಯಾಲಯದಿಂದ ಖುಲಾಸೆಯಾದರೆ ಇನ್ನೂ ಕೆಲವು ಪ್ರಕರಣಗಳು ವಿಚಾರಣೆ ಹಂತದಲ್ಲಿರುವಾಗ ರಾಜಕೀಯ ಒತ್ತಡ, ಜಾತೀಯ ಗಣ್ಯವ್ಯಕ್ತಿ, ಹಿರಿಯ ಅಧಿಕಾರಿಗಳಿಂದ, ಒತ್ತಡ ಬಂದು ಕೆಲವು ಪ್ರಕರಣಗಳು ಖುಲಾಸೆಯಾಗುತ್ತವೆ ಎಂದು ತಮ್ಮ ಕಾರ್ಯಕ್ಷೇತ್ರದ ಮಾಹಿತಿಯಿಂದ ತಿಳಿದು ಬಂದಂತಹ ಮಾಹಿತಿಗಳಾಗಿವೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಅತ್ಯಾಚಾರ ಪ್ರಕರಣವು ಎಲ್ಲಾ ಜಾತಿ, ವರ್ಗ, ಬಡವ ಶ್ರೀಮಂತ, ವಿದ್ಯಾವಂತ, ಅವಿದ್ಯಾವಂತ ಮತ್ತು ಎಲ್ಲಾ ವರ್ಗದ ಮಹಿಳೆಯರ ಮೇಲೂ ಪುರುಷರು ಅತ್ಯಾಚಾರ ಮಾಡುತ್ತಿರುವುದು ಕಂಡುಬಂದಿದೆ. ಪುರುಷರು ಅತ್ಯಾಚಾರದ ವಿರುದ್ಧ ಕಾನೂನಿನ ಅರಿವು ಇದ್ದರೂ ಅಥವಾ ಇಲ್ಲದಿದ್ದರೂ ಸಹ ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಿವೆ. ಮಹಿಳೆ ಇರುವುದು ಪುರುಷನಿಗಾಗಿ, ಅವಳನ್ನು ತಮ್ಮ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳುವ ವಸ್ತುವೆಂದು ಭಾವಿಸಿದ್ದಾನೆ. ಮತ್ತೇ ಪ್ರತಿ ಮಹಿಳೆಯ ದೇಹದ ಮೇಲೆ ಪ್ರತಿಯೊಬ್ಬ ಪುರುಷನಿಗೂ ಹಕ್ಕಿದೆ ಎಂದು ಪುರುಷ ಪ್ರಧಾನ ಸಮಾಜ ಭಾವಿಸಿದೆ. ಇಂತಹ ಪ್ರಕರಣಗಳನ್ನು ತಡೆಯಲು ಸರ್ಕಾರ ಕಾನೂನುಗಳನ್ನು ಜಾರಿಗೊಳಿಸಿದರೂ ಸಹ ಇವು ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೋಡಿದರೆ ನಮ್ಮ ಪುರುಷ ಪ್ರಧಾನ ವ್ಯವಸ್ಥೆಯ ಎಲ್ಲಾ ಮಜಲುಗಳು ಗೊತ್ತಾಗುತ್ತವೆ. ಇತ್ತೀಚೆಗೆ ಉಗ್ರ ಕಾನೂನುಗಳನ್ನು ಜಾರಿಗೆ ತಂದರೂ ಸಹ ಪ್ರಕರಣಗಳು ನಡೆಯುತ್ತಿವೆ. ಈ ಪ್ರಕರಣಗಳಿಗೆ ಉಗ್ರ ಶಿಕ್ಷೆ ಇರುವುದರಿಂದ ಬಹುತೇಕ ಪ್ರಕರಣಗಳು ತನಿಖೆಯಿಂದ ಖುಲಾಸೆಯಾಗಿರುತ್ತವೆ. ಕೇವಲ ಕಾನೂನುಗಳಿಂದ ದೌರ್ಜನ್ಯಗಳನ್ನು ತಡೆಯಲು ಸಾಧ್ಯವಿಲ್ಲ. ಮಾನವನ ಮನಸ್ಥಿತಿ ಬದಲಾಗಬೇಕು. ಅದರಲ್ಲೂ ಇತ್ತೀಚೆಗೆ ಮಕ್ಕಳ ಮೇಲೆ ಅತ್ಯಾಚಾರಗಳು ಜಾಸ್ತಿಯಾಗುತ್ತಿರುವ ವೃತ್ತ

ಪತ್ರಿಕೆಗಳಿಂದ ಮತ್ತು ಮಿಡೀಯಾಗಳಿಂದ ತಿಳಿದುಬಂದಿರುವ ವಿಷಯವಾಗಿದೆ. ಒಟ್ಟಾರೆಯಾಗಿ ಅತ್ಯಾಚಾರ ಪ್ರಕರಣಗಳು ನಡೆಯುತ್ತಿರುವುದನ್ನು ನೋಡಿದರೆ ಅತ್ಯಾಚಾರವನ್ನು ನಮ್ಮ ಪುರುಷ ಪ್ರಧಾನ ವ್ಯವಸ್ಥೆಯು ಒಪ್ಪಿರುವುದು ತಿಳಿದುಬರುತ್ತದೆ.

ಕ್ರ.ಸಂ	ಹೆಣ್ಣುಮಕ್ಕಳಹಾಗೂ ಸ್ತ್ರೀಯರ ಅಪಹರಣ	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರಂ	–	–	–	–	–	೦೭	೧೬	೨೩
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	೦೨	೦೨	೦೧	೦೧	–	೦೧	೦೩	೧೦
೪	ವಿಜಯನಗರ	೦೨	೦೨	–	–	೦೨	೦೨	೦೧	೦೯
೫	ಶೇಷಾದ್ರಿಪುರಂ	೦೧	೦೧	–	–	೦೧	೦೧	೦೩	೦೭
೬	ಜ್ಞಾನಭಾರತಿ	೦೨	೦೪	೦೧	–	೦೨	–	೦೧	೧೦
೭	ವಿವೇಕನಗರ	–	–	–	–	–	–	–	೦೦
೮	ಬಾಣಸವಾಡಿ	೦೩	೦೩	೦೨	೦೩	೦೨	೧೮	೧೯	೫೦
೯	ಹಲಸೂರ್ ಗೇಟ್	–	–	–	೦೨	೦೪	೦೧	೦೨	೦೯
೧೦	ಸದಾಶಿವನಗರ	–	–	–	–	೦೯	–	–	೦೯
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	೦೧	–	೦೩	೦೪	೦೩	೧೧
೧೩	ಶಿವಾಜಿನಗರ	–	–	–	–	೦೧	೦೩	೦೪	೦೮
೧೪	ಹೈಗ್ರೌಂಡ್	–	–	–	–	೦೧	೦೨	–	೦೩
೧೫	ಕಮರ್ಷಿಯಲ್ ಸ್ಟ್ರೀಟ್	೦೨	–	೦೧	–	೦೨	–	–	೦೫
೧೬	ಎಸ್.ಜೆ.ಪಾರ್ಕ್	–	೦೧	–	–	–	೦೧	೦೧	೦೩
	ಒಟ್ಟು	೧೨	೧೩	೦೬	೦೬	೨೭	೪೦	೫೩	೧೫೭
	ಶೇಕಡವಾರು	೭.೬೪	೮.೨೮	೩.೮೨	೩.೮೨	೧೭.೧೯	೨೫.೪	೩೩.೭	

೫.೨, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೭ ರಲ್ಲಿ ಶೇಕಡ ೩.೮೨ ಅತೀ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೧ ರಲ್ಲಿ ಶೇಕಡ ೩೩.೭ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ದಾಖಲಾದ ೩೦ ಪ್ರಕರಣಗಳ ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ೬೦ ಕೇಸುಗಳು ಖುಲಾಸೆಗೊಂಡಿವೆ. ಉಳಿದ ಪ್ರಕರಣಗಳು ತನಿಖೆ ಹಂತದಲ್ಲಿವೆ. ಈ ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ ನಾವು ಈ ಪೋಲೀಸ್ ದಾಖಲೆಯಲ್ಲಿ ಅಭ್ಯಾಸಿಸಿದಂತೆ ದಾಖಲಾತಿಗಳಲ್ಲಿ ಹೆಣ್ಣು ಮಕ್ಕಳ ಅಂದರೆ ಅವರ ಅವಿದ್ಯಾವಂತರು, ಚಿಕ್ಕವಯಸ್ಸಿನವರು ಬೇರೆ ಪ್ರದೇಶಕ್ಕೆ ಹೋಗಿರಬಹುದು ಅಥವಾ ಭಾಷೆಯ ಸಮಸ್ಯೆಯಿಂದ ಅವರು ತಮ್ಮ ಸ್ವಂತ ಊರು ಅಥವಾ ಸ್ಥಳಕ್ಕೆ ಹೋಗದೇ ಇದ್ದಾಗ ಅಂತಹ ಸಮಯದಲ್ಲಿ ಪೋಲೀಸ್ ದಾಖಲಾತಿಗಳಲ್ಲಿ ಈ ದೂರು ಅರ್ಜಿಗಳನ್ನು ಸಹ MISSING COMPLIANT ಆಗುತ್ತವೆ ಹೊರತು ಇವು KIDNAPING CASES ಆಗುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ MISSING COMPLIANT ಗೆ ಸೇರಿರುವುದರಿಂದ ಪ್ರಕರಣಗಳು ಹೆಚ್ಚು ಆದಂತೆ ನಮಗೆ ಗೋಚರಿಸುತ್ತವೆ.

ಅಪಹರಣವು ಹಿಂಸೆಯ ರೂಪದಲ್ಲಿದ್ದು ಸಮಾಜದಲ್ಲಿ ಕಂಡುಬರುವ ಒಂದು ಅಮಾನುಷ್ಯ ಕೃತ್ಯವಾಗಿದೆ. ಅಪಹರಣವು ಲೈಂಗಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಕಾರಣಗಳಿಂದ ಸಂಭವಿಸುತ್ತಿದ್ದ ಅಪರಾಧ ಸ್ವರೂಪವಾಗಿದೆ. ಅಪಹರಣಕಾರ ಸಾಮಾಜಿಕ ಕಾನೂನಾತ್ಮಕ ನಿಯಮಗಳನ್ನು ಉಲ್ಲಂಘನೆ ಮಾಡುತ್ತಾನೆ. ಮಹಿಳೆಯರೇ ಅತಿ ಹೆಚ್ಚಾಗಿ ಅಪಹರಣ ಪ್ರಕರಣಗಳಲ್ಲಿ ಕಂಡುಬರುತ್ತಿದ್ದಾರೆ. ಕಾರಣ ಲೈಂಗಿಕ ಅಗತ್ಯತೆ, ಆರ್ಥಿಕ ಉದ್ದೇಶ, ವೈರತ್ವ ಅಪರಾಧಗಳು ಸಂಭವಿಸುತ್ತವೆ. ಅಪಹರಣ ಕ್ಷೇತ್ರ ಸ್ಥಳಿಯ ಪ್ರದೇಶದಿಂದ ಅಂತರಾಷ್ಟ್ರೀಯವಾಗಿ ಸಹ ಕಂಡುಬರುತ್ತದೆ. ಇದು ಒಂದು ಜಾಗತೀಕ ಸಮಸ್ಯೆಯಾಗಿರುತ್ತದೆ. ಆದರೆ ಇತ್ತೀಚಿನ ಅಪಹರಣ ಪ್ರಕರಣಗಳು ಅಪಹರಣ ಮಾಡಿ ಅಥವಾ ಮಹಿಳೆಯ ಪೋಷಕರಿಂದ ಹಣವನ್ನು ಪಡೆಯುವುದಕ್ಕೋಸ್ಕರ ಇತ್ತೀಚಿನ ಅಪಹರಣಗಳು ಹೆಚ್ಚಾಗಿ ಕಂಡುಬರುತ್ತಿರುವೆ. ಪ್ರೀತಿ ನಿರಾಕರಣೆಯಾದಾಗ ಬಲಾತ್ಕಾರ ಸಂಭೋಗ ನಡೆಸುವುದಕ್ಕಾಗಿ ಅಪಹರಣ ಮಾಡುತ್ತಿರುವುದು ಈ ಮೇಲಿನ ಅಧ್ಯಯನದಿಂದ ತಿಳಿದು ಬಂದಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ನಮ್ಮ ಪ್ರಾಚೀನಾ ಭಾರತದಿಂದಲೂ ಸಹ ಪುರುಷನು ಶ್ರೇಷ್ಟ, ಮಹಿಳೆಗೆ ಕನಿಷ್ಟ ಸ್ಥಾನವನ್ನು ನೀಡಿರುವುದನ್ನ ನಾವು ಕಾಣಬಹುದು. ಮಹಿಳೆಯು ಅಬಲೆ, ಅವಳು ತಂದೆ, ಗಂಡ, ಮಕ್ಕಳ ಆಶ್ರಯದಲ್ಲಿ ಈಡೀ ಜೀವನವನ್ನು ಸಾಗಿಸುತ್ತಾಳೆ. ಆದ್ದರಿಂದ ಮದುವೆಯ ಸಮಯದಲ್ಲಿ ಗಂಡನಿಗೆ ಶ್ರೇಷ್ಟ ಸ್ಥಾನವಿರುವುದರಿಂದ ಆ ಸಮಯದಲ್ಲಿ ಅವನಿಗೆ ಆಸ್ತಿ, ಕಾರು, ಒಡವೆ, ಮುಂತಾದ ವಸ್ತುಗಳ ರೂಪದಲ್ಲಿ ವರದಕ್ಷಿಣೆಯನ್ನು ನೀಡುತ್ತಾರೆ. ಪ್ರಸ್ತುದದಲ್ಲೂ ವರದಕ್ಷಿಣೆ ತನ್ನ ಸ್ಥಾನವನ್ನು ಯತಾವತ್ತಾಗಿ

ಮುಂದುವರಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ವರದಕ್ಷಿಣೆ ಕಾಯ್ದೆ ಜಾರಿಯಲ್ಲಿದ್ದರೂ ಸಹ ವರದಕ್ಷಿಣೆ ಕೊಡುವುದು, ತೆಗೆದುಕೊಳ್ಳುವುದು ನಮ್ಮ ಸಮಾಜದಲ್ಲಿ ಒಪ್ಪಿಗೆಯಿಂದ ನಡೆಯುತ್ತಿರುವುದು ಕಂಡುಬರುತ್ತದೆ. ಕಾನೂನುಗಳು ಜಾರಿಯಲ್ಲಿದ್ದರೂ ಸಹ ಪುರುಷ ಪ್ರಧಾನ ವ್ಯವಸ್ಥೆಯು ಈ ಪದ್ಧತಿಯನ್ನು ಒಪ್ಪಿರುವುದರಿದ ಈ ಕಾನೂನುಗಳು ಅಸ್ತಿತ್ವದಲ್ಲಿದ್ದರೂ ಸಹ ಅವು ಆಚರಣೆಯಲ್ಲಿ ಜಾರಿಯಾಗುತ್ತಿಲ್ಲವೆಂದು ತಿಳಿದುಬಂದಿದೆ. ನಮ್ಮ ಪೋಲೀಸ್, ಆಡಳಿತ, ತನಿಖೆ, ಕೋರ್ಟು ಎಲ್ಲ ವ್ಯವಸ್ಥೆಯು ಸಹ ವರದಕ್ಷಿಣೆ ಪ್ರಕರಣವನ್ನು ಗಂಭೀರ ಪ್ರಕರಣಗಳೆಂದು ಭಾವಿಸುವುದಿಲ್ಲ. ಈ ವರದಕ್ಷಿಣೆ ಪ್ರಕರಣವು ಕಡಿಮೆಯಾಗಬೇಕೆಂದರೆ ಸಮಾಜದಲ್ಲಿ ಸ್ತ್ರೀ–ಪುರುಷ ಸಮಾನತೆ ಬರಬೇಕು. ಪುರುಷರ ದೃಷ್ಟಿಕೋನದಲ್ಲಿ ಮಹಿಳೆ ಅಬಲೆ ಮತ್ತು ನಿಸ್ಸಾಹಾಯಕಳು ಎಂಬ ಕೀಳು ಭಾವನೆ ಹೋದಾಗ ಮಾತ್ರ ಇಂತಹ ಅನಿಷ್ಟ ಪದ್ಧತಿ ನಿವಾರಣೆಯಾಗುತ್ತದೆಂದು ತಿಳಿಸಲಾಗಿದೆ.

೫.೩ ವರದಕ್ಷಿಣೆಗೆ ಸಂಬಂಧಿಸಿದ ಪ್ರಕರಣಗಳು

ಕ್ರ.ಸಂ	ವರದಕ್ಷಿಣೆಗೆ ಸಂಬಂಧಿಸಿದ ಪ್ರಕರಣಗಳು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರಂ	೧೦	೦೯	೦೬	೦೯	೧೦	೧೫	೧೮	೭೭
೨	ವಿಧಾನಸೌಧ	–	೦೨	–	–	–	೦೧	–	೦೩
೩	ಭಾರತೀನಗರ	೦೩	೦೧	೦೨	೦೩	೦೫	೦೨	೦೪	೨೦
೪	ವಿಜಯನಗರ	೧೫	೧೪	೦೯	೧೧	೦೯	೧೬	೧೭	೯೧
೫	ಶೇಷಾದ್ರಿಪುರಂ	೦೧	೦೩	೦೬	೦೧	–	೦೧	೦೨	೧೪
೬	ಜ್ಞಾನಭಾರತಿ	೦೨	೦೨	೦೮	೧೧	೧೨	೧೧	೧೩	೫೯
೭	ವಿವೇಕನಗರ	೦೪	೦೨	೦೪	೦೪	೧೦	೦೩	೧೫	೩೨
೮	ಬಾಣಸವಾಡಿ	–	೦೫	೦೫	೦೩	೦೫	೦೧	೦೯	೨೮
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	೦೧	೦೨	೦೨	–	–	೦೧	೦೧	೦೭
೧೧	ಕಬ್ಬನ್ ಪಾರ್ಕ್	–	–	–	೦೧	–	–	–	೦೧
೧೨	ಎಸ್.ಆರ್.ನಗರ	–	–	–	–	–	–	೦೨	೦೨
೧೩	ಶಿವಾಜಿನಗರ	೦೨	೦೨	–	–	೦೧	೦೧	೦೩	೦೯
೧೪	ಹೈಗ್ರೌಂಡ್	೦೧	೦೪	೦೧	೦೧	೦೨	–	–	೦೯
೧೫	ಕಮರ್ಷಿಯಲ್ ಸ್ಟ್ರೀಟ್	೦೧	–	೦೧	೦೧	–	೦೨	೦೨	೦೭
೧೬	ಎಸ್.ಜೆ.ಪಾರ್ಕ್	–	–	–	–	೦೧	೦೧	–	೦೨
	ಒಟ್ಟು	೪೦	೪೬	೪೪	೪೫	೫೫	೬೪	೭೬	೩೭೦
	ಶೇಕಡವಾರು	೧೦.೮	೧೨.೪	೧೧.೮	೧೨.೧	೧೪.೮೬	೧೭.೨	೨೦.೫	

೫.೩, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೫ ರಲ್ಲಿ ಶೇಕಡ ೧೦.೮ ಅತೀ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೧ ರಲ್ಲಿ ಶೇಕಡ ೨೦.೫ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ಈ ಪ್ರಕರಣಗಳನ್ನು ಸಾಮಾನ್ಯ ಪ್ರಕರಣಗಳನ್ನಾಗಿ ಪರಿಗಣಿಸಿರುತ್ತಾರೆ. ಶೇ ೮೦% ರಷ್ಟು ಭಾಗ ರಾಜಿ ಪಂಚಾಯಿತಿಗಳ ಮೂಲಕ ಬಗೆಹರಿಸಿಕೊಳ್ಳುತ್ತಾರೆ. ಈ ಪ್ರಕರಣದಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಕನಿಷ್ಟ ಮಟ್ಟದಲ್ಲಿದೆ. ಉಳಿದ ಪ್ರಕರಣಗಳು ತನಿಖೆ ಹಂತದಲ್ಲಿರುತ್ತದೆ. ಈ ಮೇಲಿನ ಪ್ರಕರಣಗಳಲ್ಲಿ ಗಮನಿಸಿದಂತೆ ವರದಕ್ಷಿಣೆ ಪ್ರಕರಣವು ಹಲವು ಕಾರಣಗಳಿಗೆ ದಾಖಲಾಗುತ್ತವೆ.

- ಮನೆಯ ಅಂತಸ್ತಿನ ವಿಚಾರವಾಗಿ ಪ್ರಕರಣ ದಾಖಲಾಗುತ್ತದೆ
- ಹಣ ಮತ್ತು ಜಮೀನು ಒಡವೆಗಳಿಗಾಗಿ ಪ್ರಕರಣ ದಾಖಲಾಗುತ್ತದೆ.
- ಮನುಷ್ಯ ಅತಿಯಾದ ಆಸೆಯಿಂದ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಗಂಡನು ನಿರುದ್ಯೋಗಸ್ತನಾದಾಗ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಬೇಗ ಶ್ರೀಮಂತರಾಗಲು ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಐಶರಾಮಿ ಜೀವನ ನಡೆಸಲು ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಹುಡುಗಿ ಚನ್ನಾಗಿಲ್ಲವೆಂದು ಹೆಚ್ಚಿನ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ತವರು ಮನೆಯವರು ಶ್ರೀಮಂತರಾಗಿದ್ದಾಗ ಈ ಪ್ರಕರಣ ದಾಖಲಾಗುತ್ತದೆ.
- ಜಾತೀಯ ವಿಚಾರವಾಗಿ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಬ್ಯುಜಿನೆಸ್ ಮಾಡುವ ಉದ್ದೇಶಕ್ಕಾಗಿ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಕಾರು, ಮನೆ, ಬಂಗಲೆಗಾಗಿ ಪ್ರಕರಣ ದಾಖಲಾಗುತ್ತದೆ.
- ಸರ್ಕಾರದ ಕೆಲಸ, ಕಂಟ್ರಾಕ್ಟರ್ ಕೆಲಸಗಳನ್ನು ನಿರ್ಮಿಸುವ ಉದ್ದೇಶಕ್ಕಾಗಿ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ.
- ಗಂಡ–ಹೆಂಡತಿಯ ನಡುವೆ ಹೊಂದಾಣಿಕೆ ಬರದಿದ್ದಾಗ ವರದಕ್ಷಿಣೆ ಪ್ರಕರಣ ದಾಖಲಾಗುತ್ತದೆ. ಇವೇ ಮೊದಲಾದ ಕಾರಣಗಳಿಗಾಗಿ ವರದಕ್ಷಿಣೆ ಪ್ರಕರಣಗಳು ದಾಖಲಾಗುತ್ತವೆ. ಈ ಸಮಾಜದಲ್ಲಿ ವರದಕ್ಷಿಣೆ ಪ್ರಕರಣಗಳು ಸಾಮಾನ್ಯ ಪ್ರಕರಣಗಳೆಂದು ಭಾವಿಸುವುದರಿಂದ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದರೆ, ಗಂಡನ ಅಥವಾ ಸಂಬಂಧಿಕರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಎಂದು ದೂರನ್ನು ದಾಖಲಿಸುತ್ತಾರೆಯೇ

ಹೊರತು ನಿಜವಾಗಿ ಪ್ರಕರಣ ನಡೆದಿಲ್ಲವೆನ್ನುವಂತೆ ಪೊಲೀಸ್ ಅಧಿಕಾರಿಗಳ ಮನಸ್ಥಿತಿಗಳು ಇರುವುದರಿಂದ ಪ್ರಕರಣ ದಾಖಲಿಸುತ್ತಾರೆಯೇ ಹೊರತು ತನಿಖೆಯ ಹಂತದಲ್ಲಿ ಆಸಕ್ತಿ ಹೊಂದಿರುವುದಿಲ್ಲ. ಬಹುತೇಕ ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ರಾಜಿಯಾಗಿರುವುದು ತಿಳಿದುಬಂದಿದೆ. ಸಮಾಜದಲ್ಲಿ ಶ್ರೀಮಂತರು ಮತ್ತು ಅಧಿಕಾರಸ್ಥ ಕುಟುಂಬದ ವಿರುದ್ಧ ಈ ದೂರು ದಾಖಲಾದರೆ ಬಹುತೇಖವಾಗಿ ಪೊಲೀಸರು ಶ್ರೀಮಂತರು ಮತ್ತು ಅಧಿಕಾರಸ್ಥರ ಕಡೆ ಸೇರಿ ಪ್ರಕರಣವನ್ನು ಮುಚ್ಚಿಹಾಕುವ ಸಂದರ್ಭಗಳೇ ಹೆಚ್ಚಾಗಿ ಕಂಡುಬಂದಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ನಮ್ಮ ಇತಿಹಾಸ ಕಾಲದಿಂದಲೂ ಸಹ ಪುರುಷರು ತಮ್ಮ ಸೇಡನ್ನು ತೀರಿಸಿಕೊಳ್ಳುವ ಉದ್ದೇಶದಿಂದ ಅಸಹಾಯಕಳಾದ ಮಹಿಳೆಯರನ್ನು ಅಪಹರಣ ಮಾಡುವುದು, ಬಲತ್ಕಾರ ಮಾಡುವುದು, ಹಿಂಸಿಸುವುದು, ಒತ್ತೆಯಾಳಾಗಿ ಇರಿಸಿಕೊಳ್ಳುವದನ್ನು ನೋಡಬಹುದಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹಣ ಸಂಪಾದನೆಗಾಗಿ ಮತ್ತು ಲೈಂಗಿಕ ತೃಷೆಗಾಗಿ, ವೈರತ್ವಕ್ಕಾಗಿ, ಪ್ರೀತಿಯ ನಿರಾಕರಣೆಯಾದಾಗ ಪ್ರೀತಿಸಿದ ಹುಡುಗನು ಹುಡುಗಿಯರ ಅಪಹರಣ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಹೆಚ್ಚಾಗಿ ಕಂಡುಬಂದಿದೆ. ಈ ಅಪಹರಣ ಪ್ರಕರಣವು ಒಟ್ಟಾರೆಯಾಗಿ ಪುರುಷನು ಅಪಹರಣ ಮಾಡುವುದು ಸಹ ಪುರುಷನ ಯಶಸ್ವಿಯ ಸಂಕೇತವೆಂದು ತಿಳಿದಿದ್ದಾನೆ. ಅಪಹರಣವು ಮೊದಲಿಂದಲೂ ಇಲ್ಲಿಯವರೆಗೆ ಸಹ ವಿವಿಧ ಉದ್ದೇಶಗಳಿಗಾಗಿ ನಡೆಯುತ್ತಿರುವುದು ಕಂಡುಬಂದಿದೆ.

೫.೪ ಕೌಟುಂಬಿಕವಲಯ ಮತ್ತು ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ

ಕ್ರ.ಸಂ	ಕೌಟುಂಬಿಕ ವಲಯ ಮತ್ತು ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯ	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರಂ	– –	–	–	–	–	–	–	೦೦
೨	ವಿಧಾನಸೌಧ	–	–	–	೦೧	–	–	–	೧
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	೦೬	೦೭	೦೮	೧೦	೧೧	೧೫	೨೨	೭೯
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	–	–	–	–	–	–	–	೦೦
೮	ಬಾಣಸವಾಡಿ	–	–	–	–	–	–	–	೦೦
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	೦೧	೦೧
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	–	–	೦೦
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	–	೦೦
೧೬	ಎಸ್.ಜೆ.ಪಾರ್ಕ್	೦೧	–	–	–	–	–	೦೧	೦೨
	ಒಟ್ಟು	**೦೭**	**೦೭**	**೦೮**	**೧೧**	**೧೧**	**೧೫**	**೨೪**	**೮೩**
	ಶೇಕಡವಾರು	**೮.೪**	**೮.೪**	**೯.೬**	**೧೩.೨**	**೧೩.೨**	**೧೮.೦**	**೨೮.೯**	

೫.೪, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೫ ರಲ್ಲಿ ಶೇಕಡ ೮.೪ ಅತಿ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೧ ರಲ್ಲಿ ಶೇಕಡ ೨೮.೯ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ಈ ಒಟ್ಟು ಪ್ರಕರಣಗಳಲ್ಲಿ ೮ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆಯಾಗಿದ್ದು ೫೦ ಪ್ರಕರಣಗಳು ಖುಲಾಸೆಗೊಂಡಿದ್ದು ಉಳಿದ ೦೫ ಪ್ರಕರಣಗಳಿ ತನಿಖೆ ಹಂತದಲ್ಲವೆ. ಈ ಕೋಷ್ಟಕದಲ್ಲಿ ಸಾರ್ವಜನಿಕ ಮತ್ತು ಕೌಟುಂಬಿಕ ವಲಯದಲ್ಲಿ ದೌರ್ಜನ್ಯಗಳು ಈ ರೀತಿ ಕಂಡು ಬರುತ್ತವೆ. ಕೌಟುಂಬಿಕ ವಲಯದಲ್ಲಿನ ದೌರ್ಜನ್ಯಗಳು ಈ ವಲಯದಲ್ಲಿ ಕುಟುಂಬದ ಸದಸ್ಯರು ಗಂಡ, ಗಂಡನ ಸಹೋದರ, ಅತ್ತೆ-ಮಾವ, ಇತರೇ ಸದಸ್ಯರಿಂದ ಆಗುವ ದೌರ್ಜನ್ಯ. ಉದಾಹರಣೆಗೆ: ಕೌಟುಂಬಿಕ ವಲಯದಲ್ಲಿನ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ, ಹೆಂಡತಿಯನ್ನು ಹೊಡೆಯುವುದು, ಮುಂತಾದವುಗಳು ಬರುತ್ತವೆ. ಸಾರ್ವಜನಿಕ ವಲಯದಲ್ಲಿ ಸಾಮಾನ್ಯವಾಗಿ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ದೌರ್ಜನ್ಯವು ಸಾಮಾನ್ಯವಾಗಿ, ಅವ್ಯಹತವಾಗಿ ನಡೆಯುತ್ತಿದೆ. ಉದಾಹರಣೆ: ಅತ್ಯಾಚಾರ, ಹೆಣ್ಣುಮಕ್ಕಳ ಸ್ತ್ರೀಯರ ಅಪಹರಣ, ದುಡಿಯುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ, ಹೆಣ್ಣುಮಕ್ಕಳನ್ನು ಚುಡಾಯಿಸುವುದು, ಹೆಣ್ಣುಮಕ್ಕಳಿಗೆ ಕಿರುಕುಳ ನೀಡುವುದು ಮುಂತಾದವುಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಮಹಿಳೆಯ ಮೇಲೆ ದೌರ್ಜನ್ಯವು ನಿರಂತರವಾಗಿ ಎಲ್ಲಾ ವಲಯಗಳಲ್ಲಿ ಎಲ್ಲಾ ವರ್ಗದ ಸ್ತ್ರೀಯರ ಮೇಲೂ ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡಲ್ಲೂ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಕೌಟುಂಬಿಕ ವಲಯಗಳಲ್ಲಿನ ದೌರ್ಜನ್ಯಗಳಲ್ಲಿ ಅತ್ಯಾಚಾರವು ಸಾಮಾನ್ಯವಾಗಿ ಕುಟುಂಬದ ಸದಸ್ಯರಿಂದ ನಡೆಯುವುದರಿಂದ ಅವಳು ಇದರ ವಿರುದ್ಧ ಪ್ರತಿಭಟಿಸಲಾರಳು. ಅವಳ ರಕ್ಷಣೆ ಮತ್ತು ಭದ್ರತೆಯ ನೆಲೆಯಾಗಿ ಕುಟುಂಬ ಇರುವುದರಿಂದ ಕುಟುಂಬವನ್ನು ಬಿಟ್ಟರೆ ಅವಳಿಗೆ ಆಶ್ರಯ ಇಲ್ಲದಂತಾಗುತ್ತದೆ. ಅವಳು ಅಬಲೇ ಮತ್ತು ದುರ್ಬಲಳಾಗಿರುವುದರಿಂದ ಅವಳ ಕುಟುಂಬದೊಳಗಿನ ಅತ್ಯಾಚಾರವನ್ನು ಯಾರಿಗೂ ಹೇಳಲಾಗದ ವಿಷಯವಾಗಿರುವುದರಿಂದ ಅತ್ಯಾಚಾರಗಳು ನಡೆಯುತ್ತವೆ.

ವರದಕ್ಷಿಣೆ ಪ್ರಕರಣಗಳು ಮದುವೆಯ ಸಮಯದಲ್ಲಿ ಎರಡು ಕುಟುಂಬಗಳ ನಡುವೆ ವ್ಯವಹಾರ ನಡೆದಿದ್ದು ನಂತರ ಕೆಲವು ವರ್ಷಗಳ ನಂತರ ಅದು ಹಣದ ಕಾರಣಕ್ಕಾಗಿ ಹಿಂಸೆಯ ರೂಪವಾಗಿ ಪರಿಣಮಿಸಿ, ಪುರುಷರು ಇಂದು ಅತಿಯಾಸೆಯಿಂದ ಬೇಗ ಶ್ರೀಮಂತರಾಗಲು ತವರು ಮನೆಯಿಂದ ಹಣ ತರಲಿ ಎಂದು ವರದಕ್ಷಿಣೆ ಕೇಳುವುದು ನಮ್ಮ ಹಕ್ಕು ಎಂದು ಭಾವಿಸಿದ್ದಾರೆ. ಐಷರಾಮಿ ಜೀವನ ಮಾಡಲು ಇಂತ ಪ್ರಕರಣಗಳು ನಡೆಯುತ್ತವೆ. ಹೆಂಡತಿಯನ್ನು ಹೊಡೆಯುವುದು, ಪುರುಷನು ಮನೆಯ ಯಜಮಾನನಾಗಿರುವುದರಿಂದ ಅವನು ಸಣ್ಣ ಪುಟ್ಟ ವಿಷಯಗಳಿಗೆ ಖ್ಯಾತೆ ತೆಗೆದು ಮತ್ತೆ ಕುಡಿದು ಬಂದು ಹೆಂಡತಿಗೆ ಹೊಡೆಯುವುದು ಇಂದು ಸರ್ವೆಸಾಮಾನ್ಯವಾಗಿದೆ. ಇಂತಹ ಪ್ರಕರಣ ದಾಖಲಾದರೂ ಯಾರೂ

ಸಹ ಗಂಭೀರವಾಗಿ ಪರಿಗಣಿಸುವುದಿಲ್ಲ. ಇನ್ನೂ ಸಾರ್ವಜನಿಕ ವಲಯದಲ್ಲಿ ದೌರ್ಜನ್ಯಗಳು ಇಂದು ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಅತ್ಯಾಚಾರವು ಇಂದು ಎರಡು ವಲಯಗಳಲ್ಲಿಯೂ ನಡೆಯುತ್ತದೆ. ಸಾರ್ವಜನಿಕ ವಲಯದಲ್ಲಿ ಇದರ ಸ್ವರೂಪವು ಭೀಕರವಾಗಿ ಕಾಣತೊಡಗಿದೆ. ಅಪಹರಣವೂ ಸಹ ವಿವಿಧ ಉದ್ದೇಶಗಳಿಗಾಗಿ, ಹಣವನ್ನು ಮಾಡುವ ಉದ್ದೇಶಕ್ಕಾಗಿ, ಮದುವೆಯಾಗುವುದಕ್ಕಾಗಿ ಹಾಗೂ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳುವುದಕ್ಕಾಗಿ ನಡೆಯುತ್ತವೆ. ಪುರುಷರು ಪ್ರಬಲರು ಮಹಿಳೆಯರು ಅಬಲೆಯಾಗಿರುವುದರಿಂದ ಅವಳು ಏನೂ ಮಾಡಲಾಗದ ನಿಸ್ಸಹಾಯಕಳೆಂದು ತಿಳಿದು ಹಾಗೂ ಮಹಿಳೆಯು ಪುರುಷನ ಆಸೆಯನ್ನು ಈಡೇರಿಸುವ ವಸ್ತು ಎಂಬ ಕಾಮ ದೃಷ್ಟಿಯಿಂದ, ಅನಾಗರೀಕ ವರ್ತನೆಯಿಂದ, ದೌರ್ಜನ್ಯ ನಡೆಯುತ್ತಿರುತ್ತವೆ. ಸಾರ್ವಜನಿಕ ವಲಯದಲ್ಲಿ ಸಾರ್ವಜನಿಕ ದೌರ್ಜನ್ಯವನ್ನು ತಡೆಯಲು ಸರ್ಕಾರವು ವಿವಿಧ ಕಾನೂನು ಮತ್ತು ನಿಯಮಗಳನ್ನು ಜಾರಿಗೆ ತಂದಿದೆ. ಈ ಕಾನೂನುಗಳು ಜಾರಿಯಲ್ಲಿದ್ದರೂ ಕೂಡ ಇಂದಿನ ಸಮಾಜದಲ್ಲಿ ಜಾತಿ, ಅಧಿಕಾರ, ರಾಜಕಾರಣಿಗಳ ಒತ್ತಡದಿಂದ ದಾಖಲಾದ ಕೇಸುಗಳು ಸಹ ಪೂರ್ಣವಾಗಿ ಆರೋಪಿಗೆ ಶಿಕ್ಷೆ ವಿಧಿಸುವ ಕಾಲಾವಕಾಶದೊಳಗೆ ಪ್ರಕರಣವನ್ನು ಮುಚ್ಚಿಹಾಕುವುದು ಮತ್ತು ರಾಜಿಸಂಧಾನವನ್ನು ಮಾಡುವ ಮೂಲಕ ಆರೋಪಿಯನ್ನು ಪ್ರಕರಣದಿಂದ ಖುಲಾಸೆ ಮಾಡುತ್ತಾರೆ. ಕೌಟುಂಬಿಕ ದೌರ್ಜನ್ಯವನ್ನು ತಡೆಯಲು ಸರ್ಕಾರವು ೨೦೦೬ ರಲ್ಲಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯನ್ನು ಸರ್ಕಾರವು ಜಾರಿಗೆ ತಂದಿದೆ ಆದರೂ ಕೂಡ ಈ ಕಾಯ್ದೆಯು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಿರುವುದಿಲ್ಲ ಎಂದು ಈ ಪ್ರಕರಣಗಳ ಅಧ್ಯಾಯನದಿಂದ ತಿಳಿದು ಬಂದಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಮಹಿಳೆ ಇಂದು ಎರಡು ವಲಯಗಳಲ್ಲಿ ಸಹ (ಕೌಟುಂಬಿಕ ಮತ್ತು ಸಾರ್ವಜನಿಕ) ದೌರ್ಜನ್ಯವನ್ನು ಎದುರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಕುಟುಂಬವು ಭದ್ರತೆಯ ನೆಲೆ ಹಾಗೂ ಸುರಕ್ಷಿತ ತಾಣವೆಂದು ಹೇಳಲಾಗುತ್ತಿದ್ದರೂ ಸಹ ಸಾರ್ವಜನಿಕ ವಲಯದಲ್ಲಿ ಆಗುತ್ತಿರುವಂತೆ ಅತ್ಯಾಚಾರ ಪ್ರಕರಣಗಳು ಕುಟುಂಬದಲ್ಲಿಯೂ ಇಂದು ಕಂಡುಬರುತ್ತಿರುವುದನ್ನು ನೋಡಿದರೆ ಮನುಷ್ಯನ ಮನಸ್ಥಿತಿ, ಸಂಬಂಧಗಳಿಗೆ ಯಾವ ಬೆಲೆಯನ್ನು ಸಹ ನೀಡದೆ ತಮ್ಮ ಕಾಮತೃಷೆಯನ್ನು ಯಾವ ಮಹಿಳೆಯರ ಮೇಲಾದರೂ ಸರಿ ತೀರಿಸಿಕೊಳ್ಳಬೇಕೆಂಬ ಹಂಬಲವಿರುವುದು ಪುರುಷರಲ್ಲಿ ಕಂಡುಬಂದಿದೆ. ಮಹಿಳೆಯು ಅಸಂಘಟಿತ ಮತ್ತು ಸಂಘಟಿತ, ಶಿಕ್ಷಿತ ಮತ್ತು ಅಶಿಕ್ಷಿತ ಯಾವುದೇ ಬಗೆಯ ಮಹಿಳೆಯರು ಅವರದ್ದೇ ಆದ ಕೆಲವು ಸಮಸ್ಯೆಗಳಿಗೆ ಸಿಲಿಕಿಸುವಂತೆ ಈ ಪಿತೃ ಪ್ರಧಾನ ಸಮಾಜ ವ್ಯವಸ್ಥೆಯು ಪಿತೂರಿ ಮಾಡಿರುವುದು ಕಂಡಬರುತ್ತದೆ. ಇದರಿಂದ ತಿಳಿದುಬರುವುದೆನೆಂದರೆ ಮಹಿಳೆಯು ಪುರುಷನ ಆಸ್ತಿ, ಅವಳ ಮೇಲೆ ಹಕ್ಕನ್ನು ಪ್ರತಿಪಾದಿಸಬೇಕೆಂಬ ಸ್ವಾರ್ಥವು ಈಗಲೂ ಕೂಡಾ ನಮ್ಮ ಪುರುಷ ಪ್ರಧಾನ ಸಮಾಜದ ಮನೋಸ್ಥಿತಿಯಾಗಿದೆ.

೫.೫ ಹೆಂಡತಿಯನ್ನು ಹೊಡೆಯುವುದು

ಕ್ರ.ಸಂ	ಹೆಂಡತಿಯನ್ನು ಹೊಡೆಯುವುದು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	–	–	–	–	–	–	–	೦೦
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	–	–	–	–	–	–	–	೦೦
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	–	–	–	–	–	–	–	೦೦
೮	ಬಾಣಸವಾಡಿ	೧೧	೧೧	೦೯	೦೮	೦೮	೧೭	೧೧	೭೫
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	–	೦೦
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	–	–	೦೦
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	–	೦೦
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೧೧	೧೧	೦೯	೦೮	೦೮	೧೭	೧೧	೭೫
	ಶೇಕಡವಾರು	೧೪.೬	೧೪.೬	೧೨.೦	೧೦.೬	೧೦.೬	೨೨.೬	೧೪.೬	

೫.೫, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೫ ರಲ್ಲಿ ಶೇಕಡ ೧೪.೬ ಅತೀ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೦ ರಲ್ಲಿ ಶೇಕಡ ೨೨.೬ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ಈ ೧೬ ಪೋಲಿಸ್ ಠಾಣೆಗಳಲ್ಲಿ ಕೇವಲ ಬಾಣಸವಾಡಿ ಒಂದು ಠಾಣೆಯಲ್ಲಿ ೭೫ ಪ್ರಕರಣಗಳು ದಾಖಲಾಗಿವೆ.

ಈ ಪ್ರಕರಣವು ಸಹ ವರದಕ್ಷಿಣೆ ಕೇಸ್‌ನಡಿಯಲ್ಲಿ ದಖಾಲಾಗುತ್ತದೆ. ಹೆಂಡತಿಯನ್ನು ಹೊಡೆಯುವುದು ಇದು ಪ್ರತ್ಯೇಕ ಪ್ರಕರಣವಾಗಿ ದಾಖಲಾಗುವುದಿಲ್ಲ. ವರದಕ್ಷಿಣೆ ಕಿರುಕುಳದ ಜೊತೆಗೆ ದೈಹಿಕ ಹಿಂಸೆ ಎಂದು ದೂರಿನಲ್ಲಿ ನೀಡಿದಾಗ ಹೊಡೆತ, ಕಲೆ, ಗಾಯಗಳು ಇದ್ದಾಗ ಮೆಡಿಕಲ್ ಸರ್ಟಿಪಿಕೇಟ್ ನೀಡಿದಾಗ ಪತಿಯ ವಿರುದ್ಧ ಪ್ರಕರಣ ದಾಖಲಾಗುತ್ತದೆ. ನಂತರ ವಿಚಾರಣೆ ಆರಂಭವಾಗುತ್ತದೆ. ಇದು ಸಹ ವರದಕ್ಷಿಣೆ ಪ್ರಕರಣಕ್ಕೆ ಸಂಬಂಧಿಸಿದ್ದರಿಂದ ಬಹುತೇಕವಾಗಿ ರಾಜಿ ಸಂಧಾನಗಳ ಮೂಲಕ ಇತ್ಯರ್ಥವಾಗುತ್ತದೆ. ಇಂಥ ಎಷ್ಟೋ ಪ್ರಕರಣಗಳು ದಾಖಲಾಗುವುದಿಲ್ಲವೆಂದು ತಿಳಿದು ಬರುತ್ತದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಈ ಪ್ರಕರಣವು ವರದಕ್ಷಿಣೆ ಕೇಸ್‌ನಡಿ ದಾಖಲಾಗುತ್ತದೆ. ಹೆಂಡತಿಯನ್ನು ಒಡೆಯುವುದು ಗಂಡನ ಹಕ್ಕು, ಅವಳ ಮೇಲೆ ನಿಯಂತ್ರಣ ಸಾಧಿಸುವುದಕ್ಕಾಗಿ ಅವನು ಹಲ್ಲೆ ಮಾಡುವುದನ್ನು ಕಾಣಬಹುದು. ಕಾನೂನಿನ ಪ್ರಕಾರ ಯಾರ ಮೇಲೆ ಯಾರೂ ಸಹ ಹಲ್ಲೆ ನಡೆಸುವಂತಿಲ್ಲ. ನಡೆಸಿದರೆ ಶಿಕ್ಷೆಯು ಸಹ ಇದೆ ಆದರೂ ಸಹ ಪ್ರತಿನಿತ್ಯ ಇಂತಹ ಪ್ರಕರಣಗಳು ನಡೆಯುತ್ತಿರುವುದರಿಂದ ನಮ್ಮ ಸಮಾಜವು ಗಂಡನು ಹೆಂಡಿತಿಯನ್ನು ಒಡೆಯುವುದನ್ನು ಒಪ್ಪಿಕೊಂಡ ಸಮಾಜವಾಗಿದೆ ಎಂದು ತಿಳಿಯುತ್ತದೆ. ಎಷ್ಟೋ ಮಹಿಳೆಯರು ನಮ್ಮ ಗಂಡ ನಮ್ಮನ್ನು ಒಡೆಯದೆ ಬೇರೆಯವರನ್ನು ಒಡೆಯಲು ಸಾಧ್ಯವೇ ಎನ್ನುವ ಮನಸ್ಥಿತಿಯಿರುವುದರಿಂದ ಈ ಪ್ರಕರಣಗಳು ನಡೆದರೂ ಸಹ ಇವು ಬೆಳಕಿಗೆ ಬರುವುದಿಲ್ಲವೆಂದು ತಿಳಿಯುತ್ತದೆ.

೫.೬ ದುಡಿಯುವ ಸ್ಥಳದಲ್ಲಿನ ಮಹಿಳೆಯರ ಮೇಲಿನ ದೌರ್ಜನ್ಯ

ಕ್ರ.ಸಂ	ದುಡಿಯುವ ಸ್ಥಳದಲ್ಲಿನಮಹಿಳೆಯರ ಮೇಲಿನ ದೌರ್ಜನ್ಯ	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	–	–	–	–	–	–	–	೦೦
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	–	–	–	–	–	–	–	೦೦
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	೦೧	–	–	–	–	–	೦೩	೦೪
೮	ಬಾಣಸವಾಡಿ	–	–	೦೨	–	೦೩	–	೦೨	೦೭
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	೦೧	–	೦೧
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	೦೧	–	೦೧
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	೦೧	೦೧
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೧	೦೦	೦೨	೦೦	೦೩	೦೨	೦೬	೧೪
	ಶೇಕಡವಾರು	೭.೧	೦೦	೧೪.೨	೦೦	೨೧.೪	೧೪.೨	೪೨.೮	

೫.೬, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೫ ರಲ್ಲಿ ಶೇಕಡ ೭.೧ ಅತೀ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೧ ರಲ್ಲಿ ಶೇಕಡ ೪೨.೮ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ೨ ಪ್ರಕರಣಗಳ ಆರೋಪಿಗಳಿಗೆ ಶಿಕ್ಷೆಯಾಗಿದ್ದು, ೮ ಪ್ರಕರಣಗಳು ಖುಲಾಸೆಗೊಂಡಿವೆ. ಮಿಕ್ಕ ೪ ಪ್ರಕರಣಗಳು ತನಿಖೆ ಹಂತದಲ್ಲಿವೆ.

ಪ್ರಸ್ತುತ ಸಮಾಜದಲ್ಲಿ ಎಲ್ಲಾ ವರ್ಗ, ಜಾತಿ, ಎಲ್ಲಾ ವಿಧದ ವಯಸ್ಸಿನ ಮಹಿಳೆಯರು ಮತ್ತು ಶಿಕ್ಷಿತ ಹಾಗೂ ಅನಕ್ಷರತೆಯ ಮಹಿಳೆಯರು, ಸರ್ಕಾರಿ ಮತ್ತು ಖಾಸಗೀ ವಲಯದಲ್ಲಿ ಹಾಗೂ ಎಲ್ಲಾ ಕಡೆಯೂ ಮಹಿಳಾ ದೌರ್ಜನ್ಯವೂ ನಡೆಯುತ್ತಲೇ ಬರುತ್ತಿದೆ. ಅದರಲ್ಲೂ ದುಡಿಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯವೆಂದರೆ ಸಂಘಟಿತ ಮತ್ತು ಅಸಂಘಟಿತ ವಲಯಗಳೆಂದು ನಾವು ಅವುಗಳನ್ನು ವಿಂಗಡಿಸಬಹುದು. ಅಸಂಘಟಿತ ವಲಯಗಳಲ್ಲಿ ಸಾಮಾನ್ಯವಾಗಿ ಸಂಘ, ಯೂನಿಯನ್‌ಗಳು ಅಸ್ತಿತ್ವದಲ್ಲಿ ರುವುದಿಲ್ಲ. ಹಾಗೂ ದಿನನಿತ್ಯ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಸ್ಥಳದಲ್ಲಿ ಪುರುಷ ವ್ಯಕ್ತಿಯು ಸಾಮಾನ್ಯವಾಗಿ ಅಸಂಘಟಿತ ವಲಯಗಳಾದ ಮನೆಗೆಲಸ, ಕಟ್ಟಡದ ಕೆಲಸ, ಬೀಡಿ ಕಟ್ಟುವುದು, ಸಣ್ಣ ಪುಟ್ಟ ಮನೆಗಳಲ್ಲಿ ಕೆಲಸ ಮಾಡುವವರಾಗಿರುತ್ತಾರೆ. ಸಾಮಾನ್ಯವಾಗಿ ಅಲ್ಲೆಲ್ಲಾ ಕೆಲಸ ಮಾಡುವ ಪುರುಷ ಮತ್ತು ಅಲ್ಲಿನ ಯಜಮಾನರಿಂದ ಸ್ತ್ರೀಯರು ಲೈಂಗಿಕ ದೌರ್ಜನ್ಯಕ್ಕೆ ಸಾಮಾನ್ಯವಾಗಿ ಒಳಗಾಗುತ್ತಾರೆ. ಇವರಿಗೆ ದೌರ್ಜನ್ಯದ ಬಗ್ಗೆ ತಿಳಿದಿರುವುದಿಲ್ಲ ಮತ್ತು ಕಾನೂನಿನ ಅರಿವು ಇರುವುದಿಲ್ಲ. ಪುರುಷನನ್ನು ಪ್ರತಿಭಟಿಸುವ ಧೈರ್ಯವಿರುವುದಿಲ್ಲ. ಕಾನೂನು ಹೋರಾಟಕ್ಕೆ ಹೋದರೆ ಸ್ಥಳದಲ್ಲಿನ ಕೆಲಸವನ್ನು ಬಿಡಬೇಕಾಗುತ್ತದೆ ಎನ್ನುವ ಭಯದಿಂದ ಅನೇಕ ಅಸಂಘಟಿತ ವಲಯದ ದೌರ್ಜನ್ಯಗಳು ಬೆಳಕಿಗೆ ಬಂದಿಲ್ಲ ಎನ್ನುವುದು ನಮಗೆ ಈ ಅಧ್ಯಯನದಿಂದ ಕಂಡು ಬಂದಿದೆ.

ಸಂಘಟಿತ ವಲಯದಲ್ಲಿರುವ ಮಹಿಳೆಯರು ವಿದ್ಯಾವಂತರಾಗಿದ್ದು ಕಾನೂನಿನ ತಿಳುವಳಿಕೆ ಇರುತ್ತದೆ. ಸಾಮಾನ್ಯವಾಗಿ ಇವರು ಖಾಸಗೀ ಮತ್ತು ಸರ್ಕಾರಿ ಇಲಾಖೆಗಳಲ್ಲಿ ಕೆಲಸವನ್ನು ನಿರ್ವಹಿಸುತ್ತಾರೆ. ಇವರು ಸಹ ಅನೇಕ ಸಮಯದಲ್ಲಿ ಪುರುಷರು ಅಂದರೆ ದುಡಿಯುತ್ತಿರುವ ಸ್ಥಳದಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಹಿರಿಯ ಅಧಿಕಾರಿಗಳ ವಂಚನೆಯಿಂದ, ಅಧಿಕ ಸಂಬಳ ಕೊಡುವ ನೆಪದಲ್ಲಿ ಮತ್ತು ಮುಂಬಡ್ತಿ ನೀಡುವ ನೆಪದಲ್ಲಿ ಕೆಲಸದ ಸ್ಥಳದಲ್ಲಿನ ಮಹಿಳೆಯ ಮೇಲೆ ದೌರ್ಜನ್ಯವೆಸಗುತ್ತಾರೆ. ಈ ಮಹಿಳೆಯು ದುಡಿಯುತ್ತಿರುವ ಸ್ಥಳದಲ್ಲಿ ಸಹಪಾಠಿಗಳಿಂದ ಮೇಲಾಧಿಕಾರಿಗಳಿಂದ, ಒಂದಲ್ಲಾ ಒಂದು ದೌರ್ಜನ್ಯವನ್ನು ಅನುಭವಿಸುತ್ತಿದ್ದಾರೆ. ಅದರಲ್ಲೂ ಕೆಲವು ವಿದ್ಯಾವಂತ ಮತ್ತು ಧೈರ್ಯಶಾಲಿ ಮಹಿಳೆಯರು ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿ ಕಾನೂನು ಹೋರಾಟ ಮಾಡುವುದಕ್ಕಾಗಿ ಪೋಲೀಸ್ ಠಾಣೆಯ ಮೆಟ್ಟಿಲೇರುವುದನ್ನು ನಾವು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಸರ್ಕಾರವು ಈ ದೌರ್ಜನ್ಯವನ್ನು ತಡೆಯುವುದಕ್ಕಾಗಿ ೨೦೧೦ ರಲ್ಲಿ ಕೆಲಸದ ಸ್ಥಳದಲ್ಲಿನ ಮಹಿಳಾ ದೌರ್ಜನ್ಯ ತಡೆ ಕಾಯ್ದೆಯನ್ನು ಜಾರಿಗೆ ತಂದರೂ ಸಹ ಈ ದೌರ್ಜನ್ಯ ಪ್ರಕರಣಗಳು ಮುಂದುವರಿಯುತ್ತಿರುವುದನ್ನು ನಾವು ನೋಡಬಹುದಾಗಿದೆ. ಈ ವಲಯದಲ್ಲಿನ ಪುರುಷರು ಮಹಿಳೆಯರಿಗೆ ಮಾನಸಿಕವಾಗಿ ಲೈಂಗಿಕ ದೌರ್ಜನ್ಯವನ್ನು ನೀಡುತ್ತಾರೆ. ಹಿರಿಯ ಅಧಿಕಾರಿಗಳು, ಸಹಪಾಠಿಗಳು ಸಾರ್ವಜನಿಕ ಕ್ಷೇತ್ರದಲ್ಲಿ ಈ ಹಿಂಸೆಗೆ ಪ್ರಚೋದನೆ ನೀಡುತ್ತಿದ್ದಾರೆ. ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಕೂಡಾ ಬಹುಪಾಲು ಮಂದಿ ಸಾರ್ವಜನಿಕ ಕ್ಷೇತ್ರದಲ್ಲಿ ಇಂತಹ ವಾತಾವರಣವಿರುವುದು ಮಾಮೂಲಿ ಎಂದು ತಿಳಿದು ಅದನ್ನು ತಾವೇ ಅನುಭವಿಸುತ್ತಾ ಹೋಗುವ ಪರಿಸ್ಥಿತಿಯನ್ನು ಕಾಣಬಹುದು. ಕೆಲವು ಮಹಿಳೆಯರು ಕಾನೂನಿನ ಹೋರಾಟದ ಮೂಲಕ ಶಿಕ್ಷೆಯನ್ನು ವಿಧಿಸಲು ಹೋರಾಡುವುದು ತಿಳಿದುಬಂದಿದೆ. ಈ ಕೆಲಸದ ಸ್ಥಳದಲಿನ ದೌರ್ಜನ್ಯವನ್ನು ತಡೆಯಬೇಕಾದರೆ ಕೇವಲ ಕಾನೂನಿನಿಂದ ಸಾಧ್ಯವಿಲ್ಲ. ಮಹಿಳೆಯರ ಬಗ್ಗೆ ಗೌರವವನ್ನು ಹೊಂದಿರಬೇಕು. ಕೆಲಸ ಮಾಡುವ ಸ್ಥಳದಲ್ಲಿನ ಮಹಿಳೆಯರನ್ನು ಸಹ ತಮ್ಮ ಸಹೋದರಿಯರಂತೆ ಪುರುಷ ವರ್ಗ ಪರಿಗಣಿಸಬೇಕಾಗಿದೆ. ಒಟ್ಟಾರೆಯಾಗಿ ಮಹಿಳೆಯರ ಬಗ್ಗೆ ಹೊಂದಿರುವ ಪುರುಷನ ಮನಸ್ಥಿತಿ ಬದಲಾಗಬೇಕಾಗಿದೆ.

೫.೭ ಹೆಣ್ಣು ಮಕ್ಕಳನ್ನು ಚುಡಾಯಿಸುವುದು

ಕ್ರ.ಸಂ	ಹೆಣ್ಣು ಮಕ್ಕಳನ್ನು ಚುಡಾಯಿಸುವುದು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	೦೪	೦೪	೧೫	೧೧	೧೭	೧೮	೧೩	೮೨
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	೩೨	೬೫	೪೩	೧೨	೩೪	೧೮	೨೩	೨೩೭
೪	ವಿಜಯನಗರ	–	–	–	–	–	–	–	೦೦
೫	ಶೇಷಾದ್ರಿಪುರಂ	೧೦	೧೭	೦೭	೦೬	೦೫	೧೧	೧೪	೭೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	೦೨	–	–	೦೩	೦೩	೧೧	೦೪	೧೨
೮	ಬಾಣಸವಾಡಿ	–	–	–	–	–	–	–	೦೦
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	–	೦೦
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	೦೩	೦೫	೦೮	೦೫	–	೨೧
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	೦೧	೦೩	೦೨	೦೩	೦೮	೧೫	೨೩	೫೫
೧೫	ಕಮರ್ಷಿಯಲ್ ಸ್ಟ್ರೀಟ್	೦೮	೧೨	೦೯	೧೧	೧೪	೨೬	೧೮	೯೮
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	**೫೭**	**೧೧೧**	**೭೯**	**೫೧**	**೮೯**	**೯೪**	**೯೫**	**೫೭೫**
	ಶೇಕಡವಾರು	**೯.೯**	**೧೯.೩**	**೧೩.೭**	**೮.೮**	**೧೫.೪**	**೧೬.೩**	**೧೬.೫**	

೫.೭, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೫ ರಲ್ಲಿ ಶೇಕಡ ೯.೯ ಅತೀ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೧೦೬ ರಲ್ಲಿ ಶೇಕಡ ೧೯.೩ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ. ಮಹಿಳೆಯರ ದೌರ್ಜನ್ಯದ ಸ್ವರೂಪಗಳಲ್ಲಿ ಒಂದಾದ ಹೆಣ್ಣು ಮಕ್ಕಳನ್ನು ಚುಡಾಯಿಸುವುದು ಇದು ಒಂದು ಅಮಾನವೀಯ ಘಟನೆಯಾಗಿದೆ, ಈ ವಿಷಯಕ್ಕೆ ತಕ್ಕಂತೆ ನಾನು ದಾಖಲೆ ಮತ್ತು ಠಾಣೆಯ ಬರಹಗಾರರನ್ನು ಸಂಪರ್ಕಿಸಿ ವಿಚಾರಿಸಿದಾಗ ಅವರು ನನಗೆ ನೀಡಿದ ಉತ್ತರವೇನೆಂದರೆ ಪೋಲೀಸ್ ದಾಖಲೆಯಲ್ಲಿ ಸಾಮಾನ್ಯವಾಗಿ ಪಿಟಿ ಕೇಸ್ ಎಂದು ಒಂದು ಪ್ರಕರಣವಿರುತ್ತದೆ. ಈ ಪ್ರಕರಣವು ಸಾಮಾನ್ಯವಾಗಿದ್ದು ಇದು ಅಂತಹ ಘೋರ ಅಪರಾಧವಾಗಿರದೆ, ಇದು ದಿನ ನಿತ್ಯ ನಡೆಯುವ ಸಾಮಾನ್ಯ ತೊಡಕುಗಳೆಂದು ಮತ್ತು ಇಂತಹ ಪ್ರಕರಣಗಳು ಆಕಸ್ಮಿಕ ಸಹಜವೆಂದು ಪರಿಗಣಿಸುತ್ತಾರೆ.

ಉದಾ: ಹೆಣ್ಣುಮಕ್ಕಳು ಶಾಲೆಗೆ ಹೋಗುವಾಗ ಒಬ್ಬ ಹುಡುಗ ಅಥವಾ ಒಂದು ಗುಂಪು ಆ ಹೆಣ್ಣು ಮಗುವಿನ ಮರ್ಯಾದೆಗೆ ಅಪಮಾನ ಮಾಡುವುದು, ಕೆಟ್ಟ ಶಬ್ದಗಳನ್ನು ಬಳಸುವುದು, ಕಲ್ಲುಗಳಿಂದ ಹೊಡೆಯುವುದು, ರಾಕೆಟ್ ಹೊಡೆಯುವುದು, ಕಣ್ಣಿನಿಂದ ಸನ್ನೆ ಮಾಡುವುದು ಮತ್ತು ಏರುಧ್ವನಿಯಲ್ಲಿ ಆಕೆಯು ಕೇಳಿಸಿಕೊಳ್ಳಲಿ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸುವುದನ್ನು ಹೆಣ್ಣು ಮಕ್ಕಳು ಚುಡಾಯಿಸು ವಿಕೆ ಎನ್ನುವರು. ಇಂತಹ ಘಟನೆಗಳು ಅನಿವಾರ್ಯ ಸಮಯದಲ್ಲಿ ನಡೆದಾಗ ಸಾಮಾನ್ಯವಾಗಿ ಹೆಣ್ಣು ಮಕ್ಕಳು ಹೆದರಿ ಮತ್ತು ಇವು ಹೆಣ್ಣು ಮಕ್ಕಳಿಗೆ ಆಗುವ ಸಹಜ ತೊಂದರೆಗಳು ಎಂದು ತಲೆ ತಗ್ಗಿಸಿ ಮನೆಯ ಕಡೆ ಹೋಗುತ್ತಾರೆ. ಆದರೆ ಕೆಲವು ಧೈರ್ಯಶಾಲಿ ಹುಡುಗಿಯರು ಮತ್ತು ಕೆಲವು ವಿದ್ಯಾವಂತ ಪೋಷಕರು ಇಂತಹ ಘಟನೆ ಇನ್ನೊಮ್ಮೆ ನನ್ನ ಮಗಳಿಗೆ ಅಥವಾ ಯಾವುದೇ ಹೆಣ್ಣು ಮಗಳಿಗೆ ಆಗಬಾರದೆಂದು ಇಂತಹ ದೂರನ್ನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದರೆ, ಅಂತಹ ಸಮಯದಲ್ಲಿ ಅಂತಹ ದೂರಿನ ಆರೋಪಿಯನ್ನು ಕರೆತಂದು ಅವನಿಗೆ ಕಾನೂನಿನಡಿಯಲ್ಲಿ ೧೦೦ ರಿಂದ ೩೦೦ ರ ವರೆಗೆ ಒಂದು **ಪಿಟಿ ಕೇಸ್** ಚಾರ್ಜ್ ಮಾಡಿ ಅದನ್ನು ಕೋರ್ಟ್‌ನಲ್ಲಿ ಕಟ್ಟಲು ತಿಳಿಸುತ್ತಾರೆ. ಆಗ ವ್ಯಕ್ತಿಯು ಇಂತಹ ಅಪರಾಧಗಳಿಗೆ ಹೆಚ್ಚು ಶಿಕ್ಷೆಯಿಲ್ಲ ಎಂದು ಪರಿಭಾವಿಸಿಕೊಂಡು ಅವನು ದಿನಂಪ್ರತಿ ಮಾಮೂಲಿಯಾಗಿ ತನ್ನ ಚಾಳಿಯನ್ನು ಮುಂದುವರೆಸುತ್ತಾ ಹೋಗುತ್ತಾನೆ.

ಒಂದು ಪ್ರಕರಣದಲ್ಲಿ ಕಲಂ ೯೨ ಸಿ.ಎಲ್.(ಕ್ಯೂ) K.P Act ಭಾರತಿ ನಗರ ಪೋಲಿಸ್ ಠಾಣೆಯಲ್ಲಿ ದಿನಾಂಕ ೨೬-೦೩-೨೦೧೧ ರಂದು ಭಾರತಿ ನಗರ ಸರಹದ್ದಿನಲ್ಲಿ ಕೋಲ್ಸ್ ಪಾರ್ಕ್‌ಬಳಿ ಪ್ರಾಮಿನೆಡ್ ರಸ್ತೆಯ ಗುಡ್‌ಮಿಲ್ ಸ್ಕೂಲ್ ಮುಂಬಾಗದಲ್ಲಿದ್ದು ಕಲಂ ನಂಳ ರಲ್ಲಿ ಆರೋಪಿ ಮುದ್ದಾರಿಸ್ ಬಿನ್ ಅಮ್ಜಾದ್‌ಅಸಾಮಿಯಾ ಬೇರೊಬ್ಬ ವ್ಯಕ್ತಿಯ ಜೊತೆ ಸೇರಿ ಸಾರ್ವಜನಿಕ ರಸ್ತೆಯಲ್ಲಿ ಓಡಾಡುತ್ತಿದ್ದ ಹೆಣ್ಣು

ಮಕ್ಕಳನ್ನು ಹಾಗೂ ಹೆಂಗಸರನ್ನು ಉದ್ದೇಶಿಸಿ ಕಿಟಲೆ ಮತ್ತು ತೊಂದರೆಯುಂಟು ಮಾಡುತ್ತಿದ್ದನೆಂದು ದೂರಲ್ಲಿ ದಾಖಲಾಗಿದೆ. ಇದು ಒಂದು ಸಾಮಾನ್ಯ ಪ್ರಕರಣವೆಂದು ಠಾಣೆಯಲ್ಲಿ ಸ್ವೀಕರಿಸುತ್ತಾರೆ.

ಇಂತಹ ಪ್ರಕರಣಗಳು ಮರುಕಳಿಸಬಾರದೆಂದರೆ ನಮ್ಮ ಕಾನೂನಿನಲ್ಲಿ ಅತ್ಯಾಚಾರ, ಕೊಲೆ, ವರದಕ್ಷಿಣೆ, ಪ್ರಕರಣಗಳಿಗೆ ಹೇಗೆ ಶಿಕ್ಷೆ ವಿಧಿಸುತ್ತಾರೆಯೋ ಹಾಗೆ ಇಂತಹವರಿಗೂ ಕೂಡಾ ಜೈಲುವಾಸ, ಗೂಂಡಾಕಾಯ್ದೆ, ಜೀವಾವಾಧಿ ಜೈಲುಶಿಕ್ಷೆಯಂತಹ ಘೋರ ಶಿಕ್ಷೆಯನ್ನು ವಿಧಿಸಿದಾಗ ಮಾತ್ರ ಇಂತಹ ಅಪರಾಧಗಳು ಸಹ ಕಡಿಮೆಯಾಗುತ್ತವೆ ಎಂದು ಜನಸಾಮಾನ್ಯರಿಗೆ ತಿಳುವಳಿಕೆಯಾದಾಗ ಇಂತಹ ಪ್ರಕರಣಗಳು ಇನ್ನೊಮ್ಮೆ ಮರುಕಳಿಸದಂತೆ ಎಚ್ಚರವಹಿಸುತ್ತಾರೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಇಂದು ಪ್ರಸ್ತುತ ಸಮಾಜದಲ್ಲಿ ಯುವಜನತೆಯು ದಾರಿ ತಪ್ಪಿರುವುದರಿಂದ ಈ ರೀತಿಯ ಪ್ರಕರಣಗಳು ಸಮಾಜದಲ್ಲಿ ದಿನೇ–ದಿನೇ ಹೆಚ್ಚಾಗುತ್ತಿರವುದು ಕಂಡುಬಂದಿವೆ. ಹೆಣ್ಣುಮಕ್ಕಳು ಒಂಟಿಯಗಿ ಓಡಾಡುವಾಗ, ಸಾರ್ವಜನಿಕ ವಲಯದಲ್ಲಿ ಮಹಿಳೆ ಪಾಲ್ಗೊಂಡಾಗ ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ. ಹೆಣ್ಣುಮಕ್ಕಳನ್ನು ಚುಡಾಯಿಸುವುದು ಕೂಡಾ ಇಂದು ಗಂಡು ಮಕ್ಕಳ ಹವ್ಯಾಸವಾಗಿದೆ. ಅವರ ಮರ್ಯಾದೆಗೆ ದಕ್ಕೆ ಉಂಟು ಮಾಡಿ ಇವರು ಖುಷಿ ಪಡುವ ವಾತಾವರಣವನ್ನು ನಿರ್ಮಿಸುತ್ತಾರೆ. ಇಂತಹ ಪ್ರಕರಣಗಳು ಹೆಚ್ಚಾಗಿ ಕಾಲೇಜುಗಳಲ್ಲಿ, ಬಸ್‌ಸಾಪ್‌ಗಳಲ್ಲಿ, ಮನೋರಂಜನಾ ಸ್ಥಳಗಳಲ್ಲಿ ಮುಂತಾದ ಕಡೆ ಕಂಡುಬರುತ್ತವೆ. ಇಂತಹ ಪ್ರಕರಣಗಳನ್ನು ಯಾವ ಮಹಿಳೆಯರೂ ಕೂಡಾ ಗಂಭೀರವಾಗಿ ಪರಿಗಣಿಸದೆ ಇವು ಸಹಜವೆಂಬಂತೆ ತಿಳಿಯುವುದರಿಂದ ಮತ್ತೇ–ಮತ್ತೇ ಮರುಕಳಿಸುತ್ತಲೇ ಇರುತ್ತವೆ. ಕಾನೂನಿನಲ್ಲೂ ಸಹ ಈ ಪ್ರಕರಣಗಳು ಗಂಭೀರವಾಗಿಲ್ಲದಿರುವುದರಿಂದ ಆರೋಪಿಗಳು ತನ್ನ ವೃತ್ತಿಯನ್ನು ಯಥಾ ಪ್ರಕಾರ ಮುಂದುವರಿಸುವುದನ್ನು ನೋಡಬಹುದಾಗಿದೆ.

೫.೮ ಲೈಂಗಿಕ ದೌರ್ಜನ್ಯ

ಕ್ರ.ಸಂ	ಲೈಂಗಿಕ ದೌರ್ಜನ್ಯ	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	–	–	–	–	–	–	–	೦೦
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	೦೧	–	–	೦೧	–	೦೨
೪	ವಿಜಯನಗರ	೦೫	೦೧	೦೧	೦೬	೦೪	೧೧	೧೬	೪೪
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	೦೨	–	–	೦೩	೦೩	೦೧	೦೪	೧೩
೮	ಬಾಣಸವಾಡಿ	೦೧	೦೧	೦೪	೦೩	೦೮	೦೬	೦೪	೨೭
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	–	೦೦
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	–	–	೦೦
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	–	೦೦
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೦೮	೦೨	೦೬	೧೨	೧೫	೧೯	೨೪	೮೬
	ಶೇಕಡವಾರು	೯.೩	೨.೩	೭.೯	೧೩.೯	೧೭.೪	೨೨.೦	೨೭.೯	

೫.೮, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಈ ಮೇಲೆ ವಿವರಿಸಿದಂತೆ ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ದಾಖಲಾದ ದೂರು ಪ್ರಕರಣಗಳಲ್ಲಿ ೨೦೦೬ ರಲ್ಲಿ ಶೇಕಡ ೨.೩ ಅತಿ ಕಡಿಮೆ ಪ್ರಕರಣಗಳು ದಾಖಲಾಗಿದ್ದು ೨೦೧೧ ರಲ್ಲಿ ಶೇಕಡ ೨೭.೯ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ೯ ಪ್ರಕರಣದ ಆರೋಪಿಗಳಿಗೆ ಶಿಕ್ಷೆಯಾಗಿರುತ್ತದೆ. ೫೦ ಪ್ರಕರಣಗಳು ಖುಲಾಸೆಗೊಂಡಿವೆ. ಇನ್ನು ೩೦ ತನಿಖೆ ಹಂತದಲ್ಲಿವೆ ಎಂದು ತಿಳಿದುಬಂದಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಸಾಮಾನ್ಯವಾಗಿ ಮಹಿಳೆಯು ಈ ಮೇಲಿನ ಪ್ರಕರಣದಲ್ಲಿ ಕೌಟುಂಬಿಕ ಮತ್ತು ಸಾರ್ವಜನಿಕ ಎರಡೂ ವಲಯದಲ್ಲಿಯೂ ಸಹ ಮಹಿಳೆಯು ದೌರ್ಜನ್ಯಕ್ಕೆ ಒಳಗಾಗುವುದನ್ನು ನಾವು ನೋಡಬಹುದಾಗಿದೆ. ಕುಟುಂಬದಲ್ಲಿ ಇಂದು ತಂದೆ, ಅಣ್ಣ, ತಮ್ಮ, ಚಿಕ್ಕಪ್ಪ, ಇತರ ಸಂಬಂಧಿಕರಿಂದ ಲೈಂಗಿಕ ದೌರ್ಜನ್ಯ ಪ್ರಕರಣವು ನಡೆಯುತ್ತದೆ. ಸಾರ್ವಜನಿಕ ವಲಯದಲ್ಲಿ ಮಹಿಳೆಯು ಸಾಮಾನ್ಯವಾಗಿ ಸಂಘಟಿತವಲಯ ಮತ್ತು ಅಸಂಘಟಿತವಲಯ ಗಳೆರಡರಲ್ಲೂ ಸಹ ಅವ್ಯಹತವಾವಾಗಿ ಲೈಂಗಿಕ ದೌನರ್ಜನ್ಯಕ್ಕೆ ಮಹಿಳೆ ಒಳಗಾಗುತ್ತಾಳೆ. ಮಹಿಳೆಯು ಅಬಲೆಯಾಗಿರುವುದರಿಂದ, ಕಾನೂನಿನ ತಿಳುವಳಿಕೆ ಇದ್ದರೂ ಸಹ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡಲು ಅಸಹಾಯಕಳಾಗಿರುವುದರಿಂದ ಸಂಘಟಿತ ಕ್ಷೇತ್ರಗಳಾದ ಶಿಕ್ಷಣ ಸಂಸ್ಥೆ, ಬ್ಯಾಂಕು, ಆಫೀಸು ಮತ್ತು ಇತರೆ ಸರ್ಕಾರಿ ಕಛೇರಿಗಳಲ್ಲಿ ಸಹದ್ಯೋಗಿಗಳಿಂದ, ಹಿರಿಯ ಅಧಿಕಾರಿಗಳಿಂದ ಮಹಿಳೆಯು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾಳೆಂದು ತಿಳಿದುಬಂದಿದೆ. ಕುಟುಂಬದಲ್ಲಾಗುವ ಲೈಂಗಿಕ ದೌರ್ಜನ್ಯವನ್ನು ಮನೆಯ ಗೌರವಕ್ಕೆ ದಕ್ಕೆ ಬರುತ್ತದೆಂದು ತಿಳಿದು ಬಹುತೇಕ ಪ್ರಕರಣಗಳು ಬೆಳಕಿಗೆ ಬಂದಿಲ್ಲವೆಂದು ತಿಳಿದುಬರುತ್ತದೆ.

೫.೯ ವಿಧವೆಯರ ಮೇಲಿನ ಅತ್ಯಾಚಾರ

ಕ್ರ.ಸಂ	ವಿಧವೆಯರ ಮೇಲಿನ ಅತ್ಯಾಚಾರ	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	–	–	–	–	–	–	–	೦೦
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	–	–	–	–	–	–	–	೦೦
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	–	–	–	–	–	–	–	೦೦
೮	ಬಾಣಸವಾಡಿ	–	–	–	–	–	–	–	೦೦
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	–	೦೦
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	–	–	೦೦
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	–	೦೦
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೦೦	೦೦	೦೦	೦೦	೦೦	೦೦	೦೦	೦೦
	ಶೇಕಡವಾರು	೦೦	೦೦	೦೦	೦೦	೦೦	೦೦	೦೦	೦೦

೫.೯, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಬೆಂಗಳೂರು ನಗರದ ಪೋಲಿಸ್ ಠಾಣೆಯಲ್ಲಿ ನಾನು ಇದರ ಬಗ್ಗೆ ವಿಚಾರಣೆ ಮಾಡಿದಾಗ ನನಗೆ ತಿಳಿದು ಬರುವಂತಹ ಮುಖ್ಯ ಅಂಶಗಳೆಂದರೆ ಇಂದು ಅತ್ಯಾಚಾರವೆಂಬುದು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆ ಸಂಘಟಿತ ಮತ್ತು ಅಸಂಘಟಿತ ಹಾಗೂ ಕೌಟುಂಬಿಕ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಾಳೆ. ಪೋಲೀಸ್ ಠಾಣೆಗಳಲ್ಲಿ ಬಲಾತ್ಕಾರ (ರೇಪ್) ಅತ್ಯಾಚಾರ ಲೈಂಗಿಕ ದೌರ್ಜನ್ಯ ಇಂತಹ ಎಲ್ಲಾ ಕೇಸ್‌ಗಳನ್ನು ೩೭೬ ಕಲಂ ನಲ್ಲಿ ಸೇರಿಸಿಕೊಂಡಾಗ ಈ ಪ್ರಕರಣಗಳು ಐ.ಪಿ.ಸಿ. ೩೭೬ ಅಡಿಯಲ್ಲಿ ದಾಖಲಾಗಿವೆ. ಆದರೆ ೩೭೬ ರ ಅಡಿಯಲ್ಲಿ ಯಾವುದೇ ಮಹಿಳೆಯಾಗಿರಬಹುದು ಅಪ್ರಾಪ್ತ, ವಯಸ್ಕ, ವಿವಾಹಿತ ಮಹಿಳೆ, ಮತ್ತು ವಿಧವೆ, ಎಲ್ಲರೂ ಸಹ ೩೭೬ ಅತ್ಯಾಚಾರದ ಕೇಸಿನಡಿ ಪ್ರಕರಣಗಳು ದಾಖಲಾಗುತ್ತವೆ. ಆದ್ದರಿಂದ ಪ್ರತ್ಯೇಕವಾಗಿ ವಿಧವೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ದಾಖಲಾಗುವುದಿಲ್ಲ. ದಾಖಲಾದ ಪ್ರಕರಣಗಳಲ್ಲಿ ವಿಧವೆಯರು, ಅಂಧ ಮಹಿಳೆಯರು, ಅನಾಥರು, ಅಮಾಯಕ ಮಹಿಳೆಯರು, ಉನ್ನತ ವರ್ಗದ ಮಹಿಳೆಯರ ಇರಬಹುದು. ಆದರೆ ವಿಧವೆಯರ ಅತ್ಯಾಚಾರ ಪ್ರಕರಣಗಳು ವಿಶೇಷವಾಗಿ ಎಲ್ಲೂ ದಾಖಲಾಗಿಲ್ಲ ತಿಳಿದುಬಂದಿದೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಪ್ರಸ್ತುತ ಸಮಾಜದಲ್ಲಿ ವಿಧವೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ನಡೆದರೂ ಕೂಡಾ ಪೊಲೀಸ್ ದಾಖಲಾತಿಗಳಲ್ಲಿ ವಿಧವೆಯರ ಮೇಲಿನ ಅತ್ಯಾಚಾರವೆಂದು ಎಲ್ಲೂ ನಮೂದಾಗಿರುವುದಿಲ್ಲ. ಕಾರಣ ವಿಧವೆಯರ ಮೇಲೆ ಅತ್ಯಾಚಾರ ನಡೆಯಲು ಪುರುಷನ ಆಶ್ರಯವಿಲ್ಲದಿರುವುದೇ ಮುಖ್ಯಾಂಶವಾಗಿದೆ. ವಿಧವೆಯಾದ ಮಹಿಳೆಯು ಅತ್ಯಾಚಾರವನ್ನು ವಿರೋಧಿಸಿ ಕಾನೂನು ಕ್ರಮವನ್ನು ಜರುಗಿಸಲು ಅಶಕ್ತಳಾಗಿರುವುದರಿಂದ ಹಾಗೂ ಸಮಾಜವು ವಿಧವೆಯರನ್ನು ನೋಡುವ ದೃಷ್ಟಿಯು ಬೇರೆಯಾಗಿರುವುದರಿಂದ ಸಮಾಜಕ್ಕೆ ಅಂಜಿ ಈ ರೀತಿಯ ಪ್ರಕರಣಗಳು ನಡೆದರೂ ಸಹ ಬೆಳಕಿಗೆ ಬರುವುದಿಲ್ಲವೆಂದು ತಿಳಿದುಬರುತ್ತದೆ.

೫.೧೧ ಆ್ಯಸಿಡ್ ಪ್ರಕರಣಗಳು

ಕ್ರ.ಸಂ	ಆ್ಯಸಿಡ್ ಪ್ರಕರಣಗಳು	೨೦೦೫	೨೦೦೬	೨೦೦೭	೨೦೦೮	೨೦೦೯	೨೦೧೦	೨೦೧೧	ಒಟ್ಟು
೧	ಕೆ.ಆರ್.ಪುರ	–	–	–	–	–	–	–	೦೦
೨	ವಿಧಾನಸೌಧ	–	–	–	–	–	–	–	೦೦
೩	ಭಾರತೀನಗರ	–	–	–	–	–	–	–	೦೦
೪	ವಿಜಯನಗರ	–	–	–	–	–	–	–	೦೦
೫	ಶೇಷಾದ್ರಿಪುರಂ	–	–	–	–	–	–	–	೦೦
೬	ಜ್ಞಾನಭಾರತಿ	–	–	–	–	–	–	–	೦೦
೭	ವಿವೇಕನಗರ	–	–	–	–	–	–	–	೦೦
೮	ಬಾಣಸವಾಡಿ	–	–	–	–	–	–	–	೦೦
೯	ಹಲಸೂರ್ ಗೇಟ್	–	–	–	–	–	–	–	೦೦
೧೦	ಸದಾಶಿವನಗರ	–	–	–	–	–	–	–	೦೦
೧೧	ಕಬ್ಬನ್ ಪಾರ್ಕ್	–	–	–	–	–	–	–	೦೦
೧೨	ಎಸ್.ಆರ್.ನಗರ	–	–	–	–	–	–	–	೦೦
೧೩	ಶಿವಾಜಿನಗರ	–	–	–	–	–	–	–	೦೦
೧೪	ಹೈಗ್ರೌಂಡ್	–	–	–	–	–	–	–	೦೦
೧೫	ಕಮರ್ಷಿಯಲ್ ಸ್ಟ್ರೀಟ್	–	–	–	–	–	–	–	೦೦
೧೬	ಎಸ್.ಜೆ.ಪಾರ್ಕ್	–	–	–	–	–	–	–	೦೦
	ಒಟ್ಟು	೦೦	೦೦	೦೦	೦೦	೦೦	೦೦	೦೦	೦೦
	ಶೇಕಡವಾರು	೦೦	೦೦	೦೦	೦೦	೦೦	೦೦	೦೦	೦೦

೫.೧೦, ಕೋಷ್ಟಕದಲ್ಲಿ ನೀಡಿದ ಮಾಹಿತಿ ನಿರೂಪಣೆ.

ಬೆಂಗಳೂರು ನಗರದ ಪೋಲೀಸ್ ದಾಖಲಾತಿ ಮತ್ತು ಠಾಣಾ ಬರಹಗಾರರ ಜೊತೆಗೆ ನಾನು ಕೂಲಂಕುಶವಾಗಿ ಚರ್ಚಿಸಿದಾಗ ಬೆಂಗಳೂರು ನಗರದಲ್ಲಿ ಯಾವ ಪೊಲೀಸ್ ಠಾಣೆಯಲ್ಲೂ ಸಹ ೨೦೦೫ ರಿಂದ ೨೦೧೧ ರ ವರೆಗೆ ಒಟ್ಟು ೧೬ ಪೊಲೀಸ್ ಠಾಣೆಗಳಲ್ಲೂ ಒಂದೇ ಒಂದು ಪ್ರಕರಣವೂ ಸಹ ದಾಖಲಾಗಿಲ್ಲವೆಂದು ತಿಳಿಸಿರುತ್ತಾರೆ.

ಮಾಹಿತಿಯ ಲಿಂಗ ಸಂಬಂಧಿ ವಿಶ್ಲೇಷಣೆ: ಬೆಂಗಳೂರು ನಗರದಲ್ಲಿ ಎಲ್ಲಾ ವರ್ಗ, ಜಾತಿ, ಜನಾಂಗೀಯ ಜನರು ಮತ್ತು ವಿದ್ಯಾವಂತ, ಅವಿದ್ಯಾವಂತ, ಸರ್ಕಾರಿ, ಖಾಸಗೀ ಉದ್ಯೋಗ, ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವವರು ಅಧಿಕ ಸಂಖ್ಯೆಯಲ್ಲಿ ಇರುವುದರಿಂದ ಬೆಂಗಳೂರು ನಗರದಲ್ಲಿ ೧ ಕೋಟಿಗೂ ಅಧಿಕ ಜನರು ವಾಸಿಸುತ್ತಿದ್ದಾರೆ. ಒಂದು ಬೃಹತ್ ನಗರವಾಗಿದ್ದು ಇದು I.T.BT ನಗರ ಮತ್ತು Electronic city ಎಂಬ Industrial ನಗರವೆಂದು ಹೆಸರುವಾಸಿಯಾಗಿರುವ ಬೆಂಗಳೂರು ನಗರದಲ್ಲಿ ಅಧಿಕ ಜನರು ಔಟ್‌ಸೈಡ್ ಜನರು ವಿವಿಧ ಜಾತಿ ಧರ್ಮಗಳ ಬೇರೆ ಬೇರೆ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಬಹುತೇಕ ಈ ಆ್ಯಸಿಡ್ ಪ್ರಕರಣದಲ್ಲಿ ಭಾಗಿಯಾದವರಿಗೆ ನಾನ್‌ಬೇಲ್ ಕಠಿಣ ಶಿಕ್ಷೆ ಯಾಗುವುದರಿಂದ ಇಂತಹ ಕೃತ್ಯಗಳನ್ನು ಜನ ಸಾಮಾನ್ಯರು ಮಾಡುವುದಿಲ್ಲ. ಸಮಾಜದಲ್ಲಿ ಪ್ರತಿಷ್ಟಿತ ವ್ಯಕ್ತಿಗಳ ಮಕ್ಕಳು ಸಮಾಜದ ಉನ್ನತ ಸ್ಥಾನ ಪಡೆದವರು ಭಾಗಿಯಾಗಿರುತ್ತಾರೆ. ಈ ದಾಳಿಯ ಆರೋಪಿಗಳು ಏಕೆ ಶಿಕ್ಷೆಗೆ ಒಳಗಾಗುವುದಿಲ್ಲ ಮತ್ತು ಪೋಲೀಸ್ ದಾಖಲೆಯಲ್ಲಿ ಪ್ರಕರಣಗಳ ದಾಖಲಾಗುವುದಿಲ್ಲವೆಂದರೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆ ಮತ್ತು ಅವರ ಕುಟುಂಬದವರು ಮೊದಲೇ ನೊಂದ ಜನರು ಜರ್ಜರಿತವಾಗಿ ಜೀವನವೇ ಬೇಡ ಸಾವೊಂದೇ ಮುಂದಿನ ದಾರಿ ಎನ್ನುವ ತೀರ್ಮಾನಕ್ಕೆ ಬಂದಿರುತ್ತಾರೆ. ಅಂತಹ ಸಮಯದಲ್ಲಿ ದೌರ್ಜನ್ಯದ ಆರೋಪಿಯು ಸಮಾಜದಲ್ಲಿ ಪ್ರಬಲವಾಗಿ ಮತ್ತು ರಾಜಕೀಯವಾಗಿ ಪ್ರತಿಷ್ಟಿತನಾಗಿದ್ದಾಗ ಪ್ರಕರಣವು ಸಾರ್ವಜನಿಕವಾಗಿ ನಡೆದರೂ ಸಹ ಆರೋಪಿ ಗೊತ್ತಿದ್ದರೂ ಸಹ ಪ್ರಕರಣವನ್ನು ದಾಖಲು ಮಾಡುವುದಿಲ್ಲ. ಕಾರಣ ಪ್ರಕರಣ ದಾಖಲು ಮಾಡಿದರೆ ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು ಕಠಿಣ ಕ್ರಮವನ್ನು ಜರುಗಿಸುವುದರಿಂದ ಮತ್ತು ಆರೋಪಿಯ ಕುಟುಂಬದವರು ಹಾಗೂ ಅವರ ಸ್ನೇಹಿತರು ಪ್ರಕರಣ ದಾಖಲಿಸಿದರೆ ಮತ್ತು ಕುಟುಂಬದ ಇತರೇ ಮಹಿಳೆಯರಿಗೆ ಆ್ಯಸಿಡ್ ಹಾಕುವುದಾಗಿ ಬೆದರಿಕೆಗಳನ್ನು ಹಾಕುವುದರಿಂದ ಒಂದು ಬಾರಿ ಒಬ್ಬ ಮಹಿಳೆಗೆ ಇಂತಹ ಸ್ಥಿತಿ ಒದಗಿದೆ. ಇಂತಹ ಹೀನಾಯ ಕೃತ್ಯ ನಮ್ಮ ಕುಟುಂಬಕ್ಕೆ ಬೇಡ ಎಂದು ತೀರ್ಮಾನಿಸಿ ದುಃಖ ದುಮ್ಮಾನಗಳನ್ನು ಮನದಲ್ಲಿ ಹಾಕಿಕೊಂಡು ಮನೆಯಲ್ಲಿ ಕೊರಗುತ್ತಾ ಇರುತ್ತಾರೆ ಹೊರತು ಪ್ರಕರಣವನ್ನು ದಾಖಲು ಮಾಡುವುದಕ್ಕೆ ಹಿಂಜರಿಯುತ್ತಾರೆ. ಸರ್ಕಾರದ ಮತ್ತೊಂದು ಪ್ರಮುಖ ಕಾರ್ಯವೆಂದರೆ ಇಂತಹ ಘೋರ ಅಪರಾಧದ ವಿರುದ್ದ ದೂರು ನೀಡಿದ

ದೂರುದಾರರಿಗೆ ಜೀವ ಬೆದರಿಕೆ ಇದ್ದು, ಇಂತಹ ಸಮಯದಲ್ಲಿ ಪೋಲಿಸ್ ಮತ್ತು ಕಾನೂನು ರಕ್ಷಣೆಯನ್ನು ದೂರುದಾರರಿಗೆ ನೀಡಿ ಅವರಿಗೆ ತೊಂದರೆಯಾಗದಂತೆ ನೋಡಿಕೊಂಡು ಇಂತಹ ಸಮಯದಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯು ದೂರನ್ನು ದಾಖಲಿಸಲು ಯಾವ ಭಯ ಪಡದೇ ಠಾಣೆಯಲ್ಲಿ ದೂರು ದಾಖಲಿಸಿದಾಗ, ನಮಗೆ ಠಾಣೆಯಲ್ಲಿ ಪ್ರಕರಣಗಳು ಲಭ್ಯವಾಗುತ್ತವೆ. ಬೆಂಗಳೂರು ನಗರದಲ್ಲಿ ಬಹುತೇಕ ಠಾಣೆಗಳಲ್ಲಿ ಒಂದೇ ಒಂದು ಪ್ರಕರಣವೂ ಸಹ ದಾಖಲಾಗಿರುವುದಿಲ್ಲ.

೫.೧೧ ಬೆಂಗಳೂರು ನಗರದ ಮಹಿಳಾ ದೌರ್ಜನ್ಯಗಳ ಪೊಲೀಸ್ ದಾಖಲೆಗಳಿಗೂ ಮತ್ತು ಕರ್ನಾಟಕ ರಾಜ್ಯದಲ್ಲಿನ ಮಹಿಳಾ ದೌರ್ಜನ್ಯಗಳ ತೌಲನಿಕ ವಿಶ್ಲೇಷಣೆ.

ಕರ್ನಾಟಕದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಪಟ್ಟಿ: ೨೦೦೮–೨೦೧೨

ಕ್ರ.ಸ	ಪ್ರಕರಣಗಳ ವಿವರ	ವಾರ್ಷಿಕ ಪ್ರಕರಣಗಳು				
		೨೦೦೮	೨೦೦೯	೨೦೧೦	೨೦೧೧	೨೦೧೨
೧	ಅತ್ಯಾಚಾರ (ಐಪಿಸಿ–೩೭೬)	೪೧೫	—೫೦೯	೫೮೬	೬೩೯	೬೨೧
೨	ಅಪಹರಣ ಮತ್ತು ಬಲತ್ಕಾರ ವಾಗಿ ಅಪಹರಿಸುವುದು. (ಐಪಿಸಿ–೩೬೩–೩೭೩)	೪೨೦	೪೦೮	೧೩೭೪	೭೧೫	೧೦೭೦
೩	ವರದಕ್ಷಿಣೆ ಸಾವು (ಐಪಿಸಿ–೩೦೨–೩೦೪)	೨೫೯	೨೬೪	೩೪೮	೨೬೭	೨೧೮
೪	ಗಂಡ / ಸಂಬಂಧಿಕರಿಂದ ಕಿರುಕುಳ (ಐಪಿಸಿ–೪೯೮ ಎ)	೨೬೩೮	೩೧೮೫	೩೪೪೧	೩೭೧೨	೩೬೮೪
೫	ದೈಹಿಕ ಕಿರುಕುಳ ಮತ್ತು ಹಲ್ಲೆ (ಐಪಿಸಿ–೩೫೪)	೧೯೫೪	೨೧೮೬	೨೫೪೪	೨೬೦೮	೨೯೭೮
೬	ಲೈಂಗಿಕ ಕಿರುಕುಳ (ಐಪಿಸಿ–೫೦೯)	೪೮	೬೪	೮೩	೮೧	೧೦೦
೭	ವಿದೇಶದಿಂದ ಅಕ್ರಮವಾಗಿ ಹುಡುಗಿಯರನ್ನು ಕರೆತರುವುದು (ಐಪಿಸಿ–೩೬೬ ಬಿ)	೦೧	೦೨	೦೦	೧೨	೩೨
೮	ಸತಿ ಸಹಗಮನ ಕಾಯ್ದೆ–೧೯೮೭	೦೦	೦೦	೦೦	೦೦	೦೦
೯	ಮಹಿಳೆಯರ ಅಕ್ರಮ ಸಾಗಾಣಿ ತಡೆ ಕಾಯ್ದೆ–೧೯೫೬	೫೧೫	೩೨೯	೨೪೨	೩೫೧	೩೩೫
೧೦	ಮಹಿಳೆಯರನ್ನು ಅಸಭ್ಯವಾಗಿ ಬಿಂಬಿತ ತಡೆ ಕಾಯ್ದೆ–೧೯೬೧	೦೦	೦೧	೦೦	೦೨	೦೦
೧೧	ವರದಕ್ಷಿಣೆ ತಡೆ ಕಾಯ್ದೆ–೧೯೬೧	೬೨೮	೯೦೪	೧೦೭೭	೧೨೫೦	೧೩೨೮
	ಒಟ್ಟು ಪ್ರಕರಣಗಳು	೬೮೭೮	೭೮೫೨	೯೬೯೫	೯೫೯೭	೧೦೩೬೬

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಆದಂತಹ ವಾರ್ಷಿಕ ಸರಾಸರಿಯ ಬೆಳವಣಿಗೆ ಪಟ್ಟಿ.

ವಾರ್ಷಿಕ ಪ್ರಕರಣಗಳು		
೨೦೦೯–೨೦೧೦	೨೦೧೦–೨೦೧೧	೨೦೧೧–೨೦೧೨
೧೩.೧೪	೯.೦೪	–೨.೮೧
೭೦.೩೧	–೪೭.೯೬	೪೯.೬೫
೬.೪೧	–೨೩.೨೭	–೧೮.೩೫
೭.೪೪	೭.೮೭	–೦.೭೫
೧೧.೮೭	೨.೫	೧೪.೧೮
೧೨.೮೯	–೨.೪	೨೩.೪೫
೦	೦	೧೬೬.೬೭
೦	೦	೦
–೩೫.೯೫	೪೫.೦೪	–೪.೫೫
೦	೦	೦
೧೬.೦೬	೧೬.೬	೬.೨೪
೧೮.೧೭	–೧.೦೧	೬.೯೨

೨೦೦೯–೨೦೧೦ ನೇ ಸಾಲಿನಲ್ಲಿ ಒಟ್ಟು ೫೮೯ ಅತ್ಯಾಚಾರ ಪ್ರಕರಣಗಳು ವರದಿಯಾಗಿದ್ದು ೨೦೧೦ನೇ ಸಾಲಿನಲ್ಲಿ ಒಟ್ಟು ೫೦೯ ಪ್ರಕರಣಗಳು ವರದಿಯಾಗಿದ್ದು ಹೋಲಿಕೆ ಮಾಡಿದರೆ ಈ ಸಾಲಿನಲ್ಲಿ ಇಂತಹ ಅಪರಾಧಗಳ ವರದಿ ಪ್ರಮಾಣವು ಶೇಕಡ ೧೮.೧೭ ರಷ್ಟು ಇಳಿಕೆಯಾಗಿರುತ್ತದೆ. ವರದಿಯಾದ ಒಟ್ಟು ೫೮೬ ಅತ್ಯಾಚರ ಪ್ರಕರಣಗಳಲ್ಲಿ ಅತ್ಯಾಚಾರಕ್ಕೋಳಗದವರಲ್ಲಿ ೩೫೫ ಪ್ರಕರಣಗಳು ೧೮ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರಾಗಿರುತ್ತಾರೆ. ೬೯ ಮಂದಿ ಮಹಿಳೆಯರು ೧೪ ರಿಂದ ೧೮ ವರ್ಷ ವಯಸ್ಸಿನ ವರಾಗಿರುತ್ತಾರೆ. ೪೭ ಮಂದಿ ೧೦ ರಿಂದ ೧೪ ವರ್ಷ ವಯಸ್ಸಿನವರಾಗಿರುತ್ತಾರೆ. ಇದನ್ನು ಗಮನಿಸಿದರೆ ೨೦೦೯ನೇ ಸಾಲಿಗೆ ಹೋಲಿಸಿದರೆ ಏರಿಕೆ ಕಂಡುಬರುತ್ತದೆ. ಅಪಹರಣ ಮತ್ತು ವ್ಯವಹರಣ ೨೦೧೦ನೇ ಸಾಲಿನಲ್ಲಿ ಇಂತಹ ಪ್ರಕರಣಗಳು ವರದಿಯ ಪ್ರಮಾಣವು ೨೦೦೯ ನೇ ಸಾಲಿಗೆ ಹೋಲಿಸಿ ನೋಡಿದಾಗ ಶೇಕಡ ೩.೦೬ ರಷ್ಟು ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಪ್ರಸ್ತುತ ಸಾಲಿನಲ್ಲಿ ೫೮೬ ಅಪಹರಣ ಪ್ರಕರಣಗಳು ವರದಿಯಾಗಿದ್ದು ೨೦೦೯ನೇ ಸಾಲಿನಲ್ಲಿ ೪೦೮ ಹಾಗೂ ೨೦೦೯ ರಲ್ಲಿ ೪೨೦ ಪ್ರಕರಣಗಳು ವರದಿಯಾಗಿದ್ದವು. ವರದಕ್ಷಿಣೆ ಸಾವು

೨೦೧೦ನೇ ಸಾಲಿನಲ್ಲಿ ಒಟ್ಟು ೨೪೮ ಪ್ರಕರಣಗಳು ವರದಿಯಾಗಿದ್ದು ೨೦೦೯ನೇ ಸಾಲಿನಲ್ಲಿ ೨೬೪ ಪ್ರಕರಣಗಳು ವರದಿಯಾಗಿದ್ದು ಪರಿಶೀಲಿಸಿ ನೋಡಿದಾಗ ಇಂತಹ ಅಪರಾಧಗಳ ವರದಿ ಪ್ರಮಾಣವು ಶೇಕಡ ೩ ಇಳಿಕೆ ಕಂಡಬರುತ್ತದೆ. ಗಂಡ ಮತ್ತು ಸಂಬಂಧಿಕರ ದೌರ್ಜನ್ಯ ೨೦೧೦ನೇ ಸಾಲಿನಲ್ಲಿ ಒಟ್ಟು ೩೪೪೧ ಪ್ರಕರಣಗಳು ವರದಿಯಾಗಿದ್ದು ೨೦೦೯ನೇ ಸಾಲಿನಲ್ಲಿ ೩೧೮೫ ಪ್ರಕರಣಗಳು ವರದಿಯಾಗಿದ್ದವು. ಮಾನಭಂಗ ಪ್ರಕರಣಗಳು ೨೦೦೯ನೇ ಸಾಲಿನಲ್ಲಿ ಮಹಿಳೆಯರ ಮೇಲೆ ನಡೆದ ಮಾನಭಂಗ ಅಪರಾಧಗಳ ವರದಿ ಪ್ರಮಾಣವು ೨೦೦೮ನೇ ಸಾಲಿಗೆ ಹೋಲಿಕೆ ಮಾಡಿ ನೋಡಿದಾಗ ಶೇಕಡ ೦.೨೭ ರಷ್ಟು ಏರಿಕೆ ಕಂಡುಬರುತ್ತದೆ. ೨೦೧೦ ನೇ ಸಾಲಿನಲ್ಲಿ ಒಟ್ಟು ೨೫೪೪ ಪ್ರಕರಣಗಳು, ೨೦೦೯ ನೇ ಸಾಲಿನಲ್ಲಿ ೨೧೮೬ ಪ್ರಕರಣಗಳು ವರದಿಯಾಗಿದ್ದವು. ಲೈಂಗಿಕ ಕಿರುಕುಳ ೨೦೦೯ ನೇ ಸಾಲಿನಲ್ಲಿ ೬೪ ಪ್ರಕರಣಗಳು ವರದಿಯಾಗಿದ್ದವು. ಬೆಂಗಳೂರು ನಗರದಲ್ಲಿ ಇಂತಹ ೫೦ ಪ್ರಕರಣಗಳು ವರದಿಯಾಗಿದ್ದು ರಾಜ್ಯದ ಇತರ ಘಟಕಗಳಿಗಿಂತ ಹೆಚ್ಚು ಪ್ರಕರಣಗಳು ವರದಿಯಾಗಿರುವುದು ಕಂಡಬಂದಿದೆ.

೨೦೧೦-೨೦೧೧ ನೇ ಸಾಲಿನಲ್ಲಿ ೬.೮ ರಷ್ಟು ಪ್ರಕರಣಗಳು ವರದಿಯಾಗಿದ್ದು ೨೦೧೧ ನೇ ಸಾಲಿನಲ್ಲಿ ಶೇಕಡ ೯ ವರದಿಯಾಗಿದ್ದು ವರದಿ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಲಭ್ಯವಿರುವ ಮಾಹಿತಿಗಳನ್ನು ಅವಲೋಕಿಸಿದರೆ ೨೦೧೦ ನೇ ಸಾಲಿನಲ್ಲಿ ೯೬೯೫ ಪ್ರಕರಣಗಳು ವರದಿಯಾಗಿದ್ದು ೨೦೧೦ ನೇ ಸಾಲಿನಲ್ಲಿ ಮಹಿಳಾ ವಿರುದ್ದದ ಅಪರಾಧಗಳು ೯೫೯೭ ಪ್ರಕರಣಗಳು ವರದಿಯಾಗಿದ್ದು ಇಳಿಕೆ ಪ್ರಮಾಣವನ್ನು ತೋರಿಸುತ್ತದೆ. ಬೆಂಗಳೂರು ನಗರದಲ್ಲಿ ಇತರೆ ಮಹಾನಗರಗಳಿಗಿಂತ ಅಧಿಕ ಪ್ರಮಾಣದ ಅಂದರೆ ೧೯.೭೦ ರಷ್ಟು ಪ್ರಕರಣಗಳು ದಾಖಲಾಗಿರುವುದನ್ನು ನೋಡಬಹುದು. ೨೦೧೦ ನೇ ಸಾಲಿನಲ್ಲಿ ಒಟ್ಟು ೫೮೬ ಅತ್ಯಾಚಾರ ಪ್ರಕರಣಗಳು ವರದಿಯಾಗಿದ್ದು ೨೦೧೧ ನೇ ಸಾಲಿನಲ್ಲಿ ಒಟ್ಟು ೬೩೯ ಪ್ರಕರಣಗಳು ವರದಿಯಾಗಿದ್ದು ಹೋಲಿಕೆ ಮಾಡಿದರೆ ಈ ಅಪರಾಧ ಪ್ರಕರಣಗಳು ಶೇಕಡ ೯.೪ ಏರಿಕೆ ಯಾಗಿರುತ್ತದೆ, ವರದಿಯಾದ ಒಟ್ಟು ೬೩೯ ಅತ್ಯಾಚಾರ ಪ್ರಕರಣಗಳಲ್ಲಿ ಅತ್ಯಾಚಾರಕ್ಕೊಳಗಾದವರ ಪೈಕಿ ೪೭೧ ಪ್ರಕರಣಗಳು ೧೮ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರಾಗಿರುತ್ತಾರೆ. ೫೯ ಮಂದಿ ಮಹಿಳೆಯರು ೧೪-೧೮ ವರ್ಷ ವಯಸ್ಸಿನವರಾಗಿರುತ್ತಾರೆ. ೨೧ ಮಂದಿ ೧೦ ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇದನ್ನು ೨೦೧೦ ಸಾಲಿಗೆ ಹೋಲಿಸಿದರೆ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಅಪಹರಣ ಮತ್ತು ವ್ಯವಹರಣ ೨೦೧೦ ನೇ ಸಾಲಿಗೆ ಹೋಲಿಸಿದಾದ ೨೦೧೦ ನೇ ಸಾಲಿನಲ್ಲಿ ವರದಿಯಾಡ ಪ್ರಕರಣಗಳು ಶೇಕಡ ೪೯.೯೦ ಪ್ರಮಾಣದಲ್ಲಿ ಇಳಿಕೆ ಕಂಡ ಬರುತ್ತದೆ. ಪ್ರಸ್ತುತ ಸಾಲಿನಲ್ಲಿ ೭೧೫ ಅಪಹರಣ ಮತ್ತು ವ್ಯವಹರಣ ಪ್ರಕರಣಗಳು ವರದಿಯಾಗಿದ್ದು ೨೦೧೧ ನೇ ಸಾಲಿನಲ್ಲಿ ೫೮೬ ಹಾಗೂ ೨೦೦೮ ರಲ್ಲಿ ೪೦೮ ಪ್ರಕರಣಗಳು ವರದಿಯಾದ್ದವು. ವರದಕ್ಷಿಣೆ ಸಾವು: ೨೦೧೦ನೇ ಸಾಲಿನಲ್ಲಿ ೩೪೮, ೨೦೧೧ ನೇ ಸಾಲಿನಲ್ಲಿ ಒಟ್ಟು ೨೬೭ ಪ್ರಕರಣಗಳು ವರದಿಯಾಗಿದ್ದು ಪರಿಶೀಲಿಸಿದಾಗ ಅಪರಾಧಗಳ ಪ್ರಮಾಣವು ಶೇಕಡ ೨೩.೨೭ ಇಳಿಕೆ ಕಂಡುಬರುತ್ತದೆ. ಗಂಡ ಮತ್ತು ಸಂಬಂಧಿಕರಿಂದ ಕ್ರೌರ್ಯ: ೨೦೧೦ನೇ

ಸಾಲಿನಲ್ಲಿ ೩೪೪೧ ಪ್ರಕರಣಗಳು ವರದಿಯಾಗಿದ್ದು ೨೦೧೧ ನೇ ಸಾಲಿನಲ್ಲಿ ಒಟ್ಟು ೩೭೧೨ ಪ್ರಕರಣಗಳು ವರದಿಯಾಗಿವೆ. ಮಾನಭಂಗ ಪ್ರಕರಣಗಳು: ೨೦೧೦ ನೇ ಸಾಲಿಗೆ ಹೋಲಿಕೆ ಮಾಡಿ ನೋಡಿದಾಗ ೨೦೧೧ ನೇ ಸಾಲಿನಲ್ಲಿ ಮಹಿಳೆಯರ ಮೇಲೆ ನಡೆದ ಅಪರಾಧಗಳ ಮಾನಭಂಗ ಪ್ರಮಾಣವು ಶೇಕಡ ೨.೫ ಏರಿಕೆ ಕಂಡುಬರುತ್ತದೆ. ೨೦೧೦ ನೇ ಸಾಲಿನಲ್ಲಿ ೨೫೪೪ ವರದಿಯಾಗಿದ್ದು, ೨೦೧೧ ರಲ್ಲಿ ಒಟ್ಟು ೨೬೦೪ ಪ್ರಕರಣಗಳು ವರದಿಯಾಗಿವೆ. ಲೈಂಗಿಕ ಕಿರುಕುಳ: ೨೦೧೦ನೇ ಸಾಲಿನಲ್ಲಿ ೮೩ ಪ್ರಕರಣಗಳು ವರದಿಯಾಗಿದ್ದು, ೨೦೧೧ನೇ ಸಾಲಿನಲ್ಲಿ ಒಟ್ಟು ೮೧ ಪ್ರಕರಣಗಳು ವರದಿಯಾಗಿದ್ದು ಬೆಂಗಳೂರು ನಗರದಲ್ಲಿ ಇಂತಹ ೪೦ ಪ್ರಕರಣಗಳು ವರದಿಯಾಗಿದ್ದು ರಾಜ್ಯದ ಇತರೆ ಘಟಕಗಳಿಗಿಂತ ಹೆಚ್ಚು ವರದಿಯಾಗಿರುವುದು ಕಂಡುಬರುತ್ತದೆ.

೨೦೧೧-೨೦೧೨ ನೇ ಸಾಲಿನಲ್ಲಿ ಮಹಿಳೆಯರ ವಿರುದ್ಧ ನಡೆದ ಅಪರಾಧಗಳನ್ನು ಗಮನಿಸಿದರೆ ೨೦೧೧ ನೇ ಸಾಲಿನಲ್ಲಿ ಶೇಕಡ ೬.೯೭ ಪ್ರಮಾಣದಲ್ಲಿ ವರದಿಯಾಗಿದ್ದು ೨೦೧೨ ನೇ ಸಾಲಿನಲ್ಲಿ ೮.೭ ರಷ್ಟು ವರದಿಯಾಗಿದ್ದು ಪ್ರಸಕ್ತ ಸಾಲಿನ ವರದಿಯ ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಲಭ್ಯವಿರುವ ಮಾಹಿತಿಗಳನ್ನು ಅವಲೋಕಿಸಿದರೆ ೨೦೧೧ ನೇ ಸಾಲಿನಲ್ಲಿ ೯೫೯೭ ಪ್ರಕರಣಗಳು ವರದಿಯಾಗಿದ್ದು ೨೦೧೨ ನೇ ಸಾಲಿನಲ್ಲಿ ಭಾರತ ದಂಡ ಸಂಹಿತೆಯಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು ೧೦೮೨೨ ಪ್ರಕರಣಗಳು ವರದಿಯಾಗಿದ್ದು ಏರಿಕೆ ಪ್ರಮಾಣವನ್ನು ತೋರಿಸುತ್ತದೆ. ಈ ಬೆಂಗಳೂರು ಮಹಾನಗರದಲ್ಲಿ ಪ್ರಸ್ತುತ ಸಾಲಿನಲ್ಲಿ ರಾಜ್ಯದಲ್ಲಿ ವರದಿಯಾದ ಮಹಿಳೆಯರ ವಿರುದ್ಧದ ಅಪರಾಧಗಳ ಪೈಕಿ ಶೇಕಡ ೨೧.೮೦ ವರದಿಯಾಗಿದ್ದು, ಬೆಂಗಳೂರು ಪ್ರಥಮ ಸ್ಥಾನದಲ್ಲಿದೆ. ಅತ್ಯಾಚಾರ: ೨೦೧೧ ನೇ ಸಾಲಿನಲ್ಲಿ ೬೩೬ ವರದಿಯಾಗಿದ್ದು, ೨೦೧೨ ಸಾಲಿನಲ್ಲಿ ಒಟ್ಟು ೬೨೧ ಅತ್ಯಾಚಾರ ಪ್ರಕರಣಗಳು ವರದಿಯಾಗಿದ್ದು ಹೋಲಿಕೆ ಮಾಡಿದರೆ ಅಪರಾಧಗಳ ಪ್ರಮಾಣವು ಶೇಕಡ ೯.೪ ಇಳಿಕೆಯಾಗಿದೆ. ವರದಿಯಾದ ಒಟ್ಟು ೬.೨೧ ಅತ್ಯಾಚಾರ ಪ್ರಕರಣಗಳಲ್ಲಿ ೧೮ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರಾಗಿರುತ್ತಾರೆ, ೨೨೪ ಪ್ರಕರಣಗಳಲ್ಲಿ ಮಹಿಳೆಯರು ೧೬-೧೮ ವರ್ಷ ವಯಸ್ಸಿನವರಾಗಿರುತ್ತಾರೆ. ೫೫ ಪ್ರಕರಣಗಳಲ್ಲಿ ೧೧-೧೫ ವರ್ಷ ವಯಸ್ಸಿನವರಾಗಿರುತ್ತಾರೆ. ೨೮ ಪ್ರಕರಣಗಳಲ್ಲಿ ಇದನ್ನು ಗಮನಿಸಿದಾಗ ೨೦೧೧ ನೇ ಸಾಲಿಗೆ ಹೋಲಿಸಿದರೆ ಪ್ರಮಾಣದಲ್ಲಿ ಇಳಿಕೆ ಕಂಡುಬರುತ್ತದೆ. ಅಪಹರಣ ಮತ್ತು ವ್ಯವಹರಣ: ೨೦೧೧ ಮತ್ತು ೨೦೧೨ ನೇ ಸಾಲಿಗೆ ಹೋಲಿಸಿ: ನೋಡಿದಾಗ ಶೇಕಡ ೪೯.೬೫ ರಷ್ಟು ಪ್ರಮಾಣದಲ್ಲಿ ಏರಿಕೆ ಕಂಡುಬರುತ್ತದೆ. ಪ್ರಸ್ತುತ ಸಾಲಿನಲ್ಲಿ ೧೦೭೦ ಅಪರಾಧ ಪ್ರಕರಣಗಳು ವರದಿ ಆಗಿದ್ದು ೨೦೧೧ ನೇ ಸಾಲಿನಲ್ಲಿ ೭೧೫ ಹಾಗೂ ೨೦೧೦ ರಲ್ಲಿ ೫೯೬ ಪ್ರಕರಣಗಳು ವರದಿಯಾಗಿದ್ದವು. ವರದಕ್ಷಿಣೆ ಸಾವು: ೨೦೧೧ ನೇ ಸಾಲಿನಲ್ಲಿ ೨೬೭ ಪ್ರಕರಣಗಳು ವರದಿಯಾಗಿದ್ದು, ೨೦೧೨ ನೇಸಾಲಿನಲ್ಲಿ ಒಟ್ಟು ೨೧೮ ಪ್ರಕರಣಗಳು ವರದಿ ಆಗಿದ್ದು ಪರಿಶೀಲಿಸಿ ನೋಡಿದಾಗ ಶೇಕಡ ೧೮.೩೫ ರಷ್ಟು ಇಳಿಕೆ ಕಂಡು ಬರುತ್ತದೆ. ಗಂಡ ಮತ್ತು ಸಂಬಂಧಿಕರಿಂದ ಕ್ರೌರ್ಯ: ೨೦೧೧ ನೇ ಸಾಲಿನಲ್ಲಿ ೩೭೧೨ ಪ್ರಕರಣಗಳು ವರದಿಯಾಗಿದು, ೨೦೧೨ ನೇ ಸಾಲಿನಲ್ಲಿ ಒಟ್ಟು ೩೬೮೪ ಪ್ರಕರಣಗಳು ವರದಿಯಾಗಿದ್ದು ಇಳಿಕೆ ಪ್ರಮಾಣವು

ಕಂಡು ಬರುತ್ತದೆ. ಮಾನಭಂಗ: ೨೦೧೧ ಮತ್ತು ೨೦೧೨ ನೇ ಸಾಲಿಗೆ ಹೋಲಿಕೆ ಮಾಡಿ ನೋಡಿದಾಗ ಶೇಕಡ ೨.೫ ಏರಿಕೆ ಕಂಡು ಬರುತ್ತದೆ. ೨೦೧೨ ನೇ ಸಾಲಿನಲ್ಲಿ ಒಟ್ಟು ೪೯೭೮ ಪ್ರಕರಣಗಳು ವರದಿಯಾಗಿದ್ದು, ೨೦೧೧ ನೇ ಸಾಲಿನಲ್ಲಿ ೪೭೦೮ ಪ್ರಕರಣಗಳು ವರದಿಯಾಗಿವೆ. ಲೈಂಗಿಕ ಕಿರುಕುಳ: ೨೦೧೧ ರಲ್ಲಿ ೮೧ ಪ್ರಕರಣಗಳು ವರದಿಯಾಗಿದ್ದು, ೨೦೧೨ ನೇ ಸಾಲಿನಲ್ಲಿ ೧೦೦ ಪ್ರಕರಣಗಳು ವರದಿಯಾಗಿವೆ. ಬೆಂಗಳೂರು ನಗರದಲ್ಲಿ ಇಂತಹ ೫೧ ಪ್ರಕರಣಗಳು ವರದಿಯಾಗಿದ್ದು ಇಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗಿಂತ ಹೆಚ್ಚು ಪ್ರಕರಣಗಳು ವರದಿಯಾಗಿರುವುದು ಕಂಡುಬರುತ್ತದೆ.

ವಿಶ್ಲೇಷಣೆ: ಕರ್ನಾಟಕ ರಾಜ್ಯದಲ್ಲಿ ವರದಿಯಾದ ೨೦೦೮ ರಿಂದ ೨೦೧೨ ನೇ ಸಾಲಿನ ವರೆಗೆ ಮಹಿಳಾ ವಿರುದ್ಧದ ಪ್ರಕರಣಗಳಿಗೂ, ೨೦೦೫ ರಿಂದ ೨೦೧೧ ರ ವರೆಗಿನ ಬೆಂಗಳೂರು ನಗರದ ಪೊಲೀಸ್ ದಾಖಲಾತಿಗಳಿಗೂ ಹೋಲಿಕೆ ಮಾಡಿ ನೋಡಿದಾಗ ಕಂಡು ಬರುವ ವ್ಯತ್ಯಾಸಗಳು ಈ ಕೆಳಗಿನಂತಿವೆ. ಅತ್ಯಾಚಾರ ಪ್ರಕರಣಗಳು ಏರಿಕೆ ಪ್ರಮಾಣದಲ್ಲಿ ನಡೆಯುತ್ತಿರುವುದು ಕಂಡುಬರುತ್ತದೆ ಮತ್ತು ಅತ್ಯಾಚಾರಕ್ಕೊಳಗಾದ ಮಹಿಳೆಯರು ವಿವಿಧ ವಯೋಮಾನದವರೆಂದು ತಿಳಿದು ಬರುತ್ತದೆ. ಆದರೆ ಬೆಂಗಳೂರು ನಗರದ ಪೊಲೀಸ್ ದಾಖಲಾತಿಯಲ್ಲಿ ಹೆಚ್ಚು ಅಪ್ರಾಪ್ತ ಬಾಲಕಿಯರ ಅತ್ಯಾಚಾರ ಪ್ರಕರಣಗಳು ಬೆಳಕಿಗೆ ಬಂದಿವೆ. ಆದರೆ ಕರ್ನಾಟಕ ರಾಜ್ಯದಲ್ಲಿ ಇತರೆ ಘಟಕಗಳಿಗಿಂತ ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿರುವುದು ಕಂಡುಬರುತ್ತದೆ. ಬೆಂಗಳೂರು ನಗರದಲ್ಲಿನ ಅತ್ಯಾಚಾರ ಪ್ರಕರಣಗಳು ಹತ್ತಿರದ ಸಂಬಂಧಿಗಳಿಂದ, ನೆರೆ–ಹೊರೆಯವರಿಂದ, ಸಹಪಾಠಿಗಳಿಂದ, ಪ್ರೇಮಿಗಳಿಂದ ಮತ್ತು ಸ್ನೇಹಿತರಿಂದ ಅತ್ಯಾಚಾರಗಳು ನಡೆದಿರುತ್ತವೆ. ಬಹುತೇಕ ಪ್ರಕರಣಗಳು ಬೆಂಗಳೂರು ನಗರದಲ್ಲಿ ನಡೆದರೂ ಸಹ ಪ್ರಕರಣಗಳಲ್ಲಿನ ಆರೋಪಿಗಳು ತನಿಖೆಗಳಿಂದ ಖುಲಾಸೆ ಹೊಂದಿರುವುದು ಕಂಡುಬರುತ್ತದೆ. ಬೆರಳಣಿಕೆಯಷ್ಟೇ ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ.

ಒಟ್ಟಾರೆಯಾಗಿ ಎಷ್ಟೇ ಕಾನೂನುಗಳು ಪ್ರಬಲವಾಗಿದ್ದರೂ ನಮ್ಮ ಪುರುಷ ಪ್ರಧಾನ ವ್ಯವಸ್ಥೆ, ಅಧಿಕಾರಿ ಶಾಹಿ ವ್ಯವಸ್ಥೆಗಳು ಪರೋಕ್ಷವಾಗಿ ಪುರುಷರಿಗೆ ಸಹಾಯ ಮಾಡುವುದರಿಂದ ಇಂತಹ ಪ್ರಕರಣಗಳು ಮತ್ತೇ–ಮತ್ತೇ ನಗರದಲ್ಲಿ ಮರುಕಳಿಸುತ್ತಿರುವುದು ಕಂಡುಬರುತ್ತದೆ. ಇತರೆ ಪ್ರಕರಣಗಳಾದ ವರದಕ್ಷಿಣೆ ಸಾವು, ಮಾನಭಂಗ ಮತ್ತು ಗಂಡ ಹಾಗೂ ಸಂಬಂಧಿಕರಿಂದ ಕಿರುಕುಳ, ಲೈಂಗಿಕ ದೌರ್ಜನ್ಯ ಅಪಹರಣ ಮತ್ತು ವ್ಯವಹರಣ ಈ ರೀತಿಯ ಪ್ರಕರಣಗಳು ಸಹ ವರ್ಷದಿಂದ ವರ್ಷಕ್ಕೆ ಏರಿಕೆ ಪ್ರಮಾಣದಲ್ಲಿ ಸಾಗುತ್ತಿರುವುದು ಬೆಂಗಳೂರು ನಗರ ಸೇರಿದಂತೆ ರಾಜ್ಯದೆಲೆಡೆಡ ಕಂಡುಬಂದಿದೆ. ಒಟ್ಟಾರೆ ಮೇಲಿನ ಎಲ್ಲಾ ಪ್ರಕರಣಗಳು ಸಹ ರಾಜ್ಯದ ಎಲ್ಲಾ ಘಟಕಗಳಿಗಿಂತ ಬೆಂಗಳೂರು ಮಹಾನಗರದಲ್ಲಿ ಅಧಿಕವಾಗಿ ಸಂಭವಿಸುತ್ತಿರುವುದು ಕಂಡುಬಂದಿದೆ. ನಮ್ಮ ಸಮಾಜದಲ್ಲಿ ಕಾನೂನುಗಳು ಎಷ್ಟೇ ಪ್ರಬಲವಾಗಿದ್ದರೂ ಸಹ ಉಗ್ರ ಶಿಕ್ಷೆ, ಮರಣದಂಡನೆ, ಜೀವಾವಧಿ ಜೈಲು ಶಿಕ್ಷೆ, ಗೂಂಡಾ ಕಾಯ್ದೆ, ಪೋಕ್ಸೋ ಕಾಯ್ದೆ ಇತರೆ ಕಾನೂನು ಮತ್ತು

ಶಿಕ್ಷೆಗಳು ಇದ್ದರೂ ಸಹ ಬೆಂಗಳೂರು ಮಹಾನಗರದಲ್ಲಿ ಅಪರಾಧಗಳು ಎಗ್ಗಿಲ್ಲದೆ ನಡೆಯುತ್ತಿರುವುದಕ್ಕೆ ಕಾರಣ ನಮ್ಮ ಸಮಾಜದಲ್ಲಿ ಕಾನೂನುಗಳಿದ್ದರೂ ಸಹ ಅವು ದೌರ್ಜನ್ಯಕ್ಕೊಳಗಾದ ಸಮಯದಲ್ಲಿ ಮಹಿಳೆಯರ ನೆರವಿಗೆ ಬರುತ್ತಿಲ್ಲವೆಂದು ಹಾಗೂ ತನಿಖೆಯ ವಿಧಾನಗಳಿಂದ ಮಹಿಳೆಗೆ ಮಾನಸಿಕ ಹಿಂಸೆ ಆಗುತ್ತಿವೆ. ಕಾನೂನುಗಳನ್ನು ಜಾರಿಗೊಳಿಸಲು ಸಮಾಜದಲ್ಲಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಇರುವುದರಿಂದ ಮಹಿಳೆಯು ಪುರುಷ ಪ್ರಧಾನ ಸಮಾಜದಲ್ಲಿ ಅದರಲ್ಲೂ, ಆಡಳಿತ ವರ್ಗವೂ ಬಹುತೇಕವಾಗಿ ಪುರುಷರೇ ಇರುವುದರಿಂದ ಕಾನೂನನ್ನು ರೂಪಿಸುವವರು ಕೂಡಾ ಪುರುಷರೇ ಆಗಿರುವುದರಿಂದ ಪುರುಷರನ್ನು ರಕ್ಷಿಸುವ ಹುನ್ನಾರವೂ ನಮ್ಮ ಸಮಾಜದಲ್ಲಿ ಬೇರುಬಿಟ್ಟಿರುವುದು ಕಂಡುಬಂದಿದೆ. ಹೀಗೆ ಬೆಂಗಳೂರು ಮಹಾನಗರ ಮತ್ತು ಕರ್ನಾಟಕ ರಾಜ್ಯದ ಮಹಿಳಾ ದೌರ್ಜನ್ಯಗಳ ಪ್ರಕರಣಗಳನ್ನು ಅಭ್ಯಸಿಸಿದಾಗ ದೊರೆತ ಮಾಹಿತಿಗಳಾಗಿವೆ.

------******------

ಅಧ್ಯಾಯ ೬

ಆಯ್ದ ಪ್ರಕರಣಗಳ ಅಧ್ಯಯನ

ಅಧ್ಯಾಯ-೬

ಆಯ್ದ ಪ್ರಕರಣಗಳ ಅಧ್ಯಯನ

ನಾನು ಬೆಂಗಳೂರು ನಗರದ ಪೋಲೀಸ್ ಠಾಣೆಗಳಲ್ಲಿ ೨೦೦೫ ರಿಂದ ೨೦೧೧ರ ವರೆಗಿನ ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಅಧ್ಯಯನ ಮಾಡಿ ಕೆಲವು ವಿಶೇಷ ಪ್ರಕರಣಗಳನ್ನು ಗುರ್ತಿಸಿ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಪ್ರಕರಣ ಅಧ್ಯಯನ ಮಾಡಿರುತ್ತೇನೆ. ಹಾಗೆಯೇ ಪ್ರತಿ ಕೇಸಿಗೆ ಸಂಬಂಧಿಸಿದಂತೆ ಐದಾರು ನಿರೂಪಣೆಗಳನ್ನು ಮಾಡಿ ಕೊನೆಯಲ್ಲಿ ಎಲ್ಲಾ ನಿರೂಪಣೆಗಳ ವಿಶ್ಲೇಷಣೆ ಮಾಡಿರುತ್ತೇನೆ. ಪ್ರತಿ ನಿರೂಪಣೆಗೆ ವಿಶ್ಲೇಷಣೆಯನ್ನು ಏಕೆ ಮಾಡಿಲ್ಲವೆಂದರೆ ಪುನಾರಾವರ್ತನೆಯನ್ನು ತಪ್ಪಿಸುವ ಕಾರಣಕ್ಕಾಗಿ ಈ ರೀತಿ ಮಾಡಿರುತ್ತೇನೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ಹೆಸರನ್ನು ಬದಲಾಯಿಸಿ ಬರೆಯಲಾಗಿದೆ.

೧.ಅತ್ಯಾಚಾರ ಪ್ರಕರಣಗಳು.

ಅತ್ಯಾಚಾರ ಪ್ರಕರಣ-೧

ಹೆಸರು: ವನಿತ,
ವಯಸ್ಸು: ೨೧,
ಜಾತಿ: ಆದಿಕರ್ನಾಟಕ
ಶಿಕ್ಷಣ: ಬಿ.ಎ.
ಉದ್ಯೋಗ: ವಿದ್ಯಾಭ್ಯಾಸ.

ನಿರೂಪಣೆ: ನಾನು ನಮ್ಮ ತಂದೆ-ತಾಯಿಯರೊಂದಿಗೆ ಕಮ್ಮನಹಳ್ಳಿಯಲ್ಲಿ ವಾಸವಾಗಿದ್ದೇವೆ. ನಮ್ಮ ತಂದೆಯವರು ಖಾಸಗಿ ಕಂಪನಿಯಲ್ಲಿ ಕೆಲಸಮಾಡಿ ನಮ್ಮನ್ನು ಸಾಕುತ್ತಿದ್ದಾರೆ. ನಾನು ಬಿ.ಎ. ಓದುತ್ತಿದ್ದಾಗ ನಮ್ಮ ಮನೆಯ ಪಕ್ಕದ ಹುಡುಗ ಹರೀಶ ಎಂಬುವನು ನನಗೆ ಪರಿಚಯವಾಗಿದ್ದು, ಕೆಲ ದಿನಗಳ ನಂತರ ಸ್ನೇಹಿತರಾಗಿದ್ದೆವು. ಪರಿಚಯವು ಪ್ರೀತಿಯಾಗಿ ಇಬ್ಬರು ಒಬ್ಬರನೊಬ್ಬರು ಪ್ರೀತಿಸುತ್ತಿದ್ದೇವು. ನಂತರ ಮದುವೆಯಾಗುವುದಾಗಿ ತನ್ನಲ್ಲಿ ಕೇಳಿದಾಗ ನಾನು ನಮ್ಮ ತಂದೆ-ತಾಯಿಗೆ ಹೆದರಿ ನಾನು ಮದುವೆಗೆ ನಿರಾಕರಿಸಿದೆನು. ಸ್ವಲ್ಪ ದಿನಗಳ ನಂತರ ಅವನು ಬಂದು ನಾವು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬರುವುದಾಗಿ ಹೇಳಿ ಕರೆದುಕೊಂಡು ಹೋದನು. ದೇವಸ್ಥಾನದಲ್ಲಿ ಪೂಜೆ ಮುಗಿಸಿದ ನಂತರ ಆತನ ಸ್ನೇಹಿತರೊಂಧಿಗೆ ನನ್ನನ್ನು ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ನೀನು ನನ್ನನ್ನು ಮದುವೆಯಾಗದಿದ್ದರೆ ನಿನ್ನನ್ನು ಅತ್ಯಾಚಾರ ಮಾಡುವುದಾಗಿ ಬೆದರಿಸಿದನು. ಸ್ನೇಹಿತರ ಬೆಂಬಲದಿಂದ ನನ್ನ ಮೇಲೆ ಅತ್ಯಾಚಾರ ಮಾಡಿ ಕೆಟ್ಟ ಭಾಷೆಯ ಪದಗಳ ಬಳಕೆ ಮಾಡಿ ಹೊರಗೇನಾದರೂ ಈ ವಿಷಯವನ್ನು ಹೇಳಿದರೆ ನಿನ್ನನ್ನು ಸಾಯಿಸುತ್ತೇನೆಂದು ಬೆದರಿಕೆ ಹಾಕಿದನು. ನಂತರ ನಾನು ಮನೆಗೆ ಬಂದು ವಿಷಯ ತಿಳಿಸಿದ ನಂತರ ನಮ್ಮ ತಂದೆಯು ಅವರ ವಿರುದ್ದ ಪೋಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟರು. ಅವನ ವಿರುಧ್ಧ ತನಿಖೆಯು ನಡೆಯುತ್ತಿದೆಂದು ತಿಳಿಸಿದ್ದಾರೆ. ಆದರೆ ನಮಗೆ ತನಿಖೆಯ ಬಗ್ಗೆ ನಂಬಿಕೆ ಇರುವುದಿಲ್ಲ, ಕಾರಣ ಹುಡುಗನ

ಕಡೆಯವರು ಶ್ರೀಮಂತರಾಗಿರುವುದರಿಂದ ಪೊಲೀಸರ ಬೆಂಬಲ ಹುಡುಗನ ಕಡೆಯವರಿಗಿದೆ. ಕಾನೂನುಗಳ ತಿಳುವಳಿಕೆ ಇದ್ದರೂ ಸಹ ಅವುಗಳಿಂದ ನಮಗೆ ನ್ಯಾಯ ಸಿಗುತ್ತಿಲ್ಲವೆಂಬ ಕೊರಗಿದೆ ಎಂದು ನೊಂದ ಹುಡುಗಿ ಹೇಳಿಕೊಂಡಳು.

ಅತ್ಯಾಚಾರ ಪ್ರಕರಣ–೨

ಹೆಸರು: ಶಶಿಕಲಾ.
ವಯಸ್ಸು: ೨೮
ಜಾತಿ: ಗಂಗೆಮತ (ಬೆಸ್ತರು)
ಶಿಕ್ಷಣ– ೧೦ನೇ ತರಗತಿ
ಉದ್ಯೋಗ: ಖಾಸಗಿ ಕಾರ್ಖಾನೆಯಲ್ಲಿ ಕೆಲಸ.

ನಿರೂಪಣೆ: ನಾನು ಮತ್ತು ನನ್ನ ಸ್ನೇಹಿತೆಯರು ಸೇರಿಕೊಂಡು ರಂಗಪ್ಪ ಗಾರ್ಡನ್‌ನಲ್ಲಿ ಮನೆಯನ್ನು ಮಾಡಿಕೊಂಡು ವಾಸವಾಗಿದ್ದೆವು. ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿರುವಾಗ ನಮ್ಮ ಫ್ಯಾಕ್ಟರಿಯಲ್ಲಿ ಹುಡುಗರು ಸಹ ಕೆಲಸ ಮಾಡುತ್ತಿದ್ದರು. ನಮ್ಮ ಏರಿಯಾದಿಂದ ಹೋಗುವಾಗ ಅದೇ ಏರಿಯಾದಿಂದ ಒಬ್ಬ ಹುಡುಗನು ನಮ್ಮ ಫ್ಯಾಕ್ಟರಿಗೆ ಕೆಲಸಕ್ಕೆ ಬರುತ್ತಿದ್ದನು. ನಂತರ ಒಂದೇ ಏರಿಯಾವಾದ್ದರಿಂದ ನನಗೆ ಮತ್ತು ನನ್ನ ಸ್ನೇಹಿತೆಯರಿಗೆ ತುಂಬಾ ಪರಿಚಯವಾದನು. ನಂತರ ನನ್ನ ಫೋನ್ ನಂಬರನ್ನು ತೆಗೆದುಕೊಂಡು ನಾವು ಫೋನ್‌ಲ್ಲಿ ಮಾತಾಡುತ್ತಿದ್ದೆವು. ನನ್ನ ಹತ್ತಿರ ತುಂಬಾ ಸಲುಗೆಯಿಂದ ಇದ್ದನು. ಒಂದು ದಿನ ಭಾನುವಾರ ರಜಾದಿನದಂದು ನನ್ನ ಸ್ನೇಹಿತೆಯರು ಊರಿಗೆ ಹೋಗಿದ್ದರು. ಆ ಸಮಯದಲ್ಲಿ ನನಗೆ ಫೋನ್ ಮಾಡಿ ಮಾತಾಡುತ್ತಿದ್ದಾಗ ನನ್ನ ಸ್ನೇಹಿತೆಯರು ಊರಿಗೆ ಹೋಗಿರುವ ವಿಷಯವನ್ನು ತಿಳಿಸಿದೆನು. ನಂತರ ಆತನು ಮನೆಯ ಹತ್ತಿರ ಬಂದು ತುಂಬಾ ಸಲುಗೆಯಿಂದ ಮಾತಾಡುತ್ತಿದ್ದನು. ಆ ಸಮಯದಲ್ಲಿ ಅವನು ನನ್ನನ್ನು ಇಷ್ಟಪಡುತ್ತಿದ್ದೇನೆಂದು ಹೇಳಿದನು. ನಾನು ಯೋಚಿಸುತ್ತೇನೆಂದು ತಿಳಿಸಿದೆನು. ನನ್ನನ್ನು ಅವನು ಕೆಟ್ಟ ದೃಷ್ಟಿಯಿಂದ ನೋಡುತ್ತಿದುದು ತಿಳಿದಾಗ ನಾನು ಅವನನ್ನು ಬೈದೆನು. ನಂತರ ಅವನು ಅತ್ಯಾಚಾರ ಮಾಡಲು ಪ್ರಯತ್ನಿಸಿದನು. ನಾನು ಅವನಿಂದ ತಪ್ಪಿಸಿಕೊಂಡು ಹೋಗಿ ನನ್ನ ಸ್ನೇಹಿತೆಯರಿಗೆ ಫೋನ್ ಮೂಲಕ ವಿಷಯ ತಿಳಿಸಿದಾಗ ಪೋಲೀಸ್ ಠಾಣೆಗೆ ಹೋಗಿ ದೂರು ಕೊಡುವಂತೆ ತಿಳಿಸಿದರು. ಮರುದಿವಸ ಠಾಣೆಗೆ ಹೋಗಿ ದೂರನ್ನು ನೀಡಿ ನಂತರ ಆ ಏರಿಯಾ ಬಿಟ್ಟು ಬೇರೆ ಕಡೆ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ತನಿಖೆ ಯಾವ ಹಂತದಲ್ಲಿದೆಯೆಂದು ನನಗೆ ತಿಳಿದಿರುವುದಿಲ್ಲ ಮತ್ತು ಕಾನೂನುಗಳ ಬಗ್ಗೆಯೂ ಹೆಚ್ಚಿನ ತಿಳುವಳಿಕೆ ಇಲ್ಲವೆಂದು ಆ ಹುಡುಗಿ ತಿಳಿಸಿದಳು.

ಅತ್ಯಾಚಾರ ಪ್ರಕರಣ-೩

ಹೆಸರು- ಗೀತಾ,

ವಯಸ್ಸು - ೨೧

ಜಾತಿ - ಮಾದಿಗ

ಶಿಕ್ಷಣ- ಎಸ್.ಎಸ್.ಎಲ್.ಸಿ

ಉದ್ಯೋಗ-ಕೂಲಿ.

ನಿರೂಪಣೆ: ಕುಮಾರಿ ಗೀತಾ ಎಂಬ ಹುಡುಗಿಯು ಬೆಂಗಳೂರಿನಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿ ಸುಮಾರು ೫ ತಿಂಗಳಿಂದ ಮನೆಗೆಲಸ ಮಾಡಿಕೊಂಡಿರುತ್ತಾಳೆ. ೫ ತಿಂಗಳ ಹಿಂದೆ ಸದಾಶಿವನಗರದ ೧೩ನೇ ಕ್ರಾಸ್ ನಲ್ಲಿರುವ ಮನೆ ನಂ.೩೬೪ ದಾಮೋಧರ್ ಅವರ ಮನೆಯಲ್ಲಿ ಕೆಲಸಕ್ಕೆ ಸೇರಿದ್ದು, ಅಲ್ಲಿ ಸುಮಾರು ೩ ತಿಂಗಳ ಕಾಲ ಮನೆಗೆಲಸ ಮಾಡಿಕೊಂಡು ಮನೆಯಲ್ಲಿಯೇ ಇದ್ದೆನು ಎಂದು ತಿಳಿಸಿದಳು. ಆ ಸಮಯದಲ್ಲಿ ಸದರಿ ದಾಮೋಧರ್ ರವರ ಮನೆಯ ಮುಂದೆ ಇರುವ ಮುರುಳಿ ಆಂಡ್ ಕಂಪನಿ ಆಫೀಸ್‌ನಲ್ಲಿ ಆಫೀಸ್‌ಬಾಯ್ ಆಗಿ ಕೆಲಸ ಮಾಡಿಕೊಂಡಿರುವ ವೆಂಕಟೇಶ್ ಎಂಬುವವರು ಪರಿಚಯವಾಗಿ ನನ್ನೊಂದಿಗೆ ಸ್ನೇಹದಿಂದ ಮಾತಾಡುತ್ತಿದ್ದರು. ಒಮ್ಮೆ ವೆಂಕಟೇಶ್ ನನ್ನ ಬಳಿ ಬಂದು ನಾನು ಸಹ ಒಕ್ಕಲಿಗ/ಗೌಡ ಎಂದು ತನಗೆ ಮದುವೆ ಆಗಿರುವುದಿಲ್ಲ ಎಂದು ನಂಬಿಸಿ ತಾನು ನಿನ್ನನ್ನು ಪ್ರೀತಿಸುತ್ತಿರುವುದಾಗಿ ತಿಳಿಸಿದನು. ನನಗೂ ಸಹ ಆತನ ಮೇಲೆ ಇಷ್ಟ ಇದ್ದುದರಿಂದ ನಾನು ಸಹ ಪ್ರೀತಿಸುತ್ತಿರುವುದಾಗಿ ತಿಳಿಸಿದೆ. ಆಗಾಗ್ಗೆ ನಾವು ಭೇಟಿ ಮಾಡಿಕೊಳ್ಳುತ್ತಿದ್ದೆವು. ೨ ತಿಂಗಳ ನಂತರ ದಾಮೋದರರವರ ಮನೆಯಲ್ಲಿ ಕೆಲಸವನ್ನು ಬಿಟ್ಟು ಸದಾಶಿವನಗರದ ೬ಎ ಕ್ರಾಸ್ ನಲ್ಲಿರುವ ಆಶಿಯಾನ ಅಪಾರ್ಟ್‌ಮೆಂಟ್‌ನಲ್ಲಿ ಸಂಜಯ್ ಎಂಬುವರ ಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ಸಂಜಯ್‌ರವರು ನನಗೆ ತಿಂಗಳಿಗೆ ೩೦೦೦/- ಸಂಬಳ ನೀಡುತ್ತಿದ್ದರು. ನಾನು ಸಂಜಯ್‌ರವರ ಮನೆಗೆ ಬಂದ ಮೇಲೆ ವೆಂಕಟೇಶ್ ನನಗೆ ಒಂದು ಮೊಬೈಲ್ ಕೊಡಿಸಿದನು. ನಾವು ಫೋನ್‌ನಲ್ಲಿ ಮಾತನಾಡುತ್ತಾ ದಿನವನ್ನು ಕಳೆಯುತ್ತಿದ್ದೆವು. ಕೆಲವೊಮ್ಮೆ ವೆಂಕಟೇಶ್ ಮನೆಯ ಬಳಿ ಬಂದು ಭೇಟಿ ಮಾಡುತ್ತಿದ್ದನು. ೧ ದಿನ ವೆಂಕಟೇಶ್ ಮನೆಹತ್ತಿರ ಬಂದು ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ, ನಿನ್ನನ್ನು ಮದುವೆಯಾಗುವುದಾಗಿ ತಿಳಿಸಿ ನೀನು ನನ್ನ ಜೊತೆ ಬರದೆ ಇದ್ದರೆ ನಿನ್ನ ಹೆಸರನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿದನು. ಭಯಗೊಂಡು ನಾನು ಅವನೊಂದಿಗೆ ಹೋಗಲು ಒಪ್ಪಿದೆನು. ಅದೇ ದಿನ ನನ್ನನ್ನು ದೊಡ್ಡಬಳ್ಳಾಪುರಕ್ಕೆ ಕರೆದುಕೊಂಡು ಹೋಗಿ ಒಂದು ಬಾಡಿಗೆ ಮನೆಯಲ್ಲಿ ಇರಿಸಿದನು. ನಂತರ ನನ್ನೊಂದಿಗೆ ಪ್ರೀತಿಯಿಂದ ಮಾತನಾಡುತ್ತಾ ಮದುವೆಯಾಗುವುದಾಗಿ ನಂಬಿಸಿ ನನ್ನೊಂದಿಗೆ ದೈಹಿಕ ಸಂಪರ್ಕವನ್ನಿಟ್ಟುಕೊಂಡಿದ್ದ. ಒಂದು ವಾರದ ನಂತರ ಯಾರಿಗೂ ತಿಳಿಯದಂತೆ ನನ್ನನ್ನು ಮದುವೆಯಾದನು. ಒಂದೆರೆಡು ದಿನಗಳ ನಂತರ ನಾವು ವಾಸವಿದ್ದ ಮನೆಗೆ ಪೋಲೀಸರು ಬಂದು ಸದಾಶಿವನಗರ ಪೋಲೀಸ್ ಠಾಣೆಯಲ್ಲಿ ನಿಮ್ಮ ಮೇಲೆ ಪ್ರಕರಣ ದಾಖಲಾಗಿದೆ ಎಂದು

ತಿಳಿಸಿ ಕರೆದುಕೊಂಡು ಹೋದರು. ನಂತರ ಠಾಣೆಗೆ ಹೋದಾಗ ಈತ ವೆಂಕಟೇಶ ಎಂಬುವವನು ತಾನು ಒಕ್ಕಲಿಗ ಜಾತಿಯವನು ಎಂದು ನಂಬಿಸಿ ದೈಹಿಕ ಸಂಪರ್ಕ ಹೊಂದಿದ್ದಾನೆಂದು ತಿಳಿಸಿದೆನು. ಆದರೆ ವೆಂಕಟೇಶ ನಾನು ಒಕ್ಕಲಿಗ ಜಾತಿಯವನು ಎಂದು ಹೇಳಿಲ್ಲ, ನಾನು ಇವಳೊಂದಿಗೆ ಯಾವುದೇ ದೈಹಿಕ ಸಂಕರ್ಪ ಹೊಂದಿಲ್ಲ ಎಂದು ಹೇಳಿದನು. ನಂತರ ನಾನು ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆನು. ವೆಂಕಟೇಶ ಎಂಬುವನು ನನ್ನನ್ನು ನಂಬಿಸಿ ದೈಹಿಕ ಸಂಪರ್ಕ ಹೊಂದಿ ಮೋಸ ಮಾಡಿದನೆಂದು ತಿಳಿಸಿದಳು. ನಮ್ಮ ಪೋಷಕರು ಮೊದಲೆ ದೂರನ್ನು ನೀಡಿದ್ದರು. ಮತ್ತೆ ನಾನು ನಂಬಿಕೆ ದ್ರೋಹ ಮಾಡಿದ್ದನೆಂದು ಪ್ರಕರಣ ದಾಖಲಿಸಿದ್ದೇನೆ. ತನಿಖೆಯು ನಡೆಯುತ್ತಿದೆಯೆಂದು ಪೊಲೀಸರು ತಿಳಿಸಿದ್ದಾರೆ. ಮುಂದೆ ಏನಾಗುತ್ತದೆಂದು ನನಗೆ ತಿಳಿದಿರುವುದಿಲ್ಲವೆಂದು ಆ ಅಮಾಯಕ ಹುಡುಗಿ ತಿಳಿಸಿದ್ದಾಳೆ.

ಅತ್ಯಾಚಾರ ಪ್ರಕರಣ–೪

ಹೆಸರು– ಪಾರ್ವತಿ
ವಯಸ್ಸು – ೧೯
ಜಾತಿ– ಕುರುಬ
ಶಿಕ್ಷಣ– ಎಂಟನೇ ತರಗತಿ

ನಿರೂಪಣೆ: ನಾವು ಬಳ್ಳಾರಿ ರಸ್ತೆಯ ಸದಾಶಿವನಗರದಲ್ಲಿ ವಾಸವಾಗಿದ್ದು. ನಮ್ಮ ತಂದೆಗೆ ಇಬ್ಬರು ಹೆಂಡತಿಯರಿರುತ್ತಾರೆ. ನಾನು ತನ್ನ ಚಿಕ್ಕಮ್ಮನ ಹತ್ತಿರ ವಾಸವಾಗಿರುತ್ತೇನೆ. ತಂದೆಯು ನಾಗಸೇನಾ ವಿದ್ಯಾಲಯದಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದಾರೆ. ಒಮ್ಮೆ ನಮ್ಮ ಚಿಕ್ಕಮ್ಮ ಕೆಲಸಕ್ಕೆ ಹೋದಾಗ ನಮ್ಮ ತಂದೆಯು ನಮ್ಮ ಮನೆಯಲ್ಲಿ ಬಲಾತ್ಕಾರವಾಗಿ ಅತ್ಯಾಚಾರವೆಸಗಿ ಯಾರಿಗಾದರೂ ಹೇಳಿದರೆ ಚಾಕುವಿನಿಂದ ಸಾಯಿಸುವುದಾಗಿ ಬೆದರಿಸಿದರು. ನಂತರದ ದಿವಸಗಳಲ್ಲಿ ನನ್ನ ಆರೋಗ್ಯ ಹದಗೆಟ್ಟು ಹೊಟ್ಟೆಯ ಬಳಿ ನೋವು ಬಂದ ಕಾರಣ, ಈ ವಿಷಯವನ್ನು ನಮ್ಮ ಚಿಕ್ಕಮ್ಮ ಕೆಲಸ ಮಾಡುವ ಸ್ಥಳಕ್ಕೆ ಹೋಗಿ ವಿವರವಾಗಿ ತಿಳಿಸಿದೆನು. ನಂತರ ನಮ್ಮ ಚಿಕ್ಕಮ್ಮನು ಅಕ್ಕ ಪಕ್ಕದವರ ಸಹಾಯ ಪಡೆದು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ನಂತರ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿ ಬರುವದರೊಳಗೆ ತಂದೆಯು ನಾಪತ್ತೆಯಾಗಿದ್ದರು. ಇಂದು ಸಹ ನಮ್ಮ ತಂದೆಯು ಮನಗೆ ಬಂದಿರುವುದಿಲ್ಲ. ಈಗಲೂ ಸಹ ನಮ್ಮ ಚಿಕ್ಕಮ್ಮ ಮನೆಗೆಲಸ ಮಾಡಿಕೊಂಡು ಸಾಕುತ್ತಿರುವುದಾಗಿ ತಿಳಿಸಿದ್ದಾರೆ. ತನಿಖೆಯ ಬಗ್ಗೆ ಮತ್ತು ಕಾನೂನುಗಳ ಬಗ್ಗೆ ತಿಳುವಳಿಕೆ ಇಲ್ಲವೆಂದು ಹೇಳಿದ್ದಾಳೆ.

ಅತ್ಯಾಚಾರ ಪ್ರಕರಣ–೫

ಹೆಸರು– ನಿವೇದಿತಾ

ವಯಸ್ಸು –೨೨

ಜಾತಿ– ಬಣಜಿಗ

ಶಿಕ್ಷಣ– ಒಂಬತ್ತನೇ ತರಗತಿ

ನಿರೂಪಣೆ: ನಾವು ತಿಮ್ಮಯ್ಯ ರಸ್ತೆಯ ಶಿವಾಜಿನಗರದಲ್ಲಿ ವಾಸವಾಗಿದ್ದು, ನಮ್ಮ ತಂದೆಯು ಬೆಂಗಳೂರಿನಲ್ಲಿ ಒಂದು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ನಾನು ಶಾಲೆಯಲ್ಲಿ ಓದುತ್ತಿರುವಾಗ ಶಾಲೆಯ ಶಿಕ್ಷಕನು ಹೆಣ್ಣು ಮಕ್ಕಳ ಹತ್ತಿರ ಅಸಹ್ಯವಾಗಿ ನಡೆದುಕೊಳ್ಳುತ್ತಿದ್ದರು. ಹೆಣ್ಣುಮಕ್ಕಳಿಗೆ ಚಾಕ್ಲೇಟ್ ನೀಡಿ ಪುಸಲಾಯಿಸಿಕೊಂಡು ಚಿಕ್ಕ ಮಕ್ಕಳಿಗೆ ಅರ್ಥವಾಗದಂತೆ ದಿನಂಪ್ರತಿ ಅತ್ಯಾಚಾರವೆಸಗುತ್ತಿದ್ದರು. ಅದರಂತೆಯೇ ಒಂದು ದಿವಸ ನನ್ನನ್ನು ಕಬ್ಬನ್‌ಪಾರ್ಕ್‌ಗೆ ಕರೆದುಕೊಂಡುಹೋಗಿ ಬಲಾತ್ಕಾರ ಸಂಭೋಗ ಮಾಡಿದರು. ನಂತರ ಸಹಪಾಠಿಯ ಮೂಲಕ ಮಾತ್ರೆಯನ್ನು ಕೊಟ್ಟು ಇದನ್ನು ನೀನು ನುಂಗಬೇಕು ಇಲ್ಲವಾದರೆ ಆರೋಗ್ಯ ಕೆಡುತ್ತದೆ ಎಂದು ಎಚ್ಚರಿಕೆ ನೀಡಿದರು. ಅದರಂತೆ ನಾನು ಮಾತ್ರೆಯನ್ನು ನುಂಗಿದೆನು ಇದನ್ನೆಲ್ಲವನ್ನು ಶಾಲೆಯ ಡೈರಿಯಲ್ಲಿ ಬರೆದಿದ್ದೆನು, ನಂತರ ತಂದೆ ತಾಯಿಯರು ಮನೆಯಲ್ಲಿ ಡೈರಿಯನ್ನು ಓದಿದ ನಂತರ ನನ್ನನ್ನು ವಿಚಾರಿಸಿದಾಗ ನಡೆದ ಘಟನೆಯನ್ನು ವಿವರಿಸಿದೆನು. ನಂತರ ನಮ್ಮ ತಂದೆ ಶಿಕ್ಷಕನ ವಿರುದ್ಧ ದೂರನ್ನು ದಾಖಲಿಸಿರುತ್ತಾರೆಂದು ತಿಳಿಸಿರುತ್ತಾರೆ. ತನಿಖೆ ಮತ್ತು ಕಾನೂನಿನ ಬಗ್ಗೆ ಅರಿವಿರುವುದಿಲ್ಲವೆಂದು ತಿಳಿಸಿದ್ದಾಳೆ.

ಅತ್ಯಾಚಾರ ಪ್ರಕರಣ–೬

ಹೆಸರು– ಸರೋಜಮ್ಮ

ವಯಸ್ಸು –೩೦

ಜಾತಿ– ಗಾಣಿಗ

ಶಿಕ್ಷಣ– ಏಳನೇ ತರಗತಿ

ಉದ್ಯೋಗ– ಗಾರ್ಮೆಂಟ್ಸ್ ಕೆಲಸ.

ನಿರೂಪಣೆ: ನಾವು ಉದಯನಗರದಲ್ಲಿ ವಾಸವಾಗಿದ್ದು, ನಾನು ವೈಟ್‌ಫೀಲ್ಡ್‌ನಲ್ಲಿ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುವಾಗ ನಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ರಮೇಶನು ನಮ್ಮ ಊರಿನ ಕಡೆಯವನಾದ್ದರಿಂದ ಅವನು ನಾನು ಜೊತೆಯಲ್ಲೆ ಕೆಲಸಕ್ಕೆ ಹೋಗಿ ಬರುತ್ತಿದ್ದೆವು. ನಮ್ಮ ಮತ್ತು ಅವರ ಮನೆಯವರು ಸಹ ತುಂಬಾ ಪರಿಚಯದಿಂದ್ದೇವು. ಹಬ್ಬ–ಹರಿದಿನಗಳಲ್ಲಿ ನಾನು ಅವರ ಮನೆಗೆ ಹೋಗುತ್ತಿದ್ದೆ. ರಮೇಶನು ಒಂದು ದಿನ ಕೆಲಸದಿಂದ ಬರುತ್ತಿರುವಾಗ ಆತ ನನ್ನ ಮೇಲೆ ಕೆಟ್ಟದಾಗಿ ಮಾತಾಡಿ, ನನ್ನ ಮೇಲೆ ಹಲ್ಲೆ ಮಾಡಿ ಮಾನಭಂಗ ಮಾಡಲು ಪ್ರಯತ್ನಿಸಿದನು. ನಂತರ ನಾನು ಈತನ ವಿರುದ್ಧ ದೂರು ಕೊಡಲು

ವಿವೇಚಿಸಿ ನಮ್ಮ ಮನೆಯವರಿಗೆ ತಿಳಿಸಿದ ನಂತರ ಠಾಣೆಗೆ ಹೋಗಿ ದೂರನ್ನು ಕೊಟ್ಟೆನು ಎಂದು ತಿಳಿಸಿದಳು. ನಂತರ ಆ ಪ್ರಕರಣದ ಬಗ್ಗೆ ಠಾಣೆಯಲ್ಲಿ ವಿಚಾರಿಸಿದಾಗ ಆರೋಪಿಯನ್ನು ಜೈಲಿಗೆ ಕಳಿಸಿದ್ದೇವೆ. ಆತನಿಗೆ ಶಿಕ್ಷೆಯಾಗುತ್ತದೆಂದು ಹೇಳಿದ್ದಾರೆ. ನಂತರ ನಮಗೆ ಪೊಲೀಸರ ಬಗ್ಗೆ ನಂಬಿಕೆ ಬರಲಿಲ್ಲ. ಶಿಕ್ಷೆ ಆಯಿತೊ ಇಲ್ಲವೊ ಗೊತ್ತಿಲ್ಲದೆ ಪೋಲಿಸರು ಪ್ರಕರಣವನ್ನು ಮುಚ್ಚಿ ಹಾಕಿರಬಹುದೆಂದು ನಾನು ಅವರನ್ನು ಮತ್ತೆ ವಿಚಾರಿಸಲು ಹೋಗಲಿಲ್ಲವೆಂದು ತಿಳಿಸಿದ್ದಾಳೆ.

ವಿಶ್ಲೇಷಣೆ: ಒಟ್ಟಾರೆಯಾಗಿ ಈ ಅತ್ಯಾಚಾರ ಪ್ರಕರಣ ಅಧ್ಯಯನಗಳನ್ನು ಗಮನಿಸಿದಾಗ ನನಗೆ ತಿಳಿದು ಬಂದಿದ್ದೇನೆಂದರೆ ಅಮಾಯಕ, ದೀನ-ದಲಿತ ಹೆಣ್ಣು ಮಕ್ಕಳ ಮೇಲೆ ಪ್ರತಿನಿತ್ಯವು ಅತ್ಯಾಚಾರವಾಗುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಸಮಾಜದಲ್ಲಿ ಉಳ್ಳವರ, ಅಧಿಕಾರಸ್ಥರ ಮತ್ತು ಪ್ರಭಾವಿಗಳ ಪರವಾಗಿ ನಮ್ಮ ಪೊಲೀಸ್ ವ್ಯವಸ್ಥೆಯಿರುವುದು, ಈ ಮೇಲಿನ ಪ್ರಕರಣಗಳಲ್ಲಿ ಅತ್ಯಾಚಾರಕ್ಕೊಳಗಾದ ಮಹಿಳೆಯರ ನೋವನ್ನು ಗಮನಿಸಿದಾಗ ಅರಿವಿಗೆ ಬರುತ್ತದೆ. ಬಹುತೇಕವಾಗಿ ಅತ್ಯಾಚಾರ ಪ್ರಕರಣಗಳು ಹತ್ತಿರದ ಸಂಬಂಧಿಗಳಿಂದ, ಪರಿಚಯದವರಿಂದ ಮತ್ತು ಸ್ನೇಹಿತ ಹಾಗೂ ಪ್ರೇಮಿಗಳಿಂದ ಆಗಿರುವುದು ಕಂಡುಬರುತ್ತದೆ. ಅತ್ಯಾಚಾರಕ್ಕೆ ಕಾರಣೀಭೂತರಾದವರು ಒಂದಲ್ಲಾ ಒಂದು ರೀತಿ ಶ್ರೀಮಂತ ಮನೆತನದವರು ಅಥವಾ ಅಧಿಕಾರಸ್ಥರ ವರ್ಗದವರಾಗಿರುವುದು ಕಂಡುಬರುತ್ತದೆ. ಇದರಿಂದ ನಮ್ಮ ವ್ಯವಸ್ಥೆ ಮತ್ತು ಪುರುಷ ಪ್ರಧಾನ ಸಂಸ್ಕೃತಿಯು ಪುರುಷರನ್ನು ಒಂದಲ್ಲ ಒಂದು ರೀತಿಯಲ್ಲಿ ರಕ್ಷಿಸಲು ಪರೋಕ್ಷವಾಗಿ ಸಹಕಾರ ನೀಡುತ್ತಿರುವುದರಿಂದ ಬಹುತೇಕ ಆರೋಪಿಗಳು ತನಿಖೆಯ ಹಂತದಲ್ಲಿರುವಾಗ ಸಾಕ್ಷಿಗಳ ನಾಶ ಮಾಡಿ, ಪ್ರಭಾವದಿಂದ ಪ್ರಕರಣಗಳಿಂದ ಖುಲಾಸೆಗೊಂಡಿರುವುದು ಕಂಡುಬರುತ್ತದೆ. ಪೊಲೀಸ್ ಠಾಣೆಯ ಬಗ್ಗೆ ನೊಂದ ಮಹಿಳೆಯರಿಗೆ ಅಷ್ಟೇನೂ ಒಳ್ಳೆ ಅಭಿಪ್ರಾಯವಿಲ್ಲವೆಂದು ಮತ್ತು ಕಾನೂನುಗಳು ಮಹಿಳೆಯರ ಪರವಾಗಿ ಇದ್ದರೂ ಸಹ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ವಿಫಲವಾಗಿವೆ ಎಂದು ತಿಳಿದು ಬರುತ್ತದೆ.

೨.ಕಿಡ್ನಾಪ್ ಪ್ರಕರಣಗಳು:

ಕಿಡ್ನಾಪ್ ಪ್ರಕರಣ–೧

ಹೆಸರು– ರಾಧ

ವಯಸ್ಸು –೨೩

ಜಾತಿ– ನಾಯಕ

ಶಿಕ್ಷಣ– ೧೦ನೇ ತರಗತಿ

ಉದ್ಯೋಗ– ಟೈಲರಿಂಗ್.

ನಿರೂಪಣೆ: ನಾನು ತಂದೆ-ತಾಯಿಗಳ ಜೊತೆ ಮರಿಯಪ್ಪನಪಾಳ್ಯ ನಗರದಲ್ಲಿ ವಾಸವಾಗಿದ್ದು ಟೈಲರಿಂಗ್‌ನಲ್ಲಿ ತುಂಬಾ ಆಸಕ್ತಿ ಇದ್ದರಿಂದ ಟೈಲರಿಂಗ್ ಕೆಲಸ ಮಾಡುತ್ತಿದ್ದೆನು. ಒಂದು ದಿನ ನನ್ನ ಪೋನ್‌ಗೆ ಯಾವುದೊ ಒಂದು ಮಿಸ್ ಕಾಲ್ ಬಂದಾಗ ನಾನು ಕರೆಮಾಡಿದಾಗ ಆ ಕಡೆಯಿಂದ ಪುರುಷನ ಧ್ವನಿ ಕೇಳಿ ಬಂತು. ನಂತರ ನಾನು ನೀವು ಯಾರೆಂದು ಕೇಳಿದಾಗ ನನಗೆ ನೀವೆ ನಂಬರ್ ಕೊಟ್ಟಿದ್ದೀರಾ ಎಂದು ತಿಳಿಸಿದನು. ನಂತರ ಮತ್ತೆ ಮತೆ ಪೋನ್ ಮಾಡುತ್ತಿದ್ದನು. ನಂತರ ನಾನು ಸಹ ಮಾತನಾಡುತ್ತಿದ್ದೆನು. ಒಂದು ದಿನ ಭೇಟಿ ಮಾಡಿ ಯಾಕೆ ಫೋನ್ ಮಾಡ್ತಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವನು ಒಂದು ವಾರದ ನಂತರ ಕಾರಣ ಹೇಳುತ್ತೇನೆ ಎಂದನು. ನಂತರ ಫೋನ್‌ಲ್ಲಿ ಮಾತನಾಡುತ್ತಿರುವಾಗ ನನ್ನನ್ನ ಪ್ರೀತಿಸುವುದಾಗಿ ಹೇಳಿದರು ಅದಕ್ಕೆ ನಾನು ಒಪ್ಪಲಿಲ್ಲ. ಆ ಕಾರಣವಾಗಿ ಅವನು ನಾನು ಕೆಲಸಕ್ಕೆ ಹೋಗುವಾಗ ಅವನು ಬೇರೆಯವರ ಜೊತೆ ಸೇರಿ ಆಟೋದಲ್ಲಿ ಬಲವಂತವಾಗಿ ಕರೆದುಕೊಂಡು ಹೋದನು. ಹೇಗೋ ನಮ್ಮ ಮನೆಯವರಿಗೆ ವಿಷಯ ತಿಳಿದಾಗ ಮನೆಯವರು ಪೋಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ. ಪೋಲೀಸರು ನಮ್ಮನ್ನು ಹುಡುಕಲು ಪ್ರಯತ್ನಿಸುತ್ತಿರುವಾಗ ನನ್ನನ್ನು ಅವರು ಒಂದು ರೂಮಿನಲ್ಲಿ ಇರಿಸಿದ್ದರು. ನಂತರ ವಿಷಯ ತಿಳಿದ ಪೋಲೀಸರು ನಾವು ಇದ್ದ ಸ್ಥಳಕ್ಕೆ ಬಂದು ನಮ್ಮನ್ನು ಕರೆದುಕೊಂಡು ಬಂದು ಅವರ ವಿರುದ್ಧ ಕಾನೂನನ್ನು ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಆದರೆ ನಮಗೆ ಯಾವ ರೀತಿಯ ಕಾನುನೂ ಕ್ರಮಗಳನ್ನು ತೆಗೆದುಕೊಂಡರೆಂಬುದು ನಮಗೆ ಗೊತ್ತಿಲ್ಲ. ಕಾರಣ ಕಾನೂನುಗಳ ಬಗ್ಗೆ ನಮಗೆ ಅರಿವಿಲ್ಲವೆಂದು ತಿಳಿಸಿದ್ದಾಳೆ.

ಕಿಡ್ನಾಪ್ ಪ್ರಕರಣ-೨

ಹೆಸರು-ರಜಿಯಾ
ವಯಸ್ಸು -೨೫
ಜಾತಿ- ಮುಸ್ಲಿಂ
ಶಿಕ್ಷಣ- ೮ನೇ ತರಗತಿ
ಉದ್ಯೋಗ- ಗೃಹಿಣಿ.

ನಿರೂಪಣೆ: ನಾವು ಬೆಂಗಳೂರಿನ ಜೈ ಜವಾನ್ ನಗರದಲ್ಲಿ ವಾಸವಾಗಿದ್ದು, ನಮ್ಮ ತಂದೆಯು ಗ್ಯಾರೇಜ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಚೆನ್ನಾಗಿ ಸಂಪಾದನೆಯಾಗುತ್ತಿತು. ಆದ್ದರಿಂದ ನಮ್ಮ ತಂದೆಯ ವಿರುದ್ಧ ಅನೇಕರಿಗೆ ಹೇಗಾದರೂ ಮಾಡಿ ಸಂಕಷ್ಟದಲ್ಲಿ ಸಿಲುಕಿಸಬೇಕೆಂದು ತೀರ್ಮಾನಿಸಿ ಹೊಂಚು ಹಾಕುತ್ತಿದ್ದ ಸಮಯದಲ್ಲಿ ಅವರ ಕೆಟ್ಟ ದೃಷ್ಟಿ ನನ್ನ ಮೇಲೆ ಬಿದ್ದಿತು. ನಾನು ಒಂದು ದಿನ ಅಂಗಡಿಗೆ ಹೋಗುವಾಗ ೪ ಜನ ಬಂದು ನನ್ನನ್ನು ಹೊಮಿನಿ ಕಾರಿನಲ್ಲಿ ಬಲವಂತವಾಗಿ ಕರೆದುಕೊಂಡು ಹೋದರು. ನಂತರ ಒಂದು ಮನೆಯಲ್ಲಿ ಕೂರಿಸಿ ನೀನು ನಿಮ್ಮ ತಂದೆಯಿಂದ ೫ ಲಕ್ಷ ಹಣ ಕೊಡಿಸಬೇಕೆಂದು ಕೇಳಿದರು. ನಂತರ ನನ್ನನ್ನು ಬಿಟ್ಟುಬಿಡಿ, ನಮ್ಮ ತಂದೆಯ ಹತ್ತಿರ ಹಣ ಕೊಡುವುದಾಗಿ ತಿಳಿಸಿದಾಗ ಅವರು ಅದಕ್ಕೆ

ಒಪ್ಪಲಿಲ್ಲ. ಅವರು ನಮ್ಮ ತಂದೆಗೆ ಪೋನ್ ಮಾಡಿ ಹಣ ನೀಡುವಂತೆ ಒತ್ತಾಯಿಸುತ್ತಿದ್ದರು. ಆದರೆ ನಮ್ಮ ತಂದೆಯು ಪೋಲೀಸರ ನೆರವಿನಿಂದ ಹಣವನ್ನು ನೀಡುವುದಾಗಿ ತಿಳಿಸಿ ನಂತರ ಫೋನ್ ಮೂಲಕ ಮಾತನಾಡುತ್ತಾ ಪೋಲೀಸಿನವರು ಅವರ ಟವರ್ ಲೋಕೇಷನ್ ಆಧಾರದ ಮೇಲೆ ನಾವು ಇದ್ದ ಬಿಲ್ಡಿಂಗ್‌ಗೆ ಬಂದು ಅವರು ನಮ್ಮನ್ನು ಕರೆದುಕೊಂಡು ಹೋಗಿ ನನ್ನನ್ನು ನನ್ನ ತಂದೆಯ ಜೊತೆ ಕಳುಹಿಸಿದರು. ಅವರು ಅಪಹರಣ ಪ್ರಕರಣದ ದೂರನ್ನು ದಾಖಲಿಸುವುದಾಗಿ ತಿಳಿಸಿ ಆರೋಪಿಗಳನ್ನು ಜೈಲಿಗೆ ಕಳುಹಿಸುವುದಾಗಿ ತಿಳಿಸಿದರು. ಆದರೆ ಆ ಪ್ರಕರಣದ ಬಗ್ಗೆ ನಮಗೆ ಏನು ಮಾಹಿತಿಯನ್ನು ತಿಳಿಸಿರುವುದಿಲ್ಲ. ಕಾರಣ ನಾವು ಪೊಲೀಸ್ ಠಾಣೆಗೆ ಹೋಗಲು ಭಯ ಮತ್ತು ಕಾನೂನಿನ ಅರಿವು ನಮಗೆ ಇರುವುದಿಲ್ಲ ಎಂದು ತಿಳಿಸಿದ್ದಾಳೆ.

ಕಿಡ್ನಾಪ್ ಪ್ರಕರಣ–೩

ಹೆಸರು–ಮುಬಿನಾ

ವಯಸ್ಸು –೩೦
ಜಾತಿ– ಮುಸ್ಲಿಂ
ಶಿಕ್ಷಣ– ೯ನೇ ತರಗತಿ
ಉದ್ಯೋಗ– ಗಾರ್ಮೆಂಟ್ಸ್ ಕೆಲಸ.

ನಿರೂಪಣೆ: ನಾನು ಹಾಗೂ ನನ್ನ ಸಹೋದರಿಯರು ತಾಯಿಯ ಜೊತೆ ಟಿನ್‌ಫ್ಯಾಕ್ಟರಿಯಲ್ಲಿ ವಾಸವಾಗಿರುತ್ತೇವೆ. ಕೆಲಸವನ್ನು ಹುಡುಕಿಕೊಂಡು ಬೆಂಗಳೂರಿಗೆ ಸಂಬಂಧಿಕರಾದ ಸುಲ್ತಾನ್ ರವರ ಮನೆಗೆ ಹೋಗಿದ್ದೆವು. ನನ್ನ ಜೊತೆಯಲ್ಲಿ ನನ್ನ ಸ್ನೇಹಿತರಾದ ಜೋರಿನ್ ಮತ್ತು ದೀಪಾರವರೂ ಸಹ ಕೆಲಸ ಹುಡುಕಿಕೊಂಡು ಬೆಂಗಳೂರಿನ ಸಲ್ಮಾನ್‌ರವರ ಮನೆಗೆ ಬಂದಿರುತ್ತಾರೆ. ಇವರು ಕೆ.ಆರ್.ಪುರಂ, ಟಿನ್‌ಫ್ಯಾಕ್ಟರಿ ಹತ್ತಿರ ವಾಸವಾಗಿರುತ್ತಾರೆ. ಒಂದು ದಿವಸ ಸಲ್ಮಾನ್‌ರವರು ನನ್ನ ಜೋರಿನ್ ಮತ್ತು ದೀಪಾ ಮೂವರನ್ನು ಷಾಹಬುದ್ದೀನ್‌ನನ ಜೊತೆ ಮಾರುತಿ ಕಾರ್‌ನಲ್ಲಿ ಬೆಂಗಳೂರಿನ ಟೌನ್‌ಹಾಲ್ ಹತ್ತಿರ ಹೋಗಿ ಬರಲು ಕಳುಹಿಸಿದರು. ಕಾರನ್ನು ಟಿಪ್ಪು ಎಂಬ ಹುಡುಗ ಹೋಡಿಸುತ್ತಿದ್ದನು. ರಾತ್ರಿ ೧೦ ಘಂಟೆಯಲ್ಲಿ ಬರುತ್ತಿರುವಾಗ ಟೌನ್ ಹಾಲ್ ಹತ್ತಿರ ಬಂದಾಗ ಐದು ಜನ ಹುಡುಗರಿದ್ದು ಅವರು ನಮ್ಮ ಕಾರಿನ ಹತ್ತಿರ ಬಂದು ಷಹಾಬುದ್ದೀನ್‌ನನ್ನು ಕಾರಿನಿಂದ ಹೊರಗೆ ಎಳೆದುಕೊಂಡು ಹೋದರು. ಆಗ ಕಾರಿನ ಡ್ರೈವರ್ ಹೆದರಿ ಕಾರನ್ನು ಬಿಟ್ಟು ಹೋದ ನಂತರ ಹನೀಸ್ ಮತ್ತು ನಾಸೀರ್ ಎಂಬುವರು ನಮ್ಮ ಕಾರಿನಲ್ಲಿ ಕುಳಿತುಕೊಂಡು ಜೋರಿನ್ ಮತ್ತು ದೀಪಾ ಷಹಾಬುದ್ದೀನ್‌ನನ್ನು ಮಾರುತಿ ಕಾರಿನಲ್ಲಿ ತುಮಕೂರು ಕಡೆ ಅಪಹರಿಸಿಕೊಂಡು ಹೋದರು. ಉಳಿದ ಮೂರು ಹುಡುಗರು ನಮ್ಮ ಕಾರನ್ನು ಹಿಂಬಾಲಿಸಿಕೊಂಡು ಬರುತ್ತಿದ್ದರು. ತುಮಕೂರು ರಸ್ತೆಯಲಿ ಹೊಗುತ್ತಿರುವಾಗ ಒಂಬು ಟಾಟ ಸುಮೋ ಕಂಡು ಬಂದಿತು. ಅಲ್ಲಿಗೆ ಹೋದಾಗ ನಮ್ಮ ಕಾರನ್ನು ನಿಲ್ಲಿಸಿದರು. ಟಾಟಾ ಸುಮೋದಲ್ಲಿದ್ದ ಇಬ್ಬರು ಹುಡುಗರ ಪೈಕಿ ಒಬ್ಬನ ಹೆಸರು ಖಾಲೂ ಎಂದು

ಕರೆಯುತ್ತಿದ್ದರು. ನಂತರ ಈ ಖಾಲೂ ಎಂಬುವನು ನಮ್ಮ ನಾಲ್ಕು ಮಂದಿಯನ್ನು ನೆಲಮಂಗಲದ ಒಂದು ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋದನು. ಖಾಲು ಎಂಬುವನು ಮೊಬೈಲ್ ಪೋನ್‌ನಲ್ಲಿ ಸಲ್ಮಾನ್‌ಗೆ ಪೋನ್ ಮಾಡಿ ೫೦,೦೦೦/– ಹಣವನ್ನು ತಂದುಕೊಟ್ಟರೆ ಒಟ್ಟು ನಾಲ್ಕು ಜನವನ್ನು ಬಿಡುವುದು ಹೇಳಿದನು. ಇಲ್ಲದಿದ್ರೆ ಬಿಡುವುದಿಲ್ಲ ಎಂದು ಹೇಳಿದನು. ಆ ರಾತ್ರಿ ಟಾಟಾಸುಮೋದಲ್ಲಿ ಕಾಲ ಕಳೆದವು. ಮರುದಿನ ನಮ್ಮನ್ನು ರಿಂಗ್ ರೋಡ್‌ಬಳಿ ಕರೆದುಕೊಂಡು ಬಂದು ಕಾರಿನಿಂದ ಇಳಿಸಿ ಅನಿಸ್, ಅಸ್ಲಾಮ್, ಅಕ್ಮಲ್, ಸೇರಿಕೊಂಡು ಕೆಂಗೇರಿ ಉಪನಗರದಲ್ಲಿರುವ ಫರೀದ್ ಎಂಬುವರ ಮನೆಗೆ ಕರೆದುಕೊಂಡು ಬಂದರು. ಷಾಹಬುದ್ದೀನ್‌ರವರನ್ನು ಅಲ್ಲಿಂದ ಕಾರಿನಲ್ಲಿ ಕರೆದುಕೊಂಡು ಹೋದರು. ಇಲ್ಲಿಯವರೆಗೆ ಎಲ್ಲಿಗೆ ಅಂತ ತಿಳಿಯಲಿಲ್ಲ. ನಮ್ಮನ್ನು ಫರೀದ್‌ರವರ ಮನೆಯಲ್ಲಿ ಕೂಡಿಹಾಕಿಕೊಂಡಿದ್ದರು. ನಮ್ಮನ್ನು ಈ ಮೂವರು ಹುಡುಗರು ಕಾಯುತ್ತಿದ್ದರು. ನಂತರ ಮಧ್ಯಾಹ್ನ ೪ ಘಂಟೆಗೆ ಪೋಲೀಸರು ಬಂದು ಬಂಧನದಿಂದ ಬಿಡಿಸಿ ಕರೆದುಕೊಂಡು ಹೊದರು. ನಂತರ ಖಾಲು ಮತ್ತು ಆತನ ಸ್ನೇಹಿತರು ಸೇರಿಕೊಂಡು ಸಲ್ಮಾನ್‌ರವರ ಮನೆಗೆ ಬಂದಿದ್ದ ನಾನು ಮತ್ತು ನನ್ನ ಸ್ನೇಹಿತೆಯರನ್ನು ಅಪಹರಿಸಿಕೊಂಡು ಹೋಗಿ ಹಣ ತಂದುಕೊಡುವಂತೆ ಹೇಳಿ ಅಕ್ರಮ ಬಂಧನದಲಿಟ್ಟಿದ್ದರು. ಅಸ್ಲಾಮ್, ಅನೀಸ್, ನಾಸೀರ್, ಅಕ್ಮಲ್ ಇನ್ನೊಬ್ಬ ಅಪರಿಚಿತ ವ್ಯಕ್ತಿ ವಿರುದ್ಧ ದೂರು ದಾಖಲಿಸಿ ಷಹಬುದ್ದೀನ್‌ರವರನ್ನು ಬಿಡಿಸಿಕೊಡಬೇಕೆಂದು ಠಾಣೆಯಲ್ಲಿ ದೂರು ನೀಡಿದೆವು. ಅವರ ಬಗ್ಗೆ ಇಲ್ಲಿಯವರೆಗೂ ನಮಗೆ ಯಾವುದೇ ವಿಷಯ ತಿಳಿದಿರುವುದಿಲ್ಲ ಪೊಲೀಸರು ತಿಳಿಸಿದ್ದಾರೆ.

ಕಿಡ್ನಾಪ್ ಪ್ರಕರಣ–೪

ಹೆಸರು–ಮುಬೀನ ಬಾನು
ವಯಸ್ಸು –೨೨
ಜಾತಿ– ಮುಸ್ಲಿಂ
ಶಿಕ್ಷಣ– ೭ನೇ ತರಗತಿ
ಉದ್ಯೋಗ– ಖಾಸಗೀ ಕಾರ್ಖಾನೆಯಲ್ಲಿ ಕೆಲಸ.

ನಿರೂಪಣೆ: ನಾನು ಬೆಂಗಳೂರಿನ ಬಾಣಸವಾಡಿಯ ಹಳೆ ಚರ್ಚ್ ಬೀದಿಯಲ್ಲಿ ವಾಸವಾಗಿದ್ದು, ಇಂಡಿಯನ್ ಆಯಿಲ್ ಹತ್ತಿರವಿರುವ ಕುಮಾರ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು. ದಿನನಿತ್ಯ ಕೆಲಸಕ್ಕೆ ಹೋಗುತ್ತಿರುವಾಗ ಪ್ರತಿನಿತ್ಯವು ನನ್ನನ್ನು ಪ್ರೀತಿಸುತ್ತಿದ್ದ ಸಾಜಿದ್ ಮದುವೆಯಾಗಲು ಒತ್ತಾಯಿಸುತ್ತಿದ್ದನು. ನಂತರ ಒಂದು ದಿವಸ ಮನೆಯಿಂದ ಹೊರ ಬಂದಾಗ ನನ್ನನ್ನು ಮದುವೆಯಾಗು ಎಂದು ಕೇಳಿದನು. ನಾನು ಮದುವೆ ನಿರಾಕರಿಸಿದಕ್ಕೆ ತನ್ನ ಸ್ನೇಹಿತರ ಜೊತೆ ಬಂದು ನನ್ನನ್ನು ಆಟೋರಿಕ್ಷಾದಲ್ಲಿ ಕರೆದುಕೊಂಡು ಹೋಗಿ ಯಾವುದೋ ಒಂದು ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದುಕೊಂಡು ಹೋಗಿ ಆತ ಮತ್ತು ಆತನ ಸ್ನೇಹಿತರ ಜೊತೆಗೂಡಿ ಸಾಮೂಹಿಕ ಅತ್ಯಾಚಾರವೆಸಗಿ ಯಾರಿಗಾದರೂ ವಿಷಯ ತಿಳಿಸಿದರೆ ಕೊಲೆ ಮಾಡುವುದಾಗಿ

ಬೆದರಿಸಿದರು. ನಂತರ ಪೋಷಕರಿಗೆ ತಿಳಿಸಿದಾಗ ಅವರು ಪೋಲೀಸ್ ಠಾಣೆಗೆ ಹೋಗಿ ದೂರು ಪ್ರಕರಣವನ್ನು ದಾಖಲಿಸಿದರು. ಆದರೆ ಆ ದೂರು ಪ್ರಕರಣದ ಬಗ್ಗೆ ಪೊಲೀಸರ ನಿರ್ಲಕ್ಷ್ಯದಿಂದ ಇಲ್ಲಿವರೆಗೂ ಆರೋಪಿಗಳು ಪತ್ತೆಯಾಗಿಲ್ಲವೆಂದು ತಿಳಿದು, ಅಮಾಯಕರಿಗೆ ನ್ಯಾಯ ಸಿಗುವುದಿಲ್ಲವೆಂದು ತುಂಬಾ ನೋವಿನಿಂದ ವಿಷಯ ತಿಳಿಸಿದಳು

ಕಿಡ್ನಾಪ್ ಪ್ರಕರಣ–೫

ಹೆಸರು–ಲಕ್ಷ್ಮಿ
ವಯಸ್ಸು –೨೧
ಜಾತಿ– ಆದಿ ಕರ್ನಾಟಕ
ಶಿಕ್ಷಣ– ಪಿ.ಯು.ಸಿ
ಉದ್ಯೋಗ– ವಿದ್ಯಾಭ್ಯಾಸ.

ನಿರೂಪಣೆ: ನಮ್ಮ ಕುಟುಂಬವು ಬೆಂಗಳೂರಿನ ವಿನೋಬಾವ ನಗರದಲ್ಲಿ ವಾಸವಾಗಿದ್ದು, ನಾನು ಶಾಲೆಗೆ ಹೋಗುವಾಗ ಬಿ.ಎಂ.ಟಿ.ಸಿ. ಬಸ್‌ನಲ್ಲಿ ಮೇಕ್ರಿಸರ್ಕಲ್‌ನಲ್ಲಿ ಬಸ್ ಇಳಿದು, ಹಾರ್ಡ್‌ವೇರ್ ಟ್ರೈನಿಂಗ್ ಮಾಡುವ ಜಟ್‌ಕಿಂಗ್ ಕಛೇರಿಯ ಬಳಿ ಮತ್ತೊಂದು ಬಸ್‌ನಲ್ಲಿ ಇಳಿದು ರಸ್ತೆ ದಾಟುತ್ತಿದ್ದಾಗ ೯–೩೦ ಘಂಟೆಗೆ ನನ್ನ ತಂದೆಯ ಕಾರನ್ನೇ ಹೋಲುವ ಬಣ್ಣದ ಕಾರು ಬಂದಿತ್ತು. ಆ ಕಾರು ತಮ್ಮ ತಂದೆಯದೇ ಎಂದು ಭಾವಿಸಿ ಹತ್ತಿರ ಹೋದೆ ಆಗ ಆ ಕಾರಿನಲ್ಲಿ ಎಂಟು ಜನರಿದ್ದು ನನ್ನನ್ನು ಬಲವಂತವಾಗಿ ಕಾರಿನೊಳಗೆ ಕೂರಿಸಿಕೊಂಡು, ನನ್ನ ಬಾಯಿಗೆ ಬಟ್ಟೆ ತುರುಕಿ ನನ್ನ ತಂದೆಯವರ ಮೊಬೈಲ್ ನಂಬರ್ ಕೇಳಿದರು. ಅದಕ್ಕೆ ನಾನು ಗೊತ್ತಿಲ್ಲ ಎಂದು ತಿಳಿಸಿದೆನು. ಹಾಗ್ಯೆಯೇ ಹಿಂದೆ ಕುಳಿತಿದ್ದ ಒಬ್ಬ ಇವಳಿಗೆ ಟಾರ್ಚರ್ ಕೊಟ್ರೆ ಹೇಳುತ್ತಾಳೆ ಎಂದು ತಿಳಿಸಿದನು. ಆಗ ನನ್ನ ಪಕ್ಕದಲ್ಲಿದ್ದವನು ಎಡಗೈಗೆ ಬ್ಲೇಡಿನಿಂದ ಗೀಚಿ ಗಾಯ ಮಾಡಿದನು. ತನ್ನ ಬ್ಲೌಸ್ ಅನ್ನು ಹರಿದು ಹಾಕಿದರು. ಆ ಸಮಯದಲ್ಲಿ ನಿನಗೆ ಚೈನು ಬೇಕಾ ಬಾ ಇಂತಹ ೨೭ ಚೈನನ್ನು ಕೊಡಿಸುತ್ತೇನೆ ಎಂದು ಕಾರಲ್ಲಿದ್ದವನು ಹೇಳಿದನು. ಆತನ ಹೆಸರು ಶಿವ ಎಂದು ತಿಳಿಯಿತು. ಆ ನಂತರ ಯಾರಿಗೋ ಫೋನ್ ಮಾಡಿ ನೀವು ಹೇಳಿದ ಪ್ರಕಾರ ಕಿಡ್ನಾಪ್ ಮಾಡಿಕೊಂಡು ಬಂದಿದ್ದೇವೆ. ಅಡ್ವಾನ್ಸ್ ಕೊಟ್ಟಿದ್ದೀಯ ಪುಲ್ ಅಮೌಂಟ್ ಕೊಟ್ರೆನೆ ನಾನು ಕೊಡುವುದು ಎಂದು ಹೇಳಿದನು. ಕಾರಿನಲ್ಲಿ ಬಿಳಿ ಸೀರೆ, ಹೂವು, ಬಳೆ, ಸರ, ತಂದಿದ್ದು ಇದು ನಿನಗೆ ತಂದಿರುವುದು ಎಂದು ತೋರಿಸಿದರು. ನಂತರ ಅವರು ಏನೋ ಮಾತನಾಡಿಕೊಳ್ಳುತ್ತಿದ್ದರು. ಕಾರು ಕೊಡಿಗೇಹಳ್ಳಿ ಸಿಗ್ನಲ್ ಬಳಿ ನಿಂತಾಗ ಅವರು ಫೋನ್‌ನಲ್ಲಿ ಮಾತನಾಡುತ್ತಿದ್ದನ್ನು ನೋಡಿ ಕಾರು ಬಾಗಿಲು ತೆಗೆದು ತಾನು ತಪ್ಪಿಸಿಕೊಂಡು ಓಡಿ ಬೇರೇ ಬಿ.ಎಂ.ಟಿ.ಸಿ. ಬಸ್ ಹತ್ತಿ ಮೆಜೆಸ್ಟಿಕ್‌ಗೆ ಬರುವಾಗ ಕಂಡಕ್ಟರ್‌ಗೆ ವಿಷಯ ತಿಳಿಸಿದಾಗ ಆತನೆ ಒಂದು ಪಾಸ್ ಮತ್ತು ೧೦/– ರೂ ಗಳನ್ನು ಕೊಟ್ಟರು. ನಾನು ಅವರ ಫೋನ್‌ನಲ್ಲಿ ತಂದೆಗೆ ಕಾಲ್ ಮಾಡಿದಾಗ ತಂದೆ ಫೋನ್‌ಗೆ ಸಿಗಲಿಲ್ಲ. ನಂತರ ತನ್ನ ಸ್ನೇಹಿತೆಗೆ ಫೋನ್

ಮಾಡಿ ಈ ವಿಷಯವನ್ನು ತಿಳಿಸಿ ತಂದೆಯವರಿಗೆ ತಿಳಿಸುವಂತೆ ತಿಳಿಸಿದೆನು. ಅಲ್ಲಿಂದ ನಾನು ನನ್ನ ಅಕ್ಕನ ಮನೆಗೆ ಹೋಗಿ ನಂತರ ನನ್ನ ತಂದೆಗೆ ವಿಷಯ ತಿಳಿಸಿದೆನು. ಅಲ್ಲಿಯೇ ಹತ್ತಿರವಿದ್ದ ನನ್ನ ತಂದೆ ಮತ್ತು ತಮ್ಮನು ಬಂದು ಕರೆದುಕೊಂಡು ಬಂದು ವಿಶ್ವನಾಥಪುರ ಪೋಲೀಸ್ ಠಾಣೆಗೆ ದೂರು ದಾಖಲು ಮಾಡಿದರು. ಕೆಲವು ದಿನಗಳ ನಂತರ ಈ ಕೃತ್ಯ ಎಸಗಿದವನು ತಮ್ಮ ಊರಿನವನಾದ ಮಂಜುನಾಥ್ ಎಂದು ತಿಳಿದು ಬಂದಿತು ಎಂದು ತಿಳಿಸಿದರು. ಆದರೆ ಆ ಮಂಜುನಾಥನು ಮುಂದೆ ಪೊಲೀಸ್ ಬಂಧಿಯಾದನೇ, ಇಲ್ಲವೇ ಎಂಬುದು ನಮಗೆ ತಿಳಿದಿರುವುದಿಲ್ಲ ಎಂದು ಈಕೆಯು ತಿಳಿಸಿದಳು.

ವಿಶ್ಲೇಷಣೆ: ಒಟ್ಟಾರೆಯಾಗಿ ಈ ಅಪಹರಣ ಪ್ರಕರಣ ಅಧ್ಯಯನಗಳನ್ನು ಗಮನಿಸಿದಾಗ ನನಗೆ ತೀಳಿದು ಬಂದಿದ್ದೇನೆಂದರೆ, ಅಪಹರಣ ಪ್ರಕರಣಗಳು ಲೈಂಗಿಕ ಅಗತ್ಯತೆ, ಆರ್ಥಿಕ ಉದ್ದೇಶ, ವೈರತ್ವದಿಂದ ಸಂಭವಿಸುವುದು ಕಂಡುಬರುತ್ತದೆ. ಈ ಪ್ರಕರಣಗಳಲ್ಲಿ ಬಹುತೇಕವಾಗಿ ಪ್ರೀತಿಯನ್ನು ನಿರಾಕರಿಸಿದಾಗ ತಮ್ಮ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಪ್ರೀತಿಸುತ್ತಿದ್ದ ಹುಡುಗನು ಅಪರಾಧ ಮಾಡುವುದು ಕಂಡು ಬಂದಿದೆ. ಈ ಪ್ರಕರಣಗಳಲ್ಲೂ ಸಹ ಬಹುತೇಕ ಆರೋಪಿಗಳು ತನಿಖೆಯಿಂದ ಖುಲಾಸೆಗೊಂಡಿರುವುದು ಕಂಡು ಬಂದಿದೆ. ಇಲ್ಲೂ ಸಹ ಪೊಲೀಸ ಇಲಾಖೆಯ ವೈಫಲ್ಯತೆ ಕಂಡುಬಂದಿದೆ.

೩. ವರದಕ್ಷಿಣೆ ಪ್ರಕರಣಗಳು

ವರದಕ್ಷಿಣೆ ಪ್ರಕರಣ–೧
ಹೆಸರು– ತಬಸ್ಸುಮ್
ವಯಸ್ಸು –೩೦
ಜಾತಿ– ಮುಸ್ಲಿಂ
ಶಿಕ್ಷಣ– ೧೦ನೇ ತರಗತಿ
ಕೆಲಸ–ಮನೆಗೆಲಸ.

ನಿರೂಪಣೆ: ನನ್ನ ತಂದೆ ತಾಯಿಗಳು ನನ್ನನ್ನು ಮುಸ್ಲಿಂ ಸಮುದಾಯದ ಪ್ರಕಾರ ಜಹೂರ್ ಅಹಮದ್ ರವರಿಗೆ ಮದುವೆ ಮಾಡಿಕೊಟ್ಟರು. ಮದುವೆ ಸಮಯದಲ್ಲಿ ನನ್ನ ತಂದೆ ತಾಯಿಯವರಿಗೆ ಒತ್ತಾಯ ಮಾಡಿ ವರನಿಗೆ ವಿದೇಶಿ ವಾಚ್, ಎರಡು ಜೊತೆ ಸೂಟ್ ಒಡವೆಗಳು, ಹತ್ತು ಉಂಗುರ, ಮಾಡಿಸಿ ಹಾಕುವಂತೆ ಮತ್ತು ಗೃಹ ಉಪಯೋಗಿ ವಸ್ತುಗಳಾದ ಮಂಚ, ಬೀರು, ಸ್ಟೀಲ್ ಪಾತ್ರೆಗಳನ್ನು ಸಹ ಪಡೆದುಕೊಂಡಿದ್ದರು. ನಾನು ನನ್ನ ಗಂಡ ಮದುವೆಯಾದ ನಂತರ ಶಿವಾಜಿ ನಗರದಲ್ಲಿ ವಾಸವಾಗಿದ್ದೇವು. ಅಲ್ಲಿಗೆ ನನ್ನ ಮೈದುನ ಅತ್ತೆ, ಮಾವಂದಿರು ಬಂದು ಹೋಗುತ್ತಿದ್ದರು. ನನ್ನ ಗಂಡ ಬೌರಿಂಗ್ ಆಸ್ಪತ್ರೆ ಹತ್ತಿರವಿರುವ ತಾಜ್ ಹೋಟಲ್‌ನಲ್ಲಿ ಕೆಲಸ ಮಾಡಿತ್ತಿದ್ದರು. ನಮಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ನನ್ನ ಗಂಡ ನನಗೆ ಮದುವೆಯೆ ಸಮಯದಲ್ಲಿ ಹೆಚ್ಚಿನ ವರದಕ್ಷಿಣೆ ಕೊಟ್ಟಿರುವುದಿಲ್ಲ, ನಾನು ಸ್ವಂತ ಬ್ಯುಸಿನೆಸ್

ಮಾಡಬೇಕು ಎಂದು ನಿಮ್ಮ ತವರು ಮನೆಯಿಂದ ಮನೆಯಿಂದ ವರದಕ್ಷಿಣೆ ತರುವಂತೆ ಕಿರುಕುಳ ನೀಡಲು ಆರಂಭಿಸಿದರು. ಮತ್ತೆ ನಮ್ಮ ಅತ್ತೆ ಮಾವರು ವರದಕ್ಷಿಣೆ ತರದಿದ್ದರೆ ಇವಳನ್ನು ಮನೆಯಿಂದ ಹೊರಹಾಕುವಂತೆ ಹೇಳಿದರು. ನಂತರ ಹಿರಿಯರು ನ್ಯಾಯ ಪಂಚಾಯಿತಿ ಮಾಡಿ ನನ್ನನ್ನು ಗಂಡನ ಮನೆಗೆ ಕಳುಹಿಸಿಕೊಟ್ಟರು. ನಂತರ ತನ್ನ ಹತ್ತಿರವಿದ್ದ ೯೦ ಗ್ರಾಂ ಒಡವೆಗಳನ್ನು ಮಾರಿಕೊಂಡರು. ನಂತರದಲ್ಲಿ ನನ್ನ ಮೈದುನನ ಮದುವೆಗಾಗಿ ಉಳಿದ ಆ ಒಡವೆಗಳನ್ನು ಕೊಡು ಎಂದು ನನ್ನ ಅತ್ತೆ ಮಾವ ನಾದನಿಯರು ಜಗಳ ತೆಗೆದು ನನ್ನ ಹೊಟ್ಟೆಯ ಮೇಲೆ ಹಾಗೂ ಬೆನ್ನಿನ ಮೇಲೆ ಪೊರಕೆಯಿಂದ ಹೊಡೆದರು. ನಂತರ ಇವಳನ್ನು ಬಿಟ್ಟೇದ್ದೀರ ಇವಳನ್ನು ಸಾಯಿಸಬೇಕಿತ್ತು ಎಂದು ನನ್ನ ಅತ್ತೆ ಮಾವ ನಾದನೀಯರು ಹೇಳಿದರು. ೪ ತಿಂಗಳು ಗರ್ಭಿಣಿಯಾದ ನನ್ನನ್ನು ಮನೆಯಿಂದ ಹೊರಗೆ ತಳ್ಳಿ ನನ್ನನ್ನು ಒಳಗೆ ಸೇರಿಸದೇ ಬಾಗಿಲು ಹಾಕಿಕೊಂಡರು. ನಂತರ ನನ್ನ ತಂದೆ ತಾಯಿಗಳು ಬಂದು ಮನೆಗೆ ಕರೆದುಕೊಂಡು ಹೋದರು. ನನ್ನನ್ನು ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸ್ಕ್ಯಾನಿಂಗ್ ಮಾಡಿದಾಗ ಹೊಟ್ಟೆಯಲ್ಲಿರುವ ಮಗು ತೀರಿಹೊಗಿರುವುದಾಗಿ ತಿಳಿಸಿರುತ್ತಾರೆ. ಈ ವಿಷಯವನ್ನು ಗಂಡನ ಮನೆಯವರಿಗೆ ತಿಳಿಸಿದಾಗ ನೀವೆ ಅಭಾಷನ್ ಮಾಡಿಸಿರುತ್ತೀರ ಎಂದು ಹೇಳಿ ಮಗುವನ್ನು ದಫನ್ ಮಾಡಲು ಸಹ ಬಿಟ್ಟಿರುವುದಿಲ್ಲ. ನನ್ನ ಗಂಡನ ಮನೆಯವರು ಗರ್ಭಿಣಿಯಾದ ನನ್ನ ಹೊಟ್ಟೆಗೆ ಪೆಟ್ಟಾಗಿದ್ದರಿಂದ ಮಗು ತೀರಿಹೋಗಿದೆ ಎಂದು ತಿಳಿದು ಅಂದಿನಿಂದ ನನ್ನ ಗಂಡನ ಮನೆಯವರು ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ. ನಂತರ ನನ್ನ ಗಂಡ ಮತ್ತು ಅತ್ತೆ–ಮಾವರ ವಿರುದ್ಧ ದೂರನ್ನು ದಾಖಲಿಸಿದ್ದೇನೆ. ಪ್ರಕರಣವು ತನಿಖೆಯ ಹಂತದಲ್ಲಿದೆ. ಕಾನೂನುಗಳ ಬಗ್ಗೆ ಅರಿವಿರುವುದಿಲ್ಲವೆಂದು ಮತ್ತು ಅಂದಿನಿಂದ ನಮ್ಮ ತಂದೆ–ತಾಯಿಯರ ಮನೆಯಲ್ಲಿ ವಾಸವಾಗಿರುತ್ತೇನೆಂದು ತಿಳಿಸಿದ್ದಾರೆ.

ವರದಕ್ಷಿಣೆ ಪ್ರಕರಣ–೨

ಹೆಸರು– ಶಶಿಕಲಾ
ವಯಸ್ಸು –೩೨
ಜಾತಿ– ಕುರುಬ
ಶಿಕ್ಷಣ– ೧೨ನೇ ತರಗತಿ
ಕೆಲಸ–ಮನೆಗೆಲಸ.

ನಿರೂಪಣೆ: ನಾವು ವಿಜಯನಗರದ ಸುಬ್ಬಣ್ಣ ಗಾರ್ಡನ್‌ನಲ್ಲಿ ವಾಸವಾಗಿದ್ದು, ೧೫ ವರ್ಷಗಳ ಹಿಂದೆಯೇ ಪ್ರಕಾಶ್ ಎಂಬುವರಿಗೆ ನನ್ನ ತಂದೆ ತಾಯಿ ಮತ್ತು ಹಿರಿಯರು ಸೇರಿ ಮದುವೆ ಮಾಡಿಕೊಟ್ಟಿರುತ್ತಾರೆ. ಸುಮಾರು ಎರಡು ಮೂರು ವರ್ಷಗಳಿಂದ ಅನ್ಯೋನ್ಯವಾಗಿ ವಾಸ ಮಾಡಿಕೊಂಡಿರುತ್ತೇವೆ. ನಮಗೆ ಮೂರು ಜನ ಗಂಡುಮಕ್ಕಳು ಇರುತ್ತಾರೆ. ನನ್ನ ಗಂಡ ಮದುವೆಯಾದ ದಿವಸದಿಂದಲೂ ಮದ್ಯಪಾನ ಮಾಡಿಕೊಂಡು ಯಾವುದೆ ಕೆಲಸ ಕಾರ್ಯಗಳಿಗೆ ಹೋಗದೇ ಅಲ್ಲಿ ಇಲ್ಲಿ

ಅಲೆದಾಡುತ್ತಾ ಇಸ್ಪೀಟ್ ಆಡುವುದು, ವೀಡಿಯೋಗೇಮ್ ಆಡುವುದು, ಇತರೇ ಕೆಟ್ಟ ಚಟಗಳನ್ನು ಬೆಳೆಸಿಕೊಂಡಿದ್ದರು. ಇದರ ಖರ್ಚಿಗಾಗಿ ಮನೆಯಲ್ಲಿ ಹಣ ತರುವಂತೆ ಒತ್ತಾಯ ಮಾಡುತ್ತಿದ್ದರು. ಕೆಟ್ಟ ಮಾತುಗಳಿಂದ ಬೈಯುವುದು, ಹೊಡೆಯುವುದನ್ನು ಸಹ ಮಾಡುತ್ತಿದ್ದರು. ನಾನು ನನ್ನ ಮಕ್ಕಳನ್ನು ಸಾಕಲು ತುಂಬಾ ಕಷ್ಟ ಪಡುತ್ತಿದ್ದೆನು. ಈ ವಿಷಯದ ಬಗ್ಗೆ ನಮ್ಮ ಪೋಷಕರು ಗಂಡನಿಗೆ ತಿಳುವಳಿಕೆ ಹೇಳಿ ಸರಿಯಾಗಿ ಸಂಸಾರ ಮಾಡಿಕೊಂಡು ಹೋಗುವಂತೆ ತಿಳಿಸಿದರು. ನಂತರ ನನ್ನ ಗಂಡ ಹಣ ಕೊಡುವಂತೆ ಕೇಳಿದರು. ಇಲ್ಲ ಎಂದು ತಿಳಿಸಿದಾಗ ನಿನ್ನನ್ನು ಕೊಂದುಹಾಕುತ್ತೇನೆಂದು ಹೇಳಿದರು. ನಿಮ್ಮ ತಂದೆ ತಾಯಿಯವರ ಮನಗೆ ಹೋಗಿ ಹಣವನ್ನು ತೆಗೆದುಕೊಂಡು ಬರುವಂತೆ ಒತ್ತಾಯಿಸಿದರು. ಕಾಲಿಂದ ಒದ್ದು ನೋವನ್ನು ಉಂಟುಮಾಡಿರುತ್ತಾರೆ. ನನಗೆ ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರಿಂದ ನನಗೆ ಜೀವನದಲ್ಲಿ ಬೇಸತ್ತು ಹಲವು ಬಾರಿ ಠಾಣೆಗಳಲ್ಲಿ ದೂರು ದಾಖಲು ಮಾಡಿರುತ್ತೇನೆ. ಅವರು ಸಹ ಹಲವು ಬಾರಿ ಕರೆಸಿ ತಿಳುವಳಿಕೆ ಹೇಳಿದರೂ ಸಹ ಸರಿ ಹೋಗದೇ ಇರುವುದರಿಂದ ನನ್ನ ಗಂಡನ ವಿರುದ್ಧ ಕಾನೂನು ಕ್ರಮ ಜರುಗಿಸಿ ನಾನು ಮತ್ತು ನನ್ನ ಮಕ್ಕಳು ನೆಮ್ಮದಿಯಾಗಿ ಜೀವನ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಠಾಣೆಯಲ್ಲಿ ದೂರು ನೀಡಿದ್ದೇನೆಂದು ಅವರು ತಿಳಿಸಿರುತ್ತಾರೆ. ಅದರ ವಿಚಾರವಾಗಿ ಕಾನೂನಿನ ಅರಿವು ಇಲ್ಲದಿರುವುದರಿಂದ ನನಗೇನು ತಿಳಿದಿಲ್ಲವೆಂದು ತಿಳಿಸಿದ್ದಾರೆ.

ವರದಕ್ಷಿಣೆ ಪ್ರಕರಣ–೩

ಹೆಸರು– ಗಾಯತ್ರಿ

ವಯಸ್ಸು –೩೪

ಜಾತಿ– ಉಪ್ಪಾರ

ಶಿಕ್ಷಣ– ಪದವಿ

ಕೆಲಸ–ಕಂಪನಿ ಉದ್ಯೋಗಿ.

ನಿರೂಪಣೆ: ನಾವು ಕರಗಪ್ಪ ಗಾರ್ಡನ್‌ಸಲ್ಲಿ ವಾಸವಾಗಿದ್ದು, ನಾವು ಪ್ರೀತಿಸಿ ರಿಜಿಸ್ಟರ್ ಕಛೇರಿಯಲ್ಲಿ ಎರಡು ವರ್ಷಗಳ ನಂತರ ಮದುವೆಯಾದೆವು. ಮದುವೆಯ ಸಮಯದಲ್ಲಿ ವರದಕ್ಷಿಣೆಯನ್ನು ನೀಡಿದ್ದೆವು. ಕೆಲವು ವರ್ಷಗಳ ನಂತರ ಹೆಣ್ಣು ಮಗು ಜನಿಸಿದಾಗ ಈ ದರಿದ್ರ ಹೆಣ್ಣು ಮಗುವನ್ನು ಸಾಕಲು ನನ್ನೊಬ್ಬನ ಸಂಬಳ ಸಾಕಾಗುವುದಿಲ್ಲ. ನೀನು ಕೆಲಸಕ್ಕೆ ಹೋಗಬೇಕೆಂದು ದಿನ ನಿತ್ಯ ಕಿರುಕುಳ ನೀಡತೊಡಗಿದರು. ನಂತರ ಕೆಲಸಕ್ಕೆ ಸೇರಿಕೊಂಡ ನಂತರ ಸಂಬಳವನ್ನು ಗಂಡನಿಗೆ ನೀಡಬೇಕಿತ್ತು ಆದರೆ ಬಸ್‌ಚಾರ್ಜ್‌ಗೂ ಸಹ ಹಣವನ್ನು ನೀಡುತ್ತಿರಲಿಲ್ಲ. ಸಹೋದ್ಯೋಗಿಗಳ ಬೈಕಿನಲ್ಲಿ ಹೋಗಿ ಬಂದರೆ ಬೇರೆಯವರ ಜೊತೆ ಸಂಬಂಧ ಇಟ್ಟುಕೊಂಡಿದ್ದೀಯ ಎಂದು ಹಿಯ್ಯಾಳಿಸಿ ಕಿರುಕುಳ ನೀಡುತ್ತಿದ್ದರು. ನನ್ನ ಅತ್ತೆ ಮನೆಗೆ ಬಂದು ವರದಕ್ಷಿಣೆ ತರುವಂತೆ ಆಗಾಗ ಕಿರುಕುಳ ನೀಡುತ್ತಿದ್ದರು. ನಂತರ ದಿನಗಳಲ್ಲಿ ನಾನು

ಮಲೇಷಿಯಾಕ್ಕೆ ಹೋಗಬೇಕು ನನಗೆ ೫೦,೦೦೦/- ಹಣವನ್ನು ಕೊಡು ಇಲ್ಲವಾದರೆ ತವರು ಮನೆಗೆ ಹೋಗು ಎಂದು ಕಿರುಕುಳ ನೀಡುತ್ತಿದ್ದರು. ನಂತರ ನಮ್ಮ ಸಂಬಂಧಿಕರು ಬಂದು ರಾಜೀ ಪಂಚಾಯಿತಿ ಮಾಡಲು ಬಂದಾಗ ಸೂಳೆ ಮುಂಡೆ ಇಲ್ಲಿಗೆ ಬಂದಿದ್ದೀಯ ಎಂದು ಬೈದು ತಾಳಿಯನ್ನು ಬಿಚ್ಚುಕೊಡು ಎಂದು ನನ್ನ ಕುತ್ತಿಗೆಗೆ ಕೈ ಹಾಕಿ ಎಳೆದಾಡಿ ನನ್ನ ಮುಖಕ್ಕೆ ಹೊಡೆದು ಸಾಯಿಸಿಬಿಡುವುದಾಗಿ ಬೆದರಿಕೆ ಹಾಕಿದನು. ಮತ್ತೆ ನನ್ನ ತಾಯಿ ಬಿಡಿಸುವುದಕ್ಕೆ ಬಂದಾಗ ನಿನ್ನ ಮಗಳನ್ನು ಇಟ್ಟುಕೊಂಡು ಸೂಳೆಗಾರಿಕೆ ಮಾಡುತ್ತೀಯ ಬೋಳಿ ಮುಂಡೆ ಎಂದು ನಿಂದಿಸಿದರು. ಹೀಗೆ ಸದಾ ಯಾವಾಗಲೂ ನನಗೆ ಮತ್ತು ನನ್ನ ತಂದೆ ತಾಯಂದಿರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದಾರೆಂದು ಪೋಲೀಸ್ ಠಾಣೆಗೆ ದೂರನ್ನು ನೀಡಿದನು. ಆದರೆ ಪ್ರಕರಣದ ಬಗ್ಗೆ ತನಿಖೆ ಆರಂಭಿಸಿದ ಪೋಲೀಸರು ನನ್ನ ಗಂಡನಿಗೆ ಬುದ್ದಿ ಹೇಳಿ ರಾಜಿ ಮಾಡಿಸಿದರೆಂದು ತಿಳಿಸಿರುತ್ತಾರೆ.

ವರದಕ್ಷಿಣೆ ಪ್ರಕರಣ-೪

ಹೆಸರು- ಮಮತಾ
ವಯಸ್ಸು -೩೨.
ಜಾತಿ- ಪರಿಶಿಷ್ಟಜಾತಿ.
ಶಿಕ್ಷಣ- ೧೦ನೇ ತರಗತಿ
ಕೆಲಸ-ಮನೆಗೆಲಸ.

ನಿರೂಪಣೆ: ನಾನು ಬೆಂಗಳೂರಿನ ಮಾಧವನಗರ ವಾಸವಾಗಿದ್ದು, ತಂದೆ ತಾಯಂದಿರು ಸತೀಶ್ ಜೊತೆ ವಿವಾಹ ಮಾಡಿಕೊಟ್ಟರು. ವಿವಾಹದ ನಂತರ ಸುಮಾರು ತಿಂಗಳ ಕಾಲ ಅನ್ಯೋನ್ಯವಾಗಿದ್ದೆವು. ನಂತರ ಗಂಡನ ಮನೆಯವರು, ತಂದೆ, ತಾಯಿ, ನಾದನೀಯವರು ನಮ್ಮ ಅಂತಸ್ತಿಗೆ ಸರಿಯಾಗಿ ನೀವು ವರದಕ್ಷಿಣೆ ನೀಡಿಲ್ಲ ಎಂದು ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಲು ಆರಂಭಿಸಿದರು. ನಂತರ ನನ್ನ ಗಂಡ ದಿನನಿತ್ಯ ಕುಡಿದು ಬಂದು ದಿನ ಸಿಗರೇಟ್‌ನಿಂದ ದೇಹಕ್ಕೆ ಸುಡುತ್ತಿದ್ದನು. ನಂತರ ನೀನು ನಿನ್ನ ಮನೆಯವರಿಗೆ ಈ ವಿಷಯವನ್ನು ತಿಳಿಸಿದರೆ ನಾನು ನಿನ್ನ ಬೆಡ್‌ರೂಂಗೆ ಬೇರೆ ಪುರುಷನನ್ನು ಕರೆತಂದು ಅಕ್ರಮ ಸಂಬಂಧವಿದೆ ಎಂದು ತಿಳಿಸುವುದಾಗಿಯೂ ಬೆದರಿಸಿದನು. ನೀನು ಚನ್ನಾಗಿಲ್ಲ ನಿನ್ನ ತಂದೆಗೆ ಹೇಳಿ ನಿನ್ನ ತಂಗಿಯನ್ನು ಕೊಟ್ಟು ಮದುವೆ ಮಾಡಲು ತಿಳಿಸು ಎಂದು ದಿನಂಪ್ರತಿ ಮಾನಸಿಕ ಹಿಂಸೆ ನೀಡುತ್ತಿದ್ದನು. ಈ ಕಿರುಕುಳವನ್ನು ತಾಳಲಾರದೆ ಪೋಲೀಸ್‌ಠಾಣೆಗೆ ದೂರನ್ನು ನೀಡಿದೆನು. ಆದರೆ ಪ್ರಭಾವಿಯಾಗಿದ್ದ ನನ್ನ ಗಂಡನ ಕಡೆಯ ಪೋಲೀಸರು ಕೂಡಾ ಮಾತಾಡಿದರು. ನನಗೆ ಅಲ್ಲೂ ನ್ಯಾಯ ಸಿಗಲಿಲ್ಲವೆಂದು ತಿಳಿಸಿದ್ದಾರೆ.

ವರದಕ್ಷಿಣೆ ಪ್ರಕರಣ-೫

ಹೆಸರು- ಸರಸ್ವತಿ
ವಯಸ್ಸು -೩೬.
ಜಾತಿ- ಮ್ಯಾಸಬೇಡ
ಶಿಕ್ಷಣ- ೮ನೇ ತರಗತಿ
ಕೆಲಸ-ಮನೆಗೆಲಸ.

ನಿರೂಪಣೆ: ನಾವು ತಿಮ್ಮಯ್ಯ ರಸ್ತೆಯ ಭಾರತೀನಗರದಲ್ಲಿ ವಾಸವಾಗಿದ್ದು, ನನ್ನ ಮದುವೆ ಮಾಡುವ ಸಂದರ್ಭದಲ್ಲಿ ತಂದೆ ತಾಯಂದಿರು ಹುಡುಗನಿಗೆ ಮತ್ತು ಹುಡುಗನ ಮನೆಯವರಿಗೆ ಹುಡುಗಿಗೆ ಗರ್ಭಕೋಶವಿಲ್ಲವೆಂದು ತಿಳಿಸಿ ಅವಳಿಗೆ ಮಕ್ಕಳಾಗುವುದಿಲ್ಲವೆಂದು ತಿಳಿಸಿದರು. ಆದರೂ ಸಹ ಹುಡುಗನು ಮದುವೆಯಾಗಲು ಒಪ್ಪಿ ವರದಕ್ಷಿಣೆಯಾಗಿ ೧೦,೦೦೦೦೦/- ಹಣ, ಒಡವೆಗಳನ್ನು ಪಡೆದನು. ಕೆಲವು ತಿಂಗಳ ನಂತರ ಹೆಚ್ಚಿನ ವರದಕ್ಷಿಣೆಗಾಗಿ ಕಿರುಕುಳ ಆರಂಭಿಸಿದನು. ಕಿರುಕುಳದ ನಂತರ ಮಾನಭಂಗ ಮಾಡಲು ಪ್ರಯತ್ನಿಸಿದನು. ಅದನ್ನು ಪ್ರತಿಭಟಿಸಿದಾಗ ಮನೆಯ ರೂಂಗೆ ಕೂಡಿಹಾಕಿದನು ನಂತರ ಅಕ್ಕಪಕ್ಕದವರಿಗೆ ವಿಷಯ ತಿಳಿದು ಬಂಧನದಿಂದ ಮುಕ್ತಿಗೊಳಿಸಿ, ಪೊಲೀಸರಿಗೆ ದೂರನ್ನು ನೀಡಿದರು. ನಂತರ ಆತನನ್ನು ಪೊಲೀಸರು ವರದಕ್ಷಿಣೆ ಕಿರುಕುಳದಡಿ ಬಂಧಿಸಿ ಶಿಕ್ಷೆಗೆ ಗುರಿಪಡಿಸಿದ್ದಾರೆಂದು ತಿಳಿಸಿದ್ದಾರೆ.

ವರದಕ್ಷಿಣೆ ಪ್ರಕರಣ-೬

ಹೆಸರು- ಲಕ್ಷ್ಮಿ
ವಯಸ್ಸು -೩೩.
ಜಾತಿ- ಯಾದವ
ಶಿಕ್ಷಣ- ಬಿಕಾಂ, ಪದವಿ
ಕೆಲಸ-ಕಂಪನಿ ಉದ್ಯೋಗಿ

ನಿರೂಪಣೆ: ನಾನು ಶಿವಾಜಿನಗರದ ಫ್ರಾಸ್ಕರ್ ಟೌನ್‌ನಲ್ಲಿ ತಂದೆ ತಾಯಿಯೊಂದಿಗೆ ವಾಸವಾಗಿದ್ದುಕೊಂಡು, ಇನ್‌ಫೋಸಿಸ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ನಮ್ಮ ತಂದೆಯವರಿಗೆ ೩ ಜನ ಮಕ್ಕಳಿದ್ದು ನಾನು ಕೊನೆಯವಳಾಗಿದ್ದು ಬಿ.ಕಾಂ ವ್ಯಾಸಾಂಗ ಮಾಡಿರುತ್ತೇನೆ. ನಮ್ಮ ತಂದೆಯವರಿಗೆ ಸೆಕ್ಯೂರಿಟಿ ಗಾರ್ಡ್(ಹೆಚ್.ಎ.ಎಲ್) ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಕೃಷ್ಣನ್ ಎಂಬುವವರು ಪರಿಚಯವಾಗಿ ತೀರಾ ಆತ್ಮೀಯವಾಗಿ ಹಬ್ಬ ಹರಿದಿನಗಳಿಗೆ ಬಂದು ಹೋಗುತ್ತಿದ್ದರು. ಕೃಷ್ಣನ್ ನವರ ಮಗನಿಗೂ ನನಗೂ ಪ್ರೀತಿ ಉಂಟಾಗಿ ತಮ್ಮಿಬ್ಬರ ಪ್ರೀತಿಯನ್ನು ಮನೆಯಲ್ಲಿ ತಿಳಿಸಿ ಒಪ್ಪಿ ರಿಜಿಸ್ಟರ್ ಕಛೇರಿಯಲ್ಲಿ ಮದುವೆಯಾದೆವು. ಮದುವೆ ಸಮಯದಲ್ಲಿ ೩,೫೦,೦೦೦/- ಹಣವನ್ನು ವರೋಪಚಾರವಾಗಿ ೫೦,೦೦೦/- ವನ್ನು ವಾಚ್,

ಉಂಗುರ, ಎಲ್ಲಾ ತರಹದ ಒಡವೆಗಳನ್ನು ಕೊಟ್ಟು ಮದುವೆ ಮಾಡಿಕೊಟ್ಟರು. ನಂತರ ನಾನು ನನ್ನ ಗಂಡನು ಬಾಣವಾಸವಾಡಿಯ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ನನ್ನ ಗಂಡ ಖಾಸಗೀ ಕಂಪನಿಯಲ್ಲಿ ಕೆಲಸಕ್ಕೆ ಹೊಗುತ್ತಿದ್ದರು. ನಂತರ ದಿನಗಳಲ್ಲಿ ಒಂದು ಹೆಣ್ಣು ಮಗು ಜನಿಸಿದ ನಂತರ ಹೆಣ್ಣು ಮಗುವಿನ ವಿದ್ಯಾಭ್ಯಾಸ ಮತ್ತು ಮನೆಯ ಬಾಡಿಗೆಯನ್ನು ಕಟ್ಟಲು ಸಂಬಳ ಸಾಲದೆ ಬಂದಾಗ ನಿನ್ನ ತವರಿಗೆ ಹೋಗಿ ಹಣವನ್ನು ತೆಗೆದುಕೊಂಡು ಬಾ, ಎಂದು ದಿನನಿತ್ಯ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು. ನಂತರ ವಿಷಯವನ್ನು ಪೋಷಕರಿಗೆ ತಿಳಿಸಿದಾಗ ಬಂದು ಸ್ವಲ್ಪ ಹಣದ ಸಹಾಯವನ್ನು ಮಾಡಿದರು. ನಂತರ ತನ್ನ ಗಂಡನು ದಿನನಿತ್ಯ ಕುಡಿದುಬಂದು ಅವಾಚ್ಯ ಶಬ್ದಗಳಿಂದ ಬೈಯ್ದು ತನ್ನನ್ನು ಮತ್ತು ತನ್ನ ಮಗಳನ್ನು ಹೊರಹಾಕುತ್ತಿದ್ದರು. ಈ ಹಿಂಸೆಯನ್ನು ತಾಳಲಾರದೆ ಹತ್ತಿರದ ಠಾಣೆಗೆ ದೂರನ್ನು ನೀಡಿದೆನು. ಈ ವಿಷಯ ಪೋಷಕರಿಗೆ ತಿಳಿದಾಗ ಇದನ್ನು ನಾವೆ ಬಗೆಹರಿಸಿಕೊಳ್ಳೋಣವೆಂದು ದೂರನ್ನು ವಾಪಾಸ್ಸು ತೆಗೆಸಿದರೆಂದು ತಿಳಿಸಿದ್ದಾರೆ.

ವರದಕ್ಷಿಣೆ ಪ್ರಕರಣ–೭

ಹೆಸರು– ವನಿತಾ

ವಯಸ್ಸು –೨೮

ಜಾತಿ– ಕುಂಬಾರ

ಶಿಕ್ಷಣ– ಬಿ.ಎ ಪದವಿ

ಕೆಲಸ–ಕಛೇರಿ ಉದ್ಯೋಗಿ

ನಿರೂಪಣೆ: ನಾನು ಮತ್ತು ಕುಟುಂಬ ಅಶ್ವಥನಗರದಲ್ಲಿ ವಾಸವಾಗಿದ್ದು, ನನ್ನ ವಯಸ್ಸು ೧೬ ಆಗಿದ್ದಾಗ ಮದುವೆಯಾಯಿತು. ಅತ್ತೆ–ಮಾವ ಮತ್ತು ನಾದಿನಿಯಿಂದ ಕೂಡಿದ ತುಂಬ ಮನೆಯಲ್ಲಿ ನಾನು ಕೂಡ ಜೊತೆಯಲ್ಲೆ ವಾಸ ಮಾಡುವುದಾಗಿತ್ತು. ನನ್ನ ಗಂಡ ಆಟೋ ಚಾಲಕರಾಗಿದ್ದರು. ಹೀಗೆ ಇರಬೇಕಾದರೆ ಮದುವೆಯಾದ ಹೊಸತರಲ್ಲಿ ಎಲ್ಲವೂ ಚೆನ್ನಾಗಿ ಇತ್ತು. ಆದರೆ ನನ್ನ ಅತ್ತೆ ತುಂಬಾ ದುರಾಸೆಯಿಂದ ಕೂಡಿದ್ದಳು. ಆಕೆಯು ನನ್ನ ಗಂಡನಿಗೆ ಇಲ್ಲ–ಸಲ್ಲದನ್ನೆಲ್ಲಾ ಹೇಳಿ ಆತನ ತಲೆಯಲ್ಲಿ ತುಂಬಿ ನನಗೆ ಹಿಂಸೆಯನ್ನು ಕೊಡಲು ಆರಂಭಿಸಿದಳು. ಕಾರಣ ನಾನು ನನ್ನ ತವರಿನಿಂದ ದುಡ್ಡನ್ನು ತರಬೇಕೆಂದು. ನಮ್ಮ ತಂದೆ–ತಾಯಿಗಳು ಬಡವರಾಗಿದ್ದರಿಂದ ಅವರಿಗೆ ಹೇಳಲು ಹಿಂಜರಿಯುತ್ತಿದೆ. ಹಾಗಾಗಿ ಅವರ ಕಷ್ಟಗಳನ್ನೆಲ್ಲಾ ಒಂದು ಹಂತದವರೆಗೂ ಸಹಿಸಿಕೊಂಡೆನು. ಆದರೆ ತಾಳಿ ಕಟ್ಟಿದ ನನ್ನ ಗಂಡನು ಅವನ ತಾಯಿಯ ಮಾತಿಗೆ ಮರುಳಾಗಿ ಕುಡಿದು ಬಂದು ಹಿಂಸಿಸುವುದಕ್ಕೆ ಶುರು ಮಾಡಿದನು. ಪ್ರತಿದಿನ ಬೈಗುಳ ಮತ್ತು ದೈಹಿಕವಾಗಿ ಹಿಂಸಿಸುತ್ತಿದ್ದನು. ಇದನ್ನು ತಡೆಯದೆ ನಾನು ನನ್ನ ತಂದೆ–ತಾಯಿಗಳ ಹತ್ತಿರ ಬಂದು ಹೇಳಿದಾಗ ಅವರು ನನ್ನ ಅತ್ತೆ–ಮಾವ ಮತ್ತು ಗಂಡನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದರು. ಪೊಲೀಸರು ವಿಚಾರಿಸಲು

ಬಂದಾಗ ನನ್ನ ಗಂಡನ ಮನೆಯವರು ನನ್ನ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ದುರ್ಬಲಳಾದ ಬಡ ಹುಡುಗಿಯಾದ ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿದರು. ಕೊನೆಗೆ ನಮ್ಮ ಮಾನವೇ ಹರಾಜು ಆಗುವುದೆಂದು ಹೆದರಿ ನಮ್ಮ ತಂದೆ-ತಾಯಿಗಳು ರಾಜಿಗೆ ಮುಂದಾದರು. ಯಾಮಾರಿಸುವ ಮೂಲಕ ನಮ್ಮ ತಂದೆ-ತಾಯಿಗಳ ಹತ್ತಿರ ದುಡ್ಡನ್ನು ವಂಚಿಸಿ, ನನಗೂ ಹಿಂಸೆಯನ್ನು ನೀಡಿದರು. ನಮ್ಮ ಸಂಬಂಧಿಕರು ಮತ್ತು ನೆರೆರಹೊರೆಯವರ ಸಹಾಯದಿಂದ ಪೊಲೀಸ್ ಠಾಣೆಗೆ ಹೋಗಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡೆವು. ಪೊಲೀಸ್ ಠಾಣೆಯಲ್ಲಿ ತನಿಖೆಯ ಹಂತದಲ್ಲಿರುವಾಗ ನಮ್ಮ ಗಂಡನ ಮನೆಯವರು ಪೊಲೀಸರನ್ನು ದುರುಪಯೋಗಪಡಿಸಿಕೊಂಡು ತನಗೆ ನ್ಯಾಯ ಸಿಗದಂತೆ ಪ್ರಭಾವ ಬೀರಿ ಪೊಲೀಸರ ಮುಖಾಂತರ ಪ್ರಕರಣವನ್ನು ರಾಜಿ ಮಾಡಿಸಿದರು.

ವರದಕ್ಷಿಣೆ ಪ್ರಕರಣ–೮

ಹೆಸರು– ಚಂದ್ರಕಲಾ

ವಯಸ್ಸು --೩೨

ಜಾತಿ– ಲಿಂಗಾಯುತ

ಶಿಕ್ಷಣ– ಪಿ.ಯು.ಸಿ.

ಕೆಲಸ– ಗೃಹಿಣಿ.

ನಿರೂಪಣೆ: ನಾವು ಈಜೀಪುರದಲ್ಲಿ ವಾಸವಾಗಿದ್ದು, ನಾನು ೧೦ ನೇ ತರಗತಿಯಲ್ಲಿ ಓದುತ್ತಿರುವಾಗಲೇ ಅರ್ಧಕ್ಕೆ ಸ್ಕೂಲನ್ನು ಬಿಡಿಸಿ, ನನಗೆ ಒಪ್ಪಿಗೆ ಇಲ್ಲದಿದ್ದರೂ ಬಲವಂತವಾಗಿ ಒಳ್ಳೆಯ ಸಂಬಂಧ ಬಂದಿದೆ ಎಂದು ನನ್ನ ಹೆತ್ತವರು ಮದುವೆ ಮಾಡಿಕೊಟ್ಟರು. ನಾನು ಮದುವೆಯಾದ ಹುಡುಗ ಟೈಲರ್ ಆಗಿದ್ದನು. ಸ್ವಂತ ಹೊಲಿಗೆ ಅಂಗಡಿಯನ್ನು ಇಟ್ಟುಕೊಂಡಿದ್ದನು. ಈತನಿಗೆ ಕೆಟ್ಟವರ ಸಹವಾಸ ಜಾಸ್ತಿ ಇತ್ತು. ಈತನಿಗೆ ಪ್ರತಿದಿನ ಕುಡಿಯುವುದು. ಜೂಜಾಡುವುದು ಹವ್ಯಾಸವಾಗಿ ಬಿಟ್ಟಿದ್ದವು. ದುಡಿದಿದ್ದನ್ನೆಲ್ಲಾ ಕುಡಿತಕ್ಕೆ, ಜೂಜಾಟಕ್ಕೆ ಖರ್ಚು ಮಾಡಿಬಿಡುತ್ತಿದ್ದನು. ನಾನೇನಾದರೂ ಮನೆಗೆ ಬೇಕಾದ ಅಡುಗೆ ಪದಾರ್ಥಗಳನ್ನು ಕೇಳಿದರೆ ನಿಂದಿಸುವುದು ಮತ್ತು ದೈಹಿಕವಾಗಿ ದಂಡಿಸುತ್ತಿದ್ದನು. ನಿಮ್ಮಪ್ಪನ ಮನೆಯಿಂದ ತಂದು ತಿನ್ನು ಎನ್ನುತ್ತಿದ್ದನು. ಚೆನ್ನಾಗಿ ದುಡಿಮೆ ಮಾಡುತ್ತಿದ್ದರೂ ಒಂದು ಪೈಸೆಯನ್ನು ಮನೆಗೆ ಕೊಡುತ್ತಿರಲಿಲ್ಲ. ಈತನ ಹಿಂಸೆಯನ್ನು ತಾಳದೆ ನಾನು ನನ್ನ ಹೆತ್ತವರಿಗೆ ದೂರನ್ನು ನೀಡಿದೆನು. ಆತನನ್ನು ನಮ್ಮ ತಂದೆ-ತಾಯಿಗಳು ಬಂದು ಕೇಳಿದಾಗ ನಿಮ್ಮ ಮಗಳನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ ನಾನು ಮತ್ತೊಂದು ಮದುವೆಯಾಗುತ್ತೇನೆ ಎಂದನು. ಈತನ ವರ್ತನೆಯನ್ನು ತಾಳಲಾರದೆ ಪೊಲೀಸರಿಗೆ ದೂರನ್ನು ನೀಡಿದಾಗ, ಪೊಲೀಸರು ಬಂದು ನನ್ನ ಗಂಡನನ್ನು ಎಳೆದುಕೊಂಡು ಹೋದರು. ಆದರೆ ಅವನ ಹತ್ತಿರ ಕುಡಿದು, ತಿನ್ನುತ್ತಿದ್ದವರು ಪುಸಲಾಯಿಸಿ ನನ್ನನು ಮತ್ತು ನನ್ನ ತಂದೆ ತಾಯಿಗಳನ್ನು ರಾಜಿ ಮಾಡಿಕೊಳ್ಳಿ ಇಲ್ಲವೆ

ನಿಮ್ಮನ್ನು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿದರು. ಇದರಿಂದ ನೊಂದು ನಮಗೆ ಪೊಲೀಸರ ಹತ್ತಿರ ನ್ಯಾಯವು ಸಿಗದೆ ರಾಜಿ ಮಾಡಿಕೊಂಡು ಆತನ ಹತ್ತಿರವೆ ಬಾಳಬೇಕಾಯಿತು. ನನ್ನ ಗಂಡನು ನನ್ನ ಮತ್ತು ನನ್ನ ಹೆತ್ತವರ ಬಗ್ಗೆ ಅಸಹ್ಯವಾಗಿ ನಿಂದಿಸುತ್ತಾ, ನನಗೆ ಬಹಳ ವರದಕ್ಷಿಣೆ ಕೊಡುತ್ತಿದ್ದರು. ನಿಮ್ಮಂಥ ದರಿದ್ರರ ಮನೆಗೆ ಬರಲಾಗಿ ಏನು ಸಿಗಲಿಲ್ಲ. ಆದ್ದರಿಂದ ನನಗೇನು ಗೊತ್ತಿಲ್ಲ. ನೀನು ನಿಮ್ಮ ಮನೆಯಿಂದ ದುಡ್ಡನ್ನು ತೆಗೆದುಕೊಂಡು ಬಾ ಇಲ್ಲವೇ ನಾನು ಕೊಟ್ಟ ಕಷ್ಟನ್ನೆಲ್ಲಾ ಸಹಿಸಿಕೊಂಡು ಬಾಳು ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸುವುದು ಮತ್ತು ಹೊಡೆಯುವುದು ಪ್ರತಿದಿನದ ಹಾಜರಿಯಾಗಿತ್ತು. ನನ್ನ ತಂದೆ ತಾಯಿಗಳು ಇಷ್ಟವಿಲ್ಲದಿದ್ದರೂ ಚಿಕ್ಕವಯಸ್ಸಿನಲ್ಲೆ ಮದುವೆ ಮಾಡಿ ನನಗೆ ನರಕದ ಜೀವನವನ್ನು ನೀಡಿದ್ದಾರೆಂದು ತಿಳಿಸಿದ್ದಾಳೆ.

ವಿಶ್ಲೇಷಣೆ: ಒಟ್ಟಾರೆಯಾಗಿ ಈ ವರದಕ್ಷಿಣೆ ಪ್ರಕರಣ ಅಧ್ಯಯನಗಳನ್ನು ಗಮನಿಸಿದಾಗ ನನಗೆ ತಿಳಿದು ಬಂದಿದ್ದೇನೆಂದರೆ, ಮನುಷ್ಯನ ದುರಾಸೆ, ಗಂಡು ಎಂಬ ಅಹಂಕಾರ, ಮನೆತನದ ಪ್ರತಿಷ್ಟತೆಗಾಗಿ, ಬೇಗ ಶ್ರೀಮಂತರಾಗಬೇಕೆಂಬ ದುರಾಸೆಯಿಂದ, ಇನ್ನೂ ಮುಂತಾದ ಕಾರಣಗಳಿಂದ ವರದಕ್ಷಿಣೆ ಪ್ರಕರಣಗಳು ದಾಖಲಾಗುತ್ತವೆ. ವರದಕ್ಷಿಣೆ ದೂರನ್ನು ನೀಡಲು ಠಾಣೆಗೆ ಹೋದಾಗ, . ಪೊಲೀಸ್ ಅಧಿಕಾರಿಗಳು ಸಹ ಈ ಪ್ರಕರಣಗಳನ್ನು ಗಂಭೀರ ಪ್ರಕರಣಗಳೆಂದು ಪರಿಗಣಿಸದಿರುವುದು ಕಂಡುಬಂದಿದೆ. ಶೇಕಡ ೮೫ ಪ್ರಕರಣಗಳು ತನಿಖೆಯಿಂದ ಖುಲಾಸೆಗೊಂಡಿವೆ. ಬೆರಳೆಣಿಕೆಯಷ್ಟು ಆರೋಪಿಗಳಿಗೆ ಶಿಕ್ಷೆಯಾಗಿದೆ. ಬಹುತೇಕ ಪ್ರಕರಣಗಳು ರಾಜೀ ಸಂಧಾನವಾಗಿರುವುದು ಕಂಡುಬಂದಿದೆ.

೪.ಸಾರ್ವಜನಿಕ ವಲಯದಲ್ಲಿ ಮಹಿಳೆಯ ಮೇಲಿನ ದೌರ್ಜನ್ಯ ಪ್ರಕರಣಗಳು

ದೌರ್ಜನ್ಯ ಪ್ರಕರಣ–೧

ಹೆಸರು–ಪವಿತ್ರ

ವಯಸ್ಸು –೨೮

ಜಾತಿ– ನಾಯಕ

ಶಿಕ್ಷಣ– ಪಿ.ಯು.ಸಿ

ಉದ್ಯೋಗ– ಕಂಡಕ್ಟರ್.

ನಿರೂಪಣೆ: ನಾನು ಬೆಂಗಳೂರಿನ ಹಳೆ ಚಾಮರಾಜಪೇಟೆಯಲ್ಲಿ ವಾಸವಾಗಿದ್ದು, ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸಕ್ಕೆ ಸೇರಿ ೩ ವರ್ಷಗಳ ಕಾಲ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೆನು. ನಂತರ ನಾನು ಬೇರೆ ಡಿಪೋಗೆ ವರ್ಗಾವಣೆ ಮಾಡಿಕೊಂಡ ನಂತರ ಆ ಡಿಪೋದಲ್ಲಿ ನನ್ನನ್ನು ಚೆಕಿಂಗ್ ಇನ್‌ಸ್ಪೆಕ್ಟರ್ ಪ್ರಕಾಶ್ ಎಂಬುವವರು ನನಗೆ ಪರಿಚಯವಾದರು. ಅವರು ನನ್ನ ಹತ್ತಿರ ಸಲುಗೆಯಿಂದ ಇದ್ದು ಕೆಲವು ಸಮಯದಲ್ಲಿ ಅಸಭ್ಯವಾಗಿ ವರ್ತಿಸುತ್ತಿದ್ದನ್ನು ಕಂಡು ನಾನು ಆತನನ್ನು ಮಾತನಾಡಿಸುವುದನ್ನು ಬಿಟ್ಟೆ. ನಾನು ಅವರ ಜೊತೆ ಮಾತಾನಾಡದಿದ್ದಕ್ಕೆ ಅವರು ನನಗೆ ಪ್ರತಿನಿತ್ಯ ನಾನು ಹೋಗುವ ಮಾರ್ಗಕ್ಕೆ ಬಂದು ನನಗೆ ಒಂದಲ್ಲ ಒಂದು ಕಾರಣ ನೀಡಿ ಮೆಮೋ, ಫೈನ್ ಹಾಕುತ್ತಿದ್ದರು. ಪ್ರತಿ ಹಂತದಲ್ಲೂ ಸಹ ನನಗೆ ಮಾನಸಿಕ ಹಿಂಸೆ ನೀಡುತ್ತಿದ್ದರು. ಅದನ್ನು ನಾನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಅವರು ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು. ಅದರೂ ಸಹ ಆತ ತನಗೆ ಕಿರುಕುಳ ನೀಡುವುದನ್ನು ಮುಂದುವರಿಸಿದನು. ಬೇಸತ್ತು ನಾನು ಪೋಲೀಸ್ ಠಾಣೆಗೆ ಹೋಗಿ ನನಗೆ ಮಾನಸಿಕ ಕಿರುಕುಳ ನೀಡುತ್ತಿದ್ದಾನೆಂದು ದೂರು ನೀಡಿದೆನು. ನಂತರ ಅವರು ಆತನನ್ನು ಕರೆಸಿ ಮತ್ತೆ ಮರುಕಳಿಸದಂತೆ ಅವನಿಂದ ಮುಚ್ಚಳಿಕೆಯೊಂದನ್ನು ಬರೆಸಿಕೊಂಡು ವಾರ್ನಿಂಗ್ ಮಾಡಿ ಕಳುಹಿಸಿದರು. ನಂತರ ಸ್ವಲ್ಪ ದಿನಗಳಲ್ಲಿ ನಾನೇ ಬೇರೆ ಡಿಪೋಗೆ ವರ್ಗಾವಣೆ ಮಾಡಿಸಿಕೊಂಡು ಮಾನಸಿಕ ನೆಮ್ಮದಿಯಿಂದ ಇದ್ದೇನೆಂದು ತಿಳಿಸಿದ್ದಾರೆ. ಆದರೆ ಪೊಲೀಸರು ಮಾತ್ರ ಆತನಿಗೆ ಎಚ್ಚರಿಕೆಯನ್ನು ನೀಡಿ ಕಳುಹಿಸಿದರೆ ವಿನಃ ಬೇರೆ ಯಾವುದೇ ರೀತಿಯ ಶಿಕ್ಷೆಗೆ ಒಳಪಡಿಸದಿರುವುದು ನನಗೆ ನೋವು ತಂದಿದೆ. ಏಕೆಂದರೆ ಪೊಲೀಸರು ಅಧಿಕಾರ ಮತ್ತು ಹಣವುಳ್ಳವರ ಕಡೆ ಎಂದು ಭಾವಿಸಿದ್ದೇನೆಂದು ತಿಳಿಸಿದಳು.

ದೌರ್ಜನ್ಯ ಪ್ರಕರಣ–೨

ಹೆಸರು–ನಾಜೀಯಾ

ವಯಸ್ಸು –೩೮

ಜಾತಿ– ಮುಸ್ಲಿಂ

ಶಿಕ್ಷಣ– ಎಂ.ಎಸ್ಸಿ

ಉದ್ಯೋಗ– ಶಿಕ್ಷಕಿ.

ನಿರೂಪಣೆ: ನಾನು ಬೆಂಗಳೂರಿನ ಕಮ್ಮನಹಳ್ಳಿಯಲ್ಲಿ ವಾಸವಾಗಿದ್ದು, ಇಂಗ್ಲೀಷ್ ಕಲಿಕೆ ಸೆಂಟರ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ಈ ಇಂಗ್ಲೀಷ್ ಸೆಂಟರ್‌ನ ಮಾಲೀಕ ಸುಪರ್ಣ ಮಜುಂದಾರ್ ಎಂಬುವರಾಗಿದ್ದು ಇಲ್ಲಿ ನಾಲ್ಕು ಮಹಿಳಾ ಟೀಚರ್‌ಗಳು ಕೆಲಸ ಮಾಡುತ್ತಿರುತ್ತಾರೆ. ನಾವು ಕಚೇರಿಯನ್ನು ಬೆಳಿಗ್ಗೆ ೮ ಘಂಟೆಗೆ ತೆರೆದು ರಾತ್ರಿ ೮ ಘಂಟೆಗೆ ಮುಕ್ತಾಯ ಮಾಡುತ್ತೇವೆ. ೨೦–೨೫ ಜನ ಇಂಗ್ಲೀಷ್ ಕಲಿಯಲು ಬರುತ್ತಾರೆ. ಈ ಕಟ್ಟಡವನ್ನು ನಾಲ್ಕು ವರ್ಷದ ಹಿಂದೆ ಮಜುಂದಾರ್‌ರವರು ಬಾಲರೆಡ್ಡಿರವರಿಂದ ಬಾಡಿಗೆ ಪಡೆದಿರುತ್ತಾರೆ. ಇತ್ತೀಚೆಗೆ ಕಟ್ಟಡದ ಮಾಲೀಕ ಬಾಲರೆಡ್ಡಿರವರು ಕೆಲವು ಬಾರಿ ನಮ್ಮ ಕಛೇರಿಗೆ ಬಂದು ಗಲಾಟೆ ಮಾಡುತ್ತಿದ್ದರು. ಒಂದು ದಿವಸ ಶರ್ಲಿ ಎಂಬ ಟೀಚರ್ ಪಾಠ ಮಾಡುತ್ತಿದ್ದಾಗ ಕಟ್ಟಡದ ಮಾಲೀಕ ಬಾಲರೆಡ್ಡಿ ನನ್ನ ಅನುಮತಿ ಪಡೆಯದೇ ಕಛೇರಿಗೆ ನುಗ್ಗಿ, ಆತನಿಗೆ ನಮ್ಮ ಕಛೇರಿಯ ಟ್ಯಾಂಕರ್‌ನಿಂದ ಅಕ್ರಮವಾಗಿ ನೀರನ್ನು ಏಕೆ ತೆಗೆದುಕೊಳ್ಳುತ್ತೀರ ಎಂದು ಪ್ರಶ್ನಿಸಿ ಈ ವಿಚಾರವನ್ನು ಮಾಲೀಕರ ಹತ್ತಿರ ವಿಚಾರಿಸಿಕೊಳ್ಳಿ, ಈಗ ಕಛೇರಿಯಿಂದ ಹೊರಗೆ ಹೋಗಿ ಎಂದು ಹೇಳಿದಾಗ ಬಾಲರೆಡ್ಡಿಯವರು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈಯ್ದು ನನ್ನ ಎಡಗೈಯನ್ನು ಹಿಡಿದು ತಿರುಚಿ ಎಳೆದಾಡಿದರು. ಅವಮಾನಿಸಿ ತನ್ನ ಮೈ ಕೈ ಮೇಲೆ ಹೊಡೆದು ನೋವುಂಟು ಮಾಡಿದನು. ಅದಕ್ಕೆ ನನಗೆ ಕೋಪ ಬಂದು ನೀನು ಇಲ್ಲಿಂದ ಹೋಗದಿದ್ದರೆ ಪೋಲೀಸರನ್ನು ಕರೆಸಬೇಕಾಗುತ್ತದೆ, ಎಂದಾಗ ನೀನೇನಾದರೂ ಪೋಲೀಸರಿಗೆ ವಿಷಯ ತಿಳಿಸಿದರೆ ನಿನ್ನ ಜೀವ ಸಹಿತ ಉಳಿಸುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದನು. ಜಗಳವನ್ನು ಬಿಡಿಸಲು ಬಂದ ಸಹಶಿಕ್ಷಕಿಯರನ್ನು ಅವಾಚ್ಯ ಶಬ್ದಗಳಿಂದ ಬೈದು ಅವರ ಮೇಲೂ ಕೂಡ ಹಲ್ಲೆ ಮಾಡಿದನು ಎಂದು ತಿಳಿಸಿದರು. ನಂತರ ನಾವು ಆತನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡಿದೆವು. ಆದರೆ ಆತ ಪ್ರಭಾವಿ ವ್ಯಕ್ತಿಯಾದ್ದರಿಂದ ಪೊಲೀಸರು ಆ ಪ್ರಕರಣವನ್ನು ಮುಚ್ಚಿಹಾಕಿದರೆಂಬ ಭಾವನೆ ನಮ್ಮಲ್ಲಿ ಬಂದಿದೆ ಎಂದು ತಿಳಿಸಿದ್ದಾರೆ.

ದೌರ್ಜನ್ಯ ಪ್ರಕರಣ–೩

ಹೆಸರು–ಮಂಜುಳಾ

ವಯಸ್ಸು –೩೨
ಜಾತಿ– ಲಿಂಗಾಯುತ
ಶಿಕ್ಷಣ– ಬಿ.ಎ
ಉದ್ಯೋಗ– ತೋಟಗಾರಿಕೆ ಇಲಾಖೆಯಲ್ಲಿ ಕೆಲಸ.

ನಿರೂಪಣೆ: ನಾನು ವಿಜಯನಗರದ ಬಾಪೂಜಿ ಲೇಔಟ್ ವಾಸವಾಗಿದ್ದು, ನನ್ನ ಗಂಡನಾದ ರಾಮುರವರು ಎಂ.ಎಸ್. ಬಿಲ್ಡಿಂಗ್ ನಲ್ಲಿರುವ ತೋಟಗಾರಿಕೆ ಮತ್ತು ಕೃಷಿ ಇಲಾಖೆಯಲ್ಲಿ ಕೆಲಸಮಾಡುತ್ತಿರುತ್ತಾರೆ. ನಾನು ಕೂಡ ಅಲ್ಲಿಯೇ ಕೆಲಸ ಮಾಡುತ್ತೇನೆ. ನನಗೂ ಮತ್ತು ನನ್ನ ಗಂಡನಿಗೂ ಹುಷಾರಿಲ್ಲದ ಕಾರಣ ನನ್ನ ಗಂಡನ ಆಫೀಸ್‌ಗೆ ಹೋಗಿ ರಜಾ ಅರ್ಜಿ ಬರೆದ ಕೊಡಲು ಹೋದಾಗ, ಕಛೇರಿಯ ವರಾಂಡದಲ್ಲಿ ನಿಂತಿದ್ದಾಗ ಒಬ್ಬ ವ್ಯಕ್ತಿ ಬಂದು ನನ್ನ ಗಂಡನ ಕುತ್ತಿಗೆ ಪಟ್ಟಿ ಹಿಡಿದುಕೊಂಡು, ಹೇ ಬೋಳಿಮಗನೆ ತಮ್ಮಿಂದ ತಪ್ಪಿಸಿಕೊಂಡು ಎಲ್ಲಿಗೆ ಹೋಗುತ್ತೀಯ ಎಂದು ಬೈಯುತ್ತಿದ್ದಾಗ, ನಾನು ಮಧ್ಯೆ ಹೋಗಿ ಏಕೆ ನನ್ನ ಗಂಡನ್ನನ್ನು ಹೊಡೆಯುತ್ತಿದ್ದೀರ ಎಂದು ಕೇಳಿದಾಗ ಆತ ನೀನ್ಯಾವಳು ಕೇಳುವುದಕ್ಕೆ, ಎಂದು ನನ್ನ ಕಪಾಳಕ್ಕೆ ಹೊಡೆದನು. ನಂತರ ನಾನು ಲಾಯರ್ ನಿನ್ನ ಗಂಡ ನನಗೆ ೨ ಲಕ್ಷ ಹಣ ನೀಡಬೇಕು ನೀವಿಬ್ಬರೂ ನೀಡದೇ ಮೋಸ ಮಾಡುತ್ತಿದ್ದೀರ, ಎಂದು ಮತ್ತೆ ನನ್ನ ಗಂಡನನ್ನು ಹೊಡೆಯಲು ಹೋದಾಗ, ನಾನು ತಡೆಯಲು ಹೋದಾಗ ನನ್ನನ್ನು ಬೇವರ್ಶಿ ಮುಂಡೆ ಎಂದು ಬೈದು ನನ್ನ ಸೀರೆ–ಸೆರಗು ಮತ್ತು ತಲೆ ಕೂದಲನ್ನು ಹಿಡಿದು ನಿಮಗೆ ಒಂದು ಗತಿ ಕಾಣಿಸುತ್ತೇನೆಂದು ಬೆದರಿಸಿದನು. ನಂತರ ಅವನಿಂದ ತಪ್ಪಿಸಿಕೊಂಡು ಬಂದೆವು. ನಂತರ ಅವನು ತಮ್ಮನ್ನು ಹಿಂಬಾಲಿಸಿಕೊಂಡು ಬರುತ್ತಿದ್ದನು. ಆಗ ಪೋಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆವು. ಆದರೆ ಆತ ವಕೀಲನಾದ್ದರಿಂದ ಪೊಲೀಸರು ಆ ಪ್ರಕರಣದ ವಿರುದ್ದ ಯಾವ ತನಿಖೆಯನ್ನು ಕೈಗೊಂಡಿಲ್ಲವೆಂದು ತಿಳಿಸಿದ್ದಾರೆ.

ದೌರ್ಜನ್ಯ ಪ್ರಕರಣ–೪

ಹೆಸರು–ಶೋಭಾ
ವಯಸ್ಸು – ೩೮
ಜಾತಿ– ವಿಶ್ವಕರ್ಮ
ಶಿಕ್ಷಣ– ಬಿ.ಎ.
ಉದ್ಯೋಗ– ಅರಣ್ಯ ಇಲಾಖೆಯಲ್ಲಿ ಕೆಲಸ.

ನಿರೂಪಣೆ: ನಾನು ಕುಳ್ಳಪ್ಪ ಸರ್ಕಲ್‌ನಲ್ಲಿ ವಾಸವಾಗಿದ್ದು, ನಾನು ಕರ್ನಾಟಕ ಅರಣ್ಯ ಅಭಿವೃದ್ದಿ ನಿಗಮ ಬೆಂಗಳೂರು ವಿಭಾಗದ ಕಛೇರಿಯಲ್ಲಿ ಕೆಲಸಮಾಡುತ್ತಿದ್ದೇನು. ಕಛೇರಿ ಅಧೀಕ್ಷಕ ಶ್ರೀನಿವಾಸ್

ಆಗಿರುತ್ತಾರೆ. ಇವರು ದಿನ ನಿತ್ಯ ಕೆಲಸ ಮಾಡುವಾಗ ಪಕ್ಕದಲ್ಲಿ ಕುಳಿತು ಕೈ ಹಾಕುವುದು, ಕಾಲಿನಲ್ಲಿ ಕಾಲಿಗೆ ತಗುಲಿಸುವುದು, ಮೊಬೈಲ್‌ನಲ್ಲಿ ಅಶ್ಲೀಲವಾಗಿ ಮಾತನಾಡುತ್ತಾ ಮಾನಸಿಕ ಕಿರುಕುಳ ನೀಡುತ್ತಿದ್ದನು. ಇಂದಲ್ಲ ನಾಳೆ ಸರಿಹೋಗುತ್ತೆಂದು ನಾನು ಸುಮ್ಮನಿದ್ದ ಈ ವಿಚಾರವನ್ನು ಎಂ.ಡಿ. ಮತ್ತು ಮಹಿಳಾ ಸಮಾಜಕ್ಕೆ ತಿಳಿಸಿದ್ದೆನು. ಸದಾಶಿವನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆನು. ಶ್ರೀನಿವಾಸನನ್ನು ಕರೆದು ಈ ರೀತಿ ಮಾಡದಂತೆ ಎಚ್ಚರಿಕೆ ನೀಡಿದರು. ನಂತರ ಶ್ರೀನಿವಾಸನು ನನ್ನ ಮನೆಯ ದೂರವಾಣಿಗೆ ಕರೆಮಾಡಿ ನನ್ನ ಮೇಲೆ ಕಂಪ್ಲೇಂಟ್ ಕೊಡುತ್ತೀಯ ನಿನ್ನನ್ನು ಕೊಲೆ ಮಾಡುತ್ತೇನೆ. ನಿನ್ನ ಪ್ರಾಣ ನನ್ನ ಕೈಯಲ್ಲಿದೆ, ನಿನ್ನ ಮೇಲೆ ಅಟ್ರಾಸಿಟಿ ಕೇಸ್ ದಾಖಲಿಸುವುದಾಗಿ ಹೆದರಿಸಿದನು. ಇದಲ್ಲದೇ ನಂತರದ ದಿವಸಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಗಣಕಯಂತ್ರದಲ್ಲಿ ಗಂಡು ಮತ್ತು ಹೆಣ್ಣಿನ ಬೆತ್ತಲೆಯಲ್ಲಿರುವ ಅಶ್ಲೀಲ ಚಿತ್ರ ಕಂಡುಬಂದವು. ಇದು ಶ್ರೀನಿವಾಸನ ಕೆಲಸವೆಂದು ಅರ್ಥವಾಯಿತು. ನಂತರ ಮತ್ತೆ ದೂರವಾಣಿ ಕರೆ ಮಾಡಿ ೫ ಲಕ್ಷ ರೂಗಳು ಖರ್ಚು ಆದರೂ ಪರವಾಗಿಲ್ಲ ನಿನ್ನನ್ನು ಕೊಲೆ ಮಾಡಿಸುತ್ತೇನೆಂದನು. ಈ ವಿಚಾರವನ್ನು ರಾಷ್ಟ್ರೀಯ ಮಹಿಳಾ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಸುಮಿತ್ರರವರಿಗೆ ತಿಳಿಸಿದೆ. ಅವರು ನನಗೆ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಲು ತಿಳಿಸಿದರು. ಅದರಂತೆ ನಾನೂ ದೂರು ನೀಡಿದೆನು. ನಂತರ ಆತ ನೀನೇನು ದೂರು ಕೊಟ್ಟರೂ ಬೇಲ್ ಮೇಲೆ ಬಿಡಿಸಿಕೊಂಡು ಬರುವುದು ಗೊತ್ತು, ಎಂದು ನನಗೆ ಲೈಂಗಿಕ, ಮಾನಸಿಕ, ಕಿರುಕುಳ ನೀಡಿ ಪ್ರಾಣ ಬೆದರಿಕೆ ಹಾಕಿದ ಬಗ್ಗೆ ಶ್ರೀನಿವಾಸ್ ವಿರುದ್ದ ಕಾನೂನು ಕ್ರಮ ಕೈಗೊಂಡು, ಅಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕೆಂದು ಪೋಲಿಸರಲ್ಲಿ ವಿನಂತಿಸಿಕೊಂಡೆ. ಆದರೂ ಪೊಲೀಸರು ಆತನ ವಿರುದ್ಧ ಯಾವ ಕ್ರಮವನ್ನು ತೆಗೆದುಕೊಂಡಿಲ್ಲದಿರುವುದು ತುಂಬಾ ನೋವಿನ ಸಂಗತಿಯಾಗಿದೆ ಎಂದು ತಿಳಿಸಿರುತ್ತಾರೆ.

ವಿಶ್ಲೇಷಣೆ: ಒಟ್ಟಾರೆಯಾಗಿ ಈ ಸಾರ್ವಜನಿಕ ವಲಯದ ದೌರ್ಜನ್ಯ ಪ್ರಕರಣ ಅಧ್ಯಯನಗಳನ್ನು ಗಮನಿಸಿದಾಗ ನನಗೆ ತಿಳಿದು ಬಂದಿದ್ದೇನೆಂದರೆ ಸಂಘಟಿತ ವಲಯಗಳಲ್ಲಿ ಹೆಚ್ಚು ದೌರ್ಜನ್ಯ ಪ್ರಕರಣಗಳು ನಡೆದಿರುವುದು ಕಂಡುಬರುತ್ತದೆ. ಈ ವಲಯದ ಮಹಿಳೆಯರಿಗೆ ಕಾನೂನಿನ ತಿಳುವಳಿಕೆ ಇದ್ದರೂ ಸಹ ದೌರ್ಜನ್ಯಗಳು ಅವರ ಮೇಲೆ ನಿರಂತವಾಗಿ ನಡೆಯುತ್ತಿರುವುದು ಕಂಡುಬಂದಿದೆ. ಪುರುಷ ಪ್ರಧಾನತೆಯ ಪ್ರಭುತ್ವ, ಅಧಿಕಾರ ಇವೆಲ್ಲವುಗಳು ಸಹ ಹೆಚ್ಚಿನದಾಗಿ ಪುರುಷರ ಕೈಯಲ್ಲಿ ಇರುವುದರಿಂದ ಮಹಿಳೆಯರಿಗೆ ನ್ಯಾಯ ದೊರಕದಿರುವ ಸಂದರ್ಭಗಳೇ ಹೆಚ್ಚಾಗಿವೆ. ಕಾನೂನಿನ ಅರಿವಿದ್ದರೂ ಸಹ ಅದನ್ನು ಜಾರಿಗೊಳಿಸುವಲ್ಲಿ ಪೊಲೀಸ್ ಇಲಾಖೆ ವಿಫಲವಾದಾಗ ಅವರ ವಿರುದ್ದ ಕ್ರಮ ಕೈಗೊಳ್ಳಲು ಆಗದಿರುವ ಅಸಹಾಯಕತೆಯಿಂದ ಮಹಿಳಾ ದೌರ್ಜನ್ಯಗಳು ನಡೆಯುತ್ತಿವೆ ಎಂದು ಈ ಅಧ್ಯಯನದಿಂದ ತಿಳಿದುಬಂದಿದೆ.

------******------

ಅಧ್ಯಾಯ ೭

ಮಹಿಳೆಯರ ವಿರುದ್ಧದ ದೌರ್ಜನ್ಯಕ್ಕೆ ಪರಿಹಾರೋಪಾಯಗಳು

ಅಧ್ಯಾಯ-೭

ಮಹಿಳೆಯರ ವಿರುದ್ಧದ ದೌರ್ಜನ್ಯಕ್ಕೆ ಪರಿಹಾರೋಪಾಯಗಳು

ಮಹಿಳೆಯರ ಮೇಲಿನ ಹಿಂಸೆ ಮತ್ತು ದೌರ್ಜನ್ಯಗಳು ಅನಾದಿ ಕಾಲದಿಂದಲೂ ಕಂಡು ಬಂದಿರುವ ಸಮಸ್ಯೆ, ಇಂದಿನ ಆಧುನಿಕ ಸಮಾಜದಲ್ಲೂ ದೌರ್ಜನ್ಯವು ವಿವಿಧ ಸ್ವರೂಪಗಳನ್ನು ಪಡೆದಿದೆ. ಮಹಿಳೆಯರು ವಿವಿಧ ಅತ್ಯಾಚಾರ, ಹೊಡೆತ, ಒದೆತ, ಅಪಹರಣ, ದುಡಿಯುವ ಸ್ಥಳದಲ್ಲಿ ಮಹಿಳೆಯ ಮೇಲಿನ ದೌರ್ಜನ್ಯ, ವರದಕ್ಷಿಣೆ ಪ್ರಕರಣ, ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಸುಟ್ಟು ಸಾಯಿಸುವುದು, ಕೊಲೆಗಳಾಗಿದ್ದರೆ, ಇದರಿಂದ ಹೆಣ್ಣಿಗೆ ಮಾತ್ರ ಹಾನಿಯಾಗುತ್ತಿರುವುದಲ್ಲದೆ ಇಡೀ ಸಮಾಜಕ್ಕೆ ಅಪಮಾನಕರವಾಗಿದೆ. ಈ ಸಮಸ್ಯೆಯ ಪರಿಹಾರಕ್ಕೆ ಕೆಲವು ಮಾರ್ಗೋಪಾಯಗಳು ಸೂಚಿಸಲಾಗಿದೆ. ಆ ಮಾರ್ಗೋಪಾಯಗಳನ್ನು ಈ ಕೆಳಕಂಡಂತಿವೆ.

೧. ಹೊಂದಾಣಿಕೆ

ವಿವಿಧ ಹಿಂಸೆಗಳಿಗೊಳಗಾದ ಮಹಿಳೆಯರಿಗೆ ಸಾಮಾಜಿಕ ಕಳಂಕ ಅಂಟಿಕೊಳ್ಳುತ್ತದೆ. ಸಮಾಜ ಅಂತವರನ್ನು ದೂರುವಿರಿಸಿ ಸಂಕಷ್ಟಗಳಿಗೊಳಪಡಿಸುತ್ತದೆ. ಒಮ್ಮೆ ಸೂಳೆಯೆನಿಸಿದ, ಅತ್ಯಾಚಾರಕ್ಕೊಳಗಾದ, ಶಿಲಾಪಹರಣವಾದ, ಅಪಹರಣಗೊಂಡ ಹೆಣ್ಣನ್ನು ಸಮಾಜ ತಿರಸ್ಕರಿಸಿದೆ. ಹೀನಾಯವಾಗಿ ಕಾಣುತ್ತದೆ, ಇಂತಹವರು ಹೊಸ ಪಾತ್ರಗಳನ್ನು ನಿರ್ವಹಿಸುವ ಮತ್ತು ಹೊಸ ಜೀವನಕ್ಕೆ ಹೊಂದಿಕೊಳ್ಳುವುದು ತ್ರಾಸದಾಯಕ ಕೆಲಸ. ಹೊಂದಾಣಿಕೆ ಮತ್ತು ಮರು ಹೊಂದಾಣಿಕೆಯ ಹಂತಗಳನ್ನು ಹೊಂದಿವೆ. ಅವುಗಳೆಂದರೆ ಅಘಾತ, ನೋವು ಇವು ಹಿಂಸೆಯ ಸ್ವರೂಪ ಮತ್ತು ವಯಸ್ಸು, ವಿದ್ಯೆ, ಉದ್ಯೋಗ ಮತ್ತು ಅಪಮಾನಗೊಳಿಸುವುದು ಇದು ಕುಟುಂಬ, ರಕ್ತ ಸಂಬಂಧ, ಗೆಳೆಯರ, ಪರಿಚಯಸ್ಥರಿಂದಾಗಬಹುದು ಹಾಗೂ ಹೊಂದಾಣಿಕೆ, ಇದು ಧಾರ್ಮಿಕ ಸಮಾಧಾನ, ಸಾಮಾಜಿಕ ಸವಾಲಿನ ಸ್ವೀಕಾರ ತಟಸ್ಥತೆ ಮತ್ತು ಅನುರಾಗ ಹಾಗೂ ಗುರ್ತಿನ ಬದಲಾವಣೆಯ ಮೂಲಕ ಆಗುತ್ತದೆ.

೨. ಸಾಮಾಜಿಕ ಮತ್ತು ಆರ್ಥಿಕ ಕ್ರಮಗಳು

ಇವು ಮಹಿಳೆಯರ ಅಂತಸ್ತಿನ ಉನ್ನತೀಕರಣ, ಉದ್ಯೋಗವಕಾಶಗಳು, ಹಿಂಸಿಸುವ ಅಪರಾಧಿಗಳಿಗೆ ಶಿಕ್ಷೆ, ಬೆಂಬಲ ಸುರಕ್ಷಿತ, ಆರ್ಥಿಕ ಸಹಾಯ ಮತ್ತು ಮಕ್ಕಳ ರಕ್ಷಣೆ, ವಿಶೇಷ ನ್ಯಾಯಾಲಯಗಳ ಸ್ಥಾಪನೆ, ಸ್ವಯಂ ಸೇವಾ ಸಂಸ್ಥೆಗಳ ಪಾತ್ರ, ಪ್ರಚಾರ, ಸಂಬಂಧಿಕರ ವರ್ತನೆಯಲ್ಲಿನ ಬದಲಾವಣೆ ಮುಂತಾದ ಕ್ರಮಗಳನ್ನು ಒಳಗೊಂಡಿದೆ.

ಅ) ಮಹಿಳೆಯರ ಸ್ಥಾನಮಾನ ಹೆಚ್ಚಿಸುವುದು

ಮಹಿಳೆ ಅಬಲೆ, ಅಸಹಾಯಕಳು, ದುರ್ಬಲಳಾಗಿರುವುದರಿಂದ ಅವಳ ಮೇಲೆ ದೌರ್ಜನ್ಯ ನಡೆಯುತ್ತಿದೆ, ಎನ್ನಲಾದ್ದರಿಂದ ಅವಳ ಸ್ಥಾನಮಾನ ಸುಧಾರಣೆಯಿಂದ ಈ ಸಮಸ್ಯೆಯನ್ನು ಪರಿಹರಿಸಬಹುದೆನ್ನಲಾಗಿದೆ. ಮಹಿಳೆಯರಿಗೆ ಶೈಕ್ಷಣಿಕ, ಆರ್ಥಿಕ, ರಾಜಕೀಯ ಸೌಲಭ್ಯಗಳು, ಉದ್ಯೋಗ ಮತ್ತು ತರಬೇತಿ ಹಾಗೂ ಕಾನೂನಿನ ರಕ್ಷಣೆಯನ್ನು ಒದಗಿಸುವುದರಿಂದ ಅವರ ಸ್ಥಾನಮಾನ ಹೆಚ್ಚಿ ಅವರ ಮೇಲೆ ದೌರ್ಜನ್ಯ ಕಡಿಮೆಗೊಳ್ಳಬಹುದು. ಮಹಿಳೆ ಮೇಲಾಗುವ ದೌರ್ಜನ್ಯ ಮತ್ತು ಹಿಂಸೆಗಳು ಅತಿಯಾದ ಪ್ರಚಾರ ಸುದ್ದಿ ಮಾಧ್ಯಮಗಳಲ್ಲಿ ಕಡಿಮೆಗೊಳ್ಳಬೇಕು. ಇಂತಹ ಪ್ರಚಾರ–ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಸೆನ್ಸಾರ್ ಮಾಡುವ ವ್ಯವಸ್ಥೆಯು ಉಪಕಾರಿಯಾದುದು, ಹಿಂಸೆ ನೀಡುವ ಅಪರಾಧಿಗಳು, ಬಂಧುಗಳು, ಸ್ನೇಹಿತರು ನೆರೆಹೊರೆಯವರನ್ನು ಉಗ್ರ ಶಿಕ್ಷೆಗೊಳಪಡಿಸಬೇಕು.

ಅ) ಸಂಘಟನಾತ್ಮಕ ಕಾರ್ಯ

ಮಹಿಳೆಯರ ಮೇಲಿನ ಹಿಂಸೆ ಮತ್ತು ದೌರ್ಜನ್ಯ ತಡೆಯುವಲ್ಲಿ ಮಹಿಳಾಸಂಘಟನೆಗಳು ಸರ್ಕಾರಿ, ಖಾಸಗೀ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಹಿರಿದು, ಹಿಂಸಿಸುವವರನ್ನು ಸಂಘಟನೆಗಳ ಕಾರ್ಯಶೀಲತೆಯಿಂದ ಕಾನೂನಿಗೆ ಒಪ್ಪಿಸಿ ಹಿಂಸೆಗೊಳಗಾದ ಬೀದಿಪಾಲಾದ ಮಹಿಳೆಯರಿಗೆ ರಕ್ಷಣೆ ಮತ್ತು ವಸತಿಯನ್ನೊದಗಿಸಬೇಕು. ಮಹಿಳಾ ಸಂಘಟನೆಗಳ ಕಾರ್ಯಶೀಲತೆಯಿಂದ ಕಾನೂನಿಗೆ ಒಪ್ಪಿಸಿ ಹಿಂಸೆಗೊಳಗಾಗಿ ಬೀದಿ ಪಾಲಾದ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಪ್ರಬಲವಾಗಿ ಖಂಡಿಸಿ ಪ್ರತಿಭಟಿಸಿ ಅವರಿಗೆ ರಕ್ಷಣೆಯನ್ನೊದಗಿಸಬೇಕು. ಮಾನವ ಹಕ್ಕು ಆಯೋಗ, ಮಹಿಳಾ ಹಕ್ಕು ರಕ್ಷಣಾ ಮಂಡಳಿಗಳು, ಮಹಿಳಾ ಮಂಡಳಿಗಳು– ಸಮತಾ ವೇದಿಕೆ, ಕೇಂದ್ರ ಹಾಗೂ ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳು, ಭಾರತದ ಕ್ರೈಸ್ತ ಯುವತಿಯರ ಸಂಘ, ಕಸ್ತೂರಿಬಾ ಗಾಂಧಿ ಸ್ಮಾರಕ ದತ್ತಿ, ಅಖಿಲ ಭಾರತ ಮಹಿಳಾ ಶಿಕ್ಷಣ ನಿಧಿ, 'ವಿಶ್ವವಿದ್ಯಾಲಯಗಳ ಮಹಿಳೆಯರ ಒಕ್ಕೂಟ, ಭಾರತೀಯ ಮಹಿಳಾ ರಾಷ್ಟ್ರೀಯ ಮಂಡಳಿ, ಅಖಿಲ ಭಾರತ ಮಹಿಳಾ ಸಮ್ಮೇಳನ, ಮುಂತಾದವು ಈ ನಿಟ್ಟಿನಲ್ಲಿ ಸಹಾಯಕವಾಗಿದೆ.

ಆರ್ಥಿಕ ಕಾರ್ಯಕ್ರಮಗಳು

ಮಹಿಳೆಯರು ಆರ್ಥಿಕವಾಗಿ ಅಬಲೆಯರೆನಿಸಿ ಪುಡಿಗಾಸಿಗೂ ತಂದೆ ಅಥವಾ ಗಂಡನ ಎದುರು ಕೈವೊಡ್ಡುವ ಪರಿಸ್ಥಿತಿ ಅವರನ್ನು ಅಸಹಾಯಕರನ್ನಾಗಿ ಗಂಡಿನ ಮರ್ಜಿಗೊಳಡಿಸುತ್ತದೆ. ಮೊಟ್ಟಮೊದಲು ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸಲು ಅವರಿಗೆ ಶಿಕ್ಷಣ, ತರಬೇತಿ, ಉದ್ಯೋಗ, ಉದ್ಯಮಶೀಲತೆ, ಮುಂತಾದ ಸೌಲಭ್ಯಗಳನ್ನು ನೀಡಬೇಕು. ಮಹಿಳೆಯರು ಪುರುಷರ ಸಂಕೋಲೆಯಿಂದ ಬಿಡುಗಡೆಹೊಂದಿ ಸ್ವಾವಲಂಬಿಗಳಾಗಿ ದೌರ್ಜನ್ಯ ರಹಿತರಾಗಬೇಕಾದರೆ ಅವರಿಗೆ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರವನ್ನು ಒದಗಿಸಿಕೊಡಬೇಕು. ಅವರ ಏಳಿಗೆಗಾಗಿ ಆರ್ಥಿಕ ಸಹಾಯ ಒದಗಿಸಬೆಕು. ಕೇಂದ್ರ ಹಾಗೂ ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಸ್ತರಣ ಯೋಜನೆಗಳನ್ನು ಜಾರಿಗೊಳಿಸಿವೆ. ಈ

ಯೋಜನೆಗಳನ್ನು ಅನುಷ್ಠಾನಗೊಳಿಸುವ ಕೇಂದ್ರಗಳನ್ನು ತೆರೆಯಲಾಗಿದೆ. ಪ್ರತಿ ಕೇಂದ್ರದಲ್ಲಿ ಬಾಲವಾಡಿ, ವಯಸ್ಕರ ಶಿಕ್ಷಣ, ಸಾಮಾಜಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶೈಕ್ಷಣಿಕ ವೈದ್ಯಕೀಯ ನೆರವು ನೀಡಲಾಗುತ್ತದೆ. ಕಲೆ, ಕರಕುಶಲತೆ, ಉದ್ಯೋಗ, ತರಬೇತಿ, ಉದ್ಯೋಗಾವಕಾಶಗಳನ್ನು ಒದಗಿಸಿ ಆರ್ಥಿಕ ಸ್ವಾವಲಂಬನೆಯನ್ನು ವೃದ್ಧಿಸಲಾಗುತ್ತದೆ. ಮಹಿಳಾ ಉದ್ಯೋಗಿಗಳಿಗೆ ಹಾಸ್ಟಲ್ ಸೌಲಭ್ಯ ಒದಗಿಸಲಾಗಿದೆ.

ವಿಶೇಷ ನ್ಯಾಯಾಲಯಗಳ ಸ್ಥಾಪನೆ

ಮಹಿಳೆಯರ ಮೇಲಿನ ಹಿಂಸೆ ಮತ್ತು ದೌರ್ಜನ್ಯ ಪ್ರಕರಣಗಳನ್ನು ವ್ಯವಹರಿಸಲು ವಿಶೇಷ ಮಹಿಳಾ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಈಗಿರುವ ಕುಟುಂಬ ನ್ಯಾಯಾಲಯಗಳು ವಿವಾಹ ವಿಚ್ಛೇದನ ಪ್ರಕರಣಗಳನ್ನು ಮಾತ್ರ ವ್ಯವಹರಿಸುತ್ತಿವೆ, ಆದರೆ ಮಹಿಳೆಯರ ಮೇಲಿನ ಹಿಂಸೆ, ದುರುಪಯೋಗ, ದೌರ್ಜನ್ಯ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಿ ಅಂತಹ ಮಹಿಳೆಯರಿಗೆ ನ್ಯಾಯ ಮತ್ತು ರಕ್ಷಣೆಯನ್ನು ಒದಗಿಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ವಿಶೇಷ ಮಹಿಳಾ ನ್ಯಾಯಾಲಯಗಳ ಸ್ಥಾಪನೆ ಅಗತ್ಯವಿದೆ. ಈ ನ್ಯಾಯಾಲಯಗಳಿಗೆ ಸಾಧ್ಯವಾದ ಮಟ್ಟಿಗೆ ಮಹಿಳಾ ನ್ಯಾಯಾಧೀಶರು ಮಹಿಳಾ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿರಲು ಅವಕಾಶ ಕಲ್ಪಿಸಬೇಕು. ಇಂತಹ ನ್ಯಾಯಾಲಯಗಳಲ್ಲಿ ಹಿಂಸೆ, ದೌರ್ಜನ್ಯಕ್ಕೊಳಗಾದ ಮಹಿಳೆಯರು ನಿರ್ಭಯರಾಗಿ, ನ್ಯಾಯ ದೊರಕಿಸಿಕೊಳ್ಳುವಲ್ಲಿ ಸಾಧ್ಯವಾಗುತ್ತದೆ. ಮಹಿಳೆಯರಿಗೆ ಸರ್ಕಾರವೇ ಉಚಿತ ಕಾನೂನಿನ ನೆರವು ಒದಗಿಸಿ ನ್ಯಾಯಾಲಯದ ವೆಚ್ಚವನ್ನು ಕಡಿಮೆಗೊಳಿಸಬೇಕು.

ಮಹಿಳಾ ಸಂಘಟನೆಗಳ ಸಶಕ್ತೀಕರಣ

ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸಾಚಾರದ ಪ್ರಕರಣಗಳನ್ನು ನ್ಯಾಯಾಲಯ, ಪೋಲೀಸ್ ಠಾಣೆಯಲ್ಲಿ ಹಾಗೂ ಸರ್ಕಾರಿ ಇಲಾಖೆಗಳಲ್ಲಿ ವ್ಯವಹರಿಸಿ ನ್ಯಾಯ ಒದಗಿಸಿಕೊಟ್ಟು, ದೌರ್ಜನ್ಯ ಹಿಂಸಾಚಾರ ತಡೆಯುವಂತೆ ಮಾಡಲು ಮಹಿಳಾ ಸಂಘಟನೆಗಳನ್ನು ಬಲಪಡಿಬೇಕು. ಅವುಗಳ ಸಂಖ್ಯೆಯನ್ನು ಹೆಚ್ಚಿಸಿ ಮಾನ್ಯತೆಯನ್ನು ನೀಡಿ ಪೋಲೀಸ್ ನೆರವು ದೊರೆಯುವಂತೆ ಮಾಡಬೇಕು. ಈ ಸಮಸ್ಯೆ ನೊಂದ ಮಹಿಳೆಯರು ವೈಯಕ್ತಿಕ ನೆಲೆಯಲ್ಲಿ ಹೋರಾಡುವವರು ಮೊದಲು ಸಂಘಟಿತರಾಗಿ ಹೋರಾಡಿದಲ್ಲಿ ಅದಕ್ಕೊಂದು ಬಲ ದೊರೆತು ಕಾರ್ಯ ಸಾಧನೆಯಾಗುತ್ತದೆ.

ಸಾರ್ವಜನಿಕರ ಮತ್ತು ಪೋಷಕರ ಸಹಕಾರ

ಸಾರ್ವಜನಿಕರ ಅಸಹಕಾಗ ಮತ್ತು ಪೋಷಕರ ನಿರ್ಲಕ್ಷ್ಯವು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಒಂದು ಕಾರಣ, ಸಾರ್ವಜನಿಕರು ಅಥವಾ ಹೆಣ್ಣಿನ ತಂದೆ ತಾಯಂದಿರು ಇಂತಹ ದೌರ್ಜನ್ಯವನ್ನು ಪ್ರತಿಭಟಿಸಿ ನಿಂತರೆ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ಸಾರ್ವಜನಿಕರಲ್ಲಿ ಎರಡೂ ಕಡೆ ತಂದೆ– ತಾಯಂದಿರು ಹಿತೈಶಿಗಳು ಸಂಬಂಧಿಗಳಲ್ಲಿ ಅರಿವನ್ನುಂಟು ಮಾಡಿ ಹೆಣ್ಣಿನ ತಂದೆ–ತಾಯಂದಿರು ಆಶ್ರಯ ನೀಡಬೇಕು. ಅಂತೆಯೇ ಗಂಡಿನ ತಂದೆ ತಾಯಂದಿರು ತಮ್ಮ ಗಂಡು ಮಕ್ಕಳನ್ನ ನಿಯಂತ್ರಿಸಿ

ಸೊಸೆಯಂದಿರ ಮೇಲೆ ಶೋಷಣೆಯಾಗದಂತೆ ನಿಗಾ ವಹಿಸಬೇಕು. ಈ ನಿಟ್ಟಿನಲ್ಲಿ ಕೌಟುಂಬಿಕ ಸಲಹಾ ಕೇಂದ್ರಗಳು ಮತ್ತು ವೈವಾಹಿಕ ಸಲಹಾ ಮಂಡಳಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು. ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣ ಮತ್ತು ನೈತಿಕ ಶಿಕ್ಷಣದ ಭೋದನೆಯು ಹೆಚ್ಚು ಉಪಯುಕ್ತವಾದುದು.

ಮಹಿಳೆಯರ ಸಶಕ್ತಿಕರಣ

ಬಹುಪಾಲು ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಹಿಂಸಾಚಾರಕ್ಕೆ ಮಹಿಳೆಯರ ಅಸಹಾಯಕತೆ, ನಿರುತ್ಸಾಹ, ಕೀಳರಿಮೆ. ಅಸಬಲತೆ. ಆತ್ಮಸ್ಥೈರ್ಯವಿಲ್ಲದಿರುವುದು ಕಾರಣ. ಎದ್ದರೆ ಕಾಲಿಡಿಯುವುದು, ಬಿದ್ದರೆ ಜುಟ್ಟು ಹಿಡಿಯುವುದು ಎಂಬ ನಾಣ್ಣುಡಿಯಂತೆ ಹೆದರಿದರೆ ತುಳಿಯುತ್ತಾರೆ. ಮಹಿಳೆಯರು ತಾವು ಪುರುಷರಿಗೆ ಸರಿಸಮಾನರು, ಸರ್ವ ಸ್ವತಂತ್ರರು ಸಬಲರು ಎಂದು ನಿರೂಪಿಸಿ ಪುರುಷರ ದೌರ್ಜನ್ಯವನ್ನು ಎದುರಿಸಲು ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ಮಹಿಳೆಯರಿಗೆ ಅವರ ಹಕ್ಕು ಭಾಧ್ಯತೆಗಳ ಅರಿವನ್ನುಂಟು ಮಾಡಲು ಶಿಕ್ಷಣ ನೀಡಬೇಕು. ಹಕ್ಕು ಭಾದ್ಯತೆ ಮತ್ತು ಸಮಾನತೆಯನ್ನು ಪಡೆಯಲು ಕಾನೂನಿನ ಅರಿವು ಮತ್ತು ಸಾಮಾನ್ಯ ಜ್ಞಾನದ ಭೋದನೆ ಅಗತ್ಯ. ಒಲಿದರೆ ನಾರಿ ಮುನಿದರೆ ಮಾರಿ ಎನ್ನುವಂತೆ ಮಹಿಳೆಯರು ಇಂದಿನ ಪರಿಸ್ಥಿತಿಯಲ್ಲಿ ಮಾರಿಗಳಾಗಬೇಕು. ಉದಾ: ಹುಡುಗರು ಹುಡುಗಿಯರನ್ನು ಚುಡಾಯಿಸಿದಾಗ ತಲೆ ತಗ್ಗಿಸಿ ನಡೆದರೆ ಅದು ಇನ್ನೂ ಹೆಚ್ಚುತ್ತದೆ ಅದರ ಬದಲು ಹಿಂತಿರಿಗಿ ಕೆಂಗಣ್ಣು ಬಿಟ್ಟರೆ ಹುಡುಗರು ಪರಾರಿಯಾಗುತ್ತಾರೆ ಈಗೆ ಮಹಿಳೆಯರು ಸಶಕ್ತರಾಗಬೇಕಾಗಿದೆ.

ಕಾನೂನು ಕ್ರಮ

ಮಹಿಳಾಭಿವೃದ್ದಿ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಹಿಂಸೆ ತಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾನೂನು ಕ್ರಮಗಳನ್ನು ಕೈಗೊಂಡಿದೆ. ೧೯೬೧ ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದು ಇದಕ್ಕೆ ೧೯೮೬ ರಲ್ಲಿ ತಿದ್ದುಪಡಿ ತರಲಾಯಿತು. ಈ ಕಾನೂನನ್ನು ಈಗ ಕಟ್ಟುನಿಟ್ಟಾಗಿ ಜಾರಿಗೊಳಿಸಿ ವರದಕ್ಷಿಣೆ ಪೀಡಿಕೆ ಮತ್ತು ವರದಕ್ಷಿಣೆ ಹಿಂಸೆಗೆ ಸಂಬಂಧಿಸಿದಂತೆ ಪತ್ನಿ ಅಥವಾ ಪತ್ನಿಯ ಕಡೆಯವರು ದೂರು ನೀಡಿದರೆ ಕೇವಲ ಆ ದೂರಿನ ಆಧಾರದ ಮೇಲೆ ತೀವ್ರ ಕ್ರಮ ಕೈಗೊಳ್ಳುತ್ತಾರೆ. ಆದರೆ ಈ ಕಾಯ್ದೆಯು ಮಹಿಳೆಯರ ನಿರುತ್ಸಾಹದಿಂದ ಪರಿಣಾಮಕಾರಿಯಾಗಿ ಜಾರಿಗೊಳ್ಳಲಾಗುತ್ತಿಲ್ಲ. ಬಹುತೇಕ ಆರೋಪಿಗಳು ಬಂದ ಮುಕ್ತರಾಗುತ್ತಿದ್ದಾರೆ. ವರದಕ್ಷಿಣೆ ಹಿಂಸೆ ಮತ್ತು ಕಿರುಕುಳದ ವಿರುದ್ದ ಭಾರತೀಯ ದಂಡ ಸಂಹಿತೆಗೆ ಮತ್ತೊಂದು ವಿಧಿಯನ್ನು ೧೯೮೩ ರಲ್ಲಿ ಮತ್ತು ವರದಕ್ಷಿಣೆ ಸಾವಿನ ಬಗ್ಗೆ ೧೯೮೬ ರಲ್ಲಿ ಇನ್ನೊಂದು ಹೊಸ ವಿಧಿಯನ್ನು ಸೇರಿಸಲಾಯಿತು. ವಿವಾಹಿತ ಮಹಿಳೆಯರು ವಿವಾಹವಾದ ೭ ವರ್ಷಗಳ ಒಳಗೆ ಹಿಂಸೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದನ್ನು ಮತ್ತು ವರದಕ್ಷಿಣೆಗಾಗಿ ಹೆಂಡತಿಯನ್ನು ಹಿಂಸಿಸಿ ಸಾವಿಗೊಳಪಡಿಸುವುದನ್ನು ಕಡಿಮೆ ಮಾಡಲು ಪುರಾವೆ (ಸಾಕ್ಷಿ) ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ೧೯೫೬ರ ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯವಹಾರ ನಿಗ್ರಹಣ ಕಾಯ್ದೆಯು

ಹೆಣ್ಣುಮಕ್ಕಳನ್ನು ವೇಶ್ಯವಾಟಿಕೆಗಳಿಗೆ ದೂಡುವುದನ್ನು ನಿಷೇಧಿಸಿದೆ. ೧೯೮೬ ಮಹಿಳೆಯರ ಅಸಭ್ಯ ಪ್ರತಿನಿಧಿಸುವಿಕೆ ನಿಷೇಧ ಕಾಯ್ದೆಯು ಸಮೂಹ ಮಾಧ್ಯಮ-ಟಿವಿ, ರೇಡಿಯೋ, ಪತ್ರಿಕೆಗಳು, ಜಾಹೀರಾತು, ಪುಸ್ತಕ, ಮುಂತಾದವುಗಳಲ್ಲಿ ಮಹಿಳೆಯರನ್ನು ಅಸಭ್ಯವಾಗಿ ದುರುಪಯೋಗಪಡಿಸುವುದು ಹಾಗೂ ಅಶ್ಲೀಲವಾಗಿ ಪ್ರದರ್ಶಿಸುವುದನ್ನು ನಿಷೇಧಿಸುತ್ತದೆ. ೧೯೯೪ ರ ಜನನ ಪೂರ್ವಲಿಂಗ ನಿರ್ಧಾರಗಳ ತಂತ್ರಜ್ಞಾನ (ನಿಯಂತ್ರಣ ಮತ್ತು ದುರ್ಬಳಕೆ) ನಿಷೇಧ ಕಾನೂನನ್ನು ಜಾರಿಗೊಳಿಸಿದೆ. ಭ್ರೂಣಲಿಂಗ ಲಿಂಗಪತ್ತೆ ಹಚ್ಚಲು ಅಲ್ಟ್ರಾಸ್ಕ್ಯಾನಿಂಗ್ ಉಪಕರಣವನ್ನು ಬಳಸಬಾರದೆಂದು ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ. ಇಂತಹ ಕೇಂದ್ರಗಳು ಕಡ್ಡಾಯವಾಗಿ ನೋಂದಣಿ ಮಾಡಿಸಿಕೊಂಡು ಎಲ್ಲಾ ಪ್ರಕರಣಗಳ ದಾಖಲಾತಿಯನ್ನಿಡಬೇಕಾಗಿದೆ. ಈ ಕಾನೂನನ್ನು ಉಲ್ಲಂಘಿಸಿದವರಿಗೆ ೩ ವರ್ಷ ಕಠಿಣ ಶಿಕ್ಷೆ ಮತ್ತು ೧೦ ಸಾವಿರ ರೂಪಾಯಿ ದಂಡ ವಿಧಿಸಲಾಗುವುದು. ಈ ಅಪರಾಧವನ್ನು ಮತ್ತೆ ಮತ್ತೆ ಎಸಗಿದವರಿಗೆ ೫ ವರ್ಷ ಸಜೆ ಮತ್ತು ೫೦ ಸಾವಿರ ರೂಪಾಯಿ ದಂಡ ವಿಧಿಸಲಾಗುವುದು.

ಸಾಂತ್ವನ

ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ, ಮನೆಯೊಳಗಿನ ಹಿಂಸೆಗಳಿಗೆ ಹಾಗೂ ಕಠಿಣ ಪರಿಸ್ಥಿತಿಗಳಲ್ಲಿ ಬದುಕುತ್ತಿರುವ ಮಹಿಳೆಯರಿಗೆ ಈ ಸಾಂತ್ವಾನ ಯೋಜನೆಯಡಿಯಲ್ಲಿ ಸಹಾಯ ದೊರಕುತ್ತದೆ. ಈ ಯೊಜನೆಯಡಿಯಲ್ಲಿ ತುರ್ತು ಸಹಾಯದಿಂದ ಹಿಡಿದು ಪುನರ್ವಸತಿಯವರೆಗೂ ಅವಕಾಶ ನೀಡಲಾಗುತ್ತದೆ. ಈ ಮೂಲಕ ಸಂಕಷ್ಟಕ್ಕೀಡಾದ ಮಹಿಳೆಯರಲ್ಲಿ ಆತ್ಮವಿಶ್ವಾಸ ಹಾಗೂ ಸ್ವಾವಲಂಬನಾ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಲು ನೆರವು ನೀಡುತ್ತದೆ. ಇಂಥ ಮಹಿಳೆಯರ ಪುನರ್ವಸತಿಗಾಗಿ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಕೆಲವು ಆಯ್ದ ತಾಲೂಕು ಕೇಂದ್ರಗಳಲ್ಲಿ ಸಾಂತ್ವಾನ ಕೇಂದ್ರಗಳನ್ನು ತೆರೆಯಲಾಗಿದ್ದು ಪ್ರಸುತ್ತ ಇಂತಹ ೪೪ ಕೇಂದ್ರಗಳನ್ನು ಒಳಗೊಂಡಿದೆ.

ಸೌಲಭ್ಯ: ಎಲ್ಲಾ ಕೇಂದ್ರಗಳಲ್ಲೂ ೨೪ ಗಂಟೆ ಉಚಿತ ದೂರವಾಣಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ತುರ್ತು ಅಗತ್ಯವಿರುವ ಮಹಿಳೆಯರಿಗೆ ಪೊಲೀಸರ ಮೂಲಕ ಅಥವಾ ಅವರ ಸಮಸ್ಯೆ ಸ್ವರೂಪವನ್ನು ಆದರಿಸಿ ಆಯಾ ಇಲಾಖೆಗಳ ಮೂಲಕ ಸಹಾಯ ಒದಗಿಸಲಾಗುತ್ತದೆ.

೧. ಇಂತಹ ಮಹಿಳೆಯರಿಗೆ ತಾತ್ಕಾಲಿಕ ವಸತಿ ಗೃಹಗಳಿರುತ್ತವೆ

೨. ಸಮಾಲೋಚನಾ ಸ್ೇವೆ ಮತ್ತು ಕಾನೂನು ಸೇವೆಯನ್ನು ಒದಗಿಸಲಾಗುತ್ತದೆ. ಅಗತ್ಯವಿರುವ ಮಹಿಳೆಯರಿಗೆ ಜಿಲ್ಲಾ ಸಮಿತಿಯ ತೀರ್ಮಾನವನ್ನು ಆಧರಿಸಿ ರೂ ೨೦೦/- ಗಳಿಂದ ೧೦,೦೦೦/- ವರೆಗೆ ನಗದು ಪರಿಹಾರವನ್ನು ನೀಡಲಾಗುತ್ತದೆ.

೩. ಆಕಸ್ಮಿಕ ಸಂಕಷ್ಟಕ್ಕೆ ಈಡಾದ ಮಹಿಳೆಯು ಮರಣ ಹೊಂದಿದ ಪಕ್ಷದಲ್ಲಿ ಆಕೆಯ ಮಕ್ಕಳ ಶಿಕ್ಷಣ ಮತ್ತು ಪುನರ್ವಸತಿಗಾಗಿ ರೂ. ೫೦೦೦/- ರಿಂದ ೧೦,೦೦೦/- ದವರೆಗೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ

ಇಡಿಸಲಾಗುವುದು. ಇಂತಹ ಮಹಿಳೆಯರಿಗೆ ಸಾಂತ್ವಾನ ಕೇಂದ್ರ ಶಿಫಾರಸ್ಸನ್ನು ಆಧರಿಸಿ ಕರ್ನಾಟಕ ರಾಜ್ಯ ಅಭಿವೃದ್ದಿ ನಿಗಮದ ಸಹಾಯದೊಂದಿಗೆ ವಿವಿಧ ಕೌಶಲ್ಯಗಳ ವೃತ್ತಿ ತರಬೇತಿಯನ್ನು ನೀಡಿ ಸ್ವಯಂ ಉದ್ಯೋಗಕ್ಕಾಗಿ ವಿವಿಧ ಕಾರ್ಯಕ್ರಮಗಳ ಸಹಕಾರ ನೀಡಲಾಗುತ್ತದೆ. ಅತ್ಯಾಚಾರ, ಲೈಂಗಿಕ ಕಿರುಕುಳ ವರದಕ್ಷಿಣೆ ಮತ್ತು ಇತ್ಯಾದಿ ಸಂಕಷ್ಟಕ್ಕೀಡಾದ ಮಹಿಳೆಯರಿಗೆ ಸಾಂತ್ವಾನ ಬಹಳ ಉಪಯುಕ್ತವಾಗಿದೆ.

ಲೈಂಗಿಕ ಕಿರುಕುಳ ವಿರುದ್ದ ರಕ್ಷಣಾ ಮಸೂದೆ–೨೦೧೦

ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗಾಗುವ ಲೈಂಗಿಕ ಕಿರುಕುಳ ವಿರುದ್ಧ ಅವರ ಸುರಕ್ಷತೆಗಾಗಿ ಒಂದು ಸುಧಾರಿತ ಮಸೂದೆಯನ್ನು ತರುವ ಆಲೋಚನೆ ಕೇಂದ್ರ ಸರ್ಕಾರಕ್ಕೆ ದೀರ್ಘಕಾಲದಿಂದಲೂ ಇತ್ತು. ಸಾಕಷ್ಟು ಚರ್ಚೆ ಸಮಾಲೋಚನೆ ನಂತರ "ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ವಿರುದ್ಧ ಮಹಿಳೆಯರ ಸುರಕ್ಷೆ ಮಸೂದೆ ೨೦೧೦" ಎಂಬ ಶೀರ್ಷಿಕೆಯ ಕರಡು ಮಸೂದೆಗೆ ಕೇಂದ್ರ ಸಚಿವ ಸಂಪುಟ ೨೦೧೧ ನವೆಂಬರ್ ೪ ರಂದು ಒಪ್ಪಿಗೆ ನೀಡಿದ್ದು. ಇನ್ನೂ ಸಂಸತ್ತಿನಲ್ಲಿ ಮಂಡಿಸಬೇಕಾಗಿದೆ. ಮೂಲ ಮಸೂದೆಯನ್ನು ೨೦೦೪ ರಲ್ಲೆ ಸಿದ್ದ ಪಡಿಸಲಾಗಿತ್ತು. ೨೦೧೦ ರ ಈ ಕರಡು ಮಸೂದೆ ೨೦೦೪ ರ ಆ ಮಸೂದೆಯ ಹೊಸ ಅಕಾರವಾಗಿದೆ. ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಪುರುಷ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳು ಕಿರುಕುಳ ನೀಡುವುದನ್ನು ತಡೆಯಲು ಸುಪ್ರೀಂಕೋರ್ಟ್ ೧೯೯೭ ರ "**ವಿಶಾಖ ವಿರುದ್ದ ರಾಜಸ್ಥಾನ**" ಪ್ರಕರಣದಲ್ಲಿ ತಿಳಿಸಿತ್ತು.

ವಿಶಾಖ, ಲಿಂಗ ಸಮಾನತೆಗಾಗಿ ಹೋರಾಡುವ ಒಂದು ಸರ್ಕಾರೇತರ ಸಂಸ್ಥೆಗೆ ಸಂವಿಧಾನ ವಿಧಿ ೨೧ ರ ಅಡಿಯಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿಯೊಂದನ್ನು ಸಲ್ಲಿಸಿತ್ತು. ರಿಟ್ ಸಲ್ಲಿಸುವುದರ ಹಿಂದಿನ ಕಾರಣ ೧೯೯೨ ರಲ್ಲಿ ರಾಜಸ್ಥಾನದಲ್ಲಿ ಸಾಥಿನ್ ಎಂಬ ಮಹಿಳಾ ಕಾರ್ಯಕರ್ತೆ ಮೇಲೆ ನಡೆದ ಅತ್ಯಾಚಾರ ಒಂದು ಬಾಲ್ಯವಿವಾಹವನ್ನು ನಿಲ್ಲಿಸಲು ಸಾಥಿನ್ ಮಧ್ಯೆ ಪ್ರವೇಶ ಮಾಡಿದ್ದರು. ಅವರ ಮೇಲೆ ಅತ್ಯಾಚಾರ ನಡೆದ ಆರೋಪಿಗಳನ್ನು ವಿಚಾರಣಾ ನ್ಯಾಯಾಲಯ ಖುಲಾಸೆಗೊಳಿಸಿತ್ತು. ಮಹಿಳಾ ಸಂಘಟನೆಗಳು ಅದನ್ನು ಪ್ರತಿಭಟಿಸಿದ ಪರಿಣಾಮವಾಗಿ ಆರೋಪಿಗಳ ಬಿಡುಗಡೆ ಹೈಕೋರ್ಟ್ ತಡೆಯಾಜ್ಞೆ ನೀಡಿತು.

ಈ ಕರಡು ಮಸೂದೆಯನ್ನು ಮುಂಬರುವ ಸಂಸತ್ತಿನ ಚಳಿಗಾಲ ಅಧಿವೇಶನದಲ್ಲಿ ಮಂಡಿಸಲು ಸಚಿವ ಸಂಪುಟ ದಾರಿ ಮಾಡಿಕೊಟ್ಟಿದೆ. ೨.ಜಿ ಸ್ಪೆಕ್ಟ್ರಂ ಹಗರಣದಿಂದಾಗಿ ಮಸೂದೆಯನ್ನು ಮಂಡಿಸಲಾಗಲಿಲ್ಲ. ಮಸೂದೆ ಮಂಡಿಸುವುದು ವಿಳಂಭವಾದರೆ ಅದರಲ್ಲಿ ಲೋಪದೋಷಗಳು ಸೇರಿಕೊಳ್ಳುತ್ತವೆ ಎಂಬುದು ಮಹಿಳಾ ಸಂಘಟನೆಗಳ ಆತಂಕವಾಗಿದೆ. ಉದ್ದೇಶಿತ ಮಸೂದೆ ಕೆಲಸದ ಸ್ಥಳದಲ್ಲಿ ಸುರಕ್ಷಿತ ವಾತಾವರಣ ನಿರ್ಮಿಸಲು ಅನುವು ಮಾಡಿಕೊಡುತ್ತದೆ. ಮತ್ತು ಈ ಕರುಡು ಮಸೂದೆ ಕಾಯ್ದೆಯಾಗಿ ಜಾರಿಗೆ ಬಂದರೆ

ಮಹಿಳಾ ಉದ್ಯೋಗಿಗೆ ಕಿರುಕುಳ ನಡೆಯುವ ಪುರುಷ ಉದ್ಯೋಗಿ ಎಂದು ಸಾಬೀತಾದರೆ ೫೦,೦೦೦/- ರೂ ದಂಡ ತೆರಬೇಕಾಗುತ್ತದೆ.

ಲೈಂಗಿಕ ಕಿರುಕುಳದ ವ್ಯಾಖ್ಯೆ : ಕರುಡು ಮಸೂದೆಯಲ್ಲಿ ಲೈಂಗಿಕ ಕಿರುಕುಳದ ವ್ಯಾಖ್ಯೆ ೧೯೯೭ ರಲ್ಲಿ ಸುಪ್ರೀಂಕೋರ್ಟ್ ವಿವರಿಸಿದ ಪ್ರಕಾರ ಇದೆ. ವ್ಯಾಖ್ಯೆಯ ಯಾವುದೇ ಶಾರೀರಿಕ ಸಂಬಂಧ ಮತ್ತು ಮುಂಧೋರಣೆ ಒತ್ತಾಯ, ಮನವಿ, ಅನಪೇಕ್ಷಿತ ಲೈಂಗಿಕ ಸಂಪರ್ಕ, ಸಂಜ್ಞೆ, ಮಾತಿನ ಸಂಪರ್ಕ ಇತ್ಯಾದಿಗಳನ್ನು ಒಳಗೊಂಡಿದೆ. ಈ ಉದ್ದೇಶಿತ ಮಸೂದೆಯ ಮಹಿಳೆಯ ಉದ್ಯೋಗಕ್ಕೆ ಎದುರಾಗುವ ಭೀತಿಯನ್ನು ನಿವಾರಿಸುವ ಭರವಸೆಯನ್ನು ಮಾನ್ಯ ಮಾಡುತ್ತದೆ. ಇದು ಮಹಿಳಾ ಉದ್ಯೋಗಿಗಳಷ್ಟೇ ಅಲ್ಲದೆ ಕಕ್ಷಿದಾರರಾಗಿ ಹೋದವರಿಗೂ ಲೈಂಗಿಕ ರಕ್ಷಣೆ ನೀಡುತ್ತದೆ. ಗ್ರಾಹಕರಿಗೆ ಖಾಯಂ ಅಲ್ಲದ ಉದ್ಯೋಗಿಗಳಿಗೆ ಮತ್ತು ದಿನಗೂಲಿಗಳಿಗೆ ಸಹ ಲೈಂಗಿಕ ಕಿರುಕುಳದಿಂದ ರಕ್ಷಣೆ ನೀಡುತ್ತದೆ. ಮೊದಲಿನ ಕರಡು ಮಸೂದೆಯ ಪ್ರಕಾರ ಒಬ್ಬ ಉದ್ಯೋಗಿ ಎಂದರೆ ಒಂದು ಕೆಲಸದ ಸ್ಥಳದಲ್ಲಿ ನಿಯಮಿತ, ತಾತ್ಕಾಲಿಕ, ದಿನಗೂಲಿ ಆಧಾರಿತ, ಪರೋಕ್ಷವಾಗಿ ಅಥವಾ ಏಜೆಂಟರ ಮೂಲಕ ಅಥವಾ ಕಾಂಟ್ರಾಕ್ಟರ್ ಮೂಲಕ, ಉದ್ಯೋಗ ಪರಿಯ ಒಪ್ಪಿಗೆಯಿಂದ ಅಥವಾ ಒಪ್ಪಿಗೆ ಇಲ್ಲದೆ, ವೇತನದ ಮೇಲೆ ವೇತನವಿಲ್ಲದೇ ಸ್ವ ಇಚ್ಚೆಯಿಂದ ಸಹೋದ್ಯೋಗಿ, ಗುತ್ತಿಗೆ ಕೆಲಸಗಾರ, ಪ್ರೊಬೇಷನರ್, ಟ್ರೇನಿ, ಅಪ್ರೆಂಟೀಸ್ ದಿನಗೂಲಿ ಎಂದು ಯಾವುದೇ ಹೆಸರಿನಿಂದ ಕರೆಯಬಹುದು.

ಹೊಸ ವ್ಯಾಖ್ಯಾನ ಕರುಡು ಮಸೂದೆಯಲ್ಲಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ರೋಗಿಗಳ ಮತ್ತು ಸಂಘಟಿತ ವಲಯದ ಮಹಿಳೆಯರು ಮತ್ತು ಮನೆಗೆಲಸದವರಿಗಾಗಿ ಒಂದು ಹೊಸ ವ್ಯಾಖ್ಯಾನಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ಹೆಚ್ಚಿನ ವಿಶೇಷಗಳು ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಸಿದ್ದಪಡಿಸಿ, ಕರುಡು ಮಸೂದೆಗಳಲ್ಲಿಯೂ ಇವೆ. ರಾಷ್ಟ್ರೀಯ ಮಹಿಳಾ ಆಯೋಗದ ಕರುಡು ಮಸೂದೆಯ ಇತ್ತೀಚಿನ ಪ್ರತಿರೂಪದಲ್ಲಿ ೨೦೧೧ ಜನವರಿಯಲ್ಲಿ ವ್ಯಾಪಕ ಬದಲಾವಣೆ ಮಾಡಲಾಗಿದೆ, ಸಂಶೋಧನಾ ವಿದ್ಯಾರ್ಥಿಗಳು ಮತ್ತು ವಿಧ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ. ಮಹಿಳಾ ಮತ್ತು ಮಕ್ಕಳಾ ಕಲ್ಯಾಣ ಇಲಾಖೆಯು ಸಿದ್ದಪಡಿಸಿದ ಮಸೂದೆಯಲ್ಲಿ ಮನೆಗೆಲಸದ ಕೆಲಸಗಾರರನ್ನು ಉದ್ಯೋಗಿಗಳ ಹೆಸರಿನಲ್ಲಿ ಸೇರಿಸಲಾಗಿದೆ. ಕೆಲಸದ ಸ್ಥಳವೆಂದರೆ ಮನೆ ಅಥವಾ ವಾಸಸ್ಥಾನ ಎಂದು ಪರಿಗಣಿಸಲಾಗಿದೆ. ಲೈಂಗಿಕ ಕಿರುಕುಳದ ವ್ಯಾಖ್ಯೆಯೂ ಕೂಡ ಕೆಲವು ಬದಲಾವಣೆಗಳಿಗೆ ಒಳಗಾಗಿದೆ. ಸುಪ್ರೀಂ ಕೋರ್ಟಿನ ಮಾರ್ಗ ಸೂಚಿಯಲ್ಲಿರುವ ವ್ಯಾಖ್ಯೆಯ ಪ್ರಕಾರ ಲೈಂಗಿಕ ಕಿರುಕುಳದ ವ್ಯಾಖ್ಯೆಯಲ್ಲಿ ಅನಪೇಕ್ಷಿತ ಲೈಂಗಿಕ ಅಪೇಕ್ಷೆ, ವರ್ತನೆ, ದೈಹಿಕ ಸಂಪರ್ಕ, ಲೈಂಗಿಕ ಸಂಪರ್ಕದ ಗುರುತುಗಳು, ಲೈಂಗಿಕ ಸಂಪರ್ಕಕ್ಕಾಗಿ ಒತ್ತಾಯ, ಮನವಿ ಅಥವಾ ವರ್ತನೆ, ಬಾಯಿ ಮಾತಿನ ಅಥವಾ ಲಿಖಿತ, ಭೌತಿಕ, ಗ್ರಾಫಿಕ್, ಎಲೆಕ್ಟ್ರಾನಿಕ್ ಅಥವಾ ಯಾವುದೇ ಕ್ರಿಯೆ ಒಳಗೊಳ್ಳುತ್ತವೆ.

ಮಸೂದೆಯು ಲೈಂಗಿಕ ಕಿರುಕುಳ ನಕಲಿ ದೂರುಗಳ ವಿರುದ್ಧ ಆರೋಪಿಗಳಿಗೆ ರಕ್ಷಣೆಯನ್ನು ನೀಡುತ್ತದೆ. ಆದರೆ ಆರೋಪಿಗಳು ತಮ್ಮ ಮೇಲಿನ ಆರೋಪಗಳನ್ನು ಸುಳ್ಳು ಎಂದು ಸಾಬೀತು ಮಾಡಲು ಸಾಕಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗುತ್ತದೆ. ಇದಕ್ಕೆ ಪ್ರತಿಕ್ರಿಯಿಸಿರುವ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ ಸಂಸತ್ತಿನಲ್ಲಿ ಮಸೂದೆ ಮಂಡಿಸುವ ಕೇಂದ್ರ ಸಕಾರ ನಿರ್ಣಯವನ್ನು ಸ್ವಾಗತಿಸಿದೆ. ಲೈಂಗಿಕ ಕಿರುಕುಳದ ವಿರುದ್ಧ ದೂರುಗಳನ್ನು ನೀಡುವವರಿಗೆ ಶಿಕ್ಷೆ ವಿಧಿಸುವುದು ವಿಶಾಖಾ ಪ್ರಕರಣದ ತೀರ್ಪಿಗೆ ವಿರುದ್ಧವಾಗಿದೆ. ಏಕೆಂದರೆ ವಿಶಾಖಾ ಪ್ರಕರಣದ ತೀರ್ಪಿನಲ್ಲಿ ದೂರು ನೀಡುವ ಮಹಿಳೆಯ ಮೇಲೆ ಯಾವುದೆ ಕ್ರಮ ಕೈಗೊಳ್ಳಬಾರದೆಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಮಸೂದೆಯು ಮೊದಲಿನ ಮಸೂದೆಯ ರೀತಿಯಲ್ಲಿಯೇ ದೂರುಗಳನ್ನು ಸ್ವೀಕರಿಸುವ ಮತ್ತು ಪರಿಹರಿಸುವ ವ್ಯವಸ್ಥೆಗೆ ಅವಕಾಶ ಕಲ್ಪಿಸುತ್ತದೆ. ದೂರುಗಳಿಗೆ ಪರಿಹಾರ ನೀಡಲು ಪ್ರತಿಯೊಬ್ಬ ಉದ್ಯೋಗಪತಿ ಆಂತರಿಕ ದೂರು ಸಮಿತಿಯನ್ನು ರಚಿಸಲಾಗುತ್ತದೆ. ಸಮಿತಿಯ ನೇತೃತ್ವ ಮಹಿಳೆಯೇ ವಹಿಸಬೇಕು. ಮತ್ತು ೪೧೨ ದಶಲಕ್ಷ ಉದ್ಯೋಗಿಗಳಿದ್ದು ಅವರಲ್ಲಿ ಮಹಿಳೆಯರ ಸಂಖ್ಯೆ ೧೦೦ ಉದ್ಯೋಗಿಗಳಿರುವ ಕೇವಲ ೧೦ ಮಹಿಳಾ ಉದ್ಯೋಗಿಳಿರುವಷ್ಟು ಕಡಿಮೆ ಇದೆ. ಅದಕ್ಕಾಗಿ ಜಿಲ್ಲಾ ಅಥವಾ ಉಪಜಿಲ್ಲಾ ಮಟ್ಟದ ಅಧಿಕಾರಿಗಳು ರಚಿಸಿರುವ ದೂರು ಸಮಿತಿಗಳಿಂದ ದೂರುಗಳನ್ನು ಪರಿಶೀಲಿಸಲು ಮಸೂದೆ ಸೂಚಿಸುತ್ತದೆ. ಇದರ ಉದ್ದೇಶ ಪ್ರತಿಯೊಂದು ಕೆಲಸದ ಸ್ಥಳದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಮಹಿಳಾ ಉದ್ಯೋಗಿಗೆ ಯಾವುದೇ ಜಾತಿ, ಭಾಷೆ, ಬಣ್ಣ ವರ್ಗಗಳ ಭೇದವಿಲ್ಲದೇ ಪರಿಹಾರ ಒದಗಿಸಬೇಕೆಂಬುದಾಗಿದೆ.

ಸ್ಥಳೀಯ ಸಮಿತಿಗಳು ದೂರುಗಳ ವಿಚಾರಣೆ ನಡೆಸಿ ಕ್ರಮಕ್ಕಾಗಿ ಉದ್ಯೋಗಪತಿಗೆ ಅಥವಾ ಮೇಲಾಧಿಕಾರಿಗೆ ಶಿಫಾರಸ್ಸು ಮಾಡಬಹುದು. ವಿಚಾರಣೆ ವಿಳಂಬವಾದರೆ ಅದರ ವಿರುದ್ಧ ಪ್ರತಿಭಟಿಸಬಹುದು ಮಹಿಳಾ ವರ್ಗಾವಣೆ ರೂಪದಲ್ಲಿ ಕೇಳಬಹುದು. ಅಥವಾ ರಜೆ ಮೇಲೆ ಹೋಗಲು ಪರವಾನಿಗೆ ಪಡೆಯಬಹುದು. ದೂರುಗಳ ವಿಚಾರಣೆಗೆ ಕಾಲಬದ್ಧ ಕಾರ್ಯಕ್ರಮ ಇರಬೇಕು. ದೂರು ಸಮಿತಿ ವಿಚಾರಣೆಯನ್ನು ದೂರು ಬಂದ ೯೦ ದಿನಗಳಲ್ಲಿ ಮುಗಿಸಬೇಕು. ಸಮಿತಿಯ ಶಿಫಾರಸ್ಸುಗಳನ್ನು ಮೇಲಾಧಿಕಾರಿಗಳು ೬೦ ದಿನಗಳೊಳಗೆ ಜಾರಿಗೊಳಿಸಬೇಕು. ದೂರು ಸಮಿತಿಗಳನ್ನು ರಚಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಅಧಿಕಾರ ನೀಡುವುದನ್ನು ಆಕ್ಷೇಪಿಸದೇ ಸ್ಥಳೀಯ ಸಮಿತಿಗಳು ಮಾಡುವ ಶಿಫಾರಸ್ಸುಗಳನ್ನು ಕಾಯ್ದೆ ಪ್ರಕಾರ ಮೇಲಾಧಿಕಾರಿಗಳು ಜಾರಿಗೊಳಿಸುವುದರ ಬಗ್ಗೆ ಮಸೂದೆಯು ಏನನ್ನು ತಿಳಿಸಿರುವುದಿಲ್ಲ.

- **ಸ್ತ್ರೀಯರ ವಿರುದ್ಧ ಹಿಂಸೆಗಳನ್ನು ನಿವಾರಣೆ ಮಾಡಲು ಪರಿಹಾರ ಕ್ರಮಗಳು**

೧. ಹಿಂಸಾಚಾರದ ಖಂಡನೆ

೨. ಸೂಕ್ತ ರಾಷ್ಟ್ರೀಯ ಯೋಜನೆ ಹಾಗೂ ಆಡಳಿತಾತ್ಮಕ ಕ್ರಮ

೩. ಹಿಂಸೆಗೆ ಬಲಿಯಾದವರಿಗೆ ಸೂಕ್ತ ರಕ್ಷಣೆ ಹಾಗೂ ಬೆಂಬಲ

೪. ಹಿಂಸೆಗೆ ಒಳಗಾದ ಸ್ತ್ರೀಯರಿಗೆ ನ್ಯಾಯ ಸಿಗುವಂತೆ ಮಾಡುವ ವಿಷೇಶ ನ್ಯಾಯಾಲಯಗಳ ಸ್ಥಾಪನೆ.

೫. ಸ್ತ್ರೀಯರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರಿಗಳಿಗೆ ಪೋಲೀಸರುಗಳಿಗೆ ಹಾಗೂ ನ್ಯಾಯಾಧೀಶರುಗಳಿಗೆ ವಿಶೇಷ ತರಬೇತಿಯ ಅವಶ್ಯಕತೆ.

೬. ಸಂಕಷ್ಟಗಳಿಗೆ ಸಿಲುಕಿದ ಸ್ತ್ರೀಯರಿಗೆ ಉದ್ಯೋಗ ಹಾಗೂ ಆರ್ಥಿಕ ನೆರವು.

೭. ಸ್ತ್ರೀಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಯಾವುದೇ ವಿಶೇಷ ಪ್ರತಿಫಲಾಪೇಕ್ಷೆಯಿಲ್ಲದೇ ಉಚಿತವಾಗಿ ನ್ಯಾಯ ಒದಗಿಸಲು ಮುಂದಾಗಿರುವಂತಹ ಸಂಘಟನೆಗಳ ಬಗ್ಗೆಯ ಸೂಕ್ತವಾದ ಪ್ರಚಾರ ಪ್ರಸಿದ್ದಿಯನ್ನು ನೀಡಬೇಕಾದ ಅಗತ್ಯವಿದೆ.

೮. ತಂದೆ–ತಾಯಿಯರ ಮನೋಭಾವನೆಯಲ್ಲಿನ ಪರಿವರ್ತನೆಯ ಅಗತ್ಯತೆ.

೯. ಸ್ವಯಂ ಸೇವಾ ಸಂಘಗಳಿಗೆ ವಿಶೇಷ ನೆರವು ಹಾಗೂ ಪ್ರಚಾರದ ಅಗತ್ಯ .

೧೦. ಸ್ತ್ರೀ ಸಂಬಂಧಿ ಸಮಸ್ಯೆಗಳ ಸೂಕ್ತವಾದ ಅಧ್ಯಯನ ಸಂಶೋಧನೆ ಹಾಗೂ ವರದಿಯ ಅಗತ್ಯತೆ ಸ್ತ್ರೀಯರ ವಿರುದ್ದದ ಅಪರಾಧಗಳನ್ನು ವರದಿ ಮಾಡುವಾಗ ಸ್ಥಳಿಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸಮೂಹ ಮದ್ಯಮಗಳು ವಿಶೇಷವಾದ ಸಂಯಮದಿಂದ ಸ್ತ್ರೀಯರ ಘನತೆಗೆ ಚ್ಯುತಿ ಬಾರದಂತೆ ಅಂತರಾಷ್ಟ್ರೀಯ ಮಾನವ ಹಕ್ಕುಗಳ ನಿಯಂತ್ರಣದ ನಿಯಮಗಳಿಗನು ಸಾರವಾಗಿ ಮಾಡಬೇಕಾದಿರುವುದರ ಅಗತ್ಯತೆ ಇದೆ. ಹೀಗೆ ಅನೇಕ ಕಾರ್ಯಕ್ರಮಗಳ ಅನುಷ್ಠಾನದಿಂದ ಮಹಿಳಾ ದೌರ್ಜನ್ಯಗಳನ್ನು ತಡೆಯಲು ಹಾಗೂ ನೊಂದವರಿಗೆ ಪರಿಹಾರ ಒದಗಿಸುವ ಉತ್ತಮ ಪರಿಹಾರ ಮಾರ್ಗಗಳಾಗಿವೆ.

------******------

ಅಧ್ಯಾಯ ೮

ಸಮಾರೋಪ

೮.೧. ಅಧ್ಯಾಯಗಳ ಸ್ವರೂಪಗಳು

೮.೨. ಅಧ್ಯಯನದ ಫಲಿತಗಳು

೮.೩. ಅಧ್ಯಯನದ ಮಿತಿಗಳು

೮.೪. ಅಧ್ಯನದ ಮುಂದಿನ ಸಾಧ್ಯತೆಗಳು

೮.೫. ಸಲಹೆಗಳು

ಅಧ್ಯಾಯ–೮

ಸಮಾರೋಪ

ಸ್ತ್ರೀವಾದಿ ಚಿಂತನಾ ಕ್ರಮವನ್ನು ಅಳವಡಿಸಿಕೊಂಡು ಮಹಿಳಾ ದೌರ್ಜನ್ಯ ಲಿಂಗಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ)ವು ೮ ಅಧ್ಯಾಯಗಳನ್ನು ಒಳಗೊಂಡಿದೆ. ಹಿಂಸೆಗಳನ್ನು ಗ್ರಹಿಸುವ ಅಗತ್ಯತೆಯ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ಬೆಂಗಳೂರು ನಗರದಲ್ಲಿ ಮಹಿಳಾ ವಿರುದ್ಧ ದೌರ್ಜನ್ಯಗಳು ವಿವಿಧ ಸ್ವರೂಪಗಳಲ್ಲಿ ತೀವ್ರಗತಿಯಿಂದ ನಡೆಯುತ್ತಿರುವುದರಿಂದ ಅದರಲ್ಲೂ ಆಧುನಿಕ ಸಮಾಜದಲ್ಲಿ ತಮ್ಮ ಸ್ವರೂಪಗಳನ್ನು ಬದಲಾಯಿಸಿಕೊಂಡು ಹೊಸ ಹೊಸ ರೂಪಗಳಲ್ಲಿ ಉದಾ: ಅತ್ಯಾಚಾರ, ಸ್ತ್ರೀ ಮತ್ತು ಹೆಣ್ಣು ಮಕ್ಕಳ ಅಪಹರಣ, ವರದಕ್ಷಿಣೆ, ಲೈಂಗಿಕ ಕಿರುಕುಳ, ದುಡಿಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ, ಇತರೇ ದೌರ್ಜನ್ಯಗಳು ನಡೆಯುತ್ತಿವೆ. ಈ ದೌರ್ಜನ್ಯದ ವಿರುದ್ಧ ಕಾನೂನುಗಳು ಹಾಗೂ ಪರಿಹಾರ ಸಲಹೆಗಳನ್ನು ನೀಡಲಾಗಿದೆ. ಪ್ರಸ್ತುತವಾಗಿ ಈ ಅಧ್ಯಯನವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯಗಳ ಸ್ವರೂಪ

ಅಧ್ಯಾಯ–೧ ಮೊದಲನೇ ಅಧ್ಯಾಯನದಲ್ಲಿ ಮಹಿಳಾ ದೌರ್ಜನ್ಯ ಎಂದರೇನು? ದೌರ್ಜನ್ಯವು ಯಾವ ಯಾವ ಕಾಲಘಟ್ಟಗಳಲ್ಲಿ, ಯಾವ ಯಾವ ಸ್ವರೂಪಗಳಲ್ಲಿ ನಡೆಯುತಿತ್ತು. ಮಹಿಳಾ ದೌರ್ಜನ್ಯ ಪ್ರಕರಣಗಳ ಒಂದು ನೋಟ, ಸ್ತ್ರೀ ವಿರುದ್ಧದ ಹಿಂಸೆಯ ಸ್ವರೂಪ, ಅದರ ಲಕ್ಷಣಗಳನ್ನು ವಿವರಿಸಲಾಗಿದೆ. ನಾನು ಮಹಿಳಾ ದೌರ್ಜನ್ಯ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಿರುವ ಉದ್ದೇಶಗಳನ್ನು ವಿವರಿಸುವುದರೊಂದಿಗೆ ಹಾಗೂ ವಿಷಯದ ವ್ಯಾಪ್ತಿ ಮತ್ತು ಮಹತ್ವವನ್ನು ವಿವರಿಸಲಾಗಿದೆ. ಸ್ತ್ರೀವಾದಿ ವೈಧಾನಿಕತೆಯ ವಿಧಾನಗಳನ್ನು ಬಳಸಲಾಗಿದೆ. ಮಾದರಿ ಆಯ್ಕೆಯನ್ನು ತಿಳಿಸಲಾಗಿದೆ. ಕ್ಷೇತ್ರ ಕೇಂದ್ರಿತ ವರದಿ ಮತ್ತು ಕ್ಷೇತ್ರ ಕಾರ್ಯದ ಉದ್ಧೇಶ, ಸ್ವರೂಪ ಹಾಗೂ ಕ್ಷೇತ್ರಕಾರ್ಯದ ವಿಶ್ಲೇಷಣೆಯನ್ನು ಮೊದಲನೆ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ–೨ ನನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ದೌರ್ಜನ್ಯ, ಲಿಂಗ ಸಂಬಂಧಿ ಅಧ್ಯಯನ, (ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ಸಂಶೋಧನಾ ವಿಷಯಕ್ಕೆ ಅಥವಾ ಅಧ್ಯಯನಕ್ಕೆ ಸಂಬಂಧಿದಂತೆ ಈಗಾಗಲೇ ನಡೆದಿರುವಂತ ಅಧ್ಯಯನಗಳು, ಸಂಶೋಧನೆಗಳು ಹಾಗೂ ಸಂಬಂಧಿಸಿದ ಪುಸ್ತಕಗಳನ್ನು ಪರಾಮರ್ಶಿಸಿ ಸಂಶೋಧನೆಗೆ ಸಂಬಂಧಿಸಿದಂತೆ ಅವುಗಳನ್ನು ಅಧ್ಯಯದ ದೃಷ್ಟಿಕೋನದಿಂದ ವಿಶ್ಲೇಷಿಸುವುದಾಗಿದೆ. ಆಯ್ಕೆಯ ವಿಷಯದ ಮೇಲೆ ಇದಕ್ಕೆ ಪೂರಕವಾಗಿ ನಾನು ಸಾಹಿತ್ಯ ಅಧ್ಯಯನವನ್ನು ಕೈಗೊಂಡು ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಳಕು ಚೆಲ್ಲುವಂತ

ಗ್ರಂಥಗಳು, ದಾಖಲೆಗಳು, ದಾಸ್ತವೇಜುಗಳು, ಕಡತಗಳು, ವಿಶ್ವಕೋಶ, ನಿಯತಕಾಲಿಕೆಗಳು, ಸಂಶೋಧನಾ ಪ್ರಬಂಧಗಳು ಇತರೆ ಸಂಬಂಧಪಟ್ಟ ಅಕರಗಳಿಂದ ಸಾಹಿತ್ಯದ ಪೂರ್ಣ ಅರಿವನ್ನು ಪಡೆಯಲು ಇವುಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ–೩ ಮಹಿಳಾ ದೌರ್ಜನ್ಯದ ಬಗ್ಗೆ ಚಿಂತನೆಗಳ ಸಮೀಕ್ಷೆ, ಸ್ವರೂ ಮತ್ತು ವ್ಯಾಖ್ಯಾನಗಳನ್ನು ತಿಳಿಸಲಾಗಿದೆ. ಸಾಂಪ್ರದಾಯಿಕ ಸಮಾಜಿಕ ಸಂರಚನೆಯಲ್ಲಿ ಮಹಿಳಾ ಬದುಕು ಪುರುಷರೂಪಿ ಕಟ್ಟುಪಾಡಿನಲ್ಲಿ ಹೇಗೆ ಬಂಧಿತವಾಗಿದೆ ಎಂಬುದನ್ನು ಸ್ತ್ರೀವಾದಿ ನೆಲೆಯಲ್ಲಿ ಚರ್ಚಿಸಲಾಗಿದೆ. ದೌರ್ಜನ್ಯ ಕುರಿತು ಚಿಂತನೆಗಳ ಸಮೀಕ್ಷೆಯನ್ನು ವಿವರಿಸಲಾಗಿದೆ. ಕೌಟುಂಬಿಕ ವಲಯವು ಮಹಿಳೆಗೆ ಭದ್ರತೆಯ ನೆಲೆಯೆಂದು, ಸುರಕ್ಷಿತ ತಾಣವೆಂದು ಹೇಳಲಾಗುತ್ತಿದ್ದರೂ ಸಹ ಮಹಿಳೆಯನ್ನು ಹೇಗೆ ಕೌಟುಂಬಿಕ ವಲಯದಲ್ಲಿ ಬಂದಿಸಲಾಗಿದೆ ಎಂದು ತಿಳಿಸಲಾಗಿದೆ. ಮಹಿಳಾ ದೌರ್ಜನ್ಯದ ವಿವಿಧ ಪ್ರಕಾರಗಳನ್ನು, ಗೃಹ ಇಲಾಖೆಯಿಂದ ವರದಿಯಾಗಿರುವ ದೌರ್ಜನ್ಯಗಳ ವರದಿಗಳನ್ನು ತಿಳಿಸಲಾಗಿದೆ. ಪಿತೃಪ್ರಧಾನ ಕುಟುಂಬದಲ್ಲಿ ಮಹಿಳೆಯ ಶೋಷಣೆಯನ್ನು ವಿವರಿಸಲಾಗಿದೆ. ಪಿತೃಪ್ರಧಾನತೆಯು ಹೇಗೆ ಮಹಿಳೆಯನ್ನು ಶೋಷಣೆ ಮಾಡಲಾಗುತ್ತದೆ ಎಂಬುದನ್ನು ತಿಳಿಸಿ ಅದರ ದೋಷಗಳನ್ನು ತಿಳಿಸಲಾಗಿದೆ. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ಮಹಿಳೆಯು ಹೇಗೆ ಶೋಷಣೆಗೆ ಒಳಗಾಗುತ್ತಿದ್ದಾಳೆಂದು ತಿಳಿಸಲಾಗಿದೆ. ಮಹಿಳಾ ದೌರ್ಜನ್ಯದ ಬಗ್ಗೆ ವಿವಿಧ ವಿದ್ವಾಂಸರು ತಮ್ಮದೇ ಆದ ಸ್ತ್ರೀವಾದಿ ದೃಷ್ಟಿಕೋನದಲ್ಲಿ ವಿವರಿಸಿರುವ ರೀತಿಯಲ್ಲಿ ವ್ಯಾಖ್ಯಾನಿಸಿರುವುದನ್ನು ತಿಳಿಸಲಾಗಿದೆ.

ಅಧ್ಯಾಯ–೪ ಮಹಿಳೆಯು ಅನಾದಿಕಾಲದಿಂದಲೂ ವಿವಿಧ ಕಾಲಘಟ್ಟಗಳಲ್ಲಿ ನಿರಂತರವಾಗಿ ಶೋಷಣೆಗೆ ಗುರಿಯಾಗಿ ದೌರ್ಜನ್ಯವನ್ನು ಅನುಭವಿಸಿದ್ದಾಳೆ. ಹಾಗಾಗಿ ಸರ್ಕಾರವು ಸರ್ವರಿಗೂ ಸಮಾನತೆ–ಸಮಬಾಳು ಎಂಬ ತತ್ವದಂತೆ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ತಿಳಿಸಿ, ಮಹಿಳೆಯು ದೌರ್ಜನ್ಯದಿಂದ ಮುಕ್ತಳಾಗಿ ಬಾಳುವುದಕ್ಕಾಗಿ ಕಾನೂನಾತ್ಮಕ ಕ್ರಮಗಳನ್ನು ತಿಳಿಸಿದೆ. ಮಹಿಳೆಯು ಕೌಟುಂಬಿಕ ಮತ್ತು ಸಾರ್ವಜನಿಕ ದೌರ್ಜನ್ಯದಿಂದ ಮುಕ್ತಳಾಗಲು ಕೆಲವು ಕಾನೂನಾತ್ಮಕ ನಿಯಮಗಳನ್ನು ಜಾರಿಗೆ ತಂದಿದೆ. ಮಹಿಳಾ ದೌರ್ಜನ್ಯವು ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಿ ಹೇಗೆ ನಡೆಯುತ್ತದೆಂದು ವಿವರಿಸಲಾಗಿದೆ. ಮೊದಲು ಕೌಟುಂಬಿಕ ದೌರ್ಜನ್ಯವೆಂದರೆ ಕುಟುಂಬದ ಸದಸ್ಯರಿಂದ ಆಗುವ ಹಿಂಸೆಯನ್ನು ಕೌಟುಂಬಿಕ ದೌರ್ಜನ್ಯವೆಂದು ಕರೆಯಲಾಗುವುದು. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಗಳನ್ನು ವಿವರಿಸಲಾಗಿದೆ. ಅದರಲ್ಲಿ ವರದಕ್ಷಿಣೆ ಪಿಡುಗನ್ನು ತೊಡಗಿಸುವ ಕಾನೂನು, ಹೆಣ್ಣು ಭ್ರೂಣಹತ್ಯೆ ವಿರುದ್ಧ ಕಾನೂನು, ಅತ್ಯಾಚಾರದ ವಿರುದ್ಧ ಕಾನೂನು, ಕೌಟುಂಬಿಕ ಕ್ರೌರ್ಯದ ಕಾನೂನುಗಳನ್ನು ವಿವರಿಸಲಾಗಿದೆ. ಸಾರ್ವಜನಿಕ

ವಲಯದಲ್ಲಿನ ಮಹಿಳಾ ದೌರ್ಜನ್ಯ ತಡೆ ಕಾಯ್ದೆಗಳನ್ನು ಇಲ್ಲಿ ತಿಳಿಸಲಾಗಿದೆ. ಸಾರ್ವಜನಿಕ ವಲಯವೆಂದರೆ ಆರ್ಥಿಕ ವ್ಯವಹಾರಗಳ ನಿರಾಕರಣೆ. ಈ ವಲಯವನ್ನು ಪುರುಷ ವ್ಯವಸ್ಥೆಯ ಪುರುಷವಲಯವೆಂದು ಸಮಾಜದಲ್ಲಿ ಕರೆಯಲಾಗುತ್ತದೆ. ಬ್ರಿಟೀಷರ ಕಾಲದಲ್ಲಿ ಸಾರ್ವಜನಿಕ ವಲಯದಲ್ಲಿದ್ದಂತಹ ಮಹಿಳಾ ದೌರ್ಜನ್ಯಗಳನ್ನು ತಡೆಯಲು ಅನೇಕ ಕಾಯ್ದೆಗಳನ್ನು ಇಲ್ಲಿ ವಿವರಿಸಲಾಗಿದೆ. ೧೮೮೧ರ ಸಮ್ಮತಿ ವಯಸ್ಸಿನ ವಿವಾಹ ಕಾಯ್ದೆ, ೧೯೨೯ ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ, ೧೯೩೭ ರಲ್ಲಿ ಸ್ತ್ರೀಯರ ಆಸ್ತಿ ಹಕ್ಕಿನ ಕಾಯ್ದೆಗಳನ್ನು ಕಡ್ಡಾಯವಾಗಿ ಜಾರಿಗೊಳಿಸಿರುವುದನ್ನು ತಿಳಿಸಲಾಗಿದೆ. ಮತ್ತು ಸಂವಿಧಾನದಲ್ಲಿ ಸ್ತ್ರೀ–ಪುರುಷರಿಗೆ ಸಮಾನವಾದ ಹಕ್ಕುಗಳನ್ನು ನೀಡಿರುವುದನ್ನು ವಿವರಿಸಲಾಗಿದೆ. ಮಾನವ ಹಕ್ಕುಗಳ ಅನುಚ್ಛೇದ ೨೨–೨೭ ರವರೆಗೆ ನಿಯಮಗಳು ಸಾಮಾಜಿಕ ತಾರತಮ್ಯಗಳ ನಿರ್ಮೂಲನೆಯನ್ನು ಕುರಿತು ಹೇಳಲಾಗಿದೆ. ಮಾನವ ಹಕ್ಕುಗಳ ಅನುಚ್ಛೇದ ೩–೨೧ ರ ವರೆಗೆ ನಾಗರೀಕ ಮತ್ತು ರಾಜಕೀಜಯ ಹಕ್ಕುಗಳನ್ನು ವಿವರಿಸಲಾಗಿದೆ. ಮಹಿಳಾ ದೌರ್ಜನ್ಯವನ್ನು ತಡೆಗಟ್ಟಲು ಹಿಂದೂ ವಿವಾಹ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಲಾಗಿದೆ. ೧೯೬೧ರಲ್ಲಿ ಪ್ರಸೂತಿ ಸೌಲಭ್ಯಕಾಯ್ದೆ, ೧೯೭೧ರಲ್ಲಿ ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ, ೧೯೮೩ ರಲ್ಲಿ ಕ್ರಿಮಿನಲ್ ಕಾನೂನುಗಳ ತಿದ್ದುಪಡಿ ಕಾಯ್ದೆ, ೧೯೮೪ ಕುಟುಂಬ ನ್ಯಾಯಾಲಯಗಳ ಕಾಯ್ದೆಗಳ ಬಗ್ಗೆ ಹಾಗೂ ಆಧುನಿಕ ಯುಗದ ಮಹಿಳಾ ದೌರ್ಜನ್ಯಗಳಾದಂತಹ ಅತ್ಯಾಚಾರ, ಅಪಹರಣ, ಕೆಲಸದ ಸ್ಥಳದಲ್ಲಿನ ಲೈಂಗಿಕ ಕಿರುಕುಳ, ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಆ್ಯಸಿಡ್ ಪ್ರಕರಣ, ಇತ್ಯಾದಿ ಪ್ರಕರಣಗಳ ದೌರ್ಜನ್ಯ ತಡೆ ಕಾಯ್ದೆಯನ್ನು ವಿವರವಾಗಿ ತಿಳಿಸಲಾಗಿದೆ.

ಸಮಾಜದ ಪುರುಷರು ಸಹ ಮಹಿಳೆಯರಿಗೆ ಎಂತಹ ವಾತಾವರಣ ನಿರ್ಮಿಸಿಕೊಡಬೇಕು ಹಾಗೂ ಮಹಿಳಾ ದೌರ್ಜನ್ಯದ ವಿರುದ್ಧದ ಕಾನೂನು ಸಲಹೆಗಳನ್ನು ಮಹಿಳೆಯರಿಗೆ ನೀಡಿದೆ. ಉದಾಹರಣೆಗೆ ಸಾರ್ವಜನಿಕ ವಲಯದಲ್ಲಿ ದೌರ್ಜನ್ಯ, ಕೌಟುಂಬಿಕ ವಲಯದಲ್ಲಿನ ದೌರ್ಜನ್ಯದ ವಿರುದ್ಧದ ಸಲಹೆಗಳನ್ನು ನೀಡಿದೆ. ಮತ್ತೆ ಅವರನ್ನು ನಮ್ಮ ಸಮಾನತೆಯಂತೆ ಕಾಣಬೇಕೆಂದು ಸ್ತ್ರೀ–ಪುರುಷರಿಬ್ಬರಿಗೂ ಕೆಲವು ಸಲಹೆಗಳನ್ನು ನೀಡಲಾಗಿದೆ.

ಅಧ್ಯಾಯ–೫ ನಾನು ಬೆಂಗಳೂರು ನಗರದ ಪೋಲೀಸ್ ಠಾಣೆಗೆ ಭೇಟಿ ನೀಡಿ ವಿವಿಧ ಸ್ವರೂಪಗಳಲ್ಲಿ ಮಹಿಳೆಯು ದೌರ್ಜನ್ಯಗಳಿಗೆ ಒಳಗಾಗಿರುವ ಬಗ್ಗೆ ೨೦೦೫–೨೦೧೧ ರ ವರೆಗೆ ಯಾವ ಯಾವ ಸ್ವರೂಪಗಳಲ್ಲಿ ಒಂದು ವರ್ಷದಲ್ಲಿ ಎಷ್ಟು ಪ್ರಕರಣಗಳು ಸಂಭವಿಸಿವೆ. ಒಟ್ಟು ೨೦೦೫–೨೦೧೧ ರವರೆಗೆ ಯಾವ ಯಾವ ಪ್ರಕರಣಗಳು ಎಷ್ಟು ದಾಖಲಾಗಿವೆ ಎಂದು ಕೇಳಿ ಪ್ರಕರಣಗಳ ಕಂಪ್ಲೇಂಟ್ ಕಾಫಿ, F.I.R ಕಾಫಿ, ಚಾರ್ಜ್‌ಷೀಟ್ ಕಾಫಿಗಳ ಜೆರಾಕ್ಸ್ ಪ್ರತಿಗಳನ್ನು ತಂದು, ಪ್ರತ್ಯೇಕ ಪ್ರಕರಣಗಳನ್ನು ವಿಂಗಡಿಸಿ, ಅವುಗಳನ್ನು ಅಭ್ಯಸಿಸಿ ನಂತರ ಹೆಚ್ಚಿನ ಅಧ್ಯಾಯನಕ್ಕಾಗಿ ಠಾಣಾ ಬರಹಗಾರರು ಮತ್ತು ಪ್ರಕರಣದ ಅಧ್ಯಯನಕ್ಕಾಗಿ ನಾನು

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ಸಂಪರ್ಕಿಸಿ ನಂತರ ಮಾಹಿತಿಯನ್ನು ಪಡೆದು, ಅವುಗಳನ್ನು ಕೋಷ್ಟಕಗಳ ಮುಖಾಂತರ ವಿವರಿಸಿ ಅವುಗಳನ್ನು ವಿಶ್ಲೇಷಣೆ ಮಾಡಿ ವಿವರಿಸಲಾಗಿದ.

ಅಧ್ಯಾಯ-೬ ಈ ಅಧ್ಯಾಯಬಲ್ಲಿ ನಾನು ಕ್ಷೇತ್ರ ಕಾರ್ಯದ ನಿಮಿತ್ತ ಕೆಲವು ನೊಂದ ಮಹಿಳೆಯರನ್ನು ಸಂಪರ್ಕಿಸಿ ಅವರಿಂದ ಹೆಚ್ಚಿನ ಮಾಹಿತಿಯನ್ನು ಪಡೆದು ಮಹಿಳೆಯು ವಿವಿಧ ಪ್ರಕರಣಗಳಲ್ಲಿ ಸಿಲುಕಿರುವುದರಿಂದ ಬೇರೆ ಬೇರೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಮಹಿಳೆಯರನ್ನು ಸಂಪರ್ಕಿಸಿದಾಗ ಅವರು ಹೇಳಿದ ಮಾಹಿತಿಯನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಮತ್ತು ನೆರೆಹೊರೆಯವರ ಮತ್ತು ರಕ್ತಸಂಬಂಧಿಗಳ ಸಹಾಯದಿಂದ ಹೆಚ್ಚಿನ ಮಾಹಿತಿಯನ್ನು ಕಲೆಹಾಕಲಾಗಿದೆ.

ಅಧ್ಯಾಯ-೭ ಮಹಿಳೆಯು ಅನಾದಿ ಕಾಲದಿಂದ ಇಂದಿನವರೆಗೂ ಒಂದಲ್ಲಾ ಒಂದು ರೀತಿಯ ಸಮಸ್ಯೆಗಳಿಗೆ ಸಿಲುಕಿ ನರಳುತ್ತಿರುವುದರಿಂದ ಕೌಟುಂಬಿಕ ವಲಯ ಹಾಗೂ ಸಾರ್ವಜನಿಕ ವಲಯಗಳೆರಡಲ್ಲೂ ಶೋಷಣೆಗೆ ಒಳಪಡುತ್ತಿದ್ದಾಳೆ. ಈ ದೌರ್ಜನ್ಯವನ್ನು ತಡೆಯಲು ಅನೇಕ ಕಾನೂನುಗಳನ್ನು ಜಾರಿಗೆ ತಂದಿದ್ದರೂ ಸಹ ಅವು ಸರಿಯಾಗಿ ಜಾರಿಯಾಗದೇ ನಿರಂತರವಾಗಿ ನಡೆಯುತ್ತಿದೆ, ಈ ದೌರ್ಜನ್ಯವನ್ನು ತಡೆಯಲು ಕೆಲವು ಸಲಹೆ ಮತ್ತು ಪರಿಹಾರಗಳನ್ನು ಸಹ ನೀಡಲಾಗಿದೆ. ಈ ಪರಿಹಾರ ಮತ್ತು ಸಲಹೆಗಳಲ್ಲಿ ಹೊಂದಾಣಿಕೆ, ಸಾಮಾಜಿಕ-ಆರ್ಥಿಕ ಕ್ರಮ, ಮಹಿಳೆಯರ ಸ್ಥಾನಮಾನ ಹೆಚ್ಚಿಸುವುದು, ವಿಶೇಷ ನ್ಯಾಯಾಲಯಗಳ ಸ್ಥಾಪನೆ, ಪೋಷಕರ ಸಹಕಾರ, ಸಾಂತ್ವಾನ, ಲೈಂಗಿಕ ಕಿರುಕುಳ ಕಾಯ್ದೆ ಇತ್ಯಾದಿ ಕೆಲವು ಸಲಹೆಗಳನ್ನು ಹಿಂಸೆಗಳನ್ನು ನಿವಾರಣೆ ಮಾಡಲು ಪರಿಹಾರಗಳನ್ನು ನೀಡಲಾಗಿದೆ.

ಅಧ್ಯಾಯ-೮ ಸಮಾರೋಪವಾಗಿದ್ದು ಇಲ್ಲಿ ಪ್ರಸ್ತುತ ಅಧ್ಯಯನವು ನಡೆಸಿಕೊಂಡು ಬಂದ ಅಧ್ಯಾಯಗಳ ವಿವರಣೆಯನ್ನು ಸಮೀಕ್ಷಾತ್ಮಕವಾಗಿ ಮತ್ತೊಮ್ಮೆ ಸ್ಥೂಲವಾಗಿ ಮುಖ್ಯಾಂಶಗಳ ರೂಪದಲ್ಲಿ ವಿವರಿಸಲಾಗಿದೆ. ಅನಂತರದಲ್ಲಿ ಪ್ರಸ್ತುತ .ಅದ್ಯಯನವು ಕಂಡುಕೊಂಡಿರುವ ಒಟ್ಟು ಫಲಿತಗಳನ್ನು ಹಾಗೂ ಮಿತಿಗಳನ್ನು ಮತ್ತು ಅಧ್ಯಯನಕ್ಕಿರುವ ಮುಂದಿನ ಸಾಧ್ಯತೆಗಳ ಕುರಿತು ಸೂಕ್ಷ್ಮವಾಗಿ ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಾಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ ಹಾಗೂ ಮಾಹಿತಿದಾರರ ಪಟ್ಟಿ ಮತ್ತು ಪರಮಾರ್ಶನ ಗ್ರಂಥಗಳ ಸೂಚಿಯನ್ನು ನೀಡಲಾಗಿದೆ.

೮.೧ ಅಧ್ಯಯನದ ಫಲಿತಗಳು

ನನ್ನ ಸಂಶೋಧನಾ 'ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ದೌರ್ಜನ್ಯ, ಲಿಂಗ ಸಂಬಂಧಿ ಅಧ್ಯಯನ, (ಬೆಂಗಳೂರು ನಗರದ ಪೋಲೀಸ್ ದಾಖಲೆಗಳನ್ನು ಅನುಲಕ್ಷಿಸಿ) ಸಂಶೋಧನಾ ವಿಷಯಕ್ಕೆ ಅಥವಾ ಅಧ್ಯಯನಕ್ಕೆ ಸಂಬಂಧಿದಂತೆ ಸಂಶೋಧನೆ ಕೈಗೊಂಡಿದ್ದು ಆ ಸಂಶೋಧನೆಗೆ ಕೆಲವು ಉದ್ದೇಶಗಳನ್ನು ರೂಪಿಸಿಕೊಂಡಿದ್ದು ಆ ಉದ್ಧೇಶದಂತೆ ನಾನು ಅಧ್ಯಯನವನ್ನು ನಡೆಸಿ ಕೆಲವು ಫಲಿತಗಳು ನನ್ನ ಅಧ್ಯಯನದಿಂದ ದೊರೆದಿವೆ ಮತ್ತು ಅವು ಈ ಕೆಳಗಿನಂತಿವೆ.

೧. ಅತ್ಯಾಚಾರ ಪ್ರಕರಣಗಳು (ಬೆಂಗಳೂರು ನಗರದ ಪೋಲೀಸ್ ದಾಖಲಾತಿ ಅನುಲಕ್ಷಿಸಿ) ಬಹುತೇಕವಾಗಿ ಅಪ್ರಾಪ್ತ ಬಾಲಕಿಯರ ಮೇಲೆ ನಡೆದಿರುವುದು ಕಂಡುಬಂದಿದೆ. ಈ ಪ್ರಕರಣಗಳಲ್ಲಿ ಬಹುತೇಕ ಆರೋಪಿಗಳು ಪ್ರಕರಣದಿಂದ ಖುಲಾಸೆ ಹೊಂದಿದ್ದಾರೆ. ಕೇವಲ ಬೆರಳಣಿಕೆಯಷ್ಟು ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ಅತ್ಯಾಚಾರ ಪ್ರಕರಣಗಳು ಬಹುತೇಕವಾಗಿ ದಾಖಲಾಗಿರುವುದು ತಂದೆ, ಶಿಕ್ಷಕ, ಸಹಪಾಠಿ, ಪ್ರೇಮಿಯಿಂದ, ನೆರೆಹೊರೆಯವರಿಂದ ಮತ್ತು ಪರಿಚಯಸ್ಥರಿಂದ ನಡೆದಿರುತ್ತವೆ. ಅತ್ಯಾಚಾರ ಪ್ರಕರಣಗಳ ದೂರು ದಾಖಲಾದರೂ ಸಹ ಅವುಗಳ ತನಿಖೆಯ ವಿಧಾನದಲ್ಲಿ ಸಾಕ್ಷಿ, ಪುರಾವೆ, ವೈದ್ಯಕೀಯ ಪರೀಕ್ಷೆಗಳ ವಿಧಾನದಲ್ಲಿ ಆರೋಪಿಗಳು ಶಿಕ್ಷೆಯಿಂದ ವಂಚಿತರಾಗಿದ್ದಾರೆ. ಕಾನೂನುಗಳು ಎಷ್ಟೇ ಪ್ರಬಲವಾಗಿದ್ದರೂ ಸಹ ಪುರುಷ ಪ್ರಧಾನತೆ, ಪ್ರಭುತ್ವ, ಅಧಿಕಾರಶಾಹಿ ವ್ಯವಸ್ಥೆಯು ಆರೋಪಿಗಳಿಗೆ ಪರೋಕ್ಷವಾಗಿ ಸಹಾಯಕವಾಗಿರುವುದರಿಂದ ಬಹುತೇಕ ಅತ್ಯಾಚಾರ ಪ್ರಕರಣಗಳು ತನಿಖೆಯಿಂದ ಖುಲಾಸೆ ಹೊಂದಿವೆ ಎಂದು ತಿಳಿದು ಬಂದಿದೆ.

೨. ಅಪಹರಣ ಪ್ರಕರಣಗಳು ಲೈಂಗಿಕ ಅಗತ್ಯತೆ. ಆರ್ಥಿಕ ಉದ್ದೇಶ, ವೈರತ್ವದಿಂದ ಅಪಹರಣ ಪ್ರಕರಣಗಳು ಸಂಭವಿಸುತ್ತವೆ. ಈ ಪ್ರಕರಣಗಳು ಹೆಚ್ಚಿನದಾಗಿ ಪ್ರೀತಿಯ ನಿರಾಕರಣೆಯಾದಾಗ ತಮ್ಮ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಪ್ರೀತಿಸಿದ ಹುಡುಗರು ಅಪಹರಿಸುವುದು ಕಂಡುಬರುತ್ತದೆ.

೩. ವರದಕ್ಷಿಣೆ ಪ್ರಕರಣಗಳು ಬೆಂಗಳೂರು ಪೊಲೀಸ್ ಠಾಣೆಯಲ್ಲಿ ಶೇಕಡ ೮೦ ತನಿಖೆ ನಡೆಯುತ್ತಿರುವಾಗಲೇ ರಾಜಿ ಸಂಧಾನವಾಗಿರುವುದು ಕಂಡುಬಂದಿದೆ. ಶಿಕ್ಷೆಗೊಳಗಾಗಿರುವವರು ಕೆಲವೇ ಮಂದಿ ಇದ್ದಾರೆ. ವರದಕ್ಷಿಣೆ ಪ್ರಕರಣಗಳು ಮನುಷ್ಯನ ಅತಿಯಾದ ಆಸೆ, ತಾನು ಗಂಡು ಎಂಬ ಅಹಂಬಾವ, ಮನೆತನ, ಜಾತಿಯ ಆಧಾರದ ಮೇಲೆ ವರದಕ್ಷಿಣೆಗಳು ನಿರ್ಧಾರವಾಗಿರುವುದು ಕಂಡುಬಂದಿದೆ. ವರದಕ್ಷಿಣೆ ವಿರುದ್ಧದ ಕಾನೂನುಗಳು ಇದ್ದರೂ ಕೂಡಾ ಅದು ಸಮಾಜದಲ್ಲಿ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಹಾಗೂ ಈ ಪ್ರಕರಣಗಳನ್ನು ಯಾವ ಅಧಿಕಾರಿಗಳು ಸಹ ಗಂಭೀರ ಪ್ರಕರಣಗಳೆಂದು ಪರಿಗಣಿಸಿಲ್ಲ. ವರದಕ್ಷಿಣೆ ಪ್ರಕರಣಗಳು ತನಿಖೆ ಹಂತದಲ್ಲಿರುವಾಗಲೇ ರಾಜೀ ಸಂಧಾನಗಳಿಂದ ಇತ್ಯರ್ಥಗೊಳ್ಳುತ್ತವೆ. ವರದಕ್ಷಿಣೆ ಪ್ರಕರಣಗಳನ್ನು ದೂರು ದಾಖಲಿಸಲು ಹೋದಾಗ ಈ ಪ್ರಕರಣವು ಸುಳ್ಳೆಂಬಂತೆ ಅಧಿಕಾರಿಗಳು ಕಾಣುತ್ತಾರೆ. ನಂತರ ಇವರು

ತನಿಖೆಯಲ್ಲಿ ಆಸಕ್ತಿಯನ್ನು ವಹಿಸದೆ ಇರುವುದು ಹೆಚ್ಚು-ಹೆಚ್ಚು ಪ್ರಕರಣಗಳು ದಾಖಲಾದರೂ ಸಹ ನಿರಿಕ್ಷಿತ ಫಲಿತವನ್ನು ಇಲ್ಲಿ ಕಾಣಲು ಸಾಧ್ಯವಾಗುತ್ತಿಲ್ಲವೆಂದು ತಿಳಿದುಬಂದಿದೆ.

೪. ಕೌಟುಂಬಿಕ ಮತ್ತು ಸಾರ್ವಜನಿಕ ವಲಯದಲ್ಲಿನ ಮಹಿಳಾ ದೌರ್ಜನ್ಯಗಳು ಸಾಮಾನ್ಯವಾಗಿ ಅತ್ಯಾಚಾರವು ಎರಡು ವಲಯಗಳಲ್ಲಿ ಕಂಡುಬರುತ್ತದೆ. ಸಾರ್ವಜನಿಕ ವಲಯದಲ್ಲಿ ಸಾಮಾನ್ಯವಾಗಿ ಸಂಘಟಿತವಲಯಗಳಲ್ಲಿ ಹೆಚ್ಚು ಮಹಿಳಾ ದೌರ್ಜನ್ಯಗಳು ನಡೆದಿರುವುದು ಕಂಡು ಬರುತ್ತದೆ. ಸಂಘಟಿತ ವಲಯದಲ್ಲಿನ ಮಹಿಳೆಯರಿಗೆ ಕಾನೂನಿನ ಅರಿವು ಇದ್ದರೂ ಸಹ, ನಿರಂತರವಾಗಿ ಅತ್ಯಾಚಾರವಾಗುವುದು ಕಂಡಬರುತ್ತದೆ. ಹಾಗೆಯೇ ದೌರ್ಜನ್ಯದ ಸಮಯದಲ್ಲಿ ಮಹಿಳೆಯರ ಪರ ಕಾನೂನು ಇದ್ದರೂ ಸಹ ನಮ್ಮ ಪುರುಷ ಪ್ರಧಾನತೆಯ ಪ್ರಭುತ್ವ, ಅಧಿಕಾರಶಾಹಿ, ಇವೆಲ್ಲವುಗಳ ನಿಯಂತ್ರಣದಿಂದ ಅಸಹಾಯಕರಾದ ಮಹಿಳೆಯರಿಗೆ ನ್ಯಾಯ ಸಿಕ್ಕಿಲ್ಲದಿರುವುದು ಕಂಡುಬಂದಿದೆ.

೫. ವಿಧವೆಯರ ಮೇಲಿನ ಅತ್ಯಾಚಾರ ಮತ್ತು ಆಸಿಡ್ ದಾಳಿ ಪ್ರಕರಣಗಳು, ಬೆಂಗಳೂರಿನ ಯಾವ ಠಾಣೆಯಲ್ಲೂ ದಾಖಲಾಗದಿರುವುದು ಕಂಡುಬಂದಿದೆ. ಈ ದೌರ್ಜನ್ಯಗಳು ನಗರದಲ್ಲಿ ನಡೆದರೂ ಸಹ ವಿಧವೆಯರ ಮೇಲಿನ ಅತ್ಯಾಚಾರವೆಂಬ ಪ್ರತ್ಯೇಕ ಪ್ರಕರಣ ದಾಖಲಾಗುವುದಿಲ್ಲ. ಆಸಿಡ್ ದಾಳಿ ಪ್ರಕರಣಗಳು ನಡೆದರೂ ಸಹ ದಾಖಲಾಗದಿದ್ದಕ್ಕೆ ಕಾರಣ ಈ ಪ್ರಕರಣಗಳಲ್ಲಿ ಭಾಗಿಯಾಗುವವರು ಶ್ರೀಮಂತ ಕುಟುಂಬದವರು, ಅಧಿಕಾರಸ್ಥರಾಗಿರುವುದರಿಂದ ಇವರ ವಿರುದ್ಧವಾಗಿ ಪ್ರಭುತ್ವ, ಆಡಳಿತ ವ್ಯವಸ್ಥೆ, ನಮ್ಮ ಕಾನೂನು, ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವುದರಿಂದ ಇಂತಹ ಪ್ರಕರಣಗಳು ಠಾಣೆಯಲ್ಲಿ ದಾಖಲಾಗಿರುವುದಿಲ್ಲ ನಮ್ಮ ವ್ಯವಸ್ಥೆಯು ಪುರುಷ ಆರೋಪಿಗಳ ಪರ ಇರುವುದು ಕಂಡುಬರುತ್ತಿದೆ.

೬. ಮಹಿಳಾ ದೌರ್ಜನ್ಯದ ಪ್ರಕರಣಗಳಲ್ಲಿ ಬಹುತೇಕ ಆರೋಪಿಗಳು ಖುಲಾಸೆ ಹೊಂದಿದ್ದು ಬೆರಳಣಿಕೆಯಷ್ಟೇ ಮಂದಿಗೆ ಶಿಕ್ಷೆಯಾಗಿದೆ. ನೊಂದ ಮಹಿಳೆಯರ ಪರವಾಗಿ ದೂರನ್ನು ಬಹುತೇಕ ಪೋಷಕರು ನೀಡುತ್ತಾರೆ. ಪೊಲೀಸ್ ಠಾಣೆಯ ಬಗೆಗಿನ ಅಭಿಪ್ರಾಯ ಮತ್ತು ತನಿಖೆಯ ಬಗ್ಗೆ ಮಹಿಳೆಯರು ಅಸಮಾಧಾನಗೊಂಡಿರುವುದು ಕಂಡುಬಂದಿದೆ. ದೌರ್ಜನ್ಯದ ಸಮಯದಲ್ಲಿ ಮಹಿಳಾ ಪರ ಕಾನೂನುಗಳ ತಿಳುವಳಿಕೆ, ಕೆಲವು ಮಂದಿಗೆ ಇದ್ದರೂ ಸಹ ನಮ್ಮ ಕಾನೂನುಗಳು ವ್ಯವಸ್ಥೆ, ಪ್ರಭುತ್ವ, ಪರೋಕ್ಷವಾಗಿ ಪುರುಷ ವರ್ಗದ ಪರವಾಗಿರುವುದರಿಂದ ಮತ್ತು ಕಾನೂನುಗಳನ್ನು ಪುರುಷವರ್ಗಕ್ಕೆ ಪೂರಕವಾಗಿ ರೂಪಿಸುವುದರಿಂದ ವ್ಯವಸ್ಥೆಯಲ್ಲಿ ಪುರುಷರನ್ನು ರಕ್ಷಿಸುವ ಕೆಲಸವನ್ನು ನಮ್ಮ ಕಾನೂನು ಮತ್ತು ತನಿಖೆ ಹಾಗೂ ಒಟ್ಟಾರೆ ವ್ಯವಸ್ಥೆ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಇದರಿಂದ ಮಹಿಳೆಯರಿಗೆ ಸಮಯಕ್ಕೆ ಸರಿಯಾಗಿ ಕಾನೂನುಗಳ ಬೆಂಬಲ ದೊರೆಯದಿರುವುದು ಗೋಚರವಾಗುತ್ತದೆ. ನಮ್ಮ ಕಾನೂನುಗಳು ಮೇಲ್ವರ್ಗದವರ, ಶ್ರೀಮಂತರ ಮತ್ತು ಅಧಿಕಾರಸ್ಥರ ಪರವಾಗಿಯೇ ಕೆಲಸ ನಿರ್ವಹಿಸುತ್ತಿರುವುದನ್ನು ನೋಡಬಹುದಾಗಿದೆ.

೭. ಕಾನೂನುಗಳಲ್ಲಿ ಕೆಲವು ಉಗ್ರ ಶಿಕ್ಷೆಗೆ ಗುರಿಪಡಿಸುವುಂತಾವುಗಳಾಗಿವೆ. ಇನ್ನೂ ಕೆಲವು ಉದಾರವಾಗಿವೆ. ನಮ್ಮ ಅಧ್ಯಯನದಿಂದ ತಿಳಿದುಬರುವುದೆನೆಂದರೆ ಉಗ್ರ ಕಾನೂನುಗಳನ್ನು ಅನ್ವಯಿಸುವಲ್ಲಿ ಪೋಲೀಸ್ ಠಾಣೆಗಳು ನಿರಾಸಕ್ತಿ, ಉಪೇಕ್ಷೆಗಳಿಂದ ದಾಖಲು ಮಾಡದಿರುವುದು ಕಂಡುಬರುತ್ತದೆ. ಅತ್ಯಾಚಾರ ಪ್ರಕರಣಗಳು, ಆಸೀಡ್ ದಾಳಿ ಪ್ರಕರಣಗಳು ಬಹುತೇಕವಾಗಿ ದಾಖಲಾಗದೇ ಉಳಿದುಕೊಳ್ಳುತ್ತವೆ. ಉದಾರವಾಗಿರುವ ವರದಕ್ಷಿಣೆ, ಹೆಣ್ಣುಮಕ್ಕಳ ಚುಡಾಯಿಸುವುದು, ಹೆಂಡತಿಯನ್ನು ಹೊಡೆಯುವುದು, ಕೌಟುಂಬಿಕ ಹಿಂಸೆ ಮುಂತಾದ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳು ಮಾತ್ರ ಹೆಚ್ಚಾಗಿ ದಾಖಲಾಗುತ್ತವೆ. ಇದರಿಂದ ಅಪರಾಧಿಗಳಿಗೆ ಶಿಕ್ಷೆಯ ಪ್ರಮಾಣ ಕಡಿಮೆ ಇರುವುದರಿಂದ ಮತ್ತೆ-ಮತ್ತೆ ಪ್ರಕತಣಗಳು ಮರುಕಳಿಸುತ್ತವೆ.

೮. ಒಟ್ಟಾರೆಯಾದ ದೃಷ್ಟಿಕೋನದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯುವಲ್ಲಿ ಇತ್ತೀಚಿನ ಚರ್ಚೆಗಳು, ವಾದಗಳು, ರುಜುವಾತು ಪಡಿಸುವಂತೆ ಕಠಿಣ ಕಾನೂನುಗಳನ್ನು ಜಾರಿಗೊಳಿಸುವ ಇಚ್ಛಾಶಕ್ತಿಯ ಕೊರತೆ, ತನಿಖೆಯ ಪಾರದರ್ಶಕತೆಯ ಸಂಗತಿಗಳನ್ನು ಪ್ರತಿಪಾದಿಸಿವೆ. ಆದರೆ ನಮ್ಮ ಅಧ್ಯಯನ ಪ್ರಸ್ತುತಪಡಿಸುತ್ತಿರುವ ಸಂಗತಿ ಏನೆಂದರೆ ಮೇಲಿನ ಅಂಶಗಳೇನು ಸರಿಯಾಗಿವೆ. ಆದರೆ ಇದಕ್ಕಿಂತಲೂ ಮುಖ್ಯವಾಗಿ ಸಮಾಜ ವ್ಯವಸ್ಥೆಯಲ್ಲಿ ಬದಲಾಗಬೇಕು. ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿಕೋನಗಳು ಸಮಗ್ರವಾಗಿ ಅವರ ನೈಜವಾದ ನೈಸರ್ಗಿಕ, ನಾಗರೀಕ, ಸಾಂಸ್ಕೃತಿಕ ಹಕ್ಕುಗಳನ್ನು ರಕ್ಷಿಸಲು ಅರಿವು ಮೂಡಿಸಬೇಕು. ಕೇವಲ ಉಗ್ರ ಕಾನೂನು, ಪೊಲೀಸ್ ಮತ್ತು ಅಧಿಕಾರ ವ್ಯವಸ್ಥೆಗಳೇ ಮಾತ್ರ ಹೊಣೆ ಹೊರಿಸಿದರೆ ಸಾಲದು. ನಮ್ಮ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳನ್ನು ನೋಡುವ ದೃಷಿಕೋನವು ಬದಲಾಗಬೇಕು. ಸ್ತ್ರೀ-ಪುರುಷ ಸಮಾನತೆಯ ಆದರ್ಶ ಸಮಾಜ ವ್ಯವಸ್ಥೆಯಲ್ಲಿ ನಿರ್ಮಾಣವಾದಾಗ ಮಾತ್ರ ಇದಕ್ಕೆ ಪರಿಹಾರಗಳು ಯಾವುವೆಂದು ಗೋಚರವಾಗುತ್ತವೆ.

೮.೨ ಅಧ್ಯಯನದ ಮಿತಿಗಳು

ಯಾವುದೇ ಬಗೆಯ ಸಂಶೋಧನೆಗಳು ಸಹ ಪರಿಪೂರ್ಣತೆಯನ್ನು ಹೊಂದಿರಲು ಸಾಧ್ಯವಿಲ್ಲ. ಅದರಲ್ಲೂ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಈ ಬಗೆಯ ಸಾಮಾಜಿಕ ಅಧ್ಯಯನಕ್ಕೆ ತೊಡಗಿಕೊಂಡಾಗ ಸಮಗ್ರವಾದ ಮಾಹಿತಿಯನ್ನು ಹೊರ ಹಾಕುತ್ತೇನೆ ಎಂದು ಹೊರಟದ್ದೇ ಆದರೆ ಅದು ಸಂಶೋಧಕರ ಅಹಂಕಾರವಾದಿತು. ಮಹಿಳಾ ಬದುಕಿನ ಸಂಗತಿಗಳು ಅದರಲ್ಲೂ ತೀರ ವೈಯಕ್ತಿಕ ಸಂಗತಿಗಳನ್ನು ಗ್ರಹಿಸಲು ಮನೋಲೋಕಕ್ಕೆ ಇಣುಕುವುದು ಸಂಕೀರ್ಣತೆಯೇ ಸರಿ, ನಿರ್ಬಂಧಿತ ಪರಿಸರದಲ್ಲಿ ಬದುಕುವುದು ರೂಢಿಗತವಾದ ಸ್ತ್ರೀ ಸಮುದಾಯ ತನ್ನ ಬದುಕಿನ ಹಲವು ಸಂಗತಿಗಳನ್ನು ನೇರವಾಗಿ ಹೊರ ಹಾಕುವಂತಹ ಸನ್ನಿವೇಶಗಳು ತೀರ ವಿರಳ ಇವೆ. ಅಂತಹ ಬಗೆಯ ಮನೋ ಭೂಮಿಕೆಯಲ್ಲಿ ರೂಪಿಸಿರುವ ಸಾಮಾಜಿಕರಣದಲ್ಲಿ ಮಹಿಳಾ ದೌರ್ಜನ್ಯಗಳನ್ನು (ಬೆಂಗಳೂರು ನಗರದ ಪೋಲೀಸ್ ದಾಖಲಾತಿ ಅನುಲಕ್ಷಿಸಿ) ಅಧ್ಯಯನಕ್ಕೆ ಒಳಪಡಿಸುವುದು

ಸವಾಲಿನ ಸಂಗತಿಯೇ ಸರಿ ಅಲ್ಲಿನ ದೌರ್ಜನ್ಯ ಹಿಂಸೆಗಳನ್ನು ಗ್ರಹಿಸುವಲ್ಲಿ ವಿಶ್ಲೇಷಣೆಗೆ ಒಳಪಡಿಸುವಲ್ಲಿ ಕೆಲವು ಕೊರತೆಗಳು ಕಾಣಿಸಬಹುದು. ಇದು ಅಧ್ಯಯನದ ಮಿತಿಯೂ ಹೌದು. ಸಾಕಷ್ಟು ವಿಸ್ತೃತವಾದ ವ್ಯಾಪ್ತಿಯನ್ನು ಹೊಂದಿರುವ ಪ್ರಸ್ತುತ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನಕ್ಕಿರುವ ಕಾಲಮಿತಿಯಲ್ಲಿ ಅಸಾಧ್ಯವಾದುದು. ಈ ನಿಟ್ಟಿನಲ್ಲಿ ಮಹಿಳಾ ದೌರ್ಜನ್ಯಗಳನ್ನು ಚರ್ಚೆ ಮಾಡುವ ಮೂಲಕ ದೌರ್ಜನ್ಯ ಹಿಂಸೆಯ ಪ್ರಮುಖವಾದ ಕುರುಹುಗಳು ಕಾಣಿಸಿರುವ ಕೌಟುಂಬಿಕ ವಲಯ ಹಾಗೂ ಸಾರ್ವಜನಿಕ ವಲಯಗಳ ದೌರ್ಜನ್ಯವನ್ನು ಕೇವಲ ಬೆಂಗಳೂರು ನಗರಕ್ಕೆ ಸೀಮಿತಗೊಳಿಸಿರುವುದು ಅಧ್ಯಯನದ ಮಿತಿಯಾಗಿದೆ.

ಬೆಂಗಳೂರು ನಗರದಲ್ಲಿ ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರು ಎಲ್ಲಾ ವಲಯಗಳಲ್ಲಿಯೂ ಕಂಡು ಬರುವುದರಿಂದ ಬೆಂಗಳೂರಿನಲ್ಲಿ ಅನೇಕ ವಲಯಗಳಿದ್ದು ಪ್ರತಿ ವಲಯದಲ್ಲಿ ಅನೇಕ ಠಾಣೆಗಳಿದ್ದರಿಂದ ಪ್ರತಿ ವಲಯದಲ್ಲಿಯೂ ಸಹ ಕೆಲವೇ ಕೆಲವು ಠಾಣೆಗಳ ಪ್ರಕರಣವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿರುವುದು ಅಧ್ಯಯನದ ಮಿತಿಯಾಗಿದೆ.

೮.೩ ಅಧ್ಯಯನದ ಮುಂದಿನ ಸಾಧ್ಯತೆಗಳು

ಮಹಿಳಾದೌರ್ಜನ್ಯ ಲಿಂಗಸಂಬಂಧಿ ಅಧ್ಯಯನ (ಬೆಂಗಳೂರು ನಗರದ ಪೋಲೀಸ್ ದಾಖಲೆಯನ್ನು ಅನುಲಕ್ಷಿಸಿ) ಎಂಬ ಅಧ್ಯಯನಗಳನ್ನು ಆಯ್ದುಕೊಳ್ಳಲಾಗಿದೆ. ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ ಮತ್ತು ಹಿಂಸೆಗಳನ್ನು ಹಲವಾರು ಆಯಾಮಗಳಲ್ಲಿ ಅಧ್ಯಯನ ಮಾಡಬಹುದಾದ್ದರಿಂದ ಅಧ್ಯಯನದ ಮುಂದಿನ ಸಾಧ್ಯತೆಗಳನ್ನು ಗುರುತಿಸುವ ಪ್ರಯತ್ನವನ್ನು ಸಹ ಮಾಡಲಾಗಿದೆ.

೧. ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರನ್ನು ಒಳಗೊಂಡಂತೆ ಕೌಟುಂಬಿಕ ಹಾಗೂ ಸಾರ್ವಜನಿಕ ವಲಯಗಳ ದೌರ್ಜನ್ಯವೆಂಬ ಪ್ರತ್ಯೇಕ ಅಧ್ಯಯನ ಮಾಡುವ ಸಾಧ್ಯತೆ ಇದೆ.

೨. ಈ ಸಂಶೋಧನೆಯಲ್ಲಿ ಸಾರ್ವಜನಿಕ ವಲಯಗಳಲ್ಲಿನ ದೌರ್ಜನ್ಯದಲ್ಲಿ ಪ್ರತ್ಯೇಕವಾಗಿ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಮಹಿಳಾ ದೌರ್ಜನ್ಯವನ್ನು ಅಧ್ಯಯನ ಮಾಡುವ ಸಾಧ್ಯತೆ ಇದೆ.

೩. ಈ ಸಂಶೋಧನೆಯಲ್ಲಿ ಬೆಂಗಳೂರು ನಗರದ ಠಾಣೆಗಳಲ್ಲಿನ ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಸಂಶೋಧನೆಗಳಿಗೆ ಒಳಪಡಿಸುವುದಕ್ಕಿಂತ ಯಾವುದಾದರೂ ನಗರದ ಒಂದು ವಲಯಕ್ಕೆ ಸೀಮಿತವಾಗಿ ಅಧ್ಯಯನ ಮಾಡುವ ಸಾಧ್ಯತೆ ಇದೆ.

೪. ಸಾರ್ವಜನಿಕ ವಲಯಗಳಲ್ಲಿ ಅದರಲ್ಲೂ ಕೆಲಸದ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಸೆಲ್‌ಗಳನ್ನು ಒದಗಿಸಲಾಗಿದೆ. ಆ ಸೆಲ್‌ಗಳ ಉದ್ದೇಶ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮಹಿಳಾ ಬದುಕಿಗೆ ಪೂರಕವಾಗಿ ನಿಲ್ಲಲು ಅದು ಸಹಕಾರಿಯಾಗಿದೆಯೇ? ಅಲ್ಲಿನ ಅಧಿಕಾರಿ ವರ್ಗ, ಈ ಸೆಲ್

ಕಾರ್ಯನಿರ್ವಹಿಸುವಂತಾಗಲು ಪೂರಕವಾಗಿದೆಯೇ? ತಡೆಯನ್ನುಂಟು ಮಾಡುತ್ತಿದೆಯೇ? ಎಂಬುದನ್ನು ಅಧ್ಯಯನ ಮಾಡುವ ಸಾಧ್ಯತೆ ಇದೆ.

೫. ಈಗಾಗಲೇ ಈ ಕುರಿತು ನಡೆದ ಅಧ್ಯಯನಗಳ ಅಂಕಿಅಂಶಗಳ ವಿಶ್ಲೇಷಣೆ ರೂಪಿತವಾದ ಯೋಜನೆಗಳು, ಕಾನೂನುಗಳು, ಮಹಿಳೆಯರ ವಿರುದ್ದ ನಡೆಯುವ ಹಿಂಸೆಯನ್ನು ತಡೆಯುವಲ್ಲಿ ಯಶಸ್ವಿಯಾಗಿವೆಯೇ? ವೈಫಲ್ಯವಾಗಿವೆಯೇ? ಎಂಬುದನ್ನು ಆಧರಿಸಿ ಅಧ್ಯಯನ ಮಾಡುವ ಸಾಧ್ಯತೆ ಇದೆ.

೬. ದೌರ್ಜನ್ಯಗಳ ವಿರುದ್ದ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಘ–ಸಂಸ್ಥೆಗಳು ಈ ಸಮಸ್ಯೆಗಳನ್ನು ಗ್ರಹಿಸುವ ಸ್ವರೂಪ, ಅದರ ನಿವಾರಣೆಗೆ ಯತ್ನಿಸುವ ಬಗೆಗಳನ್ನಾಧರಿಸಿ ಅಧ್ಯಯನ ಮಾಡುವ ಸಾಧ್ಯತೆ ಇದೆ.

೭. ಸಾರ್ವಜನಿಕ ವಲಯವನ್ನು ಪ್ರವೇಶಿಸುವ ಸ್ತ್ರೀ ಪುರುಷರಿಬ್ಬರ ಮೇಲಾಗುತ್ತಿರುವ, ದೌರ್ಜನ್ಯ ಹಿಂಸೆಗಳ ತೌಲನಿಕ ಅಧ್ಯಯನ ಮಾಡುವ ಸಾಧ್ಯತೆ ಇದೆ.

೮. ಮಹಿಳಾ ಪ್ರಕರಣಗಳನ್ನು ದಾಖಲಿಸುವಾಗ ಮತ್ತು ದಾಖಲಿಸಿದ ನಂತರ ಅಧಿಕಾರಿ ವರ್ಗ ಮತ್ತು ಸಮಾಜವು ಮಹಿಳೆಯನ್ನು ಯಾವ ದೃಷ್ಟಿಕೋನದಲ್ಲಿ ನೋಡುತ್ತಾರೆಂಬ ಅಧ್ಯಯನ ಮಾಡುವ ಸಾಧ್ಯತೆ ಇದೆ.

೮.೪ ಅಧ್ಯಯನದ ಸಲಹೆಗಳು

ಪ್ರಸ್ತುತ ವಿಷಯದ ಅಧ್ಯಯನವು ಒಂದು ಬಗೆಯಲ್ಲಿ ಪೂರ್ಣಗೊಂಡ ನಂತರ ಅಧ್ಯಯನದ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಈ ಬಗೆಯ ಸಮಗ್ರ ಚಿಂತನೆಯನ್ನಾಧರಿಸಿ ಕೆಲವು ಸಲಹೆಗಳನ್ನು ನೀಡಲಾಗುತ್ತದೆ.

- ಪ್ರಜಾಸತ್ತಾತ್ಮಕವಾದ ಭಾರತದಲ್ಲಿ ಸ್ತ್ರೀರಕ್ಷಣೆ ಹಾಗೂ ಉನ್ನತಿಗಾಗಿ ಅನೇಕ ಕಾಯ್ದೆ ಕಟ್ಟಳೆಗಳು ರೂಪಿಸಲ್ಪಟ್ಟಿವೆ. ದುರಂತವೆಂದರೆ ಬಹುತೇಕ ಕಾಯ್ದೆಗಳು ಹಲ್ಲಿಲ್ಲದ ಹಾವಿನಂತಿವೆ, ಇದರಿಂದಾಗಿ ಸ್ತ್ರೀಯನ್ನು ರಕ್ಷಿಸುವ ಆ ಕಾಯ್ದೆಗಳ ಮೂಲ ಉದ್ದೇಶವನ್ನು ಈಡೇರಿಸುವಲ್ಲಿ ಬಹುತೇಕ ಕಾಯ್ದೆಗಳು ವಿಫಲವಾಗಿವೆ. ಈ ಕಾಯ್ದೆಗಳು ಇನ್ನಷ್ಟು ಪರಿಣಾಮಕಾರಿಯಾಗಿ ಇಂದಿನ ಅಗತ್ಯತೆಗೆ ತಕ್ಕಂತೆ ಪುನರ್ ರೂಪ ಪಡೆಯಬೇಕಾಗಿದೆ.
- ನಮ್ಮ ಸಂವಿಧಾನದಲ್ಲಿರುವ ಕಾನೂನುಗಳನ್ನು ಪುನರ್‌ಪರಿಶೀಲಿಸುವ ಅವಶ್ಯಕತೆಯಿದ್ದು, ಅವುಗಳನ್ನು ಮಹಿಳೆಯರ ಸಂರಕ್ಷಣೆಗೋಸ್ಕರ ಬಿಗಿಗೊಳಿಸಬೇಕಾದ ತುರ್ತು ರಾಜ್ಯ ಮತ್ತು ಕೇಂದ್ರಸರ್ಕಾರಗಳ ಜವಾಬ್ದಾರಿಯಾಗಿದೆ.
- ಈ ರೀತಿ ರೂಪಿತಗೊಂಡ ಕಾನೂನುಗಳು ಅಷ್ಟೇ ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕಾಗಿದೆ. ಅಧಿಕಾರಸ್ಥರು ಕಾನೂನುಗಳನ್ನು ಯಾವುದೇ ಪೂರ್ವಾಗ್ರಹಗಳಿಂದ ಪೀಡಿತರಾಗದೇ ಜಾರಿಗೊಳಿಸುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

- ಆಧುನಿಕ ಅಗತ್ಯತೆಗಳಿಗೆ (ಒಗ್ಗಿಕೊಂಡು) ಹೊಂದಿಕೊಂಡು ಸ್ತ್ರೀ ಪುರುಷರು ಪರಸ್ಪರ ಗೌರವದೊಂದಿಗೆ ಕುಟುಂಬವನ್ನು ನಿರ್ವಹಿಸಿಕೊಂಡು ಸಂಘರ್ಷಗಳನ್ನು ನಿವಾರಿಸಿ ಹೊಂದಾಣಿಕೆಯಿಂದ ಜೀವನ ಸಾಗಿಸುವಂತಾಗಬೇಕು. ಇದರಿಂದ ಬಹಳಷ್ಟು ಕೌಟುಂಬಿಕ ದೌರ್ಜನ್ಯಗಳನ್ನು ತಡೆಯಬಹುದಾಗಿದೆ.

- ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಿಂಸೆಗಳನ್ನು ತಡೆಯಲು ಹಲವು ಕಾಯ್ದೆ ಕಾನೂನುಗಳು ಜಾರಿಯಾಗಿವೆ. ಆದರೆ ಅವುಗಳು ಮಹಿಳಾ ಬದುಕನ್ನು ತಲುಪುವಲ್ಲಿ ವಿಫಲವಾಗುತ್ತಿವೆ. ಮೊಟ್ಟ ಮೊದಲನೆಯದಾಗಿ ಇಂಥದ್ದೊಂದು ಕೃತ್ಯಕ್ಕೆ ಕೈ ಹಾಕಿದರೆ ಬದುಕಲು ಸಾಧ್ಯವಿಲ್ಲವೆಂಬಂತಹ ಕಾನೂನುಗಳು ಜಾರಿಯಾಗಬೇಕು. ಉದಾ : ಭ್ರೂಣ ಹತ್ಯೆ ತಡೆಯಲು (PC and PND Act) ಜಾರಿಗೊಳಿಸಲಾಗಿದೆ. ಇದು ಎಲ್ಲೆಡೆಯೂ ಕಡ್ಡಾಯವಾಗಿ ಜಾರಿಯಾಗುವಂತೆ ಕ್ರಮಗೊಳ್ಳುವುದು ಜೊತೆಗೆ ಜನ ಸಾಮಾನ್ಯರಿಂದ ಮೊದಲುಗೊಂಡು ಇಲ್ಲಿ ಅಗತ್ಯವಿರುವ ಪೋಲಿಸ್, ವಕೀಲರಿಗೆ, ವೈದ್ಯರುಗಳಿಗೆ ಜಾಗೃತಿ ಮೂಡಿಸಬೇಕು. ಈ ಬಗೆಯ ಅರಿವಿದ್ದಾಗಲೂ ಈ ಕಾಯ್ದೆಯನ್ನು ಉಲ್ಲಂಘಿಸುತ್ತಿರುವುದನ್ನು ಪತ್ತೆ ಹಚ್ಚುವ ಮೂಲಕ ಅವರ ಮೇಲೆ ಕ್ರಮ ಕೈಗೊಳ್ಳಬಹುದು.

- ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಯಾವ ಒತ್ತಡಗಳಿಗೂ ಮಣಿಯದೇ ಪೋಲಿಸ್ ಮತ್ತು ಕೋರ್ಟ್ ಯಾವುದೇ ತನಿಖಾ ಹಂತದಲ್ಲೂ ಹೆದರದೆ ಕಾನೂನಿಂದ ಅಪರಾಧಿಗೆ ಶಿಕ್ಷೆಯನ್ನು ಕೊಡಿಸುವ ನಿಟ್ಟಿನಲ್ಲಿ ಹೋರಾಟ ಮಾಡಬೇಕು.

- ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮೌಲ್ಯ ಸಂಪ್ರದಾಯಗಳ ನೆಲೆಗಳಲ್ಲಿ ಹಾಗೂ ಕುಟುಂಬದಿಂದ ಮತ್ತು ಸಮಾಜದಿಂದಾಗುವ ಯಾವುದೇ ಪರಿಣಾಮಗಳಿಗೆ ಅಂಜದೆ ಪ್ರಕರಣಗಳನ್ನು ದಾಖಲಿಸಬೇಕು.

- ಮಹಿಳೆಯರಿಗೆ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿನ ಮಹಿಳೆಯರಿಗೆ ಇಂದು ಕಾನೂನುಗಳ ತಿಳುವಳಿಕೆ, ಪೋಲೀಸ್ ಠಾಣೆ, ಕೋರ್ಟ್, ಇತರೇ, ಕಾನೂನು ಹೋರಾಟದ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಸರ್ಕಾರಗಳು ಅಧ್ಯಯನ ಶಿಬಿರಗಳು, ಸಭೆ ಸಮಾರಂಭಗಳನ್ನು ಆಯೋಜಿಸಿ ಕಾನೂನು ಜಾಗೃತಿ ಮೂಡಿಸಬೇಕಾಗಿದೆ.

- ಮಹಿಳೆಯರು ತಮ್ಮ ದೌರ್ಜನ್ಯವನ್ನು ತಾವೇ ತಡೆಯುವಂತಾಗಲು ಕರಾಟೆ, ಕುಂಗ್–ಫು, ಜೀಮ್‌ಗಳಂತಹ ಸಾಹಸ ಮನೋಭಾವನೆಗಳನ್ನು ಬೆಳೆಸಿಕೊಳ್ಳಬೇಕಾಗಿದೆ.

- ಪುರುಷರಿಗೆ ಸರಿಸಮಾನವಾದಂತಹ ರಾಜಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ಮಹಿಳೆಯರಿಗೂ ನೀಡಬೇಕಾದ ಅಗತ್ಯವಿದೆ.

- ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದ ಕಾನೂನುಗಳನ್ನು ರೂಪಿಸಲು ಮಹಿಳೆಯರ ಹಕ್ಕುಗಳ ಪರವಾಗಿ ಹೋರಾಡುವ ಮಹಿಳಾ ಹೋರಾಟಗಾರ್ತಿಯರೇ ತಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ.
- ಮಹಿಳೆಯರ ಸಬಲೀರಣಕ್ಕೆ ಚ್ಯುತಿಯನ್ನುಂಟು ಮಾಡುವ ಅಧಿಕಾರಿವರ್ಗದ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ.

ಅನುಬಂಧಗಳು

ಅನುಬಂಧಗಳು

ಮಾಹಿತಿದಾರರ ಪಟ್ಟಿ

ಕ್ರ. ಸಂ	ಹೆಸರುಗಳು	ವಾಸ ಸ್ಥಳ	ದೂರು ದಾಖಲಾದ ಪೊಲೀಸ್ ಠಾಣೆಯ ಹೆಸರು
೧	ವನಿತಾ	ಕಮ್ಮನಹಳ್ಳಿ	ಬಾಣಸವಾಡಿ
೨	ಶಶಿಕಲಾ	ರಂಗಪ್ಪ ಗಾರ್ಡನ್	ವಿವೇಕನಗರ
೩	ಗೀತಾ	ಸದಾಶಿವನಗರ, ೧೩ ನೇ ಕ್ರಾಸ್	ಸದಾಶಿವನಗರ
೪	ಪಾರ್ವತಿ	ಸದಾಶಿವನಗರ, ಬಳ್ಳಾರಿ ರಸ್ತೆ	ಸದಾಶಿವನಗರ
೫	ನಿವೇದಿತಾ	ತಿಮ್ಮಯ್ಯ ರಸ್ತೆ	ಶಿವಾಜಿನಗರ
೬	ಸರೋಜಮ್ಮ	ಉದಯನಗರ	ಕೆ.ಆರ್. ಪುರ
೭	ರಾಧ	ಮರಿಯಪ್ಪನಪಾಳ್ಯ	ಜ್ಞಾನಭಾರತಿ
೮	ರಜಿಯಾ	ಜೈಜವಾನ್ ನಗರ	ಬಾಣಸವಾಡಿ
೯	ಮುಭೀನಾ	ಟಿನ್ ಫ್ಯಾಕ್ಟರಿ	ಕೆ.ಆರ್ ಪುರ
೧೦	ಮುಭೀನಾ	ಬಾಣಸವಾಡಿ, ಹಳೇ ಚರ್ಚ್ ಬೀದಿ	ಬಾಣಸವಾಡಿ
೧೧	ಲಕ್ಷ್ಮಿ	ವಿನೋಬಾವ ನಗರ	ಎಸ್.ಜೆ ಪಾರ್ಕ್
೧೨	ತಬಸ್ಸುಮ್	ಶಿವಾಜಿನಗರ	ಶಿವಾಜಿನಗರ
೧೩	ಶಶಿಕಲಾ	ಸುಬ್ಬಣ್ಣ ಗಾರ್ಡನ್ ವಿಜಯನಗರ	ವಿಜಯನಗರ
೧೪	ಗಾಯತ್ರಿ	ಕರಗಪ್ಪ ಗಾರ್ಡನ್	ಹಲಸೂರು ಗೇಟ್
೧೫	ಮಮತಾ	ಮಾಧವನಗರ	ಹೈಗ್ರೌಂಡ್
೧೬	ಸರಸ್ವತಿ	ತಿಮ್ಮಯ್ಯ ರಸ್ತೆ	ಭಾರತಿನಗರ
೧೭	ಲಕ್ಷ್ಮಿ	ಶಿವಾಜಿನಗರ, ಪಾಸ್ಕರ್ ಟೌನ್	ಶಿವಾಜಿನಗರ
೧೮	ವನಿತಾ	ಅಶ್ವಥ್ ನಗರ	ಎಸ್.ಜೆ ಪಾರ್ಕ್
೧೯	ಚಂದ್ರಕಲಾ	ಈಜಿಪುರ	ವಿವೇಕನಗರ
೨೦	ಪವಿತ್ರ	ಹಳೇಚಾಮರಾಜಪೇಟೆ	ಹಲಸೂರು ಗೇಟ್
೨೧	ನಜಿಯಾ	ಕಮ್ಮನಹಳ್ಳಿ	ಬಾಣಸವಾಡಿ
೨೨	ಮಂಜುಳಾ	ಬಾಪೂಜಿನಗರ	ವಿಜಯನಗರ
೨೩	ಶೋಭಾ	ಕುಳ್ಳಪ್ಪ ಸರ್ಕಲ್	ಬಾಣಸವಾಡಿ

ಪರಮಾರ್ಶನ ಗ್ರಂಥಗಳು

ಪರಮಾರ್ಶನ ಗ್ರಂಥಗಳು

೧. ಅನಂತಮೂರ್ತಿ ಯು.ಆರ್, ಹಿಂಸೆ ಏಡ-ಬಲ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

೨. ಅನುಸೂಯ ಕಾಂಬಳೆ, **ವಿಚಾರ ಸಾಹಿತ್ಯಾ ಹೆಣ್ಣು,** ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಭಾಗ, ೧೯೯೯.

೩. ಅಂದನೂರು **ಶೋಭಾ, ಮಹಿಳೆಯ ಮುನ್ನಡೆ,** ಮಾನಸಿ ಪ್ರಕಾಶನ, ಬೆಂಗಳೂರು, ೧೯೮೮.

೪. ಅನಂತ ರಾಮಾರಾವ್, **ಸುವರ್ಣ ಕರ್ನಾಟಕ ದರ್ಶನ,** ವಿದ್ಯಾಪಬ್ಲಿಕೇಶನ್, ಕದ್ರಿ, ಮಂಗಳೂರು, ೨೦೦೭.

೫. ಆಶಾದೇವಿ.ಎಂ.ಎಸ್. **ಸ್ತ್ರೀ ಮತವನುತ್ತರಿಸಲಾದಿತೇ?** ಅಕ್ಷರ ಪ್ರಕಾಶನ, ೨೦೦೪.

೬. ಇಂದಿರಾ.ಆರ್. **ಮಹಿಳೆ ಮತ್ತು ಕೌಟುಂಬಿಕ ಹಿಂಸೆ,** ರಾಘವ ಟ್ರಸ್ಟ್, ಮೈಸೂರು, ೨೦೦೦.

೭. ಇಂದಿರಾ.ಆರ್.**ಮಹಿಳೆ ಸಮಾಜ ಮತ್ತು ಸಂಸ್ಕೃತಿ,**ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೮. ಇಂದಿರಾ ಜೈಪ್ರಕಾಶ್, **ಸ್ತ್ರೀವಾದಿ ಮನೋವಿಜ್ಞಾನ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯.

೯. ಉಷಾ.ಎಂ.**ಮಹಿಳೆ ಮತ್ತು ಜಾತಿ ಒಂದು ಸೈದ್ಧಾಂತಿಕ ಗ್ರಹಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೧೦.ಒಡೆಯರ್.ಡಿ.ಹೆಗಡೆ, **ಮಹಿಳಾ ಹಕ್ಕುಗಳು,** ಅಜುನ್ ಪಬ್ಲಿಷಿಂಗ್ ಹೌಸ್, ೨೦೦೭.

೧೧. ಕವಿತ ರೈ ಬಿ ಆರ್. **ಮಹಿಳಾ ಅಸ್ತಿತ್ವದ ಸಂಕಥನ,** ಸಿ.ವಿ.ಜಿ. ಬೆಂಗಳೂರು, ೨೦೦೫.

೧೨. ಕಮಲ ಹಂಪನ, (ಅನು) **ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಜಾತಿ ಮೀಮಾಂಸೆ,** ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು, ೨೦೦೬.

೧೩.ಕಮಲ.ಎಂ.ಆರ್, **ಕಪ್ಪು ಹಕ್ಕಿಯ ಬೆಳಕಿನ ಹಾಡು,** ಕಥನ ಪ್ರಕಾಶನ, ಬೆಂಗಳೂರು, ೨೦೦೮.

೧೪. ಕಬ್ಬೂರ ಕೇಸ್, **ಭಾರತದಲ್ಲಿ ಪ್ರಜಾ ಪ್ರಭುತ್ವ** ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೧೯೯೨.

೧೫.ಗಾಯಿತ್ರಿ ನವಡ, **ಮಹಿಳಾ ಸಂಕಥನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೬.ಗಾಯಿತ್ರಿ ಎನ್. **ಮಹಿಳೆ ಬಿಡುಗಡೆಯ ಹಾದಿಯಲ್ಲಿ,** ನವ ಕರ್ನಾಟಕ ಪ್ರಕಾಶನ, ೧೯೯೬.

೧೭.ಗೀತಾಕೃಷ್ಣಮೂರ್ತಿ, **ಮಹಿಳಾ ಹಕ್ಕುಗಳು ಮಾನವ ಹಕ್ಕುಗಳ ನೆಲೆಯಲ್ಲಿ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯.

೧೮. ಗೀತಾಕೃಷ್ಣಮೂರ್ತಿ, **ಮಹಿಳೆ ಸಮಾಜ ಮತ್ತು ಕಾನೂನು,** ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭.

೧೯.ಗಣೇಶ್ ಮೊಗಳ್ಳಿ, **ದಲಿತರು ಮತ್ತು ಜಾಗತೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪.

೨೦.ಚಂದ್ರಶೇಖರ್ ಕಂಬಾರ, **ದೇಶೀಯ ಚಿಂತನೆ,** ಅಂಕಿತ ಪುಸ್ತಾಕಾಲಯ, ಬೆಂಗಳೂರು, ೨೦೦೪.

೨೧. ಚಂದ್ರಶೇಖರ್ ಟಿ.ಆರ್. **ಮಹಿಳೆಯ ಆರ್ಥಿಕತೆ ಮತ್ತು ಅಭಿವೃದ್ಧಿ,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩.

೨೨. ಚಂದ್ರಪೂಜಾರಿ ಎಂ, **ಸಂಶೋಧಕರು ಮತ್ತು ಕಾರ್ಯಕ್ಷೇತ್ರ,** ಪ್ರಸಾರಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮.

೨೩. ಚಂದ್ರಪೂಜಾರಿ ಎಂ, **ಸಂಶೋಧನಾ ಪ್ರಸ್ತಾವ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫.

೨೪. ಚಂದ್ರಪೂಜಾರಿ.ಎಂ. **ಸಂಶೋಧನಾ ಜವಾಬ್ದಾರಿ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮.

೨೫. ಚಂದ್ರಶೇಖರ್.ಬಿ.ಎಸ್. **ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೧.

೨೬.ಚಂದ್ರಶೇಖರ್.ಟಿ.ಆರ್. **ವಿಕೇಂದ್ರೀಕರಣ ತತ್ವ ಮತ್ತು ಆಚರಣೆ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೭.ಚಂದ್ರಶೇಖರ್.ಎಸ್. **ಆಧುನಿಕ ಕನಾಟಕ ಆಂದೋಲನಗಳು,** ನಮ್ಮ ಪ್ರಕಾಶನ ಬಿಳಿಗೆರೆ, ೨೦೦೬.

೨೮. ಜವರಯ್ಯ, ಮ.ನ. **ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ,** ಸಿದ್ಧಾರ್ಥ ಗ್ರಂಥ ಮಾಲೆ, ಮೈಸೂರು, ೧೯೯೫.

೨೯.ಜೋಗನ್ ಶಂಕರ್, **ಗ್ರಾಮ ಸಮಾಜ,** ಜೀವ ಪ್ರಕಾಶ, ಮೈಸೂರು, ೧೯೯೫.

೩೦.ದಪ್ತಗಿರ ಸಾಭ್, ದಿನ್ನಿ(ಸಂ) **ಜಗತೀಕರಣ ಮತ್ತು ಸಂಸ್ಕೃತಿ,** ಕನಸು ಪ್ರಕಾಸನ, ೨೦೦೪.

೩೧.ದಿಬ್ಬದ ಶಾಂತಿನಾಥ : **ವೈಚಾರಿಕ ಲೇಖನಗಳು,** ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೫.

೩೨. ದೇಜಗೌ, **ಸಮಾಜವಾದಿ ರಾಮಮನೋಹರ ಲೋಹಿಯಾ,** ಸಹ್ಯಾದ್ರಿ ಪ್ರಕಾಶನ, ೧೯೮೯

೩೩.ದೇಜಗೌ, **ಆಧುನಿಕ ಭಾರತದ ರಾಜಕೀಯ ವಿಚಾರಧಾರೆ,** ಶೃಂಗಾರ ಪ್ರಕಾಸನ, ಚಿಕ್ಕನಾಯಕನಹಳ್ಳಿ, ೨೦೦೩.

೩೪. ದೇಜಗೌ, **ಸಮಾಜವಾದಿ ರಾಮ ಮನೋಹರ ಲೋಹಿಯಾ,** ಸಹ್ಯಾದ್ರಿ ಪ್ರಕಾಶನ, ೧೯೮೯.

೩೫.ನರಗುಂದ, ಎಸ್.ಬಿ. **ಭಾರತದ ರಾಷ್ಟ್ರೀಯ ಚಿಂತನ,** ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೪.

೩೬.ನಂಜಮಣ್ಣಿ ಎಂ. **ಭಾರತೀಯ ಸಾಮಾಜಿಕ ಸಂಸ್ಥೆಗಳು,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೩.

೩೭.ನಿರುಪಮ ಎಂ, **ಧರ್ಮ ಶಾಸ್ತ್ರಗಳು, ಸ್ತ್ರೀ ಹಾಗೂ ಶೋಷಣೆ,** ಆರತಿ ಪಬ್ಲಿಕೇಷನ್, ಬೆಂಗಳೂರು, ೧೯೯೬.

೩೮.ನೀಲಾ.ಕೆ **ಬದುಕು ಬಂದಿಖಾನೆ,** ಅಖಿಲ ಭಾರತ ಜನವಾದಿ ಮಹಿಳಾ ಸಂಘಟಣೆ, ಕರ್ನಾಟಕ ರಾಜ್ಯ ಸಮಿತಿ, ೨೦೦೧.

೩೯.ನೇಮಿಚಂದ್ರ (ಸಂ) **ಮಹಿಳಾ ಲೋಕ,** ನವ ಕನಾಟಕ ಪ್ರಕಾಶನ, ೨೦೦೫.

೪೦.ಪಾರ್ವತಮ್ಮ ಸಿ. **ಮೀಸಲಾತಿ ಒಂದು ಗಗನ ಕುಸುಮ,** ಶಿಕ್ಷಣ ಮುಖೇನ ಪ್ರಗತಿ, ಹುಣಸೂರು, ೨೦೦೧.

೪೧. ಪಾಟೀಲ ವಸಂತ, **ಪಂಚಾಯಿತಿ ಆಡಲಿತ ಸಾಧಕ–ಬಾಧಕಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೮.

೪೨. ಪ್ರೀತಿ ಶುಭಚಂದ್ರ, **ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೪೩. ಬರಗೂರು ರಾಮಚಂದ್ರಪ್ಪ, **ಸಂಸ್ಕೃತಿ, ಶ್ರಮ ಮತ್ತು ಸ್ವಭಾವಶೀಲತೆ,** ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫.

೪೪. ಬಡಿಹಗೇರ್.ಜಿ.ಎಲ್. **ಭಾರತದ ಗ್ರಾಮೀಣ ಅಭಿವೃದ್ಧಿ,** ಸಂಗಮೇಶ್ವರ ಪ್ರಕಾಶನ, ಸಂಕೇಶ್ವರ, ೧೯೯೮.

೪೫. ಭಾರತಿ ಹಾದಿಗೆ ಬಿ.ಎಂ. **ಭಾರತೀಯ ಸಮಾಜದ ರಚನೆ ಮತ್ತು ಬದಲಾವಣೆ,** ಚೇತನ ಬುಕ್ ಹೌಸ್, ಮೈಸೂರು, ೨೦೦೫.

೪೬.ಭೈರಪ್ಪ.ಕೆ, **ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ,** ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರ್ಗಿ, ೧೯೯೭.

೪೭.ಭೈರಪ್ಪ ಕೆ. **ಸಮಗ್ರ ಗ್ರಾಮೀಣ ಸಮಾಜ** ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೪೮. ಭೈರಪ್ಪ.ಕೆ. **ಪಾಶ್ಚಿಮಾತ್ಯ ಮತ್ತು ಭಾರತೀಯ ರಾಜಕೀಯ ಚಿಂತಕರು,** ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೧.

೪೯.ಮಧುಕೇಶ್. ಡಾ. ಕಲ್ಪನಾ ಚಾವ್ಲಾ, **ಅಂತರಿಕ್ಷದ ಚಿರಂತನ ನಕ್ಷತ್ರ,** ಅಖಿಲ ಏಜೆನ್ಸಿ, ಮೈಸೂರು, ೨೦೦೩.

೫೦.ಮಹೇಶ ಹೆಚ್. (ಸಂ). **ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ,** ಐ.ಸಿ.ಆರ್.ಎ, ಬೆಂಗಳೂರು, ೧೯೯೯.

೫೧.ಮರುಳಸಿದ್ದಯ್ಯ ಹೆಚ್.ಎಂ., **ಸಮುದಾಯ ಸಂಘಟನೆ,** ಐ.ಬಿ.ಹೆಚ್. ಪಬ್ಲಿಕೇಶನ್, ಬೆಂಗಳೂರು, ೨೦೦೩.

೫೨. ಮಣಿಪಾಲ ಆರ್.ಕೆ. **ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ,** ಸಮಕ್ರಮಣ ಪ್ರಕಾಶನ, ಧಾರವಾಡ, ೧೯೯೫.

೫೩.ಮಾಲಗತ್ತಿ ಅರವಿಂದ, **ಡಾ. ಅಂಬೇಡ್ಕರರ ವಿಚಾರಧಾರೆ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧.

೫೪. ಮಾಲಗತ್ತಿ ಅರವಿಂದ, **ಸಾಂಸ್ಕೃತಿಕ ದಂಗೆ,** ರಾಜ ಪ್ರಕಾಶನ ಮೈಸೂರು, ೨೦೦೪.

೫೫.ಮುಡುಬಿ ಬಾಬುರಾವ್., ಮಹಿಳಾ **ಸಬಲೀಕರಣ ಮತ್ತು ಅಂಬೇಡ್ಕರ್ರ ದೃಷ್ಟಿಕೋನ,** ಲಕ್ಷ್ಮೀ ಪ್ರಕಾಶನ, ಬೆಂಗಳೂರು, ೨೦೦೬.

೫೬.ಮೂರ್ತಿ.ಎನ್. **ಹೋರಾಟದ ಮಹಾಪ್ರಬಂಧ,** ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು, ೨೦೦೬.

೫೭.ಮೂರ್ತೇಶ್ವರಯ್ಯ. ಬಿ.ಕಾ. **ಮಹಿಳೆ ಸಮಾಜ ಮತ್ತು ಕಾನೂನು,** ಕರ್ನಾಟಕ ಬುಕ್ ಏಜೆನ್ಸಿ, ೨೦೦೦.

೫೮.ರಹಮತ್ ತರೀಕೆರೆ. **ವಸಾಹಾತೋತ್ತರ ಪ್ರಶ್ನೆ ಮತ್ತು ವಿಮೋಚನೆ** ಬೆಳ್ಳಿ ಚುಕ್ಕಿ ಟ್ರಸ್ಟ್, ಬೆಂಗಳೂರು, ೧೯೮೬.

೫೯.ರತ್ನಮ್ಮ ಕೆ.ಎಸ್. **ಮಹಿಳಾ ಮೀಸಲಾತಿ,** ಈಶ್ವರಿ ಪ್ರಕಾಶನ, ಮೈಸೂರು, ೨೦೦೫.

೬೦. ರಾಜೇಗೌಡ ಹ.ಕ.(ಸಂ) ಗ್ರಾಮ ಚೇತನ ಹೆಚ್.ಡಿ. ಚೌಡಯ್ಯ ಅಭಿನಂದನ ಸಮಿತಿ, ಮಂಡ್ಯ, ೨೦೦೩.

೬೧.ರಾಮಚಂದ್ರ ಜೋಷಿ. **ಸಮಗ್ರ ಸಮಾಜ ಶಾಸ್ತ್ರ** ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ೨೦೧೦.

೬೨.ಲೀಲಾ ಸಂಪಿಗೆ, **ವೇಶ್ಯಾವಾಟಿಕೆ** ಒಂದು ಅಧ್ಯಯನ, ನೆಲೆ ಅಕಾಡೆಮಿ ಪ್ರಕಾಶನ, ಬೆಂಗಳೂರು, ೨೦೦೫.

೬೩.ವಸುಮಿತ್ರಾ ಬಾಯಿ.ಬಿ.ಎನ್. **ಸ್ತ್ರೀ ವಾದಿ ಪ್ರವೇಶ,** ಕರ್ನಾಟಕ ಲೇಖಕೀಯರ ಸಂಘ, ಬೆಂಗಳೂರು, ೨೦೦೪.

೬೪.ವಿಜಯಾ ದಬ್ಬೆ, **ನಾರಿ ದಾರಿ ದಿಗಂತ,** ರಚನಾ ಪ್ರಕಾಶನ, ಮೈಸೂರು, ೧೯೯೭.

೬೫.ವಿಜಯ ಶ್ರೀಸಬರದ, ಮಹಿಳಾ **ಶೋಷಣೆ ಸವಾಲುಗಳು,** ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೫.

೬೬.ವೀರಭದ್ರಪ್ಪ.ಬಿ.ಎಂ **ವೇದಗಳಲ್ಲಿ ಜನಸಾಮಾನ್ಯರು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೫.

೬೭.ವಿರಕ್ತಮಠ ಶಿವಾನಂದ ಎಸ್ (ಸಂ) **ಮಹಿಳಾ ಅಧ್ಯಯನ ಸಂಪುಟ** ೬ ಸಂಚಿಕೆ ೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೬೮.ವೆಂಕೋಬ್‌ರಾವ್, **ನ್ಯಾಯಕ್ಕಾಗಿ ಮಹಿಳೆಯರ ಹೋರಾಟ,** ದಿವ್ಯ ಚಂದ್ರ ಪ್ರಕಾಶನ, ಬೆಂಗಳೂರು, ೨೦೦೦.

೬೯.ಶಂಕರ ರಾವ್ ಚ.ನ. **ಭಾರತದ ಸಂವಿಧಾನ ಸರ್ಕಾರ ಮತ್ತು ರಾಜಕೀಯ,** ವಿಜಯ ಪಬ್ಲಿಕೇಷನ್, ಗದಗ, ೧೯೯೨.

೭೦.ಶಂಕರ್‌ರಾವ್. ಚ.ನ. **ಸಾಮಾಜಿಕ ಸಮಸ್ಯೆಗಳು,** ಜೈ ಭಾರತ್ ಪ್ರಕಾಶನ, ಮಂಗಳೂರು, ೧೯೯೦.

೭೧.ಶಿವರಾಮಯ್ಯ., **ದನಿ ಇಲ್ಲದವರ ದನಿ,** ಶಕ್ತಿ ಪ್ರಿಂಟರ್ಸ್ , ಬೆಂಗಳೂರು, ೨೦೦೩.

೭೨.ಶಿವ ಚಿತ್ತಪ್ಪ.ಕೆ, **ಮಹಿಳಾ ಸಬಲೀಕರಣ ವಿಭಿನ್ನ ನೆಲೆಗಳು,** ಲಕ್ಷ್ಮಿ ಪ್ರಿಂಟರ್ಸ್, ಮೈಸೂರು, ೨೦೦೬.

೭೩.ಶೇಷಾದ್ರಿ.ಕೆ.ಎಸ್. **ಸಂವಿಧಾನ ಕಾನೂನು ಮತ್ತು ಮಹಿಳೆ,** ಜಾಗೃತ ಭಾರತ, ಧಾರವಾಡ, ೧೯೮೫.

೭೪.ಶೈಲಜಾ ಹಿರೇಮಠ., **ಸ್ತ್ರೀ ಕಥನ,** ಭುವನ ಪ್ರಕಾಶನ, ಹೊಸಪೇಟೆ, ೨೦೦೩.

೭೫.ಶೈಲಜಾ ಹಿರೇಮಠ., **ಪಾತರದವರು,** ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯.

೭೬.ಶ್ರೀಮತಿ ಹೆಚ್.ಎಸ್. **ಹೆಣ್ಣು ಹೆಂಗಸು,** ಬಾಲ್ಯದ ಕೆರೆ ಪ್ರಕಾಶನ, ೨೦೦೪.

೭೭.ಶ್ರೀಮತಿ ಹೆಚ್.ಎಸ್. **ಸೀಮೂನ್ ದ ಬೋವಾ ದ ಸೆಕೆಂಡ್ ಸೆಕ್ಸ್,** ಅಧ್ಯಯನ ಮಂಡಲ, ಬೆಂಗಳೂರು, ೨೦೦೭.

೭೮.ಸರೋಜ ಕೆ., **ಮಹಿಳಾ ಆರೋಗ್ಯ,** ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೧.

೭೯.ಸರೋಜ.ಕೆ **ಮಹಿಳಾ ಆರೋಗ್ಯ-ಒಂದು ಮರು ಚಿಂತನೆ,**ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೮.

೮೦.ಸಮತಾ ದೇಶಮಾನೆ., **ಸಮಾಜಶಾಸ್ತ್ರ ಮತ್ತು ಮಹಿಳೆ,** ಚೇತನ್ ಬುಕ್ ಹೌಸ್, ಮೈಸೂರು, ೨೦೦೩.

೮೧. ಸಾರಾ ಅಬುಬ್‌ಕರ,. **ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ,** ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ, ೨೦೦೭.

೮೨. ಹಾಲತಿ ಸೋಮಶೇಖರ್.. **ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ,** ವಿಸ್ಮಯ ಪ್ರಕಾಶನ, ಬೆಂಗಳೂರು, ೨೦೦೭.

೮೩.ಹಾಲತಿ ಸೋಮಶೇಖರ್. **ಸ್ತ್ರೀ ಪರ ಕಾನೂನು,** ಹೆಚ್ ಎಂ ಲೋಕೇಶ್ ವಿಸ್ಮಯ ಪ್ರಕಾಶನ, ೨೦೦೮.

ಮಹಾ ಪ್ರಬಂಧಗಳು ಮತ್ತು ಕಿರುಪ್ರಬಂಧಗಳು.

೧ ಶ್ರೀದೇವಿ ಆಲೂರು, **ಸಾರ್ವಜನಿಕ ವಲಯಗಳಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೯.

೨ ಡಾ: ಸುಮಲತಾ ಅಳುಕವಾಡಿ, **ಮಹಿಳೆಯ ಮೇಲಿನ ದೌರ್ಜನ್ಯ ಹಿನ್ನಲೆಯಲ್ಲಿ ಮಹಾ ಅಪರಾಧಗಳ ವ್ಯಾಖ್ಯೆ ಮತ್ತು ಶಿಕ್ಷೆ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೯.

೩ ಟಿ ಅಕ್ಕಮ್ಮ, **ಅಸಂಘಟಿತ ವಲಯದಲ್ಲಿನ ಮಹಿಳಾ ಕೆಲಸಗಾರರು-ಒಂದು ಅಧ್ಯಯನ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೧೦.

೪ ಡಾ: ಕಲಾವತಿ, **ಜಾಹಿರಾತುಗಳಲ್ಲಿ ಮಹಿಳಾ ಪ್ರತಿನಿಧಿಕರಣ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೭.

೫ ಡಾ: ಕೆ ಎಸ್ ಗೀತಾ, **ಮಹಿಳೆ, ಕಾನೂನು ಮತ್ತು ನ್ಯಾಯ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೩.

೬ ಉಮೇಶ ಬಸಪ್ಪ ಕಾತರಕಿ, **ಬಸರಳ್ಳಿಯ ದೇವದಾಸಿ ಪದ್ಧತಿ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೭.

೭ ಶಿವನಂದಚಾರ್ ಬಡಿಗಾರ್, **ಕೌಟುಂಬಿಕ ಹಿಂಸೆ ಮತ್ತು ಮಹಿಳೆ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೭.

೮ ಎಚ್ ಸುರೇಶಗೌಡ,**ವರದಕ್ಷಿಣೆ-ಒಂದು ಅಧ್ಯಯನ,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೭.

೯ ಬಾಣಗರ್ ಗೌರಮ್ಮ,**ಮಹಿಳಾ ಕಂಡಕ್ಟರ್‌ಗಳ ಸ್ಥಿತಿಗತಿ ಮತ್ತು ಸಮಸ್ಯೆಗಳು,** ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೦೭.

೧೦ ಪಂಪಾಪತಿ ಎನ್ ಎಲ್, **ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ-೨೦೦೫, (ಕಾರ್ಯಗತಗೊಳಿಸುವಲ್ಲಿ ಮಹಿಳೆಯರ ಪಾತ್ರ)**. ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ, ೨೦೧೦.

------******------

ENGLİSH REFERENCE

୧. **A Thomas William A J** Christopher ୨୦୦୪, *Women criminals in india Annol* publication pvt limited, Delhi.

୨. **Aparna Mahantha**, *"Working of Parlimentary process and Empowerment of women in Norheast India"* in eds. Phukon and Yasin, ୧୯୯୮,

୩. *As report by national crime records bureau*(NCRB) in ୨୦୦୫.

୪. **Dr. Doel Mukerjee**, ୨୦୦୫ *Women and Crimes*, kalpaz publications, New Delhi.

୫. **Dipangshu Chakraborty**, ୧୯୯୯, *Actrocities on Indian Women*, Apth publications, New delhi.

୬. *Dowry prohibition Act*, ୧୯୬୧.

୭. *Equal Remuneration Act* ୧୯୭୬

୮. For the gendered nature of the governments attitude to the Sha bano case see **niraja gopal jayol**, *democracy and the state: welfare ,secularism and development in contemporary India*, (Delhi,୧୯୯୯).

୯. **Trupthi meht Deshpande**, ୨୦୦୭ *Women policy- A social economic analyses in urben background*, Commonwealth publication, New delhi.

-----******-----

ಅನುವಾದಿತ ಕೃತಿಗಳು

೧. ಏಂಗೆಲ್ಸ್, ಅನು: ಗೋಪಾಲಕೃಷ್ಣರಾವ್, **ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ,** ಪ್ರಗತಿ ಪ್ರಕಾಶನ, ಮಾಸ್ಕೋ, ೧೯೮೦.

೨. ಮಧುಕೇಶ್ವರ್, ಅನು.ಮೀರಾ.ಎಲ್.ಜಿ, **ಮಾನುಷಿ ಮಾತು,** ಅಕ್ಷರ ಪ್ರಕಾಶನ, ಬೆಂಗಳೂರು, ೧೯೯೭.

೩. ಪಾರ್ಶಲೆ, ಅನು. ಶ್ರೀಮತಿ ಎಚ್.ಎಸ್, ಸಿಮೋನ್ ದ ಬೊವಾ, **ದ ಸೆಕೆಂಡ್ ಸೆಕ್ಸ್ ಒಂದು ಕನ್ನಡ ಓದು,** ಅಧ್ಯಯನ ಮಂಡಲ, ಬೆಂಗಳೂರು, ೨೦೦೭.

------*****------

ಕನ್ನಡ ಸಂಪಾದಿತ ಕೃತಿಗಳು

೧. ಅಮರೇಶ ನುಗಡೋಣಿ, **ಕನ್ನಡ ಸಂಶೋಧನೆಯ ವೈಧಾನಿಕತೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೮.

೨. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, **ಸ್ತ್ರೀವಾದಿ ಸಾಹಿತ್ಯ ವಿಮರ್ಶೆ,** ಕನ್ನಡ ಸಂಘ ಕ್ರೈಸ್ತ ಗುಲಬರ್ಗಾ, ೨೦೦೫.

೩. ರವೀಂದ್ರನಾಥ.ಕೆ, **ಅಧ್ಯಯನದ ವಿಧಿವಿಧಾನಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೮.

೪. ರಾಜೇಂದ್ರ ಜೆನ್ನಿ, ಎಸ್.ಸಿರಾಜ್ ಅಹಮದ್, **ಜಾಗತೀಕರಣ ಒಂದು ಸಮಗ್ರ ಮಂಥನ,**ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೫. ಶ್ರೀಮತಿ.ಎಚ್.ಎಸ್, ಶಿವಾನಂದ ವಿರಕ್ತಮಠ, ಡಾ.ಕೃಷ್ಣ.ಜೆ, **ಮಹಿಳಾ ಆರ್ಥಿಕತೆ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೬.

೬. ಶ್ರೀಮತಿ.ಎಚ್.ಎಸ್, ಶಿವಾನಂದ ವಿರಕ್ತಮಠ, ಡಾ.ಕೃಷ್ಣ.ಜೆ, **ಮಹಿಳಾ ದುಡಿಮೆ ಮತ್ತು ಬಿಡುವು,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೬.

-----******------